ಮಕ್ಕಳ ಪುಸ್ತಕ ಮಾಲೆ ೭

ಗ್ರಿಂ ಸಹೋದರರ ಕಿನ್ನರ ಕಥೆಗಳು ೨



ಕರ್ನಾಟಕ ಸರ್ಕಾರ,
ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ಮಕ್ಕಳ ಪುಸ್ತಕ ಮಾಲೆ

ಗ್ರಿಂ ಸಹೋದರರ ಕಿನ್ನರ ಕಥೆಗಳು

ಭಾಗ - ೨

ಕನ್ನಡ ನಿರೂಪಣೆ

ಎ. ಚಂದ್ರಾ ನಾಗಭೂಷಣ ಸ್ವಾಮಿ

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು-೫೬೦೦೧೮

Grimm Sahodarara Kinnara Kathegalu : *Vol. III* - by Grimm Brothers, Narrated in Kannada by A. Chandra Nagabhushana Swamy (A. Chandramma) and Published by the Administrative Office, Kannada Pustaka Pradhikara (Kannada Book Authority), Pampa Mahakavi Road, Chamarajapet, Bangalore-560018.

Pages : vii + 183

ಪ್ರಥಮ ಮುದ್ರಣ: **1999**

ISBN 81-7713-013-7

ಬೆಲೆ: ರೂ. **100.00**

ಕಲೆ : ಕೆ. ಕೆ. ಮಕಾಳಿ

ಅಕ್ಷರ ಜೋಡಣೆ ಮತ್ತು ಮುದ್ರಣ :
ಶ್ರೀ ಚಾಮುಂಡೇಶ್ವರಿ ಪ್ರಿಂಟರ್ಸ್
ನಂ. ೫೬೯, "ನಿತ್ಯಶ್ರೀ", ೩ನೇ ಅಡ್ಡರಸ್ತೆ
ಶ್ರೀನಿವಾಸನಗರ ೨ನೇ ಹಂತ
ಬೆಂಗಳೂರು - ೫೬೦ ೦೫೦
ದೂರವಾಣಿ : ೬೬೯ ೬೩ ೮೮ / ೬೬೯ ೧೮ ೨೬

ಮುನ್ನುಡಿ

ಮಕ್ಕಳ ಸಾಹಿತ್ಯದಲ್ಲಿ ರಂಜನೆಯೂ ಅಗತ್ಯ; ಬೋಧನೆಯೂ ಅವಶ್ಯ. ಮಕ್ಕಳು ಓದಬೇಕು ಎಂದು ಭಾವಿಸಿ ಸಾಹಿತ್ಯವನ್ನು ಸೃಷ್ಟಿ ಮಾಡುವುದರ ಬದಲು ಮಕ್ಕಳು ಏನನ್ನು ಓದಬಯಸುತ್ತಾರೆ ಎಂಬುದನ್ನು ಅರಿತು ಅವರಿಗಾಗಿ ಸಾಹಿತ್ಯದ ಕೃಷಿ ಆಗಬೇಕು.

ವಿಜ್ಞಾನ, ತಂತ್ರಜ್ಞಾನ, ಇತಿಹಾಸ, ಭೂಗೋಳ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಸಾಹಿತ್ಯ, ಕಲೆ ಸಮೂಹಮಾಧ್ಯಮ, ಸಮಕಾಲೀನ ವಿಚಾರಗಳು ಇವೆಲ್ಲವುಗಳ ಬಗ್ಗೆ ಪ್ರಾಥಮಿಕ ಶಾಲಾಮಟ್ಟದ ಮಕ್ಕಳಿಗೆ ಆರಂಭಿಕ ಅರಿವನ್ನಾದರೂ ಮೂಡಿಸಿ ಜ್ಞಾನದ ಬಹು ಶಾಖೆಗಳಲ್ಲಿ ಅವರಿಗೆ ಆಸಕ್ತಿ ಕುತೂಹಲಗಳನ್ನು ಅರಳಿಸಬೇಕಾದುದು ಮಕ್ಕಳ ಪುಸ್ತಕಗಳ ಆದ್ಯ ಕರ್ತವ್ಯವಾಗಿರಬೇಕು.

ಬಹು ಮಾಧ್ಯಮಗಳ ಸೆಳೆತಗಳಿಂದ ಆಕರ್ಷಿತವಾಗಿರುವ ಮಕ್ಕಳಿಗೆ ಓದು ಮಾಧ್ಯಮದಲ್ಲಿ ಅಭಿರುಚಿ ಮೂಡಿಸಿ ಪುಸ್ತಕಗಳಲ್ಲಿ ಆಸಕ್ತಿಯನ್ನುಂಟು ಮಾಡಿಸಲು ಅನುವು ಮಾಡಿಕೊಡುವ ಉದ್ದೇಶದಿಂದ ಕನ್ನಡ ಪುಸ್ತಕ ಪ್ರಾಧಿಕಾರವು ಒಂದು ನೂರು ಮಕ್ಕಳ ಪುಸ್ತಕಗಳನ್ನು ಹೊರತರುವ ಆಶಯ ಹೊಂದಿದೆ. ಈ ನಿಟ್ಟಿನಲ್ಲಿ ಪುಸ್ತಕ ಪ್ರಾಧಿಕಾರವು ಎಳೆಯರಿಗೆ ಸುಲಭ ಗ್ರಾಹ್ಯವಾಗಬಹುದಾದ ಸರಳ ಭಾಷೆಯಲ್ಲಿ ಅಂದವಾದ ಚಿತ್ರಗಳ ಸಮೇತ ಪುಸ್ತಕಗಳನ್ನು ಹೊರತರಲು ಆಸಕ್ತಿ ಹೊಂದಿದೆ.

ಹಿರಿಯರನ್ನೂ ಮಕ್ಕಳ ಮನಸ್ಸನ್ನೂ ಸೂರೆಗೊಳ್ಳುವ ಶಕ್ತಿ ಕಥೆಗಳಿಗಿದೆ. ಗ್ರಿಂ ಸಹೋದರರು ಸಂಗ್ರಹಿಸಿದ ಈ ಜನಪದ 'ಕಿನ್ನರ ಕಥೆಗಳು' ಅಂದು ಇಂಗ್ಲೆಂಡ್‌ನಲ್ಲಿದ್ದ ಜನಪದ ಕಥೆಗಳನ್ನು ಮಕ್ಕಳಿಗೆ ಬೋಧಿಸ ಬಾರದೆಂಬ ನಂಬಿಕೆಯನ್ನು ಹುಸಿಗೊಳಿಸಿ ಮಕ್ಕಳ ಹಾಗೂ ವಿದ್ವಾಂಸರ ಮನ್ನಣೆಗೆ ಪಾತ್ರವಾದವು. ಇಂಥ ಜನಪ್ರಿಯ ಕಥೆಗಳನ್ನು ಪ್ರಾಧಿಕಾರದಿಂದ ನಾಲ್ಕು ಸಂಪುಟಗಳಲ್ಲಿ ಹೊರತರುತ್ತಿದ್ದೇವೆ. ಈ ಸರಣಿಯಲ್ಲಿ ಇದು ಮೂರನೆಯ ಸಂಪುಟ.

ಈ 'ಕಿನ್ನರ ಕಥೆ'ಗಳನ್ನು ಕನ್ನಡಕ್ಕೆ ತಂದವರು ಶ್ರೀಮತಿ ಚಂದ್ರಾ ನಾಗಭೂಷಣಸ್ವಾಮಿ. ಅವರು ತಮ್ಮ ಈ ಕೃತಿಯನ್ನು ಪ್ರಾಧಿಕಾರದ ಮಕ್ಕಳ ಪುಸ್ತಕ ಮಾಲೆಯಲ್ಲಿ ಸೇರಿಸಿಕೊಳ್ಳಲು ಅನುಮತಿ ನೀಡಿದ್ದಾರೆ. ಶ್ರೀ ಮಕಾಳಿ ಅವರ ರೇಖಾಚಿತ್ರಗಳು ಹಾಗೂ ಮುಖಪುಟ ಪುಸ್ತಕದ ಮೆರುಗನ್ನು ಹೆಚ್ಚಿಸಿವೆ. ಶ್ರೀ ಚಾಮುಂಡೇಶ್ವರಿ ಪ್ರಿಂಟರ್ಸ್ ಇವರು ಅಕ್ಷರ ಜೋಡಣೆ ಮಾಡಿ ಮುದ್ರಿಸಿಕೊಟ್ಟಿದ್ದಾರೆ. ಇವರೆಲ್ಲರಿಗೂ ಕೃತಜ್ಞತೆಗಳು.

ಎಚ್. ಜೆ. ಲಕ್ಕಪ್ಪ ಗೌಡ
ಅಧ್ಯಕ್ಷರು
ಕನ್ನಡ ಪುಸ್ತಕ ಪ್ರಾಧಿಕಾರ

27-11-1999
ಬೆಂಗಳೂರು

ಅನುವಾದಕರ ನುಡಿ

ಗ್ರಿಂ ಸಹೋದರರ ಕಥೆಗಳು ವಿಶ್ವದಾದ್ಯಂತ ಜನಪ್ರಿಯವಾಗಿವೆ. ಕಥೆಗಳನ್ನು ಇಷ್ಟಪಡುವ ಮಕ್ಕಳಿಂದ ಹಿಡಿದು ಜಾನಪದ ಅಧ್ಯಯನದಲ್ಲಿ ತೊಡಗಿರುವ ವಿದ್ವಾಂಸರವರೆಗೆ ಎಲ್ಲರನ್ನೂ ಇವು ಸೆಳೆದಿವೆ. ಹಾಗೆ ನೋಡಿದರೆ ಜಾನಪದ ಕಥೆಗಳ ಅಧ್ಯಯನದ ಆರಂಭಕರ್ತರಲ್ಲಿ ಗ್ರಿಂ ಸೋದರರಿಗೆ ಪ್ರಮುಖ ಸ್ಥಾನವಿದೆ. ಕನ್ನಡದಲ್ಲಿ ಗ್ರಿಂ ಸೋದರರ ಕಥೆಗಳು ಹಲವು ರೀತಿಯಲ್ಲಿ ಅನುವಾದಗೊಂಡಿವೆ. ಆದರೆ ನನಗೆ ತಿಳಿದಿರುವಂತೆ ಅವರ ಸಂಗ್ರಹದ ಎಲ್ಲ ಕಥೆಗಳೂ ಹೀಗೆ ಒಟ್ಟಾಗಿ ಪ್ರಕಟವಾದಂತಿಲ್ಲ. ಇಂದಿನ ತಲೆಮಾರಿನ ಕನ್ನಡದ ಮಕ್ಕಳಿಗೆ ಈ ಸುಂದರ ಕಥೆಗಳನ್ನು ಹೇಳುವ ಅವಕಾಶ ನನಗೆ ದೊರೆತದ್ದಕ್ಕೆ ನಾನು ಕೃತಜ್ಞಳಾಗಿದ್ದೇನೆ. ಈ ಮೂರನೆಯ ಸಂಪುಟದಲ್ಲಿ ೪೫ ಕಥೆಗಳಿವೆ.

ಜನಪದ ಕಥೆಗಳನ್ನು ಮೊಟ್ಟಮೊದಲಬಾರಿಗೆ ಸಂಗ್ರಹಿಸಿದ ಗ್ರಿಂ ಸಹೋದರರಲ್ಲಿ ಹಿರಿಯವನಾದ ಜಾಕಬ್ ಹುಟ್ಟಿದ್ದು ೧೭೮೫ರಲ್ಲಿ ಮತ್ತು ಕಿರಿಯವನಾದ ವಿಲ್‌ಹೆಲ್ಮ್ ಹುಟ್ಟಿದ್ದು ೧೭೮೬ರಲ್ಲಿ. ಅವರ ತಂದೆ ಒಬ್ಬ ವಕೀಲನಾಗಿದ್ದ. ಗ್ರಿಂ ಸಹೋದರರು ಮಕ್ಕಳಿದ್ದಾಗಲೇ ಅವನು ತೀರಿಕೊಂಡ. ಅವರ ತಾಯಿಗೆ ಮಕ್ಕಳು ಕೂಡಾ ತಂದೆಯಂತೆಯೇ ವಕೀಲರಾಗಬೇಕೆಂಬ ಆಸೆಯಿತ್ತು. ಆಕೆಯ ಸಹೋದರಿ ಗ್ರಿಂ ಸಹೋದರರ ವಿದ್ಯಾಭ್ಯಾಸಕ್ಕೆ ಸಹಾಯಮಾಡಿದಳು. ಹೆಸ್‌ನಲ್ಲಿರುವ ಹನಾವ್‌ನಲ್ಲಿ ಹುಟ್ಟಿದ್ದ ಈ ಸಹೋದರರು ಕಾಸಲ್ ವಿಶ್ವವಿದ್ಯಾಲಯದಲ್ಲಿ ಕಾನೂನು ಪದವಿ ಪಡೆದರು. ಸ್ವಂತ ಉದ್ಯೋಗ ಮಾಡಲು ಹಣವಿಲ್ಲದ್ದರಿಂದ ಜಾಕಬ್ ರೋಮನ್ ಕಾನೂನಿನಲ್ಲಿ ಪಂಡಿತನಾಗಿದ್ದ ಪ್ರೊಫೆಸರ್ ಸ್ವಾವಿಗ್ನಿಯಾ ಎಂಬಾತನ ಬಳಿ ಸಹಾಯಕನಾಗಿ ಸೇರಿಕೊಂಡ. ಸಂಶೋಧನೆಯ ಮೂಲಪಾಠಗಳನ್ನು ಅವನಿಂದ ಕಲಿತು ಭಾಷೆಯ ಅಧ್ಯಯನದಲ್ಲಿ ಹೆಚ್ಚಿನ ಆಸಕ್ತಿ ಬೆಳೆಸಿಕೊಂಡ. ಕಿರಿಯ ಸಹೋದರ ವಿಲ್‌ಹೆಲ್ಮ್ ಕೂಡಾ ಅವನೊಡನೆ ಕೂಡಿಕೊಂಡ. ಭಾಷೆ, ಚರಿತ್ರೆ, ಜರ್ಮನ್ ಚರಿತ್ರೆ, ಮಧ್ಯಕಾಲೀನ ಅಧ್ಯಯನ, ಮಾನವಿಕಗಳು ಮತ್ತು ಮನುಷ್ಯಕುಲದ ಇತಿಹಾಸದಲ್ಲಿ ಸಹೋದರರಿಬ್ಬರೂ ಅಪಾರ ಪಾಂಡಿತ್ಯಗಳಿಸಿದರು. ಇವರಿಬ್ಬರೂ ಸೇರಿ ಬರೆದ ಜರ್ಮನ್ ಭಾಷೆಯನ್ನು ಕುರಿತ ಗ್ರಂಥ ಪ್ರಸಿದ್ಧವಾಗಿದೆ. ಭಾಷೆಯಲ್ಲಾಗುವ ಬದಲಾವಣೆ ಕುರಿತು ಅವರು ನಿರೂಪಿಸಿದ ನಿಯಮವೊಂದು 'ಗ್ರಿಂ ಸಹೋದರರ ನಿಯಮ'ವೆಂದೇ ಪ್ರಸಿದ್ಧವಾಗಿದೆ.

ಈ ಸಹೋದರರು ತಾವು ಕೈಯಿಟ್ಟ ಸಂಶೋಧನೆಯ ಕ್ಷೇತ್ರದಲ್ಲೆಲ್ಲ ಮೊದಲಿಗರೆಂದೇ ಪ್ರಸಿದ್ಧರಾಗಿದ್ದಾರೆ. ಆ ಕಾಲದಲ್ಲಿ ಅವರಿಗೆ ಇತರ ವಿದ್ವಾಂಸರ ಸಹಾಯವಿರಲಿ, ನಿಘಂಟುಗಳು ಕೂಡಾ ದೊರೆಯುತ್ತಿರಲಿಲ್ಲ. ಈ ಇಬ್ಬರು ಸಹೋದರರಲ್ಲಿ ಜಾಕಬ್ ವಿದ್ವತ್ತಿನೆಡೆಗೆ ಒಲಿದವನಾದರೆ ವಿಲ್‌ಹೆಲ್ಮ್ ಬರವಣಿಗೆಯ ಕಡೆಗೆ ಒಲಿದವನು. ಆದರೆ ಇವರಿಬ್ಬರೂ ಒಟ್ಟಾಗಿ ಬರೆದ ಕೃತಿಗಳಲ್ಲಿ ಯಾವುದು ಯಾರ ಪಾಲು ಎಂದು ವಿಂಗಡಿಸುವುದು ಕಷ್ಟ.

ಹತ್ತುವರ್ಷಗಳ ಕಾಲ ದುಡಿದು ಗ್ರಿಂ ಸಹೋದರರು ಜರ್ಮನ್ ವ್ಯಾಕರಣ ರಚಿಸಿದರು. ಜರ್ಮನ್ ಜನಾಂಗದ ಪುರಾಣಗಳ ಅಧ್ಯಯನ ಆನಂತರದ ದಿನಗಳಲ್ಲಿ ಅವರ ಆಸಕ್ತಿಯ ವಿಷಯವಾಯಿತು. ಈ ಅಧ್ಯಯನದಲ್ಲಿ ತೊಡಗಿದ್ದಾಗಲೇ ಅವರು ಸಂಗ್ರಹಿಸಿದ ಕಥೆಗಳು 'ಗ್ರಿಂ ಸಹೋದರರ ಕಥೆಗಳು' ಎಂದೇ ಪ್ರಸಿದ್ಧವಾಗಿವೆ. ತಾವು ಮಕ್ಕಳಾಗಿದ್ದಾಗಿನಿಂದ ಕೇಳಿದ ಕಥೆಗಳನ್ನು ಗ್ರಿಂ ಸಹೋದರರು ತಮ್ಮ ತಲೆಮಾರಿನವರೆಗಿನ ಜರ್ಮನ್ ಜನರ ಚರಿತ್ರೆ, ನಂಬಿಕೆಗಳು ಮತ್ತು ಬದುಕಿನ ವಿಧಾನಗಳ ಅಧ್ಯಯನ ಸಾಮಗ್ರಿ ಎಂಬಂತೆ ಹೊಸ ನೋಟದೊಂದಿಗೆ ಪರಿಶೀಲಿಸಿದರು. ಸಾಮಾನ್ಯ ಜನರು ತಮ್ಮ ಮನೆಯಲ್ಲಿ ಮಕ್ಕಳಿಗೆ ಹೇಳುವ ಈ ಕಥೆಗಳ ವಿವಿಧ ಪಾಠಗಳನ್ನೆಲ್ಲ ಒಟ್ಟುಗೂಡಿಸಿದರು. "ಈ ಕಥೆಗಳಿಗೆ ನಾವು ಏನನ್ನೂ ಸೇರಿಸಿಲ್ಲ, ಯಾವುದೇ ಘಟನೆಯನ್ನಾಗಲೀ ವಿವರಗಳನ್ನಾಗಲೀ

ತಿದ್ದಿ ರೂಪುಕೊಟ್ಟಿಲ್ಲ, ನಮಗೆ ಕಥೆಗಳು ಹೇಗೆ ದೊರೆತವೋ, ಬಹುಮಟ್ಟಿಗೆ, ಅದೇ ರೂಪದಲ್ಲಿ ಪ್ರಕಟಿಸಿದ್ದೇವೆ. ಆದರೆ ಒಂದು ಕಥೆಯ ವಿವಿಧ ಪಾಠಾಂತರಗಳನ್ನು ನಿಷ್ಕರ್ಷಿಸುವುದರಲ್ಲಿ ನಮ್ಮ ವಿವೇಚನೆಯನ್ನು ಬಳಸಿದ್ದೇವೆ" ಎಂದು ಅವರು ತಮ್ಮ ಸಂಕಲನದ ಮುನ್ನುಡಿಯಲ್ಲಿ ಹೇಳಿದ್ದಾರೆ. ತಮ್ಮ ಸಂಗ್ರಹದ ಕಥೆಗಳನ್ನು ತೀರ ವಿಶ್ವಾಸಾರ್ಹವಾದ ಇಬ್ಬರು ಗೆಳೆಯರಿಗೆ ಕೊಟ್ಟು ತಾಯಂದಿರು ಅಡಿಗೆ ಮನೆಗಳಲ್ಲಿ ಈ ಕಥೆಗಳನ್ನು ಹೇಗೆ ಹೇಳುತ್ತಾರೆ ಎಂಬ ವಿವರಗಳನ್ನು ಸಂಗ್ರಹಿಸುವಂತೆ ಕೋರಿದರು. ಅವರ ವರದಿಗಳನ್ನೆಲ್ಲ ಕಣ್ಣೆದುರಿಗಿಟ್ಟುಕೊಂಡು ತಾವು ಸಂಗ್ರಹಿಸಿದ ಕಥೆಗಳ ಭಾಷಿಕ ಪರಿಶೀಲನೆಯನ್ನು ನಡೆಸಿದರು. ಕಥೆಗಳನ್ನು ಹೇಳುವಾಗ ಜನರು ಬಳಸುವ ಕೆಲವು ನುಡಿಗಟ್ಟುಗಳು ಅಥವಾ ಪದಗಳು ಗತಕಾಲದ ಇತಿಹಾಸವನ್ನು ತಮ್ಮೊಳಗೆ ಬಚ್ಚಿಟ್ಟುಕೊಂಡಿರುವುದನ್ನು ಗುರುತಿಸಿದರು.

ಗ್ರಿಂ ಸಹೋದರರ ಕಥೆಗಳು ಮೊದಲ ಸಂಪುಟ ೧೮೧೨ರಲ್ಲಿ 'ಕಿಂಡರ್ ಮಾರ್ಖೆನ್' ಎಂಬ ಹೆಸರಿನಿಂದ ಪ್ರಕಟವಾಯಿತು. ಎರಡನೆ ಸಂಪುಟ ೧೮೧೫ರಲ್ಲಿ ಬೆಳಕು ಕಂಡಿತು. ಅದೇ ವರ್ಷ ವಾಟರ್ ಲೂ ಕದನ ಕೂಡಾ ನಡೆಯಿತು. ಗ್ರಿಂ ಸಹೋದರರ ಹುಟ್ಟಿದ ಊರು ಮತ್ತು ಓದಿದ ಊರುಗಳು ನೆಪೋಲಿಯನ್‌ನ ವಶವಾದವು. ಕೇವಲ ಎಂಟೇ ವರ್ಷಗಳಲ್ಲಿ ಈ ಕಥೆಗಳು ಇಂಗ್ಲಿಷ್‌ಗೆ ಅನುವಾದಗೊಂಡವು. ಆಗ ಇಂಗ್ಲೆಂಡಿನಲ್ಲಿ ಜನಪದ ಕಥೆಗಳನ್ನು ಅಪಾಯಕಾರಿ ವ್ಯರ್ಥಾಲಾಪ, ಮಕ್ಕಳ ಮನಸ್ಸನ್ನು ಅವು ಕೆಡಿಸುತ್ತವೆ ಎಂಬ ನಂಬಿಕೆಗಳಿದ್ದವು. ಆದರೆ ಗ್ರಿಂ ಸಹೋದರರ ಕಿನ್ನರ ಕಥೆಗಳ ಈ ಸಂಕಲನದ ಇಂಗ್ಲಿಷ್ ಅನುವಾದ ತುಂಬ ಜನಪ್ರಿಯವಾಯಿತು. ಎಡ್‌ಗರ್ ಟೇಲರ್ ಈ ಕಥೆಗಳನ್ನು ಇಂಗ್ಲಿಷ್‌ಗೆ ಮೊದಲಬಾರಿಗೆ ಅನುವಾದಿಸಿದನು.


ಟ್ಯುಟ್ಯಾನಿಕ್ ಪುರಾಣಗಳನ್ನು ಅಧ್ಯಯನ ಮಾಡುವ ಸಲುವಾಗಿ ಗ್ರಿಂ ಸಹೋದರರು ಈ ಕಥೆಗಳನ್ನು ಸಂಗ್ರಹಿಸಿದ್ದರು. ಟ್ಯುಟ್ಯಾನಿಕ್ ಪುರಾಣಗಳನ್ನು ಕುರಿತ ತಮ್ಮ ಸಿದ್ಧಾಂತ ಮಂಡಿಸಲು ಗ್ರಿಂ ಸಹೋದರರಿಗೆ ಇನ್ನೂ ಹದಿಮೂರು ವರ್ಷಗಳು ಬೇಕಾದವು. ಅನಂತರ ಅವರು ಜರ್ಮನ್ ನಿಘಂಟನ್ನು ಸಿದ್ಧಪಡಿಸುವ ಕಾರ್ಯದಲ್ಲಿ ತೊಡಗಿದರು. ಆದರೆ ಅದು ಪೂರ್ಣಗೊಳ್ಳುವ ಮೊದಲೇ ಇಬ್ಬರೂ ತೀರಿಕೊಂಡರು.

ಈ ಅನುವಾದ ಕಾರ್ಯಕ್ಕೆ ನನ್ನನ್ನು ಪ್ರೇರಿಸಿ ನನ್ನಲ್ಲಿ ಉತ್ಸಾಹ ತುಂಬಿದ ಮಹನೀಯರಿಗೆಲ್ಲ ನಾನು ಕೃತಜ್ಞಳಾಗಿದ್ದೇನೆ. ಮುಖ್ಯವಾಗಿ ಶ್ರೀಮತಿ ನಿರುಪಮಾ, ಶ್ರೀ ಎಚ್.ಎಸ್. ರಾಘವೇಂದ್ರರಾವ್, ಶ್ರೀ ನೊಸಂ ತಿಮ್ಮೇಗೌಡ, ಇವರು ನನ್ನ ಅನುವಾದ ಕಾರ್ಯದಲ್ಲಿ ಉತ್ಸಾಹ ತುಂಬಿದ್ದಾರೆ. ಹಿರಿಯರಾದ ಶ್ರೀ ಶಾಂತರಸ, ಶ್ರೀ ಎಚ್.ಎಸ್. ಶಿವಪ್ರಕಾಶ್, ಶ್ರೀ ಕರೀಗೌಡ ಬೀಚನಹಳ್ಳಿ ಇವರೆಲ್ಲ ಪುಸ್ತಕ ಪ್ರಕಟಣೆಯ ಬಗ್ಗೆ ಆಸ್ಥೆ ತೋರಿದ್ದಾರೆ. ಶ್ರೀ ಲಿಂಗರಾಜು ಅವರು ಹಲವು ಬಗೆಗಳಲ್ಲಿ ನೆರವಾಗಿದ್ದಾರೆ. ಈ ಅನುವಾದ ಕಾರ್ಯದಲ್ಲಿ ಓ.ಎಲ್. ನಾಗಭೂಷಣಸ್ವಾಮಿ ನನಗೆ ಅನೇಕ ಉಪಯುಕ್ತ ಸಲಹೆಗಳನ್ನು ನೀಡಿದ್ದಾರೆ. ಕಲಾವಿದ ಶ್ರೀ ಕೆ. ಮಕಾಳಿ ಸುಂದರವಾದ ಚಿತ್ರಗಳನ್ನು ಮತ್ತು ಮುಖಪುಟವನ್ನು ರಚಿಸಿಕೊಟ್ಟಿದ್ದಾರೆ. ಶ್ರೀಮತಿ ಪ್ರಭಾ ಮತ್ತು ಶ್ರೀ ನಾಗರಾಜ್ ಕಥೆಗಳನ್ನು ಬೆರಳಚ್ಚು ಮಾಡಿಕೊಟ್ಟಿದ್ದಾರೆ. ಈ ಅನುವಾದವನ್ನು ಪ್ರಕಟಿಸುತ್ತಿರುವ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಎಚ್. ಜೆ. ಲಕ್ಕಪ್ಪ ಗೌಡ ಅವರಿಗೆ ಮತ್ತು ಪ್ರಾಧಿಕಾರದ ಎಲ್ಲ ಸದಸ್ಯರಿಗೆ ನಾನು ಚಿರಋಣಿ.

ಚಂದ್ರಾ ನಾಗಭೂಷಣಸ್ವಾಮಿ

ಪರಿವಿಡಿ

೧. ಬಾದಾಮಿ ಮರ



ಬಹಳ, ಬಹಳ ವರ್ಷಗಳ ಹಿಂದೆ — ಅಂದರೆ ಸುಮಾರು ಎರಡು ಸಾವಿರ ವರ್ಷಗಳ ಹಿಂದೆ — ಒಬ್ಬ ಶ್ರೀಮಂತ ಇದ್ದನಂತೆ. ಆತನಿಗೆ ಸುಂದರಿಯಾದ ಮತ್ತು ಧಾರ್ಮಿಕ ಶ್ರದ್ಧೆಯುಳ್ಳ ಹೆಂಡತಿ ಇದ್ದಳು. ಅವರಿಬ್ಬರು ಒಬ್ಬರನ್ನೊಬ್ಬರು ತುಂಬಾ ಪ್ರೀತಿಸುತ್ತಿದ್ದರು. ಅವರಿಗೆ ಮಕ್ಕಳಿರಲಿಲ್ಲ. ಮಕ್ಕಳು ಬೇಕೆಂಬ ಹಂಬಲ ಅವರಲ್ಲಿ ತೀವ್ರವಾಗಿತ್ತು. ಹೆಂಡತಿಯಂತೂ ಹಗಲು ರಾತ್ರಿ ದೇವರನ್ನು ಪ್ರಾರ್ಥಿಸುತ್ತಿದ್ದಳು.

ಅವರ ಮನೆ ಮುಂದಿನ ಅಂಗಳದಲ್ಲಿ ಒಂದು ಬಾದಾಮಿ ಮರ ಇತ್ತು. ಒಂದು ಚಳಿಗಾಲದ ದಿನ ಶ್ರೀಮಂತನ ಹೆಂಡತಿ ಆ ಮರದ ಕೆಳಗೆ ನಿಂತುಕೊಂಡು ಸೇಬು ಹಣ್ಣಿನ ಸಿಪ್ಪೆಯನ್ನು ಹೆರೆಯುತ್ತಿದ್ದಳು. ಅವಳ ಬೆರಳಿಗೆ ಗಾಯವಾಯಿತು. ಗಾಯದಿಂದ ರಕ್ತ ಹನಿಹನಿಯಾಗಿ ಹಿಮದ ಮೇಲೆ ಬಿದ್ದಿತು. "ಅಯ್ಯೋ" ಎಂದುಕೊಳ್ಳುತ್ತ ಆಕೆ ಕೆಳಗೆ ಬಿದ್ದ ರಕ್ತದ ಕಡೆ ನೋಡಿ ಬೇಜಾರು ಮಾಡಿಕೊಂಡಳು. "ರಕ್ತದಷ್ಟು ಕೆಂಪಗಿರುವ ಹಿಮದಷ್ಟು ಬೆಳ್ಳಗಿರುವ ಒಂದು ಮಗು ನನಗಿದ್ದಿದ್ದರೆ" ಎಂದು ಹೇಳಿಕೊಂಡಳು. ಆಗ ಅವಳ ಹೃದಯ ಹಗುರವಾದಂತೆ ಆಯಿತು. ತನ್ನ ಆಸೆ ಈಡೇರಬಹುದೆಂದು ಅವಳಿಗೆ ಅನಿಸಿತು. ನಂತರ ಅವಳು ಮನೆಯ ಒಳಗೆ ಹೋದಳು. ಒಂದು ತಿಂಗಳು ಕಳೆಯಿತು. ಮಂಜು ಕರಗಿತು. ಎರಡನೆಯ ತಿಂಗಳಲ್ಲಿ ಎಲ್ಲವೂ ಹಸಿರಾಗಿ ಗಿಡ ಮರಗಳು ನಲಿದವು. ಮೂರನೇ ತಿಂಗಳು ನೆಲದ ಮೇಲೆಲ್ಲಾ ಹೂವುಗಳು ಕಾಣಿಸಿಕೊಂಡವು. ನಾಲ್ಕನೇ ತಿಂಗಳಲ್ಲಿ ಕಾಡಿನ ಮರಗಳು ಹಣ್ಣು ತುಂಬಿ, ಹಸಿರು ಟೊಂಗೆಗಳು ಒಂದರೊಳಗೊಂದು ಹೆಣೆದುಕೊಂಡವು. ಕಾಡಿನ ತುಂಬಾ ಪುಟ್ಟಪುಟ್ಟ ಹಕ್ಕಿಗಳು ಚಿಲಿಪಿಲಿಗುಟ್ಟಿದವು. ಹೂವುಗಳು ಉದುರಿದವು. ಹೀಗೆ ಐದು ತಿಂಗಳು ಕಳೆದ ಮೇಲೆ, ಆಕೆ ಮತ್ತೆ ಆ ಬಾದಾಮಿ ಮರದ ಕೆಳಗೆ ನಿಂತುಕೊಂಡಳು. ಮೂಗಿಗೆ ಸುಮಧುರ ಪರಿಮಳ ತಾಗಿತು. ಅವಳ ಹೃದಯ ಸಂತೋಷದಿಂದ ಹಾರಾಡಿತು. ತಡೆದುಕೊಳ್ಳಲಾರದೆ ಅವಳು ಮೊಣಕಾಲೂರಿ ಕುಳಿತಳು. ಹೀಗೆ ಆರು ತಿಂಗಳು ಮುಗಿದಾಗ ಹಣ್ಣುಗಳು ದೊಡ್ಡದಾದವು. ಆಕೆ ತುಂಬಾ ಸಂತೋಷಪಟ್ಟಳು. ಏಳನೇ ತಿಂಗಳ ಕೊನೆಯ ಹೊತ್ತಿಗೆ ಅವಳು ಬಾದಾಮಿಗಳನ್ನು ಅತ್ಯಂತ ಆಸೆಯಿಂದ ಗಬಗಬನೆ ತಿಂದಳು. ಭಯಂಕರ ರೋಗದಿಂದ ಮಲಗಿದಳು. ಹೀಗೆ

ಎಂಟನೆ ತಿಂಗಳು ಕಳೆಯಿತು. ಆಗ ಅವಳು ತನ್ನ ಗಂಡನನ್ನು ಹತ್ತಿರ ಕರೆದು "ನಾನು ಸತ್ತರೆ ನನ್ನನ್ನು ಆ ಬಾದಾಮಿ ಮರದ ಕೆಳಗೆ ಹೂಳಿರಿ" ಎಂದಳು. ನಂತರ ಆರಾಮಾದಳು. ಮುಂದಿನ ತಿಂಗಳು ಮುಗಿಯುವವರೆಗೆ ಸಂತೋಷದಿಂದ ಇದ್ದಳು. ನಂತರ ಅವಳಿಗೆ ಹಿಮದಷ್ಟು ಬೆಳ್ಳಗಿರುವ ರಕ್ತದಷ್ಟು ಕೆಂಪಗಿರುವ ಒಂದು ಮಗು ಹುಟ್ಟಿತು. ಅದನ್ನು ನೋಡಿದ ಆಕೆ ಅತೀ ಸಂತೋಷದಿಂದ ಸತ್ತೇ ಹೋದಳು.

ನಂತರ ಅವಳ ಗಂಡ ಅವಳನ್ನು ಬಾದಾಮಿ ಮರದ ಕೆಳಗೆ ಸಮಾಧಿಮಾಡಿ ಅತ್ಯಂತ ದುಃಖಪಟ್ಟನು. ಅವನ ದುಃಖ ಕ್ರಮೇಣ ಕಡಿಮೆಯಾಯಿತು. ಇನ್ನೂ ಕೆಲವು ದಿನಗಳು ಕಳೆದ ನಂತರ ಅವನು ಬೇರೊಬ್ಬಳನ್ನು ಮದುವೆಯಾದನು.

ಎರಡನೆಯ ಹೆಂಡತಿಯಿಂದ ಅವನಿಗೆ ಒಂದು ಹೆಣ್ಣು ಮಗುವಾಯಿತು. ಮೊದಲನೆಯ ಹೆಂಡತಿಯ ಮಗ ಚಿಕ್ಕವನಿದ್ದು ರಕ್ತದಷ್ಟು ಕೆಂಪಗೂ, ಹಿಮದಷ್ಟು ಬೆಳ್ಳಗೂ ಇದ್ದನು. ಅವಳು ತನ್ನ ಮಗಳನ್ನು ತುಂಬಾ ಪ್ರೀತಿಸುತ್ತಿದ್ದಳು. ಆದರೆ ಮಲಮಗನನ್ನು ನೋಡಿದಾಗಲೆಲ್ಲಾ ಹೊಟ್ಟೆ ಉರಿದುಕೊಳ್ಳುತ್ತಿದ್ದಳು. ಅವಳು ಯಾವಾಗಲೂ ಇಡೀ ಆಸ್ತಿ ತನ್ನ ಮಗಳಿಗೇ ದೊರೆತರೆ ಎಷ್ಟು ಚೆನ್ನಾಗಿರುತ್ತದೆ ಎಂದು ಯೋಚಿಸುತ್ತಿದ್ದಳು. ಹುಡುಗ ಮಗಳ ದಾರಿಗೆ ಅಡ್ಡಿಯಾಗಿದ್ದಾನೆ ಎಂದು ಅವಳಿಗೆ ಅನಿಸುತ್ತಿತ್ತು. ಹೀಗೆ ಅವಳಲ್ಲಿದ್ದ ದುಷ್ಟತನ ಆ ಹುಡುಗನನ್ನು ನೋಡಿದಾಗಲೆಲ್ಲಾ ಇಣುಕುತ್ತಿತ್ತು. ಅವನನ್ನು ಕಂಡರೆ ಅವಳಿಗೆ ಆಗುತ್ತಲೇ ಇರಲಿಲ್ಲ. ಅವನನ್ನು ತಿವಿದು, ಗುದ್ದಿ , ಕೆನ್ನೆ ಹಿಂಡುತ್ತಿದ್ದಳು. ಆದ್ದರಿಂದ ಅವನು ಸದಾ ಹೆದರಿಕೊಂಡೇ ಇರುತ್ತಿದ್ದ.

ಹೀಗೆ ಒಂದು ಬಾರಿ ಆ ಹೆಂಗಸು ಉಗ್ರಾಣದ ಕೋಣೆಗೆ ಹೋದಳು. ಆಗ ಅವಳ ಮಗಳು "ಅಮ್ಮ ನನಗೊಂದು ಸೇಬು ಹಣ್ಣು ಕೊಡು" ಎಂದಳು. "ಹಾಗೆಯೇ ಆಗಲಿ ಮಗು" ಎನ್ನುತ್ತಾ ಆಕೆ ಒಂದು ಸೇಬುಹಣ್ಣನ್ನು ಪೆಟ್ಟಿಗೆಯೊಳಗಿಂದ ತೆಗೆದು ಕೊಟ್ಟಳು. ಆ ಪೆಟ್ಟಿಗೆಯ ಮುಚ್ಚಳ ಭಾರವಾಗಿತ್ತು. ಅದಕ್ಕೆ ಬಲವಾದ ಕಬ್ಬಿಣದ ಬೀಗ ಹಾಕಿತ್ತು. ಆಗ ಅವಳ ಮಗಳು "ಅಣ್ಣನಿಗೆ ಒಂದು ಕೊಡುವುದಿಲ್ಲವೆ" ಎಂದು ಕೇಳಿದಳು. ಅದರಿಂದ ಆ ಹೆಂಗಸು ಕುಪಿತಳಾದಳು. "ಅವನು ಶಾಲೆಯಿಂದ ಬರಲಿ ನೋಡೋಣ" ಎಂದು ಹೇಳಿದಳು. ಹಾಗೆ ಹೇಳುತ್ತಿರುವಾಗಲೇ ಆ ಹುಡುಗ ಬರುತ್ತಿರುವುದನ್ನು ಕಂಡಳು. ಅವಳು ಮೈಮೇಲೆ ಪಿಶಾಚಿ ಬಂದವರಂತೆ ಅವಳ ಮಗಳ ಕೈಯಿಂದ ಹಣ್ಣನ್ನು ಕಿತ್ತುಕೊಂಡಳು. "ನಿನ್ನ ಅಣ್ಣನ ಎದುರಿಗೆ ಅದನ್ನು ತಿನ್ನಬೇಡ" ಎಂದು ಹೇಳುತ್ತಾ ಆ ಹಣ್ಣನ್ನು ಪುನಃ ಪೆಟ್ಟಿಗೆಯೊಳಗೆ ಹಾಕಿ ಮುಚ್ಚಿದಳು. ಆ ಹುಡುಗ ಬಾಗಿಲ ಹತ್ತಿರ ಬರುತ್ತಿರುವಾಗ ಆ ದುಷ್ಟಬುದ್ಧಿಯ ಚಿಕ್ಕಮ್ಮ ಸ್ನೇಹವನ್ನು ನಟಿಸುತ್ತಾ, "ನಿನಗೆ ಸೇಬುಹಣ್ಣು ಬೇಕಾ ಮಗು" ಎಂದು ಕ್ರೂರವಾಗಿ ಅವನ ಕಡೆ ನೋಡಿದಳು. "ಅಮ್ಮ ನಿನ್ನ ನೋಡಿದರೆ ಭಯವಾಗುತ್ತದೆ. ನಿನಗೆ ಕೊಡಬೇಕೆನಿಸಿದರೆ ನನಗೊಂದು ಹಣ್ಣುಕೊಡು" ಎಂದು ಆ ಪುಟ್ಟ ಹುಡುಗ ಹೇಳಿದನು. ಆಗ ಅವಳು ಅವನನ್ನು ಹೇಗಾದರೂ ಮುಗಿಸಬೇಕೆಂದು ಯೋಚಿಸಿದಳು. "ಬಾ ನನ್ನ ಜೊತೆಗೆ" ಎಂದು ಹೇಳಿ ಪೆಟ್ಟಿಗೆ ಬಾಗಿಲು ತೆಗೆದಳು. "ನಿನಗೆ ಯಾವುದು ಬೇಕೋ ಅದನ್ನು ತೆಗೆದುಕೊ" ಎಂದಳು. ಆ ಹುಡುಗ ಹಣ್ಣಿಗಾಗಿ ಬಗ್ಗಿದಾಗ ಅವಳ ದುಷ್ಟಬುದ್ಧಿ ಅವನನ್ನು ಮುಗಿಸು ಎಂದು ಪಿಸುಗುಟ್ಟಿತು — ದಡ್! ಎಂದು ಅವಳು ಮುಚ್ಚಳ ಹಾಕಿದಳು. ಆಗ ಹುಡುಗನ ತಲೆ ಉರುಳಿಕೊಂಡು ಹಣ್ಣುಗಳ ಮಧ್ಯೆ ಬಿದ್ದಿತು. ನಂತರ ಅವಳಿಗೆ ಹೆದರಿಕೆ ಹುಟ್ಟಿತು. ಭಯ ಹೋಗಲಾಡಿಸಿಕೊಳ್ಳಬೇಕೆಂದು ಅವಳು ತನ್ನ ಕೋಣೆಗೆ ಹೋಗಿ ಬೀರುವಿನ

ಮೇಲಿನ ಖಜಾನೆಯಿಂದ ಒಂದು ಬಿಳಿಬಟ್ಟೆಯನ್ನು ತಂದಳು. ಕುತ್ತಿಗೆಯ ಮೇಲೆ ತಲೆ ಸರಿಯಾಗಿ ನಿಲ್ಲುವಂತೆ ಇಟ್ಟು ಬಟ್ಟೆಯಿಂದ ಗಾಯ ಕಾಣದಂತೆ ಕಟ್ಟಿದಳು. ಅವನನ್ನು ಕುರ್ಚಿಯ ಮೇಲೆ ಕೂರಿಸಿ ಬಾಗಿಲ ಹೊರಗೆ ತಂದು ಇಟ್ಟಳು. ಅವನ ಕೈಯಲ್ಲಿ ಒಂದು ಸೇಬು ಹಣ್ಣು ಇಟ್ಟಳು.

ಸ್ವಲ್ಪ ಹೊತ್ತಿನ ನಂತರ ಮಗಳು ತನ್ನ ತಾಯಿಯನ್ನು ಹುಡುಕಿಕೊಂಡು ಅಡುಗೆ ಮನೆಗೆ ಬಂದಳು. ಅವಳ ತಾಯಿ ಒಲೆಯ ಮೇಲೆ ನೀರಿನ ಪಾತ್ರೆಯಿಟ್ಟುಕೊಂಡು ಕಾಯಿಸುತ್ತಿದ್ದಳು. "ಅಮ್ಮ ಅಣ್ಣ ಬಾಗಿಲ ಹೊರಗೆ ಕುಳಿತುಕೊಂಡಿದ್ದಾನೆ. ಕೈಯಲ್ಲಿ ಸೇಬು ಹಣ್ಣು ಹಿಡಿದುಕೊಂಡಿದ್ದಾನೆ. ಬಿಳಿಚಿಕೊಂಡಹಾಗೆ ಕಾಣುತ್ತಿದ್ದಾನೆ. ನನಗೂ ಹಣ್ಣು ಕೊಡು ಎಂದು ಅವನನ್ನು ಕೇಳಿದರೆ, ಉತ್ತರವೇ ಕೊಡಲಿಲ್ಲ. ಆದ್ದರಿಂದ ನನಗೆ ತುಂಬಾ ಭಯವಾಯಿತು" ಎಂದು ಮರ್ಲಿನ್ ಹೇಳಿದಳು. "ಮತ್ತೆ ಹೋಗು, ಅವನು ಉತ್ತರಿಸದಿದ್ದರೆ, ಅವನ ಕಿವಿಯ ಮೇಲೆ ಗುದ್ದು" ಎಂದು ಅವಳ ತಾಯಿ ಹೇಳಿದಳು. ಆಗ ಆ ಹುಡುಗಿ ಅಣ್ಣನ ಹತ್ತಿರ ಓಡಿದಳು. "ನನಗೂ ಹಣ್ಣುಕೊಡು" ಎಂದು ಕೇಳಿದಳು. ಆಗಲೂ ಅವನು ಸುಮ್ಮನೆ ಇದ್ದನು. ಆಗ ಅವಳು ಅವನ ಕೆನ್ನೆಗೆ ಹೊಡೆದಳು. ಅವನ ತಲೆ ಕೆಳಗೆ ಉರುಳಿ ಬಿದ್ದಿತು. ಅದನ್ನು ನೋಡಿ ಹೆದರಿಕೆಯಿಂದ ಬಿಕ್ಕಳಿಸಿ ಅಳಹತ್ತಿದಳು. ಅಮ್ಮನ ಹತ್ತಿರ ಓಡಿದಳು. "ಅಮ್ಮ ನಾನು ಅಣ್ಣನ ತಲೆ ಬೀಳಿಸಿಬಿಟ್ಟೆ" ಎಂದು ಜೋರಾಗಿ ಅಳಲು ಪ್ರಾರಂಭಿಸಿದಳು. ಸಮಾಧಾನ ಮಾಡಿಕೊಳ್ಳಲೇ ಇಲ್ಲ. "ಮರ್ಲಿನ್, ಏನು ಮಾಡಿದೆ? ಶಾಂತಳಾಗು, ಯಾರೂ ನೋಡಿಲ್ಲ ಸದ್ಯ! ಈಗ ಏನೂ ಮಾಡಲಿಕ್ಕೆ ಆಗುವುದಿಲ್ಲ. ನಾವು ಅವನನ್ನು ಬಾದಾಮಿ ಮರದ ಕೆಳಗೆ ಹೂತುಬಿಡೋಣ" ಎಂದು ಅವಳ ತಾಯಿ ಹೇಳಿದಳು.

ಆಮೇಲೆ ಅವಳ ತಾಯಿ ಆ ಪುಟ್ಟ ಹುಡುಗನನ್ನು ಒಂದು ಪೆಟ್ಟಿಗೆಯೊಳಗೆ ಹಾಕಿ ಮರದ ಕೆಳಗೆ ಸಮಾಧಿ ಮಾಡಿದಳು. ಆದರೆ ಪುಟ್ಟ ಹುಡುಗಿ ಅಲ್ಲೇ ನಿಂತುಕೊಂಡು ಅಣ್ಣನಿಗಾಗಿ ಅತ್ತು, ಅತ್ತೂ, ಅವಳ ಕಣ್ಣೀರು ಆ ಪೆಟ್ಟಿಗೆಯೊಳಗೆ ಉರುಳಿದವು.

ಸ್ವಲ್ಪ ಹೊತ್ತಿನಲ್ಲೇ ಅವಳ ತಂದೆ ಮನೆಗೆ ಬಂದು, ಊಟದ ಮೇಜಿನ ಬಳಿ ಕುಳಿತನು. "ನನ್ನ ಮಗ ಎಲ್ಲಿ" ಎಂದು ಕೇಳಿದನು. ಅವನ ಹೆಂಡತಿ, ಒಂದು ದೊಡ್ಡ ಪಾತ್ರೆಯಲ್ಲಿ ಕುರಿ ಮಾಂಸದ ಅಡಿಗೆ ತಂದಿಟ್ಟಳು. ಮರ್ಲಿನ್ ಮಾತ್ರ ಅಳುವುದನ್ನು ನಿಲ್ಲಿಸಲೇ ಇಲ್ಲ. ಮತ್ತೆ ಆ ಹುಡುಗನ ತಂದೆ "ನನ್ನ ಮಗ ಎಲ್ಲಿ?" ಎಂದು ಕೇಳಿದನು. "ಓಹೋ, ಅವನು ಈ ಹಳ್ಳಿ ಬಿಟ್ಟು ಮಾಟನ್ ಪಟ್ಟಣಕ್ಕೆ ಹೋಗಿದ್ದಾನೆ. ಅವನು ಅಲ್ಲಿ ಸ್ವಲ್ಪ ದಿನ ಇರುತ್ತಾನಂತೆ" ಎಂದು ಅವನ ಹೆಂಡತಿ ಉತ್ತರಿಸಿದಳು. "ಅವನು ಅಲ್ಲಿ ಏನು ಮಾಡುತ್ತಾನಂತೆ? ಅವನು ನನಗೆ ಯಾಕೆ ಹೇಳಿ ಹೋಗಲಿಲ್ಲ?" ಎಂದು ಕೇಳಿದನು. "ಅಯ್ಯೋ! ಅವನು ಹೋಗಬೇಕು ಎಂದು ಇಷ್ಟಪಟ್ಟನು. ಅಲ್ಲಿ ಒಂದೂವರೆ ತಿಂಗಳು ಇದ್ದು ಬರುತ್ತೀನಿ ಎಂದು ನನ್ನನ್ನು ಕೇಳಿದನು. ಪೇಟೆಯಲ್ಲಿ ಹುಷಾರಾಗಿರುತ್ತೇನೆ ಎಂದು ಹೇಳಿ ಹೋಗಿದ್ದಾನೆ" ಎಂದು ಅವನ ಹೆಂಡತಿ ಹೇಳಿದಳು. "ಅಯ್ಯೋ! ಅವನು ಮಾಡಿರುವುದು ಸರಿಯಲ್ಲ, ಅವನು ಹಾಗೇ ಹೋಗಬಾರದಿತ್ತು. ನನ್ನನ್ನು ಕೇಳಿ, ನಮಸ್ಕಾರ ಮಾಡಿ ಆಶೀರ್ವಾದ ಪಡೆದು ಹೋಗಬೇಕಾಗಿತ್ತು" ಎಂದು ಹೇಳುತ್ತಾ ಊಟಮಾಡತೊಡಗಿದನು. "ನೀನು ಯಾಕಾಗಿ ಅಳುತ್ತೀಯಾ? ಅಣ್ಣ ಬೇಗ ಬರುತ್ತಾನೆ" ಎಂದು ಮಗಳಿಗೆ ಹೇಳಿದನು. ನಂತರ ಹೆಂಡತಿಗೆ "ಓಹೋ ಎಷ್ಟು ರುಚಿಯಾಗಿದೆ! ಇನ್ನೂ ಸ್ವಲ್ಪ ಕೊಡು!" ಎಂದು

ಕೇಳಿದನು. ನಂತರ ಹೊಟ್ಟೆ ತುಂಬಾ ತಿಂದನು.

ಪುಟ್ಟ ಹುಡುಗಿ ತನ್ನ ಪೆಟ್ಟಿಗೆ ಹತ್ತಿರ ಹೋಗಿ, ಅದರ ತಳದಲ್ಲಿದ್ದ ರೇಶಿಮೆ ಕರವಸ್ತ್ರವನ್ನು ತೆಗೆದುಕೊಂಡು ಬಾಗಿಲ ಹೊರಗೆ ಬಂದು ಜೋರಾಗಿ ಅತ್ತಳು. ನಂತರ ಆ ಬಾದಾಮಿ ಮರದ ಕೆಳಗೆ ಹಸಿರು ಹುಲ್ಲಿನ ಮೇಲೆ ಮಲಗಿದಳು. ಅಲ್ಲಿ ಮಲಗಿದ ಕೂಡಲೇ ಅವಳಿಗೆ ಮನಸ್ಸು ಹಗುರವಾದಂತಾಗಿ ಏನೊ ಒಂದು ಬಗೆಯ ಸಮಾಧಾನ, ಸಂತೋಷವಾಯಿತು. ಆಮೇಲೆ ಅವಳು ಅಳಲೇ ಇಲ್ಲ. ಆ ಬಾದಾಮಿ ಮರದ ಕೊಂಬೆಗಳು ಮುಂದಕ್ಕೆ ಬಂದು, ತನ್ನ ರೆಂಬೆಗಳನ್ನು ಚಾಚಿ ಅವಳಿಗೆ ಸಮಾಧಾನ ಮಾಡಿ ಹಿಂದಕ್ಕೆ ಸರಿದುಕೊಂಡಂತೆ ಭಾಸವಾಯಿತು. ಅಂದರೆ ತುಂಬಾ ಸಂತೋಷವಾದಾಗ ನಾವು ಚಪ್ಪಾಳೆ ತಟ್ಟುವ ಹಾಗೆ ಆ ಮರ ಮಾಡಿತು. ಅದೇ ವೇಳೆಗೆ ಮರದಿಂದ ಒಂದು ರೀತಿಯ ಇಬ್ಬನಿಯ ಹೊಗೆ ಕಾಣಿಸಿತು. ಆ ಇಬ್ಬನಿಯ ಮಧ್ಯೆ ಬೆಂಕಿ ಉರಿದ ಹಾಗೆ ಆಯಿತು. ಆ ಬೆಂಕಿಯಿಂದ ಒಂದು ಸುಂದರ ಪಕ್ಷಿ ಹಾರಿಬಂದು ಬಹಳ ಸುಂದರವಾಗಿ ಹಾಡತೊಡಗಿತು. ಗಾಳಿಯಲ್ಲಿ ಮೇಲಕ್ಕೆ ಹಾರಿ ಹೋಯಿತು. ಬಾದಾಮಿ ಮರ ಮತ್ತೆ ಮೊದಲಿನಂತೆ ಆಯಿತು. ಆಗ ಪುಟ್ಟ ಹುಡುಗಿಗೆ ಮನಸ್ಸು ಹಗುರವಾದಂತೆ ಅನಿಸಿತು. ತನ್ನ ಅಣ್ಣ ಇನ್ನೂ ಬದುಕಿದ್ದಾನೆ ಎಂದು ಅನಿಸಿ ತುಂಬಾ ಆನಂದವಾಯಿತು. ನಂತರ ಅವಳು ಊಟಕ್ಕೆ ಮನೆಯೊಳಗೆ ಹೋದಳು.

ಆ ಪಕ್ಷಿ ಹಾರಿಕೊಂಡು ಹೋಗಿ ಒಬ್ಬ ಅಕ್ಕಸಾಲಿಯ ಮನೆ ಮಾಡಿನ ಮೇಲೆ ಕುಳಿತುಕೊಂಡು ಹಾಡತೊಡಗಿತು —

"ನನ್ನ ಅಮ್ಮ ನನ್ನನ್ನು ಕೊಂದಳು,
ನನ್ನ ಅಪ್ಪ ನನಗಾಗಿ ಹಂಬಲಿಸಿ ದುಃಖಿಸಿದ,
ನನ್ನ ತಂಗಿ ಪುಟ್ಟ ಮರ್ಲಿನ್,
ಬಾದಾಮಿ ಮರದ ಕೆಳಗೆ ನನಗಾಗಿ ಅತ್ತಳು ;
ಕುವ್ವೆಟ್, ಕುವ್ವೆಟ್, ನಾನು ಎಂತಹ ಸುಂದರ ಪಕ್ಷಿ!"

ಅಕ್ಕಸಾಲಿ ತನ್ನ ಅಂಗಡಿಯಲ್ಲಿ ಕುಳಿತುಕೊಂಡು ಒಂದು ಬಂಗಾರದ ಸರವನ್ನು ಮಾಡುತ್ತಿದ್ದಾಗ ಆ ಹಕ್ಕಿಯ ಹಾಡನ್ನು ಆಲಿಸಿದನು. ಅದು ಅವನಿಗೆ ತುಂಬ ಸುಂದರವಾಗಿದೆ ಎನಿಸಿತು. ಅವನು ಮೇಲಕ್ಕೆದ್ದು ಅಂಗಡಿಯ ಹೊಸಿಲು ದಾಟಿದಾಗ ತನ್ನ ಒಂದು ಬೂಟನ್ನು ಒಳಗೇ ಬಿಟ್ಟು ಹೊರಗೆ ನಡೆದನು. ಹೀಗೆ ಅವನು ರಸ್ತೆಯ ಮಧ್ಯೆ ಒಂದು ಬೂಟು, ಒಂದೇ ಕಾಲುಚೀಲ ಹಾಕಿಕೊಂಡು ಕೆಲಸ ಮಾಡುವಾಗ ಧರಿಸುವ ಉಡುಪಿನಲ್ಲೇ, ಕೈಯಲ್ಲಿ ತಾನು ಮಾಡಿದ ಬಂಗಾರದ ಸರವನ್ನು ಮತ್ತು ಇನ್ನಿತರ ಸಾಮಾನುಗಳನ್ನು ಹಿಡಿದುಕೊಂಡು ಹೋಗುತ್ತಾ ಇದ್ದನು. ಸೂರ್ಯನ ಬೆಳಕು ರಸ್ತೆಯಲ್ಲಿ ತುಂಬಾ ಪ್ರಕಾಶಮಾನವಾಗಿ ಹರಡಿತ್ತು. ಅವನು ಹೀಗೆ ನಡೆದುಕೊಂಡು ಹೋಗುತ್ತಾ, ಅಲ್ಲಲ್ಲಿ ನಿಂತುಕೊಂಡು ಪಕ್ಷಿಯ ಕಡೆಗೆ ನೋಡಿದನು. "ಓ ಪಕ್ಷಿ! ನೀನು ಎಷ್ಟು ಸುಂದರವಾಗಿ ಹಾಡುತ್ತೀಯಾ? ಇನ್ನೊಮ್ಮೆ ಆ ಹಾಡನ್ನು ಹಾಡು" ಎಂದು ಪಕ್ಷಿಯನ್ನು ಕೇಳಿದನು. "ಇಲ್ಲ ಏನೂ ಇಲ್ಲದೆ ನಾನು ಎರಡು ಸಾರಿ ಹಾಡಲಾರೆ.

ಆ ಬಂಗಾರದ ಸರವನ್ನು ನನಗೆ ಕೊಟ್ಟರೆ ಪುನಃ ಹಾಡುವೆ" ಎಂದು ಪಕ್ಷಿ ಹೇಳಿತು. ಆಗ ಅಕ್ಕಸಾಲಿ, "ತಗೋ ಈ ಸರವನ್ನು! ಈಗ ಮತ್ತೆ ಹಾಡು!" ಎಂದು ಹೇಳಿದನು. ಆಗ ಪಕ್ಷಿ ತನ್ನ ಬಲಗಾಲಿನ ಉಗುರುಗಳಿಂದ ಆ ಸರವನ್ನು ತೆಗೆದುಕೊಂಡು, ಅಕ್ಕಸಾಲಿಯ ಮುಂದೆ ಕುಳಿತುಕೊಂಡು ಹಾಡತೊಡಗಿತು —

"ನನ್ನ ಅಮ್ಮ ನನ್ನನ್ನು ಕೊಂದಳು,
ನನ್ನ ಅಪ್ಪ ನನಗಾಗಿ ಹಂಬಲಿಸಿ ದುಃಖಿಸಿದ,
ನನ್ನ ತಂಗಿ ಪುಟ್ಟ ಮರ್ಲಿನ್,
ಬಾದಾಮಿ ಮರದ ಕೆಳಗೆ ನನಗಾಗಿ ಅತ್ತಳು ;
ಕುವೈಟ್, ಕುವೈಟ್, ನಾನು ಎಂತಹ ಸುಂದರ ಪಕ್ಷಿ ಆಗಿರುವೆ!"

ನಂತರ, ಆ ಹಕ್ಕಿ ಚಮ್ಮಾರನ ಮನೆಯ ಮಾಡಿನ ಮೇಲೆ ಕುಳಿತುಕೊಂಡು ಹಾಡತೊಡಗಿತು —

"ನನ್ನ ಅಮ್ಮ ನನ್ನನ್ನು ಕೊಂದಳು,
ನನ್ನ ಅಪ್ಪ ನನಗಾಗಿ ಹಂಬಲಿಸಿ ದುಃಖಿಸಿದ,
ನನ್ನ ತಂಗಿ ಪುಟ್ಟ ಮರ್ಲಿನ್,
ಬಾದಾಮಿ ಮರದ ಕೆಳಗೆ ನನಗಾಗಿ ಅತ್ತಳು ;
ಕುವೈಟ್, ಕುವೈಟ್, ನಾನು ಎಂತಹ ಸುಂದರ ಪಕ್ಷಿ ಆಗಿರುವೆ!"

ಚಮ್ಮಾರ ಹಕ್ಕಿಯ ಹಾಡನ್ನು ಕೇಳಿಸಿಕೊಂಡನು. ಅಂಗಿಯ ತೋಳುಗಳನ್ನು ಏರಿಸಿಕೊಂಡಿದ್ದಂತೆಯೇ ಹೊರಗೆ ಓಡಿ ಬಂದು ಮನೆಯ ಮೇಲ್ಗಡೆ ನೋಡಿದನು. ಸೂರ್ಯನ ಬೆಳಕಲ್ಲಿ ಕಣ್ಣು ಕತ್ತಲಿಟ್ಟ ಹಾಗೆ ಆಯಿತು. ಅದಕ್ಕಾಗಿ ಅವನು ಕೈಗಳನ್ನು ಕಣ್ಣುಗಳಿಗೆ ಅಡ್ಡ ಇಟ್ಟುಕೊಂಡನು. "ಹಕ್ಕಿ, ಎಷ್ಟು ಸುಂದರವಾಗಿ ನೀನು ಹಾಡುತ್ತೀಯ", ಎಂದು ಹೇಳಿದನು. ನಂತರ ಒಳಗೆ ಹೋಗಿ ಹೆಂಡತಿಯನ್ನು ಕೂಗಿ ಕರೆದನು. "ಆ ಹಕ್ಕಿ ನೋಡು, ಎಷ್ಟು ಸುಂದರವಾಗಿ ಹಾಡುತ್ತೆ" ಎಂದನು. ಆ ನಂತರ ಅವನು ತನ್ನ ಮಗಳು, ಮಕ್ಕಳು, ಅವನ ಸಹಾಯಕರು, ಕೆಲಸದ ಹುಡುಗ, ಹುಡುಗಿ ಎಲ್ಲರನ್ನೂ ಕರೆದನು. ಎಲ್ಲರೂ ರಸ್ತೆಗೆ ಬಂದು ಹಕ್ಕಿಯನ್ನು ನೋಡಿದರು. ಓಹೋ, ಎಷ್ಟು ಸುಂದರವಾಗಿದೆ. ಅದಕ್ಕೆ ಚಂದದ ಕೆಂಪು ಮತ್ತು ಹಸಿರು ಪುಕ್ಕಗಳಿವೆ. ಕತ್ತಿನ ಸುತ್ತಲೂ ಬಂಗಾರದ ಹಾಗೆ ಇದೆ. ಅದರ ಕಣ್ಣುಗಳು ನಕ್ಷತ್ರಗಳ ಹಾಗೆ ಹೊಳೆಯುತ್ತಿವೆ!" ಎಂದರು. "ಹಕ್ಕಿ, ನನಗಾಗಿ ಮತ್ತೆ ಹಾಡು" ಎಂದು ಚಮ್ಮಾರ ಹಕ್ಕಿಯನ್ನು ಕೇಳಿದನು. "ನಾನು ಸುಮ್ಮನೆ ಎರಡನೇ ಬಾರಿ ಹಾಡುವುದಿಲ್ಲ. ನೀನು ಏನಾದರೂ ಕಾಣಿಕೆ ಕೊಟ್ಟರೆ ಮಾತ್ರ ಹಾಡುವೆ" ಎಂದು ಹಕ್ಕಿ ಹೇಳಿತು. ಆಗ ಚಮ್ಮಾರ ತನ್ನ ಹೆಂಡತಿಗೆ "ಒಳಗೆ ಅಂಗಡಿಯಲ್ಲಿ ಚಪ್ಪಲಿಯ ಕಪಾಟಿನ ಮೇಲ್ಭಾಗದಲ್ಲಿರುವ ಆ ಕೆಂಪು ಚಪ್ಪಲಿಗಳನ್ನು ತೆಗೆದುಕೊಂಡು ಬಾ" ಎಂದು ಹೇಳಿದನು. ಅವಳು ಚಪ್ಪಲಿಗಳನ್ನು ತಂದಳು. "ಈಗ ನೀನು ಮತ್ತೆ ಹಾಡು ಹಕ್ಕಿ" ಎಂದು ಅವನು ಹೇಳಿದನು. ಆಗ ಪಕ್ಷಿ ತನ್ನ ಎಡಗಾಲಿನ ಪಂಜದಂತಹ ಉಗುರುಗಳಲ್ಲಿ ಚಪ್ಪಲಿಗಳನ್ನು ಹಿಡಿದುಕೊಂಡು ಚಾವಣಿ ಮೇಲೆ ಕುಳಿತಿತು. ಮತ್ತೆ ಹಾಡಲು ಶುರು ಮಾಡಿತು —

"ನನ್ನ ಅಮ್ಮ ನನ್ನನ್ನು ಕೊಂದಳು,
ನನ್ನ ಅಪ್ಪ ನನಗಾಗಿ ದುಃಖಿಸಿದ,
ನನ್ನ ತಂಗಿ ಪುಟ್ಟ ಮರ್ಲಿನ್,
ಬಾದಾಮಿ ಮರದ ಕೆಳಗೆ ನನಗಾಗಿ ಅತ್ತಳು ;
ಕುವ್ವೆಟ್, ಕುವ್ವೆಟ್, ನಾನು ಎಂತಹ ಸುಂದರ ಪಕ್ಷಿ ಆಗಿರುವೆ!"

ಹಾಡು ಮುಗಿದ ಕೂಡಲೆ ಹಕ್ಕಿ ಹಾರಿಹೋಯಿತು. ಬಲಗಾಲಲ್ಲಿ ಸರವನ್ನೂ, ಎಡಗಾಲಲ್ಲಿ ಚಪ್ಪಲಿಗಳನ್ನೂ ಎತ್ತಿಕೊಂಡು ತುಂಬಾ ದೂರದಲ್ಲಿರುವ ಗಿರಣಿ ಹತ್ತಿರ ಹೋಯಿತು. ಆ ಮಿಲ್ಲಿನಿಂದ ಚಕ್, ಚಕ್, ಚಕ್, ಚಕ್ ಎನ್ನುವ ಒಂದೇ ರೀತಿಯ ಶಬ್ದ ಬರುತ್ತಿತ್ತು. ಅದರೊಳಗೆ ಇಪ್ಪತ್ತು ಜನ ಒಂದು ಕಲ್ಲಿಗೆ ಆಕಾರ ಕೊಡಲು ಕುಟ್ಟುತ್ತಿದ್ದರು. ಅವರು ಕುಟ್ಟುವ ಶಬ್ದವೂ ಕೂಡ ಜೋರಾಗಿ ಕೇಳಿಸುತ್ತಿತ್ತು. ಹಕ್ಕಿ ಅಲ್ಲಿಗೆ ಹಾರಿಕೊಂಡು ಹೋಗಿ ಒಂದು ನಿಂಬೆ ಗಿಡದ ಮೇಲೆ ಕುಳಿತುಕೊಂಡಿತು. ಆ ಮರ ಗಿರಣಿಗೆ ಎದುರಾಗಿ ಇತ್ತು. ನಂತರ ಮತ್ತೆ ತನ್ನ ಹಾಡು ಶುರುಮಾಡಿತು —

"ನನ್ನ ಅಮ್ಮ ನನ್ನನ್ನು ಕೊಂದಳು,"

ಆಗ ಒಬ್ಬ ಕೆಲಸ ಬಿಟ್ಟು ಬಂದ.

"ನನ್ನ ಅಪ್ಪ ನನಗಾಗಿ ದುಃಖಿಸಿದ,"

ನಂತರ ಇಬ್ಬರು ಹೊರಗೆ ಬಂದು ಕೇಳಿಸಿಕೊಂಡರು.

"ನನ್ನ ತಂಗಿ,"

ಆಗ ನಾಲ್ಕು ಜನ ಹೊರಗೆ ಬಂದರು.

"ಪುಟ್ಟ ಮರ್ಲಿನ್,"

ಈಗ ಬರೀ ಎಂಟು ಜನ ಕಲ್ಲು ಕೆತ್ತುತ್ತಿದ್ದರು.

"ಅತ್ತಳು,"

ಈಗ ಐದು ಜನ ಮಿಲ್ಲಲ್ಲಿ ಉಳಿದರು.

"ಬಾದಾಮಿ ಮರದ ಕೆಳಗೆ,"

ಈಗ ಒಬ್ಬನೇ ಒಬ್ಬ ಉಳಿದನು ಮಿಲ್ಲಿನಲ್ಲಿ.

ಕುವ್ವೆಟ, ಕುವ್ವೆಟ, ನಾನು ಎಂತಹ ಸುಂದರ ಹಕ್ಕಿ!"

ಕೊನೆಯವನೂ ಹಕ್ಕಿ ಎನ್ನುವ ಪದವನ್ನು ಕೇಳಿಸಿಕೊಂಡಾಗ ಕೆಲಸ ಬಿಟ್ಟು ಬಂದನು. "ನೀನು ಎಷ್ಟು ಸುಂದರವಾಗಿ ಹಾಡುತ್ತೀಯ! ಇನ್ನೊಂದು ಸಾರಿ ಹಾಡು ನಾನು ಕೇಳಿಸಿಕೊಳ್ಳುತ್ತೇನೆ" ಎಂದು ಅವನು

ಕೇಳಿದನು. ಆಗ ಪಕ್ಷಿ "ಇಲ್ಲ ಸುಮ್ಮನೆ ನಾನು ಎರಡನೇ ಬಾರಿ ಹಾಡುವುದಿಲ್ಲ. ಆ ಬೀಸುವ ಕಲ್ಲನ್ನು ನನಗೆ ಕೊಟ್ಟರೆ ಪುನಃ ಹಾಡುವೆ ಎಂದಿತು. "ಅದು ನನ್ನೊಬ್ಬನದೇ ಆಗಿದ್ದರೆ ಕೊಡುತ್ತಿದ್ದೆ" ಎಂದು ಅವನು ಹೇಳಿದನು. ಆಗ ಎಲ್ಲರೂ "ಹಾಗೆ ಆಗಲಿ, ಮತ್ತೆ ಹಕ್ಕಿ ಹಾಡುವುದಾದರೆ ಬೀಸುವ ಕಲ್ಲನ್ನು ತೆಗೆದುಕೊಳ್ಳಲಿ" ಎಂದರು. ಹಕ್ಕಿ ಕೆಳಗೆ ಬಂದಿತು. ಆ ಇಪ್ಪತ್ತು ಮಂದಿ ಬೀಸುವ ಕಲ್ಲಿನ ರಂಧ್ರದ ಮೂಲಕ ಎತ್ತಿಕೊಂಡು ಹಕ್ಕಿಯ ಕೊರಳಿಗೆ ಹಾಕಿದರು. ಹಕ್ಕಿ ಆ ಕಲ್ಲನ್ನು ತನ್ನ ಕೊರಳ ಪಟ್ಟಿಯಂತೆ ಹಾಕಿಕೊಂಡು ಮರದ ಮೇಲೆ ಕುಳಿತು ಹಾಡತೊಡಗಿತು.

"ನನ್ನ ಅಮ್ಮ ನನ್ನನ್ನು ಕೊಂದಳು,
ನನ್ನ ಅಪ್ಪ ನನಗಾಗಿ ದುಃಖಿಸಿದ,
ನನ್ನ ತಂಗಿ ಪುಟ್ಟ ಮರ್ಲಿನ್
ಬಾದಾಮಿ ಮರದ ಕೆಳಗೆ ಅತ್ತಳು ;
ಕುವೈಟ್, ಕುವೈಟ್, ನಾನು ಎಂತಹ ಸುಂದರ ಪಕ್ಷಿ ಆಗಿರುವೆ!"

ಹಾಡು ಮುಗಿದ ಕೂಡಲೆ ಹಕ್ಕಿ ತನ್ನ ರೆಕ್ಕೆ ಅಗಲಿಸಿಕೊಂಡು, ತಾನು ತಂದಿದ್ದ ಬಂಗಾರದ ಸರ, ಕೆಂಪು ಚಪ್ಪಲಿಗಳು, ಬೀಸುವ ಕಲ್ಲು ಎಲ್ಲಾ ತೆಗೆದುಕೊಂಡು ತನ್ನ ಅಪ್ಪನ ಮನೆಗೆ ಹಾರಿತು.

ಕೋಣೆಯೊಳಗೆ ಅಪ್ಪ, ಅಮ್ಮ ಮತ್ತು ಪುಟ್ಟ ಮರ್ಲಿನ್ ಊಟಕ್ಕೆ ಕುಳಿತಿದ್ದರು. ಆಗ ಅಪ್ಪ "ಓಹೋ! ಯಾಕೊ ಈಗ ತುಂಬ ಸಂತೋಷವಾಗಿ, ಮನಸ್ಸು ಆನಂದದಿಂದ ತುಂಬಿದಂತಿದೆ" ಎಂದನು. "ಇಲ್ಲ, ನನಗೆ ನಡುಕ ಹುಟ್ಟಿದೆ. ಏನೋ ಗುಡುಗು, ಸಿಡಿಲು, ಬಡಿಯುವ ಹಾಗೆ ಆಗಿದೆ" ಎಂದು ಅಮ್ಮ ಹೇಳಿದಳು. ಆದರೆ ಪುಟ್ಟ ಮರ್ಲಿನ್ ಕುಳಿತುಕೊಂಡು ಅತ್ತೂ, ಅತ್ತೂ ಇಟ್ಟಳು. ಆಗ ಪಕ್ಷಿ ಹಾರುತ್ತಾ ಬಂದು ಮಾಡಿನ ಮೇಲೆ ಕುಳಿತುಕೊಂಡಿತು. ಆಗ ಅಪ್ಪ "ಇಂದು ತುಂಬಾ ಖುಷಿ ಆಗುತ್ತಿದೆ. ಇಂದು ಬಹಳ ಒಳ್ಳೆಯ ದಿನ ಅನ್ನಿಸುತ್ತಿದೆ. ನನ್ನ ಹತ್ತಿರದ ನೆಂಟರನ್ನು ನೋಡುವೆ ಎಂದು ಅನಿಸುತ್ತದೆ" ಎಂದು ಹೇಳಿದನು. "ಇಲ್ಲ, ನನಗೆ ತುಂಬಾ ಹೆದರಿಕೆ ಆಗುತ್ತಿದೆ. ನನ್ನ ಹಲ್ಲುಗಳು ಕಟಕಟ ಎಂದು ಶಬ್ದಮಾಡುತ್ತಿವೆ. ನನ್ನ ನರಗಳಲ್ಲಿ ಬೆಂಕಿ ಹರಿದಂತೆ ಆಗುತ್ತಿದೆ" ಎಂದು ಹೇಳುತ್ತಾ ಅಮ್ಮ ತನ್ನ ಕುಪ್ಪಸವನ್ನು ಹರಿದುಕೊಂಡಳು. ಆದರೆ ಪುಟ್ಟ ಮರ್ಲಿನ್ ತನ್ನ ತಟ್ಟೆಯನ್ನು ಕಣ್ಣುಗಳ ಮುಂದೆ ಹಿಡಿದುಕೊಂಡು, ಮೂಲೆಯಲ್ಲಿ ಕುಳಿತುಕೊಂಡು ಅಳುತ್ತಾ ಇದ್ದಳು. ಆಗ ಪಕ್ಷಿ ಬಾದಾಮಿ ಮರದ ಮೇಲೆ ಕುಳಿತು ಹಾಡತೊಡಗಿತು —

"ನನ್ನ ಅಮ್ಮ ನನ್ನನ್ನು ಕೊಂದಳು,"

ಆಗ ಅಮ್ಮ ತನ್ನ ಕಿವಿಗಳನ್ನು ಹಿಡಿದುಕೊಂಡು, ಕಣ್ಣುಗಳನ್ನು ಮುಚ್ಚಿಕೊಂಡಳು. ಅದರಿಂದ ಏನೂ ಕೇಳಿಸದು ಮತ್ತು ಕಾಣಿಸದು ಎಂದುಕೊಂಡಳು. ಆದರೆ ಹಕ್ಕಿಯ ಹಾಡು ಭಯಂಕರವಾಗಿ ಅವಳ ಕಿವಿಗೆ ಅಪ್ಪಳಿಸಿದಂತಾಯಿತು. ಅವಳ ಕಣ್ಣುಗಳು ಮಿಂಚು ಹೊಡೆದಂತೆ, ಸುಟ್ಟ ಹಾಗೆ ಆದವು.

"ನನ್ನ ಅಪ್ಪ ನನಗಾಗಿ ದುಃಖಿಸಿದನು,"

"ಓಹೋ, ಅಲ್ಲಿ ಒಂದು ಸುಂದರ ಹಕ್ಕಿ ತುಂಬಾ ಅದ್ಭುತವಾಗಿ ಹಾಡುತ್ತಿದೆ. ಎಲ್ಲಾ ಹಿತವಾಗಿದೆ.

ಪ್ರತಿಯೊಂದರಿಂದ ಸುಗಂಧ ಕಡ್ಡಿಯ ಪರಿಮಳ ಸೂಸುತ್ತಿದೆ" ಎಂದು ಅಪ್ಪ ಹೇಳಿದ.

"ನನ್ನ ತಂಗಿ, ಪುಟ್ಟ ಮರ್ಲಿನ್," ಎಂದು ಹಕ್ಕಿ ಹೇಳುತ್ತಿರುವಾಗಲೇ ಮರ್ಲಿನ್ ತಲೆಯನ್ನು ಮೊಣಕಾಲುಗಳ ನಡುವೆ ಇಟ್ಟುಕೊಂಡು ಅಳಹತ್ತಿದಳು. ಆಗ ಅಪ್ಪ, "ನಾನು ಹೊರಗೆ ಹೋಗಿ, ಹಕ್ಕಿಯನ್ನು ಹತ್ತಿರದಿಂದ ನೋಡಬೇಕು" ಎಂದನು. ಆಗ ಅಮ್ಮ "ಬೇಡ ಹೊರಗೆ ಹೇಗಬೇಡ, ಮನೆ ಪೂರ್ತಿ ಅಲ್ಲಾಡುತ್ತಿದೆ, ಬೆಂಕಿ ಬೀಳುವ ಹಾಗೆ ಕಾಣುತ್ತದೆ" ಎಂದು ಹೇಳಿದಳು. ಆದರೆ ಆಕೆಯ ಗಂಡ ಹೊರಗೆ ಬಂದು ಪಕ್ಷಿಯನ್ನು ನೋಡಿದನು.

"ಬಾದಾಮಿ ಮರದ ಕೆಳಗೆ ಅತ್ತಳು

ಕುವ್ವೆಟ್, ಕುವ್ವೆಟ್, ನಾನು ಎಂತಹ ಸುಂದರ ಹಕ್ಕಿ !"

ಹೀಗೆ ಹೇಳಿ ಹಕ್ಕಿ ಬಂಗಾರದ ಸರವನ್ನು ತನ್ನ ಅಪ್ಪನ ಕೊರಳಲ್ಲಿ ಸರಿಯಾಗಿ ಬೀಳಿಸಿತು. ನಂತರ ಅವನು ಒಳಗೆ ಹೋಗಿ " ನೋಡು, ಎಷ್ಟು ಒಳ್ಳೆಯ ಹಕ್ಕಿ, ನನಗೆ ಎಷ್ಟು ಸುಂದರ ಸರವನ್ನು ಕೊಟ್ಟಿದೆ" ಎಂದು ಹೇಳಿದನು. ಆದರೆ ಆ ಹೆಂಗಸು ಎಷ್ಟು ಹೆದರಿದಳು ಅಂದರೆ, ನೆಲದ ಮೇಲೆ ಅಂಗಾತ ಬಿದ್ದುಬಿಟ್ಟಳು. ಅವಳ ತಲೆಯ ಟೋಪಿ ಕೆಳಗೆ ಬಿದ್ದಿತು. ಆಗ ಹಕ್ಕಿ ಪುನಃ ಹಾಡತೊಡಗಿತು —

"ನನ್ನ ಅಮ್ಮ ನನ್ನನ್ನು ಕೊಂದಳು,"

"ಓಹೋ, ಈ ಮಾತನ್ನು ನಾನು ಕೇಳಿಸಿಕೊಳ್ಳದಂತೆ, ಭೂಮಿಯ ಕೆಳಗೆ ಸಾವಿರ ಅಡಿ ಆಳದಲ್ಲಿ ನಾನಿರಬಾರದಿತ್ತೆ!" ಎಂದಳು.

ನನ್ನ ಅಪ್ಪ ನನಗಾಗಿ ದುಃಖಿಸಿದನು!"

ಆಗ ಆ ಹೆಂಗಸು ಮೂರ್ಛೆ ಹೋದಳು,

"ನನ್ನ ತಂಗಿ ಪುಟ್ಟ ಮರ್ಲಿನ್,"

"ಆಹಾ, ನಾನೂ ಕೂಡ ಹೊರಗೆ ಹೋಗುವೆ, ನನಗೇನಾದರು ಆ ಹಕ್ಕಿ ಕೊಡುವುದೋ ನೋಡುತ್ತೇನೆ" ಎಂದು ಹೇಳಿಕೊಳ್ಳುತ್ತಾ ಹೊರಗೆ ಓಡಿದಳು, ಆಗ ಆ ಹಕ್ಕಿ ಕೆಂಪು ಚಪ್ಪಲಿಗಳನ್ನು ಕೆಳಗೆ ಹಾಕಿತು.


"ಬಾದಾಮಿ ಮರದ ಕೆಳಗೆ ಅತ್ತಳು

ಕುವ್ವೆಟ್, ಕುವ್ವೆಟ್, ನಾನು ಎಂತಹ ಸುಂದರ ಹಕ್ಕಿ" ಎಂದು ಹಾಡಿತು.

ಆಗ ಮರ್ಲಿನ್‌ಗೆ ತುಂಬಾ ಸಂತೋಷವಾಯಿತು. ಆ ಚಪ್ಪಲಿಗಳನ್ನು ಹಾಕಿಕೊಂಡು ಕುಣಿದು ಕುಪ್ಪಳಿಸಿದಳು. "ಓಹೋ, ನಾನು ಹೊರಗೆ ಹೋಗುವಾಗ ದುಃಖದಿಂದ ಇದ್ದೆ, ಈಗ ನನಗೆ ತುಂಬ ಸಂತೋಷವಾಗಿದೆ" ಎಂದು ಅಂದುಕೊಂಡಳು. ಅದು ಒಂದು ಅದ್ಭುತ ಪಕ್ಷಿ. ಅದು ನನಗೆ ಒಂದು ಜೊತೆ ಚಪ್ಪಲಿಗಳನ್ನು ಕೊಟ್ಟಿದೆ" ಎಂದು ಅಂದುಕೊಂಡಳು.

"ಒಳ್ಳೇದು" ಎಂದು ಹೇಳುತ್ತಾ, ಆ ಹೆಂಗಸು ಎದ್ದು ಕುಳಿತುಕೊಂಡಳು. ಅವಳ ಕೂದಲು ಬೆಂಕಿಯ ಜ್ವಾಲೆಯಂತೆ ನಿಮಿರಿದವು. "ನನಗೆ ಈ ಪ್ರಪಂಚ ಕೊನೆಗೊಳ್ಳುತ್ತದೆ ಎಂದು ಅನಿಸುತ್ತಿದೆ. ಪಕ್ಷಿ ನನ್ನ ಮನಸ್ಸಿನ ಭಾರವನ್ನು ಹಗುರ ಮಾಡುತ್ತದೆಯೊ ಎಂದು ನಾನೂ ಕೂಡ ಹೊರಗೆ ಹೋಗಿ ನೋಡುತ್ತೇನೆ" ಎಂದು ಹೇಳಿಕೊಳ್ಳುತ್ತಾ ಅವಳು ಬಾಗಿಲಿನಿಂದ ಹೊರಗೆ ಕಾಲಿಟ್ಟಳು. ಆಗ ಹಕ್ಕಿ ಬೀಸುವ ಕಲ್ಲನ್ನು ಅವಳ ತಲೆಯ ಮೇಲೆ ಎಸೆಯಿತು. ಆಗ ಅವಳು ಪೂರ್ತಿ ತಲೆಕೆಳಗಾಗಿ ಬಿದ್ದಳು. ಹಕ್ಕಿಯ ತಂದೆ ಮತ್ತು ತಂಗಿ ಆ ಶಬ್ದವನ್ನು ಕೇಳಿ ಹೊರಗೆ ಬಂದರು. ಆಗ ಒಂದು ರೀತಿಯ ಹೊಗೆ, ಜ್ವಾಲೆ ಮತ್ತು ಬೆಂಕಿ ಹೊತ್ತಿಕೊಂಡಿತು. ಅದು ಕರಗಿದಾಗ ಆ ಜಾಗದಲ್ಲಿ ಮರ್ಲಿನ್‌ಳ ಅಣ್ಣ ನಿಂತಿದ್ದನು. ಅವನು ತನ್ನ ತಂದೆಯ ಮತ್ತು ತಂಗಿಯ ಕೈ ಹಿಡಿದುಕೊಂಡನು. ಮೂವರೂ ಅತ್ಯಂತ ಪ್ರೀತಿಯಿಂದ ಒಬ್ಬರನ್ನೊಬ್ಬರು ಅಪ್ಪಿಕೊಂಡರು. ನಂತರ ಊಟ ಮಾಡಲು ಮೂವರು ಒಳಗೆ ಹೋದರು.

೨. ಅಕ್ಕ ಮತ್ತು ಅವಳ ಚಿಕ್ಕ ತಮ್ಮ



ಬಹಳ ವರ್ಷಗಳ ಹಿಂದೆ ಅಕ್ಕ, ತಮ್ಮ ಇದ್ದರು. ಒಂದು ಸಾರಿ ತಮ್ಮನು ತನ್ನ ಅಕ್ಕನ ಕೈಹಿಡಿದುಕೊಂಡು "ನಮ್ಮನ್ನು ತುಂಬ ಪ್ರೀತಿಸುತ್ತಿದ್ದ ಅಮ್ಮ ಸತ್ತುಹೋದಳು. ಮಲತಾಯಿಗೆ ನಮ್ಮ ಮೇಲೆ ಪ್ರೀತಿಯಿಲ್ಲ. ದಿನವೂ ಹೊಡೆಯುತ್ತಾಳೆ. ಹತ್ತಿರ ಹೋದರೆ ಸಾಕು ಕಾಲಿನಿಂದ ತಳ್ಳುತ್ತಾಳೆ. ಎಲ್ಲರೂ ತಿಂದು ಬಿಟ್ಟಿದ್ದು ನಮಗೆ ಹಾಕುತ್ತಾಳೆ. ಅದೂ ಒಣಗಿದ ರೊಟ್ಟಿ, ಗಟ್ಟಿಯಾಗಿರುತ್ತದೆ. ಆ ಊಟ ತಿಂದು ತುಂಬ ಬೇಸರವಾಗಿದೆ. ನಮ್ಮ ಮನೆಯ ನಾಯಿ ಎಷ್ಟೋ ಚೆನ್ನಾಗಿದೆ. ಅದಕ್ಕೆ ಆಗಾಗ ಒಳ್ಳೆಯ ಊಟ ಸಿಗುತ್ತದೆ. ನಮ್ಮ ಅಮ್ಮ ಸತ್ತುಹೋದಮೇಲೆ ನಮಗೆ ಒಂದು ದಿನವೂ, ಒಂದು ಗಂಟೆಯೂ, ಸಂತೋಷ ಎನ್ನುವುದು ಇಲ್ಲ. ನಾವು ಎಲ್ಲಿಯಾದರೂ ಓಡಿಹೋಗೋಣ ನಡಿ" ಎಂದು ಹೇಳಿದ. ಅವರಿಬ್ಬರೂ ಮನೆಬಿಟ್ಟು ಹೊರಟೇ ಹೋದರು. ಕಲ್ಲುಮುಳ್ಳುಗಳಿರುವ ಜಾಗವನ್ನು, ವಿಶಾಲ ಮೈದಾನ, ಹೊಲ, ಹುಲ್ಲುಗಾವಲು

ಗಳನ್ನು ದಾಟುತ್ತಾ ಸಾಯಂಕಾಲದ ವೇಳೆಗೆ ಒಂದು ದೊಡ್ಡ ಕಾಡಿಗೆ ಬಂದರು. ಒಂದು ಕಡೆ ದುಃಖ, ಇನ್ನೊಂದು ಕಡೆ ಹಸಿವು ಅವರನ್ನು ಕಾಡುತ್ತಿದ್ದವು. ಬಹಳ ದೂರ ನಡೆದುಕೊಂಡು ಬಂದಿದ್ದರಿಂದ ಅವರಿಗೆ ತುಂಬಾ ಆಯಾಸವಾಗಿತ್ತು. ಅವರು ಒಂದು ಮರದ ಕೆಳಗೆ ಮಲಗಿದರು. ಮಾರನೆಯ ದಿನ ಅವರು ಏಳುವ ಹೊತ್ತಿಗೆ ಸೂರ್ಯ ತನ್ನ ಕೆಲಸದಲ್ಲಿ ತೊಡಗಿದ್ದನು. ಎಲ್ಲೆಲ್ಲೂ ಬೆಳಕು ಹರಡಿತ್ತು. ಸೂರ್ಯನ ಕಿರಣಗಳ ಶಾಖದಿಂದ ಮರಗಳೂ ಕೂಡ ಬಿಸಿ ಆಗಿದ್ದವು. ಆಗ ತಮ್ಮ "ನನಗೆ ತುಂಬಾ ಬಾಯಾರಿಕೆಯಾಗಿದೆ. ಒಂದು ಗುಟುಕು ನೀರು ಸಿಕ್ಕಿದರೂ ಸಾಕು. ಇಲ್ಲೇ ಎಲ್ಲೋ ನೀರು ಹರಿಯುತ್ತಿರುವ ಸದ್ದು ಕೇಳಿಸುತ್ತಿದೆ" ಎಂದು ತನ್ನ ಅಕ್ಕನಿಗೆ ಹೇಳಿ, ಅವಳ ಕೈ ಹಿಡಿದುಕೊಂಡು ನೀರಿನ ಜಾಡನ್ನು ಹುಡುಕಿಕೊಂಡು ಹೊರಟನು.

ಈ ಕಡೆ, ಮಲತಾಯಿಗೆ ತನ್ನ ಮಲಮಕ್ಕಳು ಮನೆಬಿಟ್ಟು ಹೋಗಿರುವುದು ತಿಳಿಯಿತು. ಅವಳು ಕೆಟ್ಟ ಮಾಟಗಾತಿ. ಅವಳು ಮಾಟಗಾತಿಯರ ಸ್ವಭಾವದಂತೆ, ಮಲಮಕ್ಕಳಿಗೆ ತಿಳಿಯದಂತೆ, ಅವರ ಹಿಂದೆಯೇ ಬಂದಿದ್ದಳು. ಅವರು ನೀರು ಕುಡಿಯುವ ಮೊದಲೇ ಕಾಡಿನ ಎಲ್ಲ ನೀರಿನ ಚಿಲುಮೆ, ತೊರೆಗಳು ಮಾಯವಾಗುವಂತೆ ಮಂತ್ರ ಹಾಕಿದಳು.

ಅಕ್ಕ ತಮ್ಮನಿಗೆ ನೀರು ಹುಡುಕಿಕೊಂಡು ಹೋದ ಸ್ವಲ್ಪ ದೂರದಲ್ಲೇ ಒಂದು ತೊರೆ ಕಾಣಿಸಿತು. ಅದು ಹರಿಯುವ ರಭಸಕ್ಕೆ ಬುರುಗು ಗುಳ್ಳೆಗಳು ಏಳುತ್ತಿದ್ದವು. ತಮ್ಮ ಅದರಿಂದ ನೀರು ಕುಡಿಯಲು ಹೋಗಬೇಕು ಎನ್ನುವಷ್ಟರಲ್ಲಿ ಅಕ್ಕ ಅವನನ್ನು ತಡೆದಳು. ಏಕೆಂದರೆ ಹರಿಯುವ ನೀರಿನಿಂದ ಅವಳಿಗೆ ಒಂದು ವಿಚಿತ್ರವಾದ ಹಾಡು ಕೇಳಿಸಿತು. "ಯಾರು ನನ್ನ ನೀರು ಕುಡಿಯುವರೊ, ಅವರು ಹುಲಿ ಆಗುತ್ತಾರೆ" ಎಂದು ತೊರೆ ಹಾಡಿತು. ಹೀಗಾಗಿ ಅಕ್ಕ ತಮ್ಮನನ್ನು ನೀರು ಕುಡಿಯಲು ಬಿಡಲಿಲ್ಲ. "ನೀರು ಕುಡಿದು, ನೀನು ಹುಲಿ ಆಗಿ, ನನ್ನನ್ನು ಸುಲಿದು ಹಾಕುತ್ತೀಯಪ್ಪ" ಎಂದು ತಮ್ಮನನ್ನು ತಡೆದಳು. ತಮ್ಮ ನೀರು ಕುಡಿಯಲಿಲ್ಲ. ಅವನಿಗೆ ಬಾಯಾರಿಕೆ ಹೆಚ್ಚಾಯಿತು."ಮುಂದೆ ಎಲ್ಲಾದರೂ ನೀರಿನ ತೊರೆ ಸಿಕ್ಕರೆ ನೀರು ಕುಡಿಯುತ್ತೇನೆ" ಎಂದು ತಮ್ಮ ಅಕ್ಕನಿಗೆ ಹೇಳಿದನು. ಹೀಗೆ ಅವರಿಬ್ಬರೂ ಇನ್ನೂ ಮುಂದೆ ಬಂದರು. ಅವರಿಗೆ ಎರಡನೆಯ ತೊರೆ ಸಿಕ್ಕಿತು. ಅಕ್ಕನಿಗೆ ಮತ್ತೆ ಆ ತೊರೆಯ ಹಾಡು ಕೇಳಿಸಿತು. "ಯಾರು ನನ್ನ ನೀರು ಕುಡಿಯುವರೊ ಅವರು ತೋಳ ಆಗುತ್ತಾರೆ" ಎಂದು ತೊರೆ ಹಾಡಿತು. ಅಕ್ಕ ಅಳುತ್ತಾ ತಮ್ಮನನ್ನು ಹಿಡಿದುಕೊಂಡು "ತಮ್ಮ, ಬೇಡಪ್ಪ, ಇದರ ನೀರು ಕುಡಿಯಬೇಡ. ಕುಡಿದವರು ತೋಳ ಆಗುವರು ಎಂದು ತೊರೆಹಾಡುತ್ತಿದೆ. ನೀನು ತೋಳ ಆದರೆ ನನ್ನನ್ನು ತಿಂದುಬಿಡುತ್ತೀಯಾ" ಎಂದು ಹೇಳಿದಳು. ಆಗಲೂ ತಮ್ಮ ನೀರು ಕುಡಿಯಲಿಲ್ಲ. "ಮುಂದೆ ಎಲ್ಲಿಯಾದರೂ ನೀರು ಸಿಕ್ಕರೆ ನಾನು ಕುಡಿದೇಬಿಡುತ್ತೇನೆ. ಬಾಯಾರಿಕೆಯನ್ನು ನನ್ನಿಂದ ತಡೆದುಕೊಳ್ಳಲು ಆಗುವುದಿಲ್ಲ" ಎಂದು ತಮ್ಮ ಅಕ್ಕನಿಗೆ ಒತ್ತಾಯದಿಂದ ಹೇಳಿದನು. ಅವರು ಹೀಗೆ ಮುಂದಕ್ಕೆ ನಡೆದುಕೊಂಡು ಬಂದರು. ಅವರಿಗೆ ಇನ್ನೊಂದು ಚಿಲುಮೆ ಎದುರಿಗೆ ಸಿಕ್ಕಿತು. ಅಕ್ಕ ಅದರ ಹಾಡನ್ನು ಕೂಡ ಕೇಳಿಸಿಕೊಂಡಳು, "ಯಾರು ನನ್ನ ನೀರು ಕುಡಿಯುವರೊ, ಅವರು ಜಿಂಕೆಯಾಗುತ್ತಾರೆ" ಎಂದು ಆ ಚಿಲುಮೆ ಹಾಡಿತು. ಮತ್ತೆ ಅಕ್ಕ ತಮ್ಮನಿಗೆ "ನನ್ನ ತಮ್ಮ ಈಗ ನೀನು ನೀರು ಕುಡಿದರೆ ಜಿಂಕೆಮರಿ ಆಗುವೆ. ನಂತರ ನೀನು ನನ್ನನ್ನು ಬಿಟ್ಟು ದೂರ ಓಡಿಹೋಗುವೆ ಆದ್ದರಿಂದ ನೀರು ಕುಡಿಯಬೇಡ" ಎಂದು

ಹೇಳಿದಳು. ಆದರೆ ತಮ್ಮನಿಗೆ ಬಾಯಾರಿಕೆಯನ್ನು ತಡೆಯಲು ಆಗಲಿಲ್ಲ. ಅಕ್ಕನ ಮಾತು ಮುಗಿಯುವುದರೊಳಗೆ ನೀರು ಅವನ ಗಂಟಲನ್ನು ಸೇರಿತು. ನೀರು ಕುಡಿಯುತ್ತಾ ಇರುವಾಗಲೇ ಅವನ ಆಕಾರ ಜಿಂಕೆಯ ಮರಿ ಆಗಿ ಬದಲಾಯಿತು.

ತಮ್ಮ ಜಿಂಕೆ ಆಗಿದ್ದನ್ನು ನೋಡಿ ಅಕ್ಕನಿಗೆ ತುಂಬ ದುಃಖವಾಯಿತು. ಬಹಳ ಅತ್ತಳು. ತಮ್ಮನೂ ಕೂಡ ಕಾಲು ಮಡಿಸಿಕೊಂಡು, ಅಕ್ಕನ ಪಕ್ಕದಲ್ಲಿ ಅಳುತ್ತಾ ಕುಳಿತುಕೊಂಡನು. ಸ್ವಲ್ಪ ಸಮಾಧಾನ ಆದ ಮೇಲೆ ಅಕ್ಕ "ಹಾಗೇ ಇರು ನನ್ನ ಮುದ್ದಿನ ಜಿಂಕೆ. ನಿನ್ನನ್ನು ನಾನೆಂದೂ ಕೈಬಿಡುವುದಿಲ್ಲ, ದೂರ ಓಡಿಸುವುದಿಲ್ಲ" ಎಂದು ಹೇಳುತ್ತಾ ತನ್ನ ಬಂಗಾರದ ಕಾಲುಚೀಲದ ಪಟ್ಟಿಯನ್ನು ಅವನ ಕೊರಳ ಸುತ್ತಲೂ ಕಟ್ಟಿದಳು. ಅಲ್ಲೇ ಬೆಳೆದಿದ್ದ ಬಿಳಿ ಹುಲ್ಲನ್ನು ಹಗ್ಗದಂತೆ ನೇಯ್ದು ಅವನ ಕೊರಳಿಗೆ ಕಟ್ಟಿದಳು. ಆ ಹಗ್ಗದ ಇನ್ನೊಂದು ತುದಿಯನ್ನು ಕೈಯಲ್ಲಿ ಹಿಡಿದುಕೊಂಡು ಜಿಂಕೆ ತಮ್ಮನನ್ನು ಕರೆದುಕೊಂಡು ಹೊರಟಳು. ಅವರು ಕಾಡಿನಲ್ಲಿ ತುಂಬಾ ದೂರ ನಡೆದರು. ಕೊನೆಗೆ ಅವರಿಗೆ ಒಂದು ಗುಡಿಸಲು ಕಾಣಿಸಿತು. ಅಕ್ಕ ಅದರೊಳಗೆ ಇಣುಕಿ ನೋಡಿದಳು. ಯಾರೂ ವಾಸವಾಗಿಲ್ಲವೆಂದು ತಿಳಿದು, "ನಾವು ಇಲ್ಲೇ ವಾಸಮಾಡೋಣ" ಎಂದಳು. ನಂತರ ಒಣಗಿದ ಎಲೆಗಳು, ಜೊಂಡು ಹುಲ್ಲು ತಂದು ತಮ್ಮನಿಗಾಗಿ ಮೆತ್ತನೆ ಹಾಸಿಗೆ ಸಿದ್ಧಮಾಡಿದಳು. ಅವಳು ಪ್ರತಿದಿನ ಕಾಡಿನಲ್ಲಿ ಗೆಡ್ಡೆ, ಗೆಣಸು, ಹಣ್ಣು, ಕಾಯಿಗಳನ್ನು ಆರಿಸಿಕೊಂಡು ತರುತ್ತಿದ್ದಳು. ಜಿಂಕೆ ತಮ್ಮನಿಗಾಗಿ ಮೃದುವಾದ ಹುಲ್ಲು ತಂದು ಕೈಯಿಂದಲೆ ತಿನ್ನಿಸುತ್ತಿದ್ದಳು. ಅವನು ಸಂತೋಷದಿಂದ ಅವಳ ಸುತ್ತಲೂ ಕುಣಿದಾಡುತ್ತಿದ್ದನು. ಎಲ್ಲಾ ಕೆಲಸ ಮುಗಿಯುವ ಹೊತ್ತಿಗೆ ಸಾಯಂಕಾಲವಾಗುತ್ತಿತ್ತು. ಅಕ್ಕ ಆಯಾಸದಿಂದ ಜಿಂಕೆ ತಮ್ಮನ ಬೆನ್ನಿನ ಮೇಲೆ ತಲೆ ಇಟ್ಟುಕೊಂಡು ಮಲಗುತ್ತಿದ್ದಳು. ತನ್ನ ತಮ್ಮನಿಗೆ ಮೊದಲಿನ ರೂಪ ಯಾವಾಗ ಬಂದೀತೋ ಎಂದು ಯೋಚಿಸುತ್ತಿದ್ದಳು.

ಹೀಗೆ ಕಾಡಿನಲ್ಲೇ ಅವರ ಜೀವನ ಸಾಗಿತು. ಕೆಲವು ವರ್ಷಗಳ ನಂತರ ಒಂದು ದೇಶದ ರಾಜ ಬೇಟೆಯಾಡಲು ಅವರಿದ್ದ ಕಾಡಿಗೆ ಬಂದನು. ಅವನ ಜೊತೆ ಬೇಟೆ ಆಡುವವರ ದೊಡ್ಡ ಗುಂಪೇ ಇತ್ತು. ಅವರ ಓಡಾಟದಿಂದ ಕೆಳಗೆ ಬಿದ್ದ ಮರಗಳ ಎಲೆಗಳಿಂದ ವಿಚಿತ್ರ ಶಬ್ದ ಹೊರಡುತ್ತಿತ್ತು. ಕಹಳೆಗಳನ್ನು ಊದಿದರು. ನಾಯಿಗಳು ಬೊಗಳಿದವು. ಬೇಟೆಗಾರರ ಹುರುಪಿನ ಕೂಗಾಟ ಇಡೀ ಕಾಡಿನಲ್ಲಿ ಪ್ರತಿಧ್ವನಿಸಿತು. ಈ ಎಲ್ಲಾ ಗಲಾಟೆಗಳನ್ನು ಜಿಂಕೆ ಕೇಳಿಸಿಕೊಂಡಿತು. ತಾನೂ ಈಗ ಕಾಡಿನಲ್ಲಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಎಂದು ಜಿಂಕೆ ಯೋಚಿಸಿತು. "ಅಯ್ಯೋ! ನಾನು ಎಷ್ಟು ದಿನ ಎಂದು ಹೀಗೆ ಮನೆಯಲ್ಲಿ ಬಂದಿ ಆಗಿರಲಿ? ನಾನೂ ಬೇಟೆಗೆ ಹೋಗುವೆ" ಎಂದು ಜಿಂಕೆ ತಮ್ಮ ಅಕ್ಕನನ್ನು ಬೇಡಿಕೊಂಡನು. ಅವನ ಒತ್ತಾಯಪೂರ್ವಕ ಬೇಡಿಕೆಯನ್ನು ಅಕ್ಕ ಒಪ್ಪಲೇಬೇಕಾಯಿತು. ಜಿಂಕೆ ತಮ್ಮ ಹೋಗುವುದಕ್ಕೆ ಮುಂಚೆ ಎಚ್ಚರಿಕೆಯನ್ನು ಕೊಟ್ಟಳು. "ಬೇಗ, ಸಾಯಂಕಾಲಕ್ಕೆ ಸರಿಯಾಗಿ ಹಿಂದಿರುಗು. ಯಾರೂ ಬೇರೆಯವರು ಬರದಂತೆ ಬಾಗಿಲು ಹಾಕಿರುತ್ತೇನೆ. ನೀನು ಬಂದಾಗ ಅಕ್ಕಾ ನಾನು ಒಳಗೆ ಬರುತ್ತೇನೆ ಅಂದಾಗ ಮಾತ್ರ ಬಾಗಿಲು ತೆಗೆಯುತ್ತೇನೆ. ಏಕೆಂದರೆ ಬಂದಿರುವುದು ನೀನೇ ಎಂದು ನಿನ್ನ ಮಾತುಗಳಿಂದ ನನಗೆ ತಿಳಿಯುತ್ತದೆ" ಎಂದು ಹೇಳಿ ಕಳಿಸಿದಳು. ಅವಳು ಒಪ್ಪಿಗೆ ಕೊಟ್ಟಿದ್ದೇ ತಡ, ಜಿಂಕೆ ತಮ್ಮ ಚಿಮ್ಮಿಕೊಂಡು ಹಾರಿ ನೆಗೆದು, ಖುಶಿಯಿಂದ ತಂಗಾಳಿಯಲ್ಲಿ ವೇಗವಾಗಿ ಓಡಿತು. ಬೇಟೆಗೆ ಬಂದಿದ್ದ ರಾಜ ಮತ್ತು ಅವನ ಸಂಗಡಿಗರು ಆ ಜಿಂಕೆಯನ್ನು ಗಮನಿಸಿದರು. ಅದನ್ನು ಹಿಡಿಯಲು ಹಿಂಬಾಲಿಸಿದರು. ಇನ್ನೇನು

ಹಿಡಿದೇಬಿಟ್ಟೆವು ಎಂದುಕೊಳ್ಳುವುದರೊಳಗಾಗಿ ಜಿಂಕೆ ಅವರಿಂದ ತಪ್ಪಿಸಿಕೊಂಡು ಪೊದೆಯೊಳಗೆ ಮರೆಯಾಗುತ್ತಿತ್ತು. ಅವರಿಗೆ ಜಿಂಕೆಯನ್ನು ಹಿಡಿಯಲು ಆಗಲಿಲ್ಲ. ಮೆಲ್ಲಗೆ ಕತ್ತಲು ಆವರಿಸುತ್ತಿದ್ದಂತೆ ಜಿಂಕೆ ಗುಡಿಸಲ ಕಡೆಗೆ ಓಡಿತು. ಬಾಗಿಲು ಬಡಿದು "ಅಕ್ಕ ನಾನು ಒಳಗೆ ಬರಲೇ?" ಎಂದು ಕೇಳಿತು. ಅಕ್ಕ ಬಾಗಿಲು ತೆರೆದಳು. ಜಿಂಕೆ ಒಳಗೆ ಹೋಗಿ ತನ್ನ ಮೆತ್ತನೆಯ ಹುಲ್ಲುಹಾಸಿಗೆಯ ಮೇಲೆ ಮಲಗಿತು. ಮಾರನೇ ದಿನ ಮತ್ತೆ ಬೇಟೆಯ ಕೂಗುಗಳು ಕೇಳಿಸಿದವು. ಕಹಳೆಕೊಂಬಿನ ಧ್ವನಿ ಮತ್ತು ಬೇಟೆಗಾರರ ಆಹಾ, ಓಹೋ ಎಂಬ ಸಂತೋಷದ ಕೂಗುಗಳು ಜಿಂಕೆಗೆ ಕೇಳಿಸಿದವು.

ಜಿಂಕೆಗೆ ಮತ್ತೆ ಕಾಡಿಗೆ ಹೋಗುವ ಹಂಬಲ ಶುರುವಾಯಿತು. "ಅಕ್ಕ ಬಾಗಿಲು ತೆಗೆ, ನಾನು ಬೇಟೆಗೆ ಹೋಗುವೆ" ಎಂದು ಒಂದೇ ಸಮನೆ ತನ್ನ ಅಕ್ಕನ್ನು ಜಿಂಕೆ ತಮ್ಮ ಪೀಡಿಸಿದನು. ಅಕ್ಕ ಬಾಗಿಲು ತೆಗೆದಳು. "ಮುಸ್ಸಂಜೆಗೆ ಹಿಂದಿರುಗಿಬಿಡು, ನಾನು ಹೇಳಿಕೊಟ್ಟ ಮಾತನ್ನು ಹೇಳಲು ಮರೆಯಬೇಡ" ಎಂದು ಹೇಳಿ ಕಳುಹಿಸಿದಳು. ಆ ರಾಜ ಮತ್ತು ಅವನ ಇತರ ಬೇಟೆಗಾರರು ಜಿಂಕೆಯನ್ನು ಎರಡನೇ ದಿನವೂ ನೋಡಿದರು. ಅದರ ಕೊರಳಲ್ಲಿದ್ದ ಬಂಗಾರದ ಸರವನ್ನು ನೋಡಿದರು. ಅದರ ಚಲನವಲನಗಳನ್ನು ಗಮನಿಸಿ ಅದನ್ನು ಹಿಂಬಾಲಿಸಿದರು. ಜಿಂಕೆ ಅವರಿಗಿಂತ ಸೂಕ್ಷ್ಮವಾಗಿತ್ತು, ಅತೀ ವೇಗವಾಗಿ ಓಡಿ ಅವರಿಂದ ತಪ್ಪಿಸಿಕೊಳ್ಳುತ್ತಿತ್ತು. ಇಡೀ ಬೇಟೆಗಾರರ ಗುಂಪು ಅದರ ಹಿಂದೆ ಓಡಿತು. ಸಾಯಂಕಾಲದ ಹೊತ್ತಿಗೆ ಅವರಲ್ಲೊಬ್ಬ ಅದಕ್ಕೆ ಸಣ್ಣ ಗಾಯ ಮಾಡಿದನು. ಅದು ನಿಧಾನವಾಗಿ ಓಡಲಿ ಎನ್ನುವುದು ಅವನ ಹಂಚಿಕೆ ಆಗಿತ್ತು. ಹೀಗೆ ಒಬ್ಬ ಬೇಟೆಗಾರ ಅದನ್ನು ಹಿಂಬಾಲಿಸಿಕೊಂಡು ಜಿಂಕೆ ತಮ್ಮ ಮತ್ತು ಅವನ ಅಕ್ಕ ವಾಸವಾಗಿದ್ದ ಗುಡಿಸಲವರೆಗೆ ಹೋದನು. ಜಿಂಕೆ ಹೇಳುವುದನ್ನು ಕೇಳಿಸಿಕೊಂಡನು. "ಪ್ರೀತಿಯ ಅಕ್ಕ ಬಾಗಿಲು ತೆಗೆ ನಾನು ಬಂದಿರುವೆ" ಎಂದನು. ಜಿಂಕೆ ಒಳಗೆ ಹೋದ ತಕ್ಷಣ ಬಾಗಿಲು ಮುಚ್ಚಿತು. ಬೇಟೆಗಾರ ಇದೆಲ್ಲವನ್ನೂ ಗಮನಿಸಿದನು. ರಾಜನ ಹತ್ತಿರ ಹೋಗಿ ತಾನು ನೋಡಿದ್ದನ್ನು ಕೇಳಿದ್ದನ್ನು ಹೇಳಿದನು. "ನಾಳೆ ಮತ್ತೆ ಅದನ್ನು ಹಿಂಬಾಲಿಸುವೆ" ಎಂದೂ ಹೇಳಿದನು.

ಜಿಂಕೆ ತಮ್ಮ ಗಾಯಗೊಂಡು ಬಂದಿದ್ದನ್ನು ನೋಡಿ ಅಕ್ಕ ತುಂಬಾ ಹೆದರಿಕೊಂಡಳು. ಕಾಲುಗಳಿಗಾದ ಗಾಯವನ್ನು ತೊಳೆದು ಗಿಡಮೂಲಿಕೆ ಔಷಧಿ ಕಟ್ಟಿದಳು. "ಹೋಗಿ ನಿನ್ನ ಹಾಸಿಗೆ ಮೇಲೆ ಮಲಗು. ಗಾಯ ವಾಸಿ ಆಗುತ್ತೆ" ಎಂದಳು. ಸಣ್ಣ ಗಾಯವಾದ್ದರಿಂದ ಜಿಂಕೆಗೆ ಮಾರನೆ ದಿನ ನೋವು ಇರಲಿಲ್ಲ. ಅದಕ್ಕೆ ಮತ್ತೆ ಬೇಟೆಯ ಕೂಗುಗಳು ಕೇಳಿಸಿದವು. ಆಗಲೂ ಕೂಡ ತಾನು ಹೊರಗೆ ಹೋಗಬೇಕೆಂದು ಹಠಮಾಡಿತು. "ನನ್ನನ್ನು ತಡೆಯಬೇಡ, ನಾನು ಕಾಡಿನಲ್ಲಿರಬೇಕು. ನನ್ನನ್ನು ಯಾರೂ ಅಷ್ಟು ಸುಲಭವಾಗಿ ಹಿಡಿಯಲಾರರು" ಎಂದು ಹೇಳಿತು. "ಅವರು ನಿನ್ನನ್ನು ಕೊಂದುಬಿಡಬಹುದು. ಆಗ ನನ್ನ ಗತಿ ಏನು? ನಾನು ಈ ಕಾಡಿನಲ್ಲಿ ಒಂಟಿಯಾಗಿರಬೇಕಾಗುತ್ತದೆ. ಇಡೀ ಪ್ರಪಂಚದಲ್ಲಿ ನಿನ್ನನ್ನು ಬಿಟ್ಟರೆ ನನಗೆ ಯಾರೂ ಇಲ್ಲ. ನೀನು ಹೋಗಲು ನಾನು ಬಿಡುವುದಿಲ್ಲ" ಎಂದು ಹೇಳುತ್ತಾ ಅಕ್ಕ ಅಳಹತ್ತಿದಳು.

"ನೀನು ಕಳಿಸದಿದ್ದರೆ ನಾನು ಬೇಸರದಿಂದ ಇಲ್ಲೇ ಸಾಯುತ್ತೇನೆ. ಕಹಳೆಯ ಧ್ವನಿ ನನ್ನ ಕಿವಿಗೆ ಬಿದ್ದ ಕೂಡಲೆ ನಾನೂ ಓಡಿಹೋಗಬೇಕೆಂಬ ಆಸೆ ನನ್ನಲ್ಲಿ ಹೆಚ್ಚಾಗುತ್ತದೆ" ಎಂದು ತನ್ನ ಪ್ರಾಣಿಯ ಸಹಜ ಸ್ವಭಾವವನ್ನು ಅಕ್ಕನಿಗೆ ವಿವರಿಸಿತು. ಇನ್ನು ಅವನನ್ನು ತಡೆಯುವುದು ಸಾಧ್ಯವಿಲ್ಲವೆಂದು ತಿಳಿದು ಅಕ್ಕ

ಭಾರವಾದ ಹೃದಯದಿಂದ ಬಾಗಿಲು ತೆಗೆದಳು. ಜಿಂಕೆ ಹಾರಿಕೊಂಡು ಸಂತೋಷದಿಂದ ಕಾಡಿನೊಳಗೆ ಮರೆಯಾಯಿತು. ಜಿಂಕೆಯನ್ನು ನೋಡಿದ ತಕ್ಷಣ ರಾಜ ತನ್ನ ಸಂಗಡಿಗರಿಗೆ "ಅದನ್ನು ಹಿಂಬಾಲಿಸಿಕೊಂಡು ಸಾಯಂಕಾಲದವರೆಗೆ ಕಾಯಿರಿ. ಅದಕ್ಕೆ ಯಾವ ರೀತಿಯ ನೋವು ಮಾಡಬೇಡಿ" ಎಂದು ಹೇಳಿದನು. ಸೂರ್ಯ ಮುಳುಗಿದ ಮೇಲೆ ರಾಜ ತನ್ನ ಸಂಗಡಿಗರಿಗೆ ಆ ಗುಡಿಸಲನ್ನು ತೋರಿಸಲು ಹೇಳಿದನು. ಅವರು ಗುಡಿಸಲ ಹತ್ತಿರ ಬಂದರು. ರಾಜ ಬಾಗಿಲು ಬಡಿದು ಜಿಂಕೆ ಹೇಳಿದ ಹಾಗೆ ಹೇಳಿದನು. "ನಾನು ಒಳಗೆ ಬರಲೇ ಅಕ್ಕ" ಎಂದನು. ಬಾಗಿಲು ತೆಗೆಯಿತು. ರಾಜ ಒಳಗೆ ಹೋದನು. ತಾನು ಹಿಂದೆಂದೂ ನೋಡಿರದ ಸುಂದರ ಹುಡುಗಿಯನ್ನು ನೋಡಿದನು. ಜಿಂಕೆಯ ಬದಲಾಗಿ ಬಂಗಾರದ ಕಿರೀಟ ಧರಿಸಿದ ರಾಜನನ್ನು ನೋಡಿ ಹೆದರಿಕೊಂಡಳು. ಆದರೆ ರಾಜ ಅವಳ ಕಡೆ ಸ್ನೇಹದಿಂದ ನೋಡಿದನು. ಅವಳ ಹತ್ತಿರ ಹೋಗಿ, ಕೈ ಹಿಡಿದುಕೊಂಡು "ನೀನು ನನ್ನ ಅರಮನೆಗೆ ಬಂದು ನನ್ನ ಪ್ರೀತಿಯ ಹೆಂಡತಿ ಆಗುವೆಯಾ?" ಎಂದು ಕೇಳಿದನು. "ಓಹೋ! ಹಾಗೇ ಆಗಲಿ, ಆದರೆ ಜಿಂಕೆಯೂ ನನ್ನ ಜೊತೆ ಬರಬೇಕು. ಅದನ್ನು ಬಿಟ್ಟಿರಲಾರೆ" ಎಂದು ಆ ಹುಡುಗಿ ತನ್ನ ಒಪ್ಪಿಗೆ ಕೊಟ್ಟಳು. "ಅವನು ನೀನು ಬದುಕಿರುವವರೆಗೂ ನಿನ್ನ ಜೊತೆಯಲ್ಲಿ ಇರಲಿ. ನನಗೆ ಇನ್ನೇನೂ ಬೇಡ. ನೀನು ನನ್ನ ಜೊತೆ ಬಾ" ಎಂದು ರಾಜ ಹೇಳಿದನು. ಅಕ್ಕ ತನ್ನ ಜಿಂಕೆ ತಮ್ಮನಿಗೆ ಕೊರಳಪಟ್ಟಿ ಹಾಕಿ, ಕೈಯಲ್ಲಿ ಹಿಡಿದುಕೊಂಡು ತನ್ನ ಜೊತೆಗೆ ಕರೆದುಕೊಂಡು ಹೋದಳು.

ರಾಜ ಆ ಸುಂದರ ಹುಡುಗಿಯನ್ನು ತನ್ನ ಕುದುರೆ ಮೇಲೆ ಕೂರಿಸಿಕೊಂಡು ಅರಮನೆಗೆ ಪ್ರಯಾಣ ಮಾಡಿದನು. ಅಲ್ಲಿ ಅತಿ ವೈಭವದಿಂದ ಅವಳನ್ನು ಮದುವೆ ಆದನು. ಅವಳು ರಾಣಿ ಆದಳು. ಅವರಿಬ್ಬರೂ ಪ್ರೀತಿಯಿಂದ ಸಂತೋಷದಿಂದ ಇದ್ದರು. ಜಿಂಕೆಗೂ ಪ್ರೀತಿಯ ಜಾಗ ಸಿಕ್ಕಂತಾಯಿತು. ಅದು ಅರಮನೆಯ ತೋಟದಲ್ಲಿ ಆಟ ಆಡುತ್ತ ಸಂತೋಷವಾಗಿ ಇತ್ತು. ಅವರು ಅನುಭವಿಸಿದ ಕಷ್ಟಗಳಿಗೆ ಅವರ ಮಲತಾಯಿಯೇ ಕಾರಣವಾಗಿದ್ದಳು. ಅವಳು ತನ್ನ ಮಲಮಕ್ಕಳು ಸತ್ತುಹೋಗಿರಬಹುದೆಂದು ನಂಬಿದ್ದಳು. ಕಾಡು ಮೃಗಗಳ ಕೈಯಲ್ಲಿ ಸಿಕ್ಕು ಅಕ್ಕ ಚಿಂದಿ ಚಿಂದಿ ಆಗಿರಬೇಕು. ಜಿಂಕೆ ತಮ್ಮ ಬೇಟೆಗಾರರಿಗೆ ಬಲಿಯಾಗಿರಬೇಕೆಂದು ನಂಬಿದ್ದಳು. ಆದರೆ ಅವಳ ನಂಬಿಕೆ ಸುಳ್ಳಾಗಿತ್ತು. ತನ್ನ ಮಲಮಕ್ಕಳು ಇನ್ನೂ ಹೆಚ್ಚು ಸಂತೋಷವಾಗಿದ್ದಾರೆ ಎನ್ನುವ ವಿಷಯ ಅವಳಿಗೆ ತಿಳಿಯಿತು. ಮತ್ತೆ ಅವಳ ಹೃದಯ ಅಸೂಯೆ ಮತ್ತು ಮತ್ಸರದಿಂದ ಕುದಿಯಿತು. ಅವಳ ಮನಸ್ಸಿಗೆ ಶಾಂತಿ ಇಲ್ಲದಾಯಿತು. ಹೇಗಾದರೂ ಅವರಿಗೆ ಮತ್ತೆ ಕೆಟ್ಟದ್ದು ಮಾಡಬೇಕೆಂದು ಯೋಚಿಸತೊಡಗಿದಳು.

ಅವಳಿಗೆ ಒಬ್ಬ ಕುರೂಪಿ ಮಗಳಿದ್ದಳು. ಅವಳ ಬಣ್ಣ ಕತ್ತಲಿನಷ್ಟು ಕಪ್ಪಗಿತ್ತು. ಅವಳಿಗೆ ಒಂದೇ ಕಣ್ಣು ಇತ್ತು. ಅದಕ್ಕಾಗಿ ಅವಳು ಯಾವಾಗಲೂ ದುಃಖಿಸುತ್ತಿದ್ದಳು. "ರಾಣಿಯಾಗುವ ಅದೃಷ್ಟ ತನಗೆ ಬರಲೇ ಇಲ್ಲ" ಎಂದು ತನ್ನ ತಾಯಿಯ ಹತ್ತಿರ ಹೇಳುತ್ತಿದ್ದಳು. "ಅಯ್ಯೋ ಸುಮ್ಮನಿರು, ಇರುವುದರಲ್ಲಿಯೇ ತೃಪ್ತಿಪಡು. ಸಮಯ ಬಂದಾಗ ನಾನೂ ಒಂದು ಕೈ ನೋಡುತ್ತೇನೆ" ಎಂದು ಅವಳ ತಾಯಿ ಸಮಾಧಾನ ಮಾಡಿದಳು. ಆ ಸಮಯ ಬಹಳ ಬೇಗನೆ ಬಂದಿತು.

ರಾಜ ಮತ್ತೆ ಬೇಟೆಗಾಗಿ ಕಾಡಿಗೆ ಹೋದನು. ಅದೇ ಸಮಯದಲ್ಲಿ ರಾಣಿ ಗಂಡುಮಗುವನ್ನು ಹೆತ್ತಳು. ಆಗ ರಾಣಿಯ ಮಲತಾಯಿ, ಮುದಿ ಮಾಟಗಾತಿ, ಸೇವಕಿಯಾಗಿ ಅರಮನೆಯಲ್ಲಿ ಕೆಲಸಕ್ಕೆ ಸೇರಿದಳು.

ರಾಣಿ ಮಲಗಿದ್ದಾಗ ಹತ್ತಿರ ಹೋಗಿ "ಸ್ನಾನಕ್ಕೆ ನೀರು ಸಿದ್ಧವಾಗಿದೆ. ಸ್ನಾನದಿಂದ ನಿನಗೆ ಹೊಸ ಚೈತನ್ಯ ಹುರುಪು ಬರುತ್ತದೆ. ನೀರು ತಣ್ಣಗಾಗುವ ಮೊದಲು ಸ್ನಾನ ಮಾಡು ಎಂದು ಆ ಮಲತಾಯಿ ಹೇಳಿದಳು. ಆಕೆ ಮತ್ತು ಆಕೆಯ ಮಗಳು ಇಬ್ಬರೂ ಸೇರಿ ರಾಣಿಯನ್ನು ಎರಡೂ ಕಡೆ ಹಿಡಿದುಕೊಂಡು ಸ್ನಾನದ ಮನೆಗೆ ಕರೆದುಕೊಂಡು ಹೋದರು. ಅದಕ್ಕಿಂತ ಮೊದಲು ಒಲೆಯಲ್ಲಿ ಹೆಚ್ಚು ಹೊಗೆ ಬರುವಂತೆ ಮಾಡಿದ್ದರು. ಅವಳನ್ನು ಒಳಗೆ ಬಿಟ್ಟು ಹೊರಗೆ ಬಂದು ಬಾಗಿಲು ಹಾಕಿಕೊಂಡರು. ಹೊಗೆಯಿಂದ ರಾಣಿ ಉಸಿರು ಕಟ್ಟಿ ಸಾಯಲಿ ಎನ್ನುವುದು ಅವರ ಯೋಚನೆ ಆಗಿತ್ತು.

ಈ ಕಡೆ, ಆ ಮಾಟಗಾತಿ ಮುದುಕಿ, ತನ್ನ ಮಗಳ ತಲೆಗೆ ಟೋಪಿ ಕಟ್ಟಿ ರಾಣಿಯ ಹಾಸಿಗೆಯ ಮೇಲೆ ಮಲಗಿಸಿದಳು. ರಾಣಿಯಂತೆ ಕಾಣುವ ಹಾಗೆ ಸಿಂಗರಿಸಿದಳು. ಆದರೆ ಅವಳಿಗೆ ಇನ್ನೊಂದು ಕಣ್ಣನ್ನು ಕೊಡಲು ಸಾಧ್ಯವಿರಲಿಲ್ಲ. ರಾಜನಿಗೆ ಗೊತ್ತಾಗದಿರಲೆಂದು ಮಗ್ಗಲಾಗಿ ಮಲಗಿಸಿದಳು. ರಾಜ ಸಾಯಂಕಾಲಕ್ಕೆ ಅರಮನೆಗೆ ಬಂದನು. ತನಗೆ ಮಗ ಹುಟ್ಟಿದ ವಿಷಯ ತಿಳಿದು ತುಂಬಾ ಸಂತೋಷಪಟ್ಟನು. ತನ್ನ ಹೆಂಡತಿ ರಾಣಿಯನ್ನು ವಿಚಾರಿಸಬೇಕೆಂದು ರಾಣಿಯ ಹಾಸಿಗೆಯ ಪಕ್ಕ ಹೋದನು. ಆಗ ಆ ಮಾಟಗಾತಿ ಮುದುಕಿ ಅವಸರದಿಂದ ಬಂದು, "ನಿಮಗೆ ಒಳ್ಳೆಯದಾಗಲಿ, ಪರದೆಗಳನ್ನು ಸರಿಸಬೇಡಿ. ರಾಣಿಗೆ ಬಿಸಿಲು ಬಡಿಯಬಾರದು. ಸುಮ್ಮನೆ ಮಲಗಿರಲಿ" ಎಂದು ರಾಜನಿಗೆ ಹೇಳಿದಳು. ರಾಜನಿಗೆ ರಾಣಿಯ ಹಾಸಿಗೆಯ ಮೇಲೆ ಬೇರೆಯವಳು ಮಲಗಿದ್ದಾಳೆ ಎಂದು ತಿಳಿಯಲೇ ಇಲ್ಲ. ಸುಮ್ಮನೆ ಹೊರಟು ಹೋದನು.

ಮಧ್ಯರಾತ್ರಿಯಲ್ಲಿ ಎಲ್ಲರೂ ಗಾಢನಿದ್ರೆಯಲ್ಲಿದ್ದರು. ಮಗುವನ್ನು ನೋಡಿಕೊಳ್ಳುವ ದಾದಿ ತೂಕಡಿಸುತ್ತ ಕಾಯುತ್ತಿದ್ದಳು. ಆಗ ಬಾಗಿಲು ತೆಗೆದುಕೊಂಡು ನಿಜವಾದ ರಾಣಿ ಒಳಗೆ ಬಂದಳು. ತನ್ನ ಮಗುವನ್ನು ತೋಳುಗಳಲ್ಲಿ ಎತ್ತಿಕೊಂಡು ಮುದ್ದಾಡಿದಳು. ನಂತರ ದಿಂಬು ಕೊಡವಿ ಮತ್ತೆ ತೊಟ್ಟಿಲಲ್ಲಿ ಮಲಗಿಸಿದಳು. ಬೆಚ್ಚಗಿರುವ ಹೊದಿಕೆ ಹೊದಿಸಿದಳು. ಅವಳು ಜಿಂಕೆಯನ್ನು ಮರೆಯಲಿಲ್ಲ. ಅದು ಮಲಗಿದ್ದಲ್ಲಿ ಹೋಗಿ, ಬೆನ್ನು ಸವರಿ ಪ್ರೀತಿ ತೋರಿಸಿದಳು. ನಂತರ ಸುಮ್ಮನೆ ಹೊರಗೆ ಹೊರಟುಹೋದಳು. ಮಾರನೇ ದಿನ ದಾದಿ "ಮಧ್ಯರಾತ್ರಿಯಲ್ಲಿ ಯಾರಾದರೂ ಒಳಗೆ ಬಂದು ಹೋದರೆ?" ಎಂದು ಕಾವಲುಗಾರರನ್ನು ವಿಚಾರಿಸಿದಳು. "ನಾವು ಯಾರನ್ನೂ ನೋಡಲಿಲ್ಲ" ಎಂದು ಕಾವಲುಗಾರರು ಉತ್ತರಿಸಿದರು. ಆ ನಂತರವೂ ರಾಣಿ ಅನೇಕ ಮಧ್ಯರಾತ್ರಿಗಳು ನಿರಂತರವಾಗಿ ಬಂದಳು. ಒಂದು ಮಾತೂ ಆಡುತ್ತಿರಲಿಲ್ಲ. ದಾದಿ ಮಾತ್ರ ದಿನವೂ ರಾಣಿಯನ್ನು ನೋಡುತ್ತಿದ್ದಳು. ಆದರೆ ಆ ವಿಷಯವನ್ನು ಬೇರೆ ಯಾರಿಗೂ ಹೇಳಲು ಅವಳಿಗೆ ಆಗಲಿಲ್ಲ. ಏಕೆಂದರೆ ಅವಳಿಗೆ ಅದು ಕನಸೋ ನಿಜವೊ ಎಂಬ ಅಪನಂಬಿಕೆ ಇತ್ತು.

ಅನೇಕ ದಿನಗಳು ಕಳೆದವು. ಒಂದು ದಿನ ರಾತ್ರಿ ರಾಣಿ ಮಾತನಾಡಿದಳು. "ನನ್ನ ಮಗು ಸರಿಯಾಗಿ ಊಟ ಮಾಡುತ್ತಿದೆಯಾ? ನನ್ನ ಜಿಂಕೆ ಊಟ ಮಾಡುತ್ತಿದೆಯಾ? ನಾನು ಇನ್ನು ಎರಡು ದಿನ ಮಾತ್ರ ಬರುವೆ. ಮುಂದೆ ಇನ್ನೆಂದೂ ಬರುವುದಿಲ್ಲ" ಎಂದು ಹೇಳಿದಳು. ಅದಕ್ಕೆ ದಾದಿ ಉತ್ತರವನ್ನು ಕೊಡಲಿಲ್ಲ. ರಾಣಿ ಹೋದ ಮೇಲೆ, ದಾದಿ ರಾಜನ ಹತ್ತಿರ ಹೋಗಿ ತಾನು ನೋಡಿದ್ದನ್ನು, ಕೇಳಿದ್ದನ್ನು ಹೇಳಿದಳು. ರಾಜನಿಗೆ ಆಶ್ಚರ್ಯವಾಯಿತು. "ಅಯ್ಯೋ ! ದೇವರೆ ಇದರ ಅರ್ಥವೇನು? ನಾಳೆ ರಾತ್ರಿ ಮಗುವನ್ನು ನಾನೇ ಕಾಯುತ್ತೇನೆ" ಎಂದು ರಾಜ ಹೇಳಿದನು.

ಮಧ್ಯರಾತ್ರಿಯ ವೇಳೆಗೆ ರಾಣಿ ಕಾಣಿಸಿಕೊಂಡಳು. "ನನ್ನ ಮಗು ಹೇಗೆ ಊಟ ಮಾಡುತ್ತಿದೆ? ನನ್ನ ಜಿಂಕೆ ಹೇಗೆ ಊಟ ಮಾಡುತ್ತಿದೆ? ಇನ್ನೊಂದು ಸಾರಿ ಬರುತ್ತೇನೆ. ಆ ನಂತರ ಇನ್ನೊಮ್ಮೆ ಬರಲಾರೆ" ಎಂದು ರಾಣಿ ಮಾತನಾಡಿದಳು. ರಾಜ ಹೆದರಿಕೊಂಡು ಮಾತನಾಡಲಿಲ್ಲ. ಆದರೆ ಮಾರನೇ ದಿನವೂ ತಾನೇ ಕಾವಲು ಕಾದನು. ಆ ರಾತ್ರಿ ರಾಣಿ "ನನ್ನ ಮಗು ಹೇಗೆ ಊಟ ಮಾಡುತ್ತಿದೆ? ನನ್ನ ಜಿಂಕೆ ಹೇಗೆ ಊಟಮಾಡುತ್ತಿದೆ? ಇದೇ ನನ್ನ ಕೊನೆಯ ಆಗಮನ. ಮುಂದೆ, ಎಂದೂ ಬರಲಾರೆ" ಎಂದು ಹೇಳಿದಳು.

ಅವಳ ಮಾತುಗಳನ್ನು ಕೇಳಿಸಿಕೊಂಡ ರಾಜ ಅವಳ ಹತ್ತಿರ ಹಾರಿಕೊಂಡು ಹೋಗಿ "ನೀನು ನನ್ನ ಪ್ರೀತಿಯ ಹೆಂಡತಿ" ಎಂದನು. ಅದಕ್ಕೆ ಅವಳು, "ಹೌದು, ನಾನೇ ನಿನ್ನ ಪ್ರೀತಿಯ ಹೆಂಡತಿ" ಎಂದಳು. ಅದೇ ವೇಳೆಗೆ ದೇವರ ಅನುಗ್ರಹದಿಂದ ಅವಳಿಗೆ ಜೀವ ಬಂದಿತು. ಅವಳು ಮೊದಲಿನಷ್ಟೆ ಸುಂದರವಾಗಿ, ಆಕರ್ಷಕವಾಗಿ ಆದಳು. ನಂತರ ತನ್ನ ಮಲತಾಯಿ ಒಬ್ಬ ಮಾಟಗಾತಿ ಆಗಿರುವಳೆಂದೂ ಅವಳು ಮತ್ತು ಅವಳ ಮಗಳು ಸೇರಿ ಹೀಗೆ ಮೋಸ ಮಾಡಿದರು ಎಂದು ವಿವರಿಸಿದಳು. ಅಲ್ಲದೆ ತನ್ನ ತಮ್ಮನ ಜಿಂಕೆಯ ರೂಪಕ್ಕೆ ಅವಳ ಮಾಟಮಂತ್ರವೇ ಕಾರಣವೆಂದು ಹೇಳಿದಳು. ಆಗ ರಾಜ ಅವರಿಬ್ಬರನ್ನೂ ಕರೆಸಿ ವಿಚಾರಣೆಗೆ ಒಳಪಡಿಸಿದನು. ಮಲತಾಯಿಯ ಮಗಳನ್ನು ಕಾಡಿಗೆ ಕಳಿಸಿದರು. ಅಲ್ಲಿ, ಅವಳು ಕಾಡುಮೃಗಗಳಿಗೆ ಬಲಿ ಆದಳು. ಮಲತಾಯಿ, ಮಾಟಗಾತಿಯನ್ನು ಬೆಂಕಿಯಲ್ಲಿ ಹಾಕಿ ಸುಟ್ಟರು. ಅವಳು ಸುಟ್ಟು ಬೂದಿ ಆದ ಮೇಲೆ ಅವಳ ಮಾಟ ಮಂತ್ರದ ಶಕ್ತಿಯೂ ಅವಳ ಜೊತೆಯೇ ಹೋಯಿತು. ರಾಣಿಯ ಜಿಂಕೆ ತಮ್ಮನಿಗೆ ಪುನಃ ಮಾನವ ರೂಪ ಬಂದಿತು. ಅಕ್ಕ, ತಮ್ಮ, ರಾಜ ಮತ್ತು ಅವನ ಮಗ ಬಹಳ ವರ್ಷ ಪ್ರೀತಿಯಿಂದ ಸುಖವಾಗಿ ಬಾಳಿದರು.

೩. ಗೂಗೆ



ಇನ್ನೂರು ವರ್ಷಗಳ ಹಿಂದೆ ಜನ ಈಗಿನಷ್ಟು ಬುದ್ಧಿವಂತರಾಗಿರಲಿಲ್ಲ. ಅವರಿಗೆ ಯಾವ ಚತುರತೆಯಾಗಲಿ, ಕುಶಲತೆಯಾಗಲಿ ತಿಳಿದಿರಲಿಲ್ಲ. ಆ ಕಾಲದಲ್ಲಿ ಒಂದು ವಿಚಿತ್ರ ಘಟನೆ ನಡೆಯಿತು. ಏನು ಅಂದರೆ, ಗೂ... ಗುಕ್ ಎಂದು ಕಿರುಚುವ ಒಂದು ದೊಡ್ಡ ಗೂಗೆ ಆಕಸ್ಮಿಕವಾಗಿ ತಪ್ಪಿಸಿಕೊಂಡು

ಒಂದು ಪಟ್ಟಣಕ್ಕೆ ಬಂದಿತು. ಅದು ಆ ಪಟ್ಟಣದ ಜನರ ದಾಸ್ತಾನುಮಳಿಗೆಯಲ್ಲಿ ಬಿಡಾರ ಹೂಡಿತು. ಅದು ರಾತ್ರಿ ವೇಳೆಯಲ್ಲಿ ಕೂಡ ಹೊರಗೆ ಬರಲು ಹೆದರುತ್ತಿತ್ತು. ಉಳಿದ ಪಕ್ಷಿಗಳು ತನ್ನನ್ನು ನೋಡಿ ತೊಂದರೆ ಮಾಡಲು ಬಂದಿವೆ ಎಂದು ತಿಳಿದುಕೊಂಡು ತನ್ನ ವಿರುದ್ಧ ಜೋರಾಗಿ ಕಿರುಚತೊಡಗಿದರೆ ಅನ್ನುವ ಭಯ ಗೂಗೆಗೆ ಇತ್ತು. ಒಂದು ದಿನ ಕುದುರೆ ಲಾಯದ ಹುಡುಗ ಹುಲ್ಲು ತರಲು ಆ ಮಳಿಗೆಗೆ ಹೋದನು. ಗೂಗೆಯನ್ನು ನೋಡಿದವನೇ ಹೆದರಿಕೊಂಡು ಓಡಿಹೋದನು. ತನ್ನ ಯಜಮಾನನ ಬಳಿ ಹೋಗಿ ತಾನೊಂದು ವಿಚಿತ್ರ ರಾಕ್ಷಸನನ್ನು ನೋಡಿದೆನೆಂದೂ, ಅದು ಆ ಮಳಿಗೆಯ ಮೂಲೆಯಲ್ಲಿ ಕುಳಿತುಕೊಂಡಿದೆ, ಎಂದೂ ಹೇಳಿದನು. ಅದರ ಕಣ್ಣುಗಳು ನೋಡಿದ್ದನ್ನೆಲ್ಲ ನುಂಗುವ ಹಾಗೆ ಕಾಣಿಸುತ್ತವೆ ಎಂದು ಹೇಳಿದನು. ತನ್ನ ಜೀವಮಾನದಲ್ಲಿ ಅಂತಹ ವಿಚಿತ್ರ ಪ್ರಾಣಿಯನ್ನು ನೋಡೇ ಇಲ್ಲವೆಂದು ಹೇಳಿದನು. ಅದಕ್ಕೆ ಆ ಹುಡುಗನ ಯಜಮಾನ "ನೀನು ಎಷ್ಟು ಧೈರ್ಯವಂತ ಅಂತ ನನಗೆ ಗೊತ್ತು ಬಿಡು ಎಲ್ಲಿಯಾದರೂ ಸತ್ತ ಕೋಳಿ ನೋಡಿದರೆ ಅದರ ಹತ್ತಿರ ಹೋಗಲಿಕ್ಕೆ ನಿನ್ನ ಕೈಯಲ್ಲಿ ಒಂದು ಕೋಲು ಇರಬೇಕು. ನಾನೇ ಹೋಗಿ ನೋಡುತ್ತೇನೆ. ನೀನು ನೋಡಿದ ರಾಕ್ಷಸ ಎಂಥದು ಎಂದು ತಿಳಿಯುತ್ತದೆ" ಎಂದು ಹೇಳಿದನು.

ಹಾಗೆ ಹೇಳುತ್ತಾ, ಯಜಮಾನ ಧೈರ್ಯವಾಗಿ ಎದೆಸೆಟೆಸಿಕೊಂಡು ಮಳಿಗೆಯೊಳಗೆ ಹೋಗಿ ಇಣುಕಿದನು. ಆ ವಿಚಿತ್ರವಾದ ಮತ್ತು ಕುರೂಪವಾದ ಗೂಬೆಯನ್ನು ನೋಡಿದವನೆ ತುಂಬಾ ಹೆದರಿಕೊಂಡನು. ಅವನೂ ಕೂಡ ತನ್ನ ಸೇವಕನಂತೆ ಒಂದೇ ಸಮನೆ ಓಡಿದನು. ತನ್ನ ನೆರೆಯವನ ಹತ್ತಿರ ಹೋಗಿ ಆ ಪ್ರಾಣಿಯನ್ನು ಓಡಿಸಲು ತನಗೆ ಸಹಾಯಮಾಡಬೇಕೆಂದು ಕಣ್ಣೀರು ಹಾಕುತ್ತಾ ಬೇಡಿಕೊಂಡನು. ಅದು ಅವಿತುಕೊಂಡ ಜಾಗದಿಂದ ತಪ್ಪಿಸಿಕೊಳ್ಳುವ ಮೊದಲು ಅದನ್ನು ಸಾಯಿಸದಿದ್ದರೆ ಇಡೀ ಊರೇ ಹೆದರಿಕೊಳ್ಳುತ್ತದೆ ಎಂದು ಹೇಳಿದನು. ಕೂಡಲೇ ರಸ್ತೆಗಳಲ್ಲಿ ಗಲಾಟೆ, ಕಿರುಚಾಟ ಶುರು ಆಯಿತು. ಪಟ್ಟಣದ ಜನರೆಲ್ಲ ಗುದ್ದಲಿ, ಸಲಾಕೆ, ಪಿಕಾಸಿ, ಸುತ್ತಿಗೆ ಮತ್ತು ಕಲ್ಲುಗಳ ಸಮೇತ ಶತ್ರುಗಳ ವಿರುದ್ಧ ಯುದ್ಧಕ್ಕೆ ಹೊರಟವರಂತೆ ಸಿದ್ಧರಾದರು. ಕೊನೆಗೆ ಆ ಊರಿನ ಮೇಯರ್ ಕೂಡ ತನ್ನ ಸಲಹೆಗಾರರ ಜೊತೆ ಬಂದನು. ಅವರೆಲ್ಲರೂ ಸಂತೆ ಮೈದಾನದಲ್ಲಿ ಸೇರಿದರು. ಎಲ್ಲರು ಗೂಬೆ ಇದ್ದ ಮಳಿಗೆಯ ಕಡೆ ಹೆಜ್ಜೆ ಹಾಕಿದರು. ಮಳಿಗೆಯನ್ನು ಎಲ್ಲ ಕಡೆಯಿಂದಲೂ ಸುತ್ತುವರೆದರು. ಆಗ ಒಬ್ಬ ಧೈರ್ಯಸ್ಥ ಮುಂದೆ ಬಂದನು. ಒಂದು ದೊಡ್ಡ ಕೋಲನ್ನು ಹಿಡಿದುಕೊಂಡು .ಮಳಿಗೆಯೊಳಗೆ ಹೋದನು. ಆದರೆ ಅವನೂ ಕೂಡ ಕಿರುಚುತ್ತಾ ಓಡಿ ಬಂದನು. ಅವನ ಮುಖ ಕಳಾಹೀನವಾಗಿ ಸತ್ತವನಂತೆ ಬಿಳುಚಿಕೊಂಡಿತ್ತು. ಅವನ ಬಾಯಲ್ಲಿ ಮಾತು ಹೊರಡಲಿಲ್ಲ. ಸುಮ್ಮನೆ ಓಡಿಹೋದನು. ಇನ್ನಿಬ್ಬರು ಪ್ರಯತ್ನಿಸಿದರು. ಅವರಿಗೂ ಜಯ ಸಿಗಲಿಲ್ಲ. ಕೊನೆಗೆ ಒಬ್ಬ ಬಲಶಾಲಿ ತನ್ನ ಧೈರ್ಯ ಸಾಹಸಗಳಿಗೆ ಹೆಸರಾದವನು ಮುಂದೆ ಬಂದನು. "ಏರೀ ಆ ರಾಕ್ಷಸನ ಕಡೆ ನೋಡುತ್ತಾ ಇದ್ದರೆ ಅದನ್ನು ಎಂದೂ ಓಡಿಸಲು ಆಗುವುದಿಲ್ಲ. ಯಾವುದಾದರೂ ತೀರ್ಮಾನ ಮಾಡಬೇಕು. ನೀವೆಲ್ಲರೂ ಹೆದರಿಕೊಂಡ ಮುದುಕಿ ಹಾಗೆ ನಾಟಕ ಆಡುತ್ತಾ ಇದ್ದೀರಿ ಅಂತ ನನಗೆ ಕಾಣುತ್ತದೆ. ನಿಮ್ಮಲ್ಲಿ ಯಾರೂ ಧೈರ್ಯದಿಂದ ಶತ್ರುವನ್ನು ಎದುರಿಸುತ್ತಿಲ್ಲ" ಎಂದು ಅಣಕಿಸಿದನು. ಹಾಗೆ ಹೇಳುತ್ತಾ ತನ್ನ ಕತ್ತಿ, ಗುರಾಣಿ ಮತ್ತು ಕವಚಗಳನ್ನು ತರಿಸಿಕೊಂಡನು. ಎಲ್ಲರ ಎದುರಿಗೆ ಅವುಗಳನ್ನು


ಹಾಕಿಕೊಂಡನು. ಆ ದೊಡ್ಡ ಗೂಬೆಯನ್ನು ಎದುರಿಸಲು ಸಿದ್ಧನಾದನು. ಉಳಿದವರು ಅವನ ಧೈರ್ಯವನ್ನು ಹೊಗಳಿದರು. ಆದರೂ, ಅವನು ಎಲ್ಲಿ ಜೀವ ಕಳೆದುಕೊಳ್ಳುವನೋ ಎಂದು ಅವರಿಗೆ ಒಳಗೊಳಗೇ ಅಳುಕಿತ್ತು. ಮಳಿಗೆಯ ಎರಡು ಬಾಗಿಲುಗಳನ್ನು ಜೋರಾಗಿ ತೆಗೆದರು. ಆ ಯೋಧ ಗೂಬೆಯನ್ನು ನೋಡಿದನು. ಮಳಿಗೆಯ ಮಧ್ಯೆ ಇದ್ದ ಕಬ್ಬಿಣದ ಸಲಾಕೆಯನ್ನು ಹಿಡಿದುಕೊಂಡು ಅದು ಕೂತಿತ್ತು. ಅವನು ಒಂದು ಏಣಿಯನ್ನು ತರಿಸಿದನು. ಅವನು ಹತ್ತಲು ಸರಿಹೊಂದುವಂತೆ ಏಣಿಯನ್ನು ಒರಗಿಸಿ ಇಡಲಾಯಿತು. ಎಲ್ಲರೂ ಧೈರ್ಯದಿಂದ ಮುನ್ನುಗ್ಗುವಂತೆ ಕೂಗಿದರು.

ಎಲ್ಲರೂ ನನ್ನ ಪರವಾಗಿ ದೇವರನ್ನು ಪ್ರಾರ್ಥಿಸಿ ಎಂದು ಹೇಳುತ್ತಾ ಅವನು ಏಣಿಯನ್ನು ಹತ್ತಿದನು. ಅವನು ತನ್ನ ಕಡೆಯೇ ಬರುತ್ತಿದ್ದಾನೆ ಎಂದು ಗೂಬೆ ಗ್ರಹಿಸಿತು. ಅಲ್ಲದೆ ಹೊರಗಡೆಯಿಂದ ಕೇಳಿಸುತ್ತಿದ್ದ ಜನರ ಕೂಗಾಟಗಳಿಂದ ಅದಕ್ಕೆ ತುಂಬಾ ಹೆದರಿಕೆ ಆಯಿತು. ಅದು ಹಾರಿಹೋಗದಂತೆ ಜನರೇ ಅದಕ್ಕೆ ಅಡ್ಡಿ ಆಗಿದ್ದರು. ಅದು ತನ್ನ ಕಣ್ಣುಗಳನ್ನು ಅರಳಿಸಿ ನೋಡಿತು. ರೆಕ್ಕೆಗಳನ್ನು ಪಟಪಟನೆ ಬಡಿಯಿತು. ಕೊಕ್ಕನ್ನು ತಿಕ್ಕಿಕೊಂಡಿತು. ಜೋರಾಗಿ ಕಿರುಚಿಕೊಂಡಿತು. "ಅದರ ಮೇಲೆ ನುಗ್ಗು , ಮುತ್ತಿಗೆ ಹಾಕು" ಎಂದು ಕೆಳಗಿದ್ದ ಜನ ಏಣಿಯ ಮೇಲಿದ್ದ ಮನುಷ್ಯನಿಗೆ ಕೂಗಿ ಹೇಳಿದರು. "ನಾನು ನಿಂತಿರುವ ಜಾಗದಲ್ಲಿ ನೀವು ಇದ್ದಿದ್ದರೆ, ಅಷ್ಟು ಜೋರಾಗಿ ಕೂಗುವುದು ತಿಳಿಯುತ್ತಿತ್ತು" ಎಂದು ಆ ಧೈರ್ಯಸ್ಥ ಹೇಳಿದನು. ನಂತರ ಏಣಿಯ ಇನ್ನೊಂದು ಮೆಟ್ಟಿಲನ್ನು ಏರಿದನು. ಕೊನಗೆ ಅರ್ಧ ಮೂರ್ಛೆ ಹೋದವನಂತೆ ಕೆಳಗೆ ಇಳಿಯತೊಡಗಿದನು. ಅವನಿಗೆ ನಡುಕ ಹುಟ್ಟಿತು.

ಆ ಅಪಾಯದ ಸ್ಥಿತಿಯನ್ನು ಎದುರಿಸುವವರು ಯಾರೂ ಉಳಿಯಲಿಲ್ಲ. "ಆ ರಾಕ್ಷಸ, ನಮ್ಮಲ್ಲಿ ಅತಿ ಬಲವಾದವನಿಗೆ ಜೀವ ಹೋಗುವ ಹಾಗೆ ಕಚ್ಚಿದೆ, ಅವನು ಕಷ್ಟದಿಂದ ಉಸಿರಾಡುತ್ತಿದ್ದಾನೆ" ಎಂದು ಜನ ಕೂಗುತ್ತಿದ್ದರು. "ನಾವು ಯಾಕೆ ಇಲ್ಲದ ಸಾಹಸ ಮಾಡಿ ಪ್ರಾಣ ಕೊಡಬೇಕು" ಎಂದು ಹೇಳಿಕೊಳ್ಳುತ್ತಿದ್ದರು. ಇಡೀ ಪಟ್ಟಣಕ್ಕೆ ಒದಗಿರುವ ಈ ದುರಂತವನ್ನು ಹೇಗೆ ತಡೆಗಟ್ಟಬಹುದು ಎಂದು ಒಬ್ಬರಿಗೊಬ್ಬರು ಮಾತನಾಡಿಕೊಳ್ಳತೊಡಗಿದರು. ಬಹಳ ಹೊತ್ತಿನ ತನಕ ಯಾವ ತೃಪ್ತಿಕರ ತೀರ್ಮಾನವೂ ಆಗಲಿಲ್ಲ. ಕೊನೆಗೆ ಮೇಯರನಿಗೆ ಒಂದು ಉಪಾಯ ಹೊಳೆಯಿತು. "ಈ ಮಳಿಗೆಯ ಸಮೇತ, ಒಳಗಿರುವ ಧಾನ್ಯ, ಹುಲ್ಲು , ಇನ್ನು ಏನೇನು ಇದೆಯೊ ಅದೆಲ್ಲಕ್ಕೂ ಬೆಲೆಕಟ್ಟಿ, ಎಲ್ಲರೂ ಸೇರಿ ದುಡ್ಡು ಹಾಕಿ ಯಜಮಾನನಿಗೆ ಕೊಟ್ಟುಬಿಡೋಣ. ರಾಕ್ಷಸನ ಸಮೇತ ಮಳಿಗೆಯನ್ನು ಸುಟ್ಟು ಬೂದಿ ಮಾಡೋಣ. ಇದರಿಂದ ಯಾರೂ ಜೀವ ಕಳೆದುಕೊಳ್ಳುವುದಿಲ್ಲ. ಈಗ ಯಾವುದಕ್ಕೂ ಕಾಯಲು ಸಮಯವಿಲ್ಲ. ಈ ವಿಷಯದಲ್ಲಿ ನಾವು ಜಿಪುಣತನ ಮಾಡಿದರೆ ನಮಗೇ ಕೆಟ್ಟದಾಗುತ್ತದೆ" ಎಂದು ಹೇಳಿದನು.

ಆ ವಿಚಾರವನ್ನು ಎಲ್ಲರೂ ಒಪ್ಪಿದರು. ಮಳಿಗೆಗೆ ನಾಲ್ಕು ಮೂಲೆಗಳಿಂದಲೂ ಬೆಂಕಿ ಹಚ್ಚಿದರು. ಪಾಪ ಗೂಬೆ ಅನ್ಯಾಯವಾಗಿ ಸುಟ್ಟು ಭಸ್ಮವಾಯಿತು. ಹೀಗೆ ಗೂಬೆಯನ್ನು ಗುರುತಿಸಲಾರದೆ, ಅದನ್ನು ಓಡಿಸಲಾರದೆ, ಬರೀ ಭಯಪಟ್ಟುಕೊಂಡು ಆ ಪಟ್ಟಣದ ಜನ ಅಪಾರ ನಷ್ಟವನ್ನು ಅನುಭವಿಸ ಬೇಕಾಯಿತು.

೪. ಪುಟ್ಟ ಜಲಕನ್ಯೆ




ಒಬ್ಬ ಪುಟ್ಟ ಹುಡುಗ ಮತ್ತು ಅವನ ತಂಗಿ ಒಂದು ಬಾರಿ ತೊರೆಯ ಅಂಚಿನಲ್ಲಿ ಆಟ ಆಡುತ್ತಾ ಇದ್ದರು. ಆಡುತ್ತಾ ಆಡುತ್ತಾ ಇಬ್ಬರೂ ನೀರಿನಲ್ಲಿ ಬಿದ್ದುಬಿಟ್ಟರು. ನೀರಿನ ಕೆಳಭಾಗದಲ್ಲಿ ಒಬ್ಬ ಪುಟ್ಟ ಜಲಕನ್ಯೆ ಇದ್ದಳು. ಅವಳು ಆ ಹುಡುಗನನ್ನು ಹಿಡಿದುಕೊಂಡಳು. "ನೀವು ಸಿಕ್ಕಿದ್ದು ಒಳ್ಳೆಯದಾಯಿತು. ನಿಮ್ಮಿಂದ ಒಂದು ಕೆಲಸವಾಗಬೇಕಿತ್ತಲ್ಲ" ಎಂದಳು. ಅವಳು ಆ ಹುಡುಗಿಗೆ ಗಂಟಾದ ಕೊಳಕು ಉಣ್ಣೆ ದಾರವನ್ನು ಕೊಟ್ಟು ನೇಯಲು ಹೇಳಿದಳು. ಖಾಲಿ ಪಾತ್ರೆಯಿಂದ ನೀರು ಕುಡಿಯಲು ಹೇಳಿದಳು. ಹುಡುಗನಿಗೆ ಒಂದು ಮೊಂಡು ಕೊಡಲಿ ಕೊಟ್ಟು ಮರ ಕಡಿದು ಉರುಳಿಸಲು ಹೇಳಿದಳು. ತಿನ್ನಲಿಕ್ಕೆ ಏನೂ ಕೊಡಲಿಲ್ಲ. ಬರೀ ಮರಳಿನ ಗುಡ್ಡೆಗಳನ್ನು ತಿನ್ನಲು ಹೇಳಿದಳು. ಮಕ್ಕಳಿಗೆ ತಾಳ್ಮೆ ತಪ್ಪಿತು. ಅವರು ಅವಳ ಕೈಯಿಂದ ತಪ್ಪಿಸಿಕೊಳ್ಳಲು ಸರಿಯಾದ ಸಮಯಕ್ಕಾಗಿ ಕಾಯುತ್ತಿದ್ದರು.

ಆ ಕೆಟ್ಟ ಜಲಕನ್ಯೆ ಪ್ರತಿ ಭಾನುವಾರದಂದು ಚರ್ಚ್‌ಗೆ ಹೋಗುತ್ತಿದ್ದಳು. ಹೀಗೆ ಒಂದು ಸಾರಿ ಅವಳು ಚರ್ಚ್‌ಗೆ ಹೋದಾಗ ಆ ಮಕ್ಕಳು ಓಡಿಹೋದರು. ಆ ಜಲಕನ್ಯೆ ಚರ್ಚ್‌ನಿಂದ ಹೊರಗೆ ಬಂದಾಗ ತನ್ನ ಕೈಗೆ ಸಿಕ್ಕಿ ಬಿದ್ದಿದ್ದ ಹಕ್ಕಿಗಳು ಹಾರಿಹೋಗಿವೆ ಎಂದು ತಿಳಿಯಿತು. ಅವಳೂ ಕೂಡ ದೊಡ್ಡ ಹೆಜ್ಜೆ ಹಾಕುತ್ತ ಅವರ ಹಿಂದೆ ಓಡಿದಳು. ಜಲಕನ್ಯೆ ತಮ್ಮ ಹಿಂದೆ ಓಡಿ ಬರದಂತೆ ಆ ಹುಡುಗಿ ಒಂದು ಅತೀ ದೊಡ್ಡದಾದ ಬ್ರಷ್ ಅನ್ನು ದಾರಿಯಲ್ಲಿ ಎಸೆದಳು. ಅದರಲ್ಲಿ ಸಾವಿರಗಟ್ಟಲೆ ನಿಮಿರಿದ ತಂತಿಗಳಿದ್ದವು. ತುಳಿದವರನ್ನು ಚುಚ್ಚಲೆಂದೇ ಕಾದು ಕುಳಿತಂತೆ ಕಾಣುತ್ತಿದ್ದವು. ಜಲಕನ್ಯೆಗೆ ಅದರ ಮೇಲೆ ಹತ್ತಿ ಬರುವುದು ಕಷ್ಟವಾಯಿತು. ಆದರೂ ನಿಧಾನವಾಗಿ ತುಂಬಾ ಕಷ್ಟಪಟ್ಟು ಅದರ ಮೇಲೆ ಜಾರಿಕೊಂಡು ಕೊನೆಗೂ ಹತ್ತಿಕೊಂಡು ಬಂದಳು.

ಅವಳು ತಮ್ಮನ್ನು ಹಿಂಬಾಲಿಸುತ್ತಿರುವುದನ್ನು ಮಕ್ಕಳು ನೋಡಿದರು. ಆಗ ಹುಡುಗ ತನ್ನ ಹಿಂದೆ ಒಂದು ದೊಡ್ಡ ಬಾಚಣಿಗೆಯನ್ನು ಎಸೆದನು. ಅದರಲ್ಲಿ ಸಾವಿರಾರು ಹಲ್ಲುಗಳಿದ್ದವು. ಅದರ ಮೇಲೂ ಕೂಡ ಆ ಜಲಕನ್ಯೆ ಜಾರುತ್ತಾ, ಬೀಳುತ್ತಾ ಅವರನ್ನು ಹಿಂಬಾಲಿಸಿದಳು. ಅವಳಿಗೆ ತನ್ನನ್ನು ರಕ್ಷಿಸಿಕೊಳ್ಳುವುದು ಗೊತ್ತಿತ್ತು.

ಕೊನೆಗೆ, ಆ ಹುಡುಗಿ ಒಂದು ಕನ್ನಡಿಯನ್ನು ಎಸೆದಳು. ಅದು ಒಂದು ಗಾಜಿನ ಪರ್ವತದಂತೆ ಜಲಕನ್ಯೆಗೆ ಕಂಡಿತು. ಅದು ತುಂಬಾ ನಯವಾಗಿದ್ದುದರಿಂದ ಅದರ ಮೇಲೆ ಸುಲಭವಾಗಿ ಹತ್ತಿಬರಲು ಅವಳಿಗೆ ಸಾಧ್ಯವಾಗಲಿಲ್ಲ. ಆದ್ದರಿಂದ ಮನೆಗೆ ಹೋಗಿ ಕೊಡಲಿ ತಂದು ಆ ಗಾಜಿನ ಪರ್ವತವನ್ನು ಎರಡು ಹೋಳಾಗಿ ಒಡೆದರೆ ತಾನು ಮುಂದೆ ಹೋಗಬಹುದು ಎಂದು ಜಲಕನ್ಯೆ ಯೋಚಿಸಿದಳು. ಹಾಗೆ ಅವಳು ಮನೆಗೆ ಹೋಗಿ ಹಿಂದಿರುಗಿ ಬರುವಷ್ಟರಲ್ಲಿ ಆ ಮಕ್ಕಳು ತುಂಬಾ ದೂರ ಸಾಗಿದ್ದರು. ಆ ಜಲಕನ್ಯೆ ಹಿಂದಕ್ಕೆ ಬಂದಳು. ತಾನು ತುಂಬಾ ದಡ್ಡಿ ಎಂದು ತನ್ನನ್ನೆ ತಮಾಷೆ ಮಾಡಿಕೊಂಡಳು. ಹೀಗೆ ಮಕ್ಕಳು ಜಾಣತನದಿಂದ ತಮಗೆ ಒದಗಿದ ಕಷ್ಟದಿಂದ ಪಾರಾದರು.

೫. ಹಾಡುವ ಮೂಳೆ



ಒಂದಾನೊಂದು ಕಾಲದಲ್ಲಿ ಕಾಡುಹಂದಿಯ ಕಾಟಕ್ಕೆ ಒಳಗಾಗಿದ್ದ ಒಂದು ದೇಶವಿತ್ತು. ಆ ಹಂದಿ, ರೈತರ ಹೊಲಗಳ ಫಸಲನ್ನೆಲ್ಲಾ ಧ್ವಂಸ ಮಾಡುತ್ತಿತ್ತು. ದನಗಳನ್ನು ಕೊಲ್ಲುತ್ತಿತ್ತು. ಆಗಾಗ ಜನರನ್ನು ಕೂಡ ಇರಿದು ಕೊಲ್ಲುತ್ತಿತ್ತು. ಹೀಗಾಗಿ ಎಲ್ಲರೂ ಹಂದಿ ಕಾಟದ ಬಗ್ಗೆ ಚಿಂತೆ ಮಾಡುತ್ತಿದ್ದರು. ಕೊನೆಗೆ, ಜನರೆಲ್ಲಾ ಸೇರಿ ತಮ್ಮ ದೇಶದ ರಾಜನ ಹತ್ತಿರ ಆ ಕಾಡು ಹಂದಿಯ ಬಗ್ಗೆ ದೂರನ್ನು ಕೊಟ್ಟರು. ಆಗ ರಾಜ ಒಂದು ಡಂಗುರವನ್ನು ಹೊಡೆಸಿದನು. ಯಾರು ತನ್ನ ದೇಶವನ್ನು ಆ ದುಷ್ಟ ಹಂದಿಯ ಕಾಟದಿಂದ ಪಾರುಮಾಡುವರೊ ಅವರಿಗೆ ದೊಡ್ಡ ಬಹುಮಾನವನ್ನು ಕೊಡುವುದಾಗಿ ತಿಳಿಸಿದನು. ಆದರೆ ಆ ಹಂದಿ ಎಷ್ಟು ಬಲಶಾಲಿ ಮತ್ತು ದೊಡ್ಡದಾಗಿತ್ತು ಅಂದರೆ, ಅದು ವಾಸ ಮಾಡುತ್ತಿದ್ದ ಕಾಡಿನೊಳಗೆ ಹೋಗಿ ಆ ಸಾಹಸವನ್ನು ಮಾಡಲು ಯಾರೂ ಮುಂದೆ ಬರಲಿಲ್ಲ. ಕೊನೆಗೆ ರಾಜ ಇನ್ನೊಂದು ಪ್ರಕಟಣೆ ಹೊರಡಿಸಿದನು. "ಯಾರು ಆ ಕಾಡುಹಂದಿಯನ್ನು ಹಿಡಿಯುವರೊ ಅಥವಾ ಕೊಲ್ಲುವರೊ ಅವರಿಗೆ ನನ್ನ ಒಬ್ಬಳೇ ಮಗಳನ್ನು ಕೊಟ್ಟು ಮದುವೆ ಮಾಡಿಕೊಡುತ್ತೇನೆ" ಎಂದು ಎರಡನೇ ಡಂಗುರ ಹೊಡಿಸಿದನು.

ಆ ದೇಶದಲ್ಲಿ ಇಬ್ಬರು ಬಡ ಅಣ್ಣತಮ್ಮಂದಿರು ಇದ್ದರು. ಅವರಿಬ್ಬರೂ ಆ ಸಾಹಸವನ್ನು ಮಾಡಲು ಇಷ್ಟಪಟ್ಟರು. ಹಿರಿಯವನು ಕಷ್ಟವನ್ನು ಎದುರಿಸುವ ಧೈರ್ಯಶಾಲಿ. ಚಿಕ್ಕವನು ಮುಗ್ಧನೂ, ಯಾರಿಗೂ ಕೇಡನ್ನು ಬಯಸದವನೂ ಆಗಿದ್ದು, ಒಳ್ಳೆಯ ಹೃದಯವಂತನಾಗಿದ್ದನು. ಆ ಹಂದಿಯನ್ನು ಬೇಗ ಹುಡುಕಬೇಕಾದರೆ ಇಬ್ಬರೂ ವಿರುದ್ಧ ದಿಕ್ಕುಗಳಿಂದ ಕಾಡನ್ನು ಪ್ರವೇಶಿಸಬೇಕೆಂದು ತೀರ್ಮಾನಿಸಿದರು. ದೊಡ್ಡವನು ಸಾಯಂಕಾಲ ಪ್ರಯಾಣ ಮಾಡಿದರೆ ಚಿಕ್ಕವನು ಮಾರನೇ ದಿನ ಬೆಳಿಗ್ಗೆ ಹೊರಟನು. ಚಿಕ್ಕವನು

ಸ್ವಲ್ಪ ದೂರ ಹೋದಾಗ ಒಬ್ಬ ಗಿಡ್ಡ ಮಾಟಗಾರ ಅವನಿಗೆ ಎದುರಾದ. ಅವನು ಕೈಯಲ್ಲಿ ಕಪ್ಪು ಭರ್ಜಿ ಹಿಡಿದುಕೊಂಡಿದ್ದ. ಗಿಡ್ಡ ಮಾಟಗಾರ "ನಾನು ಭರ್ಜಿಯನ್ನು ನಿನಗೆ ಕೊಡುತ್ತೇನೆ. ಯಾಕೆಂದರೆ ನೀನು ಮುಗ್ಧನೂ, ಒಳ್ಳೆಯ ಹೃದಯದವನೂ ಆಗಿರುವೆ. ಇದರಿಂದ ನೀನು ಧೈರ್ಯವಾಗಿ ಆ ಹಂದಿಯನ್ನು ಎದುರಿಸಬಹುದು. ಅದು ನಿನಗೆ ಯಾವ ಅಪಾಯವನ್ನೂ ಮಾಡುವುದಿಲ್ಲ" ಎಂದು ತಮ್ಮನಿಗೆ ಹೇಳಿದನು.

ತಮ್ಮ ಆ ಗಿಡ್ಡ ಮಾಟಗಾರನಿಗೆ ವಂದನೆಗಳನ್ನು ಹೇಳಿ ಆ ಭರ್ಜಿಯನ್ನು ತೆಗೆದುಕೊಂಡು ಧೈರ್ಯವಾಗಿ ಮುಂದೆ ಸಾಗಿದನು. ಸ್ವಲ್ಪ ಸಮಯದಲ್ಲೇ ಆ ಕಾಡುಹಂದಿ ಅವನಿಗೆ ಎದುರಾಗಿ ಓಡಿಬರುತ್ತಿರುವುದು ಕಾಣಿಸಿತು. ಅವನು ಆ ಭರ್ಜಿಯನ್ನು ಎದೆಯ ಮುಂದೆ ಹಿಡಿದುಕೊಂಡಿದ್ದನು. ಆ ಹಂದಿ ದೂರದಿಂದ ರಭಸವಾಗಿ ಅವನಿಗೆದುರಾಗಿ ಓಡಿಬಂದು ಅವನು ಹಿಡಿದುಕೊಂಡಿದ್ದ ಭರ್ಜಿಗೆ ಸಿಕ್ಕಿಹಾಕಿಕೊಂಡಿತು. ಭರ್ಜಿ ನೇರವಾಗಿ ಅದರ ಹೃದಯವನ್ನು ಸೀಳಿಬಿಟ್ಟಿತು. ಅವನು ಆ ಪ್ರಾಣಿಯನ್ನು ತನ್ನ ಹೆಗಲ ಮೇಲೆ ಹೇರಿಕೊಂಡು ರಾಜನಿಗೆ ತೋರಿಸುವುದಕ್ಕಾಗಿ ಊರಿನ ದಾ౹ ಹಿಡಿದನು.

ಹಾಗೆ ಬರುವಾಗ ಅವನು ಕಾಡಿನ ಇನ್ನೊಂದು ದಿಕ್ಕಿನಿಂದ ಎಂದನು. ಆ ಭಾಗದ ಕಾಡಿನ ಅಂಚಿನಲ್ಲಿ ಒಂದು ಮನೆ ಇತ್ತು. ಅಲ್ಲಿ ಜನಗಳು ಸಂತೋಷದಿಂದ ಹಾಡುತ್ತಾ ಕುಣಿಯುತ್ತಾ ಮದ್ಯವನ್ನು ಕುಡಿಯುತ್ತಾ ಇದ್ದರು. ಅವನ ಹಿರಿಯಣ್ಣನೂ ಅವರೊಳಗೆ ಇದ್ದನು. ಮದ್ಯದ ಮತ್ತಿನಲ್ಲಿ ಧೈರ್ಯವನ್ನು ಹೆಚ್ಚುಮಾಡಿಕೊಳ್ಳುತ್ತಿದ್ದನು. ತನ್ನ ತಮ್ಮ ಹಂದಿಯನ್ನು ಕೊಲ್ಲಬಹುದು ಎಂಬ ವಿಚಾರ ಕೂಡ ಅವನಿಗೆ ಹೊಳೆಯಲಿಲ್ಲ. ತಮ್ಮನು ಹೆಗಲ ಮೇಲೆ ಹಂದಿಯನ್ನು ಹೊತ್ತುಕೊಂಡು ಕಾಡಿನಿಂದ ಹೊರಗೆ ಬರುತ್ತಿರುವುದನ್ನು ನೋಡಿದಾಗ ಅವನಿಗೆ ಹೊಟ್ಟೆಕಿಚ್ಚಾಯಿತು. ಅವನ ದುಷ್ಟತನ ಅವನನ್ನು ಸುಮ್ಮನಿರಲು ಬಿಡಲಿಲ್ಲ. ಅವನು ತಮ್ಮನನ್ನು ಹತ್ತಿರ ಕರೆದನು. "ಒಳಗೆ ಬಾ ಇಲ್ಲಿ. ಸುಧಾರಿಸಿಕೊ. ಮದ್ಯವನ್ನು ಕುಡಿದು ದಣಿವಾರಿಸಿಕೊ" ಎಂದು ಪ್ರೀತಿಯಿಂದ ಕರೆದನು. ತಮ್ಮನಿಗೆ ಅಣ್ಣನ ಮಾತಿನಲ್ಲಿ ಸಂಶಯ ಬರಲಿಲ್ಲ. ಅವನು ಒಳಗೆ ಹೋಗಿ ತನಗೆ ಸಹಾಯ ಮಾಡಿದ ಗಿಡ್ಡ ಮಾಟಗಾರನ ಬಗ್ಗೆ ತಿಳಿಸಿದನು. ಅಲ್ಲದೆ ಆ ಮಾಂತ್ರಿಕ ಕೊಟ್ಟ ಭರ್ಜಿಯಿಂದ ಆ ಗಂಡು ಹಂದಿಯನ್ನು ಕೊಂದ ವಿಷಯವನ್ನು ವಿವರಿಸಿದನು. ಅಣ್ಣ ತಮ್ಮನನ್ನು ಸಾಯಂಕಾಲದವರೆಗೆ ಮುಂದೆ ಪ್ರಯಾಣ ಮಾಡದಂತೆ ಹಿಡಿದಿಟ್ಟುಕೊಂಡನು. ನಂತರ ಕತ್ತಲಾಗುತ್ತಿದ್ದಂತೆ ಇಬ್ಬರೂ ಹೊರಟರು. ಹಾಗೆ ನಡೆಯುತ್ತಾ ಒಂದು ಪುಟ್ಟ ಅಣೆಕಟ್ಟಿನ ಮೇಲೆ ಬಂದರು. ಅಲ್ಲಿ ಸಾಕಷ್ಟು ಕತ್ತಲಿತ್ತು. ಕೆಳಗಡೆ ಒಂದು ಹಳ್ಳ ಹರಿಯುತ್ತಿತ್ತು. ಅಣ್ಣ ತಮ್ಮನನ್ನು ಮುಂದೆ ಬಿಟ್ಟು ತಾನು ಹಿಂದೆ ನಡೆಯುತ್ತಿದ್ದ. ಅವರು ಅಣೆಕಟ್ಟಿನ ಮಧ್ಯಕ್ಕೆ ಬಂದಾಗ, ಅಣ್ಣ ತಮ್ಮನನ್ನು ಒಂದೇ ಏಟಿಗೆ ಸಾಯುವಂತೆ ಹೊಡೆದನು. ನಂತರ ಅವನನ್ನು ಅಣೆಕಟ್ಟಿನ ಕೆಳಗಿರುವ ಮರಳಿನಲ್ಲಿ ಹೂತುಬಿಟ್ಟನು. ನಂತರ ಅವನು ಆ ಹಂದಿಯನ್ನು ಹೊತ್ತುಕೊಂಡು ರಾಜನ ಹತ್ತಿರ ಬಂದನು. ತಾನೇ ಹಂದಿಯನ್ನು ಕೊಂದಿರುವುದಾಗಿ ಹೇಳಿದನು. ರಾಜಕುಮಾರಿಯನ್ನು ಮದುವೆ ಆದನು. ತನ್ನ ತಮ್ಮನ ದೇಹವನ್ನು ಹಂದಿ ತುಂಡು ತುಂಡು ಮಾಡಿತು ಎಂದು ಎಲ್ಲರೂ ನಂಬುವ ಹಾಗೆ ಹೇಳಿದನು. ಅವನು ಹೇಳಿದ ಕತೆ ನಿಜವಿರಬಹುದು ಎಂದು ಎಲ್ಲರೂ ತಿಳಿದರು.

ದೇವರ ಕಣ್ಣಿನಿಂದ ಯಾವುದನ್ನೂ ಬಚ್ಚಿಡಲು ಸಾಧ್ಯವಿಲ್ಲ. ಹೀಗಾಗಿ ಅಣ್ಣನ ಕೆಟ್ಟ ಕೆಲಸ ಬೆಳಕಿಗೆ ಬಂದೇ

ಬಿಟ್ಟಿತು. ತಮ್ಮ ಸತ್ತು ಅನೇಕ ವರ್ಷಗಳು ಉರುಳಿದವು. ಒಂದು ಸಾರಿ ಒಬ್ಬ ರೈತ ತನ್ನ ದನಗಳನ್ನು ಮೇಯಿಸಲು ಆ ಹಳ್ಳದ ಹತ್ತಿರ ಬಂದನು. ಅವನು ಹಿಮದಷ್ಟು ಬೆಳ್ಳಗಿರುವ ಮೂಳೆಯನ್ನು ಮರಳಲ್ಲಿ ನೋಡಿದನು. ಅದರಿಂದ ಒಂದು ಹಾಡುವ ಪೀಪಿ ಮಾಡಿಕೊಳ್ಳಬೇಕೆಂದು ಅವನು ಯೋಚಿಸಿದನು. ಅವನು ಕೆಳಗಿಳಿದು ಆ ಮೂಳೆಯನ್ನು ತೆಗೆದುಕೊಂಡನು. ಅದಕ್ಕೆ ಆಕಾರವನ್ನು ಕೊಟ್ಟು ಊದುವ ಒಂದು ಪೀಪಿಯನ್ನು ಮಾಡಿಕೊಂಡನು. ಅದನ್ನು ಬಾಯಿಗೆ ಇಟ್ಟುಕೊಂಡ ಕೂಡಲೆ ಅದು ತನ್ನಷ್ಟಕ್ಕೆ ಹಾಡಿಕೊಂಡಿತು.

"ನನ್ನ ಅಣ್ಣ ನನ್ನನ್ನು ಕೊಂದನು, ನನ್ನ ಮೂಳೆಗಳನ್ನು
ಮರಳು ಕಲ್ಲುಗಳ ತಳದಲ್ಲಿ ಹೂಳಿದನು;
ಹಂದಿಯ ಜಾಗಕ್ಕೆ ಹೋಗಿ ನಾನು ಹಂದಿಯನ್ನು ಕೊಂದೆನು,
ಆದರೆ ಅವನು ಚೆಲುವೆ ಹೆಣ್ಣಿನ ಬಹುಮಾನವನ್ನು ಪಡೆದನು."

"ಎಷ್ಟು ಅದ್ಭುತವಾದ ಮೂಳೆ ಇದು! ತನ್ನಷ್ಟಕ್ಕೆ ತಾನೇ ಹಾಡುತ್ತದೆ! ನಾನು ಇದನ್ನು ರಾಜನಿಗೆ ಕೊಡಬೇಕು" ಎಂದುಕೊಂಡು ದನ ಕಾಯುವವನು ರಾಜನ ಮುಂದೆ ಬಂದಾಕ್ಷಣ ಮೂಳೆ ತನ್ನ ಹಾಡನ್ನು ಪುನಃ ಹೇಳಿತು. ರಾಜ ಮೂಳೆಯ ಹಾಡನ್ನು ಚೆನ್ನಾಗಿ ಅರ್ಥಮಾಡಿಕೊಂಡನು. ಅಣೆಕಟ್ಟಿನ ಕೆಳಗಿರುವ ಮಣ್ಣನ್ನು ತೋಡಲು ಅಪ್ಪಣೆ ಮಾಡಿದನು. ಅಲ್ಲಿ ತಮ್ಮನ ಎಲ್ಲ ಮೂಳೆಗಳೂ ಇದ್ದವು. ಆಗ ಅಣ್ಣ ತಾನು ಮಾಡಿದ ಕೆಟ್ಟ ಕೆಲಸದಿಂದ ತಪ್ಪಿಸಿಕೊಳ್ಳಲು ಆಗಲಿಲ್ಲ. ಅವನ ಕೆಟ್ಟ ಕೆಲಸಕ್ಕೆ ಎಂತಹ ಶಿಕ್ಷೆ ಆಯಿತು ಎಂದರೆ ಅವನನ್ನು ಒಂದು ಗೋಣಿ ಚೀಲದೊಳಗೆ ಹಾಕಿ ಅದರ ಬಾಯಿ ಹೊಲಿದು ನೀರಿನಲ್ಲಿ ಮುಳುಗಿಸಿದರು. ನಂತರ ತಮ್ಮನ ಎಲ್ಲ ಮೂಳೆಗಳನ್ನು ಸ್ಮಶಾನದಲ್ಲಿ ಹೂಳಿದರು. ಆ ಜಾಗದಲ್ಲಿ ಸುಂದರವಾದ ಸಮಾಧಿಯನ್ನು ಕಟ್ಟಿದರು.

೬. ಮೊಲದ ವಧು

ಒಂದೂರಿನಲ್ಲಿ ಅಮ್ಮ ಮಗಳು ಇದ್ದರು. ಅವರು ಸುಂದರವಾದ ಎಲೆಕೋಸಿನ ತೋಟದಲ್ಲಿ ವಾಸವಾಗಿದ್ದರು. ಹೀಗಿರುವಾಗ ಒಮ್ಮೆ ಒಂದು ಮೊಲ ತೋಟದೊಳಗೆ ನುಗ್ಗಿ ಎಲೆಕೋಸನ್ನು ತಿಂದು ಹಾಕಿತು. "ತೋಟದೊಳಗೆ ಹೋಗಿ, ಆ ಮೊಲವನ್ನು ಹೊಡೆದೋಡಿಸು" ಎಂದು ತಾಯಿ ಮಗಳಿಗೆ ಹೇಳಿದಳು. "ಅಲ್ಲೇ ಇರು, ಅಲ್ಲೇ ಇರು ಮೊಲವೇ ಎಲ್ಲ ಕೋಸನ್ನು ತಿಂದುಬಿಡಬೇಡ" ಎಂದು ಮಗಳು ಮೊಲಕ್ಕೆ ಹೇಳಿದಳು.

"ಬಾ ಮೇರಿ ನನ್ನ ಜೊತೆ. ನನ್ನ ಪೊದೆಯಂತಿರುವ ಬಾಲದ ಮೇಲೆ ಕುಳಿತುಕೊ. ನನ್ನ ಮನೆಗೆ ಹೋಗೋಣ. ಅದು ಪುಕ್ಕಗಳಿಂದ ಮಾಡಿದ ಮನೆ" ಎಂದು ಮೊಲ ಮಗಳನ್ನು ಕರೆಯಿತು.

ಮೇರಿ ಒಪ್ಪಲಿಲ್ಲ. ಮಾರನೇ ದಿನವೂ ಮೊಲ ಬಂದಿತು. ಎಲೆಕೋಸನ್ನೆಲ್ಲಾ ತಿಂದಿತು. ಮತ್ತೆ ತಾಯಿ ಮಗಳಿಗೆ "ತೋಟದೊಳಗೆ ಹೋಗಿ ಆ ಮೊಲವನ್ನು ಓಡಿಸು" ಎಂದು ಹೇಳಿದಳು. ಮೇರಿ ಮತ್ತೆ "ಅಲ್ಲೆ,



ಅಲ್ಲೆ ಇರು ಮೊಲವೆ, ಎಲ್ಲಾ ಎಲೆ ಕೋಸನ್ನು ತಿನ್ನಬೇಡ" ಎಂದು ಮೊಲಕ್ಕೆ ಹೇಳಿದಳು. ಅದಕ್ಕೆ ಮೊಲ "ಹಾಗಾದರೆ, ಬಾ ನನ್ನ ಜೊತೆ, ನನ್ನ ಮೆತ್ತನೆ ಬಾಲದ ಮೇಲೆ ಕುಳಿತುಕೊ. ಪುಕ್ಕಗಳಿಂದ ಮಾಡಿದ ನನ್ನ ಮನೆಗೆ ಹೋಗೋಣ" ಎಂದು ಮೇರಿಯನ್ನು ಕರೆಯಿತು. ಮೇರಿ ಒಪ್ಪಲಿಲ್ಲ. ಮಾರನೇ ದಿನವೂ ಮೊಲ ಬಂದಿತು. ಎಲೆಕೋಸನ್ನೆಲ್ಲಾ ತಿಂದಿತು. ಮತ್ತೆ ಅಮ್ಮ "ತೋಟಕ್ಕೆ ಹೋಗು. ಮೊಲವನ್ನು ಹೊಡೆದೋಡಿಸು" ಎಂದು ಹೇಳಿದಳು. ಮತ್ತೆ ಮೇರಿ ಮೊದಲೆರಡು ದಿನಗಳು ಹೇಳಿದ ಹಾಗೆ, "ಮೊಲವೆ, ಬೇಡ. ಅಲ್ಲೆ ಇರು, ನಮ್ಮ ಎಲೆಕೋಸನ್ನೆಲ್ಲ ತಿಂದುಬಿಡಬೇಡ" ಎಂದು ಹೇಳಿದಳು. "ಹಾಗಾದರೆ ಬಾ ನನ್ನ ಸಂಗಡ. ಪೊದೆಯಂಥ ನನ್ನ ಬಾಲದ ಮೇಲೆ ಕುಳಿತುಕೊ. ನನ್ನ ಗೂಡಿನ ಮನೆಗೆ ಹೋಗೋಣ" ಎಂದು ಮೊಲ ಮೇರಿಯನ್ನು ಕೇಳಿತು.

ಹೀಗೆ, ಮೂರನೇ ಸಾರಿ ಕೇಳಿದ್ದಕ್ಕೆ ಮೇರಿ ಮೊಲದ ಬಾಲದ ಮೇಲೆ ಕುಳಿತುಕೊಂಡಳು. ಮೊಲ ಅವಳನ್ನು ತನ್ನ ಗೂಡಿಗೆ ಕರೆದುಕೊಂಡು ಹೋಯಿತು. "ಸೊಪ್ಪು ತರಕಾರಿಗಳನ್ನು ಹಾಕಿ ನನಗಾಗಿ ಅಡುಗೆ ಮಾಡು; ನಾನು ನಮ್ಮ ಮದುವೆಗೆ ಅತಿಥಿಗಳನ್ನು ಕರೆಯುತ್ತೇನೆ" ಎಂದು ಮೊಲ ಮೇರಿಗೆ ಹೇಳಿತು. ಮೊಲದ ಎಲ್ಲ ಅತಿಥಿಗಳು ಬಂದರು. (ಮೊಲದ ಅತಿಥಿಗಳು ಯಾರಿರಬಹುದು? ಅದನ್ನು ನಾನು ಹೇಳಲಾರೆ. ಆದರೆ ಯಾರೋ ನನಗೆ ಏನು ಹೇಳಿದರು ಅಂದರೆ ಅತಿಥಿಗಳೆಲ್ಲರೂ ಮೊಲಗಳೆ ಆಗಿದ್ದವು.) ಮೊಲ ವರನಾಗಿ, ಮೇರಿ ವಧುವಾಗಿದ್ದರು. ಅವರ ಮದುವೆ ಮಾಡಿಸಲು ಕಾಗೆ ಪೂಜಾರಿಯಾಗಿ ಬಂದಿತ್ತು. ಮದುವೆ ಮಂಟಪ ಕಾಮನ ಬಿಲ್ಲಿನ ಕೆಳಗೆ ಇತ್ತು.

ಮೇರಿಗೆ ತಾನು ಒಂಟಿಯಾಗಿರುವೆನೆಂದು ತುಂಬಾ ದುಃಖವಾಯಿತು. ಮೊಲ ಸ್ವಲ್ಪ ಹೊತ್ತು ಹೊರಗೆ ಹೋಗಿ ಕೂಡಲೆ ಹಿಂದಿರುಗಿ ಬಂದಿತು. "ಏಳು, ಮೇಲೇಳು, ಎದ್ದೇಳು! ಮದುವೆಗೆ ಬಂದಿರುವ ಜನ ಖುಶಿಯಿಂದ ಆನಂದವಾಗಿದ್ದಾರೆ" ಎಂದು ಮೊಲ ಹೇಳಿತು. ಅದಕ್ಕೆ ಮೇರಿ ಇಲ್ಲ ನಾನು ಬರುವುದಿಲ್ಲ ಎಂದು ಹೇಳಿ ಅತ್ತಳು. ಮತ್ತೆ ಆ ಮೊಲ ಹೊರಗೆ ಹೋಗಿ ಸ್ವಲ್ಪ ಹೊತ್ತು ಬಿಟ್ಟು, ಹಿಂದಿರುಗಿತು. "ಏಳು, ಮೇಲೇಳು, ಮದುವೆಗೆ ಬಂದಿರುವ ಜನ ಹಸಿದಿದ್ದಾರೆ" ಎಂದು ಮೇರಿಗೆ ಹೇಳಿತು.

ಆಗಲೂ ಮೊಲದ ವಧು ಹೊರಗೆ ಬರಲು ನಿರಾಕರಿಸಿದಳು. “ಇಲ್ಲ” ಎಂದು ಹೇಳಿದಳು. ಮೊಲ ಮತ್ತೆ ಹೊರಗೆ ಹೋಯಿತು. ಆಗ, ಅವಳು ತನ್ನ ಬಟ್ಟೆಯಿಂದಲೇ ಹುಲ್ಲಿನ ಬೊಂಬೆ ಮಾಡಿದಳು. ಅದಕ್ಕೆ ಕೆಂಪು ತುಟಿ ಹಚ್ಚಿದಳು. ಅಡುಗೆ ಪಾತ್ರೆ ಪಕ್ಕ ಕೂಡಿಸಿದಳು. ನಂತರ ತನ್ನ ತಾಯಿಯ ಹತ್ತಿರ ಹೋದಳು. ಮತ್ತೊಮ್ಮೆ ಆ ಮೊಲ ಒಳಗೆ ಬಂದು “ಏಳು, ಮೇಲೇಳು” ಎಂದು ಹೇಳುತ್ತಾ ಆ ಬೊಂಬೆಯ ತಲೆಯನ್ನು ಹೊಡೆಯಿತು. ಅದು ಕೂಡಲೆ ಪಕ್ಕಕ್ಕೆ ವಾಲಿಕೊಂಡು ಬಿದ್ದುಬಿಟ್ಟಿತು. ಆಗ ತನ್ನ ವಧು ಸತ್ತುಹೋದಳೆಂದು ತಿಳಿದು ಮೊಲ ದುಃಖದಿಂದ ಬಹುದೂರ ಹೊರಟುಹೋಯಿತು.

೭. ಹುಂಜದ ಸಾವು



ಒಂದಾನೊಂದು ಕಾಲದಲ್ಲಿ ಹುಂಜ ಮತ್ತು ಕೋಳಿ ಇಬ್ಬರೂ ಒಂದು ಕೋಳಿಗೂಡಿನಲ್ಲಿ ವಾಸವಾಗಿದ್ದರು. ಅವರಿಬ್ಬರ ನಡುವೆ ಒಂದು ಒಪ್ಪಂದವಾಗಿತ್ತು. ಯಾರಿಗಾದರೂ ಸರಿ, ತಿನ್ನುವ ಹಣ್ಣು ಅಥವಾ ತಿನ್ನುವ ವಸ್ತು ಸಿಕ್ಕರೆ, ಅದನ್ನು ಮತ್ತೊಬ್ಬರ ಜೊತೆ ಹಂಚಿಕೊಳ್ಳಬೇಕು ಎಂಬ ಒಪ್ಪಂದ ಮಾಡಿಕೊಂಡಿದ್ದರು. ಒಂದು ಸಾರಿ ಹುಂಜಕ್ಕೆ ಬೀಜವಿರುವ ಒಂದು ದೊಡ್ಡ ಹಣ್ಣು ಸಿಕ್ಕಿತು. ಅದು ತುಂಬಾ ಚೆನ್ನಾಗಿತ್ತು. ಅದನ್ನು ತಾನೊಬ್ಬನೆ ತಿನ್ನಬೇಕೆಂಬ ಆಸೆಯಿಂದ ಅದರ ವಿಷಯವನ್ನು ಕೋಳಿಗೆ ಹೇಳಲೇ ಇಲ್ಲ. ಹುಂಜ ಆ ಹಣ್ಣನ್ನು ಕೋಳಿಗೆ ಗೊತ್ತಾಗದಂತೆ ತಿಂದಿತು. ಆದರೆ ಹಣ್ಣು ಎಷ್ಟು ದೊಡ್ಡದಿತ್ತು ಎಂದರೆ ಅದು ಹುಂಜದ ಗಂಟಲಲ್ಲಿ ಸಿಕ್ಕಿಹಾಕಿಕೊಂಡಿತು. ಹುಂಜಕ್ಕೆ ಉಸಿರು ಕಟ್ಟಿದಂತಾಯಿತು. ಆಗ ಅದು ಕೋಳಿಯನ್ನು ಕೂಗಿ ಕರೆಯಿತು. “ಬೇಗ ಓಡಿ ಹೋಗು, ನನಗಾಗಿ ನೀರು ತೆಗೆದುಕೊಂಡು ಬಾ. ಅಯ್ಯೋ! ಬೇಗ ಬೇಗ ಹೋಗು, ಇಲ್ಲದಿದ್ದರೆ ನಾನು ಸತ್ತುಹೋಗುತ್ತೇನೆ” ಎಂದು ಹುಂಜ ಕೋಳಿಗೆ ಹೇಳಿತು.

ಕೋಳಿ ಬೇಗ ಬೇಗ ಓಡಿ ಹೋಗಿ ನೀರಿನ ಚಿಲುಮೆಯನ್ನು ತಲುಪಿತು. “ಚಿಲುಮೆ, ಚಿಲುಮೆ, ನೀನು ನನಗೆ ಸ್ವಲ್ಪ ನೀರು ಕೊಡು. ಹುಂಜ ಅಪಾಯದಲ್ಲಿದೆ. ದೊಡ್ಡ ಹಣ್ಣಿನ ಬೀಜ ಗಂಟಲಲ್ಲಿ

ಸಿಕ್ಕಿಹಾಕಿಕೊಂಡಿದೆ. ಉಸಿರುಕಟ್ಟಿ ಸಾಯುವ ಸ್ಥಿತಿಯಲ್ಲಿದೆ" ಎಂದು ಕೋಳಿ ನೀರಿನ ಚಿಲುಮೆಯನ್ನು ಬೇಡಿಕೊಂಡಿತು. ಅದಕ್ಕೆ ಆ ತೊರೆ "ಮೊದಲು ವಧುವಿನ ಹತ್ತಿರ ಓಡಿಹೋಗಿ ನನಗಾಗಿ ಕೆಂಪು ರೇಶಿಮೆಯನ್ನು ತೆಗೆದುಕೊಂಡು ಬಾ. ಆಮೇಲೆ ನೀರು ಕೊಡುವೆ" ಎಂದು ಹೇಳಿತು. ಕೋಳಿ ಮದುವೆ ಹೆಣ್ಣಿನ ಬಳಿಗೆ ಓಡಿತು. "ವಧುವೆ ನೀರಿನ ಚಿಲುಮೆಗೆ ಕೆಂಪು ರೇಶಿಮೆಯನ್ನು ಕೊಡು. ನಾನು ಅದನ್ನು ತೆಗೆದುಕೊಂಡು ಹೋಗಿ ಕೊಟ್ಟರೆ, ಅದು ನನಗೆ ನೀರು ಕೊಡುತ್ತದೆ. ಅದನ್ನು ನಾನು ನನ್ನ ಗಂಡನಿಗೆ ತೆಗೆದುಕೊಂಡು ಹೋಗಬೇಕು. ಯಾಕೆಂದರೆ, ನನ್ನ ಗಂಡ ದೊಡ್ಡ ಕಾಯಿಯನ್ನು ತಿಂದು ಅದರ ಬೀಜ ಗಂಟಲಲ್ಲಿ ಸಿಕ್ಕಿಹಾಕಿಕೊಂಡಿದೆ. ಹೀಗಾಗಿ ನನ್ನ ಗಂಡ, ಉಸಿರುಕಟ್ಟಿ ಗೂಡಿನಲ್ಲಿ ಮಲಗಿದ್ದಾನೆ" ಎಂದು ಎಲ್ಲವನ್ನು ವಿವರಿಸಿತು. ಅದಕ್ಕೆ ವಧು, "ಮೊದಲು ಓಡಿ ಹೋಗಿ, ಆ ಹುಲ್ಲುಗಾವಲಿನ ಮೇಲಿರುವ ಹೂವಿನ ಹಾರ ತಂದು ಕೊಟ್ಟರೆ ನಾನು ನಿನಗೆ ಕೆಂಪು ರೇಶಿಮೆಯನ್ನು ಕೊಡುವೆ" ಎಂದು ಹೇಳಿದಳು. ಹೀಗೆ ಕೋಳಿ ಮತ್ತೆ ಹುಲ್ಲುಗಾವಲಿಗೆ ಓಡಿತು. ಅಲ್ಲಿ ಒಂದು ಕೊಂಬೆಯ ಮೇಲೆ ನೇತಾಡುತ್ತಿದ್ದ ಹೂವಿನ ಹಾರವನ್ನು ತಂದು ವಧುವಿಗೆ ಕೊಟ್ಟಿತು. ಆಕೆ ಕೆಂಪು ರೇಶಿಮೆಯನ್ನು ಕೊಟ್ಟಳು. ಅದನ್ನು ತೆಗೆದುಕೊಂಡು ಕೋಳಿ ನೀರಿನ ತೊರೆಗೆ ಕೊಟ್ಟಿತು. ನೀರಿನ ಚಿಲುಮೆ ಕೋಳಿಗೆ ನೀರು ಕೊಟ್ಟಿತು. ನೀರನ್ನು ತೆಗೆದುಕೊಂಡು ತನ್ನ ಗಂಡನಿಗೆ ಕೊಡಲು ಬೇಗ ಬೇಗನೆ ಕೋಳಿ ಮನೆಗೆ ಓಡಿತು. ಇಷ್ಟೆಲ್ಲಾ, ಕೆಲಸಗಳನ್ನು ಮಾಡಿ ನೀರು ತೆಗೆದುಕೊಂಡು ಹೋಗುವ ಹೊತ್ತಿಗೆ ಹುಂಜ ಸತ್ತು ಮಲಗಿತ್ತು.

ಈ ದೃಶ್ಯವನ್ನು ನೋಡಿ ಕೋಳಿ ತುಂಬಾ ದುಃಖದಿಂದ ಕಿರುಚಿಕೊಂಡಿತು. ಅದರ ಕಿರುಚಾಟದಿಂದ ಉಳಿದ ಎಲ್ಲ ಪ್ರಾಣಿಗಳೂ ಬಂದುವು. ಹುಂಜಕ್ಕಾಗಿ ದುಃಖಿಸಿದವು. ಆರು ಪುಟ್ಟ ಇಲಿಗಳು ಒಂದು ಬಂಡಿಯನ್ನು ಹುಂಜದ ಶವಯಾತ್ರೆಗಾಗಿ ಕಟ್ಟಿದವು. ಬಂಡಿ ಸಿದ್ಧವಾದ ತಕ್ಷಣ ಅದನ್ನು ಎಳೆಯಲು ತಾವೇ ಕೊರಳಿಗೆ ಕಟ್ಟಿಕೊಂಡವು. ಕೋಳಿ ಗಾಡಿಯನ್ನು ಹಿಂಬಾಲಿಸಿತು. ದಾರಿಯಲ್ಲಿ ಒಂದು ನರಿ ಭೇಟಿಯಾಯಿತು. ವಿಷಯವೇನೆಂದು ಕೇಳಿತು. ಆಗ ಕೋಳಿ "ನಾನು ನನ್ನ ಗಂಡನನ್ನು ಹೂಳಲು ಹೋಗುತ್ತಿರುವೆ" ಎಂದು ಹೇಳಿತು. "ನಾನು ನಿಮ್ಮ ಜೊತೆ ಬರಲೇ?" ಎಂದು ನರಿ ಕೇಳಿತು. ಅದಕ್ಕೆ ಕೋಳಿ "ಆಗಲಿ, ಆದರೆ ನೀನು ಗಾಡಿಯ ಹಿಂಬದಿಯಲ್ಲಿ ಜಾಗ ಮಾಡಿಕೊಳ್ಳಬೇಕು. ಗಾಡಿಯ ಮುಂಬದಿಯಲ್ಲಿ ಯಾರಿಗೂ ಅವಕಾಶವಿಲ್ಲ. ಏಕೆಂದರೆ ನನ್ನ ಕುದುರೆಗಳಿಗೆ ಎಳೆಯುವುದು ಕಷ್ಟವಾಗುತ್ತದೆ" ಎಂದು ನರಿಗೆ ಹೇಳಿತು. ನರಿ ಗಾಡಿಯ ಹಿಂದೆ ಹೋಯಿತು. ಅದೇ ರೀತಿ, ತೋಳ, ಕರಡಿ, ಮೇಕೆ, ಸಿಂಹ ಮತ್ತು ಕಾಡಿನ ಎಲ್ಲ ಪ್ರಾಣಿಗಳೂ ಹೋದವು. ಆ ಪ್ರಾಣಿಗಳ ರೈಲು ಒಂದು ತೊರೆಯ ಹತ್ತಿರ ನಿಂತು ಬಿಟ್ಟಿತು. ಅವುಗಳು ಬಹಳ ದೂರವೇನೂ ಬಂದಿರಲಿಲ್ಲ. "ಈಗ ನಾವು ಇದನ್ನು ಹೇಗೆ ದಾಟಬೇಕು" ಎಂದು ಕೋಳಿ ಕೇಳಿತು. "ನಾನು ಅಣೆಕಟ್ಟಿನಂತೆ, ಎರಡೂ ದಡಕ್ಕೆ ಅಡ್ಡವಾಗಿ ಮಲಗುವೆ. ನೀವು ನನ್ನ ಮೇಲೆ ನಡೆದುಕೊಂಡು ದಾಟಬಹುದು" ಎಂದು ಒಂದು ಹುಲ್ಲುಕಡ್ಡಿ ಹೇಳಿತು. ಆದರೆ ಆ ಆರು ಇಲಿಗಳು ಆ ಸೇತುವೆ ಮೇಲೆ ಬಂದ ತಕ್ಷಣ ಹುಲ್ಲುಕಡ್ಡಿ ಮುರಿದು ಕೆಳಗೆ ಬಿತ್ತು. ಅವುಗಳೆಲ್ಲಾ ನೀರಿನಲ್ಲಿ ಬಿದ್ದು, ಮುಳುಗಿ ಹೋದವು. ಆಗ ಇನ್ನೊಂದು ಸೇತುವೆಯ ಅಗತ್ಯ ಬಿತ್ತು. ಒಂದು ಕಲ್ಲಿದ್ದಲು ಮುಂದೆ ಬಂದು "ನಾನು ಸಾಕಷ್ಟು ದೊಡ್ಡವನಿದ್ದೇನೆ. ನಾನು ದಡಗಳಿಗೆ ಅಡ್ಡವಾಗಿ ಮಲಗುವೆ. ನೀವು ನನ್ನ ಮೇಲಿನಿಂದ ದಾಟಬಹುದು" ಎಂದು ಹೇಳಿತು. ಕಲ್ಲಿದ್ದಲು ನೀರಿನಲ್ಲಿ ಮಲಗಿತು. ಅದರ ಬೆಂಕಿ ಎಲ್ಲ ಆರಿ ಹೋಯಿತು.

ಅದು ಸತ್ತುಹೋಯಿತು! ನಂತರ ಒಂದು ಕಲ್ಲು ಕೋಳಿಯ ಮೇಲೆ ದಯೆ ತೋರಿತು. ಅದು ನೀರಿನ ಅಗಲಕ್ಕೆ ಮಲಗಿತು. ಆಗ, ಕೋಳಿ ಗಾಡಿಯನ್ನು ಎಳೆದುಕೊಂಡು ಸುರಕ್ಷಿತವಾಗಿ ಆಚೆ ದಡವನ್ನು ಸೇರಿತು. ಆದರೆ, ಉಳಿದವರು ಇನ್ನೂ ದಾಟಬೇಕಾಗಿತ್ತು. ಅವರಿಗಾಗಿ ಗಾಡಿಯನ್ನು ಹಿಂದಕ್ಕೆ ಕಳಿಸಬೇಕಾಗಿತ್ತು. ಆದರೆ ಅಲ್ಲಿ ಬಂಡಿ ಹಿಡಿಯುವುದಕ್ಕಿಂತಲೂ ಹೆಚ್ಚು ಪ್ರಾಣಿಗಳಿದ್ದವು. ಹೀಗಾಗಿ ಬಂಡಿ ತಲೆ ಕೆಳಗಾಯಿತು. ಅದರಲ್ಲಿದ್ದವರೆಲ್ಲ ನೀರಿಗೆ ಬಿದ್ದರು. ಅವರು ಮೇಲಕ್ಕೇಳಲಾಗದೆ, ಮುಳುಗೇ ಬಿಟ್ಟರು.

ಈಗ, ಪಾಪ, ಕೋಳಿ ಮಾತ್ರ ತನ್ನ ಸತ್ತ ಗಂಡ ಹುಂಜನ ಹತ್ತಿರ ಉಳಿಯಿತು. ತಾನೇ ಸಮಾಧಿಯನ್ನು ತೋಡಿ ಅದರೊಳಗೆ ತನ್ನ ಗಂಡನನ್ನು ಹೂಳಿತು. ಅದರ ಮೇಲೆ, ಮಣ್ಣನ್ನು ರಾಶಿ, ರಾಶಿ ಹಾಕಿತು. ಅದರ ಮೇಲೆ ಕುಳಿತುಕೊಂಡು ದುಃಖಿಸಿತು. ಅದು ಅಳುವನ್ನು ನಿಲ್ಲಿಸಲೇ ಇಲ್ಲ. ತಾನು ಸಾಯುವವರೆಗೂ ಅತ್ತಿತು.

೮. ಪಾಲುದಾರರಾದ ಬೆಕ್ಕು ಮತ್ತು ಇಲಿ



ಒಂದು ಬೆಕ್ಕು ಇಲಿಯ ಸ್ನೇಹವನ್ನು ಬೆಳೆಸಿತು. ತನಗೆ ಇಲಿಯ ಬಗ್ಗೆ ತುಂಬಾ ಪ್ರೀತಿ ಮತ್ತು ಮಮತೆ ಇರುವುದಾಗಿ ಹೇಳಿತು. ಕೊನೆಗೆ ಇಲಿ ಬೆಕ್ಕಿನ ಮಾತನ್ನು ನಂಬಿ ಒಂದೇ ಮನೆಯಲ್ಲಿ ಇಬ್ಬರೂ ವಾಸ ಮಾಡಲು ಒಪ್ಪಿತು. ಮನೆಯ ಎಲ್ಲ ವಿಚಾರಗಳು, ವ್ಯವಹಾರಗಳು ಇಬ್ಬರಿಗೂ ಸೇರಿದ್ದು ಎಂದು ಒಪ್ಪಿಕೊಂಡವು. "ಚಳಿಗಾಲಕ್ಕೆ ನಾವು ಮೊದಲೇ ಆಹಾರವನ್ನು ಕೂಡಿ ಹಾಕಿಕೊಳ್ಳಬೇಕು. ಇಲ್ಲದಿದ್ದರೆ ನಾವು

ಉಪವಾಸಮಾಡಬೇಕಾಗುತ್ತದೆ" ಎಂದು ಬೆಕ್ಕು ಇಲಿಗೆ ಹೇಳಿತು. "ನೀನು ಪುಟ್ಟ ಇಲಿ. ಬೇರೆಲ್ಲಿಗೂ ಹೋಗಲಾರೆ. ಹೋದರೆ ನಿನಗೆ ಅಪಾಯವಾಗುತ್ತದೆ" ಎಂದು ಬೆಕ್ಕು ಹೇಳಿತು. ಕೊನೆಗೆ ಅವರಿಬ್ಬರೂ ಒಪ್ಪಿಕೊಂಡು ಒಂದು ಮಡಕೆಯನ್ನು ತಂದು ಅದರೊಳಗೆ ಸ್ವಲ್ಪ ತುಪ್ಪವನ್ನು ಇಟ್ಟರು. ನಂತರ ಆ ಮಡಕೆಯನ್ನು ಎಲ್ಲಿ ಇಡಬೇಕೆಂದು ಬಹಳ ಹೊತ್ತು ಯೋಚಿಸಿದ ನಂತರ ಬೆಕ್ಕು, "ಇದನ್ನು ಇಡಲು ಚರ್ಚ್‌ನಷ್ಟು ಒಳ್ಳೆಯ ಜಾಗ ಬೇರೆ ಯಾವುದೂ ಇಲ್ಲ. ಯಾಕೆಂದರೆ ಅಲ್ಲಿ ಕದಿಯುವ ಧೈರ್ಯ ಯಾರಿಗೂ ಇಲ್ಲ. ಅಲ್ಲಿ ನಾವು ಸಂಗೀತದ ವಾದ್ಯದ ಕೆಳಗೆ ಇಡೋಣ. ನಮಗೆ ಅತ್ಯವಶ್ಯಕತೆ ಬಿದ್ದರೆ ಮಾತ್ರ ತೆಗೆದುಕೊಳ್ಳೋಣ" ಎಂದು ಹೇಳಿತು.

ಹೀಗೆ ತುಪ್ಪದ ಮಡಕೆಯನ್ನು ಸುರಕ್ಷಿತವಾಗಿಟ್ಟರು. ಆದರೆ ಸ್ವಲ್ಪ ದಿನಗಳು ಕಳೆಯುವಷ್ಟರಲ್ಲಿ ಬೆಕ್ಕಿಗೆ ಅದನ್ನು ತಿನ್ನುವ ಆಸೆ ಆಯಿತು. ಆದ್ದರಿಂದ ಅದು ಇಲಿಗೆ, "ನಾನು ನಿನಗೆ ಹೇಳಬೇಕಾದ ಒಂದು ವಿಷಯವಿದೆ. ನನ್ನ ಚಿಕ್ಕಮ್ಮ ನನಗೆ ಹೇಳಿ ಕಳಿಸಿದ್ದಾರೆ. ಅವಳಿಗೆ ಈಗಷ್ಟೆ ಒಬ್ಬ ಮಗ ಹುಟ್ಟಿದ್ದಾನಂತೆ. ಆ ಮಗುವಿನ ನಾಮಕರಣಕ್ಕೆ ನಾನು ಹೋಗಲೇಬೇಕು. ಈ ದಿನವೇ ಹೋಗುತ್ತೇನೆ. ನೀನು ಮನೆಯಲ್ಲೇ ಇದ್ದು ಮನೆಯನ್ನು ಚೆನ್ನಾಗಿ ನೋಡಿಕೊ" ಎಂದು ಬೆಕ್ಕು ಹೇಳಿತು. ಅದಕ್ಕೆ ಇಲಿ, "ಅಗತ್ಯವಾಗಿ ಆಗಲಿ. ದಯವಿಟ್ಟು ಹೋಗಿ ಬಾ. ಅಲ್ಲಿ ನೀನು ಚೆನ್ನಾಗಿರುವುದನ್ನು ತಿಂದಾಗ ನನ್ನನ್ನು ನೆನೆಸಿಕೊ. ಹೆಸರಿಡುವ ಸಮಯದಲ್ಲಿ ಕುಡಿಯುವ ಕೆಂಪು ಮದ್ಯವನ್ನು ನನಗೂ ಕುಡಿಯುವ ಆಸೆ ಇದೆ" ಎಂದು ಇಲಿ ಹೇಳಿತು. ಬೆಕ್ಕಿಗೆ ಯಾವ ಚಿಕ್ಕಮ್ಮನೂ ಇರಲಿಲ್ಲ. ನಾಮಕರಣಕ್ಕೆ ಯಾರೂ ಕರೆದಿರಲಿಲ್ಲ. ಬೆಕ್ಕು ಸೀದಾ ಚರ್ಚ್‌ಗೆ ಹೋಗಿ, ತುಪ್ಪದ ಗಡಿಗೆಯ ಹತ್ತಿರ ತೆವಳಿಕೊಂಡು ಹೋಯಿತು. ಮೇಲ್ಭಾಗವನ್ನು ನೆಕ್ಕಿಕೊಂಡು ತಿಂದಿತು. ನಂತರ ಆ ಪಟ್ಟಣದ ಮನೆಗಳ ಮೇಲೆ ಹಾರುತ್ತಾ, ನಡೆಯುತ್ತಾ ತಾನು ಎದುರಿಸಬೇಕಾದ ಪರಿಸ್ಥಿತಿಯ ಬಗ್ಗೆ ಚಿಂತಿಸುತ್ತಾ, ಆಗಾಗ ಬಿಸಿಲಿನಲ್ಲಿ ಮೈಮುರಿಯುತ್ತಾ ತುಪ್ಪದ ಗಡಿಗೆ ಯೋಚನೆ ಬಂದಾಗಲೆಲ್ಲ ತನ್ನ ಮೀಸೆಯನ್ನು ಸವರಿಕೊಳ್ಳುತ್ತಾ ಹೋಯಿತು. ಸಾಯಂಕಾಲದ ಹೊತ್ತಿಗೆ ಮನೆಗೆ ಬಂದಿತು. ಆಗ ಇಲಿ, "ನೀನು ಕೊನೆಗೂ ಬಂದೆಯಲ್ಲ. ಎಲ್ಲ ಕಾರ್ಯ ಚೆನ್ನಾಗಿ ನಡೆಯಿತೆ?" ಎಂದು ಕೇಳಿತು.

"ಹೌದು, ಎಲ್ಲವೂ ಚೆನ್ನಾಗಿ ನಡೆಯಿತು" ಎಂದು ಬೆಕ್ಕು ಉತ್ತರಿಸಿತು.

"ಬೆಕ್ಕಿನ ಮರಿಗೆ ಏನೆಂದು ಹೆಸರಿಟ್ಟರಿ?" ಎಂದು ಇಲಿ ಕೇಳಿತು.

"ಮೇಲ್ಪದರ " ಎಂದು ಬೆಕ್ಕು ಬೇಗನೆ ಉತ್ತರಿಸಿತು. "ಮೇಲ್ಪದರ! ಎಷ್ಟು ವಿಚಿತ್ರವಾಗಿದೆ. ಇದು, ನಿಮ್ಮ ಕುಟುಂಬದ ಹೆಸರೇನು?" ಎಂದು ಇಲಿ ಕೇಳಿತು. "ಅದರಲ್ಲೇನು ಮಹಾ? ನೀವು, ನಿಮ್ಮ ಮಕ್ಕಳಿಗೆ, 'ಮುರುಕು ಕಳ್ಳ' ಎಂದು ಕರೆಯುವುದಕ್ಕಿಂತ ಚೆನ್ನಾಗಿದೆ" ಎಂದು ಬೆಕ್ಕು ಹೇಳಿತು.

ಮತ್ತೆ ಸ್ವಲ್ಪ ದಿನಗಳು ಕಳೆದವು. ಬೆಕ್ಕಿಗೆ ಮತ್ತೆ ತುಪ್ಪ ತಿನ್ನುವ ಆಸೆ ಶುರು ಆಯಿತು. ಆಗ ಇಲಿಗೆ, "ನೀನು ಮತ್ತೊಮ್ಮೆ ಮನೆಯ ಜವಾಬ್ದಾರಿ ಹೊರಬೇಕಾಗಿದೆ. ಇನ್ನೊಂದು ಮರಿ ಹುಟ್ಟಿದೆಯಂತೆ. ಆದ್ದರಿಂದ ನಾನು ಹೋಗಲೇಬೇಕು" ಎಂದು ಬೆಕ್ಕು ಹೇಳಿತು. ಪಾಪ, ಆ ಇಲಿ ಬೆಕ್ಕನ್ನು ನಂಬಿ ಮನೆ ನೋಡಿಕೊಳ್ಳಲು ಒಪ್ಪಿಕೊಂಡಿತು. ಬೆಕ್ಕು ಪುನಃ ಗೋಡೆಯ ಹಿಂದೆ ತೆವಳಿಕೊಂಡು ಹೋಗಿ ಚರ್ಚನ್ನು ಸೇರಿತು. ಅಲ್ಲಿ

ಮಡಕೆಯಲ್ಲಿದ್ದ ತುಪ್ಪದ ಅರ್ಧ ಭಾಗವನ್ನು ತಿಂದಿತು. "ಯಾರಿಗಾದರೂ ಅಷ್ಟೇ, ಅವರಷ್ಟಕ್ಕೆ ಅವರೇ ತಿನ್ನುವುದು ಚೆನ್ನಾಗಿರುತ್ತದೆ" ಎಂದು ತನ್ನಷ್ಟಕ್ಕೆ ಹೇಳಿಕೊಂಡಿತು. ಆ ದಿನ ತಾನು ಮಾಡಿದ ಸಾಹಸದ ಕೆಲಸಕ್ಕೆ ತೃಪ್ತಿ ಪಟ್ಟಿತು. ಅದು ಮನೆಗೆ ಹಿಂದಿರುಗಿದಾಗ "ಎರಡನೇ ಮಗುವಿಗೆ ಏನು ಹೆಸರಿಟ್ಟೆ" ಎಂದು ಇಲಿ ಕೇಳಿತು. "ಮಧ್ಯ ಪದರ" ಎಂದು ಹೆಸರಿಟ್ಟಿರುವುದಾಗಿ ಬೆಕ್ಕು ಹೇಳಿತು. "ಮಧ್ಯ ಪದರ ಅಂದರೆ ಏನು ಅರ್ಥ? ನನ್ನ ಜೀವನದಲ್ಲಿ ಇದುವರೆಗೂ ಅಂತಹ ಹೆಸರನ್ನು ಕೇಳಿಲ್ಲ" ಎಂದು ಇಲಿ ಹೇಳಿತು.

ಹಬ್ಬದ ಊಟವನ್ನು ನೆನೆಸಿಕೊಂಡು ಮತ್ತೊಮ್ಮೆ ಬೆಕ್ಕಿನ ಬಾಯಲ್ಲಿ ನೀರಾಡಿತು. "ಎಲ್ಲಾ ಒಳ್ಳೆಯ ವಸ್ತುಗಳು ಮೂರು ಸಾರಿ ಬರುತ್ತವೆ" ಎಂದು ಬೆಕ್ಕು, ಇಲಿಗೆ ಹೇಳಿತು. ಯಾಕೆ ಅಂದರೆ, "ಮತ್ತೆ ನಾನು ಹೆಸರಿಡುವ ಮಾವನಾಗಬೇಕಾಗಿದೆ. ಈಗ ಹುಟ್ಟಿದ ಮಗು ಕಪ್ಪಗಿದ್ದು, ಚಿಕ್ಕ, ಚಿಕ್ಕ ಬಿಳಿ ಉಗುರುಗಳನ್ನು ಪಡೆದಿದೆಯಂತೆ. ಅದರ ಮೈಮೇಲೆ ಒಂದೇ ಒಂದು ಬಿಳಿ ಕೂದಲು ಇಲ್ಲವಂತೆ. ಅಂತಹ ಮರಿ ಎರಡು ವರ್ಷಕ್ಕೊಮ್ಮೆ ಮಾತ್ರ ಹುಟ್ಟುವುದಂತೆ. ಆದ್ದರಿಂದ ಈಗಲೂ ನಾನು ಹೋಗಲೆ?" ಎಂದು ಬಕ್ಕು ಇಲಿಯನ್ನು ಕೇಳಿತು.

"ಮೇಲ್ಪದರ, ಮಧ್ಯಪದರ ಎನ್ನುವ ಹೆಸರುಗಳು ತುಂಬಾ ವಿಚಿತ್ರವಾಗಿದ್ದು , ನನ್ನಲ್ಲಿ ಏನೋ ಒಂದು ಬಗೆಯ ಸಂಶಯ ಬಂದಿದೆ" ಎಂದು ಇಲಿ ಉತ್ತರಿಸಿತು. "ಆಹಾ! ನೀನು ನಿನ್ನ ಬೂದಿ ಬಣ್ಣದ ಕೋಟು ಹಾಕಿಕೊಂಡು, ಉದ್ದ ಬಾಲ ಅಲ್ಲಾಡಿಸುತ್ತಾ ಕೂತಲ್ಲೆ ಕುಳಿತಿರುವೆಯಲ್ಲ. ಅದಕ್ಕೆ ಏನೇನೋ ಯೋಚನೆಗಳು ಬರುತ್ತವೆ. ನೀನು ಎಂದೆಂದೂ ಹೊರಗೆ ಹೋಗದೆ ಇರುವುದರಿಂದ ಹಾಗೆ ಆಗುತ್ತದೆ ಅಷ್ಟೆ" ಎಂದು ಬೆಕ್ಕು ಹೇಳಿತು.

ಬೆಕ್ಕು ಮನೆಯಲ್ಲಿ ಇಲ್ಲದಾಗ ಇಲಿ ಮನೆಯನ್ನು ನೀಟಾಗಿ ಇಡುವುದರಲ್ಲೇ ಸಮಯವನ್ನು ಕಳೆಯಿತು. ಅದೇ ವೇಳೆಗೆ ಆಸೆ ಬುರುಕ ಬೆಕ್ಕು ತುಪ್ಪದ ಗಡಿಗೆಯ ತುಪ್ಪವನ್ನೆಲ್ಲಾ ನೆಕ್ಕಿ ಖಾಲಿ ಮಾಡಿತು. ಊಟ ಆದ ಮೇಲೆ ವಿಶ್ರಾಂತಿಗಾಗಿ ಮಲಗಿ ನಿದ್ದೆ ಮಾಡಿತು. ಕತ್ತಲಾಗುತ್ತಿದ್ದಂತೆ ಹೊಟ್ಟೆ ತುಂಬಿಸಿಕೊಂಡು, ಆಯಾಸದಿಂದ ಬೆಕ್ಕು ಮನೆಗೆ ಮರಳಿತು. ಬೆಕ್ಕಿನ ಮೋಸವನ್ನರಿಯದ ಇಲಿ ಮತ್ತೆ "ಮೂರನೆ ಮಗುವನ್ನು ಏನಂತ ಕರೆದೆ?" ಎಂದು ಬೆಕ್ಕನ್ನು ಕೇಳಿತು. ಆಗ ಬೆಕ್ಕು "ಖಾಲಿ ಪದರ ಎಂದು ಹೆಸರಿಟ್ಟೆವು" ಎಂದು ಇಲಿಗೆ ಹೇಳಿತು. "ಖಾಲಿ ಪದರ! ನಿಜವಾಗಲೂ ಇದುವರೆಗೂ ಕೇಳರಿಯದ ವಿಚಿತ್ರ ಹೆಸರು. ಖಾಲಿ ಪದರ! ಏನು ಅದರ ಅರ್ಥ?" ಎಂದು ತನ್ನ ತಲೆ ಕೊಡವಿಕೊಂಡು, ಮಲಗಲು ಹಾಗೇ ಉರುಳಿಕೊಂಡಿತು. ಆಮೇಲೆ ಬೆಕ್ಕನ್ನು ಹೆಸರಿಡುವ ಕಾರ್ಯಕ್ಕೆ ಯಾರೂ ಕರೆಯಲೇ ಇಲ್ಲ. ಚಳಿಗಾಲ ಬಂದಿತು. ಹೊರಗೆ ಹೋಗಿ ಬೇರೆ ಬೇರೆ ಮನೆಗಳಿಂದ ತಿನ್ನಲು ವಸ್ತುಗಳನ್ನು ತರುವುದು ಆಗಲಿಲ್ಲ. ಆಗ ಇಲಿಗೆ ತಾವು ಚಳಿಗಾಲಕ್ಕಾಗಿ ಇಟ್ಟಿದ್ದ ತುಪ್ಪದ ಗಡಿಗೆಯ ನೆನಪಾಯಿತು. "ಬಾ ಬೆಕ್ಕಣ್ಣಾ, ನಾವು ತೆಗೆದಿಟ್ಟಿದ್ದೇವಲ್ಲ ತುಪ್ಪದ ಗಡಿಗೆ, ಅಲ್ಲಿಗೆ ಹೋಗೋಣ. ಈಗ, ಅದರ ರುಚಿ ನೋಡುವುದು ಚೆನ್ನಾಗಿರುತ್ತದೆ" ಎಂದು ಇಲಿ ಬೆಕ್ಕನ್ನು ಕರೆಯಿತು. "ಹೌದು, ನಿಜ. ನೀನು ನಿನ್ನ ನಾಲಿಗೆಯಿಂದ ಕಿಟಕಿಯನ್ನು ನೆಕ್ಕಿಕೊಂಡ ಹಾಗೆ ರುಚಿಯಾಗಿರುತ್ತದೆ" ಎಂದು ಬೆಕ್ಕು ಹೇಳಿತು.


ಅವರಿಬ್ಬರೂ ಚರ್ಚ್‌ಗೆ ಪ್ರಯಾಣ ಮಾಡಿದರು. ಚರ್ಚ್‌ನಲ್ಲಿ ಆ ಗಡಿಗೆ ಇದ್ದ ಕಡೆಯೇ ಇತ್ತು. ಆದರೆ

ಅದು ಖಾಲಿ ಆಗಿತ್ತು. "ಅಯ್ಯೋ! ಏನು ನಡೆದಿರಬಹುದು ಎಂದು ನನಗೆ ಈಗ ತಿಳಿಯಿತು. ಈಗ, ನೀನು ನಿಜಕ್ಕೂ ಅಪನಂಬಿಕೆಯ ಸ್ನೇಹಿತ ಎನ್ನುವುದು ಚೆನ್ನಾಗಿ ಗೊತ್ತಾಯಿತು. ನೀನು ಹೆಸರಿಡುವ ಕಾರ್ಯಕ್ಕೆ ಹೋಗುವ ನೆಪದಲ್ಲಿ ಎಲ್ಲವನ್ನೂ ತಿಂದಿರುವೆ. ಮೊದಲು ಮೇಲ್ಪದರ, ನಂತರ ಮಧ್ಯಪದರ ಕೊನೆಯಲ್ಲಿ ಖಾಲಿಪದರ" ಎಂದು ಇಲಿ ಕೂಗಿಕೊಂಡಿತು.

"ನೀನು ಸುಮ್ಮನೆ ಇರ್ತೀಯೋ, ಇಲ್ಲವೋ? ಒಂದು ಮಾತೂ ಆಡಬೇಡ. ಇಲ್ಲದಿದ್ದರೆ ನಿನ್ನನ್ನೇ ತಿಂದುಬಿಡುತ್ತೇನೆ" ಎಂದು ಬೆಕ್ಕು ಇಲಿಯನ್ನು ಹೆದರಿಸಿತು. ಇಲಿ, ಇನ್ನೇನು "ಖಾಲಿ ಪದರ" ಎಂದು ಹೇಳುವ ಹೊತ್ತಿಗೆ ಬೆಕ್ಕು ಇಲಿಯನ್ನು ಬಾಯಲ್ಲಿ ಕಚ್ಚಿ ಹಿಡಿದುಕೊಂಡು ನುಂಗೇ ಬಿಟ್ಟಿತು.

ಶತ್ರುಗಳನ್ನು ಸ್ನೇಹಿತರೆಂದು ನಂಬಿದವರ ಗತಿ ಹೀಗೆ ಆಗುತ್ತಿರಬೇಕು. ಇಂತಹ ಘಟನೆಗಳು ಪ್ರಪಂಚದಲ್ಲಿ ಪ್ರತಿ ದಿನ ನಡೆಯುತ್ತಿರುತ್ತವೆ. ಮೋಸ ಮಾಡುವವರು, ಮೋಸ ಹೋಗುವವರು ಇರುವವರೆಗೂ ಇವುಗಳು ನಡೆಯುತ್ತಲೇ ಇರುತ್ತವೆ

೯. ಮುದುಕ ರೈತ ಮತ್ತು ಪಾದ್ರಿ



ಒಂದಾನೊಂದು ಕಾಲದಲ್ಲಿ ಒಬ್ಬ ರೈತ ಮತ್ತು ಅವನ ಮಗಳು ಇದ್ದರು. ರೈತ ಮುದುಕನಾಗಿದ್ದನು. ಅವನ ಹೆಸರು ಹಿಲ್ಡೆ ಬ್ರಾಂಡ್. ಒಂದು ಸಾರಿ ರೈತನ ಮಗಳನ್ನು ಅವರು ವಾಸವಾಗಿದ್ದ ಊರಿನ ಪಾದ್ರಿ ನೋಡಿದನು. ಅವಳಿಂದ ತುಂಬ ಆಕರ್ಷಿತನಾದನು. ಅವಳ ಜೊತೆ ತಾನೊಬ್ಬನೆ ಬಹಳ ಹೊತ್ತು ಮಾತನಾಡಿದರೆ ತುಂಬ ಸಂತೋಷವಾಗಿರುತ್ತದೆ ಎಂದು ಯೋಚಿಸಿದನು. ಅದಕ್ಕೆ ರೈತನ ಮಗಳ ವಿರೋಧವೇನೂ ಇರಲಿಲ್ಲ. ಒಂದು ದಿನ ಪಾದ್ರಿ ಅವಳಿಗೆ "ಹುಡುಗಿ, ನಾನು ಹೇಳುವುದನ್ನು ಕೇಳಿಸಿಕೊ. ಇಡೀ ಒಂದು ದಿನವನ್ನು ನಮ್ಮಿಷ್ಟಕ್ಕೆ ನಾವೇ ಹೇಗೆ ಕಳೆಯಬಹುದು ಎಂದು ಹೇಳುತ್ತೇನೆ. ನೀನು ಈ ವಾರದಲ್ಲಿ ಒಂದು ದಿನ ಕಾಯಿಲೆ ಬಂದ ಹಾಗೆ ಮಲಗಿ ಬಿಡು. ನಿನಗೆ ತುಂಬ ಕಾಯಿಲೆ ಆಗಿದೆಯೆಂದು

ತಂದೆಗೆ ಹೇಳು. ನಿಟ್ಟುಸಿರು ಬಿಡುತ್ತಾ, ಮುಲುಗುತ್ತಾ ಇಡೀ ವಾರ ಹಾಸಿಗೆಯಲ್ಲೆ ಇದ್ದು ಬಿಡು. ನಾನು ಭಾನುವಾರ ಉಪದೇಶ ಮಾಡಲು ಬರುತ್ತೇನೆ. ಆಗ ನಾನು ನಿನ್ನ ತಂದೆಗೆ ಒಂದು ಸಲಹೆ ಕೊಡುತ್ತೇನೆ. ಯಾರ ಮನೆಯಲ್ಲಿಯಾದರೂ ಕಾಯಿಲೆ ಬಿದ್ದಿರುವ ಮಗು, ಗಂಡ, ಹೆಂಡತಿ, ತಂದೆ ಅಥವಾ ತಾಯಿ, ಸಹೋದರಿ ಅಥವಾ ಸಹೋದರ ಅಥವಾ ಸಂಬಂಧಿಕರಾದರೂ ಇದ್ದರೆ ಮನೆಯ ಯಜಮಾನ ಬೆಲ್‌ನಲ್ಲಿರುವ ಬೆಲ್ ಬೆಟ್ಟಕ್ಕೆ ಹತ್ತಿ ಬಂದರೆ ಮನೆಯಲ್ಲಿರುವವರ ಕಾಯಿಲೆ ವಾಸಿ ಆಗುತ್ತದೆ, ಎಂದು ಬೋಧಿಸುತ್ತೇನೆ" ಎಂದು ಪಾದ್ರಿ ಹೇಳಿದನು.

"ಓಹೋ ಹಾಗೇ ಆಗಲಿ, ನಿನಗಾಗಿ ನಾನು ಹಾಗೇ ಮಾಡುವೆ" ಎಂದು ಆ ಹುಡುಗಿ ಹೇಳಿದಳು. ಅವಳು ಹೇಳಿದಂತೆ ವಾರದ ಯಾವುದೋ ಒಂದು ದಿನ ಹಾಸಿಗೆ ಹಿಡಿದಳು. ಅವಳ ತಂದೆ ಅವಳ ಕಾಯಿಲೆಯನ್ನು ವಾಸಿಮಾಡಲು ಔಷಧಿಯನ್ನು ತಂದನು. ಆಗಲಿಲ್ಲ. ವಿವಿಧ ರೀತಿಯ ಉಪಚಾರ ಮಾಡಿದನು. ಕಾಯಿಲೆ ವಾಸಿ ಆಗಲಿಲ್ಲ. ಭಾನುವಾರದವರೆಗೂ ಅವಳು ಮಲಗಿದ್ದಲ್ಲೆ ದೊಡ್ಡ ದೊಡ್ಡ ಉಸಿರು ಬಿಡುತ್ತಾ, ಅಯ್ಯೋ, ಅಪ್ಪಾ ಅಂತ ಮುಲುಗುತ್ತಾ ಮಲಗಿಕೊಂಡೆ ಇದ್ದಳು. ಭಾನುವಾರ ಅವಳು ತನ್ನ ತಂದೆಗೆ "ನನಗೆ ತುಂಬಾ ಕಾಯಿಲೆ ಆಗಿದೆ. ನಾನು ಸತ್ತುಹೋಗುವೆ ಎಂದು ಅನಿಸುತ್ತಿದೆ. ನಾನು ಸಾಯುವ ಮುಂಚೆ ಒಂದೇ ಒಂದು ಬಾರಿ ಪಾದ್ರಿಯ ಉಪದೇಶ ಕೇಳಬೇಕು. ಈ ದಿನ ಅವರು ಏನು ಹೇಳುವರೋ ಅದನ್ನು ಆಲಿಸಬೇಕು" ಎಂದು ಹೇಳಿದಳು.

"ಅಯ್ಯೋ ಮಗು, ನೀನು ಮೇಲಕ್ಕೆ ಎದ್ದರೆ ಕಾಯಿಲೆ ಜಾಸ್ತಿ ಆಗಬಹುದು. ನೀನು ಏನೂ ಯೋಚನೆ ಮಾಡಬೇಡ. ನಾನೇ ಚರ್ಚ್‌ಗೆ ಹೋಗುತ್ತೇನೆ. ಉಪದೇಶವನ್ನು ಗಮನಕೊಟ್ಟು ಕೇಳುವೆ. ನಂತರ ಹಿಂದಿರುಗಿ ಬಂದು ಪಾದ್ರಿ ಹೇಳಿದ್ದನ್ನೆಲ್ಲವನ್ನು ನಿನಗೆ ಹೇಳುತ್ತೇನೆ" ಎಂದು ಆ ರೈತ ಹೇಳಿದನು.

"ಆಹಾ! ಬಹಳ ಒಳ್ಳೆಯದಾಯಿತು. ಆದರೆ ಮನಸ್ಸಿಟ್ಟು ಕೇಳಿಸಿಕೊ. ಅಲ್ಲಿ ಹೇಳಿದ್ದನ್ನು ಸ್ವಲ್ಪವೂ ಬಿಡದೆ ನನಗೆ ಹೇಳಬೇಕು" ಎಂದು ರೈತನ ಮಗಳು ಹೇಳಿದಳು.

ರೈತ ಚರ್ಚ್‌ಗೆ ಹೋದನು. ಅಲ್ಲಿ ಪಾದ್ರಿ ಪೂಜೆ ಮುಗಿಸಿದ ಮೇಲೆ ಉಪದೇಶದ ಪೀಠಕ್ಕೆ ಬಂದನು. ಅಲ್ಲಿ ತನ್ನ ಬೋಧನೆಯನ್ನು ಪ್ರಾರಂಭಿಸಿದನು. ತನ್ನ ಮಾತಿನ ಮಧ್ಯೆ "ಇಲ್ಲಿ ಯಾರಾದರೂ ರೋಗಿಯಾದ ಮಗು, ರೋಗಿಯಾದ ಗಂಡ ಅಥವಾ ಹೆಂಡತಿ, ರೋಗಿಯಾದ ಅಪ್ಪ ಅಥವಾ ಅಮ್ಮ , ರೋಗಿ ಅಣ್ಣ ಅಥವಾ ತಂಗಿ ಅಥವಾ ಸಂಬಂಧಿಕರಲ್ಲಿ ಯಾರಾದರೂ ರೋಗಿಗಳಿದ್ದವರು ಬೆಲ್‌ನ ಬೆಟ್ಟಕ್ಕೆ ಪವಿತ್ರ ಪಾದಯಾತ್ರೆ ಮಾಡಿದರೆ ಅಥವಾ ಕಾಯಿಲೆಯವರ ಪರವಾಗಿ ಯಾರಾದರೂ ಹೋಗಿ ಬಂದರೆ ಕಾಯಿಲೆ ಕೂಡಲೆ ವಾಸಿಯಾಗುತ್ತದೆ. ಬೆಟ್ಟ ಹತ್ತುವವರು ನಾನು ಕೊಡುವ ಶಿಲುಬೆಯನ್ನು ಮತ್ತು ಹಸಿರು ಎಲೆಗಳನ್ನು ಮರೆಯದೆ ತೆಗೆದುಕೊಂಡು ಹೋಗಬೇಕು. ಅವುಗಳನ್ನು ನಾನು ನನ್ನ ಬೋಧನೆಯ ಕರ್ತವ್ಯವನ್ನು ಮುಗಿಸಿದ ಮೇಲೆ ಕೊಡುತ್ತೇನೆ" ಎಂದು ಪಾದ್ರಿ ಹೇಳಿದನು.

ನಂತರ, ಪಾದ್ರಿ ಕೊಡುವ ಹಸಿರು ಎಲೆಗಳು ಮತ್ತು ಶಿಲುಬೆಯನ್ನು ತುಂಬ ಅವಸರದಿಂದ ಹೋಗಿ ಪಡೆದವನು ರೈತನೊಬ್ಬನೆ ಆಗಿದ್ದನು. ಅವುಗಳನ್ನು ಪಡೆದ ಕೂಡಲೆ ಮನೆಗೆ ಹಿಂದಿರುಗಿದನು. ಅವನು ಮನೆ

ಬಾಗಿಲ ಹತ್ತಿರ ಇರುವಾಗಲೇ ಮಗಳಿಗೆ ಹೋಗಿ ಹೇಳಿದನು. "ಬಾ ನನ್ನ ಮಗಳೇ, ನೀನು ಬೇಗನೆ ವಾಸಿ ಆಗುತ್ತೀಯ. ಪಾದ್ರಿ ಈ ದಿನ ಏನು ಹೇಳಿದನು ಎಂದರೆ, ಯಾರ ಮನೆಯಲ್ಲಿ ಕಾಯಿಲೆ ಮಗು, ಕಾಯಿಲೆ ಗಂಡ ಅಥವಾ ಹೆಂಡತಿ, ಕಾಯಿಲೆ ಅಪ್ಪ ಅಥವಾ ಅಮ್ಮ, ಕಾಯಿಲೆ ಅಣ್ಣ ಅಥವಾ ತಂಗಿ ಮತ್ತು ಸಂಬಂಧಿಕರು ಇದ್ದರೆ, ಅಂಥವರು ಬೆಲ್ ಪರ್ವತಕ್ಕೆ ಹೋದರೆ ಕೂಡಲೆ ವಾಸಿ ಆಗುತ್ತಾರಂತೆ. ಈಗ ನನ್ನ ಬಳಿ ಪಾದ್ರಿ ಕೊಟ್ಟಿರುವ ಶಿಲುಬೆ ಮತ್ತು ಹಸಿರು ಎಲೆಗಳಿವೆ. ನಾನು ಈ ಕೂಡಲೆ ಪ್ರಯಾಣ ಹೊರಡುತ್ತೇನೆ. ಆಗ ನೀನು ಚೇತರಿಸಿಕೊಳ್ಳುವೆ" ಎಂದು ರೈತ ಹೇಳಿದನು. ಅಷ್ಟೇ ಅಲ್ಲ, ಹಾಗೆ ಹೇಳುತ್ತ ಪ್ರಯಾಣಕ್ಕೆ ಹೊರಟೇ ಬಿಟ್ಟನು. ರೈತ ಹೋಗುತ್ತಿದ್ದಂತೆ ಈ ಕಡೆ ಅವನ ಮಗಳು ಮೇಲೆದ್ದಳು. ಅದೇ ವೇಳೆಗೆ ಪಾದ್ರಿ ಒಳಗೆ ಬಂದನು. ಅವರಿಬ್ಬರೂ ತಮ್ಮ ಮಾತುಗಳಲ್ಲಿ ಮುಳುಗಿದರು.

ಈ ಕಡೆ ರೈತ ಪರ್ವತಕ್ಕೆ ಪ್ರಯಾಣ ಹೊರಟನು. ಅವನು ಹೊರಟಿದ್ದ ವೇಗವನ್ನು ಗಮನದಲ್ಲಿಟ್ಟುಕೊಂಡರೆ ಅವನು ಬೆಲ್ ಬೆಟ್ಟವನ್ನು ತಲುಪಿರಬೇಕಾಗಿತ್ತು. ಆದರೆ ದಾರಿಯಲ್ಲಿ ಅವನಿಗೆ ಅವನ ಅಣ್ಣನ ಮಗ ಎದುರಾದನು. ಅವನು ಕೋಳಿ ಮೊಟ್ಟೆ ವ್ಯಾಪಾರಿ. ಅವನು ಆಗಷ್ಟೆ ಸಂತೆಯಲ್ಲಿ ತನ್ನ ಕೋಳಿಮೊಟ್ಟೆಗಳನ್ನು ಮಾರಿಕೊಂಡು ಹಿಂದಿರುಗಿದ್ದನು.

"ನೀನು ಯಾವ ಕಡೆ ಹೊರಟಿರುವೆ?" ಎಂದು ಆ ವ್ಯಾಪಾರಿ ಕೇಳಿದನು. ಅದಕ್ಕೆ ರೈತ, "ಬೆಲ್‌ಗೆ ಹೊರಟಿದ್ದೇನೆ. ನನ್ನ ಮಗಳಿಗೆ ಹುಷಾರಿಲ್ಲ. ನಿನ್ನೆ ಪಾದ್ರಿ ತನ್ನ ಉಪದೇಶವನ್ನು ಹೇಳಿದನು. ಯಾರ ಮನೆಯಲ್ಲಿ ರೋಗಿಯಾದ ಮಗು, ರೋಗಿಯಾದ ಗಂಡ ಅಥವಾ ಹೆಂಡತಿ, ರೋಗಿಯಾದ ಅಪ್ಪ ಅಥವಾ ಅಮ್ಮ, ರೋಗಿಯಾದ ಅಣ್ಣ ಅಥವಾ ತಂಗಿ, ರೋಗಿಯಾದ ಯಾವುದೇ ಸಂಬಂಧಿಕರಿದ್ದರೆ, ಅಂತಹವರ ಮನೆಯವರು ಪಾದ್ರಿ ಕೊಟ್ಟ ಹಸಿರು ಎಲೆಗಳು ಮತ್ತು ಶಿಲುಬೆಯನ್ನು ತೆಗೆದುಕೊಂಡು ಬೆಲ್ ಬೆಟ್ಟಕ್ಕೆ ಹೋಗಿ ಬಂದರೆ ಅವರವರ ಮನೆಯಲ್ಲಿರುವವರ ಕಾಯಿಲೆ ಗುಣವಾಗಿ ಕಾಯಿಲೆಯಿಂದ ಮುಕ್ತರಾಗುತ್ತಾರಂತೆ. ಇದೇ ನಾನು ಪಾದ್ರಿಯಿಂದ ತೆಗೆದುಕೊಂಡ ಹಸಿರು ಎಲೆಗಳು ಮತ್ತು ಶಿಲುಬೆ ಎಂದು ತೋರಿಸಿದನು. ನಾನು ನನ್ನ ಮಗಳಿಗಾಗಿ ಆದಷ್ಟು ಬೇಗನೆ ಬೆಟ್ಟಕ್ಕೆ ಹೋಗಬೇಕಾಗಿದೆ" ಎಂದು ಹೇಳಿದನು.

"ನಿಲ್ಲು, ಹೋಗಬೇಡ. ಪಾದ್ರಿಯ ಮಾತನ್ನು ಅಷ್ಟು ಸುಲಭವಾಗಿ ನಂಬಿರುವೆಯಲ್ಲ! ನಿನಗೆ ಹೇಗೆ ಗೊತ್ತು? ಇದೆಲ್ಲ ಪಾದ್ರಿ ನಿನ್ನ ಮಗಳ ಜೊತೆ ಆರಾಮಾಗಿ ಮಾತನಾಡಲು ಹೆಣೆದ ಕತೆ ಆಗಿರಬಹುದು. ನಿನ್ನನ್ನು ಮನೆಯಿಂದ ಹೊರಗೆ ಹಾಕಲು ಮಾಡಿರುವ ನಾಟಕವಿರಬಹುದು" ಎಂದು ರೈತನ ಅಣ್ಣನ ಮಗ ಹೇಳಿದನು.

"ದೇವರೇ ಕರುಣಿಸು! ನೀನು ಹೇಳಿದ್ದು ನಿಜವೊ, ಸುಳ್ಳೋ ಎಂದು ನೋಡಬೇಕು. ನೀನು ದಾರಿಯಲ್ಲಿ ಸಿಗದೆ ನಾನು ಬೆಟ್ಟಕ್ಕೆ ಹೋಗಿಬಿಟ್ಟಿದ್ದರೆ ಏನು ಗತಿ ಆಗುತ್ತಿತ್ತು! ಎಂದು ರೈತ ಹೇಳಿದನು. "ಒಳ್ಳೆಯದು, ನೀನೇ ಹೋಗಿ ನೋಡುವಿಯಂತೆ ನಡೆ. ನನ್ನ ಬಂಡಿಯಲ್ಲಿ ಹತ್ತಿ ಕುಳಿತುಕೊ. ನಾನು ನಿನ್ನನ್ನು ಮನೆಗೆ ಬಿಡುತ್ತೇನೆ. ಆಗ ನಿನಗೆ ನನ್ನ ಮಾತಿನ ಮೇಲೆ ನಂಬಿಕೆ ಬರುತ್ತದೆ" ಎಂದು ರೈತನ ಅಣ್ಣನ ಮಗ ಹೇಳಿದನು.

ಅವರಿಬ್ಬರು ಬಂಡಿಯಲ್ಲಿ ಹೊರಟರು. ಮನೆಯ ಹತ್ತಿರ ಬರುತ್ತಿದ್ದಂತೆ ತಮಾಷೆ ಮತ್ತು ಉಲ್ಲಾಸದ

ಮಾತುಗಳು ಜೋರಾಗಿ ಕೇಳಿಸಿದವು. ರೈತನ ಮಗಳು ಹೊಲದಲ್ಲಿಯ ಮತ್ತು ತೋಟದಲ್ಲಿಯ ಅತ್ಯುತ್ತಮವಾದ ತರಕಾರಿ ಮತ್ತು ಹಣ್ಣುಗಳನ್ನು ತಂದು ರುಚಿಯಾದ ವಿವಿಧ ಅಡಿಗೆ ಮಾಡಿದ್ದಳು. ಅವುಗಳನ್ನು ಸವಿಯಲು ಪಾದ್ರಿ ಬಂದಿದ್ದನು. ರೈತನ ಅಣ್ಣನ ಮಗ ಬಾಗಿಲು ಬಡಿದನು. ರೈತನ ಮಗಳು ಯಾರು ಎಂದು ವಿಚಾರಿಸಿದಳು. "ನಾನು" ಎಂದಷ್ಟೆ ಅವನು ಉತ್ತರಿಸಿದನು. "ನಾನು ಈಗಷ್ಟೆ ಸಂತೆಯಲ್ಲಿ ಮೊಟ್ಟೆಗಳನ್ನು ಮಾರಿ ಬಂದಿರುವೆನು. ರಾತ್ರಿ ಉಳಿದುಕೊಳ್ಳಲು ನನಗೆ ಜಾಗ ಬೇಕಾಗಿದೆ. ನಾನು ನಮ್ಮ ಮನೆಗೆ ಹೋಗಬೇಕು ಎಂದು ಇದ್ದೆನು. ಆದರೆ ರಾತ್ರಿ ಬಹಳ ಹೊತ್ತಾಗಿರುವುದರಿಂದ ತುಂಬ ಹೆದರಿಕೆ ಆಗುತ್ತಿದೆ. ಆದ್ದರಿಂದ ಇಲ್ಲಿಗೆ ಬಂದಿದ್ದೇನೆ" ಎಂದು ರೈತನ ಅಣ್ಣನ ಮಗ ಕೇಳಿದನು.

"ನೀನು ತುಂಬ ಕೆಟ್ಟ ಸಮಯದಲ್ಲಿ ಬಂದಿರುವೆ. ಆದರೆ, ನೀನೊಬ್ಬನೆ ಆಗಿರುವುದರಿಂದ ಒಳಗೆ ಬಾ. ಚಿಮಣಿ ಮೂಲೆಯಲ್ಲಿ ಮಲಗು" ಎಂದು ರೈತನ ಮಗಳು ಹೇಳಿದಳು.

ಮೊಟ್ಟೆ ವ್ಯಾಪಾರಿ ತನ್ನ ಬುಟ್ಟಿಯೊಂದಿಗೆ ಒಳಗೆ ಬಂದನು. ಆ ಬುಟ್ಟಿಯಲ್ಲಿ ರೈತ ಬಚ್ಚಿಟ್ಟುಕೊಂಡಿದ್ದನು. ಅವನು ಒಳಗೆ ಬಂದು ಚಿಮಣಿ ಮೂಲೆಯಲ್ಲಿ ಕುಳಿತುಕೊಂಡನು. ಆಗ ಪಾದ್ರಿ ಮತ್ತು ರೈತನ ಮಗಳು ತುಂಬ ಸಂತೋಷದಿಂದ ತಮಾಷೆಮಾಡುತ್ತ ಊಟ ಮಾಡತೊಡಗಿದರು. ಆಗ ಪಾದ್ರಿ ನೀನು ಒಂದು ಹಾಡು ಹೇಳು. ನೀನು ಚೆನ್ನಾಗಿ ಹಾಡಬಲ್ಲೆ ಎಂದು ನನಗೆ ಗೊತ್ತು" ಎಂದು ರೈತನ ಮಗಳಿಗೆ ಹೇಳಿದನು.

"ಒಳ್ಳೆದು! ನಾನು ಚಿಕ್ಕವಳಿರುವಾಗ ಹಾಡುತಿದ್ದೆ. ಈಗ ಎಲ್ಲ ಮರೆತು ಹೋಗಿದೆ. ಹಾಡುಗಳು ಯಾವುದೂ ನೆನಪಿನಲ್ಲಿ ಉಳಿದಿಲ್ಲ" ಎಂದು ರೈತನ ಮಗಳು ಹೇಳಿದಳು.

"ಪರವಾಗಿಲ್ಲ, ಪ್ರಯತ್ನ ಪಡು" ಎಂದು ಪಾದ್ರಿ ರೈತನ ಮಗಳ್ನು ಒತ್ತಾಯಿಸಿದನು. ರೈತನ ಮಗಳು ಪ್ರಾರಂಭಿಸಿದಳು:-

"ಓಹೊಹೊ, ನನ್ನ ತಂದೆಯನ್ನು ಕಳಿಸಿದೆನು
ವೇಲ್ಸನ ಎತ್ತರ ಬೆಟ್ಟಕ್ಕೆ",

ಆಗ ಪಾದ್ರಿ ಅವಳಿಗೆ ದನಿಗೂಡಿಸಿದನು -

ಅವನಿಗೆ ಬೇಕು ವರುಷದ ಮೇಲೆ ಇನ್ನೊಂದು ದಿನ
ಅಲ್ಲಿಗೆ ಹೋಗಿ ಮತ್ತೆ ಬರುವುದಕ್ಕೆ
ಸಂತಸದಿಂದ ನಾವು ಕಾಲ ಕಳೆಯುವೆವು."

ಅದೇ ವೇಳೆಗೆ ರೈತನ ಅಣ್ಣನ ಮಗ, ಹಾಡಿನ ಮಧ್ಯೆ ಪ್ರಶ್ನೆ ಮಾಡಿದನು,


"ಅದು ಕೇಳಿಸುತ್ತಿದೆಯಾ, ನನ್ನ ಪ್ರೀತಿಯ ಹಿಲ್ಡೆ ಬ್ರಾಂಡ್? ಇಷ್ಟು ಹತ್ತಿರ ಹತ್ತಿರ ಕೂತಿದ್ದು, ಯಾಕೆ ಸುಮ್ಮನಿರುವೆ?"

ಆಗ ತಕ್ಷಣವೇ ರೈತ ಉತ್ತರಿಸಿದನು -

ಓಹೊ! ಇನ್ನು ನಿಮ್ಮ ಹಾಡನ್ನು ಮುಂ ಒುವರಿಸಿದರೆ, ನಾನು ತಾಳಲಾರೆ.
ಈ ಬುಟ್ಟಿಯಿಂದ ಹೊರಗೆ ಬಂದು, ನಿಮ್ಮನ್ನು ನೋಡಿಕೊಳ್ಳುವೆ, ಬುದ್ಧಿ ಕಲಿಸುವೆ."

ಹೀಗೆ ಹೇಳುತ್ತಾ, ರೈತ ಬುಟ್ಟಿಯಿಂದ ಹೊರಗೆ ಹಾರಿ ಬಂದನು. ಪಾದ್ರಿಯನ್ನು ಮನೆಯಿಂದ ಹೊರಗೆ ಹಾಕಿದನು.

೧೦. ರಂಪಲ್ ಸ್ಟಿಲ್ಟ್‌ಸ್ಕಿನ್



ಬಹಳ ವರ್ಷಗಳ ಹಿಂದೆ ಒಬ್ಬ ಬಡ ಗಿರಣಿಯವನಿದ್ದನು. ಅವನಿಗೆ ಒಬ್ಬ ಮಗಳಿದ್ದಳು. ಅವಳು ತುಂಬ ಸುಂದರವಾಗಿದ್ದಳು. ಅವನು ಒಂದು ದಿನ ರಾಜನ ಹತ್ತಿರ ಮಾತನಾಡಬೇಕೆಂದು ಹೋದನು. ರಾಜನನ್ನು ಸಂತೋಷಪಡಿಸಬೇಕು ಎಂದು ಯೋಚಿಸಿ ತನಗೊಬ್ಬ ಮಗಳಿದ್ದಾಳೆ, ಅವಳು ಹುಲ್ಲನ್ನು ಬಂಗಾರದ ಎಳೆಗಳನ್ನಾಗಿ ಮಾಡಿ ನೇಯುತ್ತಾಳೆ ಎಂದು ಹೇಳಿದನು. ಆ ರಾಜನಿಗೆ ಬಂಗಾರದ ಮೇಲೆ ಬಹಳ ಆಸೆ ಇತ್ತು. "ನಿನ್ನ ಮಗಳು ಅಷ್ಟೊಂದು ಜಾಣೆ ಆಗಿದ್ದರೆ ನಾಳೆ ಬೆಳಿಗ್ಗೆ ಅವಳನ್ನು ಅರಮನೆಗೆ ಕರೆದುಕೊಂಡು ಬಾ, ಅವಳನ್ನು ಪರೀಕ್ಷೆ ಮಾಡುತ್ತೇನೆ" ಎಂದು ರಾಜ ಗಿರಣಿಯವನಿಗೆ ಹೇಳಿದನು.

ಅವಳು ಬಂದ ತಕ್ಷಣವೇ ರಾಜ ಅವಳನ್ನು ಒಂದು ಹುಲ್ಲು ತುಂಬಿದ ಕೋಣೆಗೆ ಕರೆದುಕೊಂಡು ಹೋದನು. ಅವಳಿಗೆ ಒಂದು ಚಕ್ರ ಮತ್ತು ದಾರ ಸುತ್ತುವ ರೀಲನ್ನು ಕೊಟ್ಟು "ಈಗಲೇ ಕೆಲಸ ಪ್ರಾರಂಭಿಸು. ನಾಳೆ ಬೆಳಗಿನ ಹೊತ್ತಿಗೆ ಈ ಹುಲ್ಲನ್ನು ಬಂಗಾರದ ದಾರವಾಗಿ ನೇಯದಿದ್ದರೆ ನಿನ್ನನ್ನು ಕೊಲ್ಲಿಸುತ್ತೇನೆ" ಎಂದನು. ಆ ನಂತರ ಅವಳನ್ನು ಆ ಕೋಣೆಯಲ್ಲಿ ಕೂಡಿಹಾಕಿದನು.

ಬಹಳ ಹೊತ್ತು ಅವಳು ಹಾಗೆ ಕುಳಿತಿದ್ದಳು. ತನ್ನ ಜೀವವನ್ನು ಹೇಗೆ ರಕ್ಷಿಸಿಕೊಳ್ಳಬೇಕು ಎಂದು ಯೋಚಿಸುತ್ತಿದ್ದಳು. ಅವಳಿಗೆ ಹುಲ್ಲನ್ನು ಬಂಗಾರದ ದಾರವಾಗಿ ಮಾಡುವ ಕಲೆ ನಿಜಕ್ಕೂ ಗೊತ್ತಿರಲಿಲ್ಲ. ಅವಳು ತುಂಬ ಕಳವಳಗೊಂಡಳು. ಕೊನೆಗೆ ಅಳಲಿಕ್ಕೆ ಶುರುಮಾಡಿದಳು. ಆಗ ಇದ್ದಕ್ಕಿದ್ದಂತೆ ಅವಳ

ಕೋಣೆಯ ಬಾಗಿಲು ತೆಗೆದುಕೊಂಡಿತು. ಒಬ್ಬ ಗಿಡ್ಡ ಮನುಷ್ಯ ಒಳಗೆ ಬಂದನು. "ಸುಂದರ ಹುಡುಗಿ, ಯಾಕೆ ಅಷ್ಟೊಂದು ಬೇಜಾರಿನಿಂದ ಅಳುತ್ತಿರುವೆ?" ಎಂದು ಅವಳನ್ನು ಕೇಳಿದನು. "ಅಯ್ಯೋ! ಏನು ಹೇಳಲಿ, ಹುಲ್ಲನ್ನು ಬಂಗಾರದ ದಾರವನ್ನಾಗಿ ನೇಯಬೇಕಂತೆ. ಅದನ್ನು ಹೇಗೆ ಮಾಡಬೇಕೆಂದು ನನಗೆ ಗೊತ್ತಿಲ್ಲ" ಎಂದು ಅವಳು ಆ ಗಿಡ್ಡಮನುಷ್ಯನಿಗೆ ಹೇಳಿದಳು. ಆಗ ಗಿಡ್ಡಣ್ಣ, "ನಾನು ನಿನಗಾಗಿ ಇದನ್ನು ನೇಯ್ದುಕೊಟ್ಟರೆ ನೀನು ನನಗೇನು ಕೊಡುವೆ?" ಎಂದು ಕೇಳಿದನು. ಅದಕ್ಕೆ ಆ ಹುಡುಗಿ ತನ್ನ ಕೊರಳ ಹಾರವನ್ನು ಕೊಡುವುದಾಗಿ ಹೇಳಿದಳು.

ಗಿಡ್ಡಣ್ಣ ಸರವನ್ನು ತೆಗೆದುಕೊಂಡನು. ಚಕ್ರದ ಮುಂದೆ ಕುಳಿತನು. ರಾತ್ರಿಯೆಲ್ಲ ಹುಲ್ಲನ್ನು ನೇಯ್ದು ಬಂಗಾರದ ಎಳೆಗಳಿಂದ ಕೋಣೆಯನ್ನು ತುಂಬಿಸಿದನು. ಬೆಳಗಿನ ಜಾವ ರಾಜ ಬಂದನು. ಬಂಗಾರವನ್ನು ನೋಡಿ ತುಂಬ ಆಶ್ಚರ್ಯಪಟ್ಟನು. ಅಷ್ಟೊಂದು ಬಂಗಾರದಿಂದ ಅವನ ಸಂತೋಷ ಜಾಸ್ತಿ ಆಯಿತು. ಆದರೆ ಅದರಿಂದ ಅವನ ಆಸೆ ಕಡಿಮೆ ಆಗಲಿಲ್ಲ. ಅವನು ಆ ಹುಡುಗಿಯನ್ನು ಇನ್ನೊಂದು ಕೋಣೆಗೆ ಕರೆದುಕೊಂಡು ಹೋದನು. ಅದು ಮೊದಲಿನ ಕೋಣೆಗಿಂತ ದೊಡ್ಡದಿತ್ತು. ಅದರ ತುಂಬ ಹುಲ್ಲಿತ್ತು. ಅದನ್ನು ತೋರಿಸಿ ಅವಳ ಜೀವ ಉಳಿಯಬೇಕಾದರೆ ಆ ಹುಲ್ಲನ್ನು ಬಂಗಾರದ ದಾರವಾಗಿ ನೇಯಬೇಕು ಎಂದು ಹೇಳಿದನು. ಅವಳಿಗೆ ಮುಂದೇನು ಮಾಡಬೇಕೆಂದು ತಿಳಿಯದೆ ಸುಮ್ಮನೆ ಕುಳಿತಳು. ತನ್ನ ಪರಿಸ್ಥಿತಿಗೆ ತಾನೇ ಮರುಕಪಟ್ಟುಕೊಂಡು ಅಳತೊಡಗಿದಳು. ಆಗ ಅದೇ ಗಿಡ್ಡಣ್ಣ ಬಾಗಿಲು ತೆಗೆದುಕೊಂಡು ಬಂದನು. ಅವಳ ದುಃಖಕ್ಕೆ ಕಾರಣ ಕೇಳಿದನು. ತಾನು ಹುಲ್ಲನ್ನು ಬಂಗಾರದ ದಾರವಾಗಿ ಮಾಡಿಕೊಟ್ಟರೆ ಅವಳು ಏನು ಕೊಡುತ್ತಾಳೆ ಎಂದು ಕೇಳಿದನು. ಅದಕ್ಕೆ ಆ ಹುಡುಗಿ ಅವನ ಸಹಾಯಕ್ಕೆ ತನ್ನ ಉಂಗುರವನ್ನು ಕೊಡುವುದಾಗಿ ಒಪ್ಪಿಕೊಂಡಳು. ಆ ಗಿಡ್ಡಣ್ಣ ಅವಳು ಕೊಟ್ಟ ಉಂಗುರವನ್ನು ತೆಗೆದುಕೊಂಡು ನೇಯಲು ಕುಳಿತುಕೊಂಡನು. ಬೆಳಕು ಹರಿಯುವ ಹೊತ್ತಿಗೆ ಹುಲ್ಲೆಲ್ಲ ಹೊಳೆಯುವ ಬಂಗಾರವಾಗಿತ್ತು. ರಾಜ ಮತ್ತೆ ಬಂದನು. ಆ ಬಂಗಾರವನ್ನು ನೋಡಿ ಅವನ ಸಂತೋಷಕ್ಕೆ ಕೊನೆಯೇ ಇಲ್ಲದ ಹಾಗೆ ಆಯಿತು. ಆದರೂ ಅವನಿಗೆ ತೃಪ್ತಿ ಆಗಲಿಲ್ಲ. ಮತ್ತೆ ಆ ಹುಡುಗಿಯನ್ನು ಮೊದಲಿನ ಎರಡು ಕೋಣೆಗಳಿಗಿಂತ ದೊಡ್ಡ ಕೋಣೆಗೆ ಕರೆದುಕೊಂಡು ಹೋದನು. ಅದು ಕೂಡ ಹುಲ್ಲಿನಿಂದ ತುಂಬಿತ್ತು. ರಾಜ, "ಇದನ್ನು ನೀನು ಈ ರಾತ್ರಿಯೊಳಗೆ ಬಂಗಾರದ ದಾರವನ್ನಾಗಿ ನೇಯಬೇಕು. ಹಾಗೆ ಮಾಡಿದರೆ, ನೀನು ನನ್ನ ಹೆಂಡತಿ ಆಗಬಹುದು" ಎಂದು ಆ ಹುಡುಗಿಗೆ ಹೇಳಿದನು.

ಆ ಹುಡುಗಿ ಮತ್ತೆ ಕೋಣೆಯೊಳಗೆ ಬಂದಿ ಆದಳು. ಮತ್ತೆ ಆ ಗಿಡ್ಡಣ್ಣ ಬಂದನು. ಮೂರನೇ ಬಾರಿ, ಅವನು ಮಾಡುವ ಸಹಾಯಕ್ಕೆ ಅವಳು ಏನು ಕೊಡುತ್ತಾಳೆ ಎಂದು ಕೇಳಿದನು. ಅದಕ್ಕೆ ಅವಳು "ನಿನಗೆ ಕೊಡಲು ನನ್ನಲ್ಲಿ ಏನೂ ಉಳಿದಿಲ್ಲ" ಎಂದು ಉತ್ತರಿಸಿದಳು. ಹಾಗಾದರೆ, "ನೀನು ರಾಣಿ ಆದ ಮೇಲೆ ನಿನಗೆ ಹುಟ್ಟುವ ಮೊದಲ ಮಗುವನ್ನು ನನಗೆ ಕೊಡಬೇಕು" ಎಂದು ಗಿಡ್ಡಣ್ಣ ಕೇಳಿದನು. ಆಗ ಗಿರಣಿಯವನ ಮಗಳು, "ಹಾಗೆ ಆಗುತ್ತೋ ಇಲ್ಲವೊ ಯಾರಿಗೆ ಗೊತ್ತು?" ಎಂದು ಯೋಚಿಸಿದಳು. ತಾನು ಪಡೆಯುವ ಸಹಾಯಕ್ಕೆ ತಾನೇ ತೊಂದರೆ ತಂದುಕೊಳ್ಳುವಂತೆ ಅವನಿಗೆ ತನ್ನ ಮಗುವನ್ನು ಕೊಡುತ್ತೇನೆಂದು ಪ್ರಮಾಣ ಮಾಡಿದಳು. ಗಿಡ್ಡಣ್ಣ ಕೂಡಲೆ ಹುಲ್ಲನ್ನು ಬಂಗಾರದ ದಾರವಾಗಿ ಮಾಡಿಕೊಂಡು ನೇಯತೊಡಗಿದನು.

ಬೆಳಕು ಹರಿಯುತ್ತಲೇ ರಾಜ ಬಂದನು. ಅವನು ಬಯಸಿದ್ದು ಈಡೇರಿರುವುದನ್ನು ನೋಡಿದನು. ಗಿರಣಿಯವನ ಮಗಳನ್ನು ಮದುವೆ ಆಗಿಬಿಟ್ಟನು. ಹೀಗೆ ಆ ಹುಡುಗಿ ರಾಣಿ ಆದಳು.

ಅವರ ಮದುವೆ ಆಗಿ ಒಂದು ವರ್ಷ ಆಯಿತು. ಅವಳು ಆ ಗಿಡ್ಡಣ್ಣನ ಬಗ್ಗೆ ಯೋಚಿಸುವುದನ್ನು ಮರತೇಬಿಟ್ಟಿದ್ದಳು. ಅವಳಿಗೆ ಒಂದು ಸುಂದರ ಮಗು ಹುಟ್ಟಿತು. ಅದು ಹುಟ್ಟಿದ ಸ್ವಲ್ಪ ಸಮಯದಲ್ಲೇ ಆ ಗಿಡ್ಡಣ್ಣ ಬಂದನು. ಅವಳು ಕೊಟ್ಟಿದ್ದ ಮಾತನ್ನು ನೆನಪಿಸಿದನು. ಆಗ ರಾಣಿ ತುಂಬ ಹೆದರಿಕೊಂಡಳು. ಮಗುವಿನ ಬದಲು ರಾಜ್ಯದ ಸಂಪತ್ತನ್ನೆಲ್ಲ ಕೊಡುವುದಾಗಿ ಹೇಳಿದಳು. ಆದರೆ ಗಿಡ್ಡಣ್ಣ ಅದಕ್ಕೆ ಒಪ್ಪಿಕೊಳ್ಳಲಿಲ್ಲ. "ಪ್ರಪಂಚದ ಎಲ್ಲ ಸಂಪತ್ತಿಗಿಂತ ಜೀವಂತವಾಗಿರುವ ಮಗು ನನಗೆ ಹೆಚ್ಚು ಪ್ರಿಯವಾಗಿದೆ" ಎಂದು ಹೇಳಿದನು.

ರಾಣಿ ಜೋರಾಗಿ ಅಳತೊಡಗಿದಳು. ಅವಳ ಅಳು ಗಿಡ್ಡಣ್ಣನ ಹೃದಯವನ್ನು ಕರಗಿಸಿತು. "ನಿನಗೆ ಮೂರು ದಿನ ಅವಕಾಶ ಕೊಡುತ್ತೇನೆ. ನೀನು ಅಷ್ಟರಲ್ಲಿ ನನ್ನ ಹೆಸರೇನು ಎಂದು ಕಂಡುಹಿಡಿದರೆ ನಿನ್ನ ಮಗುವನ್ನು ನಿನಗೇ ಬಿಡುತ್ತೇನೆ" ಎಂದು ಹೇಳಿದನು.

ರಾಣಿ ರಾತ್ರಿಯೆಲ್ಲ ತನ್ನ ತಲೆಯನ್ನು ಕೆಡಿಸಿಕೊಂಡು ತನಗೆ ತಿಳಿದಿರುವ ಹೆಸರುಗಳನ್ನೆಲ್ಲ ಪಟ್ಟಿ ಮಾಡಿದಳು. ಸುದ್ದಿಗಾರರನ್ನು ಎಲ್ಲ ಕಡೆ ಕಳಿಸಿ ಎಲ್ಲಾ ಹೊಸ ಹೆಸರುಗಳನ್ನು ಸಂಗ್ರಹಿಸಿಕೊಂಡು ಬರುವಂತೆ ಹೇಳಿದಳು. ಮಾರನೇ ದಿನ ಗಿಡ್ಡಣ್ಣ ಬಂದನು. ರಾಣಿ ತನ್ನ ಪಟ್ಟಿಯಿಂದ ಹೆಸರುಗಳನ್ನು ಹೇಳಲು ಶುರು ಮಾಡಿದಳು. "ಕ್ಯಾಸ್ಪರ್, ಮೆಲ್‌ಕಾಯರ್, ಬಾಲ್ತಾಸಾರ್" ಎಂದು ತನಗೆ ಗೊತ್ತಿದ್ದ ಎಲ್ಲ ವಿಚಿತ್ರ ಹೆಸರುಗಳನ್ನು ತಿಳಿಸಿದಳು. ಅವಳು ಹೇಳಿದ ಪ್ರತಿಯೊಂದು ಹೆಸರಿಗೂ "ಅದು ನನ್ನ ಹೆಸರಲ್ಲ" ಎಂದು ಹೇಳಿದನು. ಎರಡನೇ ದಿನ ರಾಣಿ ಎಲ್ಲ ಜನರನ್ನೂ ವಿಚಾರಿಸಿ, ಜನಪ್ರಿಯವಲ್ಲದ ವಿಚಿತ್ರ ಹೆಸರುಗಳನ್ನು ಕೇಳಿ ತಿಳಿದುಕೊಂಡಳು. ಗಿಡ್ಡಣ್ಣ ಬಂದಾಗ, "ದನದ-ಕುಕ್ಕೆಗಳು, ಕುರಿಯ-ಮೂಳೆಗಳು, ತಿಮಿಂಗಿಲದ -ಮೂಳೆ" ಎಂದು ಒಂದೊಂದಾಗಿ ಹೇಳಿದಳು. ಅವಳು ಹೇಳಿದ್ದಕ್ಕೆಲ್ಲ, "ಅವನು ಅದು ನನ್ನ ಹೆಸರಲ್ಲ" ಎಂದು ಉತ್ತರಿಸಿದನು. ಮೂರನೇ ದಿನ ಸುದ್ದಿಗಾರನೊಬ್ಬ ಹಿಂದಿರುಗಿದನು. "ನನಗೆ ಯಾವ ಹೊಸ ಹೆಸರು ಸಿಗಲಿಲ್ಲ. ಆದರೆ ನಾನು ಕಾಡಿನ ಅಂಚಿನಲ್ಲಿರುವ ಪರ್ವತದ ತಪ್ಪಲಿಗೆ ಬಂದಾಗ ನರಿಗಳು ಮತ್ತು ಮೊಲಗಳು ಪರಸ್ಪರ ಶುಭರಾತ್ರಿಯನ್ನು ಹೇಳಿಕೊಂಡವು. ಅಲ್ಲಿ ನಾನು ಒಂದು ಪುಟ್ಟ ಮನೆಯನ್ನು ನೋಡಿದೆನು. ಮನೆ ಮುಂದೆ ಬೆಂಕಿ ಉರಿಯುತ್ತಿತ್ತು. ಬೆಂಕಿಯ ಸುತ್ತ ಒಬ್ಬ ಗಿಡ್ಡ ಮನುಷ್ಯ ಒಂದೇ ಕಾಲಿನಲ್ಲಿ ವಿಚಿತ್ರವಾಗಿ ಕುಣಿಯುತ್ತಾ ಹಾಡಿಕೊಳ್ಳುತ್ತಿದ್ದನು —

"ಈ ದಿನ, ನಾನು ಸುಲಿಯುವೆ, ನಂತರ ಬೇಯಿಸುವೆ,
ನಾಳೆ ರಾಣಿಯ ಮಗುವನ್ನು ಪಡೆಯುವೆ,
ಆಹಾ! ಇದು ಎಷ್ಟು ಪ್ರಸಿದ್ಧಿಯಾಗಿದೆ ಅಂದರೆ ಯಾರಿಗೂ ಗೊತ್ತಿಲ್ಲ
ನನ್ನ ಹೆಸರು ರಂಪಲ್‌ಸ್ಟಿಲ್ಟ್‌ಸ್ಕಿನ್ ಎಂದು."

ಸುದ್ದಿಗಾರನ ಈ ಮಾತುಗಳನ್ನು ಕೇಳಿಸಿಕೊಂಡು, ರಾಣಿ ತುಂಬ ಖುಷಿಯಾದಳು. ಯಾಕೆಂದರೆ,

ಅವಳಿಗೆ ಆ ಗಿಡ್ಡನ ಹೆಸರು ತಿಳಿಯಿತು. ಆಗ ಸ್ವಲ್ಪ ಸಮಯದಲ್ಲಿ ಗಿಡ್ಡಣ್ಣ ಬಂದು, "ಈಗಲಾದರೂ ನನ್ನ ಹೆಸರು ಹೇಳು ನೋಡೋಣ" ಎಂದನು. ಮೊದಲು "ನಿನ್ನನ್ನು ಕಾನ್‌ರಾಡೇ" ಎಂದು ಕರೆಯುವರು ಅಲ್ಲವೆ?" ಎಂದು ಕೇಳಿದಳು. ನಂತರ, "ನಿನ್ನನ್ನು ಹಾಲ್ ಎನ್ನುತ್ತಾರಲ್ಲವೆ?" ಎಂದಳು. ಅವನು ಎಲ್ಲದಕ್ಕೂ ತನ್ನ ಹೆಸರಲ್ಲ ಎಂದು ಹೇಳಿದನು. ಅವಳು ಕೊನೆಗೆ "ನಿನ್ನ ಹೆಸರು ರಂಪಲ್‌ಸ್ಟಿಲ್ಟ್‌ಸ್ಕಿನ್" ಆಗಿರಬೇಕು ಎಂದಳು.

"ಯಾರೊ ಒಬ್ಬ ಮಾಟಗಾತಿ ನಿನಗೆ ನನ್ನ ಹೆಸರು ಹೇಳಿರಬೇಕು" ಎಂದು ಮತ್ತೆ ಮತ್ತೆ ಕಿರುಚಿಕೊಂಡನು. ಸಿಟ್ಟಿನಿಂದ ತನ್ನ ಬಲಗಾಲಿನಿಂದ ನೆಲವನ್ನು ಜೋರಾಗಿ ಅಪ್ಪಳಿಸಿದನು. ಆಗ ಅವನ ಕಾಲು ನೆಲದೊಳಗೆ ಸಿಕ್ಕಿಕೊಂಡಿತು. ಅದನ್ನು ಅವನು ಹೊರಗೆ ಎಳೆದುಕೊಳ್ಳಲು ಆಗಲಿಲ್ಲ. ಕೊನೆಗೆ ಅವನು ಎಡಗಾಲನ್ನು ಹಿಡಿದುಕೊಂಡು ಬಲಗಾಲನ್ನು ಶಕ್ತಿ ಬಿಟ್ಟು ಎಳೆದನು. ಆಗ ನೆಲದಲ್ಲಿ ಹೂತುಹೋಗಿದ್ದ ಕಾಲು ಹೊರಗೆ ಬಂದಿತು. ಅವನು ದೊಡ್ಡ ದೊಡ್ಡ ಹೆಜ್ಜೆ ಹಾಕುತ್ತಾ, ಭಯಂಕರವಾಗಿ ಕಿರುಚುತ್ತಾ ಹೊರಟು ಹೋದನು. ಅಂದಿನಿಂದ ಇಂದಿನವರೆಗೆ ರಾಣಿ ತನಗೆ ತೊಂದರೆಕೊಡುತ್ತಿದ್ದ ಆ ಗಿಡ್ಡಣ್ಣನ ಬಗ್ಗೆ ಮತ್ತೆ ಕೇಳಲೂ ಇಲ್ಲವಂತೆ, ಅವನನ್ನು ನೋಡಲೂ ಇಲ್ಲವಂತೆ.

೧೧. ಏಳು ಜನ ಸ್ವಾಬಿಯನ್ನರು



ಒಂದಾನೊಂದು ಕಾಲದಲ್ಲಿ ಏಳು ಜನ ಸ್ವಾಬಿಯನ್ನರು ಇದ್ದರು. ಅವರು ಸ್ವಾಬಿಯ ದೇಶದವರಾಗಿದ್ದರು. ಅವರು ಯಾವಾಗಲೂ ಒಟ್ಟಿಗೇ ಇರುತ್ತಿದ್ದರು. ಮೊದಲನೆಯವನ ಹೆಸರು ಶುಲ್ಜ, ಎರಡನೆಯವನು ಜಾಕಿ, ಮೂರನೆಯವನು ಮರ್ಲಿ, ನಾಲ್ಕನೆಯವನು ಏಟ್ಲಿ . ಹೀಗೆ ಅವರೆಲ್ಲ ಯಾರೂ ಮಾಡಲಾಗದ ಶೂರತನದ ದೊಡ್ಡ ದೊಡ್ಡ ಕೆಲಸಗಳನ್ನು ಮಾಡಬೇಕು ಎಂದುಕೊಂಡರು. ಸಾಹಸ ಕಾರ್ಯದಲ್ಲಿ ತಮ್ಮ ರಕ್ಷಣೆಗೆ ಇರಲಿ ಎಂದು ಒಂದು ಬಲವಾದ ಭರ್ಜಿಯನ್ನು ಜೊತೆಯಲ್ಲಿ ತೆಗೆದುಕೊಂಡರು. ಆ ಕೋಲನ್ನು ಏಳೂ ಜನ

ಹಿಡಿದುಕೊಂಡರು. ಅದರ ಮುಂಭಾಗವನ್ನು ಅತಿ ಧೈರ್ಯವಂತನೂ, ಸಾಹಸಿಯೂ ಆದ ಶುಲ್ಪ ಹಿಡಿದುಕೊಂಡಿದ್ದನು. ಅದರ ಕೊನೆಯ ತುದಿಯನ್ನು ವಿಟ್ಲಿ ಹಿಡಿದುಕೊಂಡಿದ್ದನು. ಹೀಗೆ ಎಲ್ಲರೂ ಒಬ್ಬರ ಹಿಂದೆ ಒಬ್ಬರಂತೆ ಸಾಲಾಗಿ ಕೋಲು ಹಿಡಿದುಕೊಂಡು ಹೊರಟರು.

ಹೀಗೆ ಅವರು ಜುಲೈ ತಿಂಗಳಲ್ಲಿ ತುಂಬಾ ದೂರ ನಡೆದು ಒಂದು ಹಳ್ಳಿಯನ್ನು ತಲುಪಿದರು. ಆ ರಾತ್ರಿಯನ್ನು ಹಳ್ಳಿಯಲ್ಲೆ ಕಳೆಯಬೇಕೆಂದು ತೀರ್ಮಾನಿಸಿದರು. ಅವರು ಇನ್ನೇನು ಒಂದು ದೊಡ್ಡ ಹುಲ್ಲುಗಾವಲು ಪ್ರದೇಶವನ್ನು ದಾಟಬೇಕು ಎನ್ನುವಷ್ಟರಲ್ಲಿ ಒಂದು ಪೊದೆಯ ಹಿಂಬದಿಯಿಂದ ದೊಡ್ಡ ಜೇನುನೊಣ ಹಾರಿಕೊಂಡು ಅವರ ಕಡೆಯೇ ಬಂದಿತು. ಅವರ ಮೇಲೆ ಯುದ್ಧ ಮಾಡುವ ರೀತಿ ಹಾರಾಡಿತು. ಶುಲ್ಪನಿಗೆ ತುಂಬ ಹೆದರಿಕೆ ಆಗಿ ಕೈಯಲ್ಲಿನ ಕೋಲನ್ನು ಬಿಟ್ಟುಬಿಟ್ಟನು. ಭಯದಿಂದ ಅವನ ಇಡೀ ಮೈಯೆಲ್ಲ ಬೆವತಿತು. "ನನಗೆ ಕಹಳೆ ಊದಿದ ಹಾಗೆ ಕೇಳಿಸುತ್ತಿದೆ" ಎಂದು ಶುಲ್ಪ ತನ್ನ ಸ್ನೇಹಿತರಿಗೆ ಹೇಳಿದನು. ಅವನ ಸಾಲಿನಲ್ಲಿ ಕೊನೆಯವನಾದ ವಿಟ್ಲಿಯ ಮುಂದೆ ನಿಂತಿದ್ದವನು ಕೂಗಿಕೊಂಡನು, "ನನ್ನ ಮೂಗಿನೊಳಗೆ ಏನೋ ಹೊಕ್ಕಂತಾಯಿತು. ಇಲ್ಲೇ ಹತ್ತಿರದಲ್ಲಿರುವ ಹಾಗಿದೆ. ನಿಜವಾಗಿಯೂ ನನಗೆ ಗಂಧಕ ಮತ್ತು ಮದ್ದಿನ ವಾಸನೆ ಬರುತ್ತಿದೆ" ಎಂದನು. ಅವನ ಮಾತುಗಳನ್ನು ಕೇಳಿಸಿಕೊಂಡು ಶುಲ್ಪ, ಅಪಾಯದಿಂದ ತಪ್ಪಿಸಿಕೊಳ್ಳಲು ಒಂದು ಹುಲ್ಲು ಬಣವಿಯ ಮೇಲೆ ಮೂರು ಪಲ್ಟಿ ಹೊಡೆದನು. ಅಲ್ಲಿ ಒಂದು ಮಚ್ಚನ್ನು ಹುಲ್ಲು ಕತ್ತರಿಸುವ ರೈತರು ಬಿಟ್ಟು ಹೋಗಿದ್ದರು. ಅದು ಅವನ ಹಣೆಗೆ ಬಲವಾಗಿ ಬಡಿಯಿತು. "ಅಯ್ಯೊ, ಅಯ್ಯೊ, ನೋವಾಯಿತು, ಕಾಪಾಡಿ. ನಾನು ಕಾಲಿಗೆ ಬಿದ್ದು ಶರಣಾಗುತ್ತೇನೆ. ಬೇಕಾದರೆ ನನ್ನನ್ನು ಸೆರೆ ಹಿಡಿಯಿರಿ" ಎಂದು ಅಳುವ ಧ್ವನಿಯಲ್ಲಿ ಕೂಗಿಕೊಂಡನು. ಆಗ ಉಳಿದವರೂ ಕೂಡ ಆ ಹುಲ್ಲು ಬಣವೆಯ ಮೇಲೆ ಹಾರಿದರು. ಅವನ ಹಾಗೆಯೇ ಕೂಗಿಕೊಂಡರು, "ನೀನು ಶರಣಾದರೆ, ನಾವು ಶರಣಾಗುತ್ತೇವೆ, ನೀನು ಶರಣಾದರೆ ನಾವೂ ಕೂಡ ಶರಣಾಗುತ್ತೇವೆ."

ಅವರು ಅಲ್ಲೆ ಬಹಳ ಹೊತ್ತು ಇದ್ದರು. ಅವರನ್ನು ಬಂಧಿಸಲು ಯಾವ ಶತ್ರುವೂ ಬರಲಿಲ್ಲ. ಅವರಿಗೆ ತಾವು ಮೋಸ ಹೋಗಿದ್ದು ತಿಳಿಯಿತು. ತಾವು ಹೆದರಿಕೊಂಡ ಕತೆಯನ್ನು ಹಳ್ಳಿಯಲ್ಲಿ ಹೇಳಿದರೆ ತಮ್ಮನ್ನು ಅಣಕಿಸಿಕೊಂಡು ನಗುವರು ಎಂದು ತಮ್ಮಲ್ಲೆ ಯೋಚಿಸಿದರು. ತಮ್ಮಲ್ಲೆ ಒಬ್ಬರಿಗೊಬ್ಬರು ಪ್ರಮಾಣ ಮಾಡಿಕೊಂಡರು, ಯಾರಿಗೂ ಹೇಳಬಾರದು ಎಂದು ಹೇಳಿಕೊಂಡರು.


ಮತ್ತೆ ಅವರು ತಮ್ಮ ಸಾಹಸ ಯಾತ್ರೆಯನ್ನು ಮುಂದುವರಿಸಿದರು. ಆದರೆ ಅವರು ಎರಡನೇ ಬಾರಿ ಎದುರಿಸಿದ ಅಪಾಯವನ್ನು ಮೊದಲಿನದರ ಜೊತೆ ಹೋಲಿಸಲೇಬಾರದು. ಯಾಕೆ ಅಂದರೆ ಅವರು ಅನೇಕ ದಿನಗಳನ್ನು ನಡೆಯುತ್ತಲೇ ಕಳೆದರು. ದಾರಿಯಲ್ಲಿ ಒಂದು ಹಸನು ಮಾಡದೇ ಇದ್ದ ಹೊಲಕ್ಕೆ ಬಂದರು. ಅಲ್ಲಿ ಒಂದು ಮೊಲ ಬಿಸಿಲು ಕಾಯಿಸುತ್ತಾ ಮಲಗಿತ್ತು. ಎಲ್ಲ ಕಡೆಯಿಂದ ಬರುವ ಶಬ್ದಗಳನ್ನು ಕೇಳಿಸಿಕೊಳ್ಳುವ ಸಲುವಾಗಿ ಅದು ತನ್ನ ಕಿವಿಗಳನ್ನು ನಿಮಿರಿಸಿಕೊಂಡು ಅಗಲವಾದ ಹೊಳೆಯುವ ಕಣ್ಣುಗಳನ್ನು ತೆರೆದುಕೊಂಡೇ ಮಲಗಿತ್ತು. ಸ್ವಾಬಿಯನ್ನರು ಅದನ್ನು ಒಂದು ಭಯಂಕರವಾದ ಪ್ರಾಣಿ ಎಂದುಕೊಂಡರು. ಅದನ್ನು ನೋಡಿ ತುಂಬಾ ಹೆದರಿಕೊಂಡರು. ತಮಗೆ ಅಪಾಯವಾಗದಂತೆ ಆ ಪ್ರಾಣಿಯನ್ನು ಎದುರಿಸುವ ಉಪಾಯದ ಬಗ್ಗೆ ತಮ್ಮಲ್ಲೇ ಸಮಾಲೋಚನೆ ಮಾಡಿಕೊಂಡರು. ತಾವು

ಓಡಿಹೋದರೆ ಆ ಭಯಂಕರ ಪ್ರಾಣಿ ತಮ್ಮ ಬೆನ್ನಟ್ಟಿಕೊಂಡು ಬಂದು ಎಲ್ಲರನ್ನು ತುಂಡು ತುಂಡು ಮಾಡಿದರೆ ಎಂಬ ಚಿಂತೆ ಅವರನ್ನು ಕಾಡಿತು. ಆದ್ದರಿಂದ ಅದನ್ನು ಎದುರಿಸಿ ದೊಡ್ಡ ಯುದ್ಧ ಮಾಡೋಣ ಎಂದು ತಮ್ಮಲ್ಲೇ ತೀರ್ಮಾನ ಮಾಡಿಕೊಂಡರು. "ಧೈರ್ಯವಾಗಿದ್ದು ಹೆದರಿಕೆಯನ್ನು ಓಡಿಸಿದರೆ ಅರ್ಧ ಗೆದ್ದಂತೆಯೆ" ಎಂದು ತಮಗೆ ತಾವೇ ಹೇಳಿಕೊಂಡರು. ಆ ಏಳು ಜನ ತಮ್ಮ ಭರ್ಜಿಯನ್ನು ಬಿಗಿಯಾಗಿ ಹಿಡಿದುಕೊಂಡರು. ಶುಲ್ಜ ಮೊದಲನೆಯವನು, ಏಟ್ಲಿ ಕೊನೆಯವನು ಆಗಿದ್ದರು. ಶುಲ್ಜ ಭರ್ಜಿಯನ್ನು ತಾನೊಬ್ಬನೆ ಹಿಡಿಯಬೇಕೆಂದು ಬಯಸಿದನು. ಆಗ ವಿಟ್ಲಿ ಸಿಟ್ಟಿನಿಂದ ಅದನ್ನು ಎಳೆಯುವ ರಭಸದಲ್ಲಿ ಮುರಿದು ಹಾಕಿದನು.

ಕೊನೆಗೆ ಉಳಿದವರೆಲ್ಲರೂ ಆ ರಾಕ್ಷಸನ ಮೇಲೆ ಬೀಳಲು ಸಿದ್ಧರಾದರು. ಮೊದಲು ಶುಲ್ಜ ಮುಂದುವರಿದು ಭಕ್ತಿಯಿಂದ "ದೇವರೇ ಕಾಪಾಡು" ಎಂದು ಪ್ರಾರ್ಥಿಸಿದನು. ನಂತರ ಮುನ್ನುಗ್ಗಿದನು. ಆದರೆ ಅವನು ಆ ಶತ್ರುವಿನ ಕಡೆಗೆ ಹೋಗುತ್ತಿದ್ದಂತೆ ಅವನಿಗೆ ತುಂಬ ಹೆದರಿಕೆ ಆಗಿ, "ಅಯ್ಯೋ, ಅಯ್ಯೋ" ಎಂದು ಜೋರಾಗಿ ಕೂಗಿಕೊಂಡನು. ಅವನ ಕೂಗಿನಿಂದ ಮೊಲಕ್ಕೆ ಎಚ್ಚರವಾಯಿತು. ಅದು ವೇಗವಾಗಿ ಕುಪ್ಪಳಿಸಿಕೊಂಡು ಹೆದರಿಕೆಯಿಂದ ಓಡಿಹೋಯಿತು. ಅದು ಓಡಿಹೋಗುವುದನ್ನು ಶುಲ್ಜ ನೋಡಿದನು. ಅವನಿಗೆ ತುಂಬ ಸಂತೋಷವಾಗಿ ಕೂಗಿಕೊಂಡನು —"ಅಯ್ಯೋ ದೇವರೆ, ವಿಟ್ಲಿ, ನಾವು ಏನು ಮೂರ್ಖರು ಅಂತೀನಿ, ಆ ರಾಕ್ಷಸ ಬೇರೆ ಯಾರೂ ಅಲ್ಲ, ಬರೀ ಮೊಲ ಅಷ್ಟೇ!"

ಹೆದರಿಕೆಯಿಂದ ಸುಧಾರಿಸಿಕೊಂಡ ಮೇಲೆ ಆ ಏಳು ಸ್ವಾಬಿಯನ್ನರು ಹೊಸ ಸಾಹಸವನ್ನು ಹುಡುಕಿಕೊಂಡು ಹೊರಟರು. ಅವರಿಗೆ ದಾರಿಯಲ್ಲಿ ಮೊಸೆಲ್ ನದಿ ಅಡ್ಡ ಬಂದಿತು. ಅದು ದೊಡ್ಡ ಮತ್ತು ಆಳವಾದ ನದಿ ಆಗಿತ್ತು. ಅದರ ಇನ್ನೊಂದು ದಡವನ್ನು ಸೇರಲು ಯಾವ ಸೇತುವೆ ಇರಲಿಲ್ಲ. ಆದರೆ ದೋಣಿಯ ಸಹಾಯದಿಂದ ದಾಟಬೇಕಾಗಿತ್ತು. ಆ ಏಳು ಸ್ವಾಬಿಯನ್ನರಿಗೆ ಅದು ಗೊತ್ತಿರಲಿಲ್ಲ. ಆದ್ದರಿಂದ ಆ ಕಡೆ ದಡದಲ್ಲಿ ಏನೋ ಕೆಲಸ ಮಾಡುತ್ತಿದ್ದವರನ್ನು ಕೂಗಿ ತಾವು ನದಿಯನ್ನು ಹೇಗೆ ದಾಟಬೇಕು ಎಂದು ವಿಚಾರಿಸಿದರು. ಆ ಕಡೆಯ ಮನುಷ್ಯನಿಗೆ ಅವರು ಹೇಳಿದ್ದು ಕೇಳಿಸಲಿಲ್ಲ. ಏಕೆಂದರೆ ಅವರಿಬ್ಬರ ನಡುವಿನ ದೂರ ಜಾಸ್ತಿ ಇತ್ತು. ಎರಡನೆಯದಾಗಿ ಅವರ ಭಾಷೆ ಅವನಿಗೆ ಗೊತ್ತಿರಲಿಲ್ಲ. ಆದ್ದರಿಂದ ಅವನು ತನ್ನ ಮಾತಿನಲ್ಲಿ "ಏನು ಹೇಳಿ" ಎಂದು ಕೇಳಿದನು. ಅದು ಶುಲ್ಜನಿಗೆ "ಬೀಳಿ" ಎಂದು ಕೇಳಿಸಿದಂತೆ ಆಯಿತು. ಅವನು ಎಲ್ಲರಿಗಿಂತ ಮುಂದೆ ನಿಂತಿದ್ದನು. ನೀರಿನಲ್ಲಿ ಧುಮುಕಿ ನಡೆಯತೊಡಗಿದನು. ಅವನು ನೀರಿನ ಸುಳಿಗೆ ಸಿಕ್ಕಿ ಮುಳುಗಿ ಹೋದನು. ಆದರೆ ಅವನ ಟೋಪಿ ತೇಲಿಕೊಂಡು ಆ ಕಡೆಯ ದಡವನ್ನು ಸೇರಿತು. ಅದು, ದಡದಲ್ಲಿರುವಾಗಲೇ ಒಂದು ಕಪ್ಪೆ ಅದರಲ್ಲಿ ಹಾರಿ ಕುಳಿತುಕೊಂಡು, "ವಾಟ್, ವಾಟ್, ವಾಟ್" ಎಂದು ಕೂಗಿತು. ಅದರ ಕೂಗು, ಆಚೆಯ ದಡದಲ್ಲಿದ್ದ ಆರು ಜನ ಸ್ವಾಬಿಯನ್ನರಿಗೆ ಕೇಳಿಸಿತು. "ಕೇಳಿಸಿಕೊಳ್ಳಿ, ಶುಲ್ಜ ನಮ್ಮನ್ನು ಕರೆಯುತ್ತಿದ್ದಾನೆ" ಎಂದು ಒಬ್ಬರಿಗೊಬ್ಬರು ಹೇಳಿಕೊಂಡರು. ಅವನು ನಡೆದುಕೊಂಡು ಹೋಗಿ ದಡವನ್ನು ಸೇರಿದ, ನಾವು ಹಾಗೇ ದಾಟೋಣ" ಎಂದು ಹೇಳಿಕೊಂಡು, ಅವರೂ ಕೂಡ ನೀರಿನಲ್ಲಿ ಧುಮುಕಿದರು. ಹೀಗೆ, ಕಪ್ಪೆಯ ಕೂಗು ಆರು ಜನ ಸ್ವಾಬಿಯನ್ನರ ಸಾವಿಗೆ ಕಾರಣವಾಯಿತು.

೧೨. ಕಾಡಿನ ಮನೆ



ಬಹಳ ವರ್ಷಗಳ ಹಿಂದೆ ಒಬ್ಬ ಮರಕಡಿಯುವವನಿದ್ದನು. ಅವನಿಗೆ ಹೆಂಡತಿ ಮತ್ತು ಮೂವರು ಹೆಣ್ಣು ಮಕ್ಕಳಿದ್ದರು. ಅವರೆಲ್ಲ ಒಂದು ದೊಡ್ಡ ಕಾಡಿನ ಅಂಚಿನಲ್ಲಿದ್ದ ಗುಡಿಸಲಿನಲ್ಲಿ ವಾಸವಾಗಿದ್ದರು. ಒಂದು ದಿನ ಬೆಳಗ್ಗೆ ಮರ ಕಡಿಯುವವನು ತನ್ನ ಕೆಲಸಕ್ಕೆ ಹೊರಟನು. ಆಗ ತನ್ನ ಹೆಂಡತಿಗೆ, "ಊಟವನ್ನು ನಮ್ಮ ದೊಡ್ಡ ಮಗಳ ಕೈಯಲ್ಲಿ ಕಳಿಸು. ನನಗೆ ಮನೆಗೆ ಬರಲು ಆಗುವುದಿಲ್ಲ. ಅವಳಿಗೆ ದಾರಿ ತಪ್ಪದಂತೆ ನಾನು ದಾರಿ ಉದ್ದಕ್ಕೂ ಬೀಜಗಳನ್ನು ಚೆಲ್ಲಿರುತ್ತೇನೆ" ಎಂದು ಹೇಳಿದನು.

ಸೂರ್ಯ ನಡುನೆತ್ತಿಯ ಮೇಲೆ ಬರುವ ಹೊತ್ತಿಗೆ ಅವನ ದೊಡ್ಡ ಮಗಳು ಒಂದು ಹಿಡಿಕೆಯ ಪಾತ್ರೆಯ ತುಂಬ ಸೂಪನ್ನು ತೆಗೆದುಕೊಂಡು ಹೊರಟಳು. ಆದರೆ ಗುಬ್ಬಿಗಳು, ಕಂದು ಬಣ್ಣದ ಹಕ್ಕಿಗಳು, ಹಾಡುವ ಬಂಗಾರದ ಪಟ್ಟಿಯ ಹಕ್ಕಿಗಳು, ಹಸಿರು ಹಕ್ಕಿಗಳು, ಕಾಗೆಗಳು, ಎಲ್ಲವೂ ಅವಳು ಬರುವ ಮೊದಲೇ ಬೀಜಗಳನ್ನು ತಿಂದುಬಿಟ್ಟಿದ್ದವು. ಹೀಗಾಗಿ ಅವಳಿಗೆ ದಾರಿ ಸಿಗಲಿಲ್ಲ. ಅವಳು ತನ್ನ ಅದೃಷ್ಟವಿದ್ದ ಹಾಗೆ ಆಗಲಿ ಎಂದುಕೊಂಡು ಮುಂದೆ ಮುಂದೆ ಹೊರಟಳು. ಸೂರ್ಯ ಮುಳುಗಿದನು. ಕತ್ತಲು ಎಲ್ಲ ಕಡೆಯು ಹರಡಿತು. ಮರಗಳು ಕತ್ತಲಲ್ಲಿ ಪರ ಪರ ಶಬ್ದ ಮಾಡಿದವು. ಗೂಬೆಗಳು ಕೂಗಿದವು. ಆ ಹುಡುಗಿಗೆ ಹೆದರಿಕೆ ಆಯಿತು. ಮರಗಳ ನಡುವೆ ದೂರದಲ್ಲಿ ಮಿನುಗುವ ದೀಪ ಕಾಣಿಸಿತು. "ಅಲ್ಲಿ ಜನ ವಾಸವಾಗಿರಬಹುದು. ನಾನು ಈ ರಾತ್ರಿ ಉಳಿಯಲು ಅವರು ಒಪ್ಪಿಕೊಳ್ಳಬಹುದು" ಎಂದು ಯೋಚಿಸಿ, ದೀಪದ ಕಡೆ ಹೆಜ್ಜೆ ಹಾಕಿದಳು. ಸ್ವಲ್ಪ ಹೊತ್ತಿಗೆ ಅವಳು ಒಂದು ಗುಡಿಸಲಿನ ಹತ್ತಿರ ಬಂದಳು. ಕಿಟಕಿಗಳಿಂದ ಬೆಳಕು ಹೊರಗೆ ಕಾಣುತ್ತಿತ್ತು. ಅವಳು ಬಾಗಿಲನ್ನು ಬಡಿದಾಗ ಒಳಗಿನಿಂದ ಒಂದು ಒರಟಾದ ಧ್ವನಿ "ಬಾ ಒಳಗೆ" ಎಂದು ಕರೆಯಿತು. ಹುಡುಗಿ ಬಾಗಿಲು ನೂಕಿಕೊಂಡು ಒಳಗೆ ಹೋದಳು. ಅಲ್ಲಿ, ಮೇಜಿನ ಹತ್ತಿರ, ವಯಸ್ಸಾದ ಬಿಳಿಯ ಕೂದಲಿನ ಮುದುಕ ಕೈಯಲ್ಲಿ ಮುಖವನ್ನು ಮುಚ್ಚಿಕೊಂಡು ಕುಳಿತಿದ್ದನು. ಅವನ ಬಿಳಿಯ ಗಡ್ಡ ಮೇಜನ್ನು ದಾಟಿ ನೆಲವನ್ನು ಮುಟ್ಟಿತ್ತು. ಒಲೆಯ ಹತ್ತಿರ ಒಂದು ಹುಂಜ, ಒಂದು ಕೋಳಿ ಮತ್ತು ಒಂದು ಕಂದು ಬಣ್ಣದ ಹಸು ಇದ್ದವು. ಆ ಹುಡುಗಿ ತನ್ನ ಕತೆಯನ್ನೆಲ್ಲ ಮುದುಕನಿಗೆ

ಹೇಳಿದಳು. ರಾತ್ರಿ ಉಳಿಯಲು ಅವಕಾಶ ಕೊಡಬೇಕೆಂದು ಬೇಡಿಕೊಂಡಳು. ಆಗ ಮುದುಕ :-

"ಮುದ್ದು ಹುಂಜ, ಮುದ್ದು ಕೋಳಿ
ಮುದ್ದು ಕಂದು ಹಸು,
ನೀವು ಏನು ಹೇಳುತ್ತೀರಿ?" ಎಂದು ಕೇಳಿದನು.

ಆ ಪ್ರಾಣಿಗಳು "ಕ್ಲಕ್" ಎಂದು ತಮ್ಮ ಒಪ್ಪಿಗೆ ಕೊಟ್ಟವು. ಆಗ ಮುದುಕ, "ಅಡಿಗೆ ಮನೆಯಲ್ಲಿ ನಮ್ಮೆಲ್ಲರಿಗೂ ಆಗಿ ಉಳಿಯುವಷ್ಟು ಸಾಮಾನುಗಳಿವೆ. ನೀನು ಹೋಗಿ ನಮ್ಮೆಲ್ಲರಿಗೂ ರಾತ್ರಿ ಊಟ ತಯಾರು ಮಾಡು" ಎಂದನು. ಆ ಹುಡುಗಿ ಅಡುಗೆ ಮನೆಗೆ ಹೋದಳು. ಆಹಾರ ಸಾಮಗ್ರಿಗಳು ಬೇಕಾದಷ್ಟಿದ್ದವು. ಅವಳು ಒಳ್ಳೆಯ ಅಡುಗೆಯನ್ನು ಮಾಡಿದಳು. ಆದರೆ ಆ ಪ್ರಾಣಿಗಳ ಬಗ್ಗೆ ಯೋಚನೆ ಮಾಡಲೇ ಇಲ್ಲ. ಅಡುಗೆ ಆದ ಮೇಲೆ ಎಲ್ಲವನ್ನು ಕೋಣೆಗೆ ತೆಗೆದುಕೊಂಡು ಹೋದಳು. ಮುದುಕನ ಎದುರಿಗೆ ಕೆಳಗೆ ಕುಳಿತಳು. ಅವಳ ಹಸಿವು ತಣ್ಣಗಾಗುವವರೆಗೆ ಊಟ ಮಾಡಿದಳು. ನಂತರ, "ನನಗೆ ತುಂಬ ಆಯಾಸವಾಗಿದೆ. ಎಲ್ಲಿ ಮಲಗಬೇಕು? ನನಗೆ ಹಾಸಿಗೆ ಎಲ್ಲಿದೆ?" ಎಂದು ಕೇಳಿದಳು. ಆಗ ಆ ಪ್ರಾಣಿಗಳು —

"ನೀನು ಅವನ ಜೊತೆ ಊಟ ಮಾಡಿದ್ದೀಯ,
ಅವನ ಜೊತೆಯೇ ಕುಡಿದಿದ್ದೀಯ,
ನೀನು ನಮ್ಮ ಬಗ್ಗೆ ಯೋಚನೆ ಮಾಡದಿದ್ದರೂ ಕೂಡ
ಈ ರಾತ್ರಿಯನ್ನು ಇಲ್ಲಿ ಕಳೆಯಲು ಬಿಡುತ್ತೇವೆ" ಎಂದವು.

ಆಗ ಮುದುಕ, "ಅಲ್ಲಿರುವ ಮೆಟ್ಟಿಲುಗಳನ್ನು ಇಳಿದು ಕೆಳಗೆ ಹೋಗು. ಅಲ್ಲಿರುವ ಕೋಣೆಯಲ್ಲಿ ಎರಡು ಹಾಸಿಗೆಗಳಿವೆ. ಅವುಗಳನ್ನು ಕೊಡವಿ, ಬಿಳಿ ದುಪ್ಪಟಿಗಳನ್ನು ಹಾಸು. ನಾನು ಬಂದು ಮಲಗುತ್ತೇನೆ" ಎಂದು ಹೇಳಿದನು. ಆ ಹುಡುಗಿ ಕೆಳಗಿನ ಕೋಣೆಗೆ ಹೋದಳು. ಹಾಸಿಗೆಗಳನ್ನು ಕೊಡವಿ, ದುಪ್ಪಟಿಗಳನ್ನು ಹಾಸಿ ಸರಿಪಡಿಸಿದಳು. ಮುದುಕ ಬರುವವರೆಗೂ ಕಾಯದೆ ಒಂದು ಹಾಸಿಗೆಯ ಮೇಲೆ ಮಲಗಿದಳು. ಸ್ವಲ್ಪ ಹೊತ್ತಿನ ಮೇಲೆ ಆ ಮುದುಕನು ಬಂದನು. ಹುಡುಗಿ ಮಲಗಿರುವುದನ್ನು ನೋಡಿದನು. ಅವಳು ಗಾಢ ನಿದ್ರೆಯಲ್ಲಿರುವುದನ್ನು ನೋಡಿ ತಲೆಯನ್ನು ಕೊಡವಿದನು. ಆಗ ಕೆಳಗಿನ ನೆಲಮಾಳಿಗೆಯ ಬಾಗಿಲು ತೆಗೆಯಿತು. ಅದರಲ್ಲಿ ಅವಳನ್ನು ತಳ್ಳಿದನು.

ಆ ಕಡೆ ಮರಕಡಿಯುವವನು ತುಂಬ ತಡವಾಗಿ ಮನೆಗೆ ಬಂದನು. ಇಡೀ ದಿನವೆಲ್ಲಾ ತನ್ನನ್ನು ಉಪವಾಸ ಬೀಳಿಸಿದ್ದಕ್ಕೆ ಹೆಂಡತಿಯನ್ನು ಚೆನ್ನಾಗಿ ಬೈಯ್ದನು."ಅದರಲ್ಲಿ ನನ್ನ ತಪ್ಪೇನೂ ಇಲ್ಲ. ನಿನ್ನ ಊಟವನ್ನು ಹಿರಿಯ ಮಗಳು ತೆಗೆದುಕೊಂಡು ಹೋದಳು. ಅವಳು ಎಲ್ಲೊ ದಾರಿ ತಪ್ಪಿರಲೇಬೇಕು. ನಾಳೆ ಬಂದೇ ಬರುತ್ತಾಳೆ, ನೋಡಿ ಬೇಕಾದರೆ" ಎಂದು ಅವನ ಹೆಂಡತಿ ಹೇಳಿದಳು. ಮತ್ತೆ ಮಾರನೇ ದಿನ ಮರ ಕಡಿಯವವವನು ಬೇಗನೆ ಎದ್ದನು. ಕಾಡಿಗೆ ಹೊರಟನು. ಈ ಸಾರಿ ಎರಡನೇ ಮಗಳನ್ನು ಕಳಿಸುವಂತೆ ಹೇಳಿದನು. "ಈ ಬಾರಿ ಧಾನ್ಯದ ಬೀಜದ ಬದಲು ದೊಡ್ಡ ಗಾತ್ರದ ಬಟಾಣಿ ಕಾಳನ್ನು ಚೀಲದಲ್ಲಿ

ಒಯ್ಯುತ್ತೇನೆ. ಅವುಗಳು ಎದ್ದು ಕಾಣುತ್ತವೆ. ಆಗ ನಾನು ಹೋದ ದಾರಿಯನ್ನು ಹುಡುಕಿಕೊಂಡು ಬರಬಹುದು" ಎಂದು ಹೇಳಿದನು. ಮಧ್ಯಾಹ್ನದ ಹೊತ್ತಿಗೆ ಎರಡನೇ ಮಗಳೂ ಕೂಡ ಊಟವನ್ನು ತೆಗೆದುಕೊಂಡು ಕಾಡಿನ ದಾರಿ ಹಿಡಿದಳು. ಆದರೆ ಬಟಾಣಿಗಳೂ ಕೂಡ ಮಾಯವಾಗಿದ್ದವು. ಹಿಂದಿನ ದಿನದಂತೆಯೇ ಕಾಡಿನ ಎಲ್ಲ ಪಕ್ಷಿಗಳು ಅವುಗಳನ್ನು ತಿಂದುಬಿಟ್ಟಿದ್ದವು. ಆ ಹುಡುಗಿ ಕಾಡಿನಲ್ಲಿ ಕತ್ತಲಾಗುವವರೆಗೂ ಹುಡುಕಾಡಿದಳು. ಕೊನೆಗೆ ಅವಳೂ ಕೂಡ ಆ ಮುದುಕನ ಗುಡಿಸಲಿಗೆ ಬಂದಳು. ರಾತ್ರಿ ಉಳಿಯಲು ಊಟ ಮತ್ತು ವಸತಿಯನ್ನು ಕೊಡಬೇಕೆಂದು ಆ ಮುದುಕನನ್ನು ಬೇಡಿಕೊಂಡಳು. ಆ ಬಿಳಿಗಡ್ಡದ ಮುದುಕ ಮತ್ತೆ ತನ್ನ ಪ್ರಾಣಿಗಳನ್ನು ಕೇಳಿದನು:-

"ಸುಂದರ ಹುಂಜವೆ, ಸುಂದರ ಕೋಳಿಯೆ,
ಸುಂದರ ಕಂದು ಹಸುವೆ,
ಅವಳು ಕೇಳಿದ್ದಕ್ಕೆ ನೀವೇನು ಹೇಳುವಿರಿ?"

ಅವುಗಳು ಮತ್ತೆ "ಕ್ಲಕ್" ಎಂದು ಉತ್ತರಿಸಿದವು. ಎಲ್ಲವೂ ಹಿಂದಿನ ದಿನ ನಡೆದಂತೆಯೇ ನಡೆಯಿತು. ಆ ಹುಡುಗಿ ಒಳ್ಳೆಯ ಅಡುಗೆ ಮಾಡಿ ಆ ಮುದುಕನ ಜೊತೆ ಊಟ ಮಾಡಿದಳು. ಮದ್ಯವನ್ನು ಕುಡಿದಳು. ಆ ಪ್ರಾಣಿಗಳ ಬಗ್ಗೆ ಒಂದು ಸಾರಿಯೂ ಯೋಚಿಸಲಿಲ್ಲ ಅವಳು. ಮಲಗಲು ಹಾಸಿಗೆ ಕೇಳಿದಾಗ ಪ್ರಾಣಿಗಳೇ ಉತ್ತರಿಸಿದವು:-

"ನೀನು ಅವನ ಜೊತೆ ಊಟ ಮಾಡಿದ್ದೀಯ,
ಅವನ ಜೊತೆಯೇ ಕುಡಿದಿದ್ದೀಯ,
ನೀನು ನಮ್ಮ ಬಗ್ಗೆ ಯೋಚನೆ ಕೂಡ ಮಾಡಲಿಲ್ಲ,
ಈ ರಾತ್ರಿಯನ್ನು ಇಲ್ಲೇ ಕಳೆಯಬಹುದು."

ಅವಳು ಮಲಗಿದಾಕ್ಷಣ ಬಿಳಿಗಡ್ಡದ ಅಜ್ಜ ಬಂದು ಅವಳ ಕಡೆ ನೋಡಿದನು. ಮೊದಲಿನವಳಿಗೆ ಮಾಡಿದಂತೆ, ತನ್ನ ತಲೆಯನ್ನು ಅಲ್ಲಾಡಿಸಿ ಅವಳನ್ನೂ ನೆಲಮಾಳಿಗೆಗೆ ಇಳಿಸಿದನು.

ಮೂರನೆಯ ದಿನ ಬಂದಿತು. ಮರ ಕಡಿಯುವವನು ತನ್ನ ಕೊನೆಯ ಮಗಳ ಜೊತೆ ಊಟ ಕಳಿಸಬೇಕೆಂದು ಹೆಂಡತಿಗೆ ಹೇಳಿದನು. "ಅವಳು ಯಾವಾಗಲೂ ವಿಧೇಯಳಾಗಿರುತ್ತಾಳೆ. ಒಳ್ಳೆಯ ಸ್ವಭಾವದ ಹುಡುಗಿ. ಅವಳ ಅಕ್ಕಂದಿರಂತೆ ಅಲೆದಾಡಲು ಹೋಗುವುದಿಲ್ಲ. ಅವಳು ಸರಿಯಾದ ದಾರಿ ಹಿಡಿದು ಬರುತ್ತಾಳೆ" ಎಂದು ಹೇಳಿದನು. ಅದಕ್ಕೆ ಹೆಂಡತಿ, "ಏನು? ನನ್ನ ಕೊನೆಯ ಮಗಳನ್ನೂ ಕಳೆದುಕೊಳ್ಳಲೇನು?" ಎಂದು ಕೇಳಿದಳು. "ಹೆದರಬೇಡ ಆ ಹುಡುಗಿ ದಾರಿ ತಪ್ಪುವುದಿಲ್ಲ. ಅವಳು ಜಾಣೆ. ಚಂಚಲ ಸ್ವಭಾವದವಳಲ್ಲ. ಈ ಸಾರಿ ಹುರುಳಿ ಬೀಜವನ್ನು ದಾರಿಯಲ್ಲಿ ಹಾಕುತ್ತಾ ಹೋಗುತ್ತೇನೆ. ಅವು ಗಾತ್ರದಲ್ಲಿ ಬಟಾಣಿಗಿಂತಲೂ ದೊಡ್ಡವು" ಎಂದು ಮರಕಡಿಯುವವನು ಹೇಳಿದನು.

ಹೀಗೆ ಕೊನೆಯ ಹುಡುಗಿ ಕೈ ಬುಟ್ಟಿಯನ್ನು ಬಗಲಲ್ಲಿ ಹಾಕಿಕೊಂಡು ಹೊರಟಳು. ಅವಳ ತಂದೆ ಹಾಕಿದ್ದ ಹುರುಳಿ ಬೀಜಗಳನ್ನು ಕಾಡಿನ ಪಾರಿವಾಳಗಳು ತಿಂದು ಮುಗಿಸಿದ್ದವು. ಅವಳಿಗೆ ಯಾವ ದಾರಿ

ಹಿಡಿಯಬೇಕೆಂದು ತಿಳಿಯಲಿಲ್ಲ. ತನ್ನ ತಂದೆ ಹಸಿದುಕೊಂಡು ತನಗಾಗಿ ಕಾಯುತ್ತಿರಬೇಕೆಂದು ಯೋಚಿಸಿ ತುಂಬ ಕಳವಳಪಟ್ಟಳು. ತಾನು ಮನೆಗೆ ಹಿಂದಿರುಗದಿದ್ದರೆ ತನ್ನ ಅಮ್ಮ ಎಷ್ಟು ದುಃಖಿಸುವಳೊ ಎಂದು ಯೋಚಿಸಿದಳು. ಕತ್ತಲಾಯಿತು. ಅವಳೂ ಕೂಡ ಬೆಳಕಿದ್ದ ಗುಡಿಸಲಿಗೆ ಹೋದಳು. ಬಹಳ ನಮ್ರತೆಯಿಂದ ರಾತ್ರಿ ತಂಗಲು ಅವಕಾಶ ಕೊಡಬೇಕೆಂದು ಬೇಡಿಕೊಂಡಳು. ಆ ಮುದುಕ ಮೂರನೇ ಬಾರಿ ಆ ಪ್ರಾಣಿಗಳನ್ನು ಅದೇ ಮಾತುಗಳನ್ನು ಕೇಳಿದನು.

"ಮುದ್ದು ಕೋಳಿ, ಮುದ್ದು ಹುಂಜ
ಮುದ್ದು ಕಂದು ಹಸುವೆ
ಅವಳಿಗೆ ಏನು ಹೇಳುತ್ತೀರಿ?" ಎಂದನು.

"ಕ್ಲಕ್, ಕ್ಲಕ್" ಎಂದು ಅವು ಉತ್ತರಿಸಿದವು. ಆ ತಕ್ಷಣ ಹುಡುಗಿ ಬೆಂಕಿಯ ಹತ್ತಿರ, ಆ ಪ್ರಾಣಿಗಳು ಮಲಗಿದ್ದಲ್ಲಿ ಹೋದಳು. ಆ ಸುಂದರ ಹುಂಜ ಮತ್ತು ಕೋಳಿಗಳನ್ನು ಮುದ್ದು ಮಾಡಿದಳು. ಅವುಗಳ ತಲೆಯನ್ನು ಸವರಿದಳು. ಹಸುವಿನ ಕೋಡುಗಳ ಮಧ್ಯೆ ತಟ್ಟಿದಳು. ನಂತರ ಮುದುಕನ ಬೇಡಿಕೆಯಂತೆ ಅಡುಗೆ ತಯಾರಿಸಿದಳು. ಅಡುಗೆಯನ್ನೆಲ್ಲ ಬಟ್ಟಲುಗಳಲ್ಲಿ ಮೇಜಿನ ಮೇಲೆ ತಂದಿಟ್ಟಳು. ತಾನು ಆ ಒಳ್ಳೆಯ ಪ್ರಾಣಿಗಳಿಗೆ ಊಟ ಹಾಕದಿದ್ದರೆ ತನ್ನ ಊಟ ತನಗೆ ದಕ್ಕುವುದಿಲ್ಲವೆಂದು ಯೋಚಿಸಿದಳು. ಅವಳು ಅಡುಗೆ ಮನೆಗೆ ಹೋಗಿ ಸ್ವಲ್ಪ ಕಾಳುಗಳನ್ನು ತಂದು ಆ ಕೋಳಿ ಮತ್ತು ಹುಂಜದ ಮುಂದೆ ಹಾಕಿದಳು. ನಂತರ ತಾನು ಹಿಡಿದುಕೊಳ್ಳುವಷ್ಟು ಹುಲ್ಲನ್ನು ತಂದು ಕರುವಿನ ಮುಂದೆ ಹಾಕಿದಳು. "ಮುದ್ದು ಪ್ರಾಣಿಗಳೇ ತಿನ್ನಿ" ಎಂದು ಹೇಳಿದಳು. "ನಿಮಗೆ ಬಾಯಾರಿಕೆ ಆದರೆ ಒಳ್ಳೆಯ ನೀರು ಕುಡಿಯಿರಿ" ಎಂದು ಹೇಳುತ್ತ ದೊಡ್ಡ ಪಾತ್ರೆಯ ತುಂಬ ನೀರು ತಂದಿಟ್ಟಳು. ಕೋಳಿ ಮತ್ತು ಹುಂಜ ಆ ಪಾತ್ರೆಯ ಅಂಚನ್ನು ಹಿಡಿದುಕೊಂಡು, ಕತ್ತು ಬಗ್ಗಿಸಿ ಕೊಕ್ಕಿನಿಂದ ನೀರು ಹೀರಿದವು. ಹಸುವೂ ಕೂಡ ತೃಪ್ತಿ ಆಗುವಷ್ಟು ನೀರು ಕುಡಿಯಿತು. ನಂತರ ಅವಳು ಮೇಜಿನ ಬಳಿಗೆ ಬಂದು ಕುಳಿತಳು. ಅಜ್ಜ ಬಿಟ್ಟಿದ್ದನ್ನು ಉಂಡಳು. ಸ್ವಲ್ಪ ಹೊತ್ತಿನಲ್ಲಿ ಕೋಳಿ ಮತ್ತು ಹುಂಜ ತಮ್ಮ ಪುಕ್ಕಗಳಲ್ಲಿ ತಲೆ ಹುದುಗಿಸಿಕೊಂಡು ನಿದ್ದೆ ಹೋದವು. ಹಸುವೂ ಕೂಡ ಕಣ್ಣು ಮಿಟಕಿಸಿಕೊಂಡು ನಿದ್ದೆ ಮಾಡತೊಡಗಿತು. ನಂತರ ಅವಳು, "ನಾವು ವಿಶ್ರಾಂತಿ ಪಡೆಯೋಣವೇ?" ಎಂದು ಕೇಳಿದಳು. ಅಜ್ಜ ಮೊದಲಿನಂತೆ ಕೇಳಿದನು:-

"ಮುದ್ದು ಕೋಳಿ, ಮುದ್ದು ಹುಂಜ
ಮತ್ತು ಮುದ್ದು ಕಂದು ಆಕಳೆ
ಏನು ಹೇಳುವಿರಿ?" ಎಂದನು.

"ಕ್ಲಕ್, ಕ್ಲಕ್" ಎಂದು ಆ ಪ್ರಾಣಿಗಳು ಉತ್ತರಿಸಿದವು. ಅವುಗಳ ಅರ್ಥ ಹೀಗಿತ್ತು:-

"ನೀನು ನಮ್ಮ ಜೊತೆ ಊಟ ಮಾಡಿರುವಿ,
ನೀನು ನಮ್ಮ ಜೊತೆಯೇ ಕುಡಿದಿರುವಿ,
ನಮ್ಮ ಬಗ್ಗೆ ಕರುಣೆ ತೋರಿಸಿದಿ,
ನಿನಗೆ ಶುಭರಾತ್ರಿ ಒಳ್ಳೆಯ ವಿಶ್ರಾಂತಿ ಸಿಗಲಿ"

ಆ ಹುಡುಗಿ ಕೆಳಗೆ ಹೋದಳು ಪುಕ್ಕಗಳ ಹಾಸಿಗೆಗಳನ್ನು ಕೊಡವಿ ಹಾಸಿದಳು. ದುಪ್ಪಟ್ಟಿಗಳನ್ನು ಹಾಸಿದಳು. ಹಾಸಿಗೆ ಸಿದ್ಧವಾದ ಮೇಲೆ ಅಜ್ಜ ಬಂದನು. ಅವನ ಬಿಳಿಗಡ್ಡ ನೆಲವನ್ನು ಮುಟ್ಟಿತ್ತಿತ್ತು. ಒಂದು ಹಾಸಿಗೆಯ ಮೇಲೆ ಮಲಗಿದನು. ಇನ್ನೊಂದು ಹಾಸಿಗೆಯ ಮೇಲೆ ಆ ಹುಡುಗಿ ಕುಳಿತುಕೊಂಡಳು. ಮಲಗುವ ಮೊದಲು ಪ್ರಾರ್ಥನೆ ಮಾಡಿದಳು. ನಂತರ ಮಲಗಿದಳು.

ಮಧ್ಯರಾತ್ರಿಯವರೆಗೆ ಅವಳು ಶಾಂತವಾಗಿ ನಿದ್ದೆ ಮಾಡಿದಳು. ನಂತರ ಇಡೀ ಮನೆ ಜೋರಾಗಿ ಅಲುಗಾಡತೊಡಗಿತು. ಆ ಶಬ್ದದಿಂದ ಅವಳು ಎಚ್ಚರವಾದಳು. ಅದೇ ವೇಳೆಗೆ ಆ ಇಡೀ ಕೋಣೆಯ ಮೂಲೆ ಮೂಲೆಗಳಲ್ಲಿ ಗುಡು, ಗುಡು ಶಬ್ದ ಆಯಿತು. ಬಾಗಿಲುಗಳು ಗೋಡೆಗಳಿಗೆ ಬಡಿದುಕೊಂಡವು. ಕಬ್ಬಿಣದ ಸರಳು ಕಿತ್ತು ಮುರಿದು ಹೋಗುವ ಶಬ್ದ ಕೇಳಿಸಿತು. ಮೆಟ್ಟಿಲುಗಳು ಮುರಿದವು. ಇಡೀ ಮೇಲ್ಛಾವಣಿ ಕುಸಿಯಿತು. ಸ್ವಲ್ಪ ಹೊತ್ತಿನಲ್ಲಿ ಎಲ್ಲವೂ ತಣ್ಣಗಾಯಿತು. ಆದರೆ ಆ ಹುಡುಗಿಗೆ ಏನೂ ಅಪಾಯವಾಗಲಿಲ್ಲ. ಅವಳು ಮತ್ತೆ ನಿದ್ದೆ ಹೋದಳು.

ಬೆಳಗಿನ ಸೂರ್ಯ ಕಿರಣಗಳು ಅವಳನ್ನು ಎಬ್ಬಿಸಿದವು. ಅವಳು ಒಂದು ದೊಡ್ಡ ಕೋಣೆಯಲ್ಲಿದ್ದಳು. ಎಲ್ಲವೂ ರಾಜ ವೈಭವದಿಂದ ಕೂಡಿತ್ತು. ನೆಲದ ಮೇಲೆ ಹಸಿರು ರೇಶಿಮೆಯನ್ನು ಹಾಸಿದ್ದರು. ಗೋಡೆಗಳ ಮೇಲೆ, ನೆಲದ ಹಸಿರಿನಿಂದ ಬೆಳೆದಂತೆ ಬಂಗಾರದ ಹೂಗಳು ಹರಡಿದ್ದವು. ಅವಳು ದಂತದ ಮಂಚದ ಮೇಲೆ ಮಲಗಿದ್ದಳು. ಮೆತ್ತನೆಯ ಕೆಂಪು ವೆಲ್‌ವೆಟ್ ಬಟ್ಟೆಯ ಪರದೆಗಳನ್ನು ಇಳಿಬಿಟ್ಟಿದ್ದರು. ಮಂಚದ ಹತ್ತಿರ ಒಂದು ಪುಟ್ಟ ಮೇಜಿತ್ತು. ಅದರ ಹತ್ತಿರ ಒಂದು ಜೊತೆ ಚಪ್ಪಲಿಗಳಿದ್ದವು. ಅವುಗಳನ್ನು ಅಮೂಲ್ಯವಾದ ಮುತ್ತು ರತ್ನಗಳಿಂದ ಮಾಡಿದ್ದರು. ಆ ಹುಡುಗಿಗೆ ತಾನು ಕನಸು ಕಾಣುತ್ತಿರುವೆನೆಂದು ಅನಿಸಿತು. ಅಷ್ಟರಲ್ಲಿ ಮೂರು ಜನ, ಬೆಲೆ ಬಾಳುವ ಸಮವಸ್ತ್ರವನ್ನು ಹಾಕಿಕೊಂಡಿದ್ದವರು ಬಂದರು. ಅವರು "ನಮ್ಮ ಕೆಲಸವೇನು" ಎಂದು ಕೇಳಿದರು. "ಅಯ್ಯೋ! ನನ್ನನ್ನು ಬಿಟ್ಟು ಬಿಡಿ. ನಾನು, ಅಜ್ಜನಿಗೆ, ಆ ಕೋಳಿ ಮತ್ತು ಹುಂಜಕ್ಕೆ, ಆ ಹಸುವಿಗೆ ತಿಂಡಿ ಕೊಡಬೇಕು. ಅಜ್ಜನ ತಿಂಡಿ ತಯಾರಿಸಬೇಕು" ಎಂದಳು. ಅವಳು ಹಾಗೆ ಹೇಳುತ್ತ ಅಜ್ಜ ಬೇಗನೆ ಎದ್ದಿರಬೇಕೆಂದು ಯೋಚಿಸಿದಳು. ಇನ್ನೊಂದು ಮಂಚದ ಕಡೆ ನೋಡಿದಳು. ಅಲ್ಲಿ ಒಬ್ಬ ಅಪರಿಚಿತ ಸುಂದರ ಯುವಕ ಮಲಗಿದ್ದನು. ಅವನು ಎದ್ದವನೆ "ನಾನೊಬ್ಬ ರಾಜನ ಮಗ. ಬಹಳ ವರ್ಷಗಳ ಹಿಂದೆ, ಒಬ್ಬ ಮುದುಕನ ತೋಟದ ಮನೆಯಲ್ಲಿ, ಒಬ್ಬ ಮಾಟಗಾತಿಯ ಮಂತ್ರಕ್ಕೆ ಒಳಗಾಗಿದ್ದೆನು. ನಾನು ಈ ಕಾಡಿನಲ್ಲಿ ಒಂಟಿಯಾಗಿರುವಂತೆ ಅವಳು ಶಾಪ ಕೊಟ್ಟಳು. ನನ್ನ ಜೊತೆ ನನ್ನ ಸೇವಕರೂ ಕೂಡ, ಕೋಳಿ, ಹುಂಜ ಮತ್ತು ಹಸುವಾಗಿದ್ದರು. ಯಾರೂ ನನ್ನ ಜೊತೆ ಇರಲು ಇಷ್ಟಪಡುತ್ತಿರಲಿಲ್ಲ. ಯಾವ ಹುಡುಗಿಯಾದರೂ ಬಂದು ಮುದುಕನಾಗಿದ್ದ ನನ್ನನ್ನು ಮಾತ್ರವಲ್ಲದೆ ಈ ಪ್ರಾಣಿಗಳನ್ನೂ ಕರುಣೆಯಿಂದ ನೋಡಿಕೊಂಡಾಗ ಶಾಪದಿಂದ ಬಿಡುಗಡೆ ಎಂದು ಹೇಳಿದ್ದಳು. ನೀನು ನಮ್ಮನ್ನು ಕರುಣೆಯಿಂದ ನೋಡಿಕೊಂಡೆ. ಆದ್ದರಿಂದ ನಿನ್ನೆ ಮಧ್ಯರಾತ್ರಿ ನಿನ್ನಿಂದಾಗಿ ಹಳೆಯ ಮರದ ಗುಡಿಸಲು ಮತ್ತೆ ನನ್ನ ಅರಮನೆ ಆಯಿತು" ಎಂದು ತನ್ನ ಹಿಂದಿನ ಕತೆಯನ್ನು ವಿವರಿಸಿದನು.

ಅವರಿಬ್ಬರೂ ಹಾಸಿಗೆಯಲ್ಲಿರುವಾಗಲೇ ಎಲ್ಲ ಮಾತುಕತೆಗಳು ಆದವು. ಇಬ್ಬರೂ ಮೇಲೆ ಎದ್ದರು. ಹುಡುಗಿಯ ತಂದೆ ತಾಯಿಗಳನ್ನು ಕರೆದುಕೊಂಡು ಬರುವಂತೆ ರಾಜಕುಮಾರ ತನ್ನ ಸೇವಕರಿಗೆ ಹೇಳಿದನು.

ಅವರ ಒಪ್ಪಿಗೆ ಪಡೆದು ಆ ಹುಡುಗಿಯನ್ನು ಮದುವೆ ಆಗುವುದಾಗಿ ಹೇಳಿದನು.

"ನನ್ನ ಇಬ್ಬರು ಅಕ್ಕಂದಿರು ಎಲ್ಲಿ?" ಎಂದು ಆ ಹುಡುಗಿ ಕೇಳಿದಳು. "ಅವರು ನೆಲಮಾಳಿಗೆಯಲ್ಲಿದ್ದಾರೆ. ನಾಳೆ ಬೆಳಗಿನವರೆಗೆ ಅವರು ಅಲ್ಲಿ ಇರಲಿ. ನಂತರ ಅವರನ್ನು ಕಾಡಿಗೆ ಬಿಟ್ಟು ಬರಬೇಕು. ಅಲ್ಲಿ, ಕಲ್ಲಿದ್ದಲು ಗಣಿಯವನಿಗೆ ಸೇವಕರಾಗಿರಲಿ. ಅವರು ತಮ್ಮ ಸ್ವಭಾವವನ್ನು ತಿದ್ದಿಕೊಂಡು, ಪ್ರಾಣಿ, ಪಕ್ಷಿಗಳ ಬಗ್ಗೆ ಕರುಣೆ ಬೆಳೆಸಿಕೊಳ್ಳುವವರೆಗೆ ಹಾಗೇ ಇರಲಿ" ಎಂದನು ಆ ರಾಜಕುಮಾರ.

೧೩. ಬಡ ಗಿರಣಿಯವನ ಮಗ ಮತ್ತು ಬೆಕ್ಕು



ಒಂದಾನೊಂದು ಕಾಲದಲ್ಲಿ ಒಂದು ಹಿಟ್ಟಿನ ಗಿರಣಿಯಲ್ಲಿ ಒಬ್ಬ ಮುದುಕ ಗಿರಣಿಯವನು ವಾಸವಾಗಿದ್ದನು. ಅವನಿಗೆ ಹೆಂಡತಿ ಆಗಲಿ ಅಥವಾ ಮಕ್ಕಳಾಗಲಿ ಇರಲಿಲ್ಲ. ಮೂವರು ಸಹಾಯಕರಿದ್ದರು. ಅವರು ಅವನ ಹತ್ತಿರ ಸಹಾಯಕರಾಗಿ ಅನೇಕ ವರ್ಷ ಕೆಲಸಮಾಡಿದರು. ಅವರಿಗೆ ಅವನು ಒಂದು ದಿನ "ನನಗೆ ವಯಸ್ಸಾಯಿತು. ವ್ಯವಹಾರದಿಂದ ನಿವೃತ್ತನಾಗಬೇಕು ಎಂದು ಮನಸ್ಸು ಮಾಡಿರುವೆ. ನಿಮ್ಮಲ್ಲಿ ಯಾರು ಒಂದು ಅತ್ಯುತ್ತಮ ಕುದುರೆಯನ್ನು ಹುಡುಕಿ ತಂದು ಕೊಡುತ್ತೀರೊ ಅವರಿಗೆ ನನ್ನ ಮಿಲ್ಲನ್ನು ಕೊಡುತ್ತೇನೆ. ಅವರು ನನ್ನ ಕೊನೆಗಾಲದಲ್ಲಿ ನೋಡಿಕೊಳ್ಳಬೇಕು. ಅಂದರೆ ನಾನು ಕಾಯಿಲೆ ಬಿದ್ದರೆ, ನನ್ನ ಉಪಚಾರವನ್ನು ಮಾಡಬೇಕು" ಎಂದು ಹೇಳಿದನು.

ಅವರಲ್ಲಿ ಮೂರನೆಯವನು ಚಿಕ್ಕ ಹುಡುಗನಾಗಿದ್ದನು. ಆದ್ದರಿಂದ ಉಳಿದವರಿಬ್ಬರೂ ಅವನನ್ನು ಹಿಯಾಳಿಸಿ ಅವಮಾನ ಮಾಡುತ್ತಿದ್ದರು. ತಾವೇ ಮಿಲ್ಲನ್ನು ಪಡೆಯುತ್ತೇವೆ ಎಂಬ ಅಹಂಕಾರದಲ್ಲಿದ್ದರು. ಆ ಚಿಕ್ಕ ಹುಡುಗ ಮಿಲ್ಲಿನ ಒಡೆಯನಾಗುತ್ತಾನೆ ಎಂದು ಅವರು ಊಹಿಸಲು ಸಾಧ್ಯವಿರಲಿಲ್ಲ. ಎಲ್ಲರೂ ಕುದುರೆಗಾಗಿ ಹೊರಟರು. ಅವರು ಆ ಹಳ್ಳಿಯನ್ನು ದಾಟಿದ ಕೂಡಲೆ ಹಿರಿಯ ಅಣ್ಣಂದಿರು ಆ ದಡ್ಡ ಹ್ಯಾನ್ಸ್‌ಗೆ "ನೀನು ಇಲ್ಲಿಯೇ ಇರುವುದು ಒಳ್ಳೆಯದು. ನೀನು ಜೀವಮಾನವೆಲ್ಲ ಹುಡುಕಿದರೂ ನಿನಗೆ ಒಳ್ಳೆಯ ಕುದುರೆ ಸಿಗುವುದಿಲ್ಲ" ಎಂದು ಹೇಳಿದರು. ಆದರೂ ಹ್ಯಾನ್ಸ್ ಅವರ ಜೊತೆ ಹೊರಟನು. ಕತ್ತಲಾದಂತೆ ಅವರು ಒಂದು ತಗ್ಗಾದ ಪೊಳ್ಳು ಜಾಗಕ್ಕೆ ಬಂದರು. ಅವರೆಲ್ಲಾ ಅಲ್ಲೆ ಮಲಗಿದರು. ಹಿರಿಯರಿಬ್ಬರು ಹ್ಯಾನ್ಸ್ ಮಲಗುವವರೆಗೂ ಸುಮ್ಮನಿದ್ದರು. ಅವನು ಗೊರಕೆ ಹೊಡೆಯಲು ಶುರು ಮಾಡಿದ ಮೇಲೆ ಜಾಣತನದಿಂದ ಆ ಜಾಗವನ್ನು ಬಿಟ್ಟು ಹೊರಟುಹೋದರು. ತಾವು ಜಾಣರಾದವು

ಎಂದುಕೊಂಡರು. ಮುಂದೆ ಅವರು ಮಾಡಿದ ಕೆಲಸಕ್ಕೆ ಪ್ರತಿಫಲವಾಗಿ ಏನನ್ನು ಪಡೆಯುತ್ತಾರೆ ಎಂದು ನಾವು ನೋಡೋಣ. ಬೆಳಕು ಹರಿಯಿತು. ಸೂರ್ಯನ ಬೆಳಕು ಹ್ಯಾನ್ಸನನ್ನು ಎಚ್ಚರಿಸಿತು. ತಾನೊಂದು ಆಳವಾದ ಪೊಟರೆಯೊಳಗೆ ಇರುವುದು ಅವನಿಗೆ ತಿಳಿಯಿತು. ಅವನು ಸುತ್ತಲೂ ಇಣುಕಿದನು. ನಂತರ ಆಶ್ಚರ್ಯಪಟ್ಟನು. "ಅಯ್ಯೋ! ದೇವರೆ, ನಾನು ಎಲ್ಲಿಗೆ ಬಂದಿರುವೆ?" ಎಂದುಕೊಳ್ಳುತ್ತ ಮೇಲಕ್ಕೆ ಎದ್ದು, ಪೊಟರೆಯ ಒಳಗಿನಿಂದ ತೆವಳಿ, ಕಾಡಿನೊಳಗೆ ಬಂದನು. ಇಲ್ಲಿ ನಾನೊಬ್ಬನೆ ಇರುವುದು. ಆ ಕುದುರೆಯನ್ನು ಹೇಗೆ ಪಡೆಯಲಿ? ಎಂದು ತನ್ನೊಳಗೇ ಯೋಚಿಸುತ್ತಿದ್ದನು. ಹಾಗೆ ಅವನು ಯೋಚಿಸುತ್ತಿರುವಾಗ ಆಮೆ ಚಿಪ್ಪಿನ ಬಣ್ಣದ ಒಂದು ಪುಟ್ಟ ಬೆಕ್ಕು ಅಲ್ಲಿಗೆ ಬಂದಿತು. ತುಂಬ ಸ್ನೇಹದಿಂದ ಅವನನ್ನು ಮಾತನಾಡಿಸಿತು. "ಎಲ್ಲಿಗೆ ಹೊರಟಿರುವೆ ಹ್ಯಾನ್ಸ್" ಎಂದು ಕೇಳಿತು. "ಆಹಾ! ನೀನು ನನಗೆ ಸಹಾಯ ಮಾಡಬಹುದು" ಎಂದು ಹ್ಯಾನ್ಸ್ ಹೇಳಿದನು. "ಹೌದು ನಿನ್ನ ಆಸೆ ಏನು ಎಂದು ನನಗೆ ಗೊತ್ತು. ನಿನಗೆ ಒಂದು ಅತ್ಯುತ್ತಮ ಕುದುರೆ ಬೇಕಾಗಿದೆ ಅಲ್ಲವೆ" ಎಂದು ಬೆಕ್ಕು ಕೇಳಿತು. "ಬಾ ನನ್ನ ಜೊತೆ. ಏಳು ವರ್ಷ ನಂಬಿಕೆಯಿಂದ ನನ್ನ ಸೇವೆ ಮಾಡು. ಆಗ ನೀನು ಎಂದೆಂದೂ ನೋಡಿರದಂತಹ ಅತ್ಯುತ್ತಮ ಕುದುರೆಯನ್ನು ಕೊಡುತ್ತೇನೆ" ಎಂದು ಆ ಬೆಕ್ಕು ಹೇಳಿತು. "ಚೆನ್ನಾಗಿದೆ ಇದು ನಿಜಕ್ಕೂ ವಿಚಿತ್ರ ಬೆಕ್ಕು. ಅದರ ಮಾತು ನಿಜವಾಗುತ್ತೋ ಇಲ್ಲವೊ ನೋಡೋಣ" ಎಂದು ಹ್ಯಾನ್ಸ್ ತನ್ನಲ್ಲೆ ಯೋಚಿಸಿದನು.

ಬೆಕ್ಕು ಅವನನ್ನು ತನ್ನ ಮಾಯದ ಅರಮನೆಗೆ ಕರೆದುಕೊಂಡು ಹೋಯಿತು. ಅಲ್ಲಿ ಇನ್ನೂ ಅನೇಕ ಬೆಕ್ಕುಗಳು ಇದ್ದವು. ಅವುಗಳು ಹ್ಯಾನ್ಸನನ್ನು ಕರೆದುಕೊಂಡುಹೋದ ಬೆಕ್ಕಿನ ಸೇವಕರಾಗಿದ್ದರು. ಬೆಕ್ಕಿನ ಆಜ್ಞೆಗಾಗಿ ಕಾಯುತ್ತಿದ್ದವು. ತಮ್ಮ ಯಜಮಾನ ಬೆಕ್ಕನ್ನು ನೋಡಿದಾಕ್ಷಣ ಅವುಗಳೆಲ್ಲ ತಮ್ಮ ತಮ್ಮ ಕೆಲಸ ಹುಡುಕಿಕೊಂಡು ಹೊರಟವು. ಅವುಗಳ ನಡತೆಯಲ್ಲಿ ಶಿಸ್ತು ಇತ್ತು, ಗಾಂಭೀರ್ಯವಿತ್ತು. ಅವುಗಳ ನಡಿಗೆಯಲ್ಲಿ ಒಂದು ರೀತಿಯ ಗತ್ತು ಇತ್ತು. ಸಾಯಂಕಾಲವಾದ ಮೇಲೆ ಅವರು ಊಟಕ್ಕೆ ಕುಳಿತಾಗ ಮೂರು ಬೆಕ್ಕುಗಳು ಸಂಗೀತ ನುಡಿಸಿದವು. ಒಂದು ಕೊಳಲು ನುಡಿಸಿತು. ಇನ್ನೊಂದು ವಯೋಲಿನ್ ನುಡಿಸಿತು. ಮೂರನೆಯದು ಕಹಳೆ ಊದಿತು. ಕಹಳೆ ಊದುವ ಬೆಕ್ಕು ತನ್ನ ಕೆನ್ನೆಗಳನ್ನು ಹೇಗೆ ಉಬ್ಬಿಸಿಕೊಂಡು ಊದುತ್ತಿತ್ತು ಎಂದರೆ, ಅದರ ಕೆನ್ನೆಗಳು ಎಲ್ಲಿ ಒಡೆದು ಹೋಗುವವೊ ಎಂದು ಅನಿಸುತ್ತಿತ್ತು. ಅವರ ಊಟವಾದ ಮೇಲೆ ಮೇಜನ್ನು ಎಳೆದುಕೊಂಡು ಹೋದವು. ಆಗ ಯಜಮಾನ ಬೆಕ್ಕು, ಹ್ಯಾನ್ಸನನ್ನು ತನ್ನ ಜೊತೆ ಡ್ಯಾನ್ಸ್ ಮಾಡಲು ಕರೆಯಿತು. "ಬಾ ಹ್ಯಾನ್ಸ್, ನನ್ನ ಜೊತೆ ಡ್ಯಾನ್ಸ್ ಮಾಡು" ಎಂದಿತು. "ಇಲ್ಲ, ಇಲ್ಲ ನನಗೆ ಬೆಕ್ಕಿನ ಜೊತೆ ಡ್ಯಾನ್ಸ್ ಮಾಡಲು ಬರುವುದಿಲ್ಲ. ನಾನು ಎಂದೂ ಡ್ಯಾನ್ಸನ್ನು ಕಲಿಯಲೇ ಇಲ್ಲ" ಎಂದು ಹ್ಯಾನ್ಸ್ ಉತ್ತರಿಸಿದನು.

"ಹಾಗಾದರೆ, ಅವನನ್ನು ಹಾಸಿಗೆಯ ಬಳಿ ಬಿಡಿ" ಎಂದು ಯಜಮಾನ ಬೆಕ್ಕು ಸೇವಕರಿಗೆ ಹೇಳಿತು. ಬೆಕ್ಕುಗಳು ದೀಪ ಹತ್ತಿಸಿಕೊಂಡು ಅವನನ್ನು ಮಲಗುವ ಕೋಣೆಗೆ ಕರೆದುಕೊಂಡು ಹೋದವು. ಅಲ್ಲಿ ಒಂದು ಬೆಕ್ಕು ಅವನ ಬೂಟುಗಳನ್ನು ಕಳಚಿತು. ಇನ್ನೊಂದು ಅವನ ಕಾಲುಚೀಲ ತೆಗೆಯಿತು. ಇನ್ನೊಂದು ದೀಪ ಆರಿಸಿತು. ಮಾರನೇ ದಿನ ಬೆಳಗ್ಗೆ ಮತ್ತೆ ಆ ಬೆಕ್ಕುಗಳು ಅವನ ಸೇವೆಗೆ ಹಾಜರಾದವು. ಒಂದು ಅವನ

ಕಾಲುಚೀಲ ತೊಡಿಸಿತು. ಇನ್ನೊಂದು ಅವನ ಸೊಂಟಪಟ್ಟಿಯ ಕೊಂಡಿ ಹಾಕಿತು. ಮೂರನೆಯದು ಬೂಟುಗಳನ್ನು ತೊಡಿಸಿತು. ನಾಲ್ಕನೆಯದು ಅವನ ಮುಖ ತೊಳೆಯಿತು. ಐದನೇ ಬೆಕ್ಕು ತನ್ನ ಮೆತ್ತನೆ ಪೊದೆ ಬಾಲದಿಂದ ಅವನ ಮುಖ ಒರೆಸಿತು. "ಎಲ್ಲ ಕೆಲಸಗಳನ್ನು ಬಹಳ ಚೆನ್ನಾಗಿ ಮತ್ತು ನಯವಾಗಿ ಮಾಡಿದಿರಿ" ಎಂದು ಹ್ಯಾನ್ಸ್ ಬೆಕ್ಕುಗಳಿಗೆ ಹೇಳಿದನು. ಅವನು ಪಡೆದ ಆ ಎಲ್ಲ ಸೇವೆಗಳಿಗೆ ಪ್ರತಿಯಾಗಿ ಇಡೀ ದಿನ ಕಟ್ಟಿಗೆ ಒಡೆಯಬೇಕಾಗಿತ್ತು. ಕಟ್ಟಿಗೆ ಒಡೆಯಲು ಬೆಕ್ಕು ಅವನಿಗೆ ಒಳ್ಳೆಯ ಕೊಡಲಿ, ಒಳ್ಳೆಯ ಉಳಿಗಳು ಮತ್ತು ಒಳ್ಳೆಯ ಬೆಣೆಗಳನ್ನು ಕೊಟ್ಟಿತು. ಆದರೆ ಕೊಡಲಿಗೆ ಸಿಗಿಸುವ ಕೋಲು ಮಾತ್ರ ತಾಮ್ರದ್ದಾಗಿತ್ತು.

ಹ್ಯಾನ್ಸ್ ಬೆಕ್ಕು ಹೇಳಿದ ಕೆಲಸವನ್ನು ಮಾಡಿಕೊಂಡು ಅಲ್ಲಿ ಆರಾಮವಾಗಿದ್ದನು. ಪ್ರತಿ ದಿನವೂ ಅವನು ಒಳ್ಳೆಯ ಊಟ ಮಾಡುತ್ತಿದ್ದನು. ಒಳ್ಳೆಯ ಮದ್ಯ ಕುಡಿಯುತ್ತಿದ್ದನು. ಅಲ್ಲಿ ಆಮೆ ಚಿಪ್ಪಿನ ಬಣ್ಣದ ಬೆಕ್ಕು ಮತ್ತು ಅದರ ಸೇವಕರನ್ನು ಬಿಟ್ಟರೆ ಬೇರೆ ಯಾರನ್ನೂ ಅವನು ನೋಡಲಿಲ್ಲ. ಒಂದು ದಿನ ಆ ಬೆಕ್ಕು "ಹೋಗು, ನನ್ನ ಹೊಲಕ್ಕೆ ಹೋಗಿ ಹುಲ್ಲನ್ನು ಕತ್ತರಿಸಿ ಚೆನ್ನಾಗಿ ಒಣಗಿಸು" ಎಂದು ಹೇಳಿ, ಒಂದು ಬೆಳ್ಳಿಯ ಕುಡುಗೋಲು ಮತ್ತು ಅದನ್ನು ಚೂಪು ಮಾಡಲು ಬಂಗಾರದ ಕಲ್ಲು ಕೊಟ್ಟಿತು. ಕೆಲಸವಾದ ಮೇಲೆ ಆ ವಸ್ತುಗಳನ್ನು ಸರಿಯಾಗಿ ತರಬೇಕು ಎಂದು ಹೇಳಿತು. ಹ್ಯಾನ್ಸ್ ಬೆಕ್ಕು ಹೇಳಿದ ಕೆಲಸ ಮಾಡಲು ಹೋದನು. ಎಲ್ಲ ಕೆಲಸ ಮುಗಿದ ಮೇಲೆ, ಬೆಳ್ಳಿಯ ಕುಡುಗೋಲು, ಉಜ್ಜುವ ಬಂಗಾರದ ಕಲ್ಲು ಮತ್ತು ಹುಲ್ಲನ್ನು ತಂದುಕೊಟ್ಟರೆ ನಂತರ ತನಗೆ ಬಹುಮಾನವಾಗಿ ಏನೂ ಕೊಡುವುದಿಲ್ಲವೆ? ಎಂದು ಕೇಳಿದನು. "ಇಲ್ಲ ನೀನು ನನಗಾಗಿ ಇನ್ನೂ ಅನೇಕ ಕೆಲಸಗಳನ್ನು ಮೊದಲು ಮಾಡು. ಇಲ್ಲಿ ಬೆಳ್ಳಿಯ ಬಟಾಣಿಗಳಿವೆ, ಬೆಳ್ಳಿಯ ಇಕ್ಕಳಗಳಿವೆ, ಬೆಳ್ಳಿಯ ಜೋಡಣೆಗಳು ಇವೆ. ಅವುಗಳಲ್ಲಿ ಬೇಕಾದವುಗಳನ್ನು ಬಳಸಿಕೊಂಡು ಮೊದಲು ಒಂದು ಪುಟ್ಟ ಮನೆಯನ್ನು ನನಗಾಗಿ ಕಟ್ಟಬೇಕು" ಎಂದು ಬೆಕ್ಕು ಹೇಳಿತು. ಹ್ಯಾನ್ಸ್ ಬೆಕ್ಕಿಗಾಗಿ ಒಂದು ಮನೆ ಕಟ್ಟಿದನು. ಆಗಲೂ ತನಗೆ ಕುದುರೆ ಸಿಗಲಿಲ್ಲವೆಂದು ಬೆಕ್ಕಿಗೆ ನೆನಪು ಮಾಡಿದನು. ಬೆಕ್ಕು ಹೇಳಿದ ಏಳು ವರ್ಷಗಳು ಬಹಳ ಬೇಗನೆ ಕಳೆದುಹೋದವು. ಬೆಕ್ಕು ಅವನನ್ನು "ನಿನಗೆ ನನ್ನ ಕುದುರೆಗಳನ್ನು ನೋಡಲು ಆಸೆ ಇದೆಯೊ, ಇಲ್ಲವೊ? ಎಂದು ಕೇಳಿತು. ಅದಕ್ಕೆ ಹ್ಯಾನ್ಸ್ "ಹೌದು, ನಾನು ನೋಡಬೇಕು" ಎಂದು ಉತ್ತರಿಸಿದನು.

ಅವರು ಮನೆಯ ಹೊರಗೆ ಹೋದರು. ಅಲ್ಲಿ ಒಂದು ಲಾಯದ ಬಾಗಿಲು ತೆಗೆಯಲಾಯಿತು. ಅಲ್ಲಿ ಹನ್ನೆರಡು ಕುದುರೆಗಳು ನಿಂತಿದ್ದವು. ಯಾರು ನೋಡಿದರೂ ಹೆಮ್ಮೆಪಡಬಹುದಾದ ಕುದುರೆಗಳಾಗಿದ್ದವು. ಓಡಲು ಸಿದ್ಧವಾಗಿದ್ದವು. ಅವುಗಳನ್ನು ನೋಡಿ ಹ್ಯಾನ್ಸ್‌ಗೆ ತುಂಬ ಸಂತೋಷವಾಯಿತು. ಅವನು ಅವುಗಳನ್ನು ನೋಡಿದ ಮೇಲೆ ಬೆಕ್ಕು ಹ್ಯಾನ್ಸ್‌ಗೆ ಊಟ ಮಾಡಲು ಹೇಳಿತು. ನಂತರ "ಈಗ ನೀನು ನಿನ್ನ ಮನೆಗೆ ಹೋಗು. ನಿನಗೆ ಕೊಡಬೇಕಾದ ಕುದುರೆಯನ್ನು ಈಗ ಕೊಡುವುದಿಲ್ಲ. ಆದರೆ ಇನ್ನು ಮೂರು ದಿನ ಬಿಟ್ಟು ನಾನೇ ನನ್ನ ಜೊತೆ ಕರೆದುಕೊಂಡು ಬರುತ್ತೇನೆ " ಎಂದು ಹೇಳಿತು. ಹ್ಯಾನ್ಸ್ ಹೊರಟನು. ಬೆಕ್ಕುಗಳು ಅವನಿಗೆ ಮಿಲ್ಲಿನ ದಾರಿಯನ್ನು ತೋರಿಸಿದವು. ಅವನಿಗೆ ತೊಡಲು ಅವುಗಳು ಹೊಸ ಬಟ್ಟೆಯನ್ನು ಕೊಡದೆ ಇದ್ದುದರಿಂದ ತನ್ನ ಹರಕು ಬಟ್ಟೆಯಲ್ಲೇ ಮಿಲ್ಲಿಗೆ ಹೋದನು.


ಆ ಬಟ್ಟೆಗಳು ಅವನು ಏಳು ವರ್ಷಗಳ ಹಿಂದೆ ಹಾಕಿಕೊಂಡು ಹೋಗಿದ್ದವುಗಳೇ ಆಗಿದ್ದವು. ಆದರೆ ಅವು ಈಗ ಚಿಕ್ಕವಾಗಿದ್ದವು. ತನ್ನ ಹಿರಿಯ ಅಣ್ಣಂದಿರು ಮೊದಲೇ ಬಂದಿರುವುದನ್ನು ನೋಡಿದನು. ಅವರಿಬ್ಬರೂ ಒಂದು ಕುದುರೆಯನ್ನು ತಂದಿದ್ದರು. ಅವುಗಳಲ್ಲಿ ಒಂದು ಕುರುಡು, ಇನ್ನೊಂದು ಕುಂಟ ಕುದುರೆ ಆಗಿತ್ತು. "ನಿನ್ನ ಕುದುರೆ ಎಲ್ಲಿ?" ಎಂದು ಅವರು ಕೇಳಿದರು. "ಅದು ಇನ್ನು ಮೂರು ದಿನಗಳಲ್ಲಿ ಬರುತ್ತದೆ" ಎಂದು ಅವನು ಉತ್ತರಿಸಿದನು. ಅವನ ಉತ್ತರದಿಂದ ಅವರೆಲ್ಲ ತಮಾಷೆ ಮಾಡಿದರು. "ಹೌದು, ನಿನ್ನ ಕುದುರೆ ತುಂಬ ವಿಚಿತ್ರ ಪ್ರಾಣಿ ಆಗಿರುತ್ತದೆ ಅಲ್ಲವೆ?" ಎಂದು ನಕ್ಕರು. ಹ್ಯಾನ್ಸ್ ಒಳಗೆ ನಡುಮನೆಗೆ ಹೋದನು. ಆದರೆ ಗಿರಣಿಯ ಯಜಮಾನ ಅವನನ್ನು ತಮ್ಮ ಜೊತೆ ಮೇಜಿನ ಬಳಿ ಕುಳಿತುಕೊಳ್ಳಲು ಬಿಡಲಿಲ್ಲ. ಅವನ ಬಟ್ಟೆ ತುಂಬ ಕೊಳಕಾಗಿ ಚಿಂದಿಯಾಗಿವೆ. ಯಾರಾದರೂ ಒಳಗೆ ಬಂದರೆ ಅವನಿಂದ ತಮಗೆ ಅಪಮಾನವಾಗುತ್ತದೆ ಎಂದು ಹೇಳಿದನು. ಆದ್ದರಿಂದ ಅವನಿಗೆ ಹೊರಗೆ ಕೂರಿಸಿ ಊಟ ಹಾಕಿದರು. ರಾತ್ರಿ ಮಲಗುವ ಹೊತ್ತಿಗೆ ಆ ಹಿರಿಯರಿಬ್ಬರು ಅವನನ್ನು ತಮ್ಮ ಜೊತೆ ಮಲಗಲು ಬಿಡಲಿಲ್ಲ. ಹೀಗಾಗಿ ಅವನು ಬಾತುಕೋಳಿ ಗೂಡುಗಳ ನಡುವೆ ಒರಟು ಹುಲ್ಲಿನ ಮೇಲೆ ಮಲಗಬೇಕಾಯಿತು.

ಮಾರನೆಯ ದಿನವೇ ಬೆಕ್ಕು ಹೇಳಿದ ಮೂರನೇ ದಿನವಾಗಿತ್ತು. ಹ್ಯಾನ್ಸ್ ಏಳುವ ಹೊತ್ತಿಗೆ ಸರಿಯಾಗಿ ಒಂದು ರಥವನ್ನು ಆರು ಕುದುರೆಗಳು ಎಳೆದುಕೊಂಡು ಬಂದವು. ಅವುಗಳ ಚರ್ಮ ನುಣುಪಾಗಿ ಹೊಳೆಯುತ್ತಿತ್ತು. ರಥದ ಪಕ್ಕದಲ್ಲಿ ಒಬ್ಬ ಸೇವಕ ಏಳನೆಯ ಕುದುರೆಯನ್ನು ಹಿಡಿದುಕೊಂಡು ಬರುತ್ತಿದ್ದನು. ರಥದಿಂದ ಒಬ್ಬ ಸುಂದರ ರಾಜಕುಮಾರಿ ಕೆಳಗಿಳಿದು ಮಿಲ್ಲಿನ ಒಳಗೆ ಹೋದಳು. ಅವಳೇ ಆಮೆ ಚಿಪ್ಪಿನ ಬಣ್ಣದ ಬೆಕ್ಕು ಆಗಿದ್ದವಳು. ಅವಳಿಗೆ ಹ್ಯಾನ್ಸ್ ಏಳು ವರ್ಷ ಸೇವೆ ಸಲ್ಲಿಸಿದ್ದನು. "ಆ ಚಿಕ್ಕ ಗಿರಣಿ ಹುಡುಗ ಎಲ್ಲಿ?" ಎಂದು ರಾಜಕುಮಾರಿ ಗಿರಣಿ ಮಾಲೀಕನನ್ನು ಕೇಳಿದಳು. "ನಾವು ಅವನನ್ನು ಗಿರಣಿಯೊಳಕ್ಕೆ ಕರೆದುಕೊಳ್ಳಲಿಲ್ಲ. ಅವನ ಬಟ್ಟೆ ಕೊಳಕಾಗಿ ಚಿಂದಿ ಆಗಿದ್ದವು. ಅವನು ಅಲ್ಲೆ ಬಾತುಕೋಳಿ ಗೂಡಿನಲ್ಲಿ ಮಲಗಿರಬೇಕು" ಎಂದು ಗಿರಣಿಯ ಅಜ್ಜ ಹೇಳಿದನು. ಆಗ ರಾಜಕುಮಾರಿ ಹ್ಯಾನ್ಸನನ್ನು ಕರೆತರಲು ಹೇಳಿದಳು. ಆದರೆ ಆ ಸೇವಕ ಹೋಗುವ ಮೊದಲೆ ಹ್ಯಾನ್ಸ ತನ್ನ ಒಳ ಅಂಗಿಯಿಂದ ಮೈಯನ್ನು ಮುಚ್ಚಿಕೊಂಡನು. ಅವರು ಅವನಿಗೆ ಸ್ನಾನ ಮಾಡಿಸಿ ಅತ್ಯಂತ ಸುಂದರ ಉಡುಪನ್ನು ತೊಡಿಸಿದರು. ಬಹುಶಃ ಯಾವ ರಾಜನೂ ಅವನಷ್ಟು ಸುಂದರವಾಗಿ ಇರಲಿಲ್ಲವೆಂದು ರಾಜಕುಮಾರಿ ಅಂದುಕೊಂಡಳು.

ನಂತರ ಆ ಹಿರಿಯರಿಬ್ಬರು ತಂದಿರುವ ಕುದುರೆಗಳನ್ನು ತೋರಿಸಿ ಎಂದು ರಾಜಕುಮಾರಿ ಕೇಳಿದಳು. ಅವರು ತಮ್ಮ ಕುರುಡ ಮತ್ತು ಕುಂಟ ಕುದುರೆಯನ್ನು ತಂದು ತೋರಿಸಿದರು. ರಾಜಕುಮಾರಿ ತನ್ನ ಸೇವಕನಿಗೆ ಕುದುರೆ ತರಲು ಹೇಳಿದಳು. ಅದನ್ನು ನೋಡಿದ ಗಿರಣಿ ಅಜ್ಜ ಅಂತಹ ಕುದುರೆ ಇದುವರೆಗೂ ತನ್ನ ಲಾಯದಲ್ಲಿ ಇರಲಿಲ್ಲವೆಂದು ಹೇಳಿದನು. "ಇದು, ಮೂರನೆಯ ಸಹಾಯಕ ಕೆಲಸಗಾರನಿಗೆ ಸೇರಿದ್ದು" ಎಂದು ರಾಜಕುಮಾರಿ ಹೇಳಿದಳು. ಅದಕ್ಕೆ ಗಿರಣಿಯವನು "ಈ ಗಿರಣಿ ಕೂಡ ಅವನಿಗೆ ಸೇರಿದೆ" ಎಂದನು. ಅದಕ್ಕೆ ರಾಜಕುಮಾರಿ, ಮಿಲ್ಲನ್ನೂ, ಕುದುರೆಯನ್ನೂ ಅವನೇ ಇಟ್ಟುಕೊಳ್ಳಲು ಹೇಳಿದಳು. ಹಾಗೆ ಹೇಳುತ್ತಾ ಪ್ರಾಮಾಣಿಕನಾಗಿದ್ದ ಹ್ಯಾನ್ಸನನ್ನು ತನ್ನ ರಥದಲ್ಲಿ ಕೂಡಿಸಿಕೊಂಡು ಹೊರಟೇ ಹೋದಳು. ಅವರು ಮೊದಲು ಹ್ಯಾನ್ಸ್ ಬೆಳ್ಳಿಯ ಉಪಕರಣಗಳಿಂದ ಕಟ್ಟಿದ್ದ ಮನೆಗೆ ಹೋದರು. ಅದು ದೊಡ್ಡ ಭವ್ಯ

ಅರಮನೆಯಾಗಿತ್ತು. ಪ್ರತಿಯೊಂದು ವಸ್ತುಗಳೂ ಬೆಳ್ಳಿ ಮತ್ತು ಬಂಗಾರದವುಗಳಾಗಿದ್ದವು. ಅಲ್ಲಿ ರಾಜಕುಮಾರಿ ಹ್ಯಾನ್ಸನನ್ನು ಮದುವೆ ಆದಳು. ಹೀಗೆ ಅವನು ಅತ್ಯಂತ ಶ್ರೀಮಂತನಾದನು. ಇಡೀ ಜೀವಮಾನವೆಲ್ಲ ಸುಖವಾಗಿ ಬಾಳಿದನು.

೧೪. ಜೇಡ ಮತ್ತು ಚಿಗಟ



ಒಂದು ಜೇಡ ಮತ್ತು ಒಂದು ಚಿಗುಟ ಒಂದೇ ಮನೆಯಲ್ಲಿ ಒಟ್ಟಿಗೆ ವಾಸವಾಗಿದ್ದವು. ಒಂದು ಮೊಟ್ಟೆಯ ಸಿಪ್ಪೆಯನ್ನು ತಮ್ಮ ಮದ್ಯ ಪಾತ್ರೆಯನ್ನಾಗಿ ಮಾಡಿಕೊಂಡವು. ಒಂದು ದಿನ ಜೇಡ ಬಿಯರನ್ನು ಕಲುಕುತ್ತಿರುವಾಗ ಆ ಪಾತ್ರೆಯೊಳಗೆ ಬಿದ್ದು ಮೈಮೇಲೆ ಬೊಬ್ಬೆ ಬರಿಸಿಕೊಂಡಿತು. ಆಗ ಚಿಗುಟ ಕಿರುಚತೊಡಗಿತು. ಆಗ ಬಾಗಿಲು, "ನೀನು ಯಾಕೆ ಕಿರುಚುತ್ತಿರುವೆ ಚಿಗುಟ?" ಎಂದು ವಿಚಾರಿಸಿತು. ಅದಕ್ಕೆ ಚಿಗುಟ "ಯಾಕೆಂದರೆ, ಜೇಡ ಮದ್ಯದ ಪಾತ್ರೆಯಲ್ಲಿ ಬಿದ್ದು ಬೊಬ್ಬೆ ಮಾಡಿಕೊಂಡಿದೆ" ಎಂದು ಉತ್ತರಿಸಿತು. ಆಗ, ಬಾಗಿಲು, ತನಗೆ ನೋವಾಗಿರುವ ಹಾಗೆ, "ಕಿರಕ್" ಎಂದು ಶಬ್ದ ಮಾಡಿತು. ಆಗ, ಮೂಲೆಯಲ್ಲಿ ನಿಂತುಕೊಂಡಿದ್ದ ಪೊರಕೆ "ನೀನು ಯಾರಿಗಾಗಿ ದುಃಖಿಸುತ್ತಿರುವೆ ಬಾಗಿಲೆ?" ಎಂದು ಕೇಳಿತು.

"ನಾನು ಯಾಕೆ ಶಬ್ದ ಮಾಡಬಾರದು?"
"ಪುಟ್ಟ ಜೇಡ, ಬೊಬ್ಬೆ ಮಾಡಿಕೊಂಡಿದೆ.
ಚಿಗುಟ ಅದಕ್ಕಾಗಿ ಅಳುತ್ತಿದೆ" ಎಂದು ಬಾಗಿಲು ಉತ್ತರಿಸಿತು.

ಆಗ, ಪೊರಕೆ ಕಷ್ಟ ಪಡುತ್ತಾ ಕಸಗುಡಿಸಲು ಶುರು ಮಾಡಿತು. ಅದೇ ವೇಳೆಗೆ ಒಂದು ಪುಟ್ಟ ಬಂಡಿ

ಬಂದಿತು. ಪೊರಕೆ ಯಾಕೆ ಕಸಗುಡಿಸುತ್ತಿದೆ ಎಂದು ಕೇಳಿತು.

"ನಾನು ಗುಡಿಸಬಾರದೆ?" ಎಂದು ಪೊರಕೆ ಕಾರಣವನ್ನು ಹೇಳಿತು.

"ಆ ಪುಟ್ಟ ಜೇಡ ಬೊಬ್ಬೆ ಬರಿಸಿಕೊಂಡಿದೆ,
ಅದಕ್ಕೆ ಚಿಗುಟ ಅಳುತ್ತಿದೆ,
ಆ ಚಿಕ್ಕ ಬಾಗಿಲು ನೋವಿನಿಂದ ಕಿರುಗುಟ್ಟುತ್ತಿದೆ" ಎಂದಿತು.

ಆಗ ಆ ಪುಟ್ಟ ಬಂಡಿ, ಹಾಗಾದರೆ "ನಾನು ಓಡುತ್ತೇನೆ" ಎಂದು ಹೇಳಿ, ಜೋರಾಗಿ ಓಡತೊಡಗಿತು. ಅದು ಒಂದು ಬೂದಿ ರಾಶಿಯನ್ನು ದಾಟಿಕೊಂಡು ಹೋಯಿತು. ಆಗ ಬೂದಿ, "ಚಿಕ್ಕ ಬಂಡಿ, ನೀನು ಯಾಕೆ ಹಾಗೆ ಓಡುತ್ತಿರುವೆ?" ಎಂದು ಕೇಳಿತು.

"ಯಾಕೆಂದರೆ, ಆ ಪುಟ್ಟ ಜೇಡ ಬೊಬ್ಬೆ ಬರಿಸಿಕೊಂಡಿದೆ,
ಅದಕ್ಕಾಗಿ ಆ ಪುಟ್ಟ ಚಿಗುಟ ಅಳುತ್ತಿದೆ,
ಆ ಪುಟ್ಟ ಬಾಗಿಲು ನೋವಿನಿಂದ ಕಿರಿ ಕಿರಿ ಎಂದು ಶಬ್ದ ಮಾಡುತ್ತಿದೆ,
ಪೊರಕೆ ಅವೆಲ್ಲವುಗಳಿಗಾಗಿ ತಾನು ಗುಡಿಸುತ್ತಿದೆ" ಎಂದು ಬಂಡಿ ಉತ್ತರಿಸಿತು.

"ಹಾಗಾದರೆ, ನಾನು ಸಿಟ್ಟಿನಿಂದ ಧಗಧಗಿಸುತ್ತೇನೆ" ಎಂದು ಬೂದಿ ಹೇಳಿತು. ಬೂದಿಯ ಪಕ್ಕದಲ್ಲಿ ಒಂದು ಮರ ಬೆಳೆದು ನಿಂತಿತ್ತು. ಅದು ಬೂದಿಯನ್ನು "ಬೂದಿ ರಾಶಿಯೆ, ನೀನು ಯಾಕೆ ಸುಡುತ್ತಿರುವೆ?" ಎಂದು ಕೇಳಿತು.

"ಯಾಕೆಂದರೆ, ಆ ಪುಟ್ಟ ಜೇಡ ಬೊಬ್ಬೆ ಬರಿಸಿಕೊಂಡಿದೆ,
ಅದಕ್ಕಾಗಿ ಆ ಪುಟ್ಟ ಚಿಗುಟ ಅಳುತ್ತಿದೆ,
ಚಿಕ್ಕ ಬಾಗಿಲು ನೋವಿನಿಂದ ಶಬ್ದ ಮಾಡುತ್ತಿದೆ,
ಪೊರಕೆ ಕಷ್ಟದಿಂದ ಗುಡಿಸುತ್ತಿದೆ,
ಆ ಪುಟ್ಟ ಬಂಡಿ ಜೋರಾಗಿ ಓಡುತ್ತಿದೆ" ಎಂದು ಉತ್ತರಿಸಿತು.

ಅದನ್ನು ಕೇಳುತ್ತಲೇ ಆ ಮರ ಕೂಗಿತು, "ನಾನು ಅಲ್ಲಾಡುತ್ತೇನೆ" ಎಂದು ಹೇಳಿ, ಅದರ ಎಲ್ಲ ಎಲೆಗಳು ಉದುರುವವರೆಗೆ ಅಲ್ಲಾಡುತ್ತಲೆ ಇತ್ತು. ಆಗ, ಕೊಡ ಹಿಡಿದುಕೊಂಡು ಅದೇ ದಾರಿಯಲ್ಲಿ ಒಂದು ಹುಡುಗಿ ಬಂದಳು. ಅವಳು ಮರ ಅಲ್ಲಾಡುವುದನ್ನು ನೋಡಿ ಆಶ್ಚರ್ಯದಿಂದ "ಪುಟ್ಟ ಮರವೇ, ನೀನು ಯಾಕೆ ಅಲ್ಲಾಡುತ್ತಿರುವೆ?" ಎಂದು ಕೇಳಿದಳು.

"ನಾನು ಯಾಕೆ ಹಾಗೆ ಮಾಡಬಾರದು?
ಆ ಚಿಕ್ಕ ಜೇಡ ಬೊಬ್ಬೆ ಬರಿಸಿಕೊಂಡಿದೆ,
ಅದಕ್ಕಾಗಿ ಚಿಗುಟ ಅಳುತ್ತಿದೆ,
ಚಿಕ್ಕ ಬಾಗಿಲು ನೋವಿನಿಂದ ಕಿರುಗುಟ್ಟುತ್ತಿದೆ,

ಪೊರಕೆ ಗುಡಿಸುತ್ತಿದೆ,
ಆ ಚಿಕ್ಕ ಬಂಡಿ ತುಂಬ ಜೋರಾಗಿ ಓಡಿದೆ,
ಮತ್ತು ಬೂದಿ ಸುಡುತ್ತಿದೆ" ಎಂದು ಉತ್ತರಿಸಿತು.


ಆಗ, ಆ ಹುಡುಗಿ "ಹಾಗಾದರೆ ನಾನೂ ಕೂಡ ನನ್ನ ಕೊಡವನ್ನು ಒಡೆದು ಹಾಕುತ್ತೇನೆ" ಎಂದು ಹೇಳುತ್ತಾ ಅವಳು ತನ್ನ ಕೊಡವನ್ನು ಕೆಳಗೆ ಎತ್ತಿ ಹಾಕಿದಳು. ಕೊಡ ಒಡೆಯಿತು. ಅವಳು ಯಾವಾಗಲೂ ನೀರು ತೆಗೆದುಕೊಂಡು ಹೋಗುತಿದ್ದ ತೊರೆ ಕೇಳಿತು, "ನನ್ನ ಪುಟ್ಟ ಹುಡುಗಿ, ನಿನ್ನ ಕೊಡವನ್ನು ಯಾಕೆ ಒಡೆದು ಹಾಕಿದೆ?"

"ನಾನು ಯಾಕೆ ಒಡೆಯಬಾರದು" ಎಂದು ಕಾರಣ ಹೇಳಿದಳು.
"ಆ ಪುಟ್ಟ ಜೇಡ ಬೊಬ್ಬೆ ಬರಿಸಿಕೊಂಡಿದೆ,
ಅದಕ್ಕೆ ಚಿಗುಟ ಅಳುತ್ತಿದೆ,
ಬಾಗಿಲು ನೋವಿನಿಂದ ಕಿರುಗುಟ್ಟುತ್ತಿದೆ,
ಪೊರಕೆ ಗುಡಿಸಿದೆ,
ಆ ಪುಟ್ಟ ಬಂಡಿ ರಭಸವಾಗಿ ಓಡಿದೆ,
ಬೂದಿ ಸುಡುತ್ತಿದೆ,
ಪುಟ್ಟ ಮರ ತನ್ನ ಎಲೆಗಳನ್ನೆಲ್ಲಾ ಉದುರಿಸಿದೆ,
ಈಗ, ಇದು ನನ್ನ ಸರದಿ ಅಷ್ಟೆ" ಎಂದಳು.

"ಹೌದಾ, ಹಾಗಾದರೆ, ನಾನು ಈಗ ಹರಿಯಲು ಪ್ರಾರಂಭಿಸುವೆ" ಎಂದು ಆ ನೀರಿನ ತೊರೆ ಹೇಳಿತು. ನಂತರ, ಅದು ಹರಿಯತೊಡಗಿತು. ಹರಿದು ತನ್ನ ಹರವನ್ನು ದೊಡ್ಡದಾಗಿ ಮಾಡಿಕೊಂಡಿತು. ಹಾಗೆ, ಅದು ದೊಡ್ಡದಾಗುತ್ತಾ, ದೊಡ್ಡದಾಗುತ್ತಾ, ಕೊನೆಗೆ ಆ ಪುಟ್ಟ ಹುಡುಗಿಯನ್ನು ನುಂಗಿತು, ಆ ಪುಟ್ಟ ಮರವನ್ನು, ಬೂದಿಯನ್ನು, ಬಂಡಿಯನ್ನು, ಪೊರಕೆಯನ್ನು, ಬಾಗಿಲನ್ನು, ಚಿಗುಟವನ್ನು, ಕೊಟ್ಟ ಕೊನೆಗೆ ಜೇಡವನ್ನು, ಎಲ್ಲರನ್ನೂ ನುಂಗಿಬಿಟ್ಟಿತು.

೧೫. ಗುಬ್ಬಣ್ಣ ಮತ್ತು ಅವನ ನಾಲ್ಕು ಮಕ್ಕಳು

ಒಂದೂರಿನಲ್ಲಿ ಗುಬ್ಬಮ್ಮ ಮತ್ತು ಗುಬ್ಬಣ್ಣ ಒಂದು ಗೂಡಿನಲ್ಲಿ ವಾಸವಾಗಿದ್ದರು. ಆ ದಂಪತಿಗಳಿಗೆ ನಾಲ್ಕು ಪುಟ್ಟ ಗುಬ್ಬಚ್ಚಿ ಮಕ್ಕಳಿದ್ದರು. ಒಂದು ಸಾರಿ ಗುಬ್ಬಚ್ಚಿಗಳ ಅಪ್ಪ ಅಮ್ಮ ಇಲ್ಲದಿರುವಾಗ ಕೆಲವು ತುಂಟ ಹುಡುಗರು ಆ ಗೂಡನ್ನು ನೋಡಿದರು. ಅದರಲ್ಲಿರುವ ಮರಿಗಳನ್ನು ಹೊರಗೆ ಬಿಟ್ಟರು. ಅದೇ ವೇಳೆಗೆ ಮೃದುವಾದ ಗಾಳಿ ಬೀಸಿ ಆ ಮರಿಗಳನ್ನು ಎತ್ತಿಕೊಂಡು ಹೋಯಿತು. ಆದರೆ ತಾಯಿ ಗುಬ್ಬಮ್ಮ ತನ್ನ ಮರಿಗಳು ಇಲ್ಲದಿರುವುದನ್ನು ನೋಡಿ ತುಂಬ ದುಃಖಪಟ್ಟಳು. ತಾನಿನ್ನೂ ತನ್ನ ಮಕ್ಕಳಿಗೆ ಬದುಕುವ



ನಡತೆಗಳನ್ನು ಹೇಳಿಕೊಟ್ಟಿಲ್ಲ, ಪ್ರಪಂಚದ ರೀತಿ, ನೀತಿಗಳನ್ನು ತಿಳಿಸಿಲ್ಲ, ಅಷ್ಟರಲ್ಲಿ ಹೋಗಿಬಿಟ್ಟರಲ್ಲ ಎಂದು ಹಲುಬಿದಳು.

ವಸಂತ ಕಾಲ ಬಂದರೆ ಹಕ್ಕಿಗಳಿಗೆ ಹಬ್ಬವೇ ಆಗುತ್ತದೆ. ಹೊಲಗಳಲ್ಲಿ ಗುಂಪು ಗುಂಪಾಗಿ ಕಾಳು ತಿನ್ನಲು ಹೋಗುತ್ತವೆ. ಆಗ ಒಬ್ಬರನ್ನೊಬ್ಬರು ನೋಡುವ ಅವಕಾಶ ಸಿಗುತ್ತದೆ. ಹೀಗೆ ಒಂದು ಸಾರಿ ಒಂದು ಹೊಲದಲ್ಲಿ ಗುಬ್ಬಿಗಳ ಗುಂಪಿನಲ್ಲಿ ಗುಬ್ಬಣ್ಣ ತನ್ನ ಮಕ್ಕಳನ್ನು ಗುರುತಿಸಿದನು. "ಅಯ್ಯೋ! ಬೇಸಿಗೆ ಕಾಲದಲ್ಲಿ ನಿಮ್ಮನ್ನು ನೆನೆಸಿಕೊಂಡು ಎಷ್ಟು ದುಃಖಪಟ್ಟೆನು. ನನ್ನ ಬುದ್ಧಿವಾದವಿಲ್ಲದೆ ನೀವು ಈ ಪ್ರಪಂಚವನ್ನು ಎದುರಿಸಲು ಎಷ್ಟು ಕಷ್ಟಪಟ್ಟಿರಬೇಕು! ಈಗ ನನ್ನ ಮಾತನ್ನು ಕೇಳಿಸಿಕೊಳ್ಳಿ. ನೀವು ಬಹಳ ಎಚ್ಚರಿಕೆಯಿಂದ ಇರಿ. ಯಾಕೆಂದರೆ ಚಿಕ್ಕವರು ಯಾವಾಗಲು ಅನೇಕ ರೀತಿಯ ಅಪಾಯಗಳನ್ನು ಎದುರಿಸಬೇಕಾಗುತ್ತದೆ" ಎಂದು ತನ್ನ ಮಕ್ಕಳಿಗೆ ಹೇಳಿದನು.

ನಂತರ ತನ್ನ ಹಿರಿಯ ಮಗನನ್ನು ಕರೆದು ಅವನು ಬೇಸಿಗೆ ಕಾಲದಲ್ಲಿ ಎಲ್ಲಿದ್ದನು? ಹೇಗಿದ್ದನು? ಏನು ಮಾಡಿದನು? ಹೇಗೆ ಜೀವನ ನಡೆಸಿದನು ಎಂದು ಕೇಳಿದನು. ಅದಕ್ಕೆ ಆ ಹಿರಿಯ ಮಗ ಗುಬ್ಬಿ "ನಾನು ಒಂದು ತೋಟದಲ್ಲಿದ್ದೆನು. ಬಾರಿ ಹಣ್ಣುಗಳು ಮರದಲ್ಲಿ ಬಿಡುವವರೆಗೂ, ಚಿಟ್ಟೆಗಳನ್ನು, ಹುಳುಗಳನ್ನು ತಿಂದು ಬದುಕಿದೆನು" ಎಂದು ಹೇಳಿದನು. ಅದಕ್ಕೆ ತಂದೆ ಗುಬ್ಬಿ "ಹುಳು ಹುಪ್ಪಟೆಗಳನ್ನು ನೆಲದಲ್ಲಿ ಅಗೆದು ತಿನ್ನುವುದು ಕೆಟ್ಟದ್ದೇನಲ್ಲ. ಆದರೆ ಅದರಲ್ಲಿ ದೊಡ್ಡ ಅಪಾಯವಿದೆ. ಯಾವಾಗಲೂ ಹುಷಾರಾಗಿರಬೇಕು. ಜನಗಳು ಹಸಿರಾದ ಉದ್ದ ಕೋಲುಗಳನ್ನು ತೋಟದೊಳಗೆ ತಂದಾಗ ತುಂಬ ಎಚ್ಚರಿಕೆಯಿಂದ ಇರಬೇಕು. ಆ ಕೋಲುಗಳು ಒಳಗಡೆ ಟೊಳ್ಳಾಗಿದ್ದರೂ ಕೂಡ ತುದಿಯಲ್ಲಿ ಒಂದು ಸಣ್ಣ ರಂಧ್ರವಿದ್ದು ಅದರಿಂದ ಕಲ್ಲನ್ನು ಹೊಡೆಯುತ್ತಾರೆ" ಎಂದು ಎಚ್ಚರಿಕೆ ನೀಡಿತು.

"ಹೌದು, ಅಪ್ಪ. ನೀವು ಹೇಳಿದ್ದು ನಿಜ. ಆದರೆ, ಆ ಚಿಕ್ಕ ರಂಧ್ರಕ್ಕೆ ಒಂದು ಹಸಿರು ಎಲೆಗೆ ಮೇಣ ಹಚ್ಚಿ,

ಅಂಟಿಸಿದರೆ ಹೇಗಿರುತ್ತದೆ?" ಎಂದು ತನ್ನ ತಂದೆಯನ್ನು ಕೇಳಿದನು. "ಅದನ್ನು ನೀನು ಎಲ್ಲಿ ನೋಡಿದೆ?" ಎಂದು ತಂದೆ ಗುಬ್ಬಿ ಕೇಳಿದನು.

"ಒಬ್ಬ ವ್ಯಾಪಾರಿಯ ತೋಟದಲ್ಲಿ" ಎಂದು ಉತ್ತರಿಸಿದನು. "ಓಹೋ! ನನ್ನ ಮಗು, ವ್ಯಾಪಾರಿಗಳು ಮೋಸಗಾರರಾಗಿರುತ್ತಾರೆ. ನೀನು ನಿಜವಾಗಲೂ ಅಂತಹವರ ಮಕ್ಕಳ ಜೊತೆಯಲ್ಲಿ ಇದ್ದು ಬಂದಿದ್ದೀಯ ಮತ್ತೆ ಅವರ ಮೋಸದ ಗುಟ್ಟುಗಳನ್ನು ನೋಡಿದ್ದೀಯ. ನೀನು ಕಲಿತಿರುವುದನ್ನು ಚೆನ್ನಾಗಿ ಬಳಸಿಕೊ. ಇಂದಿನಿಂದ ಬಹಳ ಜಾಗರೂಕನಾಗಿರು. ಗುಟ್ಟನ್ನು ಎಲ್ಲರಿಗೂ ಹೇಳಿಬಿಡಬೇಡ" ಎಂದು ತಂದೆ ಗುಬ್ಬಣ್ಣ ಹೇಳಿದನು.

ನಂತರ ಗುಬ್ಬಣ್ಣ ತನ್ನ ಎರಡನೇ ಮಗ ಗುಬ್ಬಿಯನ್ನು ವಿಚಾರಿಸಿಕೊಂಡನು. ಅವನು ಎಲ್ಲಿ ಕಾಲ ಕಳೆದನೆಂದು ಕೇಳಿದನು. "ಆಸ್ಥಾನದಲ್ಲಿ" ಎಂದು ಉತ್ತರಿಸಿತು. "ಗುಬ್ಬಿಗಳು ಮತ್ತು ಆ ಜಾತಿಯ ಪಕ್ಷಿಗಳು ವಾಸಿಸಲು ಆ ಜಾಗ ಸರಿಯಾದದ್ದಲ್ಲ. ಆಸ್ಥಾನದಲ್ಲಿ ಬಂಗಾರ, ಸುಪ್ಪತ್ತಿಗೆಗಳು, ರೇಶಿಮೆ, ಕವಚ, ಕಡಿವಾಣ ಎಲ್ಲ ಇರುತ್ತವೆ. ಅವುಗಳ ಜೊತೆಗೆ ನಮ್ಮನ್ನು ಬೇಟೆಯಾಡಬಹುದಾದ ಪಕ್ಷಿಗಳು, ಗರುಡ, ಹದ್ದು ಮತ್ತು ಗೂಬೆಗಳೂ ಕೂಡ ಇರುತ್ತವೆ. ಆದ್ದರಿಂದ ನೀನು ಓಟ್ ಕಾಳುಗಳು ತುಂಬಿಡುವ ಜಾಗದಲ್ಲಿ ಅಥವಾ ಕಾಳುಗಳನ್ನು ಬಡಿದು ಬೇರೆ ಮಾಡುವ ಕಣಜಗಳಲ್ಲಿ ಇದ್ದರೆ ಸಾಕು" ಎಂದು ತಂದೆ ಗುಬ್ಬಣ್ಣ ಎರಡನೇ ಮಗನಿಗೆ ಬುದ್ಧಿವಾದ ಹೇಳಿತು. "ಹಾಗೇ ಆಗಲಪ್ಪ," ಎಂದು ಉತ್ತರಿಸುತ್ತಾ, "ಕಣಜಗಳಲ್ಲಿ ಹುಡುಗರು ಹುಲ್ಲಿನಲ್ಲಿ ಗಂಟು ಹಾಕಿ ಬಲೆ ನೇಯ್ದು ಬೀಸಿದರೆ ಅನೇಕ ಪಕ್ಷಿಗಳು ಅದರಲ್ಲಿ ಸಿಕ್ಕಿಬೀಳುತ್ತವೆಯಲ್ಲ ಆಗ ಏನು ಮಾಡಬೇಕು?" ಎಂದು ತಂದೆಯನ್ನು ಕೇಳಿತು. "ಅದನ್ನೆಲ್ಲಿ ನೋಡಿದೆ?" ಎಂದು ತಂದೆ ಕೇಳಿತು. "ಆಟದ ಮೈದಾನದಲ್ಲಿ ಕುದುರೆ ಲಾಯದ ಹುಡುಗರು ಹಾಗೆ ಮಾಡುವುದನ್ನು ನೋಡಿದ್ದೇನೆ" ಎಂದು ಉತ್ತರಿಸಿತು.

"ಅಯ್ಯೊ, ನನ್ನ ಮಗು ! ಲಾಯದ ಹುಡುಗರು ಕೆಟ್ಟವರಾಗಿರುತ್ತಾರೆ. ನೀನು ಶ್ರೀಮಂತ ಸರದಾರರ ಜೊತೆಯಲ್ಲಿ ಬದುಕಿದ್ದು, ಅಲ್ಲಿ ಒಂದು ಪುಕ್ಕವನ್ನೂ ಉದುರಿಸದೆ ಬಂದಿರುವುದನ್ನು ನೋಡಿದರೆ ನಿನಗೆ ಪ್ರಪಂಚವನ್ನು ಎದುರಿಸುವ ಜಾಣತನ ಬಂದಿದೆ ಎಂದು ಗೊತ್ತಾಗುತ್ತದೆ. ಆದರೂ ನೀನು ಎಚ್ಚರಿಕೆಯಿಂದ ಇರು. ಯಾಕೆಂದರೆ ತೋಳಗಳು ಅತ್ಯಂತ ಜಾಣ ನಾಯಿಗಳನ್ನು ಕೂಡ ತಿಂದುಬಿಡುತ್ತವೆ" ಎಂದು ತಂದೆ ಗುಬ್ಬಣ್ಣ ಸಲಹೆಗಳನ್ನು ಕೊಟ್ಟಿತು.

ನಂತರ, "ನೀನು ಎಲ್ಲಿ ನಿನ್ನ ಜೀವನವನ್ನು ಸಾಗಿಸಿದೆಯಪ್ಪ? ನೀನಿದ್ದ ಜಾಗ ಯಾವುದು?" ಎಂದು ತನ್ನ ಮೂರನೆ ಮಗನನ್ನು ತಂದೆ ಗುಬ್ಬಣ್ಣ ಕೇಳಿದನು.

ಅದಕ್ಕೆ ಮೂರನೆ ಮಗ "ಹೆದ್ದಾರಿಗಳಲ್ಲಿ, ಹಗ್ಗಗಳ ಮೇಲೆ, ಪಾತ್ರೆಗಳ ಮೇಲೆ, ಎಲ್ಲ ಕಡೆ ಹಾರಾಡುತ್ತಾ ಕಾಲ ಕಳೆದೆನು. ಆಗಾಗ ಬಾರ್ಲಿ ಕಾಳುಗಳು, ಬೇರೆ ಧಾನ್ಯಗಳು ನನಗೆ ಸಿಗುತ್ತಿದ್ದವು" ಎಂದು ಉತ್ತರಿಸಿದನು.

"ಪರವಾಗಿಲ್ಲ, ನೀನು ಒಳ್ಳೆಯ ಜೀವನವನ್ನೇ ನಡೆಸಿದ್ದೀಯ. ಆದರೆ ನೀನು ಮುಳ್ಳುಹಂದಿಗಳ ಮೇಲೆ ಗಮನವಿಟ್ಟಿರಬೇಕು. ಯಾರಾದರೂ ಬಗ್ಗಿ ಕಲ್ಲು ತೆಗೆದುಕೊಳ್ಳಲು ಹೊರಟರೆ ನೀನು ಅಲ್ಲಿಂದ ಹಾರಿ

ತಪ್ಪಿಸಿಕೊಳ್ಳಬೇಕು" ಎಂದು ತಂದೆ ಹೇಳಿದನು. ಅದಕ್ಕೆ ಮೂರನೆ ಮಗ ಗುಬ್ಬಿ, "ನೀವು ಹೇಳುವುದು ಸರಿಯಾಗಿದೆ. ಆದರೆ, ಕೆಲವರು ಯಾವಾಗಲೂ ಚಿಕ್ಕ, ಚಿಕ್ಕ ಕಲ್ಲುಗಳನ್ನು ತಮ್ಮ ಜೇಬುಗಳಲ್ಲಿ ತುಂಬಿಕೊಂಡಿರುತ್ತಾರಲ್ಲ, ಆಗ ಏನು ಮಾಡಬೇಕು?" ಎಂದು ಕೇಳಿದನು. ಅದಕ್ಕೆ ತಂದೆ ಗುಬ್ಬಿ "ನೀನು ಅವರನ್ನು ಎಲ್ಲಿ ನೋಡಿದೆ?" ಎಂದು ಕೇಳಿದನು. "ಗಣಿಗಾರರಲ್ಲಿ. ಅವರು ಪ್ರಯಾಣ ಮಾಡುವಾಗಲೆಲ್ಲ ಜನರಿಗೆ ಕಲ್ಲು ಹೊಡೆಯಲು ತಮ್ಮ ಜೊತೆ ಗುಟ್ಟಾಗಿ ಕಲ್ಲುಗಳನ್ನು ಒಯ್ಯುತ್ತಾರೆ" ಎಂದು ಉತ್ತರಿಸಿದನು.

"ಓಹ್! ಗಣಿಕೆಲಸದವರಾ! ವಿಚಿತ್ರ ಜನ ಅವರು. ನೀನು ಅವರ ನಡುವೆ ಇದ್ದುದಾದರೆ ಬಹಳಷ್ಟು ನೋಡಿದ್ದೀಯ ಮತ್ತು ನಿನಗೆ ಬಹಳ ಅನುಭವಗಳು ಆಗಿವೆ ಅನಿಸುತ್ತದೆ" ಎಂದು ತಂದೆ ಗುಬ್ಬಣ್ಣ ಹೇಳಿದನು.

ಕೊನೆಗೆ ತಂದೆ ಗುಬ್ಬಿ ತನ್ನ ಚಿಕ್ಕ ಮಗನ ಹತ್ತಿರ ಬಂದನು. "ನೀನು ಪುಕ್ಕಲ ಮಗ. ನೀನು ಯಾವಾಗಲೂ ದುರ್ಬಲ ಮತ್ತು ಪೆದ್ದ. ನೀನು ನನ್ನ ಜೊತೆಯಲ್ಲಿ ಇದ್ದುಬಿಡು. ಈ ಪ್ರಪಂಚದಲ್ಲಿ ಅನೇಕ ದುಷ್ಟ ಮತ್ತು ಕ್ರೂರವಾದ ಪಕ್ಷಿಗಳಿವೆ. ಅವುಗಳಿಗೆ ಚೂಪಾದ ಕೊಕ್ಕುಗಳು, ಬಲವಾದ ಪಾದಗಳು ಇವೆ. ಅವು ಚಿಕ್ಕ ಪಕ್ಷಿಗಳನ್ನು ಹಿಡಿದು ಗಬಕ್ಕನೆ ನುಂಗಿಬಿಡುತ್ತವೆ. ಆದ್ದರಿಂದ ನೀನು ನನ್ನ ಜೊತೆಯೇ ಇರು. ನಮ್ಮ ಹತ್ತಿರದಲ್ಲೆ ಇರುವ ನೆಲ ಮತ್ತು ಮರಗಳಲ್ಲಿರುವ ಜೇಡಗಳು ಮತ್ತು ಹುಳುಗಳೆ ಸಾಕು ನಿನ್ನನ್ನು ತೃಪ್ತಿಪಡಿಸುತ್ತವೆ" ಎಂದು ತಂದೆ ಹೇಳಿದನು.


ಅದಕ್ಕೆ ಚಿಕ್ಕ ಗುಬ್ಬಿ ಏನು ಹೇಳಿದ ಎಂದರೆ, "ಅಪ್ಪ, ಯಾರಿಗೂ ಹಿಂಸೆ ಮಾಡದೆ ತನ್ನ ಊಟವನ್ನು ತಾನು ಸಂಪಾದಿಸಿಕೊಳ್ಳುವವನು ಸುಖವಾಗಿರುತ್ತಾನೆ. ಅಂತಹವನಿಗೆ ಯಾವ ಗರುಡ ಪಕ್ಷಿಯೂ, ಗೂಬೆ ಅಥವಾ ಹದ್ದೂ ತೊಂದರೆ ಕೊಡುವುದಿಲ್ಲ. ಯಾವಾಗಲೂ, ಬೆಳಗ್ಗೆ ಮತ್ತು ಸಾಯಂಕಾಲ ದೇವರನ್ನು ನೆನೆಸುವವನಿಗೆ ಊಟದ ಕೊರತೆ ಆಗುವುದಿಲ್ಲ. ಯಾಕೆಂದರೆ ದೇವರೇ ಎಲ್ಲದರ ಸೃಷ್ಟಿಕರ್ತ ಮತ್ತು ರಕ್ಷಕನಾಗಿದ್ದಾನೆ. ಕಾಡಿನ ಮತ್ತು ನಾಡಿನ ಪಕ್ಷಿಗಳಿಗೆ ಆಹಾರವನ್ನು ಒದಗಿಸುತ್ತಾನೆ. ಚಿಕ್ಕ ಹದ್ದಿನ ಮರಿಗಳ ಕೂಗನ್ನು ಕೇಳಿ ಅವುಗಳಿಗೂ ಊಟವನ್ನು ಒದಗಿಸುತ್ತಾನೆ. ದೇವರ ಇಚ್ಛೆ ಇಲ್ಲದೆ ಯಾವ ಗುಬ್ಬಿ ಆಗಲಿ, ಒಂದು ಸಣ್ಣ ಹಕ್ಕಿಯಾಗಲಿ ಸಾಯುವುದಿಲ್ಲ" ಎಂದು ಹೇಳಿದನು.

ಅಪ್ಪ ಗುಬ್ಬಿಗೆ ತನ್ನ ಕೊನೆಯ ಮಗನ ಮಾತು ಕೇಳಿ ತುಂಬಾ ಆಶ್ಚರ್ಯವಾಯಿತು. "ಇದನ್ನೆಲ್ಲ ಎಲ್ಲಿ ಕಲಿತುಕೊಂಡೆ" ಎಂದು ಕೇಳಿದನು. "ಗಾಳಿ ನನ್ನನ್ನು ತೇಲಿಸಿಕೊಂಡು ಹೋದಾಗ ನಾನು ಒಂದು ಕ್ರೈಸ್ತದೇವಾಲಯಕ್ಕೆ ಹೋದೆನು. ಅಲ್ಲಿನ ಕಿಟಕಿಗಳ ಮೇಲೆ ಇದ್ದ ಜೇಡಗಳನ್ನು, ನೊಣಗಳನ್ನು ತಿನ್ನುತ್ತಾ ಬೇಸಿಗೆ ಕಾಲವನ್ನು ಕಳೆದೆನು. ಅದರ ಜೊತೆಗೆ ಅಲ್ಲಿಯ ಉಪದೇಶಗಳನ್ನು ಆಲಿಸಿದೆನು. ಎಲ್ಲ ಗುಬ್ಬಿಗಳ ತಂದೆ ದೇವರು. ಅವನು ನನಗೆ ಉಣಿಸಿ ಕಾಪಾಡಿದನು. ಕೆಟ್ಟ ಪಕ್ಷಿಗಳಿಂದ, ಕೆಟ್ಟ ಅದೃಷ್ಟದಿಂದ ನನ್ನನ್ನು ಪಾರುಮಾಡಿದ್ದಾನೆ" ಎಂದು ಕಿರಿಯ ಮಗ ಹೇಳಿದನು.

"ನೀನು ಹೇಳಿದ್ದು ನಿಜ. ಮಗು ನೀನು ಕ್ರೈಸ್ತದೇವಾಲಯಕ್ಕೆ ಹಿಂದಿರುಗಿಬಿಡು. ಅಲ್ಲಿನ ಕಿಟಕಿಗಳನ್ನು ಜೇಡಗಳಿಂದ ಮತ್ತು ನೊಣಗಳಿಂದ ಸ್ವಚ್ಛವಾಗಿಡು. ದೇವರನ್ನು ಮರೆಯದೆ ಸ್ಮರಿಸಿಕೊ. ದಿನವೂ ಪ್ರಾರ್ಥನೆ

ಮಾಡು. ಕೆಟ್ಟ ಮತ್ತು ಕ್ರೂರ ಪ್ರಾಣಿಗಳೇ ತುಂಬಿರುವ ಪ್ರಪಂಚದಲ್ಲಿದ್ದರೂ ಯಾರು ತಮ್ಮನ್ನು ದೇವರಿಗೆ ಅರ್ಪಿಸಿಕೊಂಡಿರುತ್ತಾರೊ ಅವರು ತುಂಬ ಸುಖವಾಗಿರುತ್ತಾರೆ. ಯಾರಿಗೆ ಸಹನೆ ಇರುವುದೊ, ದಯೆ ಮತ್ತು ಕರುಣೆಯಿಂದ ಕೂಡಿದವರಾಗಿರುವರೊ, ದೇವರಲ್ಲಿ ಬಲವಾದ ನಂಬಿಕೆ ಇಟ್ಟಿರುವರೊ ಯಾರ ಆತ್ಮಸಾಕ್ಷಿ ಪರಿಶುದ್ಧವಾಗಿರುವುದೊ ಅಂತಹವರನ್ನು ದೇವರು ಎಂದೆಂದೂ ಕಾಪಾಡುತ್ತಾನೆ" ಎಂದು ತಂದೆ ಗುಬ್ಬಿ, ಮಗ ಗುಬ್ಬಿಗೆ ಹೇಳಿದನು.

೧೬. ನಿಪುಣ ಚಮ್ಮಾರ



ಮಾಸ್ಟರ್ ಕಾಬ್ಲರ್‌ಸಾಲ್ ನೋಡಲು ತುಂಬ ದುರ್ಬಲ ಮತ್ತು ಗಿಡ್ಡನಾಗಿದ್ದನು. ಆದರೆ ತುಂಬ ಚೂಟಿ ಮನುಷ್ಯ. ಮನಸ್ಸಿನಲ್ಲಿ ಯಾವಾಗಲೂ ಒಂದು ತರಹ ಕಳವಳವನ್ನು ತುಂಬಿಕೊಂಡಿರುತ್ತಿದ್ದನು. ಅವನ ಮುಖದಲ್ಲಿ ಎದ್ದು ಕಾಣುವ ಅಂಗ ಅಂದರೆ ಮೇಲೆಕ್ಕೆದ್ದ ಮೂಗು. ರಕ್ತವಿಲ್ಲದವರಂತೆ ಕಳಾಹೀನನಾಗಿದ್ದನು. ಅವನ ಕೂದಲು ಒರಟಾದ ಬಿಳಿಕೂದಲಾಗಿದ್ದವು. ಅವನ ಕಣ್ಣುಗಳು ಸಣ್ಣವಿದ್ದರೂ ಕೂಡ ಚಂಚಲತೆಯನ್ನು ಸೂಚಿಸುವ ಹಾಗೆ ಎಡಕ್ಕೂ ಬಲಕ್ಕೂ ತೀಕ್ಷ್ಣವಾಗಿ ನೋಡುತ್ತಿದ್ದವು. ಅವನು ಎಲ್ಲವನ್ನು ಗಮನಿಸುತ್ತಿದ್ದನು. ಎಲ್ಲದರಲ್ಲಿಯೂ ತಪ್ಪು ಹುಡುಕುತ್ತಿದ್ದನು. ತನಗೇ ಎಲ್ಲಾ ಗೊತ್ತು, ತಾನಾಗಿದ್ದರೆ ಆ ಕೆಲಸವನ್ನು ಬೇರೆಯವರಿಗಿಂತ ಉತ್ತಮವಾಗಿ ಮಾಡುತ್ತಿದ್ದೆ ಎಂದು ಜಂಬಪಡುತ್ತಿದ್ದನು. ಅವನು ರಸ್ತೆಯಲ್ಲಿ ನಡೆಯುವಾಗ ತನ್ನ ಎರಡೂ ತೋಳುಗಳನ್ನು ಜೋರಾಗಿ ಬೀಸುತ್ತಿದ್ದನು. ಅವಸರದಿಂದ ಕೈಗಳನ್ನು ಬೀಸಿ ಒಗೆಯುತ್ತಿದ್ದನು. ಒಂದು ಸಾರಿ ಅವನ ಕೈ ಹುಡುಗಿಯೊಬ್ಬಳು ನೀರು ಒಯ್ಯುತ್ತಿದ್ದ ಕೊಡಕ್ಕೆ ತಾಗಿ, ಅದು ಗಾಳಿಯಲ್ಲಿ ಮೇಲೆ ಹಾರಿ, ನೀರೆಲ್ಲ ಅವನ ಮೇಲೆ ಚೆಲ್ಲಿತು. ಆಗ ಅವನು ಸಿಟ್ಟಿನಿಂದ "ಏಯ್, ಕುರಿ-ತಲೆ ಹುಡುಗಿ ನಾನು ನಿನ್ನ ಹಿಂದೆ ಬರುತ್ತಿರುವುದು ಗೊತ್ತಾಗಲಿಲ್ಲವಾ?" ಎಂದು ಆ ಹುಡುಗಿಯನ್ನೇ ದಬಾಯಿಸಿದನು.

ಅವನ ವ್ಯವಹಾರ ಎಂದರೆ ಬೂಟುಗಳನ್ನು ಮಾಡುವುದು. ಅವನೇ ಕುಳಿತು ಕೆಲಸ ಮಾಡುತ್ತಿದ್ದಾಗ ಬೂಟನ್ನು ಹೊಲಿಯುವ ದಾರವನ್ನು ಎಷ್ಟು ಅವಸರದಿಂದ ಎಳೆಯುತ್ತಿದ್ದ ಎಂದರೆ, ಅವನ ಮೊಣಕೈ ತಮ್ಮ ಪಕ್ಕೆಗಳನ್ನು ತಿವಿಯಬಹುದು ಎಂಬ ಭಯದಿಂದ ಯಾರೂ ಹತ್ತಿರಕ್ಕೆ ಹೋಗುತ್ತಿರಲಿಲ್ಲ. ಅವನಲ್ಲಿ ಕೆಲಸಕ್ಕೆ ಬಂದ ಹುಡುಗರು ಯಾರೂ ಒಂದು ತಿಂಗಳಿಗಿಂತ ಹೆಚ್ಚಿಗೆ ಇರುತ್ತಿರಲಿಲ್ಲ. ಯಾಕೆ ಅಂದರೆ ಅವರ ಅತ್ಯುತ್ತಮ ಕೆಲಸದಲ್ಲೂ ಅವನು ಏನಾದರೂ ಕೊಂಕು ತೆಗೆದು ತಪ್ಪು ಹುಡುಕುತ್ತಿದ್ದನು. ಹೊಲಿಗೆ ಸರಿಯಾಗಿ ಹಾಕಿಲ್ಲ ಅಂತಲೊ, ಇಲ್ಲ ಒಂದು ಬೂಟು ಇನ್ನೊಂದಕ್ಕಿಂತ ದೊಡ್ಡದಾಗಿದೆ ಎಂದೊ ಅಥವಾ ಒಂದು ಹಿಮ್ಮಡಿ ಇನ್ನೊಂದಕ್ಕಿಂತ ಎತ್ತರವಾಗಿದೆ ಎಂದೊ, ಅದೂ ಅಲ್ಲದಿದ್ದರೆ ಚರ್ಮವನ್ನು ಸಾಕಷ್ಟು ಚೆನ್ನಾಗಿ ಎಳೆದಿಲ್ಲ ಎಂದೋ ಒಂದಲ್ಲ ಒಂದು ತಪ್ಪನ್ನು ಹೇಳುತ್ತಿದ್ದನು. "ತಾಳು, ತಾಳು, ಚರ್ಮ ಹದಮಾಡೋದು ಹೇಗೆ ಅಂತ ತೋರಿಸ್ತೀನಿ" ಅಂತ ಹೇಳಿ, ಒಂದು ಚರ್ಮದ ಪಟ್ಟಿಯನ್ನು ತೆಗೆದುಕೊಂಡು ಕೆಲಸ ಕಲಿಯುವ ಹುಡುಗನ ಬೆನ್ನ ಮೇಲೆ ಬಾರಿಸುತ್ತಿದ್ದನು. ಅವನು ಎಲ್ಲರನ್ನೂ ಮೈಗಳ್ಳರು, ಸೋಮಾರಿಗಳು ಎಂದು ಬೈಯ್ಯುತ್ತಿದ್ದನು. ಹಾಗಂತ ಅವನೇನೂ ಕೆಲಸ ಮಾಡುತ್ತಿರಲಿಲ್ಲ. ಏಕೆಂದರೆ ಅವನಿಗೆ ಅರ್ಧಗಂಟೆ ಸುಮ್ಮನೆ ಕೂತುಕೊಂಡು ಕೆಲಸ ಮಾಡಲು ಆಗುತ್ತಿರಲಿಲ್ಲ. ಅವನ ಹೆಂಡತಿ ಏನಾದರು ಬೇಗನೆ ಎದ್ದು ಒಲೆಗೆ ಬೆಂಕಿ ಹಚ್ಚಿದರೆ, ಅವನು ಹಾಸಿಗೆಯಿಂದ ಎದ್ದು, ಬರಿಗಾಲಲ್ಲೆ ಅಡುಗೆ ಮನೆಗೆ ಹೋಗಿ "ಏನು? ಮನೆಯನ್ನೆ ಸುಟ್ಟುಹಾಕಬೇಕು ಅಂತ ಇದಿಯೇನು? ಅಲ್ಲಿರುವ ಬೆಂಕಿಯಲ್ಲಿ ಯಾರಾದಾರೂ ಒಂದು ಎತ್ತನ್ನು ಹುರಿಯಬಹುದು! ಕಟ್ಟಿಗೆ ತುಂಬ ದುಬಾರಿ" ಎಂದು ಹೆಂಡತಿಗೆ ಬೈಯುತ್ತಿದ್ದನು.

ಅವನ ಹೆಂಡತಿ ಪಾತ್ರೆ ತೊಳೆಯುವ ಜಾಗದಲ್ಲಿ ನಿಂತುಕೊಂಡು ಮುಸುರೆ ಪಾತ್ರೆ ತೊಳೆಯುತ್ತಾ, ಅವನು ಹೇಳಿದ್ದನ್ನು ಮತ್ತೆ ತನಗೆ! ಹೇಳಿಕೊಂಡು ನಕ್ಕರೆ, ಅವನು ಅವಳನ್ನು ಚೆನ್ನಾಗಿ ಬೈಯುತ್ತಿದ್ದನು. "ಅಲ್ಲಿ ಒಂದು ಬಾತುಕೋಳಿ ನಿಂತಿದೆ. ತಲೆ ಹರಟೆ ಮಾತಾಡುತ್ತಾ ತನ್ನ ಕೆಲಸ ಮಾಡುವುದನ್ನು ಮರೆಯುತ್ತದೆ. ಆ ಹೊಸ ಸೋಪಿನ ಉಪಯೋಗ ಅದಕ್ಕೇನು ಗೊತ್ತು? ನಾಚಿಗೆಗೇಡು ! ಅವಮಾನ ! ಕೈಯಿಂದ ಉಜ್ಜಿ ಪಾತ್ರೆಗಳ ಕಲೆಯನ್ನು ತೊಳೆಯಬಾರದಾ. ಕೈ.ಹಾಳಾಗುತ್ತೆ ಅಂತ ಉಜ್ಜುವುದಿಲ್ಲ." ಎಂದು ಹೇಳುತ್ತಾ ಹಾರಿಕೊಂಡು ಹೋಗಿ, ನೀರು ತುಂಬಿದ್ದ ಬಕೀಟನ್ನು ಎಸೆದು ನೀರು ಚೆಲ್ಲಿ ಅಡುಗೆ ಮನೆಯನ್ನೆ ಒಂದು ಈಜುಕೊಳವನ್ನಾಗಿ ಮಾಡುತ್ತಿದ್ದನು.

ಒಂದು ಬಾರಿ ಅವನ ಮನೆಯ ಹತ್ತಿರ ಒಂದು ಹೊಸ ಮನೆ ಕಟ್ಟುತ್ತಿದ್ದರು. ಅವನು ತನ್ನ ಮನೆ ಕಿಟಕಿ ಹತ್ತಿರ ಓಡಿಹೋಗಿ ನೋಡಿದನು. "ಅಯ್ಯೋ, ಅಲ್ಲಿ ಅವರು ಕೆಂಪು ಮರಳು, ಕಲ್ಲು ಉಪಯೋಗಿಸು ತ್ತಿದ್ದಾರೆ. ಅದು ಎಂದೂ ಒಣಗುವುದೇ ಇಲ್ಲ. ಅದರಲ್ಲಿ ವಾಸಮಾಡಿದರೆ ಯಾರೂ ಆರೋಗ್ಯದಿಂದ ಇರುವುದಿಲ್ಲ. ನೋಡಿ, ಅವರು ಎಷ್ಟು ವೇಗವಾಗಿ ಕಲ್ಲನ್ನು ಇಡುತ್ತಿದ್ದಾರೆ. ಗಾರೆಯನ್ನು ಸರಿಯಾಗಿ ಕಲೆಸಿಲ್ಲ. ಜಲ್ಲಿಕಲ್ಲು ಹಾಕಬೇಕು, ಮರಳನ್ನಲ್ಲ. ಎಂದಾದರೂ ಒಂದು ದಿನ ಮನೆ ಯಜಮಾನನ ಮೇಲೆ ಕುಸಿದು ಬೀಳುತ್ತೆ ಎಂದು ನನಗನಿಸುತ್ತಿದೆ" ಎಂದು ಹೇಳುತ್ತಾ ಅಲ್ಲೇ ಕುಳಿತುಕೊಂಡು ಒಂದು ಹೊಲಿಗೆ ಹಾಕಿದ್ದನೊ ಇಲ್ಲವೊ, ಅಷ್ಟರಲ್ಲಿ ಮತ್ತೆ ಎದ್ದನು. ತನ್ನ ಮೇಲುಡುಗೆಯನ್ನು ಕೆಳಗೆ ಎಸೆದನು. "ನಾನೇ ಸ್ವತಃ ಹೋಗಿ ಆ

ಜನರ ಹತ್ತಿರ ಮಾತನಾಡುತ್ತೇನೆ" ಎಂದನು. ಮರಕೆಲಸದವರು ಆಗಷ್ಟೆ ಕೆಲಸ ಶುರುಮಾಡಿದ್ದರು. "ಇದು ಯಾಕೆ ಹೀಗಿದೆ? ನೀವು ಸರಿಯಾದ ರೀತಿಯಲ್ಲಿ ಕತ್ತರಿಸುತ್ತಿಲ್ಲ . ತೊಲೆಗಳೇ ನೇರವಾಗಿ ಇರುತ್ತವೆ ಎಂದು ತಿಳಿದಿರುವಿರಾ? ನಿಮ್ಮ ಹಾಗೆ ಮಾಡಿದರೆ ತೊಲೆಗಳ ಸಮೇತ ಎಲ್ಲಾ ಬೀಳುತ್ತವೆ"ಎಂದು ಟೀಕೆ ಮಾಡಿದನು. ಅಲ್ಲದೆ ಒಬ್ಬ ಬಡಗಿಯವನ ಕೈಯಿಂದ ಗರಗಸವನ್ನು ತೆಗೆದುಕೊಂಡು ಹೇಗೆ ಕತ್ತರಿಸಬೇಕು ಎಂದು ತೋರಿಸಿಕೊಡುವೆ ಎಂದನು. ಅಷ್ಟು ಹೊತ್ತಿಗೆ ಗಾಡಿಯಲ್ಲಿ ಮಣ್ಣು ಹೇರಿಕೊಂಡು ಒಬ್ಬ ಮನುಷ್ಯ ಹೋಗುತ್ತಿದ್ದನು. ಆಗ, ಅವನ ಗಮನ ಆ ಕಡೆ ಹರಿಯಿತು. ಗರಗಸವನ್ನು ಅಲ್ಲೆ ಬಿಟ್ಟು, ಮಣ್ಣಿನ ಗಾಡಿಯಲ್ಲಿದ್ದ ರೈತನಿಗೆ ಕೂಗಿ ಹೇಳಿದನು, "ನೀನು ಎಂತಹ ಕಟುಕ. ಆ ದೊಡ್ಡ ಮಣ್ಣಿನ ಬಂಡಿಗೆ ಆ ಚಿಕ್ಕ ಕುದುರೆಗಳನ್ನು ಕಟ್ಟಿ ಎಳೆಯುತ್ತಿರುವೆಯಲ್ಲ ! ಆ ಬಡ ಪ್ರಾಣಿಗಳು ಈಗಲೆ ಬಿದ್ದುಬಿಡುತ್ತವೆ" ಎಂದನು.

ಆ ರೈತ ಅವನಿಗೆ ಉತ್ತರಿಸಲಿಲ್ಲ. ಆಗ ಸಿಟ್ಟಿನಿಂದ ಅವನು ತನ್ನ ಕೆಲಸದ ಜಾಗಕ್ಕೆ ಹೋದನು. ತಾನು ಬಿಟ್ಟುಹೋದ ಕೆಲಸವನ್ನು ಪುನಃ ಶುರುಮಾಡಬೇಕು ಎನ್ನುವಷ್ಟರಲ್ಲಿ ಅವನ ಸಹಾಯಕ ಕೆಲಸಗಾರ ಅವನ ಕೈಗೆ ಒಂದು ಬೂಟನ್ನು ಕೊಟ್ಟನು. "ಮತ್ತೆ ಏನಿದು?" ಎಂದು ಆಶ್ಚರ್ಯದಿಂದ ಕೂಗುತ್ತ ಕಾಬ್ಲರ್‌ಸಾಲ್, "ಬೂಟನ್ನು ಅಷ್ಟು ಅಗಲವಾಗಿ ಹೊಲೆಯಬೇಡ ಅಂತ ಎಷ್ಟು ಸಾರಿ ಹೇಳಿಲ್ಲ ನಿನಗೆ. ಯಾರು ಇದನ್ನು ಕೊಂಡುಕೊಳ್ಳುತ್ತಾರೆ? ಅದರ ಹಿಮ್ಮಡಿ ಅಷ್ಟು ಚಪ್ಪಟೆಯಾಗಿದೆಯಲ್ಲ. ನೀನು ನನ್ನ ಮಾತನ್ನು ಚಾಚೂ ತಪ್ಪದೆ ನಡೆಸಬೇಕು" ಎಂದು ಬೈದನು.

"ಹೌದು, ಸ್ವಾಮಿ. ನೀವು ಹೇಳಿದ್ದು ನಿಜವಿರಬಹುದು. ಅದರ ಹಿಮ್ಮಡಿ ಉಪಯೋಗಕ್ಕೆ ಬರಲಾರದು. ಆದರೆ, ಅದನ್ನು ಹೊಲಿದಿರುವುದು ನೀವೇ. ನೀವು ಮೇಜಿನ ಕೆಳಗೆ ಎಸೆದು ಈಗಷ್ಟೆ ಹೋಗಿದ್ದಿರಲ್ಲ , ಅದೇ ಇದು. ಸ್ವರ್ಗದಿಂದ ದೇವತೆಯೇ ಬಂದರೂ ನಿಮ್ಮ ತಪ್ಪನ್ನು ತಪ್ಪು ಎಂದು ನಿಮಗೆ ಅರ್ಥಮಾಡಿಸಲು ಆಗುವುದಿಲ್ಲ" ಎಂದು ಕಾಬ್ಲರ್‌ಸಾಲ್‌ನ ಕೆಲಸಗಾರ ಹೇಳಿದನು.

ಹೀಗೆ ಒಂದೆರಡು ದಿನಗಳು ಕಳೆದ ಮೇಲೆ ಒಂದು ರಾತ್ರಿ ಕಾಬ್ಲರ್‌ಸಾಲ್‌ಗೆ ಕನಸು ಬಿತ್ತು. ಅದರಲ್ಲಿ ಅವನು ಸತ್ತು, ಸ್ವರ್ಗದ ದಾರಿಯಲ್ಲಿ ಇದ್ದನು. ಅವನು ಸ್ವರ್ಗದ ಬಾಗಿಲನ್ನು ಬಡಿದನು. ಆಗ ಸಂತ ಪೀಟರ್ ಬಾಗಿಲು ತೆಗೆದು ಒಳಗೆ ಬರಲು ಇಷ್ಟಪಡುವವರು ಯಾರು ಎಂದು ನೋಡಿದನು. "ಓಹೋ, ಮಾಸ್ಟರ್ ಕಾಬ್ಲರ್‌ಸಾಲ್ ನೀವಾ?" ಎಂದು ಸಂತ ಕೇಳಿದನು. ನಂತರ "ನಿಮ್ಮನ್ನು ನಿಜವಾಗಲೂ ಒಳಗೆ ಬಿಡುವೆನು. ಆದರೆ, ನೀವು ಇಲ್ಲಿ ನೋಡಿದ್ದರಲ್ಲೆಲ್ಲಾ ಮೂಗು ತೂರಿಸಬಾರದು. ಹಾಗೆ ಮಾಡಿದರೆ ನಿಮಗೆ ತುಂಬ ಕೆಟ್ಟದಾಗುತ್ತದೆ" ಎಂದು ಆ ಸಂತ ಎಚ್ಚರಿಕೆ ನೀಡಿದನು.

"ನೀನು ಹಾಗೆ ಹೇಳುವ ತೊಂದರೆಯನ್ನು ತೆಗೆದುಕೊಳ್ಳಬೇಕಾಗಿರಲಿಲ್ಲ" ಎಂದು ಕಾಬ್ಲರ್‌ಸಾಲ್ ಉತ್ತರಿಸಿದನು. "ನನಗೆ ಹೇಗೆ ನಡಕೋಬೇಕು ಎಂದು ಚೆನ್ನಾಗಿ ಗೊತ್ತಿದೆ. ನಮಸ್ಕಾರ ದೇವರಿಗೆ. ಭೂಮಿಯ ಮೇಲೆ ಇರೋ ಹಾಗೆ ಬೈಯುವಂತಹದು ಇಲ್ಲಿ ಏನೂ ಇರುವುದಿಲ್ಲ" ಎಂದು ಹೇಳಿದನು. ನಂತರ ಅವನು ಒಳಗೆ ಕಾಲಿಟ್ಟು ಸ್ವರ್ಗದ ವಿಶಾಲ ಪ್ರದೇಶದಲ್ಲಿ ಮೇಲೆ ಕೆಳಗೆ ನಡೆದಾಡಿದನು. ತನ್ನ ಎಡಕ್ಕೆ, ಬಲಕ್ಕೆ ನೋಡಿಕೊಂಡು ಆಗಾಗ ತನ್ನ ತಲೆಯನ್ನು ಅಲುಗಾಡಿಸುತ್ತಿದ್ದನು. ತನಗೆ ತಾನೇ

ಗೋಣಗಿಕೊಳ್ಳುತ್ತಿದ್ದನು. ಅದೇ ವೇಳೆಗೆ ಇಬ್ಬರು ದೇವತೆಗಳು ಒಂದು ಮರದ ತೊಲೆಯನ್ನು ಒಯ್ಯುತ್ತಿದ್ದರು. ಅವರಿಬ್ಬರೂ ಅಣ್ಣತಮ್ಮಂದಿರಾಗಿದ್ದರು. ಅವರು ಆ ತೊಲೆಯನ್ನು ಅಡ್ಡಡ್ಡವಾಗಿ ಒಯ್ಯುತ್ತಿದ್ದರು. ಅದನ್ನು ನೋಡಿದ ಕಾಬ್ಲರ್‌ಸಾಲ್‌ಗೆ ಸುಮ್ಮನಿರಲಾಗಲಿಲ್ಲ. ತನಗೆ ತಾನೇ ಹೇಳಿಕೊಂಡನು, "ಯಾರಾದರೂ ಇಷ್ಟು ದಡ್ಡರಿರುತ್ತಾರಾ?" ಅಂದುಕೊಂಡು, ಆದರೂ ತನ್ನ ನಾಲಿಗೆಯನ್ನು ಬಿಗಿ ಹಿಡಿದನು. "ಅವರು ಹೇಗಾದರೂ ತೆಗೆದುಕೊಂಡು ಹೋಗಲಿ ನನಗೇನಾಗಬೇಕು. ಅದೇನು ಯಾರಿಗೂ ತೊಂದರೆ ಮಾಡಲ್ಲವಲ್ಲ" ಎಂದು ಯೋಚಿಸಿದನು. ಮುಂದೆ ಸ್ವಲ್ಪ ಹೊತ್ತಿನಲ್ಲೆ ಅವನು ಇಬ್ಬರು ದೇವತೆಗಳನ್ನು ನೋಡಿದನು. ಅವರು ತೊರೆಯಿಂದ ನೀರನ್ನು ತೆಗೆದುಕೊಂಡು ಒಂದು ಬೋಗುಣಿಯೊಳಗೆ ಸುರಿಯುತ್ತಿದ್ದರು. ಅದರ ತುಂಬ ತೂತುಗಳಿದ್ದವು. ಅವರು ಹಾಕಿದ ನೀರು ಆ ಬೋಗುಣಿಯ ತೂತುಗಳಿಂದ ಹೊರಗೆ ಸುರಿಯುತ್ತಿತ್ತು. ಅವರು ಭೂಮಿಯ ಮೇಲೆ ಮಳೆ ಸುರಿಸುತ್ತಿದ್ದರು. "ಅರೆ, ಏನದು?" ಎಂದು ಆಶ್ಚರ್ಯದಿಂದ ಕೂಗಿದನು. ಅಷ್ಟರಲ್ಲಿ ತಾನು ಯಾವುದರಲ್ಲೂ ಮೂಗು ತೂರಿಸುವುದಿಲ್ಲವೆಂದು ಹೇಳಿದ್ದನಲ್ಲ, ಅದಕ್ಕಾಗಿ ಸುಮ್ಮನಾದನು. "ಬಹುಶಃ ಹೊತ್ತು ಕಳೆಯಲು ಈ ಕೆಲಸ ಮಾಡುತ್ತಿರಬಹುದು ಎಂದು ಅಂದುಕೊಂಡನು. ಭೂಮಿಯ ಮೇಲಿನ ಹಾಗೆ ಇಲ್ಲೂ ಕೂಡ ತಮಾಷೆಗಾಗಿ ಹುಚ್ಚುಚ್ಚು ಕೆಲಸಗಳನ್ನು ಮಾಡುತ್ತಾರಲ್ಲ" ಎಂದು ಯೋಚಿಸಿದನು. ಮತ್ತೆ ಮುಂದೆ ಹೋದನು. ಅಲ್ಲಿ ಒಂದು ದೊಡ್ಡ ಬಂಡಿ ಕೆಸರಿನಲ್ಲಿ ಹೂತುಬಿಟ್ಟಿತ್ತು. "ಅದೇನು ಆಶ್ಚರ್ಯವಲ್ಲ ಬಿಡಿ" ಎಂದು ಕಾಬ್ಲರ್‌ಸಾಲ್ ಆ ಬಂಡಿಯ ಮೇಲಿದ್ದ ಮನುಷ್ಯನಿಗೆ ಹೇಳಿದನು, "ಅಷ್ಟೊಂದು ತುಂಬಿದ್ದೀರಲ್ಲ. ಅದರಲ್ಲಿ ಏನಿದೆ?" ಎಂದು ಕೇಳಿದನು.

"ಪವಿತ್ರವಾದ ಆಸೆಗಳು" ಎಂದು ಆ ಮನುಷ್ಯ ಉತ್ತರಿಸಿದನು. "ಅವುಗಳನ್ನು ನೇರವಾದ ರಸ್ತೆಯಲ್ಲಿ ನಾನು ಒಯ್ಯಲಾರೆ. ಅದೃಷ್ಟವಶಾತ್ ಇಲ್ಲಿಯವರೆಗೂ ಎಳೆದುಕೊಂಡು ಬಂದೆನು. ಈಗ ಅವುಗಳು ನನ್ನನ್ನು ಸಿಕ್ಕಿಸಬಾರದಿತ್ತು " ಎಂದು ಆ ಮನುಷ್ಯ ಉತ್ತರಿಸಿದನು.

ಅದೇ ಸಮಯಕ್ಕೆ ಒಬ್ಬ ದೇವತೆ ನಿಜಕ್ಕೂ ಬಂದು ಕುದುರೆಗಳನ್ನು ಆ ಬಂಡಿಗೆ ಕಟ್ಟಿದನು. "ಈಗ ಸರಿಹೋಯಿತು" ಎಂದು ಕಾಬ್ಲರ್‌ಸಾಲ್ ಯೋಚಿಸಿದನು. "ಆದರೆ ಎರಡು ಕುದುರೆಗಳಿಂದ ಈ ಬಂಡಿಯನ್ನು ಎಳೆಯಲು ಆಗುವುದಿಲ್ಲ. ಕೊನೆಪಕ್ಷ ನಾಲ್ಕು ಕುದುರೆಗಳಾದರೂ ಇರಬೇಕಾಗಿತ್ತು" ಎಂದುಕೊಂಡನು. ಅಷ್ಟರಲ್ಲಿ ಎರಡನೇ ದೇವತೆ ಬಂದು ಇನ್ನೆರಡು ಕುದುರೆಯನ್ನು ತಂದು ಗಾಡಿಯ ಹಿಂಭಾಗಕ್ಕೆ ಕಟ್ಟಿದನು. ಆಗ ಅದನ್ನು ನೋಡಿದ ಕಾಬ್ಲರ್‌ಸಾಲ್‌ನಿಗೆ ತಡೆದುಕೊಳ್ಳಲು ಆಗಲೇ ಇಲ್ಲ. "ಛೆ, ಛೆ, ನೀವು ಏನು ಮಾಡುತ್ತಿರುವಿರಿ? ಪ್ರಪಂಚದಲ್ಲಿ ಇದೂವರೆಗೂ ಯಾರೂ ಹೀಗೆ ಮಾಡೇ ಇಲ್ಲ. ಈ ರಸ್ತೆಯಲ್ಲಿ ಗಾಡಿ ಎಳೆಯಲು ಕುದುರೆಗಳನ್ನು ಎರಡೂ ಕಡೆ ಕಟ್ಟಿದ್ದೀರಲ್ಲ. ನೀವೇ ಜಾಣರು ಅನ್ನೋ ಹೆಮ್ಮೆಯಿಂದ ಹಾಗೆ ಮಾಡಿದ್ದೀರೋ? ನೀವೇನು ಅಂದುಕೊಂಡಿದ್ದೀರಿ? ನನಗಿಂತ ಚೆನ್ನಾಗಿ ನೀವು ಯೋಚನೆ ಮಾಡುತ್ತೀರಿ ಎಂದು ತಿಳಿದಿದ್ದೀರೊ? ಹೇಗೆ!" ಎಂದು ಇನ್ನೂ ಏನೇನೊ ಹೇಳುವುದರಲ್ಲಿದ್ದನು. ಅಷ್ಟರಲ್ಲಿ ಸ್ವರ್ಗವಾಸಿ ಒಬ್ಬ ಅವನ ಕತ್ತಿಗೆ ಕೈಹಾಕಿ ಒರಟಾಗಿ ತಳ್ಳಿಬಿಟ್ಟನು. ಸ್ವರ್ಗದ ಬಾಗಿಲ ಹೊರಗೆ ಕಾಬ್ಲರ್‌ಸಾಲ್ ಬಿದ್ದನು. ತನ್ನ ತಲೆಯನ್ನು ಸುತ್ತಲೂ ತಿರುಗಿಸಿದನು. ಆಗ ಆ ಗಾಡಿಯನ್ನು ನಾಲ್ಕು ರೆಕ್ಕೆಗಳ ಕುದುರೆಗಳು ಮೇಲಕ್ಕೆತ್ತಿದ್ದನ್ನು ನೋಡಿದನು.

ಅಷ್ಟರಲ್ಲಿ ಅವನಿಗೆ ಎಚ್ಚರವಾಯಿತು. "ಭೂಮಿಯ ಮೇಲಿನ ವಿಷಯಗಳಿಗಿಂತ ಸ್ವರ್ಗದ ವಿಚಾರಗಳು ಅನೇಕ ರೀತಿಯಲ್ಲಿ ಬೇರೆ ವಿಧವಾಗಿರುತ್ತವೆ" ಎಂದು ತನ್ನಲ್ಲೇ ಹೇಳಿಕೊಂಡನು. ಆದ್ದರಿಂದ ಅನೇಕ ವಿಷಯಗಳನ್ನು ಕ್ಷಮಿಸಬಹುದು. ಆದರೆ ಬಂಡಿಯ ಹಿಂದೆ ಮತ್ತು ಮುಂದೆ ಎರಡೆರಡು ಕುದುರೆಗಳನ್ನು ಕಟ್ಟಿದ್ದು ನೋಡಿ ಯಾರಿಗೆ ತಾನೇ ಸುಮ್ಮನಿರಲಾಗುತ್ತದೆ? ಅವುಗಳಿಗೆ ನಿಜವಾಗಿ ರೆಕ್ಕೆಗಳಿದ್ದಿರಬಹುದು. ನಾನು ಮೊದಲೇ ಅವುಗಳನ್ನು ಗಮನಿಸಲಿಲ್ಲ. ಆದರೂ ನಾಲ್ಕು ಕಾಲುಗಳ ಕುದುರೆಗೆ ರೆಕ್ಕೆಗಳಿರುವುದು ಒಂದು ದೊಡ್ಡ ವಿಚಿತ್ರವೇ ಸರಿ! ಅಪ್ಪ, ನಾನು ಬೇಗ ಏಳಬೇಕು ಇಲ್ಲದಿದ್ದರೆ ಆ ಮನೆ ಕಟ್ಟುವವರು ಮತ್ತೆ ಎಷ್ಟು ತಪ್ಪು ಮಾಡುತ್ತಾರೊ ಏನೊ, ಅಬ್ಬ! ನಾನು ಅದೃಷ್ಟವಂತ. ಸದ್ಯ ನಾನೇನು ಸತ್ತಿರಲಿಲ್ಲವಲ್ಲ" ಅಂದುಕೊಂಡ.

೧೭. ಇಬ್ಬರು ರಾಜಕುಮಾರರು

ಒಂದಾನೊಂದು ಕಾಲದಲ್ಲಿ ಒಬ್ಬ ರಾಜ ನಿದ್ದನು. ಅವನಿಗೆ ಒಬ್ಬ ಚಿಕ್ಕ ಮಗನಿದ್ದನು. ಅವನು ಹದಿನಾರು ವರುಷದವನಾದಾಗ ಒಂದು ಸಾರಂಗದಿಂದ ಸಾಯುತ್ತಾನೆ ಎಂದು ಮೊದಲೆ ಭವಿಷ್ಯ ಹೇಳಿದ್ದರು. ಅವನಿಗೆ ಹದಿನಾರು ವರುಷ ಆಗುತ್ತಿರುವಾಗಲೆ ಅವನು ಆಸ್ಥಾನದ ಬೇಟೆಗಾರರ ಜೊತೆ ಬೇಟೆಗೆ ಹೋದನು. ಪ್ರಾಣಿಗಳನ್ನು ಹುಡುಕಿಕೊಂಡು ತುಂಬ ದೂರ ಹೋದನು. ಅವನ ಸ್ನೇಹಿತರು ದೂರ ಆದರು. ಅಲ್ಲಿ ಅವನು ಒಂದು ಸುಂದರ ಗಂಡು ಜಿಂಕೆಯನ್ನು ನೋಡಿದನು. ಅದನ್ನು



ಬೇಟೆಯಾಡಬೇಕೆಂದು ಆಸೆಪಟ್ಟನು. ಅದನ್ನು ಬಹಳ ದೂರದವರೆಗೆ ಬೆನ್ನಟ್ಟಿದನು. ಅದು ಸಿಗಲಿಲ್ಲ. ಕೊನೆಗೆ ಅದು ಒಂದು ಪುಟ್ಟ ಗುಹೆಯಂತಹ ಜಾಗದಲ್ಲಿ ಹೋಯಿತು. ಅಲ್ಲಿ ಅದು ತೆಳ್ಳನೆಯ ಉದ್ದ ಮನುಷ್ಯನ ರೂಪ ಪಡೆದು ಬಂದು ರಾಜಕುಮಾರನಿಗೆ,"ಈಗ ಎಲ್ಲವೂ ಸರಿಹೋಯಿತು. ಕೊನೆಗೂ ನಿನ್ನನ್ನು ನಾನು ಹಿಡಿದುಬಿಟ್ಟೆನು. ತುಂಬಾ ಸಾರಿ ಯಾರಿಗೂ ತಿಳಿಯದಂತೆ ನಿನ್ನನ್ನು ಹಿಂಬಾಲಿಸಿದ್ದೆ. ಆದರೆ ಆಗಿರಲಿಲ್ಲ. ಈಗ ನಿನ್ನನ್ನು ಹಿಡಿಯುವ ಸಮಯ ಬಂದಿತು" ಎಂದು ಹೇಳುತ್ತಾ ರಾಜಕುಮಾರನನ್ನು ತನ್ನ ಜೊತೆಯಲ್ಲಿ ಕರೆದುಕೊಂಡು ಹೋದನು. ಅವರು ಒಂದು ವಿಶಾಲ ಸರೋವರವನ್ನು ದೋಣಿಯಲ್ಲಿ ದಾಟಿ ದೊಡ್ಡ ಅರಮನೆಗೆ ಬಂದರು. ಒಳಗೆ ಹೋಗಿ ಮೇಜಿನ ಬಳಿ ಕುಳಿತು ಊಟ ಮಾಡಿದರು. ಊಟ ಆದ ಮೇಲೆ ಆ ರಾಜ, "ನನಗೆ ಮೂವರು ಹೆಣ್ಣುಮಕ್ಕಳಿದ್ದಾರೆ. ಅವರಲ್ಲಿ ಹಿರಿಯವಳನ್ನು ನೀನು ರಾತ್ರಿ ಕಾಯಬೇಕು. ರಾತ್ರಿ ಒಂಬತ್ತು ಗಂಟೆಯಿಂದ ಬೆಳಗಿನವರೆಗೆ ಕುಳಿತುಕೊಳ್ಳಬೇಕು. ಪ್ರತಿಸಾರಿ ಗಂಟೆ

ಹೊಡೆದಾಗ ನಾನು ಬಂದು ಮೃದುವಾಗಿ ಕರೆಯುತ್ತೇನೆ. ಆಗ ನೀನು ಕೂಡಲೆ ಉತ್ತರಿಸಬೇಕು. ನಂತರ ನೀನು ನನ್ನ ಮಗಳನ್ನು ಮದುವೆ ಆಗಬಹುದು" ಎಂದು ಹೇಳಿದನು.

ಅವನನ್ನು ಒಂದು ಕೋಣೆಯೊಳಗೆ ಕರೆದುಕೊಂಡು ಹೋದನು. ಅಲ್ಲಿ ಒಂದು ಕಲ್ಲಿನ ವಿಗ್ರಹವಿತ್ತು. ರಾಜಕುಮಾರಿಯು "ನನ್ನ ಅಪ್ಪ ಒಂಬತ್ತು ಗಂಟೆಗೆ ಮತ್ತು ಪ್ರತಿಗಂಟೆಗೊಮ್ಮೆ ಬಂದು ಮಾತನಾಡಿಸಿದಾಗ ಈ ರಾಜಕುಮಾರನ ಬದಲಾಗಿ ನೀನು ಉತ್ತರಿಸುವೆಯಾ" ಎಂದು ವಿಗ್ರಹವನ್ನು ಕೇಳಿದಳು. ಆ ಕಲ್ಲಿನ ವಿಗ್ರಹ ಮೊದಲು ಜೋರಾಗಿ ತಲೆ ಅಲ್ಲಾಡಿಸಿತು. ಕ್ರಮೇಣ ನಿಧಾನ ಮಾಡುತ್ತಾ, ಕೊನೆಗೆ ಸಂಪೂರ್ಣವಾಗಿ ತಲೆ ಅಲ್ಲಾಡಿಸುವುದನ್ನು ನಿಲ್ಲಿಸಿತು. ಮಾರನೇ ದಿನ ರಾಜ, "ನೀನು ನಿನ್ನ ಕೆಲಸವನ್ನು ಚೆನ್ನಾಗಿ ಮಾಡಿದೆ" ಎಂದು ರಾಜಕುಮಾರನಿಗೆ ಹೇಳಿದನು. ಆದರೆ ಅವನು ತನ್ನ ಮಗಳನ್ನು ಕೊಡಲು ತಯಾರಾಗಲಿಲ್ಲ. ಎರಡನೇ ದಿನ ಎರಡನೇ ಮಗಳನ್ನು ರಾತ್ರಿಯ ಹೊತ್ತು ಕಾದರೆ ಮೊದಲನೆ ಮಗಳನ್ನು ಕೊಡುವುದಾಗಿ ಹೇಳಿದನು. "ನಾನು ಗಂಟೆಗೊಂದು ಸಾರಿ ಬಂದು ಮೆತ್ತಗೆ ಕರೆದರೆ ನೀನು ಎಚ್ಚರವಿದ್ದು ಕೂಡಲೆ ಉತ್ತರಿಸಬೇಕು. ಇಲ್ಲದಿದ್ದರೆ ನಿನ್ನನ್ನು ಕೊಲ್ಲಬೇಕಾಗುವುದು" ಎಂದು ರಾಜಕುಮಾರನಿಗೆ ಹೇಳಿದನು. ಹಾಗೆ ಹೇಳುತ್ತ ಅವರು ಎರಡನೆ ರಾಜಕುಮಾರಿಯ ಕೋಣೆಗೆ ಹೋದರು. ಅಲ್ಲಿ ಮೊದಲ ವಿಗ್ರಹಕ್ಕಿಂತಲೂ ದೊಡ್ಡ ವಿಗ್ರಹವಿತ್ತು. ರಾಜ ಕರೆದಾಗ ವಿಗ್ರಹವೇ ಉತ್ತರಿಸಬೇಕೆಂದು ರಾಜಕುಮಾರಿ ಆ ವಿಗ್ರಹಕ್ಕೆ ಹೇಳಿದಳು. ಆ ವಿಗ್ರಹವೂ ಕೂಡ ಮೊದಲು ವೇಗವಾಗಿ ತಲೆ ಅಲ್ಲಾಡಿಸಿ, ನಂತರ ನಿಧಾನ ಮಾಡುತ್ತಾ ತಲೆ ಅಲ್ಲಾಡಿಸುವುದನ್ನು ನಿಲ್ಲಿಸಿತು. ರಾಜಕುಮಾರ ತನ್ನ ತಲೆಯನ್ನು ತೋಳುಗಳ ಮೇಲೆ ಇಟ್ಟುಕೊಂಡು ಹೊಸ್ತಿಲಮೇಲೆ ಮಲಗಿಕೊಂಡನು. ಮಾರನೇ ದಿನ ಬೆಳಗ್ಗೆ ರಾಜ ಬಂದನು. "ಈಗಲೂ ಕೂಡ ನಾನು ನನ್ನ ಮಗಳನ್ನು ಕೊಡುವುದಿಲ್ಲ. ನೀನು ಹೇಳಿದ ಕೆಲಸವನ್ನು ಚೆನ್ನಾಗಿ ಮಾಡಿರುವೆ. ನನ್ನ ಮಗಳು ಸಿಗಬೇಕಾದರೆ ಈ ರಾತ್ರಿ ನೀನು ನನ್ನ ಕೊನೆಯ ಮಗಳನ್ನು ಕಾಯಬೇಕು. ಆಗ ನಿನಗೆ ನನ್ನ ಎರಡನೇ ಮಗಳನ್ನು ಕೊಡುವ ಬಗ್ಗೆ ಯೋಚಿಸುತ್ತೇನೆ. ನಾನು ಗಂಟೆಗೊಂದು ಸಾರಿ ಬರುತ್ತೇನೆ. ಕರೆಯುತ್ತೇನೆ. ನೀನು ಉತ್ತರಿಸಿದರೆ ಒಳ್ಳೆಯದು. ಇಲ್ಲದಿದ್ದರೆ ನಿನ್ನನ್ನು ಕೊಂದು ರಕ್ತ ಹರಿಸುತ್ತೇನೆ" ಎಂದು ರಾಜಕುಮಾರನಿಗೆ ಹೇಳಿದನು.

ಅವರು ಚಿಕ್ಕ ರಾಜಕುಮಾರಿಯ ಕೋಣೆಗೆ ಹೋದರು. ಅಲ್ಲಿ ಉದ್ದವಾದ, ಮೊದಲೆರಡು ವಿಗ್ರಹಗಳಿಗಿಂತ ದೊಡ್ಡದಾದ ವಿಗ್ರಹವಿತ್ತು. ಅದಕ್ಕೆ ರಾಜಕುಮಾರಿ, "ನನ್ನ ಅಪ್ಪ ಬಂದು ಕರೆದರೆ ನೀನು ಉತ್ತರಿಸು" ಎಂದು ಹೇಳಿದಳು. ಆ ವಿಗ್ರಹ ಅರ್ಧಗಂಟೆ ತಲೆ ಅಲ್ಲಾಡಿಸಿ ನಂತರ ನಿಲ್ಲಿಸಿತು. ರಾಜಕುಮಾರ ಮತ್ತೆ ಹೊಸ್ತಿಲ ಮೇಲೆ ತಲೆ ಇಟ್ಟುಕೊಂಡು ಮಲಗಿ ನಿದ್ದೆಹೋದನು. ಮಾರನೇ ದಿನ ರಾಜ ಬಂದು "ನೀನು ನಿಜವಾಗಲೂ ಚೆನ್ನಾಗಿ ಕಾದಿರುವೆ" ಎಂದು ಹೇಳಿದನು. ಆದರೂ ತನ್ನ ಮಗಳನ್ನು ಕೊಡಲು ಒಪ್ಪಲಿಲ್ಲ. ಒಂದು ಕಾಡನ್ನು ತೋರಿಸಿ ಅದನ್ನು ಸಾಯಂಕಾಲದೊಳಗೆ ರಾಜಕುಮಾರ ನೆಲಸಮ ಮಾಡಿದರೆ ಮಗಳನ್ನು ಕೊಡುವ ವಿಚಾರವನ್ನು ಗಮನಿಸುವುದಾಗಿ ಹೇಳಿದನು. ನಂತರ ಅವನು ಒಂದು ಗಾಜಿನ ಕೊಡಲಿ, ಗಾಜಿನ ಉಳಿ, ಮತ್ತು ಗಾಜಿನ ಬೆಣೆಯನ್ನು ಕೊಟ್ಟನು. ರಾಜಕುಮಾರ ತನ್ನ ಕೆಲಸವನ್ನು ಪ್ರಾರಂಭಿಸಿದನು. ಮೊದಲ ಹೊಡೆತಕ್ಕೆ ಕೊಡಲಿ ಎರಡು ಹೋಳಾಯಿತು. ಉಳಿ ಮತ್ತು ಬೆಣೆಗಳು ಚೂರು ಚೂರಾಗಿ ಹಾರಿಬಿದ್ದವು. ಆಗ ಅವನಿಗೆ ನಿಜಕ್ಕೂ ತುಂಬ ಕಷ್ಟ ಬಂದಿತು. ತನ್ನನ್ನು ರಾಜ ಸಾಯಿಸುತ್ತಾನೆಂದು ನಂಬಿದನು. ಅದನ್ನೆ

ಯೋಚನೆ ಮಾಡುತ್ತಾ ಅಳಲು ಶುರುಮಾಡಿದನು. ಮಧ್ಯಾಹ್ನ ಆಯಿತು. ಆಗ ರಾಜ ತನ್ನ ಮಕ್ಕಳಿಗೆ "ನಿಮ್ಮಲ್ಲಿ ಯಾರಾದರೊಬ್ಬರು ಅವನಿಗೆ ಊಟ ಒಯ್ಯಿರಿ" ಎಂದು ಹೇಳಿದನು. ಅವರಲ್ಲಿ ಹಿರಿಯರಿಬ್ಬರೂ ತಾವು ಹೋಗುವುದಿಲ್ಲವೆಂದು, ಕೊನೆಯಲ್ಲಿ ಯಾರನ್ನು ಕಾದಿರುವನೊ ಅವಳೇ ಹೋಗಲಿ ಎಂದು ಹೇಳಿದರು. ಹೀಗಾಗಿ ಚಿಕ್ಕ ರಾಜಕುಮಾರಿ ರಾಜಕುಮಾರನಿಗೆ ಊಟ ತೆಗೆದುಕೊಂಡು ಹೋಗಬೇಕಾಯಿತು. ಅವಳು ಕಾಡಿಗೆ ಹೋಗಿ ರಾಜಕುಮಾರನ ಕೆಲಸದ ಬಗ್ಗೆ ವಿಚಾರಿಸಿಕೊಂಡಳು. "ಅಯ್ಯೋ, ಎಲ್ಲ ಕೆಟ್ಟುಹೋಯಿತು" ಎಂದು ಹೇಳಿದನು. ಅವನು ಮುಂದೆ ಕೆಲಸ ಮಾಡುವ ಮೊದಲು ಸ್ವಲ್ಪ ಊಟಮಾಡಬೇಕೆಂದು ರಾಜಕುಮಾರಿ ಒತ್ತಾಯಿಸಿದಳು. ರಾಜಕುಮಾರ ಊಟವನ್ನು ನಿರಾಕರಿಸಿದನು. "ಬೇಡ, ನಾನು ಸಾಯಬೇಕು. ನಾನು ಊಟ ಮಾಡಬಾರದೆಂದು ತೀರ್ಮಾನಿಸಿದ್ದೇನೆ" ಎಂದು ಹೇಳಿದನು. ಕೊನೆಗೆ ಅವಳ ಒತ್ತಾಯಕ್ಕೆ ಒಪ್ಪಿಕೊಂಡು ಅವಳು ತಂದಿದ್ದನ್ನು ಉಂಡನು. ಅವನ ಊಟ ಆದ ಮೇಲೆ, ತನ್ನ ಜೊತೆ ಚೆಂಡಾಟವಾಡಲು ಒತ್ತಾಯ ಮಾಡಿದಳು. ಆಟದ ಆಯಾಸದಿಂದ ಅವನು ನಿದ್ದೆ ಮಾಡಿದನು. ನಂತರ ಅವಳು ತನ್ನ ಕರವಸ್ತ್ರವನ್ನು ತೆಗೆದು, ಅದರ ತುದಿಗೆ ಗಂಟು ಹಾಕಿ, ಅದರಿಂದ ನೆಲದ ಮೇಲೆ ಮೂರಿ ಸಾರಿ ಬಡಿದಳು. "ಪಾತಾಳ ಮನುಷ್ಯರೆ ಮೇಲೆ ಬನ್ನಿ" ಎಂದು ಕೂಗಿದಳು. ಕೂಡಲೇ ಎಲ್ಲಿಂದಲೋ ಅನೇಕ ಗಿಡ್ಡ ಮನುಷ್ಯರು ಬಂದರು. ರಾಜಕುಮಾರಿಗೆ ಏನು ಬೇಕಾಗಿದೆ ಎಂದು ವಿಚಾರಿಸಿದರು. "ಇನ್ನು ಮೂರು ಗಂಟೆಯೊಳಗೆ ಈ ಕಾಡನ್ನು ನೆಲಸಮ ಮಾಡಿ, ಕಟ್ಟಿಗೆಯನ್ನು ಒಂದು ರಾಶಿ ಮಾಡಿ" ಎಂದು ರಾಜಕುಮಾರಿ ಅವರಿಗೆ ಹೇಳಿದಳು.

ಆ ಪಾತಾಳಗಿಡ್ಡರು ತಮ್ಮ ಸೈನ್ಯವನ್ನೆಲ್ಲ ಕೂಡಿಸಿಕೊಂಡು ಕೆಲಸ ಶುರುಮಾಡಿದರು. ಮೂರು ಗಂಟೆಗಳಲ್ಲಿ ಎಲ್ಲವೂ ಮುಗಿಯಿತು. ರಾಜಕುಮಾರಿಯನ್ನು ಕರೆದು ತೋರಿಸಿದರು. ನಂತರ ಅವಳು ತನ್ನ ಕರವಸ್ತ್ರದ ಗಂಟನ್ನು ಮತ್ತೆ ನೆಲದ ಮೇಲೆ ಬಡಿದಳು. "ಪಾತಾಳ ಗಿಡ್ಡರೆ ಮನೆಗೆ ಹೋಗಿ" ಎಂದಳು. ಆಗ ಅವರೆಲ್ಲರೂ ಅದೃಶ್ಯರಾದರು. ರಾಜಕುಮಾರನನ್ನು ಎಬ್ಬಿಸಿದಳು. ಅವನು ಕಾಡಿನ ಕೆಲಸವೆಲ್ಲ ಮುಗಿದಿರುವುದನ್ನು ನೋಡಿ ತುಂಬ ಸಂತೋಷಪಟ್ಟನು. ಅವನು ಸಾಯಂಕಾಲ ಆರು ಗಂಟೆ ಆಗುವವರೆಗೂ ಹಿಂದಿರುಗಬಾರದೆಂದು ರಾಜಕುಮಾರಿ ಹೇಳಿದಳು. ಅವಳು ಹೇಳಿದ ಸಮಯಕ್ಕೆ ಹಿಂದಿರುಗಿದನು. ರಾಜ ಅವನ ಕೆಲಸ ಮುಗಿಯಿತೊ ಇಲ್ಲವೋ ಎಂದು ವಿಚಾರಿಸಿದನು. ಅದಕ್ಕೆ ರಾಜಕುಮಾರ, "ನಾನು ಕಾಡನ್ನೆಲ್ಲ ನೆಲಸಮ ಮಾಡಿದ್ದೀನಿ" ಎಂದು ಹೇಳಿದನು. ಆ ನಂತರ ಅವರು ರಾತ್ರಿ ಊಟಕ್ಕೆ ಕುಳಿತರು. ಆಗಲೂ, ತಾನು ಯಾವ ಮಗಳನ್ನೂ ಅವನಿಗೆ ಕೊಡುವುದಿಲ್ಲ. ಅದಕ್ಕಾಗಿ ಅವನು ಇನ್ನೊಂದು ಕೆಲಸವನ್ನು ಮಾಡಬೇಕಾಗಿದೆ ಎಂದು ರಾಜ ಹೇಳಿದನು. "ಕಂದಕವನ್ನು ಸ್ವಚ್ಛಮಾಡಿ ನೀರು ತುಂಬಬೇಕು. ಅದು ಕನ್ನಡಿಯಷ್ಟು ಪಾರದರ್ಶಕವಾಗಿರಬೇಕು. ಜೊತೆಗೆ ಎಲ್ಲ ವಿಧದ ಮೀನುಗಳಿರಬೇಕು" ಎಂದು ಹೇಳಿದನು. ಮಾರನೇ ದಿನ ಬೆಳಗ್ಗೆ ಮತ್ತೆ ರಾಜ ಅವನಿಗೆ ಗಾಜಿನ ಗುದ್ದಲಿ ಕೊಟ್ಟನು. "ಕಂದಕ ಸಾಯಂಕಾಲ ಆರು ಗಂಟೆಯ ಹೊತ್ತಿಗೆ ಸಿದ್ಧವಾಗಿರಬೇಕು" ಎಂದು ಹೇಳಿದನು. ರಾಜಕುಮಾರ ತೋಡುವ ಕೆಲಸವನ್ನು ಆ ಕೂಡಲೇ ಪ್ರಾರಂಭಿಸಿದನು. ಅವನು ಗಾಜಿನ ಗುದ್ದಲಿಯಿಂದ ನೆಲಕ್ಕೆ ಒಂದು ಏಟು ಹಾಕುವುದರೊಳಗಾಗಿ ಅದು ಎರಡು ತುಂಡಾಯಿತು. ಅವನಿಗೆ ಏನು ಮಾಡಬೇಕೆಂದು ತಿಳಿಯಲಿಲ್ಲ. ಕೊಡಲಿಯನ್ನೇ ನೋಡುತ್ತಾ ಕುಳಿತುಬಿಟ್ಟನು. ಮಧ್ಯಾಹ್ನವಾಯಿತು. ಆಗ ಕೊನೆಯ ರಾಜಕುಮಾರಿ

ಅವನಿಗಾಗಿ ಊಟ ತಂದಳು. ಅವನು ಏನು ಮಾಡಿದನೆಂದು ಕೇಳಿದಳು. "ಅಯ್ಯೋ! ಅದೇ ದುರದೃಷ್ಟ ನನ್ನ ಬೆನ್ನು ಹತ್ತಿದೆ" ಎಂದು ಹೇಳಿ ತನ್ನ ಕೈಗಳಿಂದ ಮುಖವನ್ನು ಮುಚ್ಚಿಕೊಂಡನು.

ರಾಜಕುಮಾರಿ ಅವನಿಗೆ ಸಮಾಧಾನ ಮಾಡಲು ಪ್ರಯತ್ನಿಸಿದಳು. ಅವನು ಊಟ ಮಾಡಿ ಮಲಗಿಕೊಳ್ಳಲು ಹೇಳಿದಳು. ಅವನು ತಾನು ಸಾಯಬೇಕೆಂದು ಹೇಳುತ್ತಾ ಊಟ ಮಾಡಲು ಒಪ್ಪಲಿಲ್ಲ. ಅವಳು ತುಂಬಾ ಒತ್ತಾಯ ಮಾಡಿ ಊಟ ಮಾಡಿಸಿದಳು. ಬೇಜಾರು ಮತ್ತು ದುಃಖದಿಂದ ಅವನಿಗೆ ಬೇಗನೆ ನಿದ್ದೆ ಹತ್ತಿತು. ಅವನು ಗೊರಕೆ ಹೊಡೆಯುತ್ತಿರುವಾಗ ಅವಳು ತನ್ನ ಕರವಸ್ತ್ರದ ಗಂಟಿನಿಂದ ನೆಲಕ್ಕೆ ಬಡಿದಳು. ಮೊದಲಿನಂತೆ ಮೂರುಸಾರಿ ಕರೆದಳು "ಪಾತಾಳ ಗಿಡ್ಡರೆ ಮೇಲೆ ಬನ್ನಿ!" ಎಂದಳು. ಅವರು ಕೂಡಲೆ ಬಂದರು. ಕೆಲಸವೇನೆಂದು ಕೇಳಿದರು. "ಇನ್ನು ಮೂರು ಗಂಟೆಯೊಳಗೆ ಈ ಕಂದಕವನ್ನು ತೋಡಿ, ಪರಿಶುದ್ಧ ಪಾರದರ್ಶಕ ನೀರು ತುಂಬಿ ಅದರಲ್ಲಿ ಎಲ್ಲ ತರಹದ ಮೀನು ಹಾಕಿ" ಎಂದು ಅವರಿಗೆ ಹೇಳಿದಳು.

ಆ ನೆಲಗಿಡ್ಡರು ತಮ್ಮ ಶಕ್ತಿಯನ್ನೆಲ್ಲ ಒಟ್ಟುಗೂಡಿಸಿಕೊಂಡು ಕೆಲಸ ಶುರು ಮಾಡಿದರು. ಅವರು ಎಷ್ಟು ಕಷ್ಟಪಟ್ಟು ಕೆಲಸ ಮಾಡಿದರು ಎಂದರೆ ಎರಡು ಗಂಟೆಯೊಳಗೆ ಆ ಕಂದಕ ಸಿದ್ಧವಾಗಿತ್ತು. ಅವಳ ಆಜ್ಞೆಯಂತೆ ಎಲ್ಲವೂ ಆಗಿದೆ ಎಂದು ಅವರು ಹೇಳಿದರು. ಮತ್ತೆ ಅವಳು ಕರವಸ್ತ್ರವನ್ನು ನೆಲಕ್ಕೆ ಬಡಿದು ಅವರನ್ನು ಮನೆಗೆ ಕಳಿಸಿದಳು. ರಾಜಕುಮಾರನನ್ನು ಎಬ್ಬಿಸಿದಳು. ಕಂದಕ ಸಿದ್ಧವಾಗಿರುವುದನ್ನು ಅವನು ನೋಡಿದನು. ಆ ರಾಜಕುಮಾರಿ ಮನೆಗೆ ಹಿಂದಿರುಗಿದಳು. ಅವನಿಗೆ ಆರು ಗಂಟೆಯವರೆಗೆ ಬರಬೇಡವೆಂದು ಹೇಳಿ ಹೋದಳು. ಆರು ಗಂಟೆಯ ನಂತರ ರಾಜಕುಮಾರ ಹಿಂದಿರುಗಿದನು. ಕಂದಕ ಸಿದ್ಧವಾಗಿದೆಯೆ ಎಂದು ರಾಜ ಅವನನ್ನು ಕೇಳಿದನು. "ಹೌದು" ಎಂದು ಉತ್ತರಿಸಿದನು. "ಒಳ್ಳೆಯದು" ಎಂದು ರಾಜ ಹೇಳಿದನು. ಆದರೆ ರಾತ್ರಿ ಊಟದ ಹೊತ್ತಿಗೆ ರಾಜ ಇನ್ನೊಂದು ಕೆಲಸವನ್ನು ಹೇಳಿದನು. ಅದು ಮಾಡುವವರೆಗೂ ತನ್ನ ಮಗಳನ್ನು ಕೊಡುವುದಿಲ್ಲವೆಂದು ಹೇಳಿದನು. "ಇನ್ನೂ ಏನೂ ಮಾಡಬೇಕು?" ಎಂದು ಆಶ್ಚರ್ಯದಿಂದ ಕೇಳಿದನು. "ಅಲ್ಲಿ ಒಂದು ದೊಡ್ಡ ಬೆಟ್ಟವಿದೆ. ಅದರಲ್ಲಿ ಅನೇಕ ಬಂಡೆಗಳಿವೆ. ಅವುಗಳನ್ನು ಪುಡಿ ಪುಡಿ ಮಾಡಬೇಕು. ಆಮೇಲೆ ಅಲ್ಲೊಂದು ಸುಂದರವಾದ ಅರಮನೆ ಕಟ್ಟಬೇಕು. ಯಾರೂ ಊಹಿಸಲಾರದಷ್ಟು ಗಟ್ಟಿಯಾಗಿರಬೇಕು. ಅದರೊಳಗೆ ಅತ್ಯಗತ್ಯವಾಗಿ ಬೇಕಾದ ಎಲ್ಲ ವಸ್ತುಗಳು ತುಂಬಿರಬೇಕು" ಎಂದು ಹೇಳಿದನು. ಮಾರನೆ ದಿನ ಅವನಿಗೆ ಗಾಜಿನ ಪಿಕಾಸಿ ಮತ್ತು ಬೈರಿಗೆಯನ್ನು ಕೊಟ್ಟು ಕಳುಹಿಸಿದನು. ಸಾಯಂಕಾರ ಆರು ಗಂಟೆಯ ಹೊತ್ತಿಗೆ ಕೆಲಸ ಆಗಬೇಕೆಂದು ಹೇಳಿದನು.

ಮೊದಲನೆ ಹೊಡೆತಕ್ಕೆ ಆ ಕೊಡಲಿಯು ಮುರಿದು ಗಾಜಿನ ಚೂರುಗಳು ಎಲ್ಲ ಕಡೆ ಹರಡಿದವು. ಅವನ ಕೈಯಲ್ಲಿ ಬರೀ ಹಿಡಿಕೆ ಉಳಿಯಿತು. ಬೈರಿಗೆ ಅವನ ಉತ್ಸಾಹವನ್ನು ಕೆರಳಿಸಲಿಲ್ಲ. ಈ ಎಲ್ಲ ದುರದೃಷ್ಟದಿಂದ ಅವನ ಹೃದಯ ನಿರಾಶೆಯಿಂದ ತುಂಬಿತು. ತನ್ನ ಪ್ರಿಯತಮೆ ಬಂದು ಸಹಾಯ ಮಾಡಬಹುದು ಎಂದು ಯೋಚಿಸಿ ಸುಮ್ಮನೆ ಕುಳಿತುಬಿಟ್ಟನು. ಮಧ್ಯಾಹ್ನದ ಹೊತ್ತಿಗೆ ಆಕೆ ಬಂದಳು. ಅವನಿಗೆ ಊಟ ತಂದಳು. ಅವನು ಅವಳ ಹತ್ತಿರ ಓಡಿಹೋಗಿ ತನ್ನ ಕಷ್ಟಗಳನ್ನು ಹೇಳಿಕೊಂಡನು. ಮೊದಲು ಅವನಿಗೆ ತಿನ್ನಲು ಕೊಟ್ಟು, ನಂತರ ಮಲಗಿಸಿದಳು. ಮತ್ತೆ ಅವಳು ತನ್ನ ಕರವಸ್ತ್ರದ ಗಂಟನ್ನು ನೆಲಕ್ಕೆ ಮೂರು ಸಾರಿ ಬಡಿದಳು. "ಬನ್ನಿ

ಪಾತಾಳ ಗಿಡ್ಡರೆ, ಮೇಲೆ ಬನ್ನಿ" ಎಂದು ಕೂಗಿದಳು. ಅವರು ಕೂಡಲೆ ಪ್ರತ್ಯಕ್ಷರಾಗಿ ಅವಳ ಆಸೆ ಏನು ಎಂದು ಕೇಳಿದರು. ಅವಳು, ಮೂರುಗಂಟೆಯೊಳಗೆ ಆ ಬೆಟ್ಟದ ಬಂಡೆಗಳನ್ನು ಪುಡಿಮಾಡಲು ಅವರಿಗೆ ಹೇಳಿದಳು. ಆ ಜಾಗದಲ್ಲಿ ಭವ್ಯವಾದ ಅರಮನೆ ಕಟ್ಟಬೇಕೆಂದು ಹೇಳಿದಳು. ಯಾರೂ ನೋಡಿರದಷ್ಟು ಸುಂದರವಾಗಿರಬೇಕು ಮತ್ತು ಎಲ್ಲ ಅವಶ್ಯಕ ವಸ್ತುಗಳಿಂದ ತುಂಬಿರಬೇಕು ಎಂದು ಹೇಳಿದಳು. ಆ ನೆಲಗಿಡ್ಡರು ತಮ್ಮ ಸಲಕರಣೆಗಳನ್ನು ತಂದರು. ಕೆಲಸ ಪ್ರಾರಂಭಿಸಿದರು. ಮೂರು ಗಂಟೆಯಲ್ಲಿ ಎಲ್ಲವನ್ನೂ ಮಾಡಿ ಮುಗಿಸಿದರು. ತಮ್ಮ ಕೆಲಸ ಮುಗಿಯಿತು ಎಂದು ತಿಳಿಸಿದರು. ರಾಜಕುಮಾರಿ ಮತ್ತೆ ತನ್ನ ಕರವಸ್ತ್ರದ ಗಂಟನ್ನು ಮೂರು ಸಾರಿ ನೆಲಕ್ಕೆ ಬಡಿದು, "ನೆಲಗಿಡ್ಡರೆ ಮನೆಗೆ ಹೋಗಿ" ಎಂದಳು. ಅವರು ಅದೃಶ್ಯರಾದರು. ಅವಳು ರಾಜಕುಮಾರನನ್ನು ಎಚ್ಚರಗೊಳಿಸಿದಳು. ಅವರಿಬ್ಬರೂ ಹಾರುವ ಹಕ್ಕಿಗಳ ಹಾಗೆ ಸಂತೋಷಪಟ್ಟರು. ಆರು ಗಂಟೆ ಆದಾಗ ಅವರಿಬ್ಬರೂ ಒಟ್ಟಿಗೆ ಮನೆಗೆ ಹೋದರು. "ಅರಮನೆಯೂ ಸಿದ್ಧವಾಯಿತೆ?" ಎಂದು ರಾಜ ಕೇಳಿದನು. "ಹೌದು" ಎಂದು ರಾಜಕುಮಾರ ಉತ್ತರಿಸಿದನು. ಮತ್ತೆ ರಾತ್ರಿಯ ಊಟದ ಹೊತ್ತಿಗೆ ರಾಜ "ಹಿರಿಯ ರಾಜಕುಮಾರಿಯನ್ನು ಕೇಳದೆ, ನಾನು ನನ್ನ ಚಿಕ್ಕ ಮಗಳನ್ನು ನಿನಗೆ ಕೊಡುವುದಿಲ್ಲ" ಎಂದು ರಾಜಕುಮಾರನಿಗೆ ಹೇಳಿದನು. ಅದನ್ನು ಕೇಳಿ, ರಾಜಕುಮಾರ ಮತ್ತು ರಾಜಕುಮಾರಿ ಇಬ್ಬರಿಗೂ ಬೇಸರವಾಯಿತು. ಮುಂದೆ ಏನು ಮಾಡಬೇಕೆಂದು ಅವರಿಗೆ ತಿಳಿಯಲಿಲ್ಲ. ಮಧ್ಯರಾತ್ರಿ ಆದ ಮೇಲೆ ರಾಜಕುಮಾರ ತನ್ನ ಪ್ರಿಯತಮೆಯ ಹತ್ತಿರ ಹೋದನು. ಅಲ್ಲಿಂದ ಇಬ್ಬರೂ ತಪ್ಪಿಸಿಕೊಂಡರು. ಆದರೆ ದಾರಿಯಲ್ಲಿ ರಾಜಕುಮಾರಿ ಹಿಂದಿರುಗಿ ನೋಡಿದಾಗ, ಅವಳ ಅಪ್ಪ ಹಿಂಬಾಲಿಸುತ್ತಿರುವುದನ್ನು ಕಂಡಳು. "ಅಯ್ಯೋ! ಈಗೇನು ಮಾಡುವುದು? ನನ್ನ ಅಪ್ಪ ನಮ್ಮ ಹಿಂದೆಯೇ ಇದ್ದಾನೆ. ನಮ್ಮನ್ನು ಹಿಡಿದುಬಿಡುತ್ತಾನೆ. ಆದ್ದರಿಂದ ನಾನು ಒಂದು ಗುಲಾಬಿ ಹೂವಾಗಿ, ನಿನ್ನನ್ನು ಮುಳ್ಳಿನ ಪೊದೆಯನ್ನಾಗಿ ಮಾಡುತ್ತೇನೆ. ಅದರೊಳಗೆ ನಾನು ಸೇರಿಕೊಂಡು ಸದಾ ನಿನ್ನ ರಕ್ಷಣೆಯಲ್ಲಿರುತ್ತೇನೆ" ಎಂದು ಹೇಳಿದಳು.

ಅವಳ ಅಪ್ಪ ಅವರಿದ್ದ ಜಾಗಕ್ಕೆ ಬಂದು ನೋಡಿದಾಗ ಅವನಿಗೆ ಒಂದು ಮುಳ್ಳಿನ ಪೊದೆ ಮತ್ತು ಒಂದು ಗುಲಾಬಿ ಹೂವು ಕಂಡವು. ಅವನು ಹೂವನ್ನು ಕೀಳಲು ಕೈ ಹಾಕಿದಾಗ ಮುಳ್ಳುಗಳು ಅವನ ಬೆರಳಿಗೆ ಚುಚ್ಚಿದವು. ಅವನು ಮನೆಗೆ ಹಿಂದಿರುಗಿದನು. ಮನೆಯಲ್ಲಿ, ಅವನ ಹೆಂಡತಿ, "ಅವರನ್ನು ಜೊತೆಯಲ್ಲಿ ಯಾಕೆ ಕರೆತರಲಿಲ್ಲ" ಎಂದು ಕೇಳಿದಳು. ಅದಕ್ಕೆ ಅವನು, "ಅವರು ಕಣ್ಣಿನಿಂದ ಮರೆಯಾಗುವವರೆಗೂ ಹಿಂಬಾಲಿಸಿದೆನೆಂದೂ, ಅವರಿದ್ದ ಜಾಗಕ್ಕೆ ಬಂದಾಗ ಅಲ್ಲಿ ಒಂದು ಮುಳ್ಳಿನ ಪೊದೆ ಮತ್ತು ಒಂದು ಗುಲಾಬಿ ಹೂವು ಇತ್ತು ಎಂದು ಹೇಳಿದನು. ಅದಕ್ಕೆ ಅವಳು "ನೀನು ಹೂವನ್ನು ಕಿತ್ತು ತಂದಿದ್ದರೆ ಪೊದೆ ತನ್ನಷ್ಟಕ್ಕೆ ಹಿಂಬಾಲಿಸುತ್ತಿತ್ತು" ಎಂದಳು. ಆ ಕೂಡಲೆ ಅವನು ಹೂವನ್ನು ಕಿತ್ತು ತರಲು ಹೋದನು. ಆ ವೇಳೆಗೆ ಅವರು ಆ ಜಾಗದಿಂದ ತಪ್ಪಿಸಿಕೊಂಡಿದ್ದರು. ಮತ್ತೆ ರಾಜ ಅವರನ್ನು ಹಿಂಬಾಲಿಸಿದನು. ರಾಜಕುಮಾರಿ ಹಿಂದಿರುಗಿ ನೋಡಿ ತನ್ನ ತಂದೆ ಹಿಂದೆ ಬರುತ್ತಿರುವುದನ್ನು ಕಂಡಳು. "ಅಯ್ಯೋ! ಈಗೇನು ಮಾಡೋಣ?" ಎಂದು ಕೂಗಿಕೊಂಡಳು. ಈಗ ನಿನ್ನನ್ನು ಕ್ರೈಸ್ತದೇವಾಲಯವನ್ನಾಗಿ ಮಾಡಿ, ನಾನು ಪಾದ್ರಿ ಆಗುತ್ತೇನೆ. ವೇದಿಕೆಯ ಮೇಲೆ ನಿಂತು ಉಪದೇಶ ನೀಡುತ್ತಿರುತ್ತೇನೆ" ಎಂದಳು. ರಾಜ ಆ ಜಾಗಕ್ಕೆ ಬಂದಾಗ ಅವನಿಗೆ

ಒಂದು ಚರ್ಚು ಮತ್ತು ಅದರೊಳಗೆ ಬೋಧಿಸುತ್ತಿದ್ದ ಪಾದ್ರಿ ಮಾತ್ರ ಕಂಡರು. ಅವನು ಅಲ್ಲೇ ನಿಂತು ಉಪದೇಶವನ್ನು ಕೇಳಿದನು. ನಂತರ ಮನೆಗೆ ಹಿಂದಿರುಗಿದನು. ರಾಣಿ "ತಪ್ಪಿಸಿಕೊಂಡವರನ್ನು ಹಿಡಿದು ತಂದಿರುವಿರೊ, ಇಲ್ಲವೊ" ಎಂದು ಕೇಳಿದಳು. ಅದಕ್ಕೆ ಇಲ್ಲ ಎಂದು ಉತ್ತರಿಸಿದನು. "ಅವರು ಮೊದಲಿದ್ದ ಜಾಗದಲ್ಲಿರಬಹುದು ಎಂದು ಹೋದರೆ ಅವರು ಇರಲೇ ಇಲ್ಲ. ಮುಂದಕ್ಕೆ ಹುಡುಕಿಕೊಂಡು ಹೋದಾಗ ಅಲ್ಲಿ ಒಂದು ಚರ್ಚ್ ಮತ್ತು ವೇದಿಕೆಯ ಮೇಲೆ ಉಪದೇಶ ನೀಡುತ್ತಿದ್ದ ಪಾದ್ರಿ ಮಾತ್ರ ಇದ್ದರು" ಎಂದು ಹೇಳಿದನು. "ನೀನು ಪಾದ್ರಿಯನ್ನು ಕರೆತಂದಿದ್ದರೆ ಚರ್ಚ್ ತಾನಾಗೇ ಹಿಂಬಾಲಿಸಿಕೊಂಡು ಬರುತ್ತಿತ್ತು. ಈ ಸಾರಿ ನಾನೇ ಹೋಗುತ್ತೇನೆ. ನಿನ್ನನ್ನು ಕಳಿಸಿದರೆ ಉಪಯೋಗವಾಗುವುದಿಲ್ಲ" ಎಂದು ರಾಣಿ ಹೇಳಿದಳು. ಅವಳು ಚರ್ಚ್ ಹತ್ತಿರ ಬರುತ್ತಿದ್ದಂತೆ ರಾಜಕುಮಾರಿ ತನ್ನ ತಾಯಿ ಹಿಂಬಾಲಿಸಿಕೊಂಡು ಬರುವುದನ್ನು ಇಣುಕಿ ನೋಡಿದಳು. "ಇದು ನಿಜಕ್ಕೂ ಕೆಟ್ಟ ಅದೃಷ್ಟ. ಏಕೆಂದರೆ, ನನ್ನ ಅಮ್ಮ ಬರುತ್ತಿದ್ದಾಳೆ. ನಿನ್ನನ್ನು ಒಂದು ಕೊಳವನ್ನು ಮಾಡಿ ನಾನು ಒಂದು ಮೀನಾಗುತ್ತೇನೆ" ಎಂದು ಹೇಳಿದಳು. ಹೀಗೆ ರಾಣಿ ಆ ಜಾಗಕ್ಕೆ ಬಂದಾಗ ಒಂದು ದೊಡ್ಡ ಕೊಳ ಅದರ ಮಧ್ಯೆ ಒಂದು ಮೀನು ಸಂತೋಷದಿಂದ ವೇಗವಾಗಿ ಈಜುತ್ತಿತ್ತು. ರಾಣಿ ಮೀನನ್ನು ಹಿಡಿಯಲು ಪ್ರಯತ್ನಿಸಿದಳು. ಆದರೆ ಆಗಲಿಲ್ಲ. ಆದ್ದರಿಂದ ಅವಳು ಕೊಳದ ನೀರನ್ನೆಲ್ಲ ಕುಡಿದಳು. ಅದು ಮತ್ತೆ ತುಂಬಿಕೊಂಡಿತು. ಅವಳಿಗೆ ತಾನು ಗೆಲ್ಲಲಾರೆ ಎನಿಸಿ ಮನೆಗೆ ಹಿಂದಿರುಗಿ ಹೊರಟಳು. ಅದಕ್ಕೆ ಮೊದಲು ಮಗಳಿಗೆ ಮೂರು ಬಾದಾಮಿ ಕಾಯಿಗಳನ್ನು ಕೊಟ್ಟು "ನಿನಗೆ ಅವಶ್ಯಕತೆ ಇದ್ದಾಗ ಇವುಗಳಿಂದ ಸಹಾಯ ಮಾಡಿಕೊ" ಎಂದು ಹೇಳಿದಳು.

ನಂತರ ಆ ರಾಜಕುಮಾರ ಮತ್ತು ರಾಜಕುಮಾರಿ ಮುಂದಕ್ಕೆ ಪ್ರಯಾಣ ಮಾಡಿದರು. ಒಂದು ಗಂಟೆ ಪ್ರಯಾಣ ಮಾಡುವಷ್ಟರಲ್ಲಿ ರಾಜಕುಮಾರ ಮೊದಲು ವಾಸವಾಗಿದ್ದ ಅರಮನೆಯನ್ನು ಅವರು ನೋಡಿದರು. ಅದರ ಹತ್ತಿರವೇ ಒಂದು ಹಳ್ಳಿ ಇತ್ತು. ರಾಜಕುಮಾರ ತನ್ನ ಪ್ರಿಯತಮೆಗೆ, "ಇಲ್ಲೆ ಇರು. ನಾನು ಅರಮನೆಗೆ ಹೋಗಿ ನಿನ್ನನ್ನು ಕರೆದೊಯ್ಯಲು ರಥವನ್ನು, ಸೇವಕರನ್ನು ಕರೆದುಕೊಂಡು ಬರುತ್ತೇನೆ" ಎಂದು ಹೇಳಿದನು.

ಅವನು ಅರಮನೆಗೆ ಬಂದಾಗ ಎಲ್ಲರಿಗೂ ಹಬ್ಬದ ಸಡಗರವಾಯಿತು. ಅವನು ಅವರಿಗೆ ತನ್ನ ಪ್ರಿಯತಮೆ ಆ ಹಳ್ಳಿಯಲ್ಲಿದ್ದಾಳೆ. ಅವಳನ್ನು ಕರೆತರಲು ರಥವನ್ನು ಒಯ್ಯುತ್ತೇನೆ ಎಂದು ಹೇಳಿದನು. ಅವನು ರಥವನ್ನು ತರಲು ಹೋದಾಗ ಸೇವಕರು ರಥಕ್ಕೆ ಕುದುರೆಯನ್ನು ಕಟ್ಟಿದರು. ಹಿಂಭಾಗದಲ್ಲಿ ತಾವೂ ಕುಳಿತರು. ರಾಜಕುಮಾರ ಹೊರಡುವ ಮೊದಲು ತನ್ನ ತಾಯಿಗೆ ಮುತ್ತುಕೊಟ್ಟನು. ಅವನು ಹಾಗೆ ಮಾಡಿದ ತಕ್ಷಣ ಹಿಂದೆ ನಡೆದುದ್ದೆಲ್ಲವೂ ಅವನಿಗೆ ಮರೆತುಹೋಯಿತು. ಏನಾಗುತ್ತಿದೆ ಎಂದು ತಿಳಿಯದಾಯಿತು. ಆಗ ರಾಣಿ, ಕುದುರೆ ರಥವನ್ನು ಹಿಂದಕ್ಕೆ ಕಳಿಸಿದಳು. ಮತ್ತೆ ಎಲ್ಲರೂ ಅರಮನೆಯೊಳಗೆ ಹೋದರು.

ಈ ಕಡೆ ತನ್ನನ್ನು ಕರೆದುಕೊಂಡು ಹೋಗಲು ರಾಜಕುಮಾರ ಬರುತ್ತಾನೆಂದು ರಾಜಕುಮಾರಿ ಆ ಹಳ್ಳಿಯಲ್ಲಿ ಕಾದೇ ಕಾದಳು. ಯಾರೂ ಬರಲಿಲ್ಲ. ಅವಳು ಅಲ್ಲೇ ಒಂದು ಗಿರಣಿಯಲ್ಲಿ ಕೆಲಸದವಳಾಗಿ ಸೇರಿದಳು. ಆ ಮಿಲ್ಲು ಅರಮನೆಗೆ ಸೇರಿದ್ದಾಗಿತ್ತು. ಅಲ್ಲಿ ಅವಳು ನೀರ ಹತ್ತಿರ ಕುಳಿತು ಇಡೀ ದಿನವೆಲ್ಲ ನಾರು ಬಟ್ಟೆಯನ್ನು ತೊಳೆಯುತ್ತಿದ್ದಳು. ಒಂದು ದಿನ ಬೆಳಗ್ಗೆ ರಾಣಿ ಗಾಳಿಸಂಚಾರಕ್ಕೆ ಬಂದಾಗ


ರಾಜಕುಮಾರಿ ಕುಳಿತಿರುವುದನ್ನು ಕಂಡಳು. "ಆ ಹುಡುಗಿ ಎಷ್ಟು ಚೆನ್ನಾಗಿದ್ದಾಳೆ? ನನಗೆ ತುಂಬ ಇಷ್ಟವಾದಳು" ಎಂದು ಮನಸ್ಸಿನಲ್ಲೇ ಅಂದುಕೊಂಡಳು. ನಂತರ ಅವಳು ಹೊರಟುಹೋದಳು. ಆಮೇಲೆ ರಾಣಿಗೆ ಆ ಹುಡುಗಿಯ ನೆನಪು ಬರಲೇ ಇಲ್ಲ. ಹೀಗೆ ಆ ಹುಡುಗಿ ಗಿರಣಿಯವನ ಬಳಿ ಬಹಳ ಕಾಲ ಇರಬೇಕಾಯಿತು. ಎಲ್ಲಿಯವರೆಗೂ ಅಂದರೆ, ರಾಣಿ ತನ್ನ ಮಗನಿಗೆ ದೂರ ದೇಶದಿಂದ ಹೆಣ್ಣು ಹುಡುಕುವವರೆಗೂ, ಅವಳು ಸುಮ್ಮನೆ ಇರಬೇಕಾಯಿತು. ರಾಜಕುಮಾರನ ವಧು ಬಂದಾಗ ಆ ಸಂತೋಷವನ್ನು ಆಚರಿಸಲು ಅನೇಕ ಜನರನ್ನು ಕರೆದಿದ್ದರು. ಆಗ ಆ ಸಮಾರಂಭವನ್ನು ನೋಡಲು ರಾಜಕುಮಾರಿ ಗಿರಣಿಯವನ ಅನುಮತಿ ಪಡೆದುಕೊಂಡಳು. ಮದುವೆಯ ದಿನ ಅವಳು ತನ್ನ ತಾಯಿಕೊಟ್ಟಿದ್ದ ಬಾದಾಮಿ ಕಾಯಿಗಳನ್ನು ಒಡೆದು ಅದರಲ್ಲಿದ್ದ ಅತಿ ಸುಂದರವಾದ ಉಡುಪನ್ನು ಹಾಕಿಕೊಂಡಳು. ಮದುವೆ ನಡೆಯುವ ಚರ್ಚ್‌ಗೆ ಹೋದಳು. ವೇದಿಕೆಯ ಹತ್ತಿರವೇ ಜಾಗ ಮಾಡಿಕೊಂಡಳು. ಅದೇ ವೇಳೆಗೆ ವಧೂ-ವರರು ಆ ಜಾಗಕ್ಕೆ ಬಂದರು. ವೇದಿಕೆಯ ಮುಂದೆ ನಿಂತರು. ಪಾದ್ರಿ ಇನ್ನೇನು ಆಶೀರ್ವದಿಸಬೇಕು ಎನ್ನುವಾಗ ವಧು ಆ ಸುಂದರ ಉಡುಪಿನ ಸುಂದರಿಯ ಕಡೆ ಗಮನ ಹರಿಸಿದಳು. ಆ ಉಡುಪು ತನಗೆ ಸಿಗುವವರೆಗೆ ತಾನು ಮದುವೆ ಆಗುವುದಿಲ್ಲವೆಂದು ಹೇಳಿದಳು. ಹೀಗಾಗಿ ಮದುವೆ ದಿಬ್ಬಣ ಹಿಂದಿರುಗಿತು. ಆ ಉಡುಪನ್ನು ಕೊಡುವಂತೆ ಆ ಅಪರಿಚಿತ ಯುವತಿಯನ್ನು ಕೇಳಲಾಯಿತು. ಅದನ್ನು ಹಣಕ್ಕೆ ತಾನು ಮಾರುವುದಿಲ್ಲವೆಂದು ಹೇಳಿದಳು. ಆದರೆ ಒಂದು ಶರತ್ತಿನ ಮೇಲೆ ಕೊಡುವುದಾಗಿ ಹೇಳಿದಳು. ತಾನು ರಾಜಕುಮಾರನ ಕೋಣೆಯ ಬಾಗಿಲ ಹೊರಗೆ ಒಂದು ರಾತ್ರಿ ಮಲಗಲು ಅವಕಾಶ ನೀಡಬೇಕೆಂದು ಕೇಳಿದಳು. ಅದಕ್ಕೆ ಒಪ್ಪಿಗೆ ಸಿಕ್ಕಿತು.

ಆದರೆ ಸೇವಕರು ತಮ್ಮ ಯಜಮಾನನ ಮದ್ಯದಲ್ಲಿ ನಿದ್ರೆ ಔಷಧಿಯನ್ನು ಬೆರೆಸಿದ್ದರು. ಹೀಗಾಗಿ ಅವಳು ಹೇಳಿದ ಯಾವ ದೂರನ್ನೂ ರಾಜಕುಮಾರ ಕೇಳಿಸಿಕೊಳ್ಳಲಿಲ್ಲ. ಗಾಢವಾಗಿ ನಿದ್ದೆಮಾಡಿಬಿಟ್ಟನು. ಅವಳು ಇಡೀ ರಾತ್ರಿ ಅವನಿಗೆ ನೆನಪಿಸಿದಳು. ತಾನು ಅವನಿಗಾಗಿ ಕಾಡನ್ನು ಕಡಿಸಿದ್ದು , ಕಂದಕವನ್ನು ತುಂಬಿಸಿದ್ದು , ಅರಮನೆಯನ್ನು ಕಟ್ಟಿದ್ದು , ಗುಲಾಬಿ ಗಿಡವನ್ನಾಗಿ ಮಾಡಿದ್ದು , ಚರ್ಚನ್ನಾಗಿ ಮಾಡಿದ್ದು , ಕೊನೆಗೆ ಕೊಳವನ್ನಾಗಿ ಮಾಡಿದ್ದು , ಆದರೂ ತನ್ನನ್ನು ಬಿಟ್ಟುಹೋದನಲ್ಲ ಎಂದು ಎಲ್ಲವನ್ನೂ ಆತಂಕದಿಂದ ಹೇಳಿಕೊಂಡಳು. ರಾಜಕುಮಾರ ಏನನ್ನೂ ಕೇಳಿಸಿಕೊಳ್ಳಲಿಲ್ಲ. ಮತ್ತೆ ಮಾರನೇ ದಿನ ವಧು ಆ ಹುಡುಗಿಯ ಉಡುಪು ಧರಿಸಿದಳು. ಎಲ್ಲರೂ ಚರ್ಚ್‌ಗೆ ಹೋದರು. ಮತ್ತೆ ಹಿಂದಿನ ದಿನದ ಘಟನೆಗಳೇ ಜರುಗಿದವು. ರಾಜಕುಮಾರಿ ಎರಡನೇ ಬಾದಾಮಿ ಕಾಯಿಯ ಉಡುಪು ಧರಿಸಿದ್ದಳು. ಅದನ್ನೂ ವಧು ಕೇಳಿದಳು. ಅದೇ ಶರತ್ತನ್ನು ರಾಜಕುಮಾರಿ ಹಾಕಿದಳು. ಮತ್ತೆ ಅವಳು ರಾಜಕುಮಾರನ ಕೋಣೆಯ ಮುಂದೆ ರಾತ್ರಿ ಮಲಗಲು ಅವಕಾಶ ಸಿಕ್ಕಿತು. ಈ ಬಾರಿ, ರಾಜಕುಮಾರ ಮದ್ಯವನ್ನು ಕುಡಿಯಲಿಲ್ಲ. ಅವಳ ದೂರನ್ನೆಲ್ಲ ಕೇಳಿಸಿಕೊಂಡನು. ಅವನಿಗೆ ತುಂಬ ದುಃಖವಾಯಿತು.

ಮಾರನೆ ದಿನ ಬೆಳಗ್ಗೆ ಅವನು ಆ ಯುವತಿಯ ಹತ್ತಿರ ಹೋಗಿ ತಾನು ಅವಳನ್ನು ಮರೆತದ್ದಕ್ಕೆ ಕ್ಷಮೆ ಬೇಡಿದನು. ಆಗ ಅವಳು ತನ್ನ ಇನ್ನೊಂದು ಕಾಯಿ ಒಡೆದಳು. ಅದರೊಳಗಿದ್ದ ಅತ್ಯಂತ ಸುಂದರ ಉಡುಪನ್ನು ಧರಿಸಿದಳು. ಅದು ಎಷ್ಟು ಸುಂದರವಾಗಿತ್ತು ಎಂದರೆ ಅವಳನ್ನು ನೋಡಿದ ಹುಡುಗ ಮತ್ತು

ಹುಡುಗಿಯರು ಅವಳ ಹತ್ತಿರ ಓಡಿ ಹೋಗಿ ಅವಳು ನಡೆವ ನೆಲದ ಮೇಲೆ ಹೂವುಗಳನ್ನು ಚೆಲ್ಲಿ ಸ್ವಾಗತಿಸಿದರು. ಹೀಗೆ ರಾಜಕುಮಾರ ಮತ್ತು ರಾಜಕುಮಾರಿ ಸಂತೋಷದಿಂದ ಮದುವೆ ಆದರು. ಆದರೆ ಮುದುಕಿ ರಾಣಿ ಮತ್ತು ಹೊಟ್ಟೆಕಿಚ್ಚಿನ ಹೆಣ್ಣು ಅರಮನೆ ಬಿಟ್ಟು ಓಡಿಹೋಗಬೇಕಾಯಿತು.

೧೮. ಬಡವ ಮತ್ತು ಶ್ರೀಮಂತ



ಬಹಳ ಹಿಂದಿನ ಕಾಲದಲ್ಲಿ ದೇವತೆಗಳು ಮನುಷ್ಯ ರೂಪದಲ್ಲಿ ಭೂಮಿಯ ಮೇಲೆ ತಿರುಗಾಡುತ್ತಿದ್ದರು. ಒಮ್ಮೆ ಒಬ್ಬ ದೇವತೆ ಹೀಗೆ ಅಲೆದಾಡುತ್ತಾ ಬಹಳ ಸುಸ್ತಾದನು. ಕತ್ತಲಾಗುತ್ತಿರುವದನ್ನು ನೋಡಿ ರಾತ್ರಿಗೆ ಎಲ್ಲಿಯಾದರೂ ವಸತಿಯನ್ನು ಹುಡುಕಬೇಕು ಎಂದುಕೊಂಡನು. ಅವನು ಹೋಗುತ್ತಿದ್ದ ದಾರಿಯಲ್ಲಿ ಎದುರು ಬದುರಾಗಿ ಎರಡು ಮನೆಗಳಿದ್ದವು. ಒಂದು ಸುಂದರವಾದ ದೊಡ್ಡ ಮನೆ ಇನ್ನೊಂದು ಬಡ ಗುಡಿಸಲು. ಮೊದಲನೆಯದು ಶ್ರೀಮಂತನದು, ಎರಡನೆಯದು ಬಡವನ ಮನೆ. ಆಗ ದೇವತೆ, ಮೊದಲ ಮನೆಗೆ ಹೋದರೆ ಒಬ್ಬ ಅತಿಥಿಗೆ ಜಾಗ ಕೊಡುವುದು ತೊಂದರೆ ಆಗಲಾರದು ಎಂದು ಯೋಚಿಸಿ ಶ್ರೀಮಂತನ ಮನೆಗೆ ಹೋದನು. ಬಾಗಿಲು ಬಡಿದನು. ಶ್ರೀಮಂತ ಕಿಟಕಿಯಲ್ಲೇ ಇಣುಕಿ ಅವನಿಗೆ ಏನು ಬೇಕೆಂದು ಕೇಳಿದನು. ದೇವತೆ "ಈ ರಾತ್ರಿ ಉಳಿಯಲು ಜಾಗಬೇಕು" ಎಂದು ಹೇಳಿದನು. ಶ್ರೀಮಂತ ಆ ಅಪರಿಚಿತನನ್ನು ತಲೆಯಿಂದ ಕಾಲಿನವರೆಗೂ ಪರೀಕ್ಷೆ ಮಾಡಿದನು. ಅವನ ಚಿಂದಿ ಬಟ್ಟೆಗಳನ್ನು ನೋಡಿ ಅವನ ಜೇಬಿನಲ್ಲಿ ಹೆಚ್ಚು ಹಣ ಇರಲಾರದು ಎಂದು ಲೆಕ್ಕ ಹಾಕಿದನು. ತಲೆ ಅಲ್ಲಾಡಿಸುತ್ತಾ, "ನಮ್ಮ

ಮನೆಯಲ್ಲಿ ಜಾಗವಿಲ್ಲ. ಎಲ್ಲ ಕೋಣೆಗಳು ದವಸ ಧಾನ್ಯಗಳಿಂದ ತುಂಬಿವೆ. ಜಾಗ ಕೊಡಿ ಎಂದು ಕೇಳಿಕೊಂಡು ಬಂದವರಿಗೆಲ್ಲ ಜಾಗ ಕೊಡುತ್ತಾ ಹೋದರೆ ನಾನು ಕೂಡ ಭಿಕ್ಷೆ ಎತ್ತಬೇಕಾಗುತ್ತದೆ. ಬೇರೆ ಎಲ್ಲಿಯಾದರೂ ಜಾಗ ನೋಡಿಕೋ" ಎಂದು ಶ್ರೀಮಂತ ಹೇಳಿದನು.

ಹಾಗೆ ಹೇಳಿ ಶ್ರೀಮಂತ ಕಿಟಕಿ ಬಾಗಿಲನ್ನು ಮುಚ್ಚಿಬಿಟ್ಟನು. ಆಗ ದೇವತೆ ಅವನ ಮನೆಗೆ ಬೆನ್ನು ತಿರುಗಿಸಿ ಬಡವನ ಗುಡಿಸಲ ಕಡೆ ಹೆಜ್ಜೆ ಹಾಕಿದನು. ಅವನು ಹೋಗಿ ಬಾಗಿಲು ತಟ್ಟುವಷ್ಟರಲ್ಲಿಯೇ ಬಡವನು ಬಾಗಿಲು ತೆರೆದು, ಆ ದಾರಿಹೋಕನನ್ನು ಒಳಗೆ ಕರೆದನು. "ಈ ದಿನ ನಮ್ಮಲ್ಲೇ ಉಳಿಯಿರಿ. ಈಗಾಗಲೆ ಕತ್ತಲಾಗಿದೆ. ನೀವು ಮುಂದೆ ಹೋಗಲು ಆಗುವುದಿಲ್ಲ" ಎಂದು ಹೇಳಿದನು. ಅವನ ಮಾತುಗಳು ದೇವತೆಗೆ ಸಂತೋಷವನ್ನುಂಟುಮಾಡಿದವು. ಅವನು ಒಳಗೆ ಹೋದನು. ಬಡವನ ಹೆಂಡತಿಯೂ ಕೂಡ ಸ್ವಾಗತಿಸಿದಳು. "ಇದು ನಿಮ್ಮ ಮನೆ ಎಂದು ತಿಳಿದುಕೊಳ್ಳಿ. ನಮ್ಮಲ್ಲಿ ಬೆಲೆಬಾಳುವಂತಹದು ಏನೂ ಇಲ್ಲ. ಇದ್ದುದನ್ನೆ ಹೃತ್ಪೂರ್ವಕವಾಗಿ ಕೊಡುತ್ತೇವೆ" ಎಂದಳು. ನಂತರ ಅವಳು ಸ್ವಲ್ಪ ಆಲೂಗಡ್ಡೆಯನ್ನು ಬೆಂಕಿಯಲ್ಲಿ ಹಾಕಿ ಸುಟ್ಟಳು. ಅವುಗಳ ಜೊತೆಗೆ ಕುಡಿಯಲು ಮೇಕೆಯ ಹಾಲನ್ನು ಹಿಂಡಿದಳು. ಎಲ್ಲರೂ ಒಟ್ಟಿಗೆ ಊಟಕ್ಕೆ ಕುಳಿತರು. ದೇವತೆ ಆ ಸರಳವಾದ ಊಟವನ್ನು ಅವರೊಂದಿಗೆ ಸಂತೋಷದಿಂದ ಮಾಡಿದನು. ಅದೇ ರುಚಿಯಾಗಿತ್ತು. ಏಕೆಂದರೆ ಅದನ್ನು ಅವರು ಸಂತೋಷದಿಂದ ಬಡಿಸಿದ್ದರು ಮಲಗುವ ಹೊತ್ತಿಗೆ ಹೆಂಡತಿ, "ನಾವು ಈ ದಿನ ಹುಲ್ಲಿನ ಮೇಲೆ ಮಲಗೋಣ. ನಮ್ಮ ಅತಿಥಿ ತುಂಬ ಸುಸ್ತಾಗಿದ್ದಾನೆ. ಅವನಿಗೆ ನಮ್ಮ ಹಾಸಿಗೆಯನ್ನು ಬಿಟ್ಟು ಕೊಡೋಣ" ಎಂದು ಗಂಡನಿಗೆ ಹೇಳಿದಳು.

"ಅದಕ್ಕೇನಂತೆ ಸಂತೋಷವಾಗಿ ಕೊಡೋಣ" ಎಂದು ಹೇಳಿದನು. ದೇವತೆಯ ಹತ್ತಿರ ಹೋಗಿ ತಮ್ಮ ಹಾಸಿಗೆಯ ಮೇಲೆ ಮಲಗಿ ದಣಿವನ್ನು ಕಡಿಮೆಮಾಡಿಕೊಳ್ಳಬೇಕೆಂದು ಬೇಡಿಕೊಂಡನು. ಮೊದಲು ದೇವತೆ ಅವನ ಮಾತಿಗೆ ಒಪ್ಪಲಿಲ್ಲ. ಆದರೆ ಒತ್ತಾಯದ ಉಪಚಾರಕ್ಕೆ ಒಪ್ಪಿ ಅವರ ಹಾಸಿಗೆಯ ಮೇಲೆ ಮಲಗಿದನು. ಮಾರನೆ ದಿನ ಬೆಳಗ್ಗೆ ಬೇಗ ಎದ್ದರು. ತಮ್ಮ ಅತಿಥಿಗಾಗಿ ಇದ್ದುದರಲ್ಲಿಯೇ ಒಳ್ಳೆಯ ತಿಂಡಿಯನ್ನು ಮಾಡಿದರು. ಸೂರ್ಯ ಹುಟ್ಟಿದ ಮೇಲೆ ಆ ದೇವತೆ ಎದ್ದನು. ಅವರು ಕೊಟ್ಟ ತಿಂಡಿಯನ್ನು ಅವರ ಜೊತೆಯಲ್ಲಿ ತಿಂದನು. ತಾನು ಹೊರಡಲು ಸಿದ್ಧನಾದನು. ಅವನು ಬಾಗಿಲ ಹತ್ತಿರ ನಿಂತುಕೊಂಡು ಬಡ ದಂಪತಿಗಳ ಕಡೆ ತಿರುಗಿ,"ನೀವು ತುಂಬ ಪ್ರೀತಿ ಮತ್ತು ಕರುಣೆ ಉಳ್ಳವರು, ಧರ್ಮಬುದ್ಧಿ ಉಳ್ಳವರು. ಆದ್ದರಿಂದ ನೀವು ಮೂರು ಸಾರಿ ಇಷ್ಟಪಟ್ಟಿದ್ದನ್ನು ಅನುಗ್ರಹಿಸುವೆನು" ಎಂದು ಹೇಳಿದನು.

ಅದಕ್ಕೆ ಆ ಬಡವ, "ಆಹಾ! ನಾನು ಏನು ಕೇಳಲಿ? ನಾವು ಇರುವವರೆಗೂ ಸಂತೋಷದಿಂದ ಇರಬೇಕು. ಇರುವಷ್ಟು ದಿನ ಆರೋಗ್ಯದಿಂದ ಶಕ್ತಿವಂತರಾಗಿರಬೇಕು. ಊಟಕ್ಕೆ ಎಂದೂ ಕೊರತೆ ಆಗಬಾರದು. ಮೂರನೆಯದು ಯಾವ ವರವನ್ನು ಕೇಳಬೇಕೋ ಗೊತ್ತಾಗುತ್ತಿಲ್ಲ" ಎಂದು ಹೇಳಿದನು. ಅದಕ್ಕೆ ಆ ದೇವತೆ "ಈ ಹಳೇ ಮನೆ ಬದಲು ಹೊಸ ಮನೆ ಬೇಕು ಎಂದು ನಿನಗೆ ಅನಿಸುವುದಿಲ್ಲವೋ?" ಎಂದು ಕೇಳಿದನು. "ಆಗಬಹುದು. ಇದೇ ಜಾಗದಲ್ಲಿ ಇದ್ದರೆ ಒಳ್ಳೆಯದು" ಎಂದು ಬಡವ ಉತ್ತರಿಸಿದನು.

ದೇವತೆ ಅವರ ಆಸೆಗಳನ್ನು ಈಡೇರಿಸಿದನು. ಅವರ ಗುಡಿಸಿಲನ್ನು ಹೊಸ ಮನೆಯನ್ನಾಗಿ ಮಾಡಿದನು. ಮತ್ತೊಮ್ಮೆ ಅವರನ್ನು ಆಶೀರ್ವದಿಸಿ ಹೊರಟುಹೋದನು.

ಅಷ್ಟು ಹೊತ್ತಿಗೆ ಬೆಳಕು ಎಲ್ಲ ಕಡೆಯೂ ಹರಡಿತ್ತು. ಶ್ರೀಮಂತನಿಗೆ ಎಚ್ಚರವಾಯಿತು. ಕಿಟಕಿಯಿಂದ ಹೊರಗೆ ಇಣುಕಿ ನೋಡಿದನು. ಹಳೆಯ ಗುಡಿಸಲಿದ್ದ ಜಾಗದಲ್ಲಿ ಕೆಂಪು ಇಟ್ಟಿಗೆಯ ಸುಂದರ ಮನೆಯನ್ನು ಕಂಡನು. ಆ ದೃಶ್ಯದಿಂದ ಅವನ ಕಣ್ಣುಗಳು ತೆರೆದಂತಾದವು. ಅವನು ತನ್ನ ಹೆಂಡತಿಯನ್ನು ಕರೆದು "ನಿನ್ನೆ ಸಾಯಂಕಾಲ ಅಲ್ಲಿ ಮುರಿದುಬೀಳುವಂತಹ ಹುಲ್ಲಿನ ಗುಡಿಸಲಿತ್ತು. ಈಗ ಅದು ಸುಂದರವಾದ ಹೊಸ ಮನೆ ಆಗಿದೆ! ಓಡಿ ಹೋಗಿ, ಇದೆಲ್ಲ ಹೇಗಾಯಿತು ಎಂದು ಕೇಳಿಕೊಂಡು ಬಾ" ಎಂದು ಹೇಳಿದನು.

ಶ್ರೀಮಂತನ ಹೆಂಡತಿ ಹೋಗಿ ಬಡವನನ್ನು ವಿಚಾರಿಸಿದಳು. ಅವನು ನಡೆದ ಕತೆಯೆಲ್ಲವನ್ನೂ ವಿವರಿಸಿದನು. "ಹಿಂದಿನ ರಾತ್ರಿ ಒಬ್ಬ ದಾರಿಹೋಕ ಬಂದಿದ್ದನು. ರಾತ್ರಿ ತಮ್ಮ ಮನೆಯಲ್ಲಿ ಉಳಿದನು. ಬೆಳಗ್ಗೆ ಹೋಗುವಾಗ ಮೂರು ವರಗಳನ್ನು ಕೊಟ್ಟನು. ಶಾಶ್ವತ ಸಂತೋಷ, ಬದುಕಿರವವರೆಗೂ ಊಟ ಮತ್ತು ಆರೋಗ್ಯ ಮತ್ತು ಹಳೆ ಮನೆ ಬದಲು ಹೊಸ ಮನೆ" ಎಂದು ಹೇಳಿದನು. ಅವನು ತನ್ನ ಕತೆಯನ್ನು ಮುಗಿಸುವುದರೊಳಗೆ ಆ ಶ್ರೀಮಂತನ ಹೆಂಡತಿ ಮನಗೆ ಓಡಿಹೋದಳು. ಅದನ್ನೆಲ್ಲಾ ಹೇಳಿದಳು. ಅದಕ್ಕೆ ಅವನು ಆಶ್ಚರ್ಯದಿಂದ, "ಅಯ್ಯೋ, ನನಗಿದು ಮೊದಲೆ ಗೊತ್ತಿದ್ದರೆ ! ಆ ಅಪರಿಚಿತ ಮೊದಲು ಇಲ್ಲಿಗೇ ಬಂದಿದ್ದನು. ನಮ್ಮ ಜೊತೆ ರಾತ್ರಿಯನ್ನು ಕಳೆಯಬಹುದಿತ್ತು. ಆದರೆ ನಾನೇ ಅವನನ್ನು ಕಳಿಸಿಬಿಟ್ಟೆ" ಎಂದು ಹೇಳಿದನು.

ಅವನ ಹೆಂಡತಿ "ಬೇಗನೆ ಕುದುರೆ ಹತ್ತಿಕೊಂಡು ಹೋಗು. ಬಹುಶಃ ಆ ಮನುಷ್ಯ ದಾರಿಯಲ್ಲೇ ಸಿಗಬಹುದು. ನೀನು ಕೂಡ ಮೂರು ವರಗಳನ್ನು ಕೇಳಿಕೊಂಡು ಬಾ" ಎಂದು ಹೇಳಿದಳು. ಅವಳು ಹೇಳಿದಂತೆ ಅವನು ಮಾಡಿದನು. ದೇವತೆಯನ್ನು ಹುಡುಕಿದನು. ಅವನನ್ನು ನಿಲ್ಲಿಸಿಕೊಂಡು ನಯವಾಗಿ, ಸಿಹಿಮಾತುಗಳನ್ನಾಡಿದನು. ಉಳಿದುಕೊಳ್ಳಲು ಜಾಗಕೊಡಲಿಲ್ಲವೆಂದು ತನ್ನನ್ನು ತಪ್ಪು ತಿಳಿಯಬೇಡವೆಂದು ಹೇಳಿದನು. ತಾನು ಮನೆ ಬಾಗಿಲ ಬೀಗದಕೈಯನ್ನು ತರಲು ಹೋಗಿದ್ದೆನೆಂದೂ, ಅದನ್ನು ತರುವಷ್ಟರಲ್ಲಿ ಅವನು ಹೋಗಿಬಿಟ್ಟಿದ್ದನೆಂದೂ ಹೇಳಿದನು. ಮತ್ತೊಮ್ಮೆ ಅದೇ ದಾರಿಯಲ್ಲಿ ಬಂದಾಗ ತಮ್ಮ ಮನೆಯಲ್ಲಿ ಉಳಿಯಬೇಕೆಂದು, ಅದರಿಂದ ತುಂಬ ಸಂತೋಷವಾಗುತ್ತದೆಂದು ಹೇಳಿದನು. ದೇವತೆ ಹಾಗೇ ಆಗಲಿ ಎಂದು ಮಾತುಕೊಟ್ಟನು. ಆಗ ಶ್ರೀಮಂತ, "ನನ್ನ ನೆರೆಮನೆಯವನಿಗೆ ಕೊಟ್ಟ ಹಾಗೆ, ನನಗೂ ಮೂರು ವರಗಳನ್ನು ಕೊಡುವೆಯಾ?" ಎಂದು ಕೇಳಿದನು. ಅದಕ್ಕೆ ದೇವತೆ "ನೀನು ಇಷ್ಟಪಟ್ಟರೆ, ಖಂಡಿತಾ ಕೊಡುತ್ತೇನೆ. ಆದರೆ, ಅದರಿಂದ ನಿನಗೆ ಒಳ್ಳೆಯದಾಗುವುದಿಲ್ಲ. ಅದರ ಬದಲು ನೀನು ವರಗಳನ್ನು ಕೇಳದಿರುವುದೇ ಒಳ್ಳೆಯದು" ಎಂದು ಹೇಳಿದನು.

ಸುಲಭವಾಗಿ ತನ್ನ ಸಂತೋಷವನ್ನು ಹೆಚ್ಚಿಸುವುದನ್ನು ಕೇಳಿಕೊಂಡರೆ ಚೆನ್ನಾಗಿರುತ್ತದ ಎಂದು ಯೋಚಿಸಿದನು. ಅದು ಈಡೇರುತ್ತೊ ಇಲ್ಲವೊ ಎಂದು ಅವನು ತಿಳಿಯಬೇಕಾಗಿತ್ತು. ಕೊನೆಗೆ ದೇವತೆ, "ಕುದುರೆ ಸವಾರಿ ಮಾಡಿಕೊಂಡು ಮನೆಗೆ ಹೋಗು, ನಿನ್ನ ಕೋರಿಕೆಗಳು ಈಡೇರುತ್ತವೆ" ಎಂದು ಹೇಳಿದನು. ಶ್ರೀಮಂತನಿಗೆ ಬಯಸಿದ್ದು ಸಿಕ್ಕಂತಾಯಿತು. ಆದ್ದರಿಂದ ಮನೆಗೆ ಹೋಗುವ ದಾರಿಯುದ್ದಕ್ಕೂ ಏನು ಕೇಳಿಕೊಳ್ಳಬೇಕೆಂದು ಯೋಚಿಸತೊಡಗಿದನು. ಅವನು ಹಾಗೆ ಯೋಚಿಸುತ್ತಿರುವಾಗ ಕುದುರೆ ಲಗಾಮು ಸಡಿಲವಾಯಿತು. ಆಗ ಕುದುರೆ ನೆಗೆಯಿತು. ಅವನಿಗೆ ಕುದುರೆ ಮೇಲೆ ಗಟ್ಟಿಯಾಗಿ

ಕುಳಿತುಕೊಳ್ಳಲು ಆಗಲಿಲ್ಲ. ವಾಲಾಡತೊಡಗಿದನು. ಕುದುರೆಯನ್ನು ತಟ್ಟುತ್ತಾ "ಸುಮ್ಮನಿರು ಕುದುರೆ" ಎಂದನು. ಆದರೆ ಅದು ಹೊಸ ತುಂಟಾಟಗಳನ್ನು ಶುರುಮಾಡಿತು. ಅವನ ತಾಳ್ಮೆ ಹೋಗಿ ಹುಚ್ಚನಂತೆ ಕೂಗಿದನು. "ನಿನ್ನ ಕತ್ತು ಮುರಿದು ಬೀಳಲಿ ಎಂದು ಇಚ್ಛಿಸುತ್ತೇನೆ" ಎಂದನು. ಅವನ ಬಾಯಿಯಿಂದ ಈ ಮಾತುಗಳು ಹೊರಬೀಳುವುದೇ ತಡ ಕುದುರೆ ನೆಲದ ಮೇಲೆ ಬಿತ್ತು. ಮತ್ತೆ ಮೇಲೆ ಏಳಲೇ ಇಲ್ಲ. ಅವನ ಮೊದಲ ಆಸೆ ಈಡೇರಿತು. ಶ್ರೀಮಂತ ಆಶಬುರುಕ ಕುದುರೆಯ ಜೀನನ್ನು ಬಿಡಲಿಲ್ಲ. ಅದನ್ನು ಕತ್ತರಿಸಿಕೊಂಡು ತನ್ನ ಹೆಗಲಮೇಲೆ ಹಾಕಿಕೊಂಡನು. ನಂತರ ನಡೆದುಕೊಂಡು ಹೊರಟನು. "ಇನ್ನೂ ನಿನಗೆ ಎರಡು ವರಗಳಿವೆ" ಎಂದು ತನಗೆ ತಾನೇ ಸಮಾಧಾನ ಮಾಡಿಕೊಳ್ಳುತ್ತಾ ನಿಧಾನವಾಗಿ ಮರಳಿನ ಮೇಲೆ ನಡೆಯತೊಡಗಿದನು. ಆಗ, ಮಧ್ಯಾಹ್ನವಾಗಿದ್ದುದರಿಂದ ಬಿಸಿಲು ಸುಡುತ್ತಿತ್ತು. ಅವನಿಗೆ ಬೇಸರವಾಯಿತು. ಬೆನ್ನಿನ ಮೇಲಿದ್ದ ಜೀನು ಭಾರವಾಯಿತು. ಅಲ್ಲದೆ ಎರಡನೆ ವರ ಏನು ಕೇಳಬೇಕೆಂದು ಇನ್ನೂ ತೀರ್ಮಾನಿಸಿರಲಿಲ್ಲ. ಭಾರ, ಬಿಸಿಲು, ಬೇಸರದಿಂದ ಅವನಿಗೆ ತುಂಬ ಸಿಟ್ಟು ಬಂದಿತು. "ಪ್ರಪಂಚದಲ್ಲಿರುವ ಎಲ್ಲ ಸಂಪತ್ತು ಮತ್ತು ಸಿರಿತನವನ್ನು ನಾನು ಬಯಸಿದರೆ" ಎಂದು ತನ್ನಲ್ಲೆ ಹೇಳಿಕೊಂಡನು. "ಮೊದಲೆ ಸರಿಯಾಗಿ ಯೋಚಿಸಬೇಕು. ನಾನು ಕೇಳುವ ವರ ಹೇಗಿರಬೇಕೆಂದರೆ, ಮುಂದೇನೂ ಕೇಳಲು ಇರಲೇಬಾರದು" ಎಂದು ಅಂದುಕೊಂಡನು. ನಿಟ್ಟುಸಿರುಬಿಡುತ್ತಾ ಮುಂದುವರಿದನು. ಹಳ್ಳಿಯ ರೈತನ ಹಾಗೆ ನಾನೂ ಆಗಿಬಿಟ್ಟರೆ ಅಂದುಕೊಂಡನು. ರೈತನಿಗೆ ಮೂರು ವರ ಸಿಕ್ಕಿದ್ದವು. ಅವನಿಗೆ ಏನು ಕೇಳಬೇಕೆಂದು ತಿಳಿಯದೆ ಮೊದಲು ಸ್ವಲ್ಪ ಮದ್ಯವನ್ನು ಕೇಳಿದನು. ಎರಡನೇ ಸಾರಿ ತಾನು ಕುಡಿದು ಸಾಕಾಗುವಷ್ಟು ಕೇಳಿದನು. ಮೂರನೇ ಸಾರಿ ಮದ್ಯದ ಕೊಳಗವೇ ಬೇಕು ಎಂದು ಕೇಳಿಕೊಂಡನಂತೆ. ತಾನು ಹಾಗೆ ಮಾಡಬಾರದು ಎಂದುಕೊಂಡನು ಶ್ರೀಮಂತ.

ಏನು ಕೇಳಿಕೊಳ್ಳಬೇಕು ಎಂದು ಯೋಚಿಸುತ್ತಿದ್ದನು. ಅವನಿಗೆ ಮನೆಯಲ್ಲಿರುವ ತನ್ನ ಹೆಂಡತಿಯ ಬಗ್ಗೆ ಯೋಚನೆ ಬರುತ್ತಿತ್ತು. ಅವಳು ಸುಂದರ ಉಡುಪು ತೊಟ್ಟು, ಆರಾಮಾಗಿ ಮನೆಯಲ್ಲಿದ್ದಾಳೆ ಎಂಬ ವಿಚಾರ ಅವನಲ್ಲಿ ಅಸಹನೆ ಉಂಟು ಮಾಡಿತು. ಮತ್ತೆ ಸಿಟ್ಟು ಅವನ ನೆತ್ತಿಗೇರಿತು. ಏನು ಹೇಳುತ್ತಿದ್ದೇನೆ ಎಂಬ ಅರಿವಿಲ್ಲದೆ, "ಈ ಜೀನು ನನ್ನ ಮೇಲೆ ನೇತಾಡುವ ಬದಲು, ಅದು ಮನೆಯಲ್ಲಿದ್ದು, ಅದರ ಮೇಲೆ ನನ್ನ ಹೆಂಡತಿ ಕುಳಿತುಕೊಳ್ಳಲಿ, ಅವಳಿಗೆ ಅದರಿಂದ ಬಿಡಿಸಿಕೊಳ್ಳಲು ಆಗದಿರಲಿ" ಎಂದು ಕೂಗಿಕೊಂಡನು.

ಅವನ ಬಾಯಿಯಿಂದ ಮಾತುಗಳು ಹೊರಗೆ ಬೀಳುವುದೇ ತಡ ಅವನ ಬೆನ್ನಿನ ಮೇಲಿದ್ದ ಜೀನು ಮಾಯವಾಯಿತು. ಅವನಿಗೆ ತನ್ನ ಎರಡನೇ ವರ ವ್ಯರ್ಥವಾಗಿ ಹೋಗಿದ್ದು ಅರ್ಥವಾಯಿತು. ಆತಂಕದಿಂದ ಓಡಲು ಶುರು ಮಾಡಿದನು. ಮನೆಯಲ್ಲಿ ತನ್ನ ಕೋಣೆಗೆ ಹೋಗಿ, ಬಾಗಿಲು ಹಾಕಿಕೊಂಡು, ಅತ್ಯಂತ ಶ್ರೇಷ್ಠವಾದುದ್ದನ್ನು ಮೂರನೆ ವರವಾಗಿ ಪಡೆಯಬೇಕು ಎಂದು ಯೋಚಿಸಿದನು. ಆದರೆ, ಅವನು ಮನೆಗೆ ಬಂದು ಬಾಗಿಲು ತೆಗೆದು ನೋಡಿದರೆ, ಅವನ ಹೆಂಡತಿ ಕೋಣೆಯ ಮಧ್ಯದಲ್ಲಿ ಆ ಜೀನಿನ ಮೇಲೆ ಕುಳಿತುಬಿಟ್ಟಿದ್ದಾಳೆ. ಅಳುತ್ತಾ ಕಿರುಚುತ್ತಿದ್ದಾಳೆ. ಆದರಿಂದ ಬಿಡಿಸಿಕೊಳ್ಳಲು ಅವಳಿಗೆ ಆಗುತ್ತಿಲ್ಲ. ಅವನು ಹೆಂಡತಿಗೆ ಸಮಾಧಾನ ಹೇಳಿದನು. "ಸಮಾಧಾನ ಮಾಡಿಕೊ, ಪ್ರಪಂಚದ ಐಶ್ವರ್ಯವನ್ನೆಲ್ಲ ಕೇಳುತ್ತೇನೆ. ಆದರೆ ನೀನು ಹಾಗೇ ಇರಬೇಕಾಗುವುದು" ಎಂದನು.

ಆದರೆ ಅವನ ಹೆಂಡತಿ ತಲೆ ಅಲ್ಲಾಡಿಸುತ್ತಾ "ನಾನು ಈ ಜೇನಿನ ಮೇಲೆ ಅಂಟಿಕೊಂಡಿದ್ದರೆ, ಇಡೀ ಪ್ರಪಂಚದ ಸಂಪತ್ತಿನಿಂದ ನನಗೇನಾಗಬೇಕು. ನಾನು ಇದಕ್ಕೆ ಅಂಟಿಕೊಳ್ಳುವಂತೆ ಮಾಡಿದವನು ನೀನೆ. ಈಗ ನೀನೆ ಇದರಿಂದ ನನ್ನನ್ನು ಬಿಡಿಸಬೇಕು" ಎಂದು ಹೇಳಿದಳು.

ಶ್ರೀಮಂತನಿಗೆ ಇಷ್ಟವೋ ಕಷ್ಟವೊ, ಬೇರೆ ದಾರಿ ಉಳಿಯಲಿಲ್ಲ. ತನ್ನ ಹೆಂಡತಿ ಆ ಜೇನಿನಿಂದ ಬಿಡುಗಡೆ ಪಡೆಯಲಿ ಎಂದೇ ಕೇಳಿಕೊಳ್ಳಬೇಕಾಯಿತು. ಅವನು ಹಾಗೆ ಹೇಳಿದ ತಕ್ಷಣ ಅವಳು ಸರಿಹೋದಳು. ಶ್ರೀಮಂತನಿಗೆ ದೇವತೆಯ ವರಗಳಿಂದ ತನ್ನ ಆಸೆಗಳನ್ನು ಈಡೇರಿಸಿಕೊಳ್ಳಲು ಆಗಲೇ ಇಲ್ಲ. ಅದರ ಬದಲು ಅವನಿಗೆ ಜಿಗುಪ್ಸೆ ಉಂಟಾಯಿತು. ಹೆಂಡತಿಯಿಂದ ಬೈಗುಳ ಕೇಳಬೇಕಾಯಿತು. ಸಿಟ್ಟಿನಿಂದ ಕುದುರೆ ಕಳೆದುಕೊಳ್ಳಬೇಕಾಯಿತು. ಆದರೆ ಆ ಬಡದಂಪತಿಗಳು ಕೊನೆಯವರೆಗೂ ಧರ್ಮನಿಷ್ಠರಾಗಿ, ತೃಪ್ತಿಯಿಂದ ಬಾಳಿದರು.

೧೯. ಹಸಿರು ಸೇಬು



ಒಂದಾನೊಂದು ಕಾಲದಲ್ಲಿ ಒಬ್ಬ ಅರಣ್ಯಾಧಿಕಾರಿ ಕಾಡಿನಲ್ಲಿ ಹೋಗುತ್ತಿರುವಾಗ ಮಗುವಿನ ಅಳು ಅವನಿಗೆ ಕೇಳಿಸಿತು. ಧ್ವನಿ ಬಂದ ಕಡೆ ಅವನು ಹೋದಾಗ ಒಂದು ಹಸಿರು ಸೇಬು ಮರದ ಬಳಿಗೆ ಬಂದನು. ಅದರ ಮೇಲೆ ಒಬ್ಬ ಪುಟ್ಟ ಹುಡುಗ ಕುಳಿತಿದ್ದನು. ಒಬ್ಬ ತಾಯಿ ತನ್ನ ಮಡಿಲಲ್ಲಿ ಮಗುವನ್ನು ಹಾಕಿಕೊಂಡು ಮರದ ಕೆಳಗೆ ನಿದ್ರೆ ಮಾಡುತ್ತಿದ್ದಳು. ಅವಳು ಮಲಗಿದ್ದಾಗ, ಒಂದು ಬಂಗಾರದ ಹದ್ದು ಮಗುವನ್ನು ಕೊಕ್ಕಿನಲ್ಲಿ ಎತ್ತಿಕೊಂಡು ಹೋಗಿ ಎತ್ತರವಾದ ಮರದ ಕೊಂಬೆಯ ಮೇಲೆ ಬಿಟ್ಟಿತ್ತು. ಆ ಅರಣ್ಯಾಧಿಕಾರಿ ಮೇಲಕ್ಕೆ ಹತ್ತಿ, ಮಗುವನ್ನು ಕೆಳಗಿಳಿಸಿದನು. ಆ ಮಗುವನ್ನು ತನ್ನ ಮನೆಗೆ ಕರೆದುಕೊಂಡು ಹೋದನು. ಅವನ ಮಗಳು ಹೆಲೆನ್ ಮತ್ತು ಆ ಹುಡುಗ ಒಟ್ಟಿಗೆ ಬೆಳೆದರು. ತಾನು ರಕ್ಷಿಸಿದ ಹುಡುಗನಿಗೆ ತನ್ನ ಸಾಹಸದ ನೆನಪಿಗಾಗಿ ಹಸಿರು ಸೇಬು ಎಂದು ಹೆಸರಿಟ್ಟನು. ಹೆಲನ್ ಮತ್ತು ಆ ಹುಡುಗ ಇಬ್ಬರೂ ಒಬ್ಬರನ್ನೊಬ್ಬರು ತುಂಬ ಪ್ರೀತಿಸುತಿದ್ದರು. ಅವರು ಬೇರೆ ಬೇರೆ ಇದ್ದಾಗಲೆಲ್ಲಾ ಅವರಿಬ್ಬರಿಗೂ ತುಂಬಾ ದುಃಖವಾಗುತ್ತಿತ್ತು.

ಆ ಅರಣ್ಯಾಧಿಕಾರಿಯ ಹತ್ತಿರ ವಯಸ್ಸಾದ ಮುದುಕಿ ಅಡುಗೆಯವಳಿದ್ದಳು. ಅವಳು ಒಂದು ದಿನ ಎರಡು ಕೊಡಗಳನ್ನು ತೆಗೆದುಕೊಂಡು ನೀರು ತರಲು ನದಿಗೆ ಹೋದಳು. ಅವಳು ನೀರು ತರಲು ಅನೇಕ ಸಾರಿ ಹೋದಳು. ಪುಟ್ಟ ಹೆಲನ್, ಅವಳನ್ನು ನೋಡಿ, "ಸಾರಾ ಅಜ್ಜಿ, ನೀರು ಯಾಕೆ ಅಷ್ಟೊಂದು ತರುತ್ತಿದ್ದಿ?" ಎಂದು ಕೇಳಿದಳು. "ನೀನು ಯಾರಿಗೂ ಹೇಳಲ್ಲ ಅಂತ ಮಾತು ಕೊಟ್ಟರೆ ನಾನು ನಿನಗೆ ಹೇಳುತ್ತೇನೆ" ಎಂದು ಆ ಅಡುಗೆ ಮಾಡುವ ಅಜ್ಜಿ ಹೇಳಿದಳು.

ಚಿಕ್ಕ ಹುಡುಗಿ ಹೆಲನ್ ಯಾರಿಗೂ ಹೇಳಲ್ಲ ಎಂದು ಮಾತುಕೊಟ್ಟಳು. ಆಗ ಅಡಿಗೆ ಅಜ್ಜಿ "ನಾಳೆ ಬೆಳಗಿನ ಜಾವ ಅರಣ್ಯಾಧಿಕಾರಿ ಕಾಡಿಗೆ ಹೋದಾಗ, ನಾನು ಆ ನೀರನ್ನೆಲ್ಲ ಕಾಯಿಸುತ್ತೇನೆ. ಅದು ಕುದಿಯುತ್ತಿರುವಾಗ ಹುಡುಗ ಹಸಿರು ಸೇಬನ್ನು ಅದರೊಳಗೆ ಹಾಕಿ ಬೇಯಿಸುತ್ತೇನೆ" ಎಂದು ಹೇಳಿದಳು. ಮಾರನೇ ದಿನ ಬೆಳಗಾಗುತ್ತಲೆ ಅರಣ್ಯಾಧಿಕಾರಿ ಎದ್ದು ಕಾಡಿಗೆ ಹೋದನು. ಮಕ್ಕಳು ಇನ್ನೂ ಮಲಗಿದ್ದರು. ಆಗ ಹೆಲನ್, "ನನ್ನನ್ನು ಬಿಟ್ಟು ಎಲ್ಲಿಗೂ ಹೋಗಬೇಡ. ನಾನು ನಿನ್ನನ್ನು ಬಿಟ್ಟಿರಲಾರೆ" ಎಂದು ಹಸಿರು ಸೇಬಿಗೆ ಹೇಳಿದಳು. ಅದಕ್ಕೆ ಅವನು "ಈಗ ಮತ್ತು ಮುಂದೆ ಎಂದೆಂದೂ ನಿನ್ನ ಜೊತೆಯೇ ಇರುತ್ತೇನೆ" ಎಂದು ಹೇಳಿದನು.

"ನಿನಗೆ ಗೊತ್ತಾ, ನಿನ್ನೆ ದಿನ ಅಡುಗೆಯವಳು ಅನೇಕ ಕೊಡ ನೀರು ತಂದಳು. ಅವಳು ಯಾಕೆ ಹಾಗೆ ಮಾಡಿದಳು ಎಂದು ನಾನು ಕೇಳಿದೆ. ಈ ದಿನ ಬೆಳಗ್ಗೆ ಅಪ್ಪ ಕೆಲಸಕ್ಕೆ ಹೋದ ಮೇಲೆ ತಾಮ್ರದ ತಪ್ಪಲೆಯಲ್ಲಿ ನೀರು ಕಾಯಿಸಿ, ಅದರಲ್ಲಿ ನಿನ್ನನ್ನು ಹಾಕಿ ಬೇಯಿಸುವಳಂತೆ. ಆದ್ದರಿಂದ ನಾವು ಬೇಗ ಎದ್ದು ಅವಳು ಬರುವುದರೊಳಗೆ ತಪ್ಪಿಸಿಕೊಳ್ಳೋಣ" ಎಂದು ಹಸಿರು ಸೇಬಿಗೆ ಹೇಳಿದಳು. ಇಬ್ಬರೂ ಅವಸರದಿಂದ ತಾವೇ ಬಟ್ಟೆ ಹಾಕಿಕೊಂಡರು. ಓಟಕಿತ್ತರು. ಆ ಕಡೆ ಮುದುಕಿ ನೀರು ಕಾಯಿಸುತ್ತಿದ್ದಳು. ಅದು ಕುದಿಯುತ್ತಿರುವಾಗ ಹಸಿರು ಸೇಬನ್ನು ಕರೆದುಕೊಂಡು ಹೋಗಲು ಅವರು ಮಲಗಿದ್ದ ಕೋಣೆಗೆ ಬಂದಳು. ಮಕ್ಕಳು ತಪ್ಪಿಸಿಕೊಂಡಿರುವುದು ತಿಳಿಯಿತು. ಅದರಿಂದ ಅವಳ ಆತಂಕ ಜಾಸ್ತಿ ಆಯಿತು. ಅರಣ್ಯಾಧಿಕಾರಿ ಮನೆಗೆ ಬಂದು ಮಕ್ಕಳು ಎಲ್ಲಿ ಹೋಗಿದ್ದಾರೆ ಎಂದು ಕೇಳಿದರೆ ನಾನೇನು ಹೇಳಬೇಕು? ಯಾರನ್ನಾದರೂ ಕಳಿಸಿ, ಹುಡುಕಿಸಿ ವಾಪಾಸ್ಸು ಕರೆಸಬೇಕು ಎಂದು ತನಗೆ ತಾನೇ ಹೇಳಿಕೊಂಡಳು.

ನಂತರ ಅವಳು ಮೂರು ಜನ ಸೇವಕರನ್ನು ಕಳಿಸಿದಳು. ಮಕ್ಕಳು ಎಲ್ಲಿದ್ದರೂ ಹುಡುಕಿಕೊಂಡು ಮನೆಗೆ ಕರೆದುಕೊಂಡು ಬರಬೇಕೆಂದು ಹೇಳಿದಳು. ಮಕ್ಕಳು ತಮ್ಮ ಹಿಂದೆ ಸೇವಕರು ಓಡಿಬರುತ್ತಿರುವುದನ್ನು ನೋಡಿದರು. ಆಗ ಚಿಕ್ಕ ಹುಡುಗಿ ಹೆಲೆನ್ "ನನ್ನನ್ನು ಬಿಟ್ಟು ಹೋಗಬೇಡ, ನೀನಿಲ್ಲದೆ ನಾನಿರಲಾರೆ" ಎಂದು ಹುಡುಗ ಹಸಿರು ಸೇಬಿಗೆ ಹೇಳಿದಳು. ಅದಕ್ಕೆ ಅವನು "ಈಗ ಮತ್ತು ಯಾವಾಗಲೂ ನಿನ್ನ ಹತ್ತಿರವೇ ಇರುತ್ತೇನೆ" ಎಂದು ಉತ್ತರಿಸಿದನು. ಹಾಗಾದರೆ, "ನೀನು ಒಂದು ಗುಲಾಬಿ ಗಿಡವಾಗು, ನಾನು ಅದರ ಮೇಲೆ ಒಂದು ಗುಲಾಬಿ ಮೊಗ್ಗು ಆಗುವೆ" ಎಂದು ಹೆಲನ್ ಹೇಳಿದಳು.

ಸೇವಕರು ಬಂದಾಗ ಮಕ್ಕಳು ಎಲ್ಲಿಯೂ ಕಾಣಲಿಲ್ಲ. ಅವರಿದ್ದ ಜಾಗದಲ್ಲಿ ಒಂದು ಗುಲಾಬಿ ಗಿಡ ಮತ್ತು ಅದರ ಮೇಲೆ ಒಂದು ಗುಲಾಬಿ ಮೊಗ್ಗು ಅಷ್ಟೆ ಇತ್ತು. ಎಲ್ಲಿ ಹುಡುಕಿದರೂ ಮಕ್ಕಳು ಸಿಗಲಿಲ್ಲವೆಂದು,

ಒಂದು ಗುಲಾಬಿ ಮೊಗ್ಗನ್ನು ಹೊಂದಿದ್ದ ಗುಲಾಬಿಗಿಡವನ್ನು ಬಿಟ್ಟರೆ ಮತ್ತೇನನ್ನೂ ನೋಡಲಿಲ್ಲವೆಂದು ಸೇವಕರು ಹೇಳಿದರು. ಅವರು ಹೇಳಿದ ಕತೆಯನ್ನು ಕೇಳಿ ಆ ಮುದುಕಿ ಅವರನ್ನು ಚೆನ್ನಾಗಿ ಬೈಯ್ದಳು. "ನೀವು ಎಂತಹ ಹೆಡ್ಡರು ! ಆ ಗಿಡವನ್ನು ಮುರಿದುಕೊಂಡು, ಆ ಹೂವನ್ನು ಕಿತ್ತುಕೊಂಡು ಬಂದು ನನಗೆ ಕೊಡಬೇಕಾಗಿತ್ತು ಎಂದಳು. ಓಡಿ, ಮತ್ತೆ ಹಾಗೆ ಮಾಡಿ" ಎಂದು ಆ ಸೇವಕರನ್ನು ಕಳಿಸಿದಳು. ಎರಡನೇ ಬಾರಿ, ಅವರು ಮಕ್ಕಳನ್ನು ಹುಡುಕಿಕೊಂಡು ಹೊರಟರು. ಅವರು ಬರುತ್ತಿರುವುದನ್ನು ಮಕ್ಕಳು ದೂರದಿಂದಲೇ ನೋಡಿದರು. ಪುಟ್ಟ ಹೆಲನ್, ಮೊದಲಿನಂತೆಯೆ, ಅವಳನ್ನು ಬಿಟ್ಟುಹೋಗಬಾರದೆಂದು ಹೇಳಿದಳು. ಅವಳನ್ನು ಎಂದೂ ಬಿಟ್ಟುಹೋಗುವುದಿಲ್ಲವೆಂದು ಹುಡುಗ ಹಸಿರು ಸೇಬು ಉತ್ತರಿಸಿದನು. ಹಾಗಾದರೆ, "ನೀನು ಒಂದು ಕ್ರೈಸ್ತ ದೇವಾಲಯವಾಗು. ನಾನು ಅದರ ಒಳಗಿನ ಗುಮ್ಮಟವಾಗುವೆ" ಎಂದು ಹೆಲನ್ ಹೇಳಿದಳು.

ಆ ಮೂವರು ಸೇವಕರು ಬಂದಾಗ ಅವರಿಗೆ ಒಂದು ಚರ್ಚ್ ಮತ್ತು ಅದರೊಳಗೆ ಒಂದು ಗುಮ್ಮಟವನ್ನು ಬಿಟ್ಟರೆ ಬೇರೇನೂ ಕಾಣಲಿಲ್ಲ. ಅವರು ಒಬ್ಬರಿಗೊಬ್ಬರು, "ನಾವು ಇಲ್ಲೇನು ಮಾಡೋಣ, ಮನೆಗೆ ಹೋದರಾಯಿತು" ಎಂದು ಹೇಳಿಕೊಂಡರು. ಅವರು ಮನೆಗೆ ಹೋದ ತಕ್ಷಣ, ಅಡಿಗೆಯವಳು, ಅವರೇನು ನೋಡಿದರೆಂದು ವಿಚಾರಿಸಿದಳು. ಅವರು ತಾವು ನೋಡಿದ ಕತೆಯನ್ನು ಹೇಳಿದಾಗ ಅವಳಿಗೆ ತುಂಬ ಸಿಟ್ಟು ಬಂದಿತು. ಅವರು ಚರ್ಚನ್ನು ಬೀಳಿಸಿ, ಒಳಗಿನ ಗುಮ್ಮಟವನ್ನು ತರಬೇಕಾಗಿತ್ತೆಂದು ಹೇಳಿದಳು. ಕೊನೆಗೆ ಅವಳೇ ಹೊರಟಳು. ಅವಳು ಬರುತ್ತಿರುವುದನ್ನು ಮಕ್ಕಳು ದೂರದಿಂದಲೇ ನೋಡಿದರು. ಈ ಬಾರಿ, ಪುಟ್ಟ ಹೆಲೆನ್ ತಾನು ನೀರಿನ ಕೊಳವಾಗುತ್ತೇನೆಂದು, ಅವನು ಅದರೊಳಗೆ ಬಾತುಕೋಳಿ ಆಗಿ ಈಜಬೇಕೆಂದು ಹೇಳಿದಳು. ಆ ಮುದುಕಿ ನೀರಿನ ಕೊಳವನ್ನು ನೋಡಿ ನೀರನ್ನು ಕುಡಿಯತೊಡಗಿದಳು. ಆಗ, ಬಾತುಕೋಳಿ ಅವಳ ಕಡೆ ಈಜಿಕೊಂಡು ಬಂದು ಅವಳಿಗೆ ತಿಳಿಯದಂತೆ ತನ್ನ ಕೊಕ್ಕಿನಿಂದ ಅವಳ ಟೋಪಿಯನ್ನು ನೀರಿಗೆ ಎಳೆಯಿತು. ಟೋಪಿ ಹಿಡಿಯಲು ಹೋಗಿ ನೀರು ಆಳವಾಗಿದ್ದುದರಿಂದ ಅವಳು ಮುಳುಗಿದಳು.

ಮಕ್ಕಳು ಮನೆಗೆ ಹಿಂದಿರುಗಿದರು. ಅವರಿಬ್ಬರಿಗೂ ಅತ್ಯಂತ ಸಂತೋಷವಾಯಿತು. ಹೆಲನಳ ತಂದೆಗೂ ಖುಷಿಯಾಯಿತು. ಅವರಿನ್ನೂ ಜೀವಂತವಾಗಿದ್ದು ತುಂಬ ಸಂತೋಷದ ಜೀವನವನ್ನು ನಡೆಸುತ್ತಿರಬೇಕು. ನನಗಿನ್ನೂ ಅವರು ಸುಖವಾಗಿ ಬದುಕಿದ್ದಾರೆ ಅಂತಲೇ ಅನಿಸುತ್ತಿದೆ.

೨೦. ಬಾವಿಯ ಬಳಿ ಬಾತುಕೋಳಿ ಹುಡುಗಿ

ಒಂದಾನೊಂದು ಕಾಲದಲ್ಲಿ ಒಬ್ಬ ಮುದುಕಿ ಇದ್ದಳು. ಅವಳ ಹತ್ತಿರ ಒಂದು ಹಿಂಡು ಬಾತುಕೋಳಿಗಳಿದ್ದವು. ಅವಳು ದೂರದ ಪರ್ವತಗಳ ನಡುವೆ ವಾಸವಾಗಿದ್ದಳು. ಮುದುಕಿಯ ಮನೆಯೆಂದರೆ ಪುಟ್ಟ ಗುಡಿಸಲು. ಗುಡಿಸಲ ಸುತ್ತಲೂ ದಟ್ಟವಾದ ಕಾಡು. ಮುದುಕಿ ದಿನವೂ ಕೋಲೂರಿಕೊಂಡು ಕಾಡಿಗೆ ಹೋಗುತ್ತಿದ್ದಳು. ಅಲ್ಲಿ ಅವಳನ್ನು ನೋಡಿದವರಿಗೆಲ್ಲ ಆಶ್ಚರ್ಯ ಆಗುವ ಹಾಗೆ



ಕೆಲಸ ಮಾಡುತ್ತಿದ್ದಳು. ಬಾತುಕೋಳಿಗಳಿಗೆ ಹುಲ್ಲು ಒಟ್ಟು ಮಾಡುತ್ತಿದ್ದಳು; ಕೈಗೆಟಕುವ ಕಾಡಿನ ಹಣ್ಣುಗಳನ್ನು ಕೀಳುತ್ತಿದ್ದಳು. ಸಂಜೆಯ ಹೊತ್ತಿಗೆ ಹುಲ್ಲುಹೊರೆ, ಹಣ್ಣು ಎಲ್ಲ ಬೆನ್ನ ಮೇಲೆ ಹೊತ್ತು ಮನೆಗೆ ಹಿಂದಿರುಗುತ್ತಿದ್ದಳು. ಬೆನ್ನ ಮೇಲಿನ ಭಾರದಿಂದ ಎಲ್ಲಿ ಮುಗ್ಗರಿಸಿ ಬೀಳುತ್ತಾಳೋ ಅನ್ನಿಸುತ್ತಿತ್ತು. ಆದರೆ ಅವಳು ಸುರಕ್ಷಿತವಾಗಿ ಮನೆ ತಲುಪುತ್ತಿದ್ದಳು. ದಾರಿಯಲ್ಲಿ ಯಾರಾದರೂ ಕಂಡರೆ "ಏನು, ಚೆನ್ನಾಗಿದ್ದೀರಾ?" ಎಂದು ಬಾಯಿತುಂಬಾ ಮಾತಾಡಿಸುತ್ತಿದ್ದಳು. "ಎಷ್ಟೊಂದು ಭಾರ ಹೊತ್ತಿದ್ದೀಯಲ್ಲಾ ಮುದುಕಿ" ಎಂದು ಯಾರಾದರೂ ಅಂದರೆ "ಎಲ್ಲರೂ ಅವರವರ ಭಾರ ಹೊರಬೇಕಲ್ಲ!" ಅನ್ನುತ್ತಿದ್ದಳು. ಕೊನೆಕೊನೆಗೆ ಜನಕ್ಕೆ ಅವಳ ಬಗ್ಗೆ ಒಂದು ರೀತಿಯ ಭಯ ಹುಟ್ಟಿತು. ಅವಳು ಓಡಾಡುವ ದಾರಿಯನ್ನು ಬಿಟ್ಟು ಬೇರೆ ಕಡೆ ಓಡಾಡುತ್ತಿದ್ದರು. "ಆ ಮುದುಕಿ ಬಗ್ಗೆ ಹುಷಾರಾಗಿರಿ. ಅವಳು ಏನೇನೋ ಮಾಡುತ್ತಾಳೆ. ಅವಳೊಬ್ಬ ಮಾಟಗಾತಿ" ಎಂದು ಮಕ್ಕಳೊಂದಿಗರನ್ನು ಹೆದರಿಸುತ್ತಿದ್ದರು.

ಒಂದು ದಿನ ಬೆಳಗ್ಗೆ ಒಬ್ಬ ಸುಂದರ ಯುವಕ ಆ ಕಾಡಿನ ದಾರಿಯಲ್ಲಿ ನಡೆಯುತ್ತಿದ್ದನು. ಸೂರ್ಯ ಆಗತಾನೆ ಮೇಲೆ ಬಂದಿದ್ದ. ಹಕ್ಕಿಗಳು ಹಾಡುತ್ತಿದ್ದವು. ಹಿತವಾದ ಗಾಳಿಗೆ ಮರದ ಎಲೆಗಳು ಅಲುಗುತ್ತಿದ್ದವು. ತುಂಬ ಸುಂದರವಾದ ಹಗಲು. ಇಷ್ಟಾದರೂ ಆ ಹುಡುಗನಿಗೆ ಯಾರೂ ಕಾಣಿಸಲೇ ಇಲ್ಲ. ಕೊನೆಗೆ ಒಬ್ಬ ಮುದುಕಿ ನೆಲದ ಮೇಲೆ ಬಾಗಿ ಕುಡುಗೋಲಿನಿಂದ ಹುಲ್ಲು ಕೊಯ್ಯುತ್ತಿರುವುದು ಕಾಣಿಸಿತು. ಅವಳ ಪಕ್ಕದಲ್ಲಿ ಆಗಲೇ ಒಂದು ಮೂಟೆಯಷ್ಟು ಕೊಯ್ದ ಹುಲ್ಲು ಇತ್ತು. ಜೊತೆಗೆ ಎರಡು ಬುಟ್ಟಿಯ ತುಂಬಾ ಹಣ್ಣುಗಳು. ಆಗ ಆ ಯುವಕ "ಅಜ್ಜೀ! ಇಷ್ಟನ್ನೆಲ್ಲ ಹೇಗೆ ಒಯ್ಯುತ್ತೀ?" ಎಂದು ಕೇಳಿದ. "ಹೇಗಾದರೂ ಒಯ್ಯಲೇಬೇಕಪ್ಪ! ಶ್ರೀಮಂತರ ಮಕ್ಕಳಂತೂ ಇಂಥ ಕೆಲಸದಲ್ಲಿ ಸಹಾಯ ಮಾಡುವುದಿಲ್ಲ, ನೀನಾದರೂ ಸ್ವಲ್ಪ ನೆರವು ನೀಡಬಾರದೆ? ನಿನಗೆ ನೇರವಾದ ಬೆನ್ನಿದೆ, ಎಳೆಯ ಕಾಲುಗಳಿವೆ! ಭಾರ ಹೊರುವುದು ನಿನಗಂತೂ ತುಂಬ ಸುಲಭ. ಅಲ್ಲದೆ ನನ್ನ ಮನೆಯೇನೂ ದೂರವಿಲ್ಲ. ಈ ಬೆಟ್ಟ ಹತ್ತಿ ಇಳಿದರೆ ಆಯಿತು. ನೀನು ಕುಣಿಕುಣಿಯುತ್ತ ನಡೆದುಬಿಡಬಹುದು!" ಎಂದು ಹುರಿದುಂಬಿಸಿದಳು. ಹುಡುಗನಿಗೆ ಮುದುಕಿಯ ಮೇಲೆ ಕರುಣೆ ಬಂದಿತು. "ನಮ್ಮಪ್ಪ ರೈತನಲ್ಲ, ಶ್ರೀಮಂತ ದೊರೆ. ರೈತರ ಮಕ್ಕಳು ಮಾತ್ರ ಭಾರ

ಹೊರುತ್ತಾರೆ ಅಂದೆಯಲ್ಲ, ನೋಡು, ನಾನು ನಿನ್ನ ಭಾರವನ್ನು ಹೊರುತ್ತೇನೆ" ಎಂದನು.

"ಒಳ್ಳೆಯದಪ್ಪ! ನಿನ್ನ ಉಪಕಾರ ಮರೆಯುವುದಿಲ್ಲ. ಆದರೆ ನೀನು ಈ ಹಣ್ಣುಗಳನ್ನೂ ಒಯ್ಯಬೇಕು. ಇಲ್ಲಿಂದ ಬರೀ ಒಂದು ಗಂಟೆಯ ದಾರಿ ಅಷ್ಟೇ. ನೀನಿನ್ನೂ ಹರೆಯದ ಹುಡುಗ. ಇನ್ನೂ ಬೇಗ ನಡೆದರೂ ನಡೆಯಬಹುದು" ಎಂದಳು ಮುದುಕಿ. ಒಂದು ಗಂಟೆಯ ದಾರಿ ಅಂದಕೂಡಲೆ ಹುಡುಗ ಯೋಚನೆ ಮಾಡತೊಡಗಿದ. ಆದರೆ ಮುದುಕಿ ಅವನನ್ನು ಬಿಡಲಿಲ್ಲ. ಹುಲ್ಲು ಹೊರೆಯನ್ನು ಅವನ ಬೆನ್ನ ಮೇಲೇರಿಸಿ, ಹಣ್ಣಿನ ಬುಟ್ಟಿಗಳನ್ನು ಭುಜಕ್ಕೆ ನೇತುಹಾಕಿ "ನೋಡು, ಎಷ್ಟು ಹಗುರ ಇದೆ" ಅಂದಳು. "ಹಗುರವೆ? ಈ ಬುಟ್ಟಿಯಲ್ಲಿ ಕಲ್ಲೋ ಕಬ್ಬಿಣವೋ ಇರುವಹಾಗಿದೆ!" ಎಂದ ಹುಡುಗ. ಭಾರವನ್ನು ಕೆಳಗಿಳಿಸಲು ನೋಡಿದನು. ಆದರೆ ಮುದುಕಿ ಒಪ್ಪಲಿಲ್ಲ. "ನೋಡು ಒಬ್ಬ ಮುದುಕಿ ಎಷ್ಟು ಭಾರ ಹೊರುತ್ತಾಳೆ ಎಂದು ತಿಳಿಯಬೇಕಿದ್ದರೆ ನೀನೂ ಹೊರಬೇಕು. ನೀವು, ಶ್ರೀಮಂತರು, ಒಳ್ಳೆಯ ಮಾತು ಆಡುತ್ತೀರಿ ಕೆಲಸ ಮಾಡಬೇಕಾಗಿ ಬಂದರೆ ತಪ್ಪಿಸಿಕೊಳ್ಳುತ್ತೀರಿ. ಯಾಕೆ ಹಾಗೇ ನಿಂತಿದ್ದೀ? ಹೊರಡು ಇನ್ನು" ಎಂದು ತಿರಸ್ಕಾರದಿಂದ ನುಡಿದಳು.

ಮೈದಾನದಲ್ಲಿ ಹುಡುಗ ಹೇಗೋ ನಡೆದ. ಆದರೆ ಬೆಟ್ಟ ಹತ್ತುವಾಗ ತುಂಬ ಕಷ್ಟವಾಯಿತು. ಕಾಲಡಿಯ ಕಲ್ಲುಗಳಿಗೆ ಜೀವಬಂದು ಉರುಳುತ್ತಿವೆ ಅನ್ನಿಸಿತು. ಕಾಲಿನ ಶಕ್ತಿ ಕಡಮೆಯಾದಂತೆನಿಸಿತು. ಬೆವರು ಹರಿದು ಮುಖ, ಬೆನ್ನು ಎಲ್ಲ ತೊಯ್ದಿತು. ಸೆಕೆ, ಚಳಿ ಎರಡೂ ಅನ್ನಿಸುತ್ತಿತ್ತು. "ಸ್ವಲ್ಪ ಸುಧಾರಿಸಿಕೊಳ್ಳದೆ ಹೆಜ್ಜೆ ಇಡಲಾರೆ" ಅಂದ ಹುಡುಗ. "ಇಲ್ಲಿ ಬೇಡ. ನಮ್ಮ ಮನೆ ತಲುಪಿದ ಮೇಲೆ ಸುಧಾರಿಸಿಕೊಳ್ಳುವೆಯಂತೆ. ಈಗ ನಡೆಯೋಣ. ನಿನಗೇನು ಅದೃಷ್ಟ ಕಾದಿದೆಯೋ ಯಾರಿಗೆ ಗೊತ್ತು" ಅಂದಳು ಮುದುಕಿ. ಅವನು "ನಿನಗೆ ಕರುಣೆಯೇ ಇಲ್ಲ" ಅಂದ. ಮೂಟೆಗಳನ್ನು ಬಿಸಾಕಲು ನೋಡಿದ. ಆದರೆ ಅವು ಅವನ ಬೆನ್ನಿಗೆ ಅಂಟಿಕೊಂಡಿವೆಯೋ ಅನ್ನುವಂತಿದ್ದವು. ಮುದುಕಿ ಅವನ ಮುಂದೆ ಊರುಗೋಲೆತ್ತಿ ಕುಣಿದಳು. "ನಿನ್ನ ಮುಖ ಟರ್ಕಿ ಹುಂಜದಂತೆ ಕೆಂಪಾಗಿದೆ. ಈಗಲೇ ಸಿಟ್ಟು ಮಾಡಿಕೊಳ್ಳಬೇಡ ಹುಡುಗಾ! ಸ್ವಲ್ಪ ಹೊತ್ತು ಭಾರ ಹೊತ್ತುಕೋ ಮನೆಗೆ ಹೋದ ತಕ್ಷಣ ನಿನಗೆ ಕುಡಿಯಲು ಪಾನಕ ಕೊಡುತ್ತೇನೆ" ಅಂದಳು ಮುದುಕಿ. ಹುಡುಗ ತನ್ನ ಅದೃಷ್ಟವನ್ನು ಬೈದುಕೊಂಡು ಮುದುಕಿಯ ಹಿಂದೆ ನಡೆದನು. ಅವನ ಆಯಾಸ ಹೆಚ್ಚಿದಂತೆಲ್ಲ ಮುದುಕಿ ಚುರುಕಾಗುತ್ತಿದ್ದಳು. ಇದ್ದಕ್ಕಿದ್ದಂತೆ ಅವಳು ಮೇಲಕ್ಕೆ ಎಗರಿ ಹುಡುಗನ ಬೆನ್ನ ಮೇಲಿದ್ದ ಮೂಟೆಯ ಮೇಲೆ ಕುಳಿತಳು. ಅವಳು ನೋಡುವುದಕ್ಕೆ ತೆಳ್ಳಗೆ ಗಾಳಿಗೆ ಹಾರಿಹೋಗುವಂತಿದ್ದರೂ ಅವಳ ಭಾರ ಮಾತ್ರ ದಪ್ಪನೆಯ ರೈತ ಹೆಂಗಸಿಗಿಂತ ಹೆಚ್ಚಾಗಿತ್ತು. ಹುಡುಗನ ಮೊಣಕಾಲು ನಡುಗತೊಡಗಿದವು. ಅವನು ನಿಲ್ಲಲು ಪ್ರಯತ್ನಿಸಿದರೆ ಮುದುಕಿ ಕೋಲಿನಿಂದ ಚುಚ್ಚುತ್ತಿದ್ದಳು. ಹಾಗೂ ಹೀಗೂ ಬೆಟ್ಟ ಹತ್ತಿ, ಇಳಿದು, ಅವನು ಮುದುಕಿಯ ಗುಡಿಸಲಿಗೆ ಬಂದ. ಭಾರವನ್ನು ಕೆಳಗೆಸೆಯಬೇಕೆನ್ನುವಷ್ಟರಲ್ಲಿ ಬಾತುಕೋಳಿಗಳು ರೆಕ್ಕೆ ಅಗಲಿಸಿಕೊಂಡು, ಕತ್ತು ಚಾಡಿಸುತ್ತ ಮುದುಕಿಯತ್ತ ಓಡಿ ಬಂದವು. ಅವುಗಳ ಹಿಂದೆ ಕೈಯಲ್ಲಿ ಕೋಲು ಹಿಡಿದ ಕಪ್ಪು ಬಣ್ಣದ ಮಧ್ಯವಯಸ್ಸಿನ ದಷ್ಟ ಪುಷ್ಟ ಹೆಂಗಸೊಬ್ಬಳು ಕಾಣಿಸಿದಳು. ಅವಳು ಕತ್ತಲಿನಷ್ಟು ಕಪ್ಪಗಿದ್ದಳು. "ಏನಮ್ಮಾ! ತುಂಬ ತಡವಾಗಿ ಬಂದೆಯಲ್ಲ! ದಾರಿಯಲ್ಲಿ ಏನಾದರೂ ತೊಂದರೆಯಾಯಿತೆ?" ಎಂದು ಅವಳು ಮುದುಕಿಯನ್ನು ಕೇಳಿದಳು. "ಏನಿಲ್ಲ, ಈ ಯುವರಾಜ ನನ್ನ ಭಾರವನ್ನು ಹೊತ್ತು

ತಂದಿದ್ದಾನೆ. ನನಗೆ ಆಯಾಸವಾದಾಗ ನನ್ನನ್ನೂ ಹೊತ್ತಿದ್ದಾನೆ. .ದಾರಿಯೇನೂ ದೂರದ್ದಲ್ಲವಲ್ಲ! ನಾವು ಒಬ್ಬರನ್ನೊಬ್ಬರು ತಮಾಷೆ ಮಾಡುತ್ತ ಬಂದುಬಿಟ್ಟೆವು!" ಅಂದಳು ಮುದುಕಿ. ಆಮೇಲೆ ಹಣ್ಣಿನ ಬುಟ್ಟಿಗಳನ್ನೂ ಹುಲ್ಲಿನ ಹೊರೆಯನ್ನೂ ಇಳಿಸಿಕೊಂಡಳು. "ಅಲ್ಲಿ, ಬಾಗಿಲ ಹತ್ತಿರ ಇರುವ ಬೆಂಚಿನ ಮೇಲೆ ಕುಳಿತು ಸುಧಾರಿಸಿಕೋ" ಎಂದು ಹುಡುಗನಿಗೆ ಹೇಳಿದಳು. ಆಮೇಲೆ ಬಾತುಕೋಳಿ ಹೆಂಗಸಿನತ್ತ ತಿರುಗಿ "ನೀನು ಒಳಗೆ ಹೋಗು. ಇಲ್ಲಿ ಈ ಯುವಕನೊಂದಿಗೆ ಒಬ್ಬಳೇ ಇರುವುದು ಸರಿಯಲ್ಲ. ಯಾರೂ ಬೆಂಕಿಗೆ ಎಣ್ಣೆ ಹಾಕಬಾರದು. ಅವನು ನಿನ್ನನ್ನು ಪ್ರೀತಿಸಿಬಿಡಬಹುದು" ಅಂದಳು.

ಹುಡುಗನಿಗೆ ನಗಬೇಕೋ ಅಳಬೇಕೋ ತಿಳಿಯಲಿಲ್ಲ. "ಅವಳು ನನಗಿಂತ ಮೂವತ್ತು ವರ್ಷ ಚಿಕ್ಕವಳಾಗಿದ್ದರೂ ಅವಳ ಬಗ್ಗೆ ನನ್ನ ಮನಸ್ಸಿನಲ್ಲಿ ಪ್ರೀತಿ ಹುಟ್ಟುವುದಿಲ್ಲ" ಅಂದುಕೊಂಡ. ಮುದುಕಿ ಬಾತುಕೋಳಿಗಳನ್ನು ತನ್ನ ಮಕ್ಕಳೋ ಎಂಬಂತೆ ಮುದ್ದಿಸಿ ಮೇವು ಹಾಕಿದಳು. ಹುಡುಗ ಅಲ್ಲೆ ಸೇಬಿನ ಮರದ ಕೆಳಗಿದ್ದ ಬೆಂಚಿನ ಮೇಲೆ ಮಲಗಿದ. ಗಾಳಿ ಹಿತವಾಗಿ ಬೀಸುತ್ತಿತ್ತು. ಎಲ್ಲಿ ನೋಡಿದರೂ ಹಸಿರು ತುಂಬಿತ್ತು. ಹೂಗಳು ಅರಳಿದ್ದವು. ಸ್ವಚ್ಛವಾದ ಝರಿಯೊಂದು ಹರಿಯುತ್ತಿತ್ತು. ನೀರಿನ ಮೇಲೆ ಬಿಸಿಲು ತಳತಳಿಸುತ್ತಿತ್ತು. ಬಾತುಕೋಳಿಯೊಂದು ನೀರಿನಲ್ಲಿ ಆಡುತ್ತಿತ್ತು. "ಸುಂದರವಾದ ಸ್ಥಳ. ಆದರೆ ನನಗೆ ತುಂಬ ಸುಸ್ತಾಗಿದೆ. ಕಣ್ಣುಗಳು ತೂಗುತ್ತಿವೆ. ನಿದ್ದೆ ಮಾಡಬೇಕು. ಕಾಲುಗಳಲ್ಲಿ ಶಕ್ತಿಯೇ ಇಲ್ಲ. ಗಾಳಿ ಬೀಸಿ ನನ್ನ ಕಾಲುಗಳನ್ನು ಹಾರಿಸಿಕೊಂಡು ಹೋಗದಿದ್ದರೆ ಸರಿ" ಎಂದುಕೊಂಡು ಹುಡುಗ ಮಲಗಿದನು.

ಸ್ವಲ್ಪ ಹೊತ್ತಾದ ಮೇಲೆ ಮುದುಕಿ ಬಂದು ಅವನನ್ನು ಎಬ್ಬಿಸಿದಳು. "ಏಳು, ನೀನು ಇಲ್ಲಿ ಉಳಿಯಬಾರದು. ನಾನು ನಿನಗೆ ತುಂಬ ತೊಂದರೆಕೊಟ್ಟೆ, ನಿಜ. ಆದರೆ ನಿನ್ನ ಪ್ರಾಣಕ್ಕೇನೂ ಅಪಾಯ ಆಗಲಿಲ್ಲವಲ್ಲ! ಈಗ ನಿನಗೊಂದು ಬಹುಮಾನ ಕೊಡುತ್ತೇನೆ. ಹಣ ಅಲ್ಲ, ಆಸ್ತಿ ಅಲ್ಲ. ಆದರೆ ಅವಕ್ಕಿಂತ ಅಪರೂಪದ್ದು" ಎಂದು ಹೇಳಿ ಅವನಿಗೆ ಒಂದು ಪುಟ್ಟ ಪಚ್ಚೆಯ ಪುಸ್ತಕವನ್ನು ಕೊಟ್ಟಳು. "ಇದನ್ನು ಹುಷಾರಾಗಿಟ್ಟುಕೋ. ನಿನ್ನ ಅದೃಷ್ಟ ಖುಲಾಯಿಸುತ್ತದೆ" ಅಂದಳು.

ಯುವರಾಜ ಎದ್ದನು. ಅವನ ಆಯಾಸವೆಲ್ಲ ಪರಿಹಾರವಾಗಿತ್ತು. ಮುದುಕಿಗೆ ವಂದಿಸಿ ಹೊರಟನು. ಅವನು ಒಮ್ಮೆಯೂ ಮುದುಕಿಯ ಮಗಳತ್ತ ನೋಡಲಿಲ್ಲ. ಸುಮಾರು ದೂರ ಹೋಗುವವರೆಗೆ ಅವನಿಗೆ ಬಾತುಕೋಳಿಗಳ ಸದ್ದು ಕೇಳುತ್ತಿತ್ತು. ಕಾಡಿನಲ್ಲಿ ಸರಿಯಾದ ದಾರಿ ಹುಡುಕಲು ಅವನಿಗೆ ಮೂರು ದಿನ ಹಿಡಿಯಿತು. ಕೊನೆಗೊಮ್ಮೆ ಅವನು ದೊಡ್ಡ ಪಟ್ಟಣವೊಂದನ್ನು ತಲುಪಿದ. ಆ ಊರಿಗೆ ಅವನು ಅಪರಿಚಿತ. ಅದಕ್ಕೇ ಅವನನ್ನು ಸೀದಾ ರಾಜನ ಹತ್ತಿರ ಕರೆದೊಯ್ದರು. ರಾಜ ರಾಣಿಯರು ಸಿಂಹಾಸನದ ಮೇಲೆ ಕುಳಿತಿದ್ದರು. ಯುವರಾಜ ಅವರಿಗೆ ಮೊಣಕಾಲೂರಿ ವಂದಿಸಿದನು. ತನ್ನ ಬಳಿ ಇದ್ದ ಪಚ್ಚೆಯ ಪುಸ್ತಕವನ್ನು ರಾಣಿಯ ಕಾಲುಗಳ ಬಳಿ ಇಟ್ಟನು. ರಾಣಿ ಅವನನ್ನು ಎಬ್ಬಿಸಿ ಪುಸ್ತಕವನ್ನು ಕೊಡುವಂತೆ ಕೇಳಿದಳು. ಅವನು ಕೊಟ್ಟ ಪುಸ್ತಕ ತೆಗೆದು ನೋಡುತ್ತಿದ್ದಂತೆ ಅವಳು ಎಚ್ಚರತಪ್ಪಿ ಸತ್ತವಳ ಹಾಗೆ ಬಿದ್ದುಬಿಟ್ಟಳು. ರಾಜನ ಸೇವಕರು ಹುಡುಗನನ್ನು ಬಂಧಿಸಿದರು. ರಾಣಿಗೆ ಎಚ್ಚರವಾಯಿತು. ಅವನನ್ನು ಬಿಟ್ಟುಬಿಡುವಂತೆ ಹೇಳಿ ಅವನೊಂದಿಗೆ ಏಕಾಂತದಲ್ಲಿ ಮಾತನಾಡಲು ಬಯಸಿದಳು.

ಎಲ್ಲರೂ ಹೋದ ಅವರಿಬ್ಬರೇ ಉಳಿದಾಗ ರಾಣಿ ಜೋರಾಗಿ ಅಳತೊಡಗಿದಳು. "ನನ್ನ ಹೃದಯದ ತುಂಬ ನೋವು ತುಂಬಿದೆ. ಮನಸ್ಸಿನ ತುಂಬ ದುಃಖವಿದೆ. ಈ ಗೌರವ, ಈ ಪದವಿಗಳಿಂದ ನನಗೇನಾಗಬೇಕು? ನನಗೆ ಮೂರು ಜನ ಹೆಣ್ಣು ಮಕ್ಕಳಿದ್ದರು. ಅವರಲ್ಲಿ ಕಿರಿಯ ಮಗಳು ತುಂಬ ಸುಂದರಿ. ಇಡೀ ಜಗತ್ತೆ ಅವಳ ರೂಪ ಕಂಡು ಬೆರಗಾಗುತ್ತಿತ್ತು. ಅವಳು ಸೂರ್ಯ ಕಿರಣದಂತೆ ಹೊಳೆಯುತ್ತಿದ್ದಳು. ಅವಳು ಅತ್ತರೆ ಮುತ್ತು ರತ್ನಗಳು ಉದುರುತ್ತಿದ್ದವು. ಅವಳಿಗೆ ಹದಿನೈದು ವರ್ಷವಾದಾಗ ಒಂದು ದಿನ ಅವಳ ತಂದೆ ಮೂವರು ಮಕ್ಕಳನ್ನೂ ಆಸ್ಥಾನಕ್ಕೆ ಕರೆಸಿದರು. ಅವಳು ಸಭೆಗೆ ಬಂದಾಗ ಜನ ಅವಳನ್ನು ಹೇಗೆ ನೋಡಿದರು ಗೊತ್ತೆ! ಅವರೆಲ್ಲ ಬಂದಮೇಲೆ ರಾಜ ಹೇಳಿದ — "ಮುದ್ದು ಮಕ್ಕಳೇ! ನಾನು ಯಾವಾಗ ಸಾಯುತ್ತೇನೋ ಗೊತ್ತಿಲ್ಲ. ಅದಕ್ಕೇ ನನ್ನ ಸಾವಿನ ನಂತರ ಮಾಡಬೇಕಾದ ಕೆಲಸವನ್ನು ಇಂದೇ ಮಾಡಿಬಿಡುತ್ತೇನೆ. ನೀವೆಲ್ಲರೂ ನನ್ನನ್ನು ಪ್ರೀತಿಸುತ್ತೀರೆಂದು ನನಗೆ ಗೊತ್ತು. ಆದರೆ ಯಾರು ನನ್ನನ್ನು ಹೆಚ್ಚು ಪ್ರೀತಿಸುತ್ತೀರೋ ಅವರಿಗೆ ನನ್ನ ರಾಜ್ಯದ ಅತ್ಯುತ್ತಮ ಭಾಗವನ್ನು ಕೊಡುತ್ತೇನೆ" ಎಂದನು." ಆಗ ಎಲ್ಲ ಮಕ್ಕಳೂ ತಾವು ಅವನನ್ನು ಪ್ರೀತಿಸುವುದಾಗಿ ಹೇಳಿದರು. ಆದರೆ ರಾಜ ಅದರಿಂದ ತೃಪ್ತನಾಗದೆ ಎಲ್ಲರೂ ತಮ್ಮ ತಮ್ಮ ಮಾತಿನಲ್ಲಿ ಪ್ರೀತಿಯನ್ನು ವಿವರಿಸಬೇಕೆಂದು ಕೇಳಿದ. ಹಿರಿಯ ಮಗಳು ತಾನು ತಂದೆಯನ್ನು ಸಕ್ಕರೆಯ ಸಿಹಿಗಿಂತ ಹೆಚ್ಚು ಪ್ರೀತಿಸುತ್ತೇನೆ ಅಂದಳು. ಎರಡನೆಯವಳು ತಂದೆಯನ್ನು ತನ್ನ ಅತ್ಯುತ್ತಮ ಉಡುಪಿಗಿಂತ ಹೆಚ್ಚು ಪ್ರೀತಿಸುತ್ತೇನೆಂದಳು. ಆದರೆ ಕಿರಿಯ ಮಗಳು ಸುಮ್ಮನಿದ್ದಳು. ಆಗ ರಾಜ "ಮಗು, ನೀನು ನನ್ನನ್ನು ಹೇಗೆ ಪ್ರೀತಿಸುತ್ತೀ?" ಎಂದು ಕೇಳಿದ. ಅವಳು "ನನಗೆ ಗೊತ್ತಿಲ್ಲ. ನನ್ನ ಪ್ರೀತಿಯನ್ನು ನಾನು ಯಾವುದರೊಂದಿಗೂ ಹೋಲಿಸಲಾರೆ" ಎಂದಳು. ಆಗಲೂ ರಾಜ ಅವಳನ್ನು ಒತ್ತಾಯಿಸಿ ಏನಾದರೂ ಹೇಳು ಎಂದ. ಕೊನೆಗೆ ಅವಳು "ತುಂಬ ರುಚಿಯಾದ ಊಟವೂ ಉಪ್ಪಿಲ್ಲದಿದ್ದರೆ ನನಗೆ ಹಿತವಾಗುವುದಿಲ್ಲ. ನಾನು ಉಪ್ಪನ್ನು ಪ್ರೀತಿಸುವಂತೆಯೇ ನಿನ್ನನ್ನು ಪ್ರೀತಿಸುತ್ತೇನೆ" ಅಂದಳು. ರಾಜನಿಗೆ ತುಂಬ ಸಿಟ್ಟು ಬಂದಿತು. "ನೀನು ನನ್ನನ್ನು ಉಪ್ಪಿನಂತೆ ಪ್ರೀತಿಸುವೆಯಾದರೆ ನಿನಗೆ ಉಪ್ಪನ್ನೆ ಬಹುಮಾನವಾಗಿ ಕೊಡುತ್ತೇನೆ" ಎಂದನು. ತನ್ನ ರಾಜ್ಯವನ್ನು ಅಲ್ಲಿಯೇ ಎರಡು ಭಾಗಮಾಡಿ ಇಬ್ಬರು ಹಿರಿಯ ಹೆಣ್ಣುಮಕ್ಕಳಿಗೆ ಕೊಟ್ಟನು. ಆದರೆ ಚಿಕ್ಕವಳಿಗೆ ಒಂದು ಮೂಟೆ ಉಪ್ಪನ್ನು ಕೊಟ್ಟು ಅದನ್ನು ಹೊತ್ತು ಕಾಡಿಗೆ ಹೋಗುವಂತೆ ಆಜ್ಞೆ ಮಾಡಿದನು. ನಾವೆಲ್ಲ ಬೇಡಿಕೊಂಡರೂ ಅವನ ಸಿಟ್ಟು ಇಳಿಯಲಿಲ್ಲ. ಅವಳು ಹೋಗುವಾಗ ತುಂಬ ಅತ್ತಳು. ದಾರಿಯುದ್ದಕ್ಕೂ ಅವಳ ಕಣ್ಣಿನಿಂದ ಮುತ್ತು ರತ್ನಗಳು ಸುರಿದವು. ಬಹಳ ದಿನಗಳಾದ ಮೇಲೆ ರಾಜನಿಗೆ ಪಶ್ಚಾತ್ತಾಪವುಂಟಾಯಿತು. ಕಾಡಿನಲ್ಲೆಲ್ಲ ಅವಳನ್ನು ಹುಡುಕಿಸಿದನು. ಅವಳು ಸಿಗಲಿಲ್ಲ. ಕಾಡುಪ್ರಾಣಿಗಳು ಅವಳನ್ನು ತಿಂದಿರಬಹುದೆಂದು ನಾನು ದಿನವೂ ದುಃಖಿಸುತ್ತಿದ್ದೆ. ಆದರೆ ಅವಳು ಎಲ್ಲೋ ಬದುಕಿರಬಹುದೆಂದು ಸಮಾಧಾನವನ್ನೂ ಮಾಡಿಕೊಳ್ಳುತ್ತಿದ್ದೆ. ಅವಳೆಲ್ಲೋ ಯಾವುದೋ ಗುಹೆಯೊಳಗೆ ಇರಬಹುದು, ಅಥವಾ ಯಾರಾದರೂ ಅವಳನ್ನು ಕರೆದುಕೊಂಡು ಹೋಗಿ ರಕ್ಷಿಸಿರಬಹುದು ಅಂದು ಕೊಳ್ಳುತ್ತಿದ್ದೆ. ನೀನು ಈಗ ಕೊಟ್ಟ ಪಚ್ಚೆ ಪುಸ್ತಕ ನೋಡಿದಾಗ ಅದರಲ್ಲಿ ನನ್ನ ಮಗಳ ಕಣ್ಣಿಂದ ಉದುರುತ್ತಿದ್ದ ಪಚ್ಚೆಯ ಹಾಗಿದ್ದ ಮುತ್ತನ್ನು ನೋಡಿದೆ. ಅದಕ್ಕೇ ಎಚ್ಚರತಪ್ಪಿ ಬಿದ್ದೆ. ತಾಯಿಯ ಹೃದಯ ನಿನಗೆ ಅರ್ಥವಾಗಿರಬಹುದು. ದಯವಿಟ್ಟು ಈ ಮುತ್ತು, ಪಚ್ಚೆ ಎಲ್ಲಿ ಹೇಗೆ ಸಿಕ್ಕಿತು ಎಂದು ಹೇಳು" ಎಂದು ರಾಣಿ ಹೇಳಿದಳು.

ಒಬ್ಬ ಮುದುಕಿ ಪಚ್ಚೆಯನ್ನು ಕೊಟ್ಟಳು. ಅವಳು ಕಾಡಿನಲ್ಲಿರುತ್ತಾಳೆ. ಹುಡುಕುವುದು ಕಷ್ಟ. ಮಾಟಗಾತಿ ಯಂತಿದ್ದಾಳೆ ಅವಳು. ರಾಣಿಯ ಮಗಳನ್ನು ನೋಡಲಿಲ್ಲ. ಯಾರೂ ಅವಳ ಬಗ್ಗೆ ಹೇಳಲೂ ಇಲ್ಲ — ಎಂದು ಹುಡುಗ ವಿವರಿಸಿದನು. ಆಗ ರಾಜ ರಾಣಿಯರು ಆ ಮುದುಕಿಯನ್ನು ಹುಡುಕಲೇಬೇಕೆಂದು ನಿರ್ಧರಿಸಿದರು. ಪಚ್ಚೆಪುಸ್ತಕ ಎಲ್ಲಿ ಸಿಕ್ಕಿತೋ ಅಲ್ಲಿಯೇ ಮಗಳ ಸುದ್ದಿ ತಿಳಿಯಬಹುದೆಂದು ಊಹಿಸಿದರು.

ಇತ್ತ ಮುದುಕಿ ಕಾಡಿನ ಮನೆಯಲ್ಲಿ ಕುಳಿತು ಚಕ್ರವನ್ನು ತಿರುಗಿಸುತ್ತಾ ನೂಲು ತೆಗೆಯುತ್ತಿದ್ದಳು. ಕತ್ತಲಾಗಿತ್ತು. ಒಲೆ ಉರಿಯುತ್ತ ಸ್ವಲ್ಪ ಬೆಳಕು ಬೀರುತ್ತಿತ್ತು. ಇದ್ದಕ್ಕಿದ್ದಂತೆ ಹೊರಗೆ ಗಲಾಟೆ ಕೇಳಿಸಿತು. ಬಾತುಕೋಳಿಗಳು ಹುಲ್ಲುಗಾವಲಿನಿಂದ ಮನೆಗೆ ಬರುತ್ತಿದ್ದವು. ಜೋರಾಗಿ ಕಿರುಚುತ್ತಿದ್ದವು. ಮುದುಕಿಯ ಮಗಳು ಒಳಗೆ ಬಂದಳು. ಮುದುಕಿ ಅವಳನ್ನು ಮಾತನಾಡಿಸದೆ ವೇಗವಾಗಿ ನೂಲತೊಡಗಿದಳು. ಎರಡು ಗಂಟೆಯಷ್ಟು ಹೊತ್ತು ಅವರಿಬ್ಬರೂ ಮಾತಿಲ್ಲದೆ ಸುಮ್ಮನಿದ್ದರು. ಕಿಟಕಿಯ ಬಳಿ ಏನೋ ಸದ್ದಾಯಿತು. ಗೂಬೆಯೊಂದು ಹೊರಗಡೆ ಕುಳಿತು ತೀಕ್ಷ್ಣವಾಗಿ ನೋಡುತ್ತಿತ್ತು. ಮೂರು ಬಾರಿ ಕೂಗಿತು. ಆಗ ಮುದುಕಿ ತನ್ನ ಕೆಲಸವನ್ನು ಬಿಟ್ಟು ಕತ್ತೆತ್ತಿ ನೋಡಿದಳು. "ಮಗು ಈಗ ನೀನು ಹೊರಗೆ ಹೋಗುವ ಸಮಯ. ಹೋಗಿ ನಿನ್ನ ಕೆಲಸ ನೋಡಿಕೋ" ಎಂದು ಮಗಳಿಗೆ ಹೇಳಿದಳು.

ಹುಡುಗಿ ಎದ್ದು ದೂರ ಬೆಟ್ಟಗಳ ನಡುವೆ ಇದ್ದ ಕಣಿವೆಗೆ ಹೋದಳು. ಅಲ್ಲಿ ಒಂದು ತೊರೆ ಹರಿಯುತ್ತಿತ್ತು. ಅದರ ಬಳಿ ಮೂರು ಓಕ್ ಮರಗಳಿದ್ದವು. ಸುತ್ತಲೂ ಚಂದ್ರನ ಬೆಳಕು ಸೂಜಿ ಬಿದ್ದರೂ ಹುಡುಕಬಹುದಾದಷ್ಟು ಸ್ವಚ್ಛವಾಗಿ ಹರಡಿತ್ತು. ಹುಡುಗಿಯು ಅಲ್ಲಿ ಮುಖವಾಡವನ್ನು ತೆಗೆದಿಟ್ಟು ಸ್ನಾನ ಮಾಡಿದಳು. ಮುಖವಾಡವನ್ನು ತೊಳೆದು ಚಂದ್ರನ ಬೆಳಕಿನಲ್ಲಿ ಒಣಗಲು ಬಿಟ್ಟಳು. ಅವಳ ಬಂಗಾರ ಬಣ್ಣದ ಕೂದಲು ಥಳಥಳ ಹೊಳೆಯುತ್ತಿತ್ತು. ಅವಳ ಕಣ್ಣು ನಕ್ಷತ್ರದಂತೆ ಮಿನುಗುತ್ತಿದ್ದವು. ಅವಳ ಕೆನ್ನೆ ಸೇಬಿನಂತೆ ಕೆಂಪಾಗಿದ್ದವು. ಆದರೆ ಅವಳಿಗೆ ತುಂಬ ಬೇಸರವಾಗಿತ್ತು. ಅವಳು ಒಬ್ಬಳೇ ಕೂತು ಅತ್ತಳು. ತುಂಬ ಹೊತ್ತು ಹೀಗೇ ಕುಳಿತಿದ್ದಾಗ ಮರಗಳ ನಡುವೆ ಏನೋ ಸದ್ದಾಯಿತು. ತಕ್ಷಣ ಅವಳು ಮುಖವಾಡವನ್ನು ಹಾಕಿಕೊಂಡು ಹಕ್ಕಿಯಂತೆ ಹಾರಿ ಹೋದಳು. ಅವಳಿಗೆ ಭಯವಾಗಿತ್ತು. ಅವಳು ಮನೆಗೆ ಹೋದಾಗ ಮುದುಕಿ ಬಾಗಿಲಿನಲ್ಲೆ ನಿಂತಿದ್ದಳು. ತಾನು ಹೆದರಿದ್ದನ್ನು ಹೇಳಬೇಕೆನ್ನುವಷ್ಟರಲ್ಲಿ ಮುದುಕಿ ಎಲ್ಲಾ ತಿಳಿದಿರುವವಳಂತೆ ನಕ್ಕುಬಿಟ್ಟಳು. ಮಗಳನ್ನು ಕೋಣೆಯೊಳಕ್ಕೆ ಕರೆದುಕೊಂಡು ಹೋದಳು. ದೀಪ ಹಚ್ಚಿದಳು. ಮನೆಯನ್ನು ಸ್ವಚ್ಛಮಾಡತೊಡಗಿದಳು. ಆಗ ಹುಡುಗಿ "ಇಷ್ಟು ಹೊತ್ತಿನಲ್ಲಿ ಯಾಕೆ ಈ ಕೆಲಸ ಶುರು ಮಾಡಿದೆ? ಏನು ವಿಷಯ?" ಎಂದು ಕೇಳಿದಳು. "ಈಗ ಎಷ್ಟು ಗಂಟೆ?" ಎಂದು ಮುದುಕಿ ಕೇಳಿದಳು. "ರಾತ್ರಿ ಹನ್ನೊಂದು ದಾಟಿರಬೇಕು" ಅಂದಳು ಹುಡುಗಿ. "ನಿನಗೆ ನೆನಪಿದೆಯಾ? ನೀನು ಮೂರು ವರ್ಷದಿಂದ ನನ್ನೊಡನೆ ಇದ್ದೀಯೆ. ಈಗ ಕಾಲ ಬಂದಿದೆ. ಇನ್ನು ನಾವು ಒಟ್ಟಿಗೆ ಇರಲಾರೆವು" ಅಂದಳು ಮುದುಕಿ. ಹುಡುಗಿಗೆ ದುಃಖವಾಯಿತು. "ದಯವಿಟ್ಟು ನನ್ನನ್ನು ಕಳಿಸಬೇಡ. ನಾನು ಎಲ್ಲಿಗೆ ಹೋಗಲಿ? ನನಗೆ ಮನೆಯಿಲ್ಲ, ಗೆಳೆಯರಿಲ್ಲ, ಯಾರೂ ಇಲ್ಲ. ಇದುವರೆಗೂ ನೀನು ಹೇಳಿದಂತೆ ಕೇಳಿಕೊಂಡಿದ್ದೇನೆ. ನೀನೂ ಇದುವರೆಗೆ ನನ್ನ ಮೇಲೆ ಕೋಪ ಮಾಡಿಕೊಂಡಿಲ್ಲ. ದಯವಿಟ್ಟು ನನ್ನನ್ನು

ಕಳಿಸಬೇಡ" ಎಂದು ಹುಡುಗಿ ಬೇಡಿಕೊಂಡಳು. ಆದರೆ ಮುದುಕಿ ಮುಂದೇನಾಗಲಿದೆ ಎಂದು ಹೇಳುವ ಬದಲಾಗಿ "ನಾನು ಇನ್ನುಮೇಲೆ ಇಲ್ಲಿರುವುದಿಲ್ಲ. ನಾನು ಹೋಗುವಾಗ ಈ ಮನೆ, ಈ ಕೋಣೆ ಎಲ್ಲವನ್ನೂ ಸ್ವಚ್ಛವಾಗಿಟ್ಟಿರಬೇಕೆಂದು ನನ್ನ ಆಸೆ. ನನ್ನ ಕೆಲಸಕ್ಕೆ ಅಡ್ಡಿ ಮಾಡಬೇಡ. ನಿನಗೆ ನಿನ್ನದೇ ಒಂದು ಮನೆ ಆಗುತ್ತದೆ. ನಿನಗೆ ನಾನು ಬಹುಮಾನ ಕೊಡುತ್ತೇನೆ. ಅದನ್ನು ಪಡೆದು ನೀನು ತೃಪ್ತಿಯಿಂದ ಇರಬೇಕು" ಎಂದಳು.

"ಇದೇನು ನಡೆಯುತ್ತಿದೆ? ಏನಾಗುತ್ತಿದೆ? ದಯವಿಟ್ಟು ಹೇಳು" ಎಂದು ಹುಡುಗಿ ಕೇಳಿಕೊಂಡಳು. "ಎರಡನೆಯ ಸಾರಿ ನಿನಗೆ ಹೇಳುತ್ತಿದ್ದೇನೆ. ನನ್ನ ಕೆಲಸಕ್ಕೆ ಅಡ್ಡಿ ಬರಬೇಡ. ಒಂದೂ ಮಾತಾಡಬೇಡ. ನಿನ್ನ ಕೋಣೆಗೆ ಹೋಗು. ನಿನ್ನ ಮುಖವಾಡ ತೆಗೆದಿಡು. ನೀನು ಮೊದಲು ನನ್ನ ಬಳಿ ಬಂದಾಗ ಹಾಕಿಕೊಂಡಿದ್ದ ಉಡುಪು ಹಾಕಿಕೊಂಡು ನಾನು ಕರೆಯುವವರೆಗೆ ಸುಮ್ಮನೆ ಇರು" ಅಂದಳು ಮುದುಕಿ.

ಇತ್ತ ರಾಜರಾಣಿಯರು ಮುದುಕಿಯನ್ನು ಹುಡುಕಿಕೊಂಡು ಹೊರಟನು. ಹುಡುಗ ಯುವರಾಜ ಅವರಿಗಿಂತ ಮೊದಲೇ ಒಬ್ಬನೇ ಹೊರಟುಬಿಟ್ಟಿದ್ದ. ಕಾಡಿಗೆ ಹೋಗಿ ತಾನು ಹಿಂದೆ ಅಲ್ಲಿಗೆ ಬಂದ ದಾರಿಯನ್ನು ಕಂಡು ಹಿಡಿಯಲು ಎರಡು ದಿನ ಅಲೆದಾಡಿದ. ರಾತ್ರಿಯಾದಾಗ ಒಂದು ಓಕ್‌ಮರವನ್ನು ಏರಿ ಕುಳಿತ. ಆಗ ಬಾತುಕೋಳಿಯ ಹುಡುಗಿ ಬೆಟ್ಟವಿಳಿದು ನಡೆದು ಬರುತ್ತಿರುವುದು ಚಂದ್ರನ ಬೆಳಕಿನಲ್ಲಿ ಕಾಣಿಸಿತು. ಈಗ ಅವಳ ಕೈಯಲ್ಲಿ ಕೋಲಿರಲಿಲ್ಲ. "ಈ ಮಾಟಗಾತಿಯನ್ನು ಹಿಡಿದರೆ ಮುದುಕಿಯ ಸುಳಿವು ಸಿಗುತ್ತದೆ" ಎಂದುಕೊಂಡ ಯುವರಾಜ. ಆದರೆ ಅವಳು ತೊರೆಯ ಬಳಿಬಂದು ಮುಖವಾಡ ತೆಗೆದಾಗ ಅವನಿಗೆ ತುಂಬ ಆಶ್ಚರ್ಯವಾಯಿತು. ಇಂಥ ಸುಂದರಿಯನ್ನು ಕಂಡೇ ಇಲ್ಲ ಅನ್ನಿಸಿತು. ಅವನು ಉಸಿರಾಡುವುದನ್ನೂ ಮರೆತ. ಕತ್ತು ಚಾಚಿ, ಮುಂದೆ ಬಗ್ಗಿ ಅವಳನ್ನೆ ನೋಡತೊಡಗಿದ. ಅವನು ಕುಳಿತಿದ್ದ ರಂಬೆ ಭಾರ ತಾಳಲಾರದೆ ಬಿರುಕು ಬಿಟ್ಟು ಸದ್ದು ಮಾಡಿತು. ಹುಡುಗಿ ತಕ್ಷಣವೆ ಕಾಡಿನ ಮರಗಳ ನೆರಳಿನಲ್ಲಿ ಮರೆಯಾಗಿಬಿಟ್ಟಳು. ಅವನ ಕಣ್ಣಿಗೆ ಮತ್ತೆ ಕಾಣಲೇ ಇಲ್ಲ.

ಬೇಗ ಬೇಗ ಮರದಿಂದಿಳಿದು ಅವಳನ್ನು ಹಿಂಬಾಲಿಸಿಕೊಂಡು ಹೊರಟ. ಬಹಳ ದೂರ ನಡೆದ ಮೇಲೆ ಯಾರೋ ಇಬ್ಬರು ಹುಲ್ಲುಗಾವಲಿನಲ್ಲಿ ನಡೆಯುತ್ತಿರುವುದು ಕಾಣಿಸಿತು. ಹತ್ತಿರ ಹೋಗಿ ನೋಡಿದರೆ, ಅವರು ರಾಜ-ರಾಣಿ! ಅವರು ದೂರದಲ್ಲಿ ಗುಡಿಸಲ ಬೆಳಕು ಕಂಡು ಅತ್ತಕಡೆಗೆ ಹೊರಟಿದ್ದರು. ಯುವರಾಜನೂ ಅವರೊಡನೆ ಸೇರಿದ. ತೊರೆಯ ಬಳಿ ಕಂಡ ಹುಡುಗಿಯ ಬಗ್ಗೆ ಅವರಿಗೆ ತಿಳಿಸಿದ. ಕಳೆದುಹೋದ ತಮ್ಮ ಮಗಳನ್ನೆ ಅವನು ನೋಡಿದ್ದಾನೆ ಎಂದು ಅವರಿಗೆ ತಿಳಿಯಿತು. ತುಂಬ ಸಂತೋಷದಿಂದ ಅವರು ಗುಡಿಸಲತ್ತ ನಡೆದರು. ಅಲ್ಲಿ ಬಾತುಕೋಳಿಗಳ ದೊಡ್ಡ ಹಿಂಡು ಇತ್ತು. ತಲೆಗಳನ್ನು ರೆಕ್ಕೆಗಳ ನಡುವೆ ಸಿಕ್ಕಿಸಿಕೊಂಡು ಬಾತುಗಳು ನಿದ್ದೆಮಾಡುತ್ತಿದ್ದವು. ರಾಜ, ರಾಣಿ ಮತ್ತು ಯುವರಾಜ ಕಿಟಕಿಯ ಬಳಿ ಹೋಗಿ ಇಣುಕಿ ನೋಡಿದರು. ಮುದುಕಿ ತನ್ನ ಪಾಡಿಗೆ ತಾನು ನೂಲುತ್ತಿದ್ದಳು. ಅವರತ್ತ ಅವಳು ನೋಡಲೇ ಇಲ್ಲ. ಯಾರೋ ದೇವತೆಗಳು ವಾಸವಾಗಿರುವ ಮನೆಯೋ ಎಂಬಂತೆ ಕೋಣೆ ತುಂಬ ಸ್ವಚ್ಛವಾಗಿತ್ತು. ಸ್ವಲ್ಪ ಹೊತ್ತು ಸುಮ್ಮನೆ ನಿಂತಿದ್ದು, ಕೊನೆಗೆ ಧೈರ್ಯ ತಂದುಕೊಂಡು ಕಿಟಕಿಯ ಮೇಲೆ

ಮೆಲ್ಲನೆ ಬಡಿದರು. ಮುದುಕಿ ಮೆಲ್ಲನೆ ಮೇಲೆದ್ದಳು. ಅವರತ್ತ ಕರುಣೆಯಿಂದ ನೋಡಿದಳು. ಅವರು ಬರುವುದು ತನಗೆ ತಿಳಿದಿತ್ತು ಎನ್ನುಂತೆ "ಒಳಗೆ ಬನ್ನಿ, ನೀವು ಯಾರೆಂದು ನನಗೆ ಗೊತ್ತು" ಎಂದಳು.


"ನಿಮ್ಮ ಮಗಳನ್ನು ಕಾಡಿಗೆ ಅಟ್ಟಿದಿರಿ. ಅದಕ್ಕೇ ನೀವು ಇವತ್ತು ಇಷ್ಟು ಕಷ್ಟಪಟ್ಟು ಇಲ್ಲಿಗೆ ಬರಬೇಕಾಯಿತು. ಅವಳು ಸುಂದರಿ, ಪ್ರೀತಿ ತುಂಬಿದ ಮನಸ್ಸಿನವಳು. ಅವಳಿಗೇನೂ ಕೆಡುಕು ಆಗಿಲ್ಲ. ಮೂರು ವರ್ಷದಿಂದ ಅವಳು ನನ್ನ ಬಾತುಕೋಳಿಗಳನ್ನು ಸಾಕಿದ್ದಾಳೆ. ಕೆಡುಕೆಂದರೇನೆಂದು ಅವಳಿಗೆ ತಿಳಿದಿಲ್ಲ. ಅವಳ ಹೃದಯ ಶುದ್ಧವಾಗಿದೆ, ನಿಷ್ಕಳಂಕವಾಗಿದೆ. ಆದರೆ ನೀವು ಮಾತ್ರ ನ್ಯಾಯವಾಗಿಯೇ ಕಷ್ಟ, ದು:ಖ ಅನುಭವಿಸಿದಿರಿ" ಎಂದಳು ಮುದುಕಿ. ಆಮೇಲೆ ಕೋಣೆಯ ಬಾಗಿಲ ಬಳಿ ಹೋಗಿ ರಾಜಕುಮಾರಿಯನ್ನು ಕರೆದಳು. ಬಂಗಾರದ ಕೇಶರಾಶಿಯ, ಹೊಳೆಯುವ ಕಣ್ಣುಗಳ, ರೇಶಿಮೆ ಉಡುಪು ತೊಟ್ಟ ರಾಜಕುಮಾರಿ ಬಂದಾಗ ದೇವತೆಯೇ ಬಂದಂತಾಯಿತು.

ರಾಜಕುಮಾರಿ ತಂದೆ ತಾಯಿಯರನ್ನು ಅಪ್ಪಿ ಮುದ್ದಿಟ್ಟಳು. ಅವರ ಕಣ್ಣಿನಲ್ಲಿ ಸಂತೋಷದ ಕಂಬನಿ ತುಂಬಿದವು. ಯುವರಾಜ ಅಲ್ಲೆ ನಿಂತಿರುವುದನ್ನು ಕಂಡು ರಾಜಕುಮಾರಿ ನಾಚಿದಳು. ಅವಳ ಮುಖ ಗುಲಾಬಿಯಂತೆ ಕೆಂಪಾಯಿತು. ಏನು ಮಾಡಬೇಕೆಂದು ತಿಳಿಯದೆ ಸುಮ್ಮನೆ ನಿಂತಳು. ಆಗ ರಾಜ "ಪ್ರೀತಿಯ ಮಗಳೇ! ನನ್ನ ರಾಜ್ಯವನ್ನು ಈಗಾಗಲೇ ಹಂಚಿಬಿಟ್ಟಿದ್ದೇನೆ. ನಿನಗೇನು ಕೊಡಲಿ?" ಎಂದು ಕೇಳಿದನು.

ಆಗ ಮುದುಕಿ "ನೀವು ಅವಳಿಗೇನೂ ಕೊಡಬೇಕಾಗಿಲ್ಲ! ನಾನು ಅವಳಿಗೆ ವರವನ್ನು ಕೊಟ್ಟಿದ್ದೇನೆ. ಅದರಿಂದಲೇ ಅವಳ ಕಣ್ಣೀರು ಮುತ್ತು ರತ್ನಗಳಾಗುವುದು. ಅವು ಸಾಗರದ ಆಳದ ಮುತ್ತುಗಳಿಗಿಂತ ಬೆಲೆಯುಳ್ಳವು. ನಿನ್ನ ಇಡೀ ರಾಜ್ಯ, ಅದಕ್ಕೆ ಸಮನಾಗಲಾರದು. ಅವಳು ಮಾಡಿದ ಸೇವೆಗಾಗಿ ಈ ಮನೆಯನ್ನು ಅವಳಿಗೆ ಕೊಡುತ್ತೇನೆ" ಎಂದು ಹೇಳಿ ಗೋಡೆಗಳ ಮೇಲೆ ಮೆಲ್ಲನೆ ಬಡಿದು ಅದೃಶ್ಯಳಾದಳು. ಕೂಡಲೆ ಆ ಗುಡಿಸಲು ದೊಡ್ಡ ಅರಮನೆಯಾಯಿತು. ಅವರು ನಿಂತಿದ್ದ ಜಾಗ ದೊಡ್ಡ ಹಜಾರವಾಗಿ ಅದರ ನಡುವೆ ರಾಜಕುಮಾರಿಗಾಗಿ ದೊಡ್ಡ ಮೇಜು ಸಿದ್ಧವಾಗಿತ್ತು. ನೂರಾರು ಸೇವಕರು ಅವಳ ಸೇವೆಗಾಗಿ ಸಿದ್ಧವಾಗಿ ನಿಂತಿದ್ದರು. ರಾಜಕುಮಾರಿ ಯುವರಾಜನನ್ನು ಮದುವೆಯಾಗಿ ಅದೇ ಅರಮನೆಯಲ್ಲಿ ಬಹುಕಾಲ ಸುಖವಾಗಿದ್ದಳು. ರಾಜಕುಮಾರಿ ಬಹುಕಾಲ ಸಾಕಿದ ಬಾತುಕೋಳಿಗಳಿಗೆ ಮುದುಕಿಯೇ ಮನುಷ್ಯರೂಪ ಕೊಟ್ಟಿರಬಹುದು. ಅವರೆಲ್ಲ ರಾಜಕುಮಾರಿಯ ಸೇವಕರಾದರು. ಇದುವರೆಗೂ ಮೂರು ವರ್ಷಕಾಲ ರಾಜಕುಮಾರಿಯನ್ನು ಕಾಪಾಡಿದವಳು ಮಾಟಗಾತಿಯಲ್ಲ, ದೇವತೆ ಎಂದು ಎಲ್ಲರಿಗೂ ತಿಳಿಯಿತು. ರಾಜಕುಮಾರಿ ಹುಟ್ಟಿದಾಗ ಅವಳ ಕಣ್ಣೀರು ಮುತ್ತು ರತ್ನಗಳಾಗಲಿ ಎಂದು ಹರಸಿದ್ದವಳು ಅವಳೇ ಎಂದೂ ತಿಳಿಯಿತು.

ಆದರೆ ಈಗ ಇಂಥ ಘಟನೆಗಳು ನಡೆಯುವುದಿಲ್ಲ. ನಡೆದಿದ್ದರೆ ಬಡವರೆಲ್ಲ ಶ್ರೀಮಂತರಾಗುತ್ತಿದ್ದರು. ಅಲ್ಲವೇ?

೨೮. ಪುಟ್ಟ ಹಿಮಶ್ವೇತೆ



ಬಹಳ ವರ್ಷಗಳ ಹಿಂದೆ, ಚಳಿಗಾಲದ ಒಂದು ದಿನ, ಮಂಜಿನ ಪಕಳೆಗಳು ಉದುರುತ್ತಿದ್ದವು. ಮೋಡದ ರೆಕ್ಕೆಗಳು ಉದುರುವಂತೆ ಕಾಣುತ್ತಿದ್ದವು. ಆಗ ಒಬ್ಬ ರಾಣಿ ಅರಮನೆಯ ಕಿಟಕಿಯ ಹತ್ತಿರ ಕುಳಿತುಕೊಂಡು ಗಂಡನ ಅಂಗಿಗಳನ್ನು ಹೊಲಿಯುತ್ತಿದ್ದಳು. ಕಿಟಕಿಯ ಚೌಕಟ್ಟು ಸುಂದರ ಕಪ್ಪು ಮರದ್ದಾಗಿತ್ತು. ಅವಳು ಅಂಗಿಯನ್ನು ಹೊಲಿಯುತ್ತಾ ಕಿಟಕಿಯ ಹೊರಗೆ ಮಂಜನ್ನು ನೋಡುತ್ತಿದ್ದಳು. ಆಗ ಕೈ ತಪ್ಪಿ ಸೂಜಿಯಿಂದ ಬೆರಳಿಗೆ ಚುಚ್ಚಿಕೊಂಡಳು. ಮೂರು ಹನಿ ರಕ್ತ ಹಿಮದ ಮೇಲೆ ಬಿದ್ದಿತು. ಅಚ್ಚ ಬಿಳಿಯ ಮಂಜಿನ ಮೇಲೆ ರಕ್ತದ ಕಡು ಕೆಂಪು ಬಣ್ಣ ಚೆನ್ನಾಗಿ ಕಾಣುತ್ತಿತ್ತು. ಅವಳು ತನ್ನಲ್ಲೇ ಯೋಚಿಸಿದಳು, "ಈ ಹಿಮದಷ್ಟು ಬೆಳ್ಳನೆಯ, ರಕ್ತದಷ್ಟು ಕೆಂಪಗಿರುವ, ಮರದ ಚೌಕಟ್ಟಿನಷ್ಟು ಕಪ್ಪಗಿರುವ ಮಗು ನನಗಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು" ಎಂದು ಅಂದುಕೊಂಡಳು. ಹಾಗೆ ಅಂದುಕೊಂಡ ಸ್ವಲ್ಪ ದಿನಗಳಲ್ಲೆ ಅವಳಿಗೆ ಒಬ್ಬ ಮಗಳು ಹುಟ್ಟಿದಳು. ಆ ಮಗು ಹಿಮದಷ್ಟು ಬೆಳ್ಳಗೆ, ರಕ್ತದಷ್ಟು ಕೆಂಪಗೆ, ಕಪ್ಪು ಮರದಷ್ಟು ಕಪ್ಪನೆ ಕೂದಲನ್ನು ಹೊಂದಿದ್ದು ಅತ್ಯಂತ ಸುಂದರವಾಗಿತ್ತು. ಆದ್ದರಿಂದ ಅವಳಿಗೆ ಹಿಮಶ್ವೇತೆ ಎಂದು ಕರೆದರು. ಆ ಮಗು ಹುಟ್ಟಿದ ಕೂಡಲೆ ಅದರ ತಾಯಿ ಸತ್ತುಹೋದಳು.

ಹೀಗೆ ಒಂದು ವರ್ಷ ಕಳೆಯಿತು. ರಾಜ ಇನ್ನೊಬ್ಬಳನ್ನು ಮದುವೆ ಆದನು. ಅವಳು ಕೂಡ ತುಂಬ ಸುಂದರವಾಗಿದ್ದಳು. ಅವಳಿಗೆ ತನ್ನ ಸೌಂದರ್ಯದ ಬಗ್ಗೆ ಜಂಬವಿತ್ತು. ಹೆಮ್ಮೆ ಇತ್ತು. ಅವಳಿಗಿಂತ ಬೇರೆ ಯಾರೂ ಸುಂದರವಾಗಿರುವುದನ್ನು ಸಹಿಸುತ್ತಿರಲಿಲ್ಲ. ಅವಳ ಹತ್ತಿರ ಒಂದು ವಿಚಿತ್ರವಾದ ಕನ್ನಡಿ ಇತ್ತು. ಅವಳು ಅದರ ಮುಂದೆ ನಿಂತು,

"ಓಹೋ ಕನ್ನಡಿ, ಗೋಡೆ ಮೇಲಿನ ಕನ್ನಡಿ,
ನಮ್ಮಲ್ಲಿ ಎಲ್ಲರಿಗಿಂತ ಸುಂದರಿ ಯಾರು?" ಎಂದು ಕೇಳುತ್ತಿದ್ದಳು.

ಅದು, "ನೀನೇ ಅತ್ಯಂತ ಸುಂದರಿ, ಮಹಾರಾಣಿ" ಎಂದು ಉತ್ತರಿಸುತ್ತಿತ್ತು.

ಆಗ ಅವಳಿಗೆ ಆನಂದವಾಗುತ್ತಿತ್ತು. ಏಕೆಂದರೆ ಕನ್ನಡಿ ಯಾವಾಗಲೂ ನಿಜವನ್ನೇ ಹೇಳುತ್ತದೆ ಎಂದು ಅವಳಿಗೆ ಗೊತ್ತಿತ್ತು. ಪುಟ್ಟ ಹಿಮಶ್ವೇತೆ ಮೆಲ್ಲಗೆ ಬೆಳೆದಳು. ದಿನದಿನಕ್ಕೂ ಹೆಚ್ಚು ಹೆಚ್ಚು ಸುಂದರವಾದಳು. ಅವಳು ಏಳು ವರ್ಷದವಳಿದ್ದಾಗ ಅವಳ ಬಣ್ಣ ಮಧ್ಯಾಹ್ನದಷ್ಟು ಪ್ರಕಾಶಮಾನವಾಗಿತ್ತು. ರಾಣಿಗಿಂತಲೂ ಹೆಚ್ಚು ಸುಂದರವಾಗಿದ್ದಳು. ಒಂದು ದಿನ ರಾಣಿ ಕನ್ನಡಿಯಲ್ಲಿ ತನ್ನ ಸೌಂದರ್ಯದ ಬಗ್ಗೆ ,

"ಓಹೊ ಕನ್ನಡಿ, ಗೋಡೆ ಮೇಲಿನ ಕನ್ನಡಿ,
ನಮ್ಮಲ್ಲಿ ಎಲ್ಲರಿಗಿಂತ ಸುಂದರಿ ಯಾರು?" ಎಂದು ಕೇಳಿದಾಗ

"ನೀನು ಅತ್ಯಂತ ಸುಂದರ ರಾಣಿ ಆಗಿದ್ದೆ ,
ಈಗ ನಿನಗಿಂತಲೂ ಹಿಮಶ್ವೇತೆ ಸುಂದರವಾಗಿ ನನಗೆ ಕಾಣುತ್ತಾಳೆ" ಎಂದು ಉತ್ತರಿಸಿತು.

ಅದರ ಉತ್ತರದಿಂದ ರಾಣಿ ಬಿಳಿಚಿಕೊಂಡಳು. ಹೊಟ್ಟೆಕಿಚ್ಚಿನಿಂದ ಅವಳ ಬಣ್ಣ ಹಳದಿ ಆಯಿತು. ಆ ಕ್ಷಣದಿಂದ ಹಿಮಶ್ವೇತೆಯನ್ನು ನೋಡಿದಾಗಲೆಲ್ಲ ಅವಳ ಹೃದಯ ಕಲ್ಲಾಗುತ್ತಿತ್ತು. ಅವತ್ತಿನಿಂದ ಅವಳನ್ನು ದ್ವೇಷಿಸತೊಡಗಿದಳು. ಅವಳ ಮತ್ಸರ ಮತ್ತು ಹೊಟ್ಟೆಕಿಚ್ಚು ಹೆಚ್ಚಾಗಿ ರಾತ್ರಿ ಹಗಲು ನಿದ್ದೆ ಮಾಡದಾದಳು. ಒಂದು ದಿನ ಒಬ್ಬ ಬೇಟೆಗಾರನನ್ನು ಕರೆದು, "ಆ ಮಗುವನ್ನು ಕಾಡಿಗೆ ಕರೆದುಕೊಂಡುಹೋಗಿ ಕೊಂದು ಹಾಕು. ಅವಳನ್ನು ಮತ್ತೆ ನಾನು ನೋಡಬಾರದು. ಅವಳನ್ನು ಕೊಂದು ಅದರ ಗುರುತಿಗೆ ಅವಳ ಹೃದಯ ಮತ್ತು ನಾಲಿಗೆಯನ್ನು ತೆಗೆದುಕೊಂಡು ಬಾ" ಎಂದು ಹೇಳಿದಳು.

ಬೇಟೆಗಾರ ರಾಣಿ ಹೇಳಿದಂತೆ ಆ ಪುಟ್ಟ ಹುಡುಗಿಯನ್ನು ಕರೆದುಕೊಂಡು ಹೋದನು. ಅವನು ಅವಳನ್ನು ಕೊಲ್ಲಲು ಕತ್ತಿಯನ್ನು ಹೊರಗೆ ತೆಗೆದಾಗ ಅವಳು ಅಳಹತ್ತಿದಳು. "ಅಯ್ಯೋ ಬೇಟೆಗಾರ ನನ್ನನ್ನು ಉಳಿಸು ನಾನು ಕಾಡಿನಲ್ಲಿ ಎಲ್ಲಾದರೂ ಹೋಗಿ ಬದುಕುತ್ತೇನೆ. ಮತ್ತೆ ಮನೆಗೆ ಬರುವುದೇ ಇಲ್ಲ. ದಯವಿಟ್ಟು ಕಾಪಾಡು" ಎಂದು ಅವನನ್ನು ಬೇಡಿದಳು.

ಅವಳ ಮಾತಿನಿಂದ ಬೇಟೆಗಾರನ ಹೃದಯ ಕರಗಿತು. ಅವಳ ಸೌಂದರ್ಯ ಅವನಲ್ಲಿ ಕರುಣೆ ಹುಟ್ಟಿಸಿತು. "ಇಲ್ಲಿಂದ ಓಡಿಹೋಗು ಮಗು" ಎಂದನು. ಮತ್ತೆ ತನ್ನಲ್ಲೇ ಯೋಚಿಸಿ "ಕಾಡು ಮೃಗಗಳು ನಿನ್ನನ್ನು ನುಂಗಿಬಿಡುತ್ತವಲ್ಲ" ಎಂದನು. ಆದರೂ, ಅವಳ ಸಾವು ಅವನ ಕೈಯಲ್ಲಿ ಇಲ್ಲ ಎಂದು ಅಂದುಕೊಂಡು ಮನಸ್ಸನ್ನು ಗಟ್ಟಿಮಾಡಿಕೊಂಡನು. ಅದೇ ವೇಳೆಗೆ ಕರಡಿ ಮರಿ ಕೂಗುತ್ತಾ ಅಲ್ಲಿಗೆ ಬಂದಿತು. ಅದನ್ನು ನೋಡಿದ ತಕ್ಷಣ ಬೇಟೆಗಾರ ಅದನ್ನು ಹಿಡಿದು ಕೊಂದು ಹಾಕಿದನು. ಅದರ ನಾಲಿಗೆ ಮತ್ತು ಹೃದಯವನ್ನು ಗುರುತಿಗೆ ಇಟ್ಟುಕೊಂಡನು. ನಂತರ ತಾನು ಮಾಡಿದ ಕೆಲಸದ ಗುರುತಿಗೆ ಅವುಗಳನ್ನೆ ರಾಣಿಗೆ ತೋರಿಸಿದನು.

ಪಾಪ ಹಿಮಶ್ವೇತೆ ತಾಯಿ ಇಲ್ಲದ ತಬ್ಬಲಿ ಆದಳು. ಒಬ್ಬಳೆ ತುಂಬಾ ಹೊತ್ತು ಅತ್ತಳು. ಆಮೇಲೆ ಸುಧಾರಿಸಿಕೊಂಡಳು. ಅನೇಕ ವಿಧದ ಮರಗಳನ್ನು ನೋಡಿ ಆಶ್ಚರ್ಯಪಟ್ಟಳು. ಅವಳಿಗೆ ಯಾವ ಕಡೆ, ಯಾವ ದಾರಿ ಹಿಡಿಯಬೇಕು ಎಂದು ಗೊತ್ತಾಗಲಿಲ್ಲ. ಹೆದರಿಕೊಂಡು ಓಡತೊಡಗಿದಳು. ಕಲ್ಲು ,

ಮುಳ್ಳುಗಳ ಮೇಲೆ ಓಡಿದಳು. ಅವಳು ಹಾಗೆ ಓಡುವಾಗ ಅನೇಕ ಕಾಡುಮೃಗಗಳು ಹಾರಿಕೊಂಡು ಎದ್ದು ನಿಂತವು. ಆದರೆ ಅವಳಿಗೆ ಯಾವ ಅಪಾಯವನ್ನೂ ಮಾಡಲಿಲ್ಲ. ಅವಳು ಕಾಲು ನೋವಾಗುವವರೆಗೆ ಓಡಿದಳು. ಕೊನೆಗೆ ಅವಳಿಂದ ಓಡಲು ಆಗುವುದೇ ಇಲ್ಲ ಅನಿಸಿತು. ಕತ್ತಲಾಯಿತು. ಹತ್ತಿರದಲ್ಲೆ ಒಂದು ಗುಡಿಸಲು ಕಾಣಿಸಿತು. ರಾತ್ರಿ ಅಲ್ಲೆ ಮಲಗಿದರಾಯಿತು ಎಂದುಕೊಂಡು ಒಳಗೆ ಹೋದಳು.

ಆ ಗುಡಿಸಲಲ್ಲಿ ಎಲ್ಲ ವಸ್ತುಗಳೂ ಚಿಕ್ಕಚಿಕ್ಕವು ಆಗಿದ್ದವು. ಆದರೆ ಪ್ರತಿಯೊಂದನ್ನೂ ಅಚ್ಚುಕಟ್ಟಾಗಿ, ಸುಂದರವಾಗಿ ಜೋಡಿಸಿಡಲಾಗಿತ್ತು. ಹಜಾರದ ಮಧ್ಯೆ ಒಂದು ಮೇಜಿತ್ತು. ಅದರ ಮೇಲೆ ಬಿಳಿ ಬಟ್ಟೆಯನ್ನು ಹರಡಿದ್ದರು. ಅದರ ಮೇಲೆ ಏಳು ಚಿಕ್ಕ ತಟ್ಟೆಗಳು. ಪ್ರತಿತಟ್ಟೆಯಲ್ಲಿ ಚಮಚ ಮತ್ತು ಚಾಕುಗಳು ಇದ್ದವು. ಅವುಗಳ ಪಕ್ಕದಲ್ಲಿ ಏಳು ಪುಟ್ಟ ಗಿಂಡಿಗಳಿದ್ದವು. ಗೋಡೆಯ ಪಕ್ಕದಲ್ಲಿ ಏಳು ಪುಟ್ಟ ಹಾಸಿಗೆಗಳನ್ನು ಸಾಲಾಗಿ ಹಾಸಿದ್ದರು. ಪ್ರತಿಯೊಂದು ಹಾಸಿಗೆಯ ಮೇಲೆ ಪರಿಶುದ್ಧವಾದ ಬಿಳಿ ಬಟ್ಟೆಯನ್ನು ಹರಡಿದ್ದರು. ಹಿಮಶ್ವೇತೆಗೆ ತುಂಬ ಹಸಿವು ಮತ್ತು ಬಾಯಾರಿಕೆ ಆಗಿತ್ತು. ಪ್ರತಿ ತಟ್ಟೆಯಿಂದ ಒಂದೊಂದು ತುತ್ತು ಉಂಡಳು. ಪ್ರತಿ ಗಿಂಡಿಯಿಂದ ಒಂದೊಂದು ಗುಟುಕು ಮದ್ಯವನ್ನು ಕುಡಿದಳು. ಒಂದೇ ತಟ್ಟೆಯಲ್ಲಿ ಪೂರ್ತಿ ಊಟ ಮಾಡಿ ಯಾರೋ ಒಬ್ಬರ ಊಟವನ್ನು ಕಸಿದುಕೊಳ್ಳಲು ಅವಳ ಮನಸ್ಸು ಒಪ್ಪಲಿಲ್ಲ. ಊಟವಾದ ಮೇಲೆ ಅವಳು ಮಲಗಲು ಹೋದಳು. ಮೊದಲ ಹಾಸಿಗೆ ಅವಳಿಗೆ ಸರಿ ಹೋಗಲಿಲ್ಲ. ಇನ್ನೊಂದರಲ್ಲಿ ಮಲಗಲು ಹೋದಾಗ ಅದು ತುಂಬಾ ಉದ್ದವಾಗಿತ್ತು. ಇನ್ನೊಂದು ಚಿಕ್ಕದಾಗಿತ್ತು. ಮತ್ತೊಂದು ಗಟ್ಟಿಯಾಗಿತ್ತು. ಏಳನೆ ಹಾಸಿಗೆ ಅವಳಿಗೆ ಸರಿಹೋಯಿತು. ಮಲಗುವ ಮುಂಚೆ ದೇವರಿಗೆ ಪ್ರಾರ್ಥನೆ ಮಾಡಿದಳು. "ನೀನೇ ಕಾಪಾಡಪ್ಪ" ಎಂದು ಹೇಳಿ ಕೊನೆಯ ಹಾಸಿಗೆಯಲ್ಲಿ ಮಲಗಿಬಿಟ್ಟಳು.

ರಾತ್ರಿ ಬಹಳ ಹೊತ್ತಾದ ಮೇಲೆ ಮನೆಯ ಯಜಮಾನರುಗಳು ಬಂದರು. ಅವರು ಏಳು ಜನ ಗುಜ್ಜಾರಿಗಳಾಗಿದ್ದರು. ಅವರು ಪರ್ವತಗಳಲ್ಲಿ ಆಳವಾಗಿ ತೋಡಿ ಅದಿರು ಹುಡುಕುವ ಕೆಲಸ ಮಾಡುತ್ತಿದ್ದರು. ಒಳಗೆ ಬಂದವರೆ ಏಳು ದೀಪಗಳನ್ನು ಹಚ್ಚಿದರು. ಆ ಬೆಳಕಿನಲ್ಲಿ ಎಲ್ಲವನ್ನೂ ಗಮನಿಸಿದರು. ಅಲ್ಲಿರುವ ವಸ್ತುಗಳು ಅವರು ಬಿಟ್ಟುಹೋದಾಗ ಹೇಗಿತ್ತೊ ಹಾಗೆ ಇರಲಿಲ್ಲ. ಯಾರೊ ಒಳಗಿದ್ದಾರೆ ಎಂದು ಅವರಿಗನಿಸಿತು. ಮೊದಲನೆಯವನು "ನನ್ನ ಕುರ್ಚಿಯ ಮೇಲೆ ಯಾರು ಕುಳಿತಿದ್ದರು?" ಎರಡನೆಯವನು "ಯಾರೊ ನನ್ನ ತಟ್ಟೆಯಿಂದ ಸ್ವಲ್ಪ ತಿಂದಿದ್ದಾರೆ?" ಮೂರನೆಯವನು "ನನ್ನ ಬ್ರೆಡ್ಡನ್ನು ಯಾರು ಮುರಿದು ತಿಂದದ್ದು?" ನಾಲ್ಕನೆಯವನು "ಯಾರು ನನ್ನ ಸಾರು ಕುಡಿದಿರುವುದು?" ಐದನೆಯವನು "ಯಾರು ನನ್ನ ಚುಚ್ಚುವ ಚಮಚ ಬಳಸಿರುವುದು?" ಏಳನೆಯವನು "ಯಾರು ನನ್ನ ಲೋಟದಿಂದ ಕುಡಿದಿರುವುದು?" ಎಂದು ತಮ್ಮ ತಮ್ಮಲ್ಲಿ ಮಾತಾಡಿಕೊಂಡರು. ಮತ್ತೆ ಹುಡುಕಲು ಶುರು ಮಾಡಿದರು. ಮೊದಲನೆಯವನು "ನನ್ನ ಹಾಸಿಗೆ ಸುಕ್ಕಾಗಿದೆ, ಯಾರು ಮಲಗಿರಬಹುದು?" ಎಂದನು. ಅವನ ಮಾತನ್ನು ಕೇಳಿಸಿಕೊಂಡು ಉಳಿದವರು ಬಂದರು. ತಮ್ಮ ಹಾಸಿಗೆಗಳನ್ನು ನೋಡಿಕೊಂಡು ಕೂಗಿದರು, "ಯಾರೋ ಹಾಸಿಗೆಯಲ್ಲಿ ಮಲಗಿದ್ದಾರೆ!" ಎಂದರು. ಏಳನೆಯವನು ಓಡಿಹೋಗಿ ತನ್ನ ಹಾಸಿಗೆಯಲ್ಲಿ ಯಾರೋ ಮಲಗಿರುವುದನ್ನು ನೋಡಿದನು. ತನ್ನ ಸಂಗಡಿಗರನ್ನು ಕೂಗಿ ಕರೆದನು. ಅವರೆಲ್ಲ ತಮ್ಮ ದೀಪಗಳನ್ನು ಹಿಡಿದುಕೊಂಡು ಬಂದು, ಆ ಬಾಲಕಿಯನ್ನು ನೋಡಿ ಆಶ್ಚರ್ಯದಿಂದ ಕೂಗಿದರು.

"ಆಹಾ, ಆಹಾ! ದೇವರೆ, ಅವಳು ಎಷ್ಟು ಸುಂದರವಾಗಿರುವಳಲ್ಲ!" ಎಂದು ತುಂಬ ಸಂತೋಷಪಟ್ಟರು. ಅವಳನ್ನು ಎಬ್ಬಿಸಲಿಲ್ಲ. ಅವಳು ಏಳನೆಯವನ ಹಾಸಿಗೆಯಲ್ಲಿ ಮಲಗಿದ್ದುದರಿಂದ ಅವನು ತನ್ನ ಸಂಗಡಿಗರ ಹಾಸಿಗೆಗಳಲ್ಲಿ ಒಂದೊಂದು ಗಂಟೆಯಂತೆ ಮಲಗಿ, ರಾತ್ರಿಯನ್ನು ಕಳೆದನು.

ಬೆಳಕು ಹರಿಯಿತು. ಹಿಮಶ್ವೇತೆ ಎದ್ದಳು. ಅವಳು ಆ ಏಳು ಗುಜ್ಜಾರಿಗಳನ್ನು ನೋಡಿ ತುಂಬ ಹೆದರಿದಳು. ಆದರೆ ಅವರು ಸ್ನೇಹದಿಂದ ಅವಳ ಹೆಸರನ್ನು ಕೇಳಿದರು. ಅವಳು ತನ್ನ ಹೆಸರು ಹಿಮಶ್ವೇತೆ ಎಂದು ಹೇಳಿದಳು. "ನೀನು ಯಾಕೆ ನಮ್ಮ ಗುಡಿಸಲಿಗೆ ಬಂದೆ?" ಎಂದು ಅವರು ಕೇಳಿದರು. ಆಗ ಅವಳು ತನ್ನ ಕತೆಯನ್ನು ಹೇಳಿದಳು. ತನ್ನ ಮಲತಾಯಿ ಅವಳನ್ನು ಕೊಲ್ಲಬೇಕೆಂದು ಬಯಸಿದ್ದು, ಬೇಟೆಗಾರನ ಜೊತೆ ಕಳಿಸಿದ್ದು, ಅವನು ಕರುಣೆಯಿಂದ ಅವಳ ಜೀವ ಉಳಿಸಿದ್ದು, ಅವಳು ಇಡೀ ದಿನವೆಲ್ಲ ಅಲೆದಾಡಿ ಕೊನೆಗೆ ಅವರ ಮನೆಸಿಕ್ಕಿದ್ದು ಎಲ್ಲ ವಿವರಿಸಿದಳು. ಅವಳು ತನ್ನ ಕತೆಯನ್ನೆಲ್ಲ ಮುಗಿಸಿದ ಮೇಲೆ ಆ ಕುಳ್ಳರು "ನೀನು ಮನೆಯ ಕೆಲಸವನ್ನು ಮಾಡಿಕೊಂಡು ಇರುವೆಯಾ? ಅಡುಗೆ ಮಾಡುವುದು, ಹಾಸಿಗೆ ಸರಿಮಾಡಿ ಇಡುವುದು, ತೊಳೆಯುವುದು, ಹೊಲೆಯುವುದು ಮತ್ತು ನಮಗಾಗಿ ಹೆಣೆಯುವುದು, ಎಲ್ಲವನ್ನು ಸರಿಯಾದ ಜಾಗದಲ್ಲಿ ಜೋಡಿಸಿಡುವುದು, ಇವೆಲ್ಲ ಮಾಡಬೇಕು. ಹಾಗಾದರೆ ನಾವು ನಿನ್ನನ್ನು ಇಟ್ಟುಕೊಳ್ಳುತ್ತೇವೆ. ಅದಕ್ಕಾಗಿ ನೀನು ಏನೂ ಬಯಸಬಾರದು" ಎಂದು ಹೇಳಿದರು.

ಹಿಮಶ್ವೇತೆ "ಹೃತ್ಪೂರ್ವಕವಾಗಿ ಮಾಡುತ್ತೇನೆ" ಎಂದು ಉತ್ತರಿಸಿದಳು. ಹೀಗೆ, ಅವಳು ಅವರ ಜೊತೆಯಲ್ಲಿಯೇ ಉಳಿದಳು. ಮನೆಯನ್ನು ಚೆನ್ನಾಗಿ ಇಡುತ್ತಿದ್ದಳು. ಬೆಳಗಾದ ತಕ್ಷಣ ಆ ಗುಜ್ಜಾರಿಗಳು ಬಂಗಾರದ ಅದಿರಿಗಾಗಿ ಪರ್ವತಗಳನ್ನು ಅಗಿಯುತ್ತಿದ್ದರು. ರಾತ್ರಿ ಅವರು ಮನೆಗೆ ಬರುವಷ್ಟರಲ್ಲಿ ಅವರ ಊಟ ಸಿದ್ಧವಾಗಿರುತ್ತಿತ್ತು. ಗುಜ್ಜಾರಿಗಳು ಎಚ್ಚರಿಕೆಯ ಮಾತುಗಳನ್ನು ಹೇಳುತ್ತಿದ್ದರು. "ಹುಷಾರಾಗಿರು. ನೀನು ಇಲ್ಲಿರುವುದು ನಿನ್ನ ಮಲತಾಯಿಗೆ ಬಹಳ ಬೇಗ ತಿಳಿಯುತ್ತದೆ. ಆದ್ದರಿಂದ ಗುಡಿಸಲೊಳಗೆ ಯಾರನ್ನೂ ಬಿಡಬೇಡ" ಎಂದು ಹೇಳಿದರು.

ಆ ಕಡೆ ರಾಣಿ ತಾನು ತನ್ನ ಮಲಮಗಳ ಹೃದಯ ಮತ್ತು ನಾಲಿಗೆಯನ್ನು ತಿಂದುಬಿಟ್ಟಿದ್ದೇನೆ ಎಂದುಕೊಂಡಳು. ತನಗೆ ಪ್ರತಿಸ್ಪರ್ಧಿಗಳು ಯಾರೂ ಇಲ್ಲ ಅಂದುಕೊಂಡಳು. ತನ್ನ ಸೌಂದರ್ಯಕ್ಕೆ ಸರಿಸಾಟಿಯಾದವರು ಯಾರು ಇಲ್ಲ ಅಂದುಕೊಂಡು ಒಂದು ದಿನ ತನ್ನ ಕನ್ನಡಿಯ ಎದುರು ನಿಂತುಕೊಂಡಳು.

"ಕನ್ನಡಿ, ಕನ್ನಡಿ, ಗೋಡೆ ಮೇಲಿನ ಕನ್ನಡಿ,
ಎಲ್ಲರಿಗಿಂತ ಸುಂದರಿ ಯಾರಿದ್ದಾರೆ?" ಎಂದು ಕೇಳಿದಳು.

ಅದಕ್ಕೆ ಕನ್ನಡಿ "ನೀನೇ ಸುಂದರವಾಗಿದ್ದೆ, ಯುವರಾಣಿ,
ಹಿಮಶ್ವೇತೆ ಅತ್ಯಂತ ಸುಂದರಿ ಈಗ, ಎಂದು ನನಗನಿಸುತ್ತಿದೆ,
ಹಚ್ಚ ಹಸಿರು ಬಣ್ಣದ ದಟ್ಟ ಅಡವಿಯಲ್ಲಿ,

ಗುಜ್ಜಾರಿಗಳ ಜೊತೆಯಲ್ಲಿ ವಾಸವಾಗಿದ್ದಾಳೆ,
ಬೆಟ್ಟಗಳ ಮಧ್ಯೆ!" ಎಂದು ಉತ್ತರಿಸಿತು.

ಆ ಉತ್ತರದಿಂದ ಅವಳಿಗೆ ಗಾಬರಿ ಆಯಿತು. ಏಕೆಂದರೆ ಕನ್ನಡಿಯ ಹೇಳಿಕೆ ಯಾವಾಗಲೂ ನಿಜವಾಗಿರುತ್ತಿತ್ತು. ಬೇಟೆಗಾರ ತನಗೆ ಮೋಸ ಮಾಡಿರುವುದು ತಿಳಿಯಿತು. ಹಿಮಶ್ವೇತೆ ಇನ್ನೂ ಬದುಕಿದ್ದಾಳೆ ಎಂದು ತಿಳಿಯಿತು. ಅವಳಿಗೆ ಇಡೀ ಪ್ರಪಂಚದಲ್ಲಿ ತಾನೊಬ್ಬಳೆ ಸುಂದರಿಯಾಗಿರಬೇಕೆಂದು ಆಸೆ. ಹಿಮಶ್ವೇತೆಯ ಮೇಲಿನ ಹೊಟ್ಟೆಕಿಚ್ಚು ಜಾಸ್ತಿ ಆಯಿತು. ಹೇಗಾದರೂ ಮಾಡಿ ತನ್ನ ಉದ್ದೇಶವನ್ನು ಈಡೇರಿಸಿಕೊಳ್ಳಬೇಕೆಂದು ಯೋಚನೆ ಮಾಡೇ ಮಾಡಿದಳು. ಅವಳಿಗೆ ವಿಶ್ರಾಂತಿ ಎನ್ನುವುದು ಇಲ್ಲದಂತಾಯಿತು. ಕೊನೆಗೆ ಅವಳಿಗೆ ಒಂದು ಉಪಾಯ ಹೊಳೆಯಿತು. ಮುಖಕ್ಕೆ ಬಣ್ಣ ಹಚ್ಚಿಕೊಂಡಳು ಸಾಮಾನುಗಳನ್ನು ಹೊತ್ತು ಮಾರುವವಳಂತೆ ಬಟ್ಟೆ ಬದಲಿಸಿಕೊಂಡಳು. ಅವಳನ್ನು ಯಾರೂ ಗುರುತು ಹಿಡಿಯಲು ಆಗದಂತೆ ಮಾಡಿಕೊಂಡಳು. ಹೀಗೆ ಅವಳು ವೇಷ ಮರೆಸಿಕೊಂಡು, ಏಳು ಪರ್ವತಗಳನ್ನು ದಾಟಿಕೊಂಡು, ಆ ಏಳು ಗುಜ್ಜಾರಿಗಳು ವಾಸವಾಗಿದ್ದ ಗುಡಿಸಲಿಗೆ ಬಂದಳು. ಬಾಗಿಲು ಬಡಿದಳು. "ಸುಂದರ ವಸ್ತುಗಳು ಮಾರಾಟಕ್ಕಿವೆ, ಒಳ್ಳೆಯ ವಸ್ತುಗಳು ಮಾರಾಟಕ್ಕಿವೆ, ಬೇಕೇನಮ್ಮ" ಎಂದು ಕೂಗಿದಳು. ಹಿಮಶ್ವೇತೆ ಕಿಟಕಿಯಲ್ಲಿ ಇಣಕಿದಳು. ಶುಭ ದಿನವನ್ನು ಕೋರಿದಳು. "ಮಾರಲಿಕ್ಕೆ ಏನು ತಂದಿದ್ದೀಯಮ್ಮ?" ಎಂದು ಕೇಳಿದಳು. ಮುದುಕಿ "ಸುಂದರ ವಸ್ತುಗಳು, ಎಲ್ಲ ಬಣ್ಣದ ಒಳ್ಳೆಯ ವಸ್ತುಗಳು" ಎಂದು ಉತ್ತರಿಸಿದಳು. ನಂತರ ರೇಶಿಮೆದಾರದಲ್ಲಿ ಮಾಡಿದ ಎರಡು ಸರಗಳನ್ನು ಎತ್ತಿ ತೋರಿಸಿದಳು. ಹಿಮಶ್ವೇತೆ ಆ ಪ್ರಾಮಾಣಿಕ ಹೆಂಗಸನ್ನು ಒಳಗೆ ಕರೆದುಕೊಳ್ಳಬೇಕು ಎಂದು ಯೋಚಿಸಿದಳು. ಬಾಗಿಲ ಚಿಲಕ ತೆಗೆದಳು. ಚೌಕಾಶಿ ಮಾಡಿ ಒಂದು ಜೊತೆ ಸರವನ್ನು ಕೊಂಡಳು. "ಅದನ್ನು ಸುಮ್ಮನೆ ನೋಡಿದರೆ ಗೊತ್ತಾಗುವುದಿಲ್ಲ. ಬಾ ಅದನ್ನು ನಿನ್ನ ಕೊರಳಿಗೆ ಹಾಕುತ್ತೇನೆ" ಎಂದು ಆ ಮುದುಕಿ ಹೇಳಿದಳು. ಹಿಮಶ್ವೇತೆಗೆ ಸಂಶಯ ಬರಲಿಲ್ಲ. ಮುದುಕಿ ತನ್ನ ಕೊರಳಿಗೆ ಸರ ತೊಡಿಸಲು ಬಿಟ್ಟಳು. ಆಗ, ಆಕೆ ಆ ಸರವನ್ನು ಎಷ್ಟು ಬೇಗ ಹಾಕಿ ಬಿಗಿಯಾಗಿ ಎಳೆದಳೂ ಎಂದರೆ, ಹಿಮಶ್ವೇತೆಯ ಉಸಿರು ಹೋಗಿ ಸತ್ತವಳಂತೆ ಕೆಳಗೆ ಬಿದ್ದುಬಿಟ್ಟಳು. ರಾಣಿ "ಈಗ, ನಾನೇ ಎಲ್ಲರಿಗಿಂತ ಅತ್ಯಂತ ಸುಂದರಿ" ಎಂದು ಯೋಚಿಸುತ್ತಾ ಅವಸರದಿಂದ ಹೊರಟುಹೋದಳು.

ಅವಳು ಹೋದ ಸ್ವಲ್ಪ ಹೊತ್ತಿನಲ್ಲೇ ಏಳು ಗುಜ್ಜಾರಿಗಳು ಬಂದರು. ಅವರ ಪ್ರೀತಿಯ ಪುಟ್ಟ ಹುಡುಗಿ ನೆಲದ ಮೇಲೆ ಬಿದ್ದಿರುವುದನ್ನು ನೋಡಿ ತುಂಬ ಹೆದರಿಕೊಂಡರು. ಅವಳು ಕೈಕಾಲು ಆಡಿಸದೆ ಇರುವುದನ್ನು, ಉಸಿರಾಡದೆ ಇರುವುದನ್ನು ನೋಡಿದರು. ಅವಳನ್ನು ಮೇಲಕ್ಕೆತ್ತಿ ನೋಡಿದರು. ಅವಳ ಕೊರಳಿಗೆ ಬಿಗಿದಿದ್ದ ಸರವನ್ನು ಕತ್ತರಿಸಿದರು. ಕೂಡಲೆ ಅವಳು ಉಸಿರಾಡತೊಡಗಿದಳು. ಮೆಲ್ಲಗೆ ಚೇತರಿಸಿಕೊಂಡಳು. ಏನು ನಡೆಯಿತು ಎಂದು ಕೇಳಿ ತಿಳಿದುಕೊಂಡಮೇಲೆ, ಆ ಗುಜ್ಜಾರಿಗಳು "ಆ ಮಾರಾಟದ ಹೆಂಗಸು ಬೇರೆ ಯಾರು ಅಲ್ಲ. ನಿನ್ನ ದುಷ್ಟ ಮಲತಾಯಿ. ನಾವು ನಿನ್ನ ಜೊತೆಯಲ್ಲಿ ಇಲ್ಲದಿರುವಾಗ, ನೀನು ಎಚ್ಚರದಿಂದಿರಬೇಕು" ಎಂದು ಹೇಳಿದರು.

ರಾಣಿ ಅರಮನೆ ತಲುಪಿ, ಮಾಡಿದ ಮೊದಲ ಕೆಲಸವೆಂದರೆ ಕನ್ನಡಿ ಮುಂದೆ ನಿಂತು,

"ಓ, ಕನ್ನಡಿ, ಗೋಡೆ ಮೇಲಿನ ಕನ್ನಡಿ
ಈಗ ಎಲ್ಲರಿಗಿಂತ ಸುಂದರಿ ಯಾರು? ಹೇಳು" ಎಂದಳು.

ಅದೂ ಕೂಡ ಮೊದಲಿನಂತೆಯೆ ಉತ್ತರಿಸಿತು.

"ಯವರಾಣಿ, ನೀನು ಅತ್ಯಂತ ಸುಂದರಿ ಆಗಿದ್ದೆ,
ಆದರೆ, ಹಿಮಶ್ವೇತೆಯೆ ಹೆಚ್ಚು ಸುಂದರಿ ಆಗಿದ್ದಾಳೆ,
ದಟ್ಟ ಅಡವಿಯ ಮಧ್ಯೆ ಗುಜ್ಜಾರಿಗಳ ನಡುವೆ
ಬೆಟ್ಟಗಳ ತಪ್ಪಲಲ್ಲಿ ವಾಸವಾಗಿದ್ದಾಳೆ."

ಆ ಉತ್ತರದಿಂದ ಮತ್ತೆ ಅವಳು ಕೆರಳಿದಂತಾದಳು. ಏಕೆಂದರೆ ಕನ್ನಡಿಯ ಮಾತು ಯಾವಾಗಲೂ ನಿಜವಾಗಿರುತ್ತದೆ ಎಂದು ಅವಳಿಗೆ ತಿಳಿದಿತ್ತು. ಹಿಮಶ್ವೇತೆ ಇನ್ನೂ ಬದುಕಿರುವುದನ್ನು ತಿಳಿದು ತುಂಬಾ ಹೆದರಿದಳು. ರಕ್ತವೆಲ್ಲ ಹೃದಯಕ್ಕೆ ನುಗ್ಗಿದಂತಾಯಿತು. "ಈಗ ನಾನು ಶಾಶ್ವತವಾಗಿ ಅವಳು ನಾಶವಾಗುವ ಹಾಗೆ ಉಪಾಯ ಮಾಡಬೇಕು" ಎಂದು ತನ್ನಲ್ಲೆ ಹೇಳಿಕೊಂಡಳು. ಅದರಂತೆ ಒಂದು ವಿಷದ ಬಾಚಣಿಗೆ ತಯಾರು ಮಾಡಿದಳು. ನಂತರ ಅವಳು ವಿಧವೆ ಮುದುಕಿಯಂತೆ ವೇಷ ಮರೆಸಿಕೊಂಡು, ಏಳು ಬೆಟ್ಟದಾಟಿ ಆ ಏಳು ಗುಜ್ಜಾರಿಗಳ ಮನೆಗೆ ಹೋದಳು. ಬಾಗಿಲು ಬಡಿದು ಕೂಗಿದಳು. "ಈ ದಿನ ಬಹಳ ಒಳ್ಳೆಯ ಸಾಮಾನುಗಳಿವೆ!" ಎಂದು ಕೂಗಿದಳು. ಹಿಮಶ್ವೇತೆ ಹೊರಗೆ ಇಣುಕಿದಳು. "ನೀನು ಮುಂದೆ ಹೋಗು, ನಿನ್ನನ್ನು ಒಳಗೆ ಬಿಟ್ಟುಕೊಳ್ಳಲು ನನಗೆ ಭಯ" ಎಂದಳು.

"ಒಂದೇ ಒಂದು ಸಾರಿ ನೋಡು" ಎಂದು ಹೇಳಿ ಆ ವಿಷದ ಬಾಚಣಿಗೆಯನ್ನು ಎತ್ತಿ ತೋರಿಸಿದಳು. ಅದನ್ನು ನೋಡಿ ಹಿಮಶ್ವೇತೆಗೆ ತುಂಬಾ ಸಂತೋಷವಾಯಿತು. ಆ ಮುದುಕಿಯ ಒತ್ತಾಯಕ್ಕೆ ಸೋತು ಅವಳನ್ನು ಒಳಗೆ ಬಿಟ್ಟುಕೊಂಡಳು. ಅವಳು ವ್ಯಾಪಾರ ಮಾಡಿದ ತಕ್ಷಣ ಆ ಮುದುಕಿ, "ನಾನೊಂದು ಸಾರಿ ಸರಿಯಾಗಿ ಬಾಚುತ್ತೇನೆ" ಎಂದಳು. ಹಿಮಶ್ವೇತೆ ಒಪ್ಪಿದಳು. ಕೂದಲಲ್ಲಿ ಬಾಚಣಿಗೆ ಓಡಾಡಿದ ತಕ್ಷಣ, ಅದರಲ್ಲಿದ್ದ ವಿಷ ಕೆಲಸ ಪ್ರಾರಂಭಿಸಿತು. ಆ ಹುಡುಗಿ ಕೂಡಲೆ ಪ್ರಜ್ಞೆತಪ್ಪಿ ಬಿದ್ದುಬಿಟ್ಟಳು. "ನೀನು ಸೌಂದರ್ಯದ ಸಾಕಾರವೇ? ಈಗ ಎಲ್ಲ ನಿನ್ನೊಂದಿಗೆ ಕೊನೆಯಾಯಿತು" ಎಂದು ಆ ದುಷ್ಟ ರಾಣಿ ಕೂಗಿದಳು. ಹಾಗೆ ಹೇಳಿ ಹೊರಟುಹೋದಳು.

ಅದೃಷ್ಟವಶಾತ್ ಬೇಗನೆ ಸಾಯಂಕಾಲ ಆಯಿತು. ಏಳು ಜನ ಗುಜ್ಜಾರಿಗಳು ಬಂದರು. ಹಿಮಶ್ವೇತೆ ಸತ್ತಹಾಗೆ ನೆಲದ ಮೇಲೆ ಬಿದ್ದಿರುವುದನ್ನು ನೋಡಿದಾಕ್ಷಣ ಅವರಿಗೆ ಮಲತಾಯಿ ಮೇಲೆ ಸಂಶಯ ಬಂದಿತು. ಅವಳ ತಲೆಯಲ್ಲಿದ್ದ ವಿಷದ ಬಾಚಣಿಗೆಯನ್ನು ಹುಡುಕಿ ತೆಗೆದರು. ಆ ಹುಡುಗಿ ಚೇತರಿಸಿಕೊಂಡಳು. ಏನು ನಡೆಯಿತು ಎನ್ನುವುದನ್ನು ವಿವರಿಸಿದಳು. ಮತ್ತೆ ಅವರು ಮಲತಾಯಿಯ ಬಗ್ಗೆ ಎಚ್ಚರದಿಂದ ಇರಲು ಹೇಳಿದರು. ಯಾರಿಗೂ ಬಾಗಿಲು ತೆಗೆಯಬೇಡವೆಂದು ಹೇಳಿದರು.

ಅದೇ ವೇಳೆಗೆ ರಾಣಿ ಅರಮನೆಗೆ ಹಿಂದಿರುಗಿದಳು. ಮತ್ತೆ ಕನ್ನಡಿಯನ್ನು ಸೌಂದರ್ಯದ ಬಗ್ಗೆ ವಿಚಾರಿಸಿದಳು. ಮೊದಲೆರಡು ಬಾರಿ ಸಿಕ್ಕ ಉತ್ತರವೆ ಮತ್ತೆ ಸಿಕ್ಕಿತು. ಅದರಿಂದ ಅವಳು ಹೊಟ್ಟೆಕಿಚ್ಚಿನಿಂದ

ಕೆರಳಿ ಕೆಂಡವಾದಳು. ತನ್ನ ಜೀವ ಹೋದರೂ ಸರಿ ಹಿಮಶ್ವೇತೆ ಸಾಯಲೇಬೇಕೆಂದು ಶಪಥ ಮಾಡಿದಳು. ನಂತರ ಅವಳು ಒಂದು ರಹಸ್ಯ ಕೋಣೆಗೆ ಹೋದಳು. ಆ ಕೋಣೆ ಇರುವುದು ಯಾರಿಗೂ ಗೊತ್ತಿರಲಿಲ್ಲ. ಅಲ್ಲಿ ಅವಳು ಒಂದು ಸೇಬು ಹಣ್ಣಿನೊಳಗೆ ಯಾರಿಗೂ ತಿಳಿಯದಂತೆ ವಿಷವನ್ನು ತುಂಬಿದಳು. ಅದು ತುಂಬ ಶಕ್ತಿಯುತವಾದ, ಪರಿಣಾಮಕಾರಿಯಾದ ವಿಷವಾಗಿತ್ತು. ಮೇಲೆ ನೋಡಿದರೆ ಕೆಂಪಗೆ ನೋಡಿದವರ ಬಾಯಲ್ಲಿ ನೀರೂರುವ ಹಾಗೆ ಇತ್ತು. ಆದರೆ ಅದರ ಒಂದು ಸಣ್ಣ ತುಂಡು ತಿಂದರೂ ಸಾಯುವುದು ಖಚಿತವಾಗಿತ್ತು. ವಿಷದ ಸೇಬನ್ನು ಸಿದ್ಧಪಡಿಸಿದ ತಕ್ಷಣ ಆ ರಾಣಿ ತನ್ನ ಮುಖಕ್ಕೆ ಬಣ್ಣ ಬಳಿದುಕೊಂಡಳು. ರೈತನ ಹೆಂಡತಿಯಂತೆ ವೇಷ ಮರೆಸಿಕೊಂಡಳು. ನಂತರ ಏಳು ಪರ್ವತದಾಚೆ ಇರುವ ಏಳು ಗುಜ್ಜಾರಿಗಳ ಮನೆ ದಾರಿ ಹಿಡಿದಳು. ಅಲ್ಲಿ ಹೋಗಿ ಬಾಗಿಲು ಬಡಿದಳು. ಹಿಮಶ್ವೇತೆ ತನ್ನ ತಲೆಯನ್ನು ಚಾಚಿ, "ನಾನು ಯಾರನ್ನೂ ಒಳಗೆ ಬಿಡುವುದಿಲ್ಲ. ಗುಜ್ಜಾರಿಗಳು ನನಗೆ ಹಾಗೆ ಹೇಳಿದ್ದಾರೆ" ಎಂದಳು.

"ಹಾಗಾದರೆ ನನಗೆ ತುಂಬ ಕಷ್ಟವಾಯಿತು. ನನ್ನ ಸೇಬು ಹಣ್ಣುಗಳನ್ನು ಸುಮ್ಮನೆ ಹಿಂದಕ್ಕೆ ತೆಗೆದುಕೊಂಡು ಹೋಗಬೇಕಾಯಿತಲ್ಲ. ಆದರೂ ಒಂದು ಒಳ್ಳೆಯ ಹಣ್ಣಿದೆ. ಅದನ್ನು ನಿನಗೆ ಕೊಡುತ್ತೇನೆ" ಎಂದು ಆ ಮುದುಕಿ ಹೇಳಿದಳು. "ಬೇಡ, ಬೇಡ, ನನಗೆ ಅದನ್ನು ತೆಗೆದುಕೊಳ್ಳಲು ಹದರಿಕೆ" ಎಂದು ಹಿಮಶ್ವೇತೆ ಉತ್ತರಿಸಿದಳು. "ಯಾತಕ್ಕಾಗಿ ಹೆದರುವಿ? ನೋಡಿಲ್ಲಿ ಎರಡು ಹೋಳು ಮಾಡುವೆ. ಹಣ್ಣಿನ ಕೆಂಪು ಭಾಗವನ್ನು ತಿನ್ನು. ನಾನು ಉಳಿದಿದ್ದನ್ನು ತಿನ್ನುವೆ" ಎಂದು ಆ ಮುದುಕಿ ಹೇಳಿದಳು. ಸೇಬು ಹಣ್ಣನ್ನು ಎಷ್ಟು ಜಾಣ್ಮೆಯಿಂದ ಮಾಡಿದ್ದಳು ಎಂದರೆ, ಅದರ ಕೆಂಪು ಭಾಗ ಮಾತ್ರ ವಿಷಭರಿತವಾಗಿತ್ತು. ಸಹಜವಾಗಿಯೇ ಹಿಮಶ್ವೇತೆ ಹಣ್ಣಿನ ಕೆಂಪಾದ ಸುಂದರ ಭಾಗವನ್ನೆ ಇಷ್ಟಪಟ್ಟಳು. ಆ ಮುದುಕಿ ಒಳಗಿನ ತಿರುಳನ್ನು ತಿನ್ನುವುದನ್ನು ನೋಡಿದ ಮೇಲೆ ಅವಳಿಗೆ ಸುಮ್ಮನಿರಲಾಗಲಿಲ್ಲ. ಕೈಯನ್ನು ಮುಂದಕ್ಕೆ ಚಾಚಿ ಅವಳು ವಿಷಪೂರಿತ ಹಣ್ಣನ್ನು ತೆಗೆದುಕೊಂಡಳು. ಅವಳು ಅದನ್ನು ಬಾಯೊಳಗೆ ಇಟ್ಟುಕೊಂಡ ತಕ್ಷಣವೆ ನೆಲದ ಮೇಲೆ ಸತ್ತುಬಿದ್ದಳು. ಆಗ ರಾಣಿ ಹೊಳೆಯುವ ಕಣ್ಣುಗಳಿಂದ ಹಿಮಶ್ವೇತೆಯ ಕಡೆ ನೋಡಿ, ಅಟ್ಟಹಾಸದಿಂದ ನಗುತ್ತಾ "ಹಿಮದಷ್ಟು ಬೆಳ್ಳಗೆ, ರಕ್ತದಷ್ಟು ಕೆಂಪಗೆ, ಎಬೋನಿ ಮರದಷ್ಟು ಕಪ್ಪಗೆ! ಈ ಸಾರಿ ಆ ಗುಜ್ಜಾರಿಗಳಿಗೆ ನಿನ್ನನ್ನು ಎಬ್ಬಿಸಲು ಸಾಧ್ಯವೇ ಇಲ್ಲ" ಎಂದು ಕೂಗಿಕೊಂಡು ಹೊರಟಳು.

ಅವಳು ಅರಮನೆಗೆ ಹೋಗಿ ಮತ್ತೆ ತನ್ನ ಕನ್ನಡಿಯನ್ನು ಕೇಳಿದಳು.

"ಓ, ಕನ್ನಡಿ, ಗೋಡೆ ಮೇಲಿನ ಕನ್ನಡಿ,
ನಮ್ಮಲ್ಲಿ ಎಲ್ಲರಿಗಿಂತ ಸುಂದರಿ ಯಾರು?"

"ನೀನೆ ಎಲ್ಲರಿಗಿಂತ ಸುಂದರಿ, ರಾಣಿ" ಎಂದು ಕನ್ನಡಿ ಉತ್ತರಿಸಿತು.

ಆಗ ಅವಳ ಹೊಟ್ಟೆಕಿಚ್ಚು ಶಾಂತವಾಯಿತು. ಮನಸ್ಸಿಗೆ ನೆಮ್ಮದಿ ಆಯಿತು.

ಗಿಡ್ಡ ಗುಜ್ಜಾರಿಗಳು ಸಾಯಂಕಾಲ ಮನೆಗೆ ಹಿಂದಿರುಗಿದರು. ಹಿಮಶ್ವೇತೆ ನೆಲದ ಮೇಲೆ ಬಿದ್ದಿರುವುದನ್ನು ನೋಡಿದರು. ಅವಳ ದೇಹದಲ್ಲಿ ಜೀವಕಳೆಯೇ ಇರಲಿಲ್ಲ. ಅವಳು ಸತ್ತಹಾಗೆ ಕಾಣುತ್ತಿದ್ದಳು. ಅವರು ಅವಳನ್ನು ಮೇಲಕ್ಕೆ ಎತ್ತಿದರು. ಏನಾದರೂ ವಿಷದಿಂದ ಕೂಡಿದ್ದು ಇರಬಹುದೇನೋ ಎಂದು ಹುಡುಕಿದರು. ಅವಳ ಕುತ್ತಿಗೆ ಸರವನ್ನು ಬಿಚ್ಚಿದರು. ಅವಳ ಕೂದಲನ್ನು ಬಿಡಿಸಿದರು. ಅವಳನ್ನು ನೀರು

ಮತ್ತು ಮದ್ಯದಿಂದ ತೊಳೆದರು. ಆದರೆ ಏನೂ ಪ್ರಯೋಜನವಾಗಲಿಲ್ಲ. ಅಯ್ಯೊ! ಮಗು ನಿಜವಾಗಲೂ ಸತ್ತೇ ಹೋಗಿದೆ ಅಂದುಕೊಂಡರು. ಅವಳನ್ನು ಒಂದು ಬೆಟ್ಟದ ಮೇಲೆಕ್ಕೆ ಹೊತ್ತುಕೊಂಡುಹೋದರು. ಅಲ್ಲಿ ಅವಳನ್ನು ಮಲಗಿಸಿ ಸುತ್ತಲೂ ಕುಳಿತುಕೊಂಡು ಅಳತೊಡಗಿದರು. ಮೂರು ದಿನ ಅತ್ತೇ ಅತ್ತರು, ಅತ್ತೇ ಅತ್ತರು. ನಂತರ ಅವಳನ್ನು ಹೂಳಬೇಕು ಎಂದು ತೀರ್ಮಾನಿಸಿದರು. ಆದರೆ ಅವಳು ಜೀವಂತವಿರುವಂತೆ ಸುಂದರವಾಗಿ ಕಂಡಳು. ಅವಳ ಕೆನ್ನೆಯ ಕೆಂಪು ಅವಳಿಂದ ದೂರ ಹೋಗಿರಲಿಲ್ಲ. ಆದ್ದರಿಂದ ಅವರು ತಮ್ಮಲ್ಲೆ ಒಬ್ಬರಿಗೊಬ್ಬರು "ಅವಳನ್ನು ನಾವು ಈ ಕಪ್ಪು ನೆಲದಲ್ಲಿ ಹೂಳುವುದು ಸಾಧ್ಯವಿಲ್ಲ" ಎಂದು ಹೇಳಿಕೊಂಡರು. ನಂತರ ಪಾರದರ್ಶಕ ಗಾಜಿನ ಪೆಟ್ಟಿಗೆಯನ್ನು ಮಾಡಿಸಿದರು. ಅದರೊಳಗಿಂದ ಅವಳ ದೇಹವನ್ನು ಎಲ್ಲ ಕಡೆಯಿಂದಲೂ ನೋಡಬಹುದಿತ್ತು. ಆ ಗುಜ್ಜಾರಿಗಳು ಅದರ ಮೇಲೆ ಬಂಗಾರದ ಅಕ್ಷರಗಳಲ್ಲಿ ಅವಳ ಹೆಸರನ್ನು ಬರೆದರು. ಅವಳು ಒಬ್ಬ ರಾಜನ ಮಗಳು ಎಂದೂ ಬರೆದರು. ಆ ಗಾಜಿನ ಪೆಟ್ಟಿಗೆಯನ್ನು ಒಂದು ಬಂಡೆಯ ತುದಿಯಲ್ಲಿಟ್ಟರು. ಅವರಲ್ಲಿ ಒಬ್ಬನು ಯಾವಾಗಲೂ ಕಾಯುತ್ತಾ ಇರುತ್ತಿದ್ದನು. ಕಾಡು ಮೃಗಗಳೂ ಕೂಡ ಅವಳ ಸಾವಿಗಾಗಿ ದುಃಖಿಸಿದವಂತೆ. ಮೊದಲು ಗೂಬೆ, ನಂತರ ಹದ್ದು, ಕೊನೆಯಲ್ಲಿ ಪಾರಿವಾಳ ಬಂದವು. ತಮ್ಮ ಭಾಷೆಯಲ್ಲಿ ತಮ್ಮ ದುಃಖ ತೋರಿಸಿದವು.

ಹೀಗೆ ಬಹಳ ದಿನಗಳು ಹಿಮಶ್ವೇತೆ ಗಾಜಿನ ಪೆಟ್ಟಿಗೆಯಲ್ಲಿ ಶಾಂತ ನಿದ್ರೆಯಲ್ಲಿದ್ದಳು. ಸ್ವಲ್ಪವೂ ಬದಲಾವಣೆ ಇಲ್ಲ. ಗಾಢವಾದ ನಿದ್ರೆಯಲ್ಲಿರುವಂತೆ ಕಾಣುತ್ತಿದ್ದಳು. ಏಕೆಂದರೆ ಆಗಲೂ ಅವಳು ಹಿಮದಷ್ಟು ಬೆಳ್ಳಗೆ, ರಕ್ತದಷ್ಟು ಕೆಂಪಗೆ, ಎಬೋನಿ ಮರದಷ್ಟು ಕಪ್ಪನೆ ಕೂದಲನ್ನು ಹೊಂದಿದ್ದಳು. ಒಂದು ಬಾರಿ ಏನಾಯಿತು ಅಂದರೆ, ಒಬ್ಬ ರಾಜನ ಮಗ ಅದೇ ಕಾಡಿಗೆ ಬೇಟೆ ಆಡಲು ಬಂದನು. ಅವನೂ ಕೂಡ ರಾತ್ರಿಯನ್ನು ಕಳೆಯಲು ಅದೇ ಗುಜ್ಜಾರಿಗಳ ಗುಡಿಸಲಿಗೆ ಬಂದನು. ದೊಡ್ಡ ಬಂಡೆಯ ಮೇಲಿದ್ದ ಗಾಜಿನ ಪೆಟ್ಟಿಗೆಯನ್ನು ನೋಡಿದನು. ಅದರೊಳಗಿನ ಸುಂದರ ಯುವತಿಯನ್ನು ನೋಡಿದನು. ಪೆಟ್ಟಿಗೆಯ ಮೇಲಿನ ಬಂಗಾರದ ಅಕ್ಷರಗಳನ್ನು ಓದಿದನು. ಅವನು ಅದೆಲ್ಲವನ್ನು ಪರೀಕ್ಷಿಸಿದ ಮೇಲೆ, ಗುಜ್ಜಾರಿಗಳಿಗೆ "ಈ ಪೆಟ್ಟಿಗೆ ನನಗೆ ಬೇಕು, ಅದಕ್ಕಾಗಿ ನೀವು ಎಷ್ಟು ದುಡ್ಡು ಕೇಳಿದರೆ ಅಷ್ಟು ಕೊಡುತ್ತೇನೆ" ಎಂದು ಹೇಳಿದನು. ಅದಕ್ಕೆ ಆ ಗಿಡ್ಡರು, "ಪ್ರಪಂಚದಲ್ಲಿರುವ ಎಲ್ಲಾ ಬಂಗಾರವನ್ನು ಕೊಟ್ಟರೂ ನಾವು ಅದನ್ನು ಮಾರುವುದಿಲ್ಲ" ಎಂದು ಉತ್ತರಿಸಿದರು. "ನನಗೆ ಇದನ್ನು ಕೊಟ್ಟುಬಿಡಿ. ಹಿಮಶ್ವೇತೆ ಇಲ್ಲದೆ ನಾನು ಬದುಕಲಾರೆ, ನಾನು ಜೀವಿಸಿರುವವರೆಗೂ ಅವಳನ್ನು ಗೌರವದಿಂದ, ರಕ್ಷಿಸುತ್ತೇನೆ" ಎಂದು ರಾಜಕುಮಾರ ಬೇಡಿಕೊಂಡನು.

ರಾಜಕುಮಾರನ ಪ್ರಾಮಾಣಿಕ ಕಳಕಳಿಯನ್ನು ಆ ಗುಜ್ಜಾರಿಗಳು ಗಮನಿಸಿದರು. ಅವನಿಗಾಗಿ ಮರುಗಿದರು. ಕೊನೆಗೆ ಆ ಗಾಜಿನ ಪೆಟ್ಟಿಗೆಯನ್ನು ಕೊಟ್ಟರು. ರಾಜಕುಮಾರ ತನ್ನ ಸೇವಕರಿಗೆ ಗಾಜಿನ ಪೆಟ್ಟಿಗೆಯನ್ನು ಹೆಗಲಮೇಲೆ ಹೊತ್ತು ತರುವಂತೆ ಆಜ್ಞೆ ಮಾಡಿದನು. ಆಗ ಏನಾಯಿತು ಅಂದರೆ ಸೇವಕರು ಪೆಟ್ಟಿಗೆಯ ಸಮೇತ ಒಂದು ಪೊದೆಯ ಮೇಲೆ ಮುಗ್ಗರಿಸಿದರು. ಆಗ ನೋಡಿದವರಿಗೆ ಆಶ್ಚರ್ಯ ಹುಟ್ಟಿಸುವಂತೆ ಹಿಮಶ್ವೇತೆಯ ಬಾಯಲ್ಲಿದ್ದ ವಿಷದ ಸೇಬು ಹಣ್ಣಿನ ತುಂಡು ಹೊರಗೆ ಬಿತ್ತು. ಆ ಕೂಡಲೆ, ಅವಳು ಕಣ್ಣು ಬಿಟ್ಟಳು. ಗಾಜಿನ ಪೆಟ್ಟಿಗೆಯ ಮುಚ್ಚಳವನ್ನು ತೆಗೆದು ಎದ್ದುಕುಳಿತು, "ನಾನೆಲ್ಲಿದ್ದೇನೆ?" ಎಂದು ಕೇಳಿದಳು.

ಅತ್ಯಂತ ಸಂತೋಷದಿಂದ ರಾಜಕುಮಾರ "ನನ್ನ ಜೊತೆ ಸುರಕ್ಷಿತವಾಗಿರುವೆ" ಎಂದನು. ನಂತರ ಅವನು ಅವಳಿಗೆ ಏನಾಗಿತ್ತು ಎಂದು ಹೇಳಿದನು. ಅಲ್ಲದೆ ಅವಳನ್ನೆ ತನ್ನ ಹೆಂಡತಿ ಎಂದು ತಿರ್ಮಾನಿಸಿದ್ದನ್ನು ಹೇಳಿದನು. ನಂತರ ತನ್ನ ಜೊತೆ ರಾಜನ ಅರಮನೆಗೆ ಬರಬೇಕೆಂದು ಹೇಳಿದನು. ಹಿಮಶ್ವೇತೆ ಒಪ್ಪಿಕೊಂಡಳು. ಅವರು ಅಲ್ಲಿಗೆ ತಲುಪಿದ ಮೇಲೆ ಮದುವೆ ನಡೆಯಿತು. ಅತ್ಯಂತ ವೈಭವದಿಂದ, ಸಂಭ್ರಮ ಸಡಗರಗಳಿಂದ ಆ ಸಂತೋಷ ಸಮಾರಂಭವನ್ನು ಆಚರಿಸಲಾಯಿತು.

ಹಿಮಶ್ವೇತೆಯ ಮಲತಾಯಿಯನ್ನೂ ಮದುವೆಗೆ ಕರೆದಿದ್ದರು. ಅವಳು ಮದುವೆಗೆ ಹೋಗಲು ತನ್ನಲ್ಲಿದ್ದ ಎಲ್ಲ ಅತ್ಯುತ್ತಮ ಉಡುಗೆ, ತೊಡುಗೆಗಳನ್ನು ಧರಿಸಿಕೊಂಡಳು. ಹೋಗುವ ಮೊದಲು ತನ್ನ ಕನ್ನಡಿಯ ಮುಂದೆ ನಿಂತು-

"ಓ, ಕನ್ನಡಿ, ಗೋಡೆಯ ಮೇಲಿನ ಕನ್ನಡಿ,
ನಮ್ಮಲ್ಲಿ ಎಲ್ಲರಿಗಿಂತ ಸುಂದರವಾಗಿರುವವರು ಯಾರು?" ಎಂದು ಕೇಳಿದಳು.


"ಇದುವರೆಗೂ ನೀನೆ ಅತ್ಯಂತ ಸುಂದರವಾಗಿದ್ದಿ , ಓ ರಾಣಿ
ಈಗ ರಾಜಕುಮಾರನ ವಧು ಎಲ್ಲರಿಗಿಂತ ಸುಂದರಿ ಎಂದು ನನಗೆ ಅನಿಸುತ್ತಿದೆ" ಎಂದು ಕನ್ನಡಿ ಉತ್ತರ ಕೊಟ್ಟಿತು.

ಆ ಮಾತುಗಳಿಂದ ರಾಣಿಗೆ ಬೆಂಕಿ ಹಚ್ಚಿದ ಹಾಗಾಯಿತು. ಅವಳಿಗೆ ತುಂಬಾ ಅವಮಾನವಾದಂತೆ ಆಯಿತು. ಅವಳಿಗೆ ಏನು ಮಾಡಬೇಕು ಎಂದು ತಿಳಿಯಲಿಲ್ಲ. ಮೊದಲು ಮದುವೆಗೆ ಹೋಗಬಾರದೆಂದು ತೀರ್ಮಾನಿಸಿದಳು. ಆದರೆ, ಆ ವಧು ಯುವರಾಣಿಯನ್ನು ಒಮ್ಮೆ ನೋಡುವ ಆಸೆಯನ್ನು ಹತ್ತಿಕ್ಕಲು ಅವಳಿಂದ ಆಗಲಿಲ್ಲ. ಅವಳು ಮದುವೆ ಮನೆಗೆ ಬಂದ ತಕ್ಷಣ ಹಿಮಶ್ವೇತೆಯನ್ನು ಗುರುತಿಸಿದಳು. ಸಿಟ್ಟು ಮತ್ತು ಆಶ್ಚರ್ಯದಿಂದ ಅವಳ ಕಾಲುಗಳು ನೆಲದೊಳಗೆ ಹೂತುಹೋದ ಹಾಗಾಯಿತು. ಅದೇ ವೇಳೆಗೆ ಒಂದು ಜೊತೆ ಕಾದ ಕಬ್ಬಿಣದ ಚಪ್ಪಲಿಗಳನ್ನು ತಂದು ಅವಳ ಮುಂದೆ ಇಡಲಾಯಿತು. ಅವುಗಳನ್ನು ಹಾಕಿಕೊಳ್ಳುವಂತೆ ಬಲಾತ್ಕರಿಸಲಾಯಿತು. ಅವುಗಳನ್ನು ಹಾಕಿಕೊಂಡು ಕುಣಿಯಬೇಕಾಯಿತು. ಅಂದರೆ ಸತ್ತು ಬೀಳುವವರೆಗೂ ಕುಣಿದಳು. ಕೊನೆಗೂ ಅವಳ ಹೊಟ್ಟೆಕಿಚ್ಚು ತಣ್ಣಗಾಯಿತು.

೨೨. ಸೋಮಾರಿ ಹ್ಯಾರಿ

ಹ್ಯಾರಿ ಎಂಬ ತುಂಬ ಸೋಮಾರಿ ಹುಡುಗನಿದ್ದನು. ಅವನು ದಿನವೂ ತನ್ನ ಮೇಕೆಯನ್ನು ಎಳೆದುಕೊಂಡು ಹುಲ್ಲು ಮೇಯಿಸಲು ಹೋಗುತ್ತಿದ್ದನು. ಅದನ್ನು ಬಿಟ್ಟರೆ ಬೇರೆ ಯಾವ ಕೆಲಸವನ್ನೂ ಮಾಡುತ್ತಿರಲಿಲ್ಲ. ಸಾಯಂಕಾಲ ತನ್ನ ಕೆಲಸ ಮುಗಿಸಿಕೊಂಡು ಮನೆಗೆ ಬಂದು ನಿಟ್ಟುಸಿರು ಬಿಡುತ್ತಿದ್ದನು. ನಂತರ ತನ್ನಲ್ಲೆ "ಈ ತರಹದ ಜೀವನ ಸಾಕಾಗಿದೆ. ಬರೀ ಬೇಸರದ ಕೆಲಸ. ಮಳೆಗಾಲ ಬರುವವರೆಗೂ, ದಿನ ದಿನವೂ ವರ್ಷ ಇಡೀ ಮೇಕೆಯನ್ನು ಹೊಲಕ್ಕೆ ಅಟ್ಟಿಕೊಂಡು ಹೋಗುವುದು ನಿಜಕ್ಕೂ ಪ್ರಯಾಸದ ಕೆಲಸ" ಎಂದು ಹೇಳಿಕೊಂಡನು. "ಸುಮ್ಮನೆ ಮಲಗಿಕೊಂಡು ನಿದ್ದೆ ಮಾಡುತ್ತಿದ್ದರೆ ಎಷ್ಟು ಚೆನ್ನಾಗಿರುತ್ತದೆ.

683



ಆದರೆ ನಾನು ಮಾತ್ರ ಯಾವಾಗಲೂ ಮೇಕೆಯ ಹಿಂದೆ ಇದ್ದು, ಅದು ಎಲ್ಲಿ ಎಳೆಯ ಗಿಡಗಳನ್ನು ತುಳಿಯುವುದೋ, ಪೊದೆಗಳನ್ನು ತೂರಿಕೊಂಡು ತೋಟದೊಳಗೆ ನುಗ್ಗುವುದೋ ಎಂದು ಕಾಯುತ್ತಾ ಇರಬೇಕು. ಹಾಗಾದಾಗ ಅದನ್ನು ದೂರ ಎಳೆದುಕೊಂಡು ಹೋಗಬೇಕು. ನಾನು ನನ್ನ ಜೀವನದಲ್ಲಿ ಸುಖ ಮತ್ತು ಶಾಂತಿಯನ್ನು ಪಡೆಯುವುದು ಹೇಗೆ?" ಎಂದು ಯೋಚಿಸಿದನು. ಕೆಲಸದ ಹೊರೆಯನ್ನು ಕಡಿಮೆ ಮಾಡಿಕೊಳ್ಳುವುದು ಹೇಗೆ ಎಂದು ವಿಚಾರ ಮಾಡತೊಡಗಿದನು. ಬಹಳ ಹೊತ್ತು ಅವನ ತಲೆಗೆ ಏನೂ ಹೊಳೆಯಲಿಲ್ಲ. ಕೊನೆಗೆ ಬೆಳ್ಳಿಯ ಮಿಂಚು ಹೊಳೆದ ಹಾಗೆ ಅವನಿಗೆ ಒಂದು ವಿಷಯ ಹೊಳೆಯಿತು. "ನಾನು ಡುಮ್ಮಿ ಕ್ಯಾತರೀನ್‌ಳನ್ನು ಮದುವೆ ಆಗುತ್ತೇನೆ. ಅವಳ ಹತ್ತಿರವೂ ಒಂದು ಮೇಕೆ ಇದೆ. ಅವಳು ತನ್ನ ಮೇಕೆಯ ಜೊತೆ ನನ್ನದನ್ನೂ ಮೇಯಿಸಲು ಹೊಡೆದುಕೊಂಡು ಹೋಗುತ್ತಾಳೆ. ಆದರಿಂದ ನನ್ನ ತೊಂದರೆ ತಪ್ಪುತ್ತದೆ" ಎಂದುಕೊಂಡನು.

ಹಾಗೆ ಯೋಚನೆ ಮಾಡಿದ್ದೆ ತಡ ಹ್ಯಾರಿ ಮೇಲಕ್ಕೆದ್ದು ಆಯಾಸದಿಂದ ತನ್ನ ಕಾಲುಗಳನ್ನು ಎಳೆದುಕೊಂಡು ರಸ್ತೆಗೆ ಇಳಿದನು. ಕ್ಯಾತರೀನಳ ಸಂಕ್ಷಿಪ್ತ ಹೆಸರು ಕೇಟ್ ಎಂಬುದಾಗಿ ಇತ್ತು. ಅವಳ ಮನೆ ತುಂಬ ದೂರ ಇರಲಿಲ್ಲ. ಒಂದು ರಸ್ತೆಯನ್ನು ದಾಟಿದರೆ ಸಾಕಾಗಿತ್ತು. ಹ್ಯಾರಿ ಕೇಟಳ ಮನೆಗೆ ಹೋದನು. ಅವಳ ತಂದೆ ತಾಯಿಗಳ ಹತ್ತಿರ, ಅವರ ಚುರುಕಾದ ಸದ್ಗುಣ ಸಂಪನ್ನ ಮಗಳಿಗೆ ತಾನು ಗಂಡನಾಗುವುದಾಗಿ ಹೇಳಿಕೊಂಡನು. ಕೇಟಳ ತಂದೆ ತಾಯಿಗಳು ಬಹಳ ಏನೂ ಯೋಚಿಸಲಿಲ್ಲ. ಅವರಿಬ್ಬರೂ ಒಪ್ಪಿಕೊಂಡ ಮೇಲೆ ಮತ್ತೇನೂ ಇಲ್ಲ ಎಂದು ಅವರೂ ಕೂಡ ಒಪ್ಪಿಕೊಂಡರು. ಹೀಗೆ ಡುಮ್ಮಿ ಕೇಟಳು ಸೋಮಾರಿ ಹ್ಯಾರಿಯ ಹೆಂಡತಿಯಾದಳು. ನಂತರ ತಮ್ಮಿಬ್ಬರ ಎರಡು ಮೇಕೆಗಳನ್ನು ತಾನೇ ಮೇಯಿಸಲು ಒಯ್ಯುತ್ತಿದ್ದಳು. ಆಗ ಅವಳ ಗಂಡ ಹ್ಯಾರಿ ಆರಾಮಾಗಿ ತನ್ನ ಸಮಯವನ್ನು ಕಳೆಯತೊಡಗಿದನು. ಯಾವ ಕೆಲಸವನ್ನೂ ಮಾಡದೆ ತನ್ನ ಸೋಮಾರಿತನದಲ್ಲೆ ಸಂತೋಷಪಡತೊಡಗಿದನು. ಯಾವಾಗಲೋ ಒಂದೊಂದು ಸಾರಿ ಅವನು ಹೊರಗೆ ಹೋಗುತ್ತಿದ್ದನು. ಅಪರೂಪವಾಗಿ ಹೊರಗೆ ತಿರುಗಾಡಿಕೊಂಡು ಬಂದರೆ ವಿಶ್ರಾಂತಿಯ ಸುಖ ಹೆಚ್ಚುತ್ತದೆ ಎಂದು ಹೇಳುತ್ತಿದ್ದನು.

ಕ್ರಮೇಣ ಡುಮ್ಮಿ ಕೇಟಳು ಕೂಡ ಸೋಮಾರಿ ಆಗುತ್ತಾ ಬಂದಳು. "ಪ್ರೀತಿಯ ಹ್ಯಾರಿ, ಅನಾವಶ್ಯಕವಾಗಿ ನಾವು ಏಕೆ ಕಷ್ಟಪಡಬೇಕು? ನಮ್ಮ ಯೌವ್ವನದ ಅತ್ಯುತ್ತಮ ದಿನಗಳನ್ನು ವ್ಯರ್ಥವಾಗಿ ಏಕೆ ಕಳೆಯಬೇಕು? ಪ್ರತಿದಿನ ಬೆಳಗ್ಗೆ ನಮ್ಮ ನಿದ್ದೆಗೆ ತೊಂದರೆ ಕೊಡುತ್ತಿರುವ ಈ ಮೇಕಗಳನ್ನು ನಮ್ಮ ಪಕ್ಕದ ಮನೆಯವರಿಗೆ ಏಕೆ ಕೊಡಬಾರದು? ಅವನು ಅದರ ಬದಲು ಜೇನು ಗೂಡು ಕೊಡುತ್ತಾನಂತೆ. ನಾನು ಅದನ್ನು ಸುಮ್ಮನೆ ಮನೆಯ ಹಿಂದೆ ಬಿಸಿಲಲ್ಲಿ ಇಟ್ಟರೆ ಸಾಕು. ತೊಂದರೆಯೇ ಇರುವುದಿಲ್ಲ. ಜೇನುಹುಳುಗಳನ್ನು ನೋಡಿಕೊಳ್ಳಬೇಕಾದ ಅವಶ್ಯಕತೆ ಇರುವುದಿಲ್ಲ. ಹುಲ್ಲುಗಾವಲಿಗೆ ಅವುಗಳನ್ನು ಅಟ್ಟಿಕೊಂಡು ಹೋಗಬೇಕಾಗಿಲ್ಲ. ಯಾಕೆಂದರೆ ಅವುಗಳು ತಮ್ಮಷ್ಟಕ್ಕೆ ಹಾರಿಕೊಂಡು ಹೋಗಿ ಮತ್ತೆ ಮನೆಗೆ ಬರುತ್ತವೆ. ನಮಗೆ ಏನೂ ತೊಂದರೆ ಕೊಡದೆ ತಮ್ಮಷ್ಟಕ್ಕೆ ತಾವೇ ಜೇನುತುಪ್ಪವನ್ನು ಕೂಡಿಸಿಕೊಂಡು ಬರುತ್ತವೆ!" ಎಂದು ಹೇಳಿದಳು.

"ನೀನು ಬುದ್ಧಿವಂತೆಯ ಹಾಗೆ ಮಾತನಾಡುತ್ತೀಯ. ತಡಮಾಡದೆ ಈ ಕ್ಷಣವೆ ಪ್ರಾರಂಭಿಸೋಣ. ಜೇನುತುಪ್ಪ ಮೇಕೆಯ ಹಾಲಿಗಿಂತ ರುಚಿಯಾಗಿರುತ್ತದೆ ಮತ್ತು ಪುಷ್ಟಿದಾಯಕವಾಗಿರುತ್ತದೆ. ಅಲ್ಲದೆ ಬಹಳ ದಿನಗಳವರೆಗೆ ಅದನ್ನು ಇಟ್ಟುಕೊಳ್ಳಬಹುದು" ಎಂದು ಹ್ಯಾರಿ ಉತ್ತರಿಸಿದನು.

ನೆರೆಮನೆಯವನು ತುಂಬಾ ಸಂತೋಷದಿಂದಲೇ ಜೇನುಗೂಡು ಕೊಟ್ಟು ಮೇಕೆಗಳನ್ನು ಪಡೆದನು. ಜೇನುನೊಣಗಳು ನಿರಂತರವಾಗಿ ತಮ್ಮ ಗೂಡಿನ ಒಳಗೆ ಮತ್ತು ಹೊರಗೆ ಹೋಗಿ ಬರುವುದನ್ನು ಬೆಳಗಿನಿಂದ ರಾತ್ರಿಯವರೆಗೆ ಮಾಡಿದವು. ಮತ್ತು ಅತ್ಯುತ್ತಮ ಜೇನುತುಪ್ಪವನ್ನು ತಮ್ಮ ಗೂಡಿನಲ್ಲಿ ತುಂಬಿದವು. ಹೀಗೆ ಹ್ಯಾರಿಗೆ ಮಳೆಗಾಲ ಕಳೆಯಲು ಒಂದು ಜಾಡಿ ತುಂಬ ಜೇನುತುಪ್ಪ ಸಿಕ್ಕಿತು.

ಜೇನುತುಪ್ಪದ ಗಡಿಗೆಯನ್ನು ತಮ್ಮ ಮಲಗುವ ಕೋಣೆಯ ಗೋಡೆಯಲ್ಲಿ ಒಂದು ಮರದ ಹಲಗೆಯ ಮೇಲೆ ಇಟ್ಟರು. ಅದನ್ನು ಯಾರಾದರೂ ಕದ್ದುಬಿಟ್ಟರೆ ಎನ್ನುವ ಭಯ ಅವರಿಗಿತ್ತು. ಅಥವಾ ಇಲಿಗಳು ಅದನ್ನು ಒಡೆದು ತಿಂದುಬಿಡಬಹುದು ಎಂದು ಹೆದರಿದರು. ಅದಕ್ಕಾಗಿ ಡುಮ್ಮಿ ಕೇಟಳು ತನ್ನ ಹಾಸಿಗೆ ಪಕ್ಕ ಯಾವಾಗಲೂ ಒಂದು ಭಾರಿ ಕೋಲು ಇಟ್ಟುಕೊಂಡಿದ್ದಳು. ತಾನು ಮೇಲಕ್ಕೆ ಏಳದೆ ಆ ಜಾಡಿಯ ಹತ್ತಿರ ಏನು ಬಂದರೂ ಓಡಿಸಬಹುದು ಎಂದು ಕೇಟಳು ಯೋಚಿಸಿದಳು.

ಸೋಮಾರಿ ಹ್ಯಾರಿ ಹೇಗಾದರೂ ಮಧ್ಯಾಹ್ನದವರೆಗೂ ಹಾಸಿಗೆ ಬಿಟ್ಟು ಏಳುವವನಲ್ಲ. "ಯಾರು ಬೇಗ ಏಳುತ್ತಾರೋ ಅವರು ತಮ್ಮ ಸಂಪತ್ತನ್ನು ಕಳೆದುಕೊಳ್ಳುವರು" ಎಂದು ಹ್ಯಾರಿ ಹೇಳುತ್ತಿದ್ದನು. ಒಂದು ದಿನ ಬೆಳಕು ಹರಿದು ಮಧ್ಯಾಹ್ನವಾದರೂ ಹ್ಯಾರಿ ಹಾಸಿಗೆಯಲ್ಲೇ ಇದ್ದನು. ಕೊನೆಗೆ ತನ್ನ ದೀರ್ಘ ನಿದ್ದೆಯಿಂದ ಮೇಲಕ್ಕೆದ್ದನು. ನಂತರ ಹೆಂಡತಿಗೆ ಬೈಯ್ಯಲು ಶುರು ಮಾಡಿದನು. "ನೀನು ಸಿಹಿ ಇಷ್ಟಪಡುವ ಹೆಂಗಸರ ಗುಂಪಿಗೆ ಸೇರಿದವಳು. ನೀನು ಜೇನುತುಪ್ಪವನ್ನು ಕದಿಯುತ್ತೀಯ. ನೀನೊಬ್ಬಳೇ ಅದನ್ನೆಲ್ಲಾ ತಿಂದು ಮುಗಿಸುವ ಮೊದಲು ಅದನ್ನು ಕೊಟ್ಟು ಬಾತುಕೋಳಿ ತಂದರೆ ಚೆನ್ನಾಗಿರುತ್ತದೆ" ಎಂದು ಹೇಳಿದನು. "ಮೊದಲು ಬಾತುಕೋಳಿ ಕಾಯಲು ಒಬ್ಬ ಹುಡುಗನನ್ನು ಕರೆದುಕೊಂಡು ಬರಬೇಕು. ಆ ಪುಟ್ಟಬಾತುಕೋಳಿಗಳ ಸಲುವಾಗಿ ನಾನು ಏತಕ್ಕೆ ಬೇಸರಮಾಡಿಕೊಳ್ಳಬೇಕು? ಅವುಗಳಿಗಾಗಿ ನಮ್ಮ ಶಕ್ತಿಯನ್ನು ಅನಾವಶ್ಯಕವಾಗಿ ಖರ್ಚುಮಾಡಿಕೊಳ್ಳಬೇಕು" ಎಂದು ಕೇಟಳು ಹೇಳಿದಳು.

"ಹುಡುಗರು ಬಾತುಕೋಳಿಯನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ ಎಂದು ಹೇಗೆ ಹೇಳುತ್ತೀಯೆ? ಈಗಿನ ಹುಡುಗರು ಯಾರ ಮಾತನ್ನೂ ಕೇಳುವುದಿಲ್ಲ. ತಮಗೆ ಸರಿ ಅನಿಸಿದ್ದನ್ನು ಮಾಡುತ್ತಾರೆ. ದೊಡ್ಡವರಿಗಿಂತ ತಾವೇ ಬುದ್ಧಿವಂತರೆಂಬ ಭ್ರಮೆ ಅವರಿಗೆ. ಆ ಹುಡುಗ ದನಕಾಯಲು ಕಳಿಸಿದರೆ ಮೂರು ಕಾಗೆಗಳನ್ನು ಬೇಟೆಯಾಡಿಕೊಂಡು ಬಂದನಲ್ಲ, ಹಾಗೆ ಎಲ್ಲ ಹುಡುಗರೂ ಮಾಡುವುದು" ಎಂದು ಹ್ಯಾರಿ ಹೇಳಿದನು.

"ಹೌದಾ, ನಾನು ಹೇಳಿದ ಹಾಗೆ ಆ ಹುಡುಗ ಕೇಳದಿದ್ದರೆ ಒಂದು ಕೋಲು ತೆಗೆದುಕೊಂಡು ಹೇಗೆ ಹೊಡೀತೀನಿ ನೋಡು" ಎಂದು ಇಲಿಗಳನ್ನು ಹೊಡೆದೋಡಿಸಲು ತನ್ನ ಹಾಸಿಗೆ ಪಕ್ಕದಲ್ಲೆ ಇಟ್ಟುಕೊಂಡಿದ್ದ ಕೋಲನ್ನು ತೆಗೆದು ತೋರಿಸಿದಳು. ಆ ಹುಡುಗನನ್ನು "ಹೀಗೆ ಹೊಡೆಯುತ್ತೇನೆ" ಎಂದು ಹ್ಯಾರಿಗೆ ತೋರಿಸಿದಳು. ಆಕಸ್ಮಿಕವಾಗಿ ಕೋಲಿನಿಂದ ಅವಳು ಜೇನುತುಪ್ಪದ ಜಾಡಿಗೆ ಹೊಡೆದಳು. ಜಾಡಿ ಒಡೆದು ಚೂರು ಚೂರಾಯಿತು. ಆ ಅತ್ಯುತ್ತಮ ಜೇನುತುಪ್ಪ ನೆಲದ ಮೇಲೆ ಹರಿಯಿತು.

"ಅಲ್ಲಿ ನೋಡು, ನಮ್ಮ ಬಾತುಕೋಳಿ ಮತ್ತು ಅವನ್ನು ಕಾಯುವ ಹುಡುಗ ಬಂದ ಹಾಗಾಯಿತು ಬಿಡು, ಈಗ ಅವುಗಳನ್ನು ಕಾಯುವ ಅವಶ್ಯಕತೆಯೇ ಬರಲಿಲ್ಲ. ಆದರೂ ನಮ್ಮ ಅದೃಷ್ಟ ಚೆನ್ನಾಗಿದೆ. ಏಕಂದರೆ ಜಾಡಿ ನನ್ನ ತಲೆಯ ಮೇಲೆ ಬೀಳಲಿಲ್ಲವಲ್ಲ. ಆದ್ದರಿಂದ ನಾವು ಇದ್ದುದರಲ್ಲಿಯೇ ತೃಪ್ತಿಪಡಬೇಕು" ಎಂದು ಹೇಳುತ್ತಾ ಆ ಒಡೆದ ಜಾಡಿಯ ಒಂದು ತುಣುಕಿನಲ್ಲಿ ಸ್ವಲ್ಪ ಜೇನುತುಪ್ಪ ಇರುವುದನ್ನು ನೋಡಿದನು. "ಇದನ್ನು ನಾವು ತಿನ್ನೋಣ, ಆದದ್ದು ಆಗಿ ಹೋಯಿತು. ಇನ್ನೂ ಸ್ವಲ್ಪ ಹೊತ್ತು ಮಲಗೋಣ. ಇಷ್ಟು ಬೇಗ ಎದ್ದು ಏನು ಮಾಡಬೇಕು. ಸಂಜೆ ಆಗಲು ಇನ್ನೂ ಬಹಳ ಸಮಯವಿದೆ" ಎಂದು ಹ್ಯಾರಿ ತನ್ನ ಹೆಂಡತಿಗೆ ಹೇಳಿದನು.

"ಹೌದು, ಹೌದು, ಸರಿಯಾದ ಸಮಯದಲ್ಲೇ ಈ ಘಟನೆ ನಡೆಯಿತು. ನಿನಗೆ ಗೊತ್ತಿದೆಯೇ, ಒಂದು ಸಾರಿ, ಬಸವನ ಹುಳು ಮದುವೆ ಮನೆಗೆ ಹೋಗಬೇಕಾಯಿತಂತೆ. ಅದು ಮೆಲ್ಲಗೆ ತೆವಳಿಕೊಂಡು ಹೋಗುವ ಹೊತ್ತಿಗೆ, ಮದುವೆ ಮುಗಿದು, ಮಗು ಆಗಿ, ನಾಮಕರಣ ಶಾಸ್ತ್ರ ನಡೆಯುತ್ತಿತ್ತಂತೆ. ಮನೆ ಬಾಗಿಲ ಮೆಟ್ಟಿಲನ್ನು ಎಡವಿಕೊಂಡು ಬಿದ್ದುಬಿಟ್ಟಿತಂತೆ. ಆದರೆ ಅದು ಏನು ಹೇಳಿತು ಎಂದರೆ ಅವಸರ ಮಾಡುವುದು ಒಳ್ಳೆಯದಲ್ಲ" ಹೀಗೆ ಡುಮ್ಮಿ ಕೇಟಳು ತನ್ನ ಗಂಡನಿಗೆ ಕತೆ ಹೇಳಿ, ಅವನ ಸ್ವಭಾವವನ್ನು ತಿಳಿಸಿದಳು.

೨೩. ಮೂರು ಪಕ್ಷಿಗಳು

ಬೆಟ್ಟಗಳ ನಡುವಿನ ಪುಟ್ಟ ದೇಶ ನಮ್ಮದು. ಅಲ್ಲಿ ಬಹಳ ವರ್ಷಗಳ ಹಿಂದೆ ಅನೇಕ ಸುಂದರ ರಾಜರು ವಾಸವಾಗಿದ್ದರು. ಅವರು ಪ್ರತಿದಿನವೂ ಬೇಟೆಗಾಗಿ ಹೊರಗೆ ಹೋಗುತ್ತಿದ್ದರು. ಅವರ ಅರಮನೆಗಳು ಎಲ್ಲರ ಮನೆಗಳಿಗಿಂತ ಎತ್ತರವಾಗಿದ್ದವು. ಒಂದು ದಿನ ಆ ಸುಂದರ ರಾಜರಲ್ಲಿ ಒಬ್ಬ ರಾಜ ತನ್ನ ಬೇಟೆಗಾರರ ಜೊತೆ ತನ್ನ ಅರಮನೆಯಿಂದ ಹೊರಗೆ ಹೊರಟನು. ಅವನು ಹೋಗುವ ದಾರಿಯಲ್ಲಿ ಮೂವರು ಹುಡುಗಿಯರಿದ್ದರು. ಅವರು ತಮ್ಮ ದನಗಳನ್ನು ಮೇಯಿಸುತ್ತಿದ್ದರು. ರಾಜ ತನ್ನ ಸೇವಕರ ಜೊತೆ



ಹೋಗುತ್ತಿರುವುದನ್ನು ನೋಡಿದರು. ಅವರಲ್ಲಿ ಹಿರಿಯವಳು ತನ್ನ ಸಂಗಡಿಗರನ್ನು ಕರೆದು, "ನೋಡೆ! ನೋಡೆ! ಅವನು ನನ್ನವನಾದರೆ ಎಷ್ಟು ಚೆನ್ನಾಗಿರುತ್ತದೆ" ಎಂದಳು. ಆಗ ಅವಳ ಸ್ನೇಹಿತೆಯರು, ರಾಜನ ಎಡ ಮತ್ತು ಬಲ ಪಕ್ಕಗಳಲ್ಲಿ ಇದ್ದ ಇಬ್ಬರು ಹುಡುಗರ ಕಡೆ ಕೈ ತೋರಿಸುತ್ತಾ, "ನೋಡೆ, ನೋಡೆ, ನನಗೆ ಅವನು ಸಿಕ್ಕರೆ ಮದುವೆ ಆಗುವೆ" ಎಂದು ಇಬ್ಬರು ಹುಡುಗಿಯರೂ ಅಂದರು. ಆ ಇಬ್ಬರು ಹುಡುಗರು ರಾಜನ ಮಂತ್ರಿಯ ಮಕ್ಕಳಾಗಿದ್ದರು. ರಾಜ ಆ ಹುಡುಗಿಯರು ಹೇಳಿದ್ದನ್ನೆಲ್ಲಾ ಕೇಳಿಸಿಕೊಂಡನು. ಬೇಟೆಯಿಂದ ಹಿಂದಿರುಗಿದ ಮೇಲೆ ಆ ಹುಡುಗಿಯರನ್ನು ಕರೆದುಕೊಂಡು ಬರುವಂತೆ ಆಜ್ಞೆ ಮಾಡಿದನು. ಬೆಟ್ಟದ ಮೇಲೆ ನಿಂತುಕೊಂಡು ಮಾತನಾಡಿದ ಅವರ ಮಾತಿನ ಅರ್ಥವೇನು ಎಂದು ಕೇಳಿದನು. ಆ ಪ್ರಶ್ನೆಗೆ ಅವರು ಉತ್ತರವನ್ನೇನು ಕೊಡಲಿಲ್ಲ. ಕೊನೆಗೆ ರಾಜ ಹಿರಿಯವಳನ್ನು ತಾನು ಮದುವೆ ಆಗುವುದಾಗಿ ಹೇಳಿದನು. ಅದಕ್ಕೆ ಅವಳು ಒಪ್ಪಿದಳು. ಇನ್ನಿಬ್ಬರನ್ನು ಮಂತ್ರಿಯ ಮಕ್ಕಳು ಮದುವೆ ಆಗಲು ಒಪ್ಪಿದರು. ಅವರೆಲ್ಲರೂ ತುಂಬಾ ಸುಂದರವಾಗಿದ್ದರು. ರಾಜನ ಹೆಂಡತಿಯ ಕೂದಲು ಕೆಂಚು ಬಣ್ಣದಿಂದ ಕೂಡಿದ್ದು ಪಳಪಳನೆ ಹೊಳೆಯುತ್ತಿದ್ದವು.

ಮಂತ್ರಿಯ ಮಕ್ಕಳನ್ನು ಮದುವೆ ಆದ ತಂಗಿಯರಿಬ್ಬರಿಗೆ ಬೇಗನೆ ಮಕ್ಕಳಾಗಲಿಲ್ಲ. ಆಗ ರಾಜನ ಹೆಂಡತಿ ಬಸುರಿ ಆದಳು. ರಾಜ ಬಹುದೂರ ಪ್ರಯಾಣಮಾಡಬೇಕಾಗಿತ್ತು. ಆದ್ದರಿಂದ ಆ ಇಬ್ಬರು ತಂಗಿಯರನ್ನು ಅರಮನೆಯಲ್ಲಿ ತನ್ನ ಹೆಂಡತಿಯ ಜೊತೆ ಇರಲು ಆಹ್ವಾನಿಸಿದನು. ರಾಜ ಇಲ್ಲದಿರುವಾಗ ರಾಣಿಗೆ ಮಗುವಾಯಿತು. ಅದು ಕೆಂಪಗೆ ತುಂಬಾ ಮುದ್ದಾಗಿತ್ತು. ತಂಗಿಯರಿಬ್ಬರು ಆ ಮಗುವನ್ನು ಗಿರಣಿಯ ಹತ್ತಿರವಿದ್ದ ಕೊಳದಲ್ಲಿ ಹಾಕಲು ತೀರ್ಮಾನಿಸಿದರು. ಅವರು ಮಗುವನ್ನು ಕೊಳದಲ್ಲಿ ಹಾಕಿದಾಗ ಒಂದು ಪಕ್ಷಿ ಹಾರಿಕೊಂಡು ಬಂದು ಹೀಗೆ ಹಾಡಿತು -

"ಸಾಯಲು ಸಿದ್ಧ
ಲೋಕ ತ್ಯಜಿಸಲು ಬದ್ಧ

ಈ ಜಾಜಿ ಮಲ್ಲಿಗೆ
ನಿನ್ನ ಪಾಲಿಗೆ ಮಗನೆ"

ಆ ಇಬ್ಬರು ಸಹೋದರಿಯರು ಹಕ್ಕಿಯ ಹಾಡನ್ನು ಕೇಳಿಸಿಕೊಂಡು ತುಂಬಾ ಗಾಬರಿಯಿಂದ ಮನೆಗೆ ಓಡೋಡಿ ಹೋದರು. ರಾಜ ಬೇಟೆಯಿಂದ ಹಿಂದಿರುಗಿದ ಮೇಲೆ ರಾಣಿ ಸತ್ತ ಮಗುವನ್ನು ಹೆತ್ತಳು ಎಂದು ಹೇಳಿದರು. "ದೇವರ ಇಚ್ಛೆ ಇದ್ದಂತೆ ಆಗಲಿ" ಎಂದು ರಾಜ ಹೇಳಿದನು. ಅದೇ ವೇಳೆಗೆ ಒಬ್ಬ ಬೆಸ್ತ ಮೀನಿನ ಬಲೆಯಲ್ಲಿ ಆ ಮಗುವನ್ನು ನೀರಿನಿಂದ ಹೊರಗೆ ತೆಗೆದನು. ಮಗು ಇನ್ನೂ ಉಸಿರಾಡುತ್ತಿತ್ತು. ಬೆಸ್ತ ಮತ್ತು ಅವನ ಹೆಂಡತಿಗೆ ಮಕ್ಕಳು ಇರಲಿಲ್ಲ. ಹೀಗಾಗಿ ಅವರು ಆ ಮಗುವನ್ನು ತುಂಬಾ ಪ್ರೀತಿಯಿಂದ ಸಾಕಿದರು. ಮತ್ತೆ ಒಂದು ವರ್ಷ ಕಳೆಯಿತು. ರಾಜ ಪುನಃ ದೂರ ಪ್ರಯಾಣ ಬೆಳೆಸಿದನು. ಅವನು ಇಲ್ಲದಿರುವಾಗ ಮತ್ತೆ ರಾಣಿಗೆ ಒಂದ ಗಂಡು ಮಗು ಹುಟ್ಟಿತು. ಆ ಮಗುವನ್ನೂ ಕೂಡ ಆ ಸಹೋದರಿಯರು ಕದ್ದು ನೀರಿಗೆ ಎಸೆದರು. ಅವರು ಹಾಗೆ ಮಾಡಿದಾಕ್ಷಣ ಮೊದಲಿನಂತೆಯೇ ಒಂದು ಹಕ್ಕಿ ಹಾರಿಕೊಂಡು ಬಂದು ಮೊದಲಿನಂತೆಯೇ ಹಾಡಿತು -

"ಸಾಯಲು ಸಿದ್ಧವಾಗಿ
ಲೋಕವನ್ನು ಶಾಶ್ವತವಾಗಿ ಬಿಟ್ಟುಹೋಗಲು
ಬಂದಿರುವ ವೀರ ಬಾಲಕನೆ
ಈ ಕಾಡು ಹೂವುಗಳು
ಸದಾ ನಿನ್ನ ಪಾಲಿಗಿವೆ"

ರಾಜ ತನ್ನ ಪ್ರವಾಸದಿಂದ ಹಿಂದಿರುಗಿದಾಗ ಮತ್ತೆ ಅದೇ ಕತೆಯನ್ನು ಹೇಳಿದರು. "ರಾಣಿ ಸತ್ತ ಮಗುವಿಗೆ ಜನ್ಮ ಕೊಟ್ಟಳು" ಎಂದರು. ಅದನ್ನು ಕೇಳಿದ ರಾಜ "ದೇವರ ಇಚ್ಛೆ ಏನಿದೆಯೋ ಅದನ್ನು ನಾನು ಸಹಿಸಿಕೊಳ್ಳಲೇ ಬೇಕು" ಎಂದು ಉತ್ತರಿಸಿದನು. ಆಗಲೂ ಕೂಡ ಅದೇ ಬೆಸ್ತ ಅದೃಷ್ಟವಶದಿಂದ ಆ ಮಗುವನ್ನು ಉಳಿಸಿದನು. ಆ ಮಗುವನ್ನು ಅದರ ಅಣ್ಣನ ಜೊತೆ ಬೆಳೆಸಿದನು.

ಹೀಗೆ ಮತ್ತೊಂದು ವರ್ಷ ಕಳೆಯಿತು. ರಾಜ ಮೊದಲಿನ ಹಾಗೆ ಪ್ರಯಾಣ ಮಾಡಿದನು. ಅವನು ಇಲ್ಲದಿರುವಾಗ ರಾಣಿಗೆ ಇನ್ನೊಂದು ಮಗು ಆಯಿತು. ಅದು ಹೆಣ್ಣು ಮಗು ಆಗಿತ್ತು. ಅದನ್ನು ಕೂಡ ಆ ದುಷ್ಟ ಸಹೋದರಿಯರು ನದಿಯಲ್ಲಿ ಎಸೆದರು. ಪುಟ್ಟ ಹಕ್ಕಿ ಹಾರಿಕೊಂಡು ಬಂದು ತನ್ನ ಹಾಡು ಹೇಳಿತು-

"ಸಾಯಲು ಸಿದ್ಧವಾಗಿ
ಎಂದೆಂದು ಲೋಕ ಬಿಟ್ಟು ಹೋಗಲು
ಬಂದಿರುವ ಪುಟ್ಟ ಕನ್ಯೆ
ಈ ಜಾಜಿ ಮಲ್ಲಿಗೆಗಳಿವೆ ನಿನಗಾಗಿ"

ಪ್ರಯಾಣದಿಂದ ರಾಜ ಹಿಂದಿರುಗಿದನು. ಮೊದಲೆರಡು ಸಾರಿ ಹೇಳಿದ ಕತೆಯನ್ನೇ ಆ ಸಹೋದರಿಯರು ರಾಜನಿಗೆ ಹೇಳಿದರು. ಅದರಿಂದ ರಾಜನಿಗೆ ತುಂಬ ಸಿಟ್ಟು ಬಂದಿತು. ರಾಣಿಯನ್ನು

ಸೆರೆಮನೆಗೆ ಹಾಕಿಸಿದನು. ಅಲ್ಲಿ ರಾಣಿ ಬಹಳ ವರ್ಷಗಳು ಇದ್ದಳು.

ಆ ಸಮಯದಲ್ಲಿ ಮಕ್ಕಳು ಬೆಳೆದು ದೊಡ್ಡವರಾದರು. ಆ ಮಕ್ಕಳಲ್ಲಿ ಹಿರಿಯ ಹುಡುಗ ಮೀನು ಹಿಡಿಯಲು ಹೋದರೆ ಬೇರೆ ಹುಡುಗರು ಅವನನ್ನು ಹತ್ತಿರಬಿಟ್ಟುಕೊಳ್ಳಲಿಲ್ಲ. "ನಿನ್ನ ದಾರಿಯಲ್ಲಿ ನೀನು ಹೋಗು ಸಾಕುಮಗನೆ!" ಎಂದು ಅಣಕಿಸಿದರು. ಆ ಮಾತುಗಳಿಂದ ಅವನಿಗೆ ತುಂಬ ಬೇಸರವಾಯಿತು. ಅವನು ಬೆಸ್ತನ ಬಳಿಗೆ ಹೋಗಿ ತಾನು ಯಾರೆಂದು ಕೇಳಿದನು. ಆಗ ಮೀನುಗಾರನು ಅವನನ್ನು ಮತ್ತು ಅವನ ತಮ್ಮ-ತಂಗಿಯರನ್ನು ನೀರಿನಲ್ಲಿ ಬಿದ್ದಿರುವಾಗ ಹೇಗೆ ರಕ್ಷಿಸಿದನೆಂದು ತಿಳಿಸಿದನು. ಆಗ ಆ ಹುಡುಗ ತನ್ನ ತಂದೆಯನ್ನು ಹುಡುಕಬೇಕೆಂದು ತೀರ್ಮಾನಿಸಿದನು. ಆದರೆ ಅವನನ್ನು ಕಳಿಸಲು ಬೆಸ್ತನಿಗೆ ಬೇಸರ ವಾಯಿತು. ಕೊನೆಗೆ ಒಪ್ಪಿಕೊಂಡನು. ಆ ಹುಡುಗ ಹೊರಟುಹೋದನು. ಅನೇಕ ದಿನಗಳು ಪ್ರಯಾಣ ಮಾಡಿ ಒಂದು ನದಿಯ ಬಳಿಗೆ ಬಂದನು. ಅದರ ಬಳಿ ಒಬ್ಬ ಹೆಂಗಸು ಮೀನು ಹಿಡಿಯುತ್ತಿದ್ದಳು.

"ಶುಭ ದಿನ, ಅಮ್ಮ" ಎಂದು ಹುಡುಗ ಹೇಳಿದನು.

"ವಂದನೆಗಳು ನನ್ನ ಮಗು" ಎಂದು ಆಕೆ ಉತ್ತರಿಸಿದಳು.

"ನೀನು ಬಹಳ ಸಮಯ ಮೀನು ಹಿಡಿಯುವುದರಲ್ಲಿ ಕಾಲಕಳೆದರೂ ಒಂದೂ ಮೀನು ಹಿಡಿದ ಹಾಗೆ ಕಾಣುವುದಿಲ್ಲವಲ್ಲ" ಎಂದು ಆ ಹುಡುಗ ಆ ಹೆಂಗಸನ್ನು ಕೇಳಿದನು. ಅದಕ್ಕೆ ಆಕೆ "ನೀನು ಕೂಡ ನಿನ್ನ ಅಪ್ಪನನ್ನು ಹುಡುಕಿಕೊಂಡು ತುಂಬ ಅಲೆಯಬೇಕಾಗುತ್ತದೆ" ಎಂದು ಉತ್ತರಿಸಿದಳು. "ಈ ನೀರನ್ನು ದಾಟುವ ದಾರಿಯನ್ನು ತಿಳಿಸು" ಎಂದು ಆ ಹುಡುಗ ಆಕೆಯನ್ನು ಬೇಡಿಕೊಂಡನು. ಆಗ ಆಕೆ ಅವನನ್ನು ತನ್ನ ಹೆಗಲ ಮೇಲೆ ಕೂರಿಸಿಕೊಂಡು ನದಿ ದಾಟಿಸಿದಳು. ಅಲ್ಲಿ ಅವನು ತನ್ನ ತಂದೆಯನ್ನು ಎಲ್ಲ ಕಡೆ ಹುಡುಕಿದನು. ಆದರೆ ಸಿಗಲಿಲ್ಲ.

ಹೀಗೆ ಒಂದು ವರ್ಷ ಕಳೆಯಿತು. ಆಗ ಅವನ ತಮ್ಮ ತನ್ನ ಅಣ್ಣನನ್ನು ಹುಡುಕಬೇಕೆಂದು ನಿರ್ಧರಿಸಿದನು. ಅವನೂ ಕೂಡ ಅಣ್ಣ ಬಂದ ದಾರಿಯಲ್ಲೆ ಬಂದನು. ಅದೇ ದೊಡ್ಡ ನದಿ, ಅದರ ದಡದಲ್ಲಿ ಮೀನು ಹಿಡಿಯುತ್ತಿರುವ ಹೆಂಗಸನ್ನು ನೋಡಿದನು. ಅಣ್ಣನಂತೆಯೇ ಅವನ ಸಂಭಾಷಣೆಯೂ ನಡೆಯಿತು. ಅವನನ್ನು ಕೂಡ ಆ ಹೆಂಗಸು ನದಿಯನ್ನು ದಾಟಿಸಿದಳು. ಬೆಸ್ತನ ಮನೆಯಲ್ಲಿ ಅವರ ತಂಗಿ ಮಾತ್ರ ಉಳಿದಳು. ಅವಳ ಅಣ್ಣಂದಿರು ಇಲ್ಲದಿದ್ದುದರಿಂದ ಅವಳ ದುಃಖ, ನಿರುತ್ಸಾಹ ಹೆಚ್ಚಾಯಿತು. ಅವಳೂ ಕೂಡ ಅವರನ್ನು ಹುಡುಕಿಕೊಂಡು ಹೊರಟಳು. ದಾರಿಯಲ್ಲಿ ಅವಳ ಅಣ್ಣಂದಿರಿಗೆ ಸಿಕ್ಕ ಹಾಗೆ ನದಿ ಮತ್ತು ಮೀನು ಹಿಡಿಯುತ್ತಿರುವ ಹೆಂಗಸು ಕಂಡರು. "ಶುಭದಿನ, ಅಮ್ಮ" ಎಂದಳು ಹುಡುಗಿ. "ವಂದನೆಗಳು ನನ್ನ ಮಗು" ಎಂದು ಆ ಹೆಂಗಸು ಉತ್ತರಿಸಿದಳು. "ದೇವರು ನಿನಗೆ ಮೀನು ಹೆಚ್ಚು ಸಿಗುವಂತೆ ಮಾಡಲಿ" ಎಂದು ಹುಡುಗಿ ಹೇಳಿದಳು. ಹುಡುಗಿಯ ಮಾತನ್ನು ಕೇಳಿ ಆ ಹೆಂಗಸು ಸಂತೋಷಪಟ್ಟಳು. ಸ್ನೇಹಮಯಿಯಂತೆ ವರ್ತಿಸಿದಳು. ಆ ಹುಡುಗಿಯನ್ನು ನದಿ ದಾಟಿಸಿದ ಮೇಲೆ ಅವಳಿಗೆ ಒಂದು ಕೋಲು ಕೊಟ್ಟಳು. "ಇದೇ ದಾರಿಯಲ್ಲಿ ನೇರವಾಗಿ ಹೋಗು. ನಿನ್ನ ಎದುರಿಗೆ ಒಂದು ಕಪ್ಪು ನಾಯಿ ಬರುತ್ತದೆ. ಅದನ್ನು ನೋಡಿ ನಗಲೂ ಬೇಡ, ಕೋಲಿನಿಂದ ಹೊಡೆಯಲೂ ಬೇಡ. ಶಾಂತವಾಗಿ ಅದರ ಬದಿಯಿಂದ

ಹೋಗು. ಆಗ ನಿನಗೊಂದು ದೊಡ್ಡ ಅರಮನೆ ಕಾಣುತ್ತದೆ. ಅರಮನೆಯ ಹೊಸ್ತಿಲ ಮೇಲೆ ಈ ಕೋಲನ್ನು ಬೀಳಿಸು. ನಂತರ ನೇರವಾಗಿ ಹೋಗು. ಅರಮನೆಯ ಇನ್ನೊಂದು ಪಕ್ಕದಲ್ಲಿ ಒಂದು ಕಾರಂಜಿ ಕಾಣುತ್ತದೆ. ಅದರಿಂದ ನೀರು ಚಿಲುಮೆಯಂತೆ ಹರಿಯುತ್ತದೆ. ಅಲ್ಲಿ ಒಂದು ಮರ ಇದೆ. ಅದರ ಕೊಂಬೆಗೆ ಒಂದು ಪಂಜರವನ್ನು ನೇತುಹಾಕಿದ್ದಾರೆ. ಅದರಲ್ಲಿ ಒಂದು ಹಕ್ಕಿ ಇದೆ. ಆ ಪಂಜರವನ್ನು ನೀನು ತೆಗೆದುಕೊಂಡುಬಿಡಬೇಕು. ನಂತರ ಆ ಕಾರಂಜಿಯ ನೀರನ್ನು ಒಂದು ಲೋಟದಲ್ಲಿ ತರಬೇಕು. ಅಷ್ಟನ್ನು ತೆಗೆದುಕೊಂಡು ಹೋದ ದಾರಿಯಲ್ಲೇ ಹಿಂದಿರುಗಿ ಬರಬೇಕು. ಹೊಸ್ತಿಲ ಮೇಲೆ ಬೀಳಿಸಿದ್ದ ಕೋಲನ್ನು ಪುನಃ ತೆಗೆದುಕೊಂಡು ಬರಬೇಕು. ಆಗ ನೀನು ನಾಯಿಯನ್ನು ಮತ್ತೆ ದಾಟಿಕೊಂಡು ಬರುವಾಗ, ಅದರ ಮುಖದ ಮೇಲೆ ಹೊಡೆಯಬೇಕು. ನಂತರ ನೇರವಾಗಿ ನನ್ನ ಹತ್ತಿರ ಬರಬೇಕು" ಎಂದು ಆ ಹೆಂಗಸು ಹೇಳಿ ಕಳಿಸಿದಳು.

ಆ ಹೆಂಗಸು ಹೇಳಿದ ಹಾಗೆ ಎಲ್ಲವೂ ಇದ್ದುದನ್ನು ಆ ಹುಡುಗಿ ಗಮನಿಸಿದಳು. ಅರಮನೆಯ ಹಿಂಭಾಗದಲ್ಲಿ ಅವಳು ತನ್ನ ಇಬ್ಬರು ಅಣ್ಣಂದಿರನ್ನು ಕಂಡಳು. ಅವರು ಅರ್ಧ ಪ್ರಪಂಚವನ್ನು ಸುತ್ತಿಕೊಂಡು ಬಂದವರಂತೆ ಇದ್ದರು. ಅವರೆಲ್ಲರೂ ಒಟ್ಟಿಗೆ ಹೊರಟು ಆ ಕಪ್ಪು ನಾಯಿ ಇದ್ದಕಡೆ ಬಂದರು. ಅದರ ಮುಖದ ಮೇಲೆ ಹೊಡೆದರು. ಕೂಡಲೆ ಆ ನಾಯಿ ಸುಂದರ ರಾಜಕುಮಾರನಾಯಿತು. ಅವನೂ ಕೂಡ ಆ ಮೂವರ ಗುಂಪಿಗೆ ಸೇರಿಕೊಂಡನು. ಎಲ್ಲರೂ ಆ ಹೆಂಗಸು ಇದ್ದ ನದಿಯ ಹತ್ತಿರಕ್ಕೆ ಹೋದರು. ಅಲ್ಲಿ ಆಕೆ ಅವರಿಗಾಗಿ ಕಾಯುತ್ತಿದ್ದಳು. ಅವರನ್ನು ನೋಡಿ ಆಕೆ ತುಂಬಾ ಸಂತೋಷಪಟ್ಟಳು. ಅವರನ್ನೆಲ್ಲ ನದಿ ದಾಟಿಸಿದಳು. ನಂತರ ಅವಳು ಅದೃಶ್ಯಳಾದಳು. ಅಲ್ಲಿಗೆ ಅವಳು ಶಾಪದಿಂದ ಬಿಡುಗಡೆ ಪಡೆದಂತಾಯಿತು. ಆ ಅಣ್ಣಂದಿರು ಮತ್ತು ಅವರ ಸಹೋದರಿ ಮತ್ತೆ ಮೀನುಗಾರನ ಹತ್ತಿರಹೋದರು. ಅವರೆಲ್ಲ ಮತ್ತೆ ಒಬ್ಬರನ್ನೊಬ್ಬರು ನೋಡಿಕೊಂಡು ತುಂಬ ಸಂತೋಷಪಟ್ಟರು. ಪಂಜರದ ಹಕ್ಕಿಯನ್ನು ಗೋಡೆಗೆ ನೇತುಹಾಕಿದರು. ಆ ಹುಡುಗಿಯ ಎರಡನೇ ಅಣ್ಣನಿಗೆ ಮನೆಯಲ್ಲಿ ಸುಮ್ಮನೆ ಇರಲು ಆಗಲಿಲ್ಲ. ಹೀಗಾಗಿ ಅವನು ಒಂದು ಮರದ ತುಂಡಿಗೆ ಸಿಗಿಸಿದ ಮಾಂತ್ರಿಕ ಬಿಲ್ಲನ್ನು ತೆಗೆದುಕೊಂಡು ಬೇಟೆಗೆ ಹೋದನು. ಸ್ವಲ್ಪ ಹೊತ್ತಿನ ಮೇಲೆ ಅವನಿಗೆ ಸುಸ್ತಾಯಿತು. ಆಗ ತನ್ನ ಕೊಳಲನ್ನು ತೆಗೆದುಕೊಂಡು ಒಂದು ಹಾಡನ್ನು ನುಡಿಸಿದನು. ಅದೇ ಕಾಡಿಗೆ ಬೇಟೆಗೆ ಬಂದಿದ್ದ ರಾಜನಿಗೆ ಅವನ ಕೊಳಲಿನ ನಾದ ಕೇಳಿಸಿತು. ರಾಜ ಆ ಹುಡುಗನ ಹತ್ತಿರ ಬಂದನು. ಆ ಕಾಡಿನಲ್ಲಿ ಅವನಿಗೆ ಬೇಟೆಯಾಡಲು ಅನುಮತಿ ಕೊಟ್ಟವರು ಯಾರು ಎಂದು ಕೇಳಿದನು. ಅದಕ್ಕೆ ಅವನು ಯಾರೂ ಇಲ್ಲ ಎಂದು ಉತ್ತರಿಸಿದನು. "ನೀನು ಯಾರ ಮಗ?" ಎಂದು ಕೇಳಿದನು. "ನಾನು ಬೆಸ್ತನ ಮಗ" ಎಂದು ಉತ್ತರಿಸಿದನು. "ಆದರೆ ಅವನಿಗೆ ಮಕ್ಕಳಿರಲಿಲ್ಲವಲ್ಲ" ಎಂದು ರಾಜ ಹೇಳಿದನು. "ನಿಮಗೆ ನನ್ನ ಮಾತಿನಲ್ಲಿ ನಂಬಿಕೆ ಇರದಿದ್ದರೆ ಮನೆಗೆ ಬಂದು ನೋಡಿ" ಎಂದು ಹೇಳಿದನು. ಆಗ ರಾಜ, ಮೀನುಗಾರನ ಮನೆಗೆ ಹೋದನು. ಅವನು ನಡೆದ ಕತೆಯನ್ನೆಲ್ಲ ಹೇಳಿದನು. ಪಂಜರದಲ್ಲಿದ್ದ ಪಕ್ಷಿ ಹಾಡತೊಡಗಿತು -

"ತಾಯಿ, ಸೆರೆಮನೆಯಲ್ಲಿ
ಒಂಟಿಯಾಗಿ, ಉಪವಾಸದಿಂದ ಬಳಲುತ್ತಿದ್ದಾಳೆ,

ಇವರುಗಳೆಲ್ಲ ಅವಳ ಮಕ್ಕಳು,
ರಾಣಿ ನಿದ್ದೆಯಲ್ಲಿರುವಾಗ ಕಳುವಾದವರು,
ಆ ದುಷ್ಟ ಬುದ್ಧಿಯ ಸಹೋದರಿಯರು
ಮಕ್ಕಳನ್ನು ಸಾಯಿಸಲು ಗಿರಣಿ ಪಕ್ಕದ ನೀರಿಗೆ ಎಸೆದರು."

ಆ ಮಾತು ಎಲ್ಲರಲ್ಲೂ ಆಶ್ಚರ್ಯವನ್ನುಂಟುಮಾಡಿತು. ರಾಜ ಆ ಹಕ್ಕಿ, ಬೆಸ್ತ ಮತ್ತು ಆ ಮೂವರು ಮಕ್ಕಳನ್ನು ಕರೆದುಕೊಂಡು ಅರಮನೆಗೆ ಹೋದನು. ಸೆರೆಮನೆಯ ಬಾಗಿಲು ತೆಗೆಯಲು ಹೇಳಿದನು. ತನ್ನ ಹೆಂಡತಿಯನ್ನು ಹೊರಗೆ ಕರೆದುಕೊಂಡು ಬಂದನು. ಅನೇಕ ವರ್ಷಗಳ ಸೆರೆವಾಸದಿಂದ ಆಕೆ ಖಾಯಿಲೆಬಿದ್ದವರಂತೆ ನಿಶ್ಶಕ್ತಳಾಗಿದ್ದಳು. ಆಗ ಅವಳ ಮಗಳು ಕಾರಂಜಿಯಿಂದ ತಂದಿದ್ದ ನೀರನ್ನು ಕುಡಿಸಿದಳು. ಅದನ್ನು ಕುಡಿದ ತಕ್ಷಣ ಅವಳು ಚೇತರಿಸಿಕೊಂಡು ಮೊದಲಿನಂತೆ ಆದಳು. ನಂತರ ಆ ಇಬ್ಬರು ಕೆಟ್ಟ ಸಹೋದರಿಯರನ್ನು ಸುಟ್ಟುಹಾಕಿದರು. ರಾಜನ ಮಗಳು ಆ ಸುಂದರ ರಾಜಕುಮಾರನನ್ನು ಮದುವೆ ಆದಳು. ಎಲ್ಲರಿಗೂ ಸಂತೋಷವಾಯಿತು. ಹೀಗೆ ಎಲ್ಲರೂ ಬಹಳ ಕಾಲ ಸುಖವಾಗಿ ಬಾಳಿದರು.

೨೪. ಕಪ್ಪೆ ರಾಜಕುಮಾರ

ಒಂದಾನೊಂದು ಕಾಲದಲ್ಲಿ ಆಸೆಪಟ್ಟಿದ್ದೆಲ್ಲವೂ ಸಿಗುತ್ತಿತ್ತು. ಅಂದರೆ ಏನು ಇಷ್ಟಪಟ್ಟರೂ ಅದು ಆಗುತ್ತಿತ್ತು. ಅಂತಹ ಕಾಲದಲ್ಲಿ ಒಬ್ಬ ರಾಜ ಇದ್ದನು. ಅವನ ಹೆಣ್ಣುಮಕ್ಕಳು ಎಲ್ಲರೂ ಸುಂದರಿಯರಾಗಿದ್ದರು. ಅವರಲ್ಲಿ ಚಿಕ್ಕವಳು ಮಾತ್ರ ಎಲ್ಲರಿಗಿಂತಲೂ ಹೆಚ್ಚು ಸುಂದರಿಯಾಗಿದ್ದಳು. ಸೂರ್ಯನೆ ಅವಳ ಸೌಂದರ್ಯಕ್ಕೆ ಮರುಳಾಗಿದ್ದನು. ಅವಳನ್ನು ಪದೆ ಪದೇ ನೋಡುತ್ತಿದ್ದರೂ ಕೂಡ, ಅವಳು ಹೊರಗೆ ಬಂದಾಗಲೆಲ್ಲ ಸೂರ್ಯ ಅವಳ ಸೌಂದರ್ಯಕ್ಕೆ ಮೋಹಗೊಳ್ಳುತ್ತಿದ್ದನು.

ಆ ರಾಜನ ಅರಮನೆಯ ಹತ್ತಿರ ಒಂದು ದೊಡ್ಡದಾದ ಮತ್ತು ದಟ್ಟವಾದ ಮರಗಳಿಂದ ಕತ್ತಲು ಕವಿದಂತೆ ಇದ್ದ ಕಾಡು ಇತ್ತು. ಅದರ ಮಧ್ಯಭಾಗದಲ್ಲಿ ಒಂದು ಆಲದ ಮರವಿತ್ತು. ಆ ಮರದ ಕೊಂಬೆಗಳು ವಿಶಾಲವಾಗಿ ಚಾಚಿಕೊಂಡಿದ್ದವು. ಅದರ ಕೆಳಗೆ ಒಂದು ಪುಟ್ಟ ಕಾರಂಜಿ ಇತ್ತು. ಬಿಸಿಲಿನ ತಾಪ ಹೆಚ್ಚಾದಂತೆಲ್ಲ ರಾಜನ ಕೊನೆಯ ಮಗಳು ಆ ಕಾಡಿಗೆ ಓಡಿಹೋಗಿ ಕಾರಂಜಿಯ ಹತ್ತಿರ ಕುಳಿತುಕೊಳ್ಳುತ್ತಿದ್ದಳು. ಅವಳಿಗೆ ಬೇಜಾರಾದರೆ ಚೆಂಡಾಟ ಆಡುತ್ತಿದ್ದಳು. ಬಂಗಾರದ ಚೆಂಡನ್ನು ಮೇಲಕ್ಕೆ ಎಸೆದು ಹಿಡಿಯುವ ಆಟ ಆಡುತ್ತಿದ್ದಳು. ಅದು ಅವಳು ತುಂಬ ಇಷ್ಟಪಡುವ ಮನೋರಂಜನೆಯ ಆಟವಾಗಿತ್ತು.

ಒಂದು ದಿನ ಏನಾಯಿತು ಅಂದರೆ, ಅವಳು ಬಂಗಾರದ ಚೆಂಡನ್ನು ಮೇಲಕ್ಕೆಸೆದರೆ ಅದು ಹಿಂದಿರುಗಿ ಅವಳ ಕೈ ಸೇರಲಿಲ್ಲ. ಅದಕ್ಕೆ ಬದಲು ಹುಲ್ಲಿನ ಮೇಲೆ ಬಿದ್ದು ಉರುಳುತ್ತಾ ಆ ಕಾರಂಜಿಯೊಳಗೆ ಬಿದ್ದಿತು. ರಾಜನ ಮಗಳು ಅದು ಹೋದ ಕಡೆಯೇ ನೋಡಿದಳು. ಅದು ನೀರೊಳಗೆ ಮುಳುಗಿತು. ಕಾರಂಜಿ ತುಂಬಾ ಆಳವಾಗಿದ್ದುದರಿಂದ ಯಾರಿಗೂ ಅದರ ತಳದಲ್ಲಿದ್ದ ಚೆಂಡು ಕಾಣಿಸಲಿಲ್ಲ. ಆಗ ಅವಳು ಜೋರಾಗಿ



ಅಳತೊಡಗಿದಳು. ಚೆಂಡಿಗಾಗಿ ಹಂಬಲಿಸಿ ಅತ್ತಳು. ಅವಳು ಹಾಗೆ ಅಳುತ್ತಿರುವಾಗ ಒಂದು ಧ್ವನಿ ಜೋರಾಗಿ ಕೂಗಿ ಕರೆಯಿತು. "ರಾಜನ ಮಗಳೆ, ಯಾಕೆ ಅಳುತ್ತಿರುವೆ?" ಎಂದು ಕೇಳಿತು. ಆಕೆ ಧ್ವನಿ ಬಂದ ಕಡೆ ತಿರುಗಿದಳು. ಒಂದು ಕಪ್ಪೆ ತನ್ನ ಕುರೂಪದ ಕತ್ತನ್ನು ನೀರಿನಿಂದ ಹೊರಗೆ ಹಾಕಿ ಮಾತನಾಡಿದ್ದನ್ನು ನೋಡಿದಳು. "ಆಹ, ನೀನು ನೀರಿನಲ್ಲಿ ಈಜುವವನು, ನೀನೇ ಮಾತನಾಡಿದೆಯಾ? ನಾನು ನನ್ನ ಕೈ ತಪ್ಪಿ ನೀರಿನಲ್ಲಿ ಮುಳುಗಿದ ಚೆಂಡಿಗಾಗಿ ಅಳುತ್ತಿರುವೆ" ಎಂದು ರಾಜಕುಮಾರಿ ಹೇಳಿದಳು.

"ಶಾಂತಳಾಗು, ಅಳಬೇಡ. ನಿನಗೊಂದು ಒಳ್ಳೆಯ ಸಲಹೆ ಕೊಡುವೆ. ನಾನು ನಿನ್ನ ಆಟದ ವಸ್ತುವನ್ನು ಮೇಲಕ್ಕೆ ತಂದುಕೊಟ್ಟರೆ ನೀನು ನನಗೇನು ಕೊಡುತ್ತೀ?" ಎಂದು ಕಪ್ಪೆ ಕೇಳಿತು.

"ನಿನಗೇನು ಬೇಕು ಮುದ್ದಿನ ಕಪ್ಪೆ? ನನ್ನ ಉಡುಪುಗಳೆ, ನನ್ನ ಮುತ್ತು ರತ್ನಗಳೇ, ನನ್ನ ಒಡವೆಗಳೆ ಅಥವಾ ನಾನು ಹಾಕಿಕೊಂಡಿರುವ ಕಿರೀಟವೆ?" ಎಂದು ರಾಜಕುಮಾರಿ ಕೇಳಿದಳು.

ಆಗ ಕಪ್ಪೆ "ಉಡುಪುಗಳು, ಒಡವೆಗಳು, ಬಂಗಾರದ ಕಿರೀಟಗಳು ನನಗಲ್ಲ. ನೀನು ನನ್ನನ್ನು ಪ್ರೀತಿಸುವುದಾದರೆ, ನೀನು ನಿನ್ನ ಸಂಗಾತಿ ಆಗುವುದಾದರೆ, ನಿನ್ನ ಜೊತೆಯಲ್ಲಿ ಆಡಲು ಬಿಡಬೇಕು. ನೀನು ಕುಳಿತಾಗ ಮೇಜಿನ ಮೇಲೆ ನಾನು ಕುಳಿತುಕೊಳ್ಳಲು ಬಿಡಬೇಕು. ನೀನು ಊಟಮಾಡುವ ಪುಟ್ಟ ಬಂಗಾರದ ತಟ್ಟೆಯಲ್ಲಿ ನಾನು ಊಟಮಾಡಬೇಕು. ನಿನ್ನ ಲೋಟದಿಂದಲೇ ನಾನು ಕುಡಿಯಬೇಕು. ನಿನ್ನ ಪಕ್ಕದಲ್ಲಿ ನಿನ್ನ ಹಾಸಿಗೆಯಲ್ಲಿ ಮಲಗಬೇಕು. ನೀನು ಇವುಗಳಿಗೆಲ್ಲ ಒಪ್ಪಿ ಮಾತುಕೊಟ್ಟರೆ, ನಾನು ನೀರಿನ ತಳಕ್ಕೆ ಹೋಗಿ ನಿನ್ನ ಬಂಗಾರದ ಚೆಂಡನ್ನು ತಂದುಕೊಡುತ್ತೇನೆ" ಎಂದು ಉತ್ತರಿಸಿತು.

"ಓಹೋ ಹಾಗೇ ಆಗಲಿ. ಎಲ್ಲದಕ್ಕೂ ನನ್ನ ಒಪ್ಪಿಗೆ ಇದೆ. ಆದರೆ ನೀನು ನನ್ನ ಚೆಂಡನ್ನು ತಂದುಕೊಟ್ಟರೆ ಮಾತ್ರ" ಎಂದು ರಾಜಕುಮಾರಿ ಹೇಳಿದಳು. ಆದರೆ ತನ್ನಲ್ಲೆ "ಈ ಕ್ಷುಲ್ಲಕ ಕೀಳು ಪ್ರಾಣಿ ಏನೆಲ್ಲ ಮಾತನಾಡುತ್ತಿದೆ. ತನ್ನ ಜೊತೆಯವರ ಜೊತೆಯಲ್ಲೆ ನೀರಿನಲ್ಲಿ ಉಳಿಯಲಿ. ನಮ್ಮ ಸಮಾಜದಲ್ಲಿ

ಬೆರೆಯಬಾರದು" ಎಂದು ಯೋಚನೆ ಮಾಡಿದಳು. ಕಪ್ಪೆ, ರಾಜಕುಮಾರಿಯ ಪ್ರಮಾಣವನ್ನು ನಂಬಿ ನೀರಿನಲ್ಲಿ ಮುಳುಗಿತು. ಸ್ವಲ್ಪ ಹೊತ್ತಿನಲ್ಲೆ ಬಾಯಲ್ಲಿ ಚೆಂಡನ್ನು ಕಚ್ಚಿಕೊಂಡು ಮೇಲೆ ತಂದಿತು. ಅದನ್ನು ಹುಲ್ಲಿನ ಮೇಲೆ ಎಸೆಯಿತು. ರಾಜಕುಮಾರಿ ತನ್ನ ಸುಂದರವಾದ ಚೆಂಡನ್ನು ಮತ್ತೆ ನೋಡಿ ತುಂಬ ಸಂತೋಷಪಟ್ಟಳು. ಅದನ್ನು ತೆಗೆದುಕೊಂಡು ಓಡಿಹೋದಳು. "ನಿಲ್ಲು, ನಿಲ್ಲು, ನನ್ನನ್ನು ನಿನ್ನ ಜೊತೆ ಕರೆದುಕೊಂಡು ಹೋಗು. ನಾನು ನಿನ್ನಷ್ಟು ಜೋರಾಗಿ ಓಡಲಾರೆ" ಎಂದು ಕಪ್ಪೆ ಕೂಗಿತು. ಆದರೆ ಅದರ ಕೂಗು ಏನೂ ಉಪಯೋಗವಾಗಲಿಲ್ಲ. ಏಕೆಂದರೆ ಅದು ಎಷ್ಟು ಜೋರಾಗಿ ಕೂಗಿಕೊಂಡರೂ ರಾಜಕುಮಾರಿ ಕೇಳಿಸಿಕೊಳ್ಳಲಿಲ್ಲ. ಅವಸರದಿಂದ ಮನೆಗೆ ಹೋಗಿ ಪಾಪದ ಕಪ್ಪೆಯನ್ನು ಮರೆತೇಬಿಟ್ಟಳು. ಕಪ್ಪೆ ಮತ್ತೆ ಕಾರಂಜಿಯೊಳಗೆ ಹೋಗಲೇಬೇಕಾಯಿತು.

ಮಾರನೆ ದಿನ ರಾಜಕುಮಾರಿ ತನ್ನ ತಂದೆ ಮತ್ತು ಇತರ ಸಂಬಂಧಿಕರ ಜೊತೆ ಮೇಜಿನ ಬಳಿ ಊಟಕ್ಕೆ ಕುಳಿತಿದ್ದಳು. ಅವಳು ತನ್ನ ಬಂಗಾರದ ತಟ್ಟೆಯಿಂದ ಊಟವನ್ನು ಮಾಡಬೇಕು ಎನ್ನುವಷ್ಟರಲ್ಲಿ ಅರಮನೆಯ ಮೆಟ್ಟಿಲುಗಳ ಮೇಲೆ ಟಪ, ಟಪ ಎಂದು ಮೇಲಕ್ಕೆ ಬರುವ ಶಬ್ದ ಕೇಳಿಸಿತು. ಅದು ಮೇಲೆ ಬಂದು ಬಾಗಿಲನ್ನು ಬಡಿಯಿತು. "ನೀನು ರಾಜನ ಚಿಕ್ಕ ಮಗಳೆ ಬಾಗಿಲು ತೆಗೆ" ಎಂದು ಆ ಕಡೆಯಿಂದ ಒಂದು ಧ್ವನಿ ಕೇಳಿಸಿತು. ರಾಜಕುಮಾರಿ ತನ್ನನ್ನು ಕರೆದವರಾರು ಎಂದು ನೋಡಲು ಹೋದಳು. ಅವಳು ಬಾಗಿಲನ್ನು ತೆಗೆದು ಕಪ್ಪೆಯನ್ನು ನೋಡಿದಾಕ್ಷಣವೇ ಸಿಟ್ಟಿನಿಂದ ಬಾಗಿಲು ಹಾಕಿದಳು. ಮುಖ ಸಪ್ಪಗೆ ಮಾಡಿಕೊಂಡು ಮತ್ತೆ ಊಟಕ್ಕೆ ಕುಳಿತಳು. ಆದರೆ ರಾಜನಿಗೆ ಅವಳಿಗೆ ಏನೋ ತೊಂದರೆ ಆಗಿದೆ ಎಂದು ತಿಳಿಯಿತು. ಬಾಗಿಲ ಹತ್ತಿರ ಅವಳನ್ನು ಕರೆದುಕೊಂಡು ಹೋಗಲು ರಾಕ್ಷಸನೇನಾದರು ಬಂದಿರುವನೆ? ಎಂದು ರಾಜ ತನ್ನ ಮಗಳನ್ನು ಕೇಳಿದನು. "ಓಹೋ ರಾಕ್ಷಸನಲ್ಲ! ಅದು ಒಂದು ಕುರೂಪಿ ಕಪ್ಪೆ" ಎಂದು ಆಕೆ ಉತ್ತರಿಸಿದಳು.

"ಕಪ್ಪೆಗೆ ನಿನ್ನಿಂದ ಏನಾಗಬೇಕಂತೆ?" ಎಂದು ರಾಜ ಕೇಳಿದನು. ಆಗ ರಾಜಕುಮಾರಿ "ಅಪ್ಪ, ನಾನು ನಿನ್ನೆ ಕಾರಂಜಿಯ ಹತ್ತಿರ ಆಟ ಆಡುತ್ತಿರುವಾಗ ನನ್ನ ಬಂಗಾರದ ಚೆಂಡು ನೀರೊಳಗೆ ಮುಳುಗಿತು. ನಾನು ತುಂಬ ದುಃಖಪಟ್ಟೆ. ಆಗ ಈ ಕಪ್ಪೆ ಚೆಂಡನ್ನು ತಂದುಕೊಟ್ಟಿತು. ಆದರೆ ಅದು ನನಗೆ ಷರತ್ತು ಹಾಕಿತು. ನಾನು ಅದರ ಸಂಗಾತಿ ಆಗಬೇಕು. ಅದಕ್ಕೆ ನಾನು ಮಾತು ಕೊಟ್ಟೆ. ಅದು ನೀರಿನಿಂದ ಹೊರಗೆ ಬರಬಹುದು ಎಂದು ನಾನು ಯೋಚಿಸಲೇ ಇಲ್ಲ. ಹೇಗೆ ಅದು ನೀರಿನಿಂದ ಹೊರಗೆ ಬಂದಿದೆ. ಈಗ ಒಳಗೆ ಬರುತ್ತೇನೆ ಎಂದು ಹೇಳುತ್ತಿದೆ" ಎಂದು ಹೇಳಿದಳು.

ಅದೇ ವೇಳೆಗೆ ಬಾಗಿಲ ಮೇಲೆ ಮತ್ತೆ ಬಡಿದ ಶಬ್ದ ಕೇಳಿಸಿತು.

"ರಾಜನ ಚಿಕ್ಕ ಮಗಳೆ
ಬಾಗಿಲು ತೆಗೆ
ನೀನು ಕೊಟ್ಟ ಪ್ರಮಾಣವನ್ನು
ಮರೆತುಬಿಟ್ಟೆಯಾ?
ಅಲ್ಲಿ ಕಾರಂಜಿ ಹತ್ತಿರ

ಆಲದ ಮರದ ನೆರಳಲಿ
ಎಷ್ಟು ಚೆನ್ನಾಗಿ ಮಾತು ಕೊಟ್ಟೆ
ಬೇಗ ಬಾಗಿಲು ತೆಗೆ
ರಾಜನ ಕೊನೆಯ ಮಗಳೆ"

ಆಗ ರಾಜ "ನೀನು ಮಾತುಕೊಟ್ಟಂತೆ ನಡೆದುಕೊಳ್ಳಬೇಕು. ನೀನು ಹೋಗಿ ಕಪ್ಪೆಯನ್ನು ಒಳಗೆ ಕರೆದುಕೊಂಡು ಬಾ" ಎಂದು ಹೇಳಿದನು. ಆಗ ರಾಜನ ಮಗಳು ಬಾಗಿಲು ತೆಗೆದಳು. ಕಪ್ಪೆ ಅವಳ ಬಲಗಡೆಗೆ ಹಾರಿಕೊಂಡು ಬಂದು ಅವಳ ಕುರ್ಚಿಯ ಹತ್ತಿರಕ್ಕೆ ಬಂದಿತು. ಅವಳು ಕುರ್ಚಿಯ ಮೇಲೆ ಕುಳಿತ ತಕ್ಷಣ "ನನ್ನನ್ನು ಮೇಲಕ್ಕೆ ಎತ್ತಿಕೊ" ಎಂದು ಕಪ್ಪೆ ಹೇಳಿತು. ಅವಳು ಅದನ್ನು ಮುಟ್ಟಲು ತಿರಸ್ಕರಿಸಿದಳು. ಕೊನೆಗೆ ರಾಜ ಮಾತಿನಂತೆ ನಡೆಯಲು ಆಜ್ಞೆಮಾಡಿದನು. ಕಪ್ಪೆ ಕುರ್ಚಿಯ ಮಲೆ ಕುಳಿತ ತಕ್ಷಣ ಅದು ಮೇಜಿನ ಮೇಲೆ ಹಾರಿತು. "ಈಗ ನಿನ್ನ ತಟ್ಟೆಯನ್ನು ನನ್ನ ಕಡೆ ಸರಿಸು. ಇಬ್ಬರೂ ಒಟ್ಟಿಗೆ ಊಟ ಮಾಡೋಣ" ಎಂದು ಕಪ್ಪೆ ಹೇಳಿತು. ಅವಳು ಹಾಗೆ ಮಾಡಿದಳು. ಆದರೆ ಅದೆನ್ನು ನೋಡಲು ಯಾರಿಗೂ ಇಷ್ಟವಾಗಲಿಲ್ಲ. ಕಪ್ಪೆ ಬಹಳ ಸಂತೋಷದಿಂದ ಊಟಮಾಡಿತು. ಆದರೆ ರಾಜಕುಮಾರಿ ತಿಂದ ಪ್ರತಿ ತುತ್ತು ಅವಳ ಗಂಟಲಲ್ಲಿ ಸಿಕ್ಕಿಕೊಂಡ ಹಾಗೆ ಅನಿಸುತ್ತಿತ್ತು. ಕೊನೆಗೆ ಕಪ್ಪೆ "ನನ್ನ ಹೊಟ್ಟೆ ತುಂಬಿತು. ಈಗ ಆಯಾಸದಿಂದ ನಿದ್ದೆ ಬರುವ ಹಾಗೆ ಆಗಿದೆ. ಈಗ ನೀನು ನನ್ನನ್ನು ಎತ್ತಿಕೊಂಡು ನಿನ್ನ ಕೋಣೆಗೆ ಕರೆದುಕೊಂಡು ಹೋಗು. ನಿನ್ನ ಹಾಸಿಗೆಯನ್ನು ಸರಿಮಾಡು. ಇಬ್ಬರೂ ಒಟ್ಟಿಗೆ ಮಲಗೋಣ" ಎಂದು ಹೇಳಿತು. ಅದರ ಮಾತಿನಿಂದ ರಾಜಕುಮಾರಿ ಅಳತೊಡಗಿದಳು. ತಣ್ಣನೆಯ ಕಪ್ಪೆಯನ್ನು ಮುಟ್ಟಲು ಹೆದರಿದಳು. ಅಲ್ಲದೆ ಅದು ಅವಳ ಸುಂದರವಾದ ಮತ್ತು ಸ್ವಚ್ಛವಾದ ಹಾಸಿಗೆಯ ಮೇಲೆ ಮಲಗಲು ಇಷ್ಟಪಟ್ಟಿತ್ತು.

ಅವಳ ಕಣ್ಣೀರಿನಿಂದ ರಾಜನಿಗೆ ಇನ್ನೂ ಹೆಚ್ಚು ಸಿಟ್ಟು ಬಂದಿತು. "ನಿನ್ನ ಕಷ್ಟಕಾಲದಲ್ಲಿ ಸಹಾಯ ಮಾಡಿದವರನ್ನು ಈಗ ಕಡೆಗಾಣಿಸಬಾರದು" ಎಂದು ಮಗಳನ್ನು ಬೈಯ್ದನು. ಹೀಗೆ ರಾಜಕುಮಾರಿ ಆ ಕಪ್ಪೆಯನ್ನು ಎರಡು ಬೆರಳುಗಳಲ್ಲಿ ಹಿಡಿದುಕೊಂಡು ಮೇಲಿನ ತನ್ನ ಕೋಣೆಗೆ ಒಯ್ದಳು. ಅಲ್ಲಿ ಒಂದು ಮೂಲೆಯಲ್ಲಿ ಇಳಿಸಿದಳು. ಅವಳು ತನ್ನ ಹಾಸಿಗೆಯಲ್ಲಿ ಮಲಗಿಕೊಂಡಾಗ ಕಪ್ಪೆ ಮೆಲ್ಲಗೆ ನುಸುಳಿಕೊಂಡು ಬಂದು "ನನಗೆ ತುಂಬಾ ಸುಸ್ತಾಗಿದೆ. ನಾನು ಚೆನ್ನಾಗಿ ನಿದ್ದೆ ಮಾಡಬೇಕು. ನನ್ನನ್ನು ನಿನ್ನ ಹತ್ತಿರ ಮಲಗಲು ಬಿಡು. ಇಲ್ಲದಿದ್ದರೆ ನಿನ್ನ ತಂದೆಗೆ ಹೇಳುವೆ" ಎಂದು ಹೇಳಿತು. ಆ ಮಾತಿನಿಂದ ರಾಜಕುಮಾರಿಗೆ ತುಂಬ ಸಿಟ್ಟು ಬಂದು ಕಪ್ಪೆಯನ್ನು ಹಿಡಿದುಕೊಂಡು ತನ್ನ ಶಕ್ತಿಯನ್ನೆಲ್ಲ ಬಿಟ್ಟು ಗೋಡೆಗೆ ಎಸೆದಳು. "ಏಯ್ ಕುರೂಪಿ ಕಪ್ಪೆ ಈಗಲಾದರೂ ಸುಮ್ಮನಿರುವೆಯೊ ಇಲ್ಲವೊ?" ಎಂದು ಕೂಗಿದಳು.

ಕಪ್ಪೆ ಕೆಳಗೆ ಬಿದ್ದ ತಕ್ಷಣ ಸುಂದರ ರಾಜಕುಮಾರನಾಗಿ ರೂಪಾಂತರಗೊಂಡಿತು. ಅವನ ಕಣ್ಣುಗಳು ಮತ್ತಷ್ಟು ಸುಂದರವಾಗಿದ್ದವು. ಆಮೇಲೆ ಅವನು ರಾಜನ ಒಪ್ಪಿಗೆಯನ್ನು ಪಡೆದು ಅವಳ ಪ್ರಿಯತಮ ಮತ್ತು ಗಂಡನಾದನು. ನಂತರ ತಾನು ದುಷ್ಟ ಮಾಟಗಾತಿಯಿಂದ ಹೇಗೆ ಕಪ್ಪೆ ಆದನು ಎನ್ನುವುದನ್ನು ವಿವರಿಸಿದನು. ಅಲ್ಲದೆ ಅವಳನ್ನು ಬಿಟ್ಟು ಬೇರೆ ಯಾರೂ ಅವನನ್ನು ಕಾರಂಜಿಯಿಂದ ಹೊರಗೆ ಬರುವಂತೆ ಮಾಡಲು

ಶಕ್ತರಾಗಿರಲಿಲ್ಲವೆಂದು ಹೇಳಿದನು. ಮಾರನೆ ದಿನ ಬೆಳಗ್ಗೆ ಅವರಿಬ್ಬರೂ ಒಟ್ಟಿಗೆ ಅವನ ರಾಜ್ಯಕ್ಕೆ ಹೋಗುವುದಾಗಿ ಹೇಳಿದನು.

ಮಾರನೆ ದಿನ ಬೆಳಗ್ಗೆ ಸೂರ್ಯ ಮೇಲೆ ಬಂದಾಗ ಎಂಟು ಕುದುರೆಗಳ ರಥ ಬಂದಿತು. ಅವುಗಳು ತಮ್ಮ ತಲೆಗಳಲ್ಲಿ ಆಸ್ಟ್ರಿಚ್ ಪಕ್ಷಿಯ ಪುಕ್ಕಗಳಿಂದ ಸಿಂಗರಿಸಿಕೊಂಡಿದ್ದವು. ಬಂಗಾರದ ಜೀನು ಹಾಕಿಕೊಂಡಿದ್ದವು. ಅರಮನೆಯ ಬಾಗಿಲವರೆಗೆ ರಥವನ್ನು ಎಳೆದುಕೊಂಡು ಬಂದು ನಿಂತುಕೊಂಡವು. ರಥದ ಹಿಂಭಾಗದಲ್ಲಿ ರಾಜಕುಮಾರನ ನಂಬಿಕೆಯ ಸೇವಕ ಹೆನ್ರಿ ನಿಂತುಕೊಂಡಿದ್ದನು. ತನ್ನ ಯಜಮಾನ ಕಪ್ಪೆ ಆಕಾರ ಪಡೆದಾಗ ಅವನು ತುಂಬ ದುಃಖಪಟ್ಟನು. ತನ್ನ ಹೃದಯ ದುಃಖ ಮತ್ತು ಅಳುವಿನಿಂದ ಎಲ್ಲಿ ಒಡೆದುಹೋಗುವುದೊ ಎಂದು ಹೆದರಿಕೆಯಿಂದ ಮೂರು ಕಬ್ಬಿಣದ ಪಟ್ಟಿಯನ್ನು ಹೃದಯದ ಸುತ್ತಲೂ ಹಾಕಿಕೊಂಡಿದ್ದನು. ಈಗ ಯುವರಾಜಕುಮಾರನನ್ನು ಅವನ ರಾಜ್ಯಕ್ಕೆ ಕರೆದುಕೊಂಡುಹೋಗಲು ರಥ ಸಿದ್ಧವಾಗಿ ಬಂದಿದೆ. ನಂಬಿಕೆಯ ಸೇವಕ ಹೆನ್ರಿ ಮದುಮಗ ಮತ್ತು ಮದುಮಗಳನ್ನು ರಥದಲ್ಲಿ ಕೂರಲು ಸಹಾಯಮಾಡಿದನು. ಅವನು ಅವರ ಹಿಂದೆ ಕುಳಿತನು. ತನ್ನ ಯಜಮಾನನ ಬಿಡುಗಡೆಯಿಂದ ತುಂಬ ಹರ್ಷಿತನಾಗಿದ್ದನು. ಅವರು ಇನ್ನು ಬಹಳ ದೂರ ಹೋಗಿರಲಿಲ್ಲ. ಆಗ ರಾಜಕುಮಾರನಿಗೆ ರಥದ ಹಿಂದೆ ಏನೊ ಮುರಿದ ಹಾಗೆ ಶಬ್ದ ಕೇಳಿಸಿತು. ಅದಕ್ಕೆ ರಾಜಕುಮಾರ ಕಿಟಕಿಯಿಂದ ತಲೆಯನ್ನು ಹೊರಗೆ ಹಾಕಿ ಏನು ಮುರಿಯಿತು ಎಂದು ಕೇಳಿದನು. ಅದಕ್ಕೆ ಹೆನ್ರಿ "ಅದು ರಥವಲ್ಲ ಸ್ವಾಮಿ, ನನ್ನ ಎದೆಯ ಸುತ್ತಲೂ ಹಾಕಿಕೊಂಡಿದ್ದ ಕಬ್ಬಿಣದ ಪಟ್ಟಿಗಳು. ನೀವು ಕಪ್ಪೆಯಾಗಿದ್ದು ನೋಡಿ ನನ್ನ ಹೃದಯ ನೋವನ್ನು ತಡೆಯಲಾರದಾಯಿತು. ಅದಕ್ಕಾಗಿ ನಾನು ಮೂರು ಕಬ್ಬಿಣದ ಪಟ್ಟಿಗಳನ್ನು ಹಾಕಿಕೊಂಡಿದ್ದೆನು" ಎಂದು ಹೇಳಿದನು.

ದಾರಿಯ ಉದ್ದಕ್ಕೂ ಅಂತಹ ಶಬ್ದ ಮತ್ತೆ ಎರಡು ಸಾರಿ ಕೇಳಿಸಿತು. ಪ್ರತಿಸಾರಿಯೂ ರಾಜಕುಮಾರ ರಥದ ಯಾವುದೊ ಭಾಗ ಜಕಂ ಆಗಿದೆ ಎಂದು ಯೋಚಿಸುತ್ತಿದ್ದನು. ಆದರೆ ಪ್ರತಿಸಾರಿಯೂ ಹೆನ್ರಿ ತನ್ನ ಪಟ್ಟಿಯನ್ನು ಮುರಿದುಹಾಕುತ್ತಿದ್ದನು. ವಿಶ್ವಾಸಿಯಾದ ಆತ್ಮೀಯ ಹೆನ್ರಿ ರಾಜಕುಮಾರ ಕಪ್ಪೆರೂಪದಿಂದ ಬಿಡುಗಡೆ ಆದಂತೆ, ತನ್ನ ಎದೆಯನ್ನು ಆ ಪಟ್ಟಿಗಳಿಂದ ಮುಕ್ತಗೊಳಿಸಿ ಅತ್ಯಂತ ಸಂತೋಷಭರಿತನಾದನು.

೨೫. ಶ್ರೀಮತಿ ನರಿಯಮ್ಮನ ಮದುವೆ-ಎರಡು ಕಥೆಗಳು

ಮೊದಲನೆಯ ಕಥೆ

ಒಂದಾನೊಂದು ಕಾಲದಲ್ಲಿ ಒಬ್ಬ ನರಿಯಣ್ಣ ಇದ್ದ. ಅವನ ಹೆಸರು ಒಂಬತ್ತು ಬಾಲದ ನರಿಯಣ್ಣ. ಇದ್ದಕ್ಕಿದ್ದಂತೆ ಅವನಿಗೆ ತನ್ನ ಹೆಂಡತಿ ತನ್ನೊಡನೆ ವಿಶ್ವಾಸದಿಂದ ಇಲ್ಲ ಎಂಬ ಅನುಮಾನ ಬಂದಿತು. ಶ್ರೀಮತಿ ನರಿಯಮ್ಮನನ್ನು ಪರೀಕ್ಷೆ ಮಾಡಲು ಅವನು ನಿರ್ಧರಿಸಿದ. ಕೈಕಾಲು ಸೆಟೆದುಕೊಂಡು ಸತ್ತವನ ರೀತಿಯಲ್ಲಿ ಬೆಂಚಿನ ಕೆಳಗೆ ಮಲಗಿದ. ನರಿಯಮ್ಮ ತನ್ನ ಕೋಣೆಗೆ ಹೋಗಿ ಬಾಗಿಲು ಹಾಕಿಕೊಂಡಳು. ಅವಳ ಸೇವಕಿ ಬೆಕ್ಕು ಬಾಲಕಿ ಒಲೆಯ ಬಳಿ ನಿಂತು ಅಡುಗೆ ಮಾಡುತ್ತಿದ್ದಳು. ಒಂಬತ್ತು ಬಾಲದ ನರಿಯಣ್ಣ ಸತ್ತು ಹೋದ ವಿಚಾರ ಎಲ್ಲರಿಗೂ ತಿಳಿಯಿತು. ಶ್ರೀಮತಿ ನರಿಯಮ್ಮನಿಗೆ ಸಮಾಧಾನ ಹೇಳಿ ಹೋಗಲು ಅನೇಕ ಜನ

ಬಂಧುಗಳು ಬಂದುಹೋದರು. ಆದರೆ ನರಿಯಮ್ಮ ಮಾತ್ರ ಕೋಣೆಯಿಂದ ಹೊರಕ್ಕೆ ಬರಲೇ ಇಲ್ಲ. ಸ್ವಲ್ಪ ಹೊತ್ತಿನ ನಂತರ ಯಾರೋ ಬಾಗಿಲು ಬಡಿದ ಸದ್ದು ಕೇಳಿತು. ಬೆಕ್ಕು ಬಾಲಕಿ ಹೊರಗೆ ಹೋಗಿ ನೋಡಿದಳು. ಯುವಕ ನರಿಯೊಂದು ಬಂದು ನಿಂತಿತ್ತು.



ಯುವಕ ನರಿ ಕೇಳಿದ, "ಕುಮಾರಿ ಬೆಕ್ಕಮ್ಮ, ಹೇಗಿದ್ದಾಳೆ? ಅವಳು ಮಲಗಿದ್ದಾಳೋ ಎದ್ದಿದ್ದಾಳೋ?"

ಬೆಕ್ಕು ಬಾಲಕಿ "ನಾನು ಎದ್ದೂ ಇಲ್ಲ, ಮಲಗೂ ಇಲ್ಲ" ಎಂದು ಉತ್ತರಿಸಿದಳು.

"ಅದು ಸರಿ ಬೆಕ್ಕಮ್ಮ, ನಾನು ಕೇಳಿದ್ದು ನರಿಯಮ್ಮ ಹೇಗಿದ್ದಾಳೆ ಅಂತ" ಎಂದು ಯುವಕ ನರಿ ಮತ್ತೆ ಕೇಳಿದ.

"ನರಿಯಮ್ಮನವರು ಮೇಲೆ ತಮ್ಮ ಕೋಣೆಯಲ್ಲಿದ್ದಾರೆ. ಬಹಳ ಅಳುತ್ತಿದ್ದಾರೆ. ಅತ್ತು ಅತ್ತು ಅವರ ಕಣ್ಣು ಕೆಂಪಾಗಿವೆ. ನರಿಯಣ್ಣನವರು ಸತ್ತುಹೋದ ಸಂಗತಿ ನಿನಗೆ ತಿಳಿದಿಲ್ಲವೆ?" ಎಂದು ಬೆಕ್ಕು ಬಾಲಕಿ ಕೇಳಿದಳು.

ನರಿ ಯುವಕ ಆಗ "ಹಾಗಾದರೆ, ನರಿ ಯುವಕ ಬಂದಿದ್ದಾನೆ, ಅವನು ನರಿಯಮ್ಮನವರನ್ನು ಮದುವೆಯಾಗುತ್ತಾನಂತೆ ಅಂತ ನರಿಯಮ್ಮನವರಿಗೆ ಹೋಗಿ ಹೇಳು" ಎಂದ. ಬೆಕ್ಕು ಬಾಲಕಿ ಮಹಡಿ ಮೆಟ್ಟಿಲು ಹತ್ತಿ ಹೋದಳು. ಕೋಣೆಯ ಬಾಗಿಲು ತಟ್ಟಿ "ನರಿಯಮ್ಮಾ, ನರಿಯಮ್ಮಾ" ಎಂದು ಕೂಗಿದಳು. ನರಿಯಮ್ಮ ಓ ಅಂದಾಗ "ಕೆಳಗೆ ಒಬ್ಬ ನರಿಯುವಕ ಬಂದಿದ್ದಾನೆ. ನಿಮ್ಮ ಕೈ ಹಿಡಿಯಬೇಕಂತೆ" ಎಂದಳು. "ಹೇಗಿದ್ದಾನೆ ಅವನು? ನನ್ನ ಗಂಡನಿಗೆ ಇದ್ದ ಹಾಗೆ ಒಂಬತ್ತು ಸುಂದರವಾದ ಬಾಲಗಳಿವೆಯೇ?" ಎಂದು ನರಿಯಮ್ಮ ಕೇಳಿದಳು. "ಇಲ್ಲ, ಅವನಿಗೆ ಇರುವುದು ಒಂದೇ ಬಾಲ" ಎಂದು ಬೆಕ್ಕು ಬಾಲಕಿ ಉತ್ತರಿಸಿದಳು. "ಅವನು ಬೇಡ" ಅಂದಳು ನರಿಯಮ್ಮ. ಬೆಕ್ಕು ಹೋಗಿ ಆ ಯುವಕ ನರಿಯನ್ನು ವಾಪಸ್ಸು ಕಳಿಸಿದಳು. ಸ್ವಲ್ಪ ಹೊತ್ತಿನ ನಂತರ ಎರಡು ಬಾರಿ ಬಾಗಿಲು ಬಡಿದ ಸದ್ದು ಕೇಳಿಸಿತು. ಇನ್ನೊಬ್ಬ ನರಿಯವಕ ಬಂದಿದ್ದ. ಅವನಿಗೆ ಎರಡು ಬಾಲಗಳಿದ್ದವು. ಅವನೂ ನರಿಯಮ್ಮನನ್ನು ಮದುವೆಯಾಗಲೆಂದು ಬಂದಿದ್ದ. ಅವನನ್ನೂ ವಾಪಸ್ಸು ಕಳಿಸಿದರು. ಹೀಗೆ ಒಬ್ಬರಿಗಿಂತ ಒಬ್ಬರು ಹೆಚ್ಚು ಬಾಲಗಳಿರುವ ನರಿಯಣ್ಣಗಳು ಆರು ಜನ ಬಂದು ಹೋದರು. ಕೊನೆಗೆ ಒಂಬತ್ತು ಬಾಲಗಳಿರುವ ನರಿಯಣ್ಣನೊಬ್ಬ ಬಂದ. ಅವನು ನರಿಯಮ್ಮನ ಸತ್ತುಹೋದ ಗಂಡನಂತೆಯೇ ಇದ್ದ, ಇದು ನರಿಯಮ್ಮನಿಗೆ ತಿಳಿಯಿತು. "ಈಗ ಎಲ್ಲ ಕಿಟಕಿ ಬಾಗಿಲುಗಳನ್ನು ತೆಗೆ. ಅಲ್ಲಿ ಬಿದ್ದಿರುವ ನರಿಯ ಹೆಣವನ್ನು ಹೊರಗೆ ಎಸೆ" ಎಂದು ಶ್ರೀಮತಿ ನರಿಯಮ್ಮ ಹೇಳಿದಳು. ಇನ್ನೇನು ಅವಳ ಮದುವೆ ನಡೆಯಬೇಕು ಅನ್ನುವಾಗ ಸತ್ತಂತೆ ಬಿದ್ದಿದ್ದ ನರಿಯಣ್ಣ ಎದ್ದ. ಮನೆಯಲ್ಲಿ ಸೇರಿದ್ದವರನ್ನೂ ಶ್ರೀಮತಿ ನರಿಯಮ್ಮನನ್ನೂ ಮನೆಯಿಂದ ಓಡಿಸಿದ.

ಎರಡನೆಯ ಕಥೆ


ಈ ಕಥೆಯಲ್ಲಿ ಏನಾಗುತ್ತದೆಂದರೆ, ನರಿಯಣ್ಣ ಸತ್ತವನಂತೆ ಮಲಗಿದನಲ್ಲ , ಆಗ ಬಾಗಿಲು ಬಡಿದ ಸದ್ದು ಕೇಳಿತು. ಬೆಕ್ಕಮ್ಮ ಹೋಗಿ ಬಾಗಿಲು ತೆರೆದಳು. ಅಲ್ಲಿ ತೋಳಣ್ಣ ನಿಂತಿದ್ದ. "ಇದೇನು ಬೆಕ್ಕಮ್ಮ ಒಬ್ಬಳೇ ಬಂದಿದ್ದೀ ಬಾಗಿಲು ತೆಗೆಯಲು? ಯಾಕೆ ಏನಾಯಿತು?" ಎಂದು ವಿಚಾರಿಸಿದ. "ನಾನು ರೊಟ್ಟಿ ಮಾಡುತ್ತ ಇದ್ದೆ ತೋಳಣ್ಣ" ಎಂದು ಬೆಕ್ಕಮ್ಮ ಹೇಳಿದಳು. "ಯಾಕೆ ನರಿಯಮ್ಮ ಇಲ್ಲವೇ?" ಎಂದು ತೋಳಣ್ಣ ಕೇಳಿದ. "ನರಿಯಮ್ಮನವರು ಮೇಲೆ ತಮ್ಮ ಕೋಣೆಯಲ್ಲಿದ್ದಾರೆ. ಬಹಳ ಅಳುತ್ತಿದ್ದಾರೆ. ಅತ್ತು ಅತ್ತು ಕಣ್ಣು ಕೆಂಪಾಗಿವೆ. ನರಿಯಣ್ಣನವರು ಸತ್ತುಹೋದ ಸಂಗತಿ ನಿನಗೆ ತಿಳಿದಿಲ್ಲವೇ?" ಎಂದು ಬೆಕ್ಕಮ್ಮ ಹೇಳಿದಳು. "ನರಿಯಮ್ಮನವರಿಗೆ ಬೇರೆಯ ಗಂಡ ಬೇಕಿದ್ದರೆ ಕೆಳಗಿಳಿದು ಬರುವಂತೆ ಹೇಳು" ಎಂದ ತೋಳಣ್ಣ.

ಬೆಕ್ಕಮ್ಮ ಹೋಗಿ ಐದು ಬಾರಿ ನರಿಯಮ್ಮನ ಕೋಣೆಯ ಬಾಗಿಲು ಬಡಿದು, "ಅಮ್ಮಾ, ನಿಮಗೆ ಹೊಸ ಗಂಡ ಬೇಕಿದ್ದರೆ ಕೆಳಗಿಳಿದು ಬನ್ನಿ" ಎಂದಳು. "ಅವನು ಒಳ್ಳೆಯವನೆ, ಕೆಂಪು ಕಾಲುಚೀಲ ಧರಿಸಿರುವನೇ, ಅವನ ಮೂತಿ ಚೂಪಾಗಿದೆಯೇ" ಎಂದು ನರಿಯಮ್ಮ ಕೇಳಿದಳು. ಬೆಕ್ಕಮ್ಮ "ಇಲ್ಲ" ಎಂದಾಗ "ಅವನು ನನಗೆ ತಕ್ಕವನಲ್ಲ" ಎಂದು ನರಿಯಮ್ಮ ಹೇಳಿಕಳಿಸಿದಳು.

ತೋಳ ವಾಪಸ್ಸು ಹೋದ ಮೇಲೆ ನಾಯಿ, ಸಾರಂಗ, ಮೊಲ, ಕರಡಿ, ಸಿಂಹ, ಹೀಗೆ ಕಾಡಿನ ಎಲ್ಲ ಮೃಗಗಳೂ ಒಂದೊಂದಾಗಿ ಬಂದು ಹೋದವು. ಯಾವ ಪ್ರಾಣಿಯಲ್ಲೂ ಸತ್ತುಹೋದ ನರಿಯಣ್ಣನ ಲಕ್ಷಣಗಳಿರಲಿಲ್ಲ. ಎಲ್ಲರನ್ನೂ ಶ್ರೀಮತಿ ನರಿಯಮ್ಮ ಬೇಡವೆಂದು ಕಳಿಸಿಬಿಟ್ಟಳು. ಕೊನೆಗೆ ಯುವಕ ನರಿಯೊಂದು ಬಂದಿತು. "ಅವನು ಒಳ್ಳೆಯವನೆ, ಕೆಂಪು ಕಾಲುಚೀಲ ಧರಿಸಿರುವನೇ, ಅವನ ಮೂತಿ ಚೂಪಾಗಿದೆಯೇ" ಎಂದು ನರಿಯಮ್ಮ ಕೇಳಿದಳು. ಬೆಕ್ಕಮ್ಮ "ಹೌದು" ಎಂದಾಗ "ಅವನು ಮನೆಯೊಳಕ್ಕೆ ಬರಲಿ" ಎಂದು ನರಿಯಮ್ಮ ಹೇಳಿಕಳಿಸಿದಳು. ಆಮೇಲೆ ಸತ್ತಂತೆ ಬಿದ್ದಿದ್ದ ನರಿಯನ್ನು ಅವರು ಮನೆಯಿಂದಾಚೆಗೆ ಎಸೆದರು. ವಿಜೃಂಭಣೆಯಿಂದ ಮದುವೆ ನಡೆಯಿತು. ಬೆಕ್ಕಮ್ಮ ಹೊಟ್ಟೆ ಬಿರಿಯುಷ್ಟು ಇಲಿಗಳನ್ನು ತಿಂದು ತೇಗಿದಳು. ಆಮೇಲೆ ನರ್ತನ ಕೂಟವೊಂದು ನಡೆಯಿತು. ಒಂಬತ್ತು ಬಾಲದ ನರಿಯಣ್ಣ ಏನು ಮಾಡಿದನೋ ಗೊತ್ತೇ ಇಲ್ಲ. ಬಹುಶಃ ಶ್ರೀಮತಿ ನರಿಯಮ್ಮನವರ ಮದುವೆಯ ಸಮಾರಂಭದ ನರ್ತನ ಇನ್ನೂ ನಡೆದೇ ಇರಬಹುದು.

೨೬. ಅದ್ಭುತ ಸಂಗೀತಗಾರ

ಒಂದಾನೊಂದು ಕಾಲದಲ್ಲಿ ಒಬ್ಬ ಪಿಟೀಲು ನುಡಿಸುವವನಿದ್ದ. ಒಮ್ಮೆ ಅವನು ಕಾಡಿನಲ್ಲಿ ಹೋಗುತ್ತಿದ್ದ. ಅವನ ತಲೆಯೊಳಗೆ ವಿಚಿತ್ರವಾದ ಆಲೋಚನೆಗಳು ಬರುತ್ತಿದ್ದವು. "ಈಗ ನನಗೆ ವಿರಾಮವೋ ವಿರಾಮ. ಕಾಡೋ ವಿಶಾಲ. ಯಾರಾದರೂ ಜೊತೆಗಾರ ಸಿಕ್ಕರೆ ಚೆನ್ನಾಗಿರುತ್ತದೆ" ಎಂದು ಅಂದುಕೊಂಡ. ಪಿಟೀಲನ್ನು ಹಿಡಿದು ಮರಗಳಲ್ಲೆಲ್ಲ ಪ್ರತಿಧ್ವನಿ ಬರುವಂತೆ ಒಂದು ಹಾಡು ನುಡಿಸಿದ. ಆಗ ಅಲ್ಲಿದ್ದ ಪೊದೆಯೊಳಗಿಂದ ಒಂದು ತೋಳ ಹೊರ ಬಂದಿತು.



“ಅಯ್ಯೋ, ಕೆಟ್ಟ ತೋಳ ಬಂದಿತಲ್ಲಪ್ಪಾ!” ಎಂದುಕೊಂಡ ಸಂಗೀತಗಾರ. ತೋಳ ಅವನ ಬಳಿಗೆ ಬಂದು “ಅಯ್ಯಾ, ಎಷ್ಟು ಚೆನ್ನಾಗಿ ಹಾಡು ನುಡಿಸುತ್ತೀ! ನನಗೂ ಪಿಟೀಲು ನುಡಿಸುವುದನ್ನು ಹೇಳಿಕೊಡು” ಎಂದು ಕೇಳಿತು.

“ಅದಕ್ಕೇನಂತೆ, ನೀನೂ ಪಿಟೀಲು ಕಲಿಯಬಹುದು. ಆದರೆ ನಾನು ಹೇಳಿದಂತೆ ಕೇಳಬೇಕು ಅಷ್ಟೆ” ಎಂದ ಸಂಗೀತಗಾರ. “ಅದಕ್ಕೇನಂತೆ, ಶಾಲೆಯ ಮಕ್ಕಳು ಮೇಷ್ಟರ ಮಾತು ವಿಧೇಯತೆಯಿಂದ ಕೇಳುತ್ತಾರಲ್ಲ ಹಾಗೆಯೇ ನಾನೂ ಕೂಡ ನೀನು ಹೇಳಿದಂತೆಯೇ ಕೇಳುತ್ತೇನೆ” ಅಂದಿತು ತೋಳ. ಸಂಗೀತಗಾರ ತೋಳವನ್ನು ಜೊತೆಯಲ್ಲಿ ಕರೆದುಕೊಂಡು ಹೊರಟ. ದಾರಿಯಲ್ಲಿ ಅವನಿಗೆ ಒಂದು ದೊಡ್ಡ ಓಕ್ ಮರ ಕಾಣಿಸಿತು. ಆ ಮರದ ನಡುವೆ ಪೊಟರೆಯೊಂದಿತ್ತು. “ನಿನಗೆ ಸಂಗೀತ ಕಲಿಯುವ ಆಸೆ ಇದ್ದರೆ ನಿನ್ನ ಮುಂಗಾಲುಗಳನ್ನು ಈ ಪೊಟರೆಯೊಳಗೆ ಇಡು” ಎಂದು ಸಂಗೀತಗಾರ ತೋಳಕ್ಕೆ ಹೇಳಿದ. ತೋಳ ಹಾಗೆಯೇ ಮಾಡಿತು. ಆಗ ಸಂಗೀತಗಾರ ಒಂದು ಕಲ್ಲು ತೆಗೆದುಕೊಂಡು ಬೆಣೆಯಹಾಗೆ ಅದನ್ನು ತೋಳದ ಕಾಲಿನ ಮೇಲೆ ಪೊಟರೆಯೊಳಕ್ಕೆ ಸಿಕ್ಕಿಸಿಬಿಟ್ಟ. ತೋಳದ ಕಾಲು ಕದಲಿಸಲಾಗದ ಹಾಗೆ ಸಿಕ್ಕಿಕೊಂಡುಬಿಟ್ಟಿತು. “ನಾನು ಮತ್ತೆ ಬರುವವರೆಗೆ ಇಲ್ಲೇ ಇರು” ಎಂದು ಹೇಳಿ ಸಂಗೀತಗಾರ ಮುಂದೆ ನಡೆದ.

ಸ್ವಲ್ಪ ದೂರ ಹೋದಮೇಲೆ ಮತ್ತೆ “ಈಗ ನನಗೆ ವಿರಾಮವೋ ವಿರಾಮ. ಕಾಡೋ ವಿಶಾಲ. ಯಾರಾದರೂ ಜೊತೆಗಾರ ಸಿಕ್ಕರೆ ಚೆನ್ನಾಗಿರುತ್ತದೆ” ಎಂದು ಅಂದುಕೊಂಡ. ಇನ್ನೊಂದು ಹಾಡು ನುಡಿಸಿದ. ಮರಗಳ ಸಂದಿನಿಂದ ಒಂದು ನರಿ ನೆಲ ಮೂಸಿಕೊಂಡು ಬಂದಿತು. “ಅಯ್ಯೋ, ತಂತ್ರಗಾರ ನರಿ ಬಂದಿತಲ್ಲ” ಅಂದುಕೊಂಡ ಸಂಗೀತಗಾರ. “ಅಯ್ಯಾ ಸಂಗೀತಗಾರ, ಎಷ್ಟು ಚೆನ್ನಾಗಿ ಪಿಟೀಲು ನುಡಿಸುತ್ತೀಯಲ್ಲ! ನಾನೂ ಹೀಗೆ ನುಡಿಸುವುದನ್ನು ಕಲಿಯಬಹುದೇ?” ಎಂದು ನರಿ ಕೇಳಿತು. “ಅದಕ್ಕೇನಂತೆ, ನೀನೂ ಪಿಟೀಲು ಕಲಿಯಬಹುದು. ಆದರೆ ನಾನು ಹೇಳಿದಂತೆ ಕೇಳಬೇಕು ಅಷ್ಟೆ” ಎಂದ ಸಂಗೀತಗಾರ. “ಅದಕ್ಕೇನಂತೆ, ಶಾಲೆಯ ಮಕ್ಕಳು ಮೇಷ್ಟರ ಮಾತು ವಿಧೇಯತೆಯಿಂದ ಕೇಳುತ್ತಾರಲ್ಲ ಹಾಗೆಯೇ ನಾನೂ ಕೂಡ ನೀನು ಹೇಳಿದಂತೆಯೇ ಕೇಳುತ್ತೇನೆ” ಅಂದಿತು ನರಿ. ಅವರು ಒಟ್ಟಾಗಿ ನಡೆದರು.

ಅಲ್ಲಿ ಒಂದು ಕಡೆ ದಾರಿಯ ಎರಡೂ ಬದಿಯಲ್ಲಿ ಹ್ಯಾಸಲ್ ಮರಗಳು ಬೆಳೆದಿದ್ದವು. ಆ ಮರದ ಕೊಂಬೆಗಳು ತೆಳ್ಳಗೆ ಬಳ್ಳಿಯಂತೆ ಇರುತ್ತವೆ. ಸಂಗೀತಗಾರನು "ನರಿಯೇ ನಿನ್ನ ಎಡ ಮುಂಗಾಲು ಕೊಡು" ಎಂದು ಕೇಳಿ ಅದನ್ನು ಎಡಗಡೆಯ ಮರದ ಕೊಂಬೆಯನ್ನು ಬಗ್ಗಿಸಿ ಅದಕ್ಕೆ ಕಟ್ಟಿಹಾಕಿದ. ಹಾಗೇ ಅದರ ಬಲ ಮುಂಗಾಲನ್ನು ಬಲಗಡೆಯ ಮರದ ಕೊಂಬೆಯನ್ನು ಬಗ್ಗಿಸಿ ಕಟ್ಟಿಹಾಕಿದ. ಅವನು ಕೈಬಿಟ್ಟ ಕೂಡಲೆ ಕೊಂಬೆಗಳು ಮತ್ತೆ ಮೊದಲಿನಂತೆ ಮೇಲೇರಿದವು. ನರಿ ಆಕಾಶದಲ್ಲಿ ನೇತಾಡತೊಡಗಿತು. "ನಾನು ಮತ್ತೆ ಬರುವವರೆಗೆ ಕಾಯುತ್ತಿರು" ಎಂದು ಹೇಳಿ ಸಂಗೀತಗಾರ ಮುಂದೆ ನಡೆದ.

"ಈಗ ನನಗೆ ವಿರಾಮವೋ ವಿರಾಮ. ಕಾಡೋ ವಿಶಾಲ. ಯಾರಾದರೂ ಜೊತೆಗಾರ ಸಿಕ್ಕರೆ ಚೆನ್ನಾಗಿರುತ್ತದೆ" ಎಂದು ಅಂದುಕೊಂಡ. ಪಿಟೀಲನ್ನು ಹಿಡಿದು ಮರಗಳಲ್ಲೆಲ್ಲ ಪ್ರತಿಧ್ವನಿ ಬರುವಂತೆ ಒಂದು ಹಾಡು ನುಡಿಸಿದ. ಆಗ ಅಲ್ಲಿದ್ದ ಪೊದೆಯೊಳಗಿನಿಂದ ಒಂದು ಮೊಲ ಹೊರಬಂದಿತು. "ಅಯ್ಯೋ, ಮೊಲವೇ? ನನಗೆ ಸರಿಯಾದ ಗೆಳೆಯ ಈ ಬಾರಿಯೂ ಸಿಗಲಿಲ್ಲವೇ" ಅಂದುಕೊಂಡ ಸಂಗೀತಗಾರ. "ಅಯ್ಯಾ ಸಂಗೀತಗಾರ, ಎಷ್ಟು ಚೆನ್ನಾಗಿ ಹಾಡು ನುಡಿಸುತ್ತೀಯಲ್ಲ! ನಾನೂ ಹೀಗೆ ನುಡಿಸುವುದನ್ನು ಕಲಿಯಬಹುದೇ?" ಎಂದು ಮೊಲ ಕೇಳಿತು. "ಅದಕ್ಕೇನಂತೆ, ನೀನೂ. ಪಿಟೀಲು ಕಲಿಯಬಹುದು. ಆದರೆ ನಾನು ಹೇಳಿದಂತೆ ಕೇಳಬೇಕು ಅಷ್ಟೆ" ಎಂದ ಸಂಗೀತಗಾರ. "ಅದಕ್ಕೇನಂತೆ, ಶಾಲೆಯಲ್ಲಿ ಮಕ್ಕಳು ಮೇಷ್ಟರ ಮಾತು ವಿಧೇಯತೆಯಿಂದ ಕೇಳುತ್ತಾರಲ್ಲ ಹಾಗೆಯೇ ನಾನೂ ಕೂಡ ನೀನು ಹೇಳಿದಂತೆಯೇ ಕೇಳುತ್ತೇನೆ" ಅಂದಿತು ಮೊಲ. ದಾರಿಯಲ್ಲಿ ಅವರಿಗೆ ಒಂದು ಎತ್ತರವಾದ ಮರ ಕಾಣಿಸಿತು. ಆ ಮರಕ್ಕೆ ಬಳ್ಳಿಯೊಂದು ಸುತ್ತಿಕೊಂಡಿತ್ತು. ಸಂಗೀತಗಾರ ಬಳ್ಳಿಯನ್ನು ಮೊಲದ ಕೊರಳಿಗೆ ಕಟ್ಟಿ "ಮೊಲವೇ, ಈ ಮರಕ್ಕೆ ಇಪ್ಪತ್ತು ಬಾರಿ ಸುತ್ತುಹಾಕು" ಎಂದ. ಹಾಗೇ ಮಾಡಿದಾಗ ಬಳ್ಳಿ ಸುತ್ತಿಕೊಂಡು ಮೊಲ ಮರಕ್ಕೆ ಬಿಗಿದುಕೊಂಡಂತಾಯಿತು."ನಾನು ಬರುವವರೆಗೆ ಕಾಯುತ್ತಿರು" ಎಂದು ಸಂಗೀತಗಾರ ಮುಂದೆ ನಡೆದ.

ಈ ವೇಳೆಗೆ ತೋಳ ಬಹಳ ಕಷ್ಟಪಟ್ಟು ತನ್ನ ಕಾಲುಗಳನ್ನು ಪೊಟರೆಯಿಂದ ಬಿಡಿಸಿಕೊಂಡಿತ್ತು. ಅದಕ್ಕೆ ಸಂಗೀತಗಾರನ ಮೇಲೆ ಕೋಪ, ಸೇಡು ಹುಟ್ಟಿದವು. ಅವನು ಸಿಕ್ಕರೆ ಕಚ್ಚಿ ತುಂಡುತುಂಡು ಮಾಡಬೇಕೆಂದು ಅವನನ್ನು ಹುಡುಕಿಕೊಂಡು ಹೊರಟಿತು. ದಾರಿಯಲ್ಲಿ ಆಕಾಶದಲ್ಲಿ ನೇತಾಡುತ್ತಿದ್ದ ನರಿ ಕಾಣಿಸಿತು. "ತೋಳಣ್ಣಾ, ಸಹಾಯ ಮಾಡು. ಸಂಗೀತಗಾರ ನನಗೆ ಮೋಸ ಮಾಡಿದ" ಎಂದು ಕೂಗಿತು. ತೋಳ ನರಿಯನ್ನು ಬಿಡಿಸಿತು. ಎರಡೂ ಒಟ್ಟಾಗಿ ಸಂಗೀತಗಾರನನ್ನು ಹುಡುಕುತ್ತಾ ಹೊರಟವು. ದಾರಿಯಲ್ಲಿ ಮೊಲ ಸಿಕ್ಕಿತು. ತೋಳ, ನರಿ ಸೇರಿ ಮೊಲವನ್ನು ಬಿಡಿಸಿದವು. ಮೂವರೂ ತಮ್ಮ ಶತ್ರುವನ್ನು ಹುಡುಕಿಕೊಂಡು ಹೊರಟವು.

ಸಂಗೀತಗಾರ ಮತ್ತೊಮ್ಮೆ ಪಿಟೀಲು ನುಡಿಸಿದ. ಅಲ್ಲಿ ಒಬ್ಬ ಬಡವ ಮರ ಕಡಿಯುತ್ತಿದ್ದ. ಸಂಗೀತವನ್ನು ಕೇಳಿ ಅವನು ತುಂಬಾ ಸಂತೋಷಪಟ್ಟ. ಮರ ಕಡಿಯುವುದನ್ನು ಒಟ್ಟು ಸಂಗೀತಗಾರ ಇದ್ದಲ್ಲಿಗೆ ಬಂದ. "ಆಹಾ, ಕೊನೆಗೂ ಒಬ್ಬ ಮನುಷ್ಯ ನನಗೆ ದೊರೆತ. ನನಗೆ ಪ್ರಾಣಿಗಳ ಸ್ನೇಹ ಬೇಕಾಗಿರಲಿಲ್ಲ. ಅಂತೂ ಮನುಷ್ಯ ದೊರೆತನಲ್ಲ" ಎಂದು ಸಂಗೀತಗಾರ ಸಂತೋಷಪಟ್ಟ. ಒಳ್ಳೆಯದೊಂದು ಹಾಡು ನುಡಿಸಿದ. ಅದನ್ನು ಕೇಳಿ ಮರ ಕಡಿಯುವವನ ಹೃದಯ ಆನಂದದಿಂದ ತುಂಬಿತು. ಆ ವೇಳೆಗೆ ತೋಳ, ನರಿ, ಮೊಲ

ಸಂಗೀತಗಾರನತ್ತ ಬರುತ್ತಿರುವುದು ಕಾಣಿಸಿತು. ಮರ ಕಡಿಯುವವನಿಗೆ ಅವು ಏನೋ ಕೆಡಕು ಮಾಡುತ್ತವೆ ಎನ್ನಿಸಿತು. ಸಂಗೀತಗಾರನನ್ನು ಕಾಪಾಡುವವನಂತೆ ಕೊಡಲಿ ಎತ್ತಿ ಹಿಡಿದುಕೊಂಡು ನಿಂತ. "ಮುಂದೆ ಬಂದರೆ ನಿಮ್ಮ ಗತಿ ನೆಟ್ಟಗಾಗದು" ಅನ್ನುವಂತಿತ್ತು ಅವನ ನೋಟ. ಪ್ರಾಣಿಗಳು ಹೆದರಿ ಹಿಂದೆ ಸರಿದು ಓಡಿ ಹೋದವು. ಸಂಗೀತಗಾರ ತನ್ನ ಕೃತಜ್ಞತೆ ತೋರಲು ಇನ್ನೊಂದು ಹಾಡು ನುಡಿಸಿದ. ಆಮೇಲೆ ತನ್ನ ಪ್ರಯಾಣ ಮುಂದುವರೆಸಿದ.

೨೭. ಹಕ್ಕಿ ಗಡ್ಡದ ರಾಜಕುಮಾರ



ಒಂದೂರಲ್ಲಿ ಒಬ್ಬ ರಾಜ ಇದ್ದ. ಅವನಿಗೆ ಒಬ್ಬ ಸುಂದರವಾದ ಮಗಳಿದ್ದಳು. ಅವಳು ಎಷ್ಟು ಸುಂದರಿ ಎಂದು ಊಹಿಸುವುದಕ್ಕೂ ಸಾಧ್ಯವಿಲ್ಲ. ಆದರೆ ಅವಳಿಗೆ ಜಂಬ ಬಹಳ ಇತ್ತು. ಆದ್ದರಿಂದಲೇ ಅವಳು ಯಾವ ವರನನ್ನೂ ಒಪ್ಪಿರಲಿಲ್ಲ. ಅವಳನ್ನು ಮದುವೆಯಾಗಲೆಂದು ಬಂದವರನ್ನೆಲ್ಲಾ ಅವಳು ಜರಿಯುತ್ತಿದ್ದಳು. ಒಂದು ಸಾರಿ ರಾಜ ಒಂದು ದೊಡ್ಡ ಹಬ್ಬವನ್ನು ನಡೆಸಿದ. ಅದೇ ಸಮಯದಲ್ಲಿ ತನ್ನ ಮಗಳಿಗೆ ಸ್ವಯಂವರವನ್ನೂ ಏರ್ಪಡಿಸಿದ. ಬಂದವರನ್ನೆಲ್ಲ ಅವರ ಯೋಗ್ಯತೆಗೆ ತಕ್ಕಂತೆ ಕೂರಿಸಿದ. ಮೊದಲಿಗೆ ರಾಜರು, ಆಮೇಲೆ ರಾಜಕುಮಾರರು, ನಂತರ ಸಣ್ಣ ರಾಜರು, ಅವರಾದಮೇಲೆ ಸಾಮಂತರು, ನಂತರ ಪಾಳೇಗಾರರು, ಕೊನೆಯಲ್ಲಿ ಸರದಾರರು-ಹೀಗೆ. ರಾಜಕುಮಾರಿಗೆ ಅವರನ್ನು ಒಬ್ಬೊಬ್ಬರನ್ನಾಗಿ ಪರಿಚಯ ಮಾಡಿಕೊಟ್ಟ. ಆದರೆ ಅವಳಿಗೋ ಜಂಬ! ಒಬ್ಬೊಬ್ಬರನ್ನೂ ಕೀಟಲೆ ಮಾಡಲು ಏನಾದರೂ ಕಾರಣ ಹುಡುಕುತ್ತಿದ್ದಳು. ಇವನು ತುಂಬಾ ದಪ್ಪ, ಹೆಂಡದ ಬೋಗುಣಿ ಹಾಗಿದ್ದಾನೆ; ಅವನು ತುಂಬಾ ಉದ್ದ ತೆಂಗಿನ ಮರದ ಹಾಗೆ, ಇಂಥವರಿಗೆ ಬುದ್ಧಿ ಇರುವುದಿಲ್ಲ ; ಮತ್ತೊಬ್ಬ ಗಿಡ್ಡ ; ಮಗದೊಬ್ಬ ಡುಮ್ಮ ; ಅವನು ಬೆಳ್ಳಗೆ ಬಿಳಚಿಕೊಂಡಿದ್ದಾನೆ; ಇವನು ಕಾಗೆ ಹಾಗೆ ಕಪ್ರಗಿದ್ದಾನೆ; ಸೌದೆ ತುಂಡಿನ ಹಾಗೆ ಒಣಗಿಕೊಂಡಿರುವ ಇವನಿಗೆ ಮದುವೆ ಬೇರೆ ಕೇಡು, ಹೀಗೆ ಎಲ್ಲರನ್ನೂ ಅಣಕಿಸಿಕೊಂಡು ಮುಂದೆ

ಹೋದಳು. ಕೊನೆಗೆ ಒಬ್ಬ ರಾಜಕುಮಾರ ಉಳಿದಿದ್ದ. ಯುವಕ, ಸುಂದರ. ಆದರೆ ಅವನ ಗಡ್ಡ ಸ್ವಲ್ಪ ಸೊಟ್ಟಗಿತ್ತು. ಅವನನ್ನು ನೋಡಿ ಜೋರಾಗಿ ನಗುತ್ತಾ "ಇವನ ಗಡ್ಡ ತ್ರಷ್ ಹಕ್ಕಿಯ ಕೊಕ್ಕಿನಂತಿದೆ" ಎಂದಳು. ಅವತ್ತಿನಿಂದ ಅವನಿಗೆ ತ್ರಷ್ ಗಡ್ಡದವನು ಅನ್ನುವ ಹೆಸರೇ ರೂಢಿಯಾಗಿಬಿಟ್ಟಿತು.

ಪಾಪ, ರಾಜನಿಗೆ ಬೇಸರವಾಯಿತು. ತನ್ನ ಮಗಳು ಯಾರನ್ನೂ ಒಪ್ಪದೆ ಎಲ್ಲರಿಗೂ ಅಡ್ಡ ಹೆಸರಿಟ್ಟಿದ್ದು ಕಂಡು ಕೋಪ ಬಂತು. ಮಾರನೆಯ ದಿನ ಬೆಳಗ್ಗೆ ಅರಮನೆಯ ಬಾಗಿಲಿಗೆ ಭಿಕ್ಷೆ ಬೇಡಲು ಮೊದಲು ಬರುವ ತಿರುಪೆಯವನಿಗೇ ಅವಳನ್ನು ಕೊಟ್ಟು ಮದುವೆ ಮಾಡುತ್ತೇನೆ ಎಂದು ಶಪಥ ಮಾಡಿಬಿಟ್ಟ.

ಎರಡು ದಿನ ಕಳೆಯಿತು. ಯಾರೂ ಬರಲಿಲ್ಲ. ಮೂರನೆಯದಿನ ಒಬ್ಬ ಭಿಕ್ಷುಕ ಅರಮನೆಯ ಕಿಟಕಿಯ ಹತ್ತಿರ ಹಾಡುತ್ತಾ ಬಂದ. ರಾಜ ಅವನನ್ನು ನೋಡಿ ಅರಮನೆಯೊಳಕ್ಕೆ ಬರುವಂತೆ ಕರೆದ. ಚಿಂದಿ ಚಿಂದಿಯಾದ ಕೊಳಕು ಬಟ್ಟೆ ತೊಟ್ಟ ಭಿಕ್ಷುಕ ಬಂದ. ರಾಜಕುಮಾರಿ ಅಲ್ಲೇ ಇದ್ದಳು. ಭಿಕ್ಷುಕ ಒಂದು ಹಾಡು ಹೇಳಿದ. ಏನಾದರೂ ಭಿಕ್ಷೆ ಹಾಕಿ ಎಂದು ಕೋರಿದ. "ನಿನ್ನ ಹಾಡು ಕೇಳಿ ನನಗೆ ಸಂತೋಷವಾಗಿದೆ. ನನ್ನ ಮಗಳನ್ನೇ ಕೊಡುತ್ತೇನೆ. ಮದುವೆಯಾಗು" ಎಂದು ರಾಜ ಹೇಳಿದ.

ರಾಜಕುಮಾರಿಗೆ ಗಾಬರಿಯಾಯಿತು. "ನಿನ್ನನ್ನು ಭಿಕ್ಷುಕನಿಗೆ ಕೊಟ್ಟು ಮದುವೆ ಮಾಡುತ್ತೇನೆ ಎಂದು ಶಪಥ ಮಾಡಿದ್ದೇನೆ. ನಾನು ಹಾಗೇ ನಡೆದುಕೊಳ್ಳುವವನು" ಎಂದು ರಾಜ ಹೇಳಿದ. ರಾಜಕುಮಾರಿ ಅತ್ತಳು, ಹಟ ಮಾಡಿದಳು. ರಾಜ ಬಿಡಲಿಲ್ಲ. ಪಾದ್ರಿಯನ್ನು ಕರೆಸಿದ. ಮಗಳನ್ನು ಭಿಕ್ಷುಕನಿಗೆ ಕೊಟ್ಟು ಮದುವೆ ಮಾಡಿಯೇಬಿಟ್ಟ. "ಇನ್ನು ನೀನು ನಿನ್ನ ಗಂಡನ ಜೊತೆ ಹಳ್ಳಿಗೆ ಹೋಗು" ಎಂದು ಮಗಳನ್ನು ಭಿಕ್ಷುಕನೊಡನೆ ಕಳಿಸಿಯೇಬಿಟ್ಟ.

ಭಿಕ್ಷುಕ ರಾಜಕುಮಾರಿಯನ್ನು ತನ್ನೊಡನೆ ಕರೆದುಕೊಂಡು ಹೊರಟ. ರಾಜಕುಮಾರಿಗೆ ನಡೆದು ಅಭ್ಯಾಸ ಇರಲಿಲ್ಲ. ತಡವರಿಸುತ್ತಾ ಹೆಜ್ಜೆ ಹಾಕಿದಳು. ದಾರಿಯಲ್ಲಿ ಒಂದು ಸುಂದರವಾದ ಕಾಡು ಕಾಣಿಸಿತು. "ಈ ಕಾಡು ಯಾವ ರಾಜನಿಗೆ ಸೇರಿದ್ದು?" ಎಂದು ರಾಜಕುಮಾರಿ ಕೇಳಿದಳು. "ಇದು ತ್ರಷ್ ಪಕ್ಷಿಯಂಥ ಗಡ್ಡ ಇರುವ ರಾಜನಿಗೆ ಸೇರಿದ್ದು. ಅವನು ಒಳ್ಳೆಯ ರಾಜ. ನೀನು ಅವನನ್ನು ಮದುವೆ ಆಗಿದ್ದಿದ್ದರೆ ನೀನೇ ಈ ಕಾಡಿಗೆ ಒಡತಿ ಆಗುತ್ತಿದ್ದೆ" ಎಂದು ಭಿಕ್ಷುಕ ಹೇಳಿದ. ರಾಜಕುಮಾರಿ "ಹೋದರೆ ಹೋಗಲಿ ಬಿಡು" ಅಂದಳು. ಆದರೆ ಮನಸ್ಸಿನೊಳಗೆ ತಾನು ತ್ರಷ್ ಪಕ್ಷಿ ಗಡ್ಡದ ರಾಜನನ್ನು ಒಪ್ಪಿ ಮದುವೆ ಆಗಿದ್ದಿದ್ದರೆ ಇಷ್ಟು ದೊಡ್ಡ ಕಾಡಿನ ಒಡತಿ ಆಗುತ್ತಿದ್ದೆನಲ್ಲಾ ಎಂದು ಪೇಚಾಡಿಕೊಂಡಳು.

ಅವರು ನಡೆಯುತ್ತ ಒಂದು ಹುಲ್ಲುಗಾವಲಿನ ಬಳಿಗೆ ಬಂದರು. "ಇಷ್ಟು ದೊಡ್ಡ ಹಸಿರು ಮೈದಾನ ಯಾರಿಗೆ ಸೇರಿದ್ದು?" ಎಂದು ರಾಜಕುಮಾರಿ ಕೇಳಿದಳು. "ಇದು ತ್ರಷ್ ಪಕ್ಷಿಯಂಥ ಗಡ್ಡ ಇರುವ ರಾಜನಿಗೆ ಸೇರಿದ್ದು" ಎಂದು ಭಿಕ್ಷುಕ ಉತ್ತರಿಸಿದ. ಹಾಗೇ ನಡೆಯುತ್ತ ಅವರು ದೊಡ್ಡ ಪಟ್ಟಣಕ್ಕೆ ಬಂದು ಸೇರಿದರು. "ಈ ಊರು ಯಾವುದು? ಇಲ್ಲಿನ ರಾಜ ಯಾರು?" ಎಂದು ರಾಜಕುಮಾರಿ ಕೇಳಿದಳು. "ಇದು ತ್ರಷ್ ಪಕ್ಷಿಯಂಥ ಗಡ್ಡ ಇರುವ ರಾಜನಿಗೆ ಸೇರಿದ್ದು" ಎಂದು ಯಾರೋ ಹೇಳಿದರು.

"ಅಯ್ಯೋ, ನಾನೆಂಥ ಪೆದ್ದಿ! ಅವನನ್ನು ಮದುವೆ ಆಗುವ ಅವಕಾಶ ಸಿಕ್ಕಿದ್ದಾಗ ಅವನನ್ನು ಬೇಡ

ಎಂದೆನಲ್ಲ" ಎಂದು ರಾಜಕುಮಾರಿ ಗೊಣಗಿಕೊಂಡಳು. "ನೀನು ಹೀಗೆಲ್ಲಾ ಆಡಬಾರದು. ಮದುವೆ ಆದ ಗಂಡ ನಾನಿರುವಾಗ ಬೇರೆ ಇನ್ನೊಬ್ಬನನ್ನು ಮದುವೆ ಆಗಬೇಕಿತ್ತು ಎಂದು ಯಾಕೆ ಹೇಳುತ್ತೀ? ನಾನು ನಿನಗೆ ತಕ್ಕವನಲ್ಲವೇ?" ಎಂದು ಭಿಕ್ಷುಕ ಗದರಿಸಿದ. ಇನ್ನೂ ಮುಂದೆ ಹೋದಮೇಲೆ ಒಂದು ಪುಟ್ಟ ಗುಡಿಸಲು ಕಾಣಿಸಿತು. "ಈ ಗುಡಿಸಲು ಯಾರದು?"ಎಂದು ರಾಜಕುಮಾರಿ ಕೇಳಿದಳು. "ಇದು ನನ್ನ ಮನೆ. ನಾವಿಬ್ಬರೂ ಇಲ್ಲೇ ಸಂಸಾರ ಮಾಡಬೇಕು" ಎಂದು ಭಿಕ್ಷುಕ ಹೇಳಿದ. ಅವಳನ್ನು ಒಳಕ್ಕೆ ಕರೆದೊಯ್ದ. ಇಲ್ಲಿ ಯಾರೂ ಸೇವಕರಿಲ್ಲವೇ ಎಂದು ರಾಜಕುಮಾರಿ ಕೇಳಿದಳು. "ಭಿಕ್ಷುಕನ ಬಳಿ ಸೇವಕರೆಲ್ಲಿರುತ್ತಾರೆ? ಎಲ್ಲ ಕೆಲಸ ನೀನೇ ಮಾಡಬೇಕು. ಈಗ ಒಲೆ ಹಚ್ಚು, ಅಡುಗೆ ಮಾಡು, ನನಗೆ ಹಸಿವಾಗಿದೆ" ಎಂದು ಹೇಳಿದ.

ರಾಜಕುಮಾರಿಗೆ ಪಾಪ ಯಾವ ಕೆಲಸವೂ ಗೊತ್ತಿರಲಿಲ್ಲ. ಭಿಕ್ಷುಕನೇ ಎಲ್ಲ ಕೆಲಸ ಮಾಡಬೇಕಾಯಿತು. ಗಂಜಿ ಊಟ ಮಾಡಿ ಮಲಗಿದರು. ಬೆಳಗಾದಾಗ ಭಿಕ್ಷುಕ ಅವಳನ್ನು ಬೇಗನೇ ಎಬ್ಬಿಸಿದ. ಮನೆಯೆಲ್ಲಾ ಗುಡಿಸಿ, ಸಾರಿಸಲು ಹೇಳಿದ. ಕೆಲವು ದಿನ ಹೀಗೇ ಕಳೆದರು. ಮನೆಯಲ್ಲಿ ಅಡುಗೆ ಸಾಮಗ್ರಿಯೆಲ್ಲ ಖರ್ಚಾಗಿಹೋಯಿತು. "ನಾವು ಹೀಗೆ ಕುಳಿತು ತಿಂದರೆ ಆಗುವುದಿಲ್ಲ. ಏನಾದರೂ ಕೆಲಸ ಮಾಡಬೇಕು. ನಾನು ಬಿದಿರು ತಂದುಕೊಡುತ್ತೇನೆ, ನೀನು ಬುಟ್ಟಿ ಹೆಣೆಯಬೇಕು" ಎಂದು ಭಿಕ್ಷುಕ ಹೇಳಿದ. ರಾಜಕುಮಾರಿ ಬುಟ್ಟಿ ಹೆಣೆಯಲು ಹೋಗಿ ಕೈಗೆ ಗಾಯ ಮಾಡಿಕೊಂಡಳು. "ಹೋಗಲಿ, ಹತ್ತಿ ತಂದುಕೊಡುತ್ತೇನೆ, ನೂಲು ತೆಗೆದುಕೊಡು" ಎಂದು ಭಿಕ್ಷುಕ ಹೇಳಿದ. ಒರಟು-ನೂಲು ತರಚಿ ಕೈಬೆರಳುಗಳಿಗೆ ಗಾಯವಾಗಿ ರಕ್ತ ಸುರಿಯಿತು. "ನಿನಗೆ ಯಾವ ಕೆಲಸವೂ ಬರುವುದಿಲ್ಲ. ನಿನ್ನನ್ನು ಮದುವೆಯಾದದ್ದೇ ತಪ್ಪಾಯಿತು. ಹೋಗಲಿ ನಾನು ಮಡಕೆಗಳನ್ನು ಮಾಡಿಕೊಡುತ್ತೇನೆ, ನೀನು ಸಂತೆಗೆ ಹೋಗಿ ಅವನ್ನು ಮಾರಿಕೊಂಡು ಬಾ" ಎಂದು ಭಿಕ್ಷುಕ ರಾಜಕುಮಾರಿಗೆ ಹೇಳಿದ.

"ಅಯ್ಯೋ, ನಮ್ಮಪ್ಪನ ರಾಜ್ಯದವರು ಯಾರಾದರೂ ಬಂದು ನನ್ನನ್ನು ಸಂತೆಯಲ್ಲಿ ನೋಡಿ ನಕ್ಕರೆ ಅವಮಾನವಾಗುತ್ತದೆ. ನಾನು ಸಂತೆಗೆ ಹೋಗಲಾರೆ" ಎಂದು ರಾಜಕುಮಾರಿ ಗೋಗರೆದಳು. ಆದರೆ ಯಾವ ಗೊಣಗಾಟವೂ ನಡೆಯಲಿಲ್ಲ. ಸಂತೆಗೆ ಹೋಗಿ ಮಡಕೆ ಮಾರದಿದ್ದರೆ ಉಪವಾಸ ಇರಬೇಕಾದ ಸ್ಥಿತಿ ಬಂದಿತು. ಮೊದಲ ವಾರ ತುಂಬ ಚೆನ್ನಾಗಿ ವ್ಯಾಪಾರ ಆಯಿತು. ಸುಂದರ ರಾಜಕುಮಾರಿ ಕೇಳಿದಷ್ಟು ಬೆಲೆ ತೆತ್ತು ಜನ ಮಡಕೆಗಳನ್ನು ಕೊಂಡರು. ಅವಳು ತಂದ ಹಣ ಖರ್ಚಾದ ಮೇಲೆ ಭಿಕ್ಷುಕ ಮತ್ತಷ್ಟು ಹೊಸ ಮಡಕೆಗಳನ್ನು ತಂದುಕೊಟ್ಟ. ಈ ಬಾರಿ ಅವಳು ಸಂತೆಯ ಒಂದು ಮೂಲೆಯಲ್ಲಿ ಮಡಕೆಗಳನ್ನು ಇಟ್ಟುಕೊಂಡು ವ್ಯಾಪಾರಕ್ಕೆ ಕುಳಿತಳು. ಸ್ವಲ್ಪ ಹೊತ್ತಿನಲ್ಲೇ ಶ್ರೀಮಂತ ಕುಡುಕನೊಬ್ಬ ಕುದುರೆಯೇರಿಕೊಂಡು ಬಂದ. ಕುದುರೆಯನ್ನು ಅವಳ ಮಡಕೆಗಳ ಮೇಲೆಯೇ ನುಗ್ಗಿಸಿಕೊಂಡು ಹೋದ. ಅವಳ ಮಡಕೆಗಳೆಲ್ಲ ನುಚ್ಚು ನೂರಾದವು. ರಾಜಕುಮಾರಿ ಏನು ಮಾಡಬೇಕೆಂದು ತಿಳಿಯದೆ ಅಳುತ್ತ ಮನೆಗೆ ಹಿಂದಿರುಗಿದಳು. ಗಂಡ ಏನೆನ್ನುತ್ತಾನೆಯೋ ಎಂದು ಅಂಜಿಕೊಂಡಳು. ವಿಷಯ ತಿಳಿದ ಭಿಕ್ಷುಕ "ಹೀಗೇ ಏನೋ ಆಗುತ್ತದೆ ಎಂದು ನನಗೆ ತಿಳಿದಿತ್ತು. ಸಂತೆಯ ಮೂಲೆಯಲ್ಲಿ ಮಡಕೆ ವ್ಯಾಪಾರಕ್ಕೆ ಯಾಕೆ ಕುಳಿತುಕೊಳ್ಳಬೇಕಾಗಿತ್ತು? ನಿನಗೆ ಯಾವ ಕೆಲಸವನ್ನೂ ಸರಿಯಾಗಿ ಮಾಡಲು ಬರುವುದಿಲ್ಲ. ಸುಮ್ಮನೆ ಅಳಬೇಡ. ನಾನು ಅರಮನೆಯ ಬಳಿಗೆ ಹೋಗಿದ್ದೆ. ಅಲ್ಲಿ ಅಡುಗೆಮನೆಯಲ್ಲಿ ಕೆಲಸ ಮಾಡುವುದಕ್ಕೆ ಒಬ್ಬ ಹೆಣ್ಣಾಳು ಬೇಕಂತೆ. ನಿನ್ನನ್ನು

ಕೆಲಸಕ್ಕೆ ಇಟ್ಟುಕೊಳ್ಳಿ ಎಂದು ಕೇಳಿಕೊಂಡೆ. ಅಲ್ಲಾದರೆ ನೀನು ದುಡ್ಡಿಲ್ಲದೆ ಊಟ ಸಂಪಾದಿಸಿಕೊಳ್ಳಬಹುದು" ಎಂದು ಹೇಳಿದ.

ರಾಜಕುಮಾರಿ ಅಡುಗೆಮನೆಯ ಸೇವಕಿಯಾದಳು. ಅಡುಗೆಯವನು ಹೇಳಿದ ಎಲ್ಲ ಕೆಲಸಗಳನ್ನೂ ಮಾಡುತ್ತಿದ್ದಳು. ಸಂಜೆಯ ವೇಳೆಗೆ ಮನೆಗೆ ಹಿಂದಿರುಗುತ್ತಿದ್ದಳು. ಬರುವಾಗ ತನ್ನ ನಿಲುವಂಗಿಯ ದೊಡ್ಡ ಜೇಬಿನೊಳಗೆ ಗಾಜಿನ ಪಾತ್ರೆಯೊಂದನ್ನು ಇಟ್ಟುಕೊಂಡು ಅದರಲ್ಲಿ ಅಳಿದುಳಿದ ತಿಂಡಿ ತಿನಿಸುಗಳನ್ನು ಮನೆಗೆ ತರುತ್ತಿದ್ದಳು. ಭಿಕ್ಷುಕ ಗಂಡನೊಡನೆ ಅದನ್ನು ಹಂಚಿಕೊಂಡು ತಿನ್ನುತ್ತಿದ್ದಳು. ಕೆಲವು ದಿನಗಳಲ್ಲೆ ಅರಮನೆಯಲ್ಲಿ ಯಾರದೋ ಮದುವೆ ನಡೆಯುತ್ತಿತ್ತು. ಪಾಪ, ಬಡ ರಾಜಕುಮಾರಿ ಏನೆಲ್ಲ ಕೆಲಸ ಮಾಡಬೇಕಾಯಿತು. ಸುಂದರ ಉಡುಪುಗಳನ್ನು ಧರಿಸಿದ್ದ ಅತಿಥಿಗಳು ಬಂದರು. ಅವರನ್ನು ಕಂಡು ರಾಜಕುಮಾರಿ ತನ್ನ ಅದೃಷ್ಟವನ್ನು ಹಳಿದುಕೊಂಡಳು. ನನ್ನ ಜಂಬದಿಂದಲೇ ನನಗೆ ಈ ಗತಿ ಬಂದಿತು, ಬಡವಳಾಗಿ ಭಿಕ್ಷುಕನ ಹೆಂಡತಿಯಾಗಬೇಕಾಯಿತು ಎಂದು ಮನಸ್ಸಿನೊಳಗೆ ಗೋಳಾಡಿಕೊಂಡಳು. ಅರಮನೆಯ ಸೇವಕರು ಅವಳಿಗೆ ಅಡುಗೆಯನ್ನು ತಂದು ಬಡಿಸಲು ಹೇಳಿದರು. ಅಡುಗೆಯ ಪರಿಮಳ ಅವಳ ದುಃಖವನ್ನು ಹೆಚ್ಚಿಸಿತು. ಅತಿಥಿಗಳು ಉಂಡು ಎಸೆದದ್ದನ್ನು ತನ್ನ ನಿಲುವಂಗಿಯ ಜೇಬಿನೊಳಗಿದ್ದ ಪಾತ್ರೆಯೊಳಕ್ಕೆ ಹಾಕಿಕೊಂಡಳು. ಆ ವೇಳೆಗೆ ರಾಜಕುಮಾರ ಬಂದ. ಸುಂದರವಾದ, ಮೃದುವಾದ ರೇಶಿಮೆ ಉಡುಪು ಧರಿಸಿದ್ದ. ಕೊರಳಿನಲ್ಲಿ ಬಂಗಾರದ ಸರ ಹಾಕಿಕೊಂಡಿದ್ದ. ರಾಜಕುಮಾರ ಬಂದವನೇ ಅವಳ ಕೈಹಿಡಿದು ನರ್ತಿಸಲು ಕರೆದ. ಅವಳು ಅವನ ಮುಖ ನೋಡಿ ಹೆದರಿದಳು. ಅವಳು ಹಿಂದೆ ತಮಾಷೆ ಮಾಡಿ ನಕ್ಕಿದ್ದ ತ್ರಷ್ ಪಕ್ಷಿ ಗಡ್ಡದ ರಾಜಕುಮಾರನೇ ಅವನು. ಅವನು ರಾಜಕುಮಾರಿಯ ಕೈಬಿಡದೆ ಬಲವಂತವಾಗಿ ಎಳೆದುಕೊಂಡು ಹೋದ. ಅವಳ ನಿಲುವಂಗಿಯ ಜೇಬಿನೊಳಗಿದ್ದ ಗಾಜಿನ ಪಾತ್ರೆ ಒಡೆದುಹೋಯಿತು. ಅದರಲ್ಲಿದ್ದ ಮಾಂಸದ ತುಂಡು, ಸಾರು ಎಲ್ಲ ಚೆಲ್ಲಿಹೋಯಿತು. ಅಲ್ಲಿದ್ದ ಶ್ರೀಮಂತ ಅತಿಥಿಗಳು ಅದನ್ನು ಕಂಡು ಚಪ್ಪಾಳೆ ತಟ್ಟಿ ನಕ್ಕರು. ರಾಜಕುಮಾರಿಗೆ ಅವಮಾನವಾಯಿತು. ನೆಲ ಬಾಯಿಬಿಟ್ಟು ತನ್ನನ್ನು ನುಂಗಬೇಕು ಅನ್ನಿಸಿತು. ಅವಳು ಅಲ್ಲಿಂದ ಓಡಿಹೋಗಲು ಯತ್ನಿಸಿದಳು. ಆದರೆ ಬಾಗಿಲ ಬಳಿ ತ್ರಷ್ ಪಕ್ಷಿ ಗಡ್ಡದ ರಾಜಕುಮಾರ ನಿಂತಿದ್ದ. ಅವಳನ್ನು ತಡೆದು "ಹೆದರಬೇಡ, ನಿನ್ನ ತಂದೆಯ ಅರಮನೆಗೆ ಬಂದು ಹಾಡು ಹೇಳಿದ ಭಿಕ್ಷುಕ ನಾನೇ. ನಿನ್ನೊಡನೆ ಗುಡಿಸಲಲ್ಲಿ ಸಂಸಾರ ಮಾಡಿದವನು ನಾನೆ. ಸಂತೆಯಲ್ಲಿ ಮಡಕೆಗಳ ಮೇಲೆ ನಾನೇ ಕುದುರೆ ಓಡಿಸಿದ್ದೆ. ನಿನ್ನ ಜಂಬವನ್ನು ಕಳೆಯಬೇಕೆಂದೇ ಹೀಗೆ ಮಾಡಿದೆ. ನನಗೆ ನಿನ್ನ ಮೇಲೆ ಪ್ರೀತಿ ಇತ್ತು. ನೀನು ಜಂಬದಿಂದ ನನ್ನನ್ನು ತಿರಸ್ಕರಿಸಿದೆ" ಎಂದು ಹೇಳಿದ. ರಾಜಕುಮಾರಿ ಪಶ್ಚಾತ್ತಾಪದಿಂದ ಅತ್ತಳು. "ನಾನು ನಿನಗೆ ಅಂದು ಅವಮಾನ ಮಾಡಿದ್ದೆ. ನಿನಗೆ ನಾನು ತಕ್ಕವಳಲ್ಲ" ಎಂದು ಅವಳು ಗೋಳಾಡಿದಳು."ಅಳಬೇಡ. ನಿನ್ನ ಕೆಟ್ಟ ದಿನಗಳು ಕಳೆದುಹೋದವು. ನಾವು ಈಗ ವಿಜೃಂಭಣೆಯಿಂದ ಮದುವೆ ಮಾಡಿಕೊಳ್ಳೋಣ" ಎಂದು ರಾಜಕುಮಾರ ಹೇಳಿದ.

ಸೇವಕಿಯರು ಬಂದು ರಾಜಕುಮಾರಿಗೆ ಸುಂದರ ಉಡುಪುಗಳನ್ನು ತೊಡಿಸಿದರು. ರಾಜಕುಮಾರಿಯ ತಂದೆ ಮತ್ತು ಅವನ ಆಸ್ಥಾನಿಕರೆಲ್ಲ ಬಂದರು. ಎಲ್ಲರೂ ಅವಳಿಗೆ ಶುಭ ಹಾರೈಸಿದರು. ರಾಜಕುಮಾರಿಯ ಸುಖದ ದಿನಗಳು ಶುರುವಾದವು. ತ್ರಷ್ ಗಡ್ಡದ ರಾಜನ ಮಡದಿಯಾಗಿ ಅವಳು ಮುಂದೆ ಸುಖವಾಗಿದ್ದಳು.



ಆಗ ಬೇಸಗೆಯ ಕಾಲ. ಒಬ್ಬ ದರ್ಜಿ ತನ್ನ ಅಂಗಡಿಯಲ್ಲಿ ಕಿಟಕಿಯ ಪಕ್ಕದಲ್ಲಿ ಕುಳಿತು ಖುಷಿಯಾಗಿ ಬಟ್ಟೆ ಹೊಲಿಯುತ್ತಿದ್ದ. ಅದೇ ವೇಳೆಗೆ ಬೀದಿಯಲ್ಲಿ ಒಬ್ಬ ಹೆಂಗಸು ಉಪ್ಪಿನ ಕಾಯಿ ಮಾರಿಕೊಂಡು ಬಂದಳು. "ಒಳ್ಳೆಯ ಉಪ್ಪಿನ ಕಾಯಿ, ಬಹಳ ದಿನ ಬಾಳಿಕೆ ಬರುವ ಉಪ್ಪಿನ ಕಾಯಿ" ಎಂದು ಅವಳು ಕೂಗುತ್ತಾ ಬರುತ್ತಿದ್ದಳು. ಗಿಡ್ಡ ದರ್ಜಿ ಕಿಟಕಿಯಿಂದ ತಲೆ ಹೊರಗೆ ಹಾಕಿ "ಏಯ್, ಉಪ್ಪಿನ ಕಾಯಿ, ಬಾ ಇಲ್ಲಿ" ಎಂದು ಕೂಗಿದ. ಹೆಂಗಸು ತನ್ನ ಭಾರವಾದ ಬುಟ್ಟಿ ಹೊತ್ತುಕೊಂಡು ಮೂರು ಮೆಟ್ಟಿಲು ಹತ್ತಿ ದರ್ಜಿಯವನ ಮನೆಗೆ ಹೋದಳು. ಎಲ್ಲ ಕುಡಿಕೆಗಳನ್ನೂ ತೆರೆದು ಉಪ್ಪಿನ ಕಾಯಿಗಳನ್ನು ತೋರಿಸಿದಳು. ಅವನು ಎಲ್ಲ ಉಪ್ಪಿನ ಕಾಯಿಗಳನ್ನೂ ಬೆಳಕಿಗೆ ಹಿಡಿದು ಪರೀಕ್ಷೆ ಮಾಡಿದ, ಅವನ್ನೆಲ್ಲಾ ಮೂಸಿ ನೋಡಿದ. ಕೊನೆಗೆ "ಪರವಾಗಿಲ್ಲ ಅಂತ ಕಾಣುತ್ತದೆ. ಕಾಲು ಸೇರು ಕೊಡು. ಹೋಗಲಿ ಅರ್ಧಸೇರು ಕೊಟ್ಟರೂ ಪರವಾಗಿಲ್ಲ" ಅಂತ ಹೇಳಿದ. ಆ ಹೆಂಗಸಿಗೆ ಇಂಥ ಗಿರಾಕಿ ಇಷ್ಟವಾಗಲಿಲ್ಲ. ಆದರೂ ಅವನು ಕೇಳಿದಷ್ಟು ಕೊಟ್ಟು, ಅತೃಪ್ತಿಯಿಂದ ಬಯ್ದುಕೊಂಡು ಹೋದಳು.

ಆಹಾ, ಈ ಉಪ್ಪಿನಕಾಯಿ ಸ್ವರ್ಗದಿಂದ ಬಂದಿದೆ. ಇದರ ಪರಿಮಳಕ್ಕೆ ನನಗೆ ಹೊಸ ಶಕ್ತಿ ಬಂದಂತಿದೆ ಎಂದು ಗಿಡ್ಡ ದರ್ಜಿ ತನ್ನಷ್ಟಕ್ಕೇ ಹೇಳಿಕೊಂಡ. ಹಲಗೆಯ ಮೇಲಿಟ್ಟಿದ್ದ ಬ್ರೆಡ್ಡನ್ನು ತೆಗೆದುಕೊಂಡ. "ಬರೀ ಬ್ರೆಡ್ಡು ತಿನ್ನುವುದಕ್ಕಿಂತ ಉಪ್ಪಿನಕಾಯಿ ನಂಜಿಕೊಂಡು ತಿಂದರೆ ಚೆನ್ನಾಗಿರುತ್ತದೆ. ಆದರೆ ಇದನ್ನು ತಿನ್ನುವ ಮೊದಲು ಈ ವೇಸ್ಟ್ ಕೋಟನ್ನು ಹೊಲೆದು ಮುಗಿಸಬೇಕಲ್ಲ" ಎಂದುಕೊಂಡು ಬ್ರೆಡ್ಡನ್ನು ಬಳಿಯಲ್ಲೇ ಇಟ್ಟುಕೊಂಡು ಬಟ್ಟೆಗೆ ದೊಡ್ಡ ದೊಡ್ಡ ಹೊಲಿಗೆ ಹಾಕತೊಡಗಿದ. ಉಪ್ಪಿನಕಾಯಿಯ ಪರಿಮಳ ಮನೆಯ ಮಾಡಿನವರೆಗೂ ಏರಿತು. ಅಲ್ಲಿದ್ದ ನೂರಾರು ನೊಣಗಳು ಹಾರಿ ಬಂದು ಬ್ರೆಡ್ಡಿನ ಮೇಲೆ ಕುಳಿತವು. "ಎಲಾ ನೊಣಗಳೇ! ನಿಮ್ಮನ್ನು ಕರೆದವರು ಯಾರು" ಎಂದು ದರ್ಜಿ ನೊಣಗಳನ್ನು ಓಡಿಸಿದ. ಆದರೆ ಮತ್ತಷ್ಟು ನೊಣಗಳು ಹಾರಿ ಬಂದು ಅಲ್ಲೇ ಕುಳಿತವು. ಗಿಡ್ಡ ದರ್ಜಿಗೆ ಬಹಳ ಕೋಪ ಬಂದಿತು. ಒಂದು ಹಳೆಯ ಗೋಣಿಚೀಲ ತೆಗೆದುಕೊಂಡು ನೊಣಗಳ ಮೇಲೆ ಬೀಸಿ ಹೊಡೆದ. ಏಳು ನೊಣಗಳು ಸತ್ತು ಬಿದ್ದವು. ದರ್ಜಿಗೆ ಆಶ್ಚರ್ಯ, ಸಂತೋಷ ಎರಡೂ ಆದವು. "ಎಂಥ ವೀರನಯ್ಯಾ ನೀನು! ಒಂದೇ ಏಟಿಗೆ ಏಳು ಜೀವ ಖತಂ" ಎಂದು ತನ್ನನ್ನು ತಾನೇ ಮೆಚ್ಚಿಕೊಂಡ. ನನ್ನ ಸಾಹಸ ಇಡೀ ಊರಿಗೆ ತಿಳಿಯಬೇಕು ಅಂದುಕೊಂಡು, ಒಂದು ಪಟ್ಟಿಯ ಮೇಲೆ ದೊಡ್ಡ ಅಕ್ಷರಗಳಲ್ಲಿ "ಒಂದೇ ಏಟಿಗೆ ಏಳು" ಎಂದು ದೊಡ್ಡ ಅಕ್ಷರಗಳಲ್ಲಿ ಹೊಲಿಗೆ ಹಾಕಿ ಬರೆದ. "ನನ್ನ ಸಾಹಸ ಊರಿಗೆ ಯಾಕೆ, ಇಡೀ ಜಗತ್ತಿಗೇ ತಿಳಿಯಬೇಕು" ಎಂದುಕೊಂಡ. ಅವನ ಹೃದಯ ಗಬ್ಬದ ಕುರಿಯ ಬಾಲದ ಹಾಗೆ ಬಡಿದುಕೊಂಡಿತು.

ದರ್ಜಿಗೆ ತನ್ನಂಥ ವೀರ ಇಂಥ ಪುಟ್ಟ ಅಂಗಡಿಯಲ್ಲಿರುವುದು ಸರಿಯಲ್ಲ, ದೇಶ ಸುತ್ತಿ ಸಾಹಸಗಳನ್ನು ಮಾಡಬೇಕು ಅನ್ನಿಸಿತು. "ಒಂದೇ ಏಟಿಗೆ ಏಳು" ಎಂದು ಬರೆದಿದ್ದ ಪಟ್ಟಿಯನ್ನು ಸೊಂಟಕ್ಕೆ ಸುತ್ತಿಕೊಂಡ. ತನ್ನೊಡನೆ ಒಯ್ಯುವಂಥದ್ದು ಏನಾದರೂ ಇದೆಯೇ ಎಂದು ಸುತ್ತಲೂ ಕಣ್ಣಾಡಿಸಿದ. ತಂಗಳು ಗಿಣ್ಣ ಕಾಣಿಸಿತು. ಅದನ್ನು ಎತ್ತಿ ಜೇಬಿಗಿಳಿಸಿದ. ಮನೆಯ ಬಾಗಿಲ ಮೇಲೆ ಒಂದು ಹಕ್ಕಿ ಕುಳಿತಿತ್ತು. ಅದನ್ನು ಬಾ ಎಂದು ಕರೆದ. ಅದು ಹಾರಿ ಹೋಗಿ ಪೊದೆಯಲ್ಲಿ ಕುಳಿತಿತು. ಗಿಡ್ಡ ದರ್ಜಿ ಅದನ್ನು ಹಿಡಿದು ಇನ್ನೊಂದು ಜೇಬಿನಲ್ಲಿಟ್ಟುಕೊಂಡ. ಮನೆ ಬಿಟ್ಟು ಹೊರಟ. ಅವನು ಗಿಡ್ಡಕ್ಕೆ ತೆಳ್ಳಗೆ ಇದ್ದಿದ್ದರಿಂದ ಬೇಗ ಬೇಗ ನಡೆದ. ಊರು ದಾಟಿ ಬೆಟ್ಟವೊಂದರ ಬಳಿಗೆ ಹತ್ತಿ ಅದರ ತುದಿಗೆ ತಲುಪಿದಾಗ ಅವನಿಗೆ ಒಬ್ಬ ರಾಕ್ಷಸ ಕಾಣಿಸಿದ.

ದರ್ಜಿಯವನು ಸೀದಾ ರಾಕ್ಷಸನ ಬಳಿಗೆ ಹೋಗಿ "ಅಯ್ಯಾ ರಾಕ್ಷಸ, ಇದೇನು ಹೀಗೆ ಸುಮ್ಮನೆ ಕುಳಿತುಬಿಟ್ಟೆ? ನಾನು ಸುಖ ಸಂಪತ್ತನ್ನು ಹುಡುಕಿಕೊಂಡು ಸಾಹಸಗಳನ್ನು ಮಾಡಲು ಹೊರಟಿದ್ದೇನೆ. ನಿನಗೆ ಮನಸ್ಸಿದ್ದರೆ ನೀನೂ ನನ್ನೊಡನೆ ಬಾ" ಎಂದು ಕರೆದ. ರಾಕ್ಷಸ ತಿರಸ್ಕಾರದಿಂದ "ನೀನೊಬ್ಬ ಸಾಮಾನ್ಯ ಮನುಷ್ಯ. ಸುಮ್ಮನೆ ತಲೆ ಹರಟೆ ಮಾಡುತ್ತ ತೊಂದರೆ ಕೊಡಬೇಡ. ಹೋಗು" ಎಂದ.

ಗಿಡ್ಡ ದರ್ಜಿ "ನಾನು ಎಂಥವನು ಎಂದು ತಿಳಿಯಬೇಕಾದರೆ ಈ ಪಟ್ಟಿಯ ಮೇಲೆ ಬರೆದಿರುವುದನ್ನು ಓದು" ಎಂದು ಸೊಂಟದಲ್ಲಿದ್ದ ಪಟ್ಟಿಯನ್ನು ತೋರಿಸಿದ. "ಒಂದೇ ಏಟಿಗೆ ಏಳು" ಎಂದು ಬರೆದಿರುವುದನ್ನು ಓದಿ ರಾಕ್ಷಸ "ಈ ಮನುಷ್ಯ ಒಂದೇ ಏಟಿಗೆ ಏಳು ಜನರನ್ನು ಕೊಂದಿದ್ದಾನೆ" ಎಂದು ಭಾವಿಸಿದ. ಅವನಿಗೆ ದರ್ಜಿಯ ಬಗ್ಗೆ ಗೌರವ ಮೂಡಿತು. ಆದರೂ ಗಿಡ್ಡ ದರ್ಜಿಯನ್ನು ಪರೀಕ್ಷೆ ಮಾಡಬೇಕೆನ್ನಿಸಿತು. ಅಲ್ಲಿ ಬಿದ್ದಿದ್ದ ಒಂದು ಸಣ್ಣ ಕಲ್ಲನ್ನು ಎತ್ತಿಕೊಂಡು ಬಲವಾಗಿ ಹಿಂಡಿದ. ಕಲ್ಲಿನಿಂದ

ಎರಡು ಹನಿ ನೀರು ಸುರಿಯಿತು. "ನಿನಗೆ ಶಕ್ತಿ ಇದ್ದರೆ ನನ್ನ ಹಾಗೆ ಮಾಡಿತೋರಿಸು ನೋಡೋಣ" ಎಂದು ರಾಕ್ಷಸ ಹೇಳಿದ.

ಗಿಡ್ಡ ದರ್ಜಿ "ಅದೇನು ಮಹಾ, ನಾನು ಮಾಡುವುದನ್ನು ನೋಡು" ಎನ್ನುತ್ತಾ ಜೇಬಿನಲ್ಲಿದ್ದ ಗಿಣ್ಣವನ್ನು ತೆಗೆದು ಬಲವಾಗಿ ಹಿಂಡಿದ. ಅದು ಪೂರ್ತಿ ನೀರಾಗಿ ಹರಿದುಹೋಯಿತು. ರಾಕ್ಷಸನಿಗೆ ನಂಬಲು ಸಾಧ್ಯವೇ ಆಗಲಿಲ್ಲ. ಈ ಮನುಷ್ಯನನ್ನು ಇನ್ನಷ್ಟು ಪರೀಕ್ಷಿಸಬೇಕೆಂದು ಒಂದು ಕಲ್ಲನ್ನು ಎತ್ತಿ ಜೋರಾಗಿ ಮೇಲೆ ಎಸೆದ. ಅದು ಕಣ್ಣಿಗೆ ಕಾಣದಷ್ಟು ಮೇಲಕ್ಕೆ ಹೋಯಿತು. "ಎಲ್ಲಿ, ನನ್ನ ಹಾಗೆ ಎಸೆ ನೋಡೋಣ" ಎಂದು ರಾಕ್ಷಸ ಸವಾಲು ಹಾಕಿದ. ಆಗ ದರ್ಜಿ "ನೀನು ಎಸೆದದ್ದು ನೆಲಕ್ಕೆ ಬೀಳುತ್ತದೆ, ನಾನು ಎಸೆದದ್ದು ನೆಲಕ್ಕೆ ಬೀಳುವುದೇ ಇಲ್ಲ ನೋಡು" ಎನ್ನುತ್ತಾ ಜೇಬಿನಲ್ಲಿದ್ದ ಹಕ್ಕಿಯನ್ನು ಹಾರಿಬಿಟ್ಟ. ಅದು ಸ್ವಾತಂತ್ರ್ಯ ಸಿಕ್ಕಿದ ಖುಷಿಯಲ್ಲಿ ಮೇಲಕ್ಕೆ ಹಾರಿಕೊಂಡು ಹೊರಟೇಹೋಯಿತು.

ಆಗ ರಾಕ್ಷಸ, "ಸರಿ, ಸರಿ, ನೀನು ಬುದ್ಧಿವಂತ. ನಿನಗೆ ಎಷ್ಟು ಶಕ್ತಿ ಇದೆಯೋ ನೋಡಬೇಕು. ಇಲ್ಲಿ ಒಂದು ಮರ ಬಿದ್ದಿದೆ. ಇದನ್ನು ಕಾಡಿನಿಂದ ಹೊರಕ್ಕೆ ಸಾಗಿಸಲು ನನಗೆ ಸಹಾಯ ಮಾಡು ನೋಡೋಣ" ಎಂದ. ಆಗ ಗಿಡ್ಡ ದರ್ಜಿ "ನೀನು ಬೊಡ್ಡೆಯನ್ನು ಹೊತ್ತುಕೋ, ನಾನು ಕೊಂಬೆಯನ್ನು ಹೊರುತ್ತೇನೆ. ಕೊಂಬೆಗಳನ್ನು ಹೊರುವುದೇ ಕಷ್ಟ" ಎಂದ. ರಾಕ್ಷಸ ಬೊಡ್ಡೆಯನ್ನು ಹೆಗಲ ಮೇಲೆ ಇಟ್ಟುಕೊಂಡ. ಅವನು ಹಿಂದಿರುಗಿ ನೋಡಲು ಆಗುತ್ತಿರಲಿಲ್ಲ. ಗಿಡ್ಡ ದರ್ಜಿ ಕೊಂಬೆಯ ಮೇಲೆ ಹಾಯಾಗಿ ಕುಳಿತುಬಿಟ್ಟ. ರಾಕ್ಷಸ ಮರವನ್ನೂ, ದರ್ಜಿಯನ್ನೂ ಹೊತ್ತುಕೊಂಡು ನಡೆದ. ದರ್ಜಿ ಸಿಳ್ಳು ಹಾಕುತ್ತಾ, ತನ್ನ ಬುದ್ಧಿವಂತಿಕೆಯನ್ನು ಮೆಚ್ಚಿಕೊಳ್ಳುತ್ತಾ ಇದ್ದ. ಸ್ವಲ್ಪ ಹೊತ್ತಾದ ಮೇಲೆ ರಾಕ್ಷಸನು "ಇನ್ನು ನನ್ನ ಕೈಯಲ್ಲಿ ಆಗುವುದಿಲ್ಲ. ಮರ ಕೆಳಗೆ ಇಳಿಸುತ್ತೇನೆ" ಎಂದ. ಗಿಡ್ಡ ದರ್ಜಿ ಕೂಡಲೆ ಕೆಳಕ್ಕೆ ಜಿಗಿದು, ಕೊಂಬೆಗಳನ್ನು ಅಪ್ಪಿಕೊಂಡು, ತಾನೇ ಮರವನ್ನು ಹೊರುತ್ತಿರುವವನಂತೆ ನಟನೆ ಮಾಡಿದ. "ಅಯ್ಯಾ ರಾಕ್ಷಸ! ನಿನಗೆ ಇಷ್ಟು ದೊಡ್ಡ ಮೈ ಇದೆ. ಈ ಮರ ಹೊರಲು ಆಗುವುದಿಲ್ಲವೇ? ನಾನು ಹೇಗೆ ಹೊರುತ್ತಿದ್ದೇನೆ ನೋಡು" ಎಂದ.

ಅವರು ಸ್ವಲ್ಪ ಮುಂದೆ ಹೋದರು. ಅಲ್ಲಿ ಒಂದು ದೊಡ್ಡ ಚೆರ್‍ರಿ ಹಣ್ಣಿನ ಮರವಿತ್ತು. ರಾಕ್ಷಸ ಅದರ ಕೊಂಬೆಯನ್ನು ಬಾಗಿಸಿ "ಇದರ ಹಣ್ಣನ್ನು ಕಿತ್ತು ತಿನ್ನು" ಎಂದು ದರ್ಜಿಗೆ ಹೇಳಿದ. ಗಿಡ್ಡ ದರ್ಜಿಗೆ ಶಕ್ತಿ ಕಡಿಮೆಯಾದ್ದರಿಂದ ರಾಕ್ಷಸ ಕೈಬಿಟ್ಟ ಕೂಡಲೇ ಕೊಂಬೆ ಮೇಲಕ್ಕೆ ಚಿಮ್ಮಿತು. ದರ್ಜಿಯು ಅದರೊಡನೆ ಮೇಲಕ್ಕೆ ಹಾರಿದ. ಆದರೆ ಎಲ್ಲೂ ಮೈಗೆ ಗಾಯವಾಗದಂತೆ ಮರ ಇಳಿದು ಬಂದ. "ಏನು ನಿನಗೆ ಕೊಂಬೆ ಹಿಡಿಯುವ ಶಕ್ತಿ ಇಲ್ಲವೇ?" ಎಂದ ರಾಕ್ಷಸ. "ಒಂದೇ ಏಟಿಗೆ ಏಳು ಕೊಂದವನಿಗೆ ಶಕ್ತಿ ಇಲ್ಲವೇ? ಆಚೆ ಪೊದೆಯಲ್ಲಿ ಬೇಟೆಗಾರರು ಇದ್ದರು, ಅವರನ್ನು ನೋಡಲು ಮೇಲಕ್ಕೆ ಚಿಮ್ಮಿಕೊಂಡು ಹೋದೆ. ನೀನು ನನ್ನ ಹಾಗೆ ಹಾರು ನೋಡೋಣ" ಎಂದ ದರ್ಜಿ. ರಾಕ್ಷಸ ಮರದ ಕೊಂಬೆ ಹಿಡಿದು ಮೇಲಕ್ಕೆ ಚಿಮ್ಮಿದ. ಆದರೆ ಅವನ ದೊಡ್ಡ ಮೈ ಮರದ ಕೊಂಬೆಗಳಲ್ಲಿ ಸಿಕ್ಕಿಕೊಂಡಿತು. ಗಾಯಗಳಾದವು. ಈಗಲೂ ರಾಕ್ಷಸನೆ ಸೋತುಹೋದ.

ರಾಕ್ಷಸನಿಗೆ ಚಿಂತೆ ಹತ್ತಿತು. "ನೀನು ಅಷ್ಟು ಶಕ್ತಿವಂತನಾದರೆ ನಮ್ಮ ಮನೆಗೆ ಬಂದು ಒಂದು ರಾತ್ರಿಯನ್ನು

ಕಳೆ ನೋಡೋಣ" ಎಂದು ಗಿಡ್ಡ ದರ್ಜಿಗೆ ಸವಾಲು ಹಾಕಿದ. ದರ್ಜಿ ಒಪ್ಪಿ ಅವನ ಹಿಂದೆ ನಡೆದ. ಅವರು ಗುಹೆಯೊಂದರ ಬಳಿಗೆ ಹೋದರು. ಗುಹೆಯ ಒಳಗೆ ಬೆಂಕಿಯ ಬಳಿ ಇನ್ನಿಬ್ಬರು ರಾಕ್ಷಸರು ಕುಳಿತಿದ್ದರು. ಇಬ್ಬರೂ ಒಂದೊಂದು ಹುರಿದ ಕುರಿಯನ್ನು ಅಗಿದು ತಿನ್ನುತ್ತಿದ್ದರು. ದರ್ಜಿ ಯೋಚನೆ ಮಾಡುತ್ತ ಕುಳಿತುಕೊಂಡ. ರಾಕ್ಷಸ ಅವನಿಗೆ ಮಲಗಲು ಒಂದು ಹಾಸಿಗೆ ತೋರಿಸಿದ. ಅದು ರಾಕ್ಷಸನ ಹಾಸಿಗೆ. ಗಿಡ್ಡ ದರ್ಜಿಯ ಗಾತ್ರಕ್ಕೆ ತುಂಬಾ ದೊಡ್ಡದು. ಅವನು ಹಾಸಿಗೆಯ ಮೇಲೆ ಮಲಗದೆ ಒಂದು ಮೂಲೆಯಲ್ಲಿ ಮುದುರಿಕೊಂಡ. ಮಧ್ಯರಾತ್ರಿಯ ವೇಳೆಗೆ "ಈ ಮನುಷ್ಯ ಈಗ ಮಲಗಿರಬಹುದು" ಎಂದುಕೊಂಡ ರಾಕ್ಷಸ ಕತ್ತಿಯನ್ನು ತೆಗೆದುಕೊಂಡು ಬಂದು ಹಾಸಿಗೆಯ ಮೇಲೆ ಜೋರಾಗಿ ಬೀಸಿ ಹೊಡೆದ. ದರ್ಜಿ ಹಾಸಿಗೆಯ ಮೇಲೆ ಮಲಗಿದ್ದರೆ ಸತ್ತೇ ಹೋಗುತ್ತಿದ್ದ. ಬೆಳಗಾದ ಮೇಲೆ ರಾಕ್ಷಸರು ಅವನನ್ನು ಮರೆತೇ ಹೋದರು. ಅವರೆಲ್ಲ ತಮ್ಮ ಪಾಡಿಗೆ ಕಾಡಿಗೆ ಹೋದರು. ದರ್ಜಿ ಎಚ್ಚರಗೊಂಡು ಅವರನ್ನು ಹಿಂಬಾಲಿಸಿ ಹೋಗಿ ಅವರೆದುರು ನಿಂತ. ಅವನನ್ನು ಕಂಡು ರಾಕ್ಷಸರಿಗೆ ಭಯವಾಯಿತು. ತಮ್ಮನ್ನು ಅವನು ಕೊಲ್ಲಬಹುದೆಂದು ಭಾವಿಸಿ ಓಡಿಹೋದರು.

ಗಿಡ್ಡ ದರ್ಜಿ ತನ್ನ ಪ್ರಯಾಣ ಮುಂದುವರೆಸಿದ. ಯಾವುದೋ ರಾಜನ ರಾಜ್ಯ ಸಿಕ್ಕಿತು. ಅರಮನೆಯ ಅಂಗಳಕ್ಕೆ ಸೀದಾ ಹೋದ. ಅವನಿಗೆ ತುಂಬಾ ಆಯಾಸವಾಗಿತ್ತು. ಅಲ್ಲಿ ಬೆಳೆದಿದ್ದ ಹಸಿರು ಹುಲ್ಲಿನ ಮೇಲೆ ನಿದ್ದೆಹೋದ. ಅವನು ಮಲಗಿದ್ದಾಗ ಕೆಲವು ಆಳುಗಳು ಬಂದರು. ಅವನು ಅಲ್ಲಿ ಮಲಗಿರುವುದನ್ನು ನೋಡಿ ಆಶ್ಚರ್ಯಪಟ್ಟರು. ಅವನ ಪಟ್ಟಿಯ ಮೇಲೆ "ಒಂದೇ ಏಟಿಗೆ ಏಳು" ಎಂದು ಬರೆದಿದ್ದನ್ನು ಓದಿದರು. ಈತ ಯಾರೋ ಮಹಾ ವೀರ ಇರಬೇಕೆಂದುಕೊಂಡು ರಾಜನ ಬಳಿ ಹೋಗಿ ಸುದ್ದಿ ತಿಳಿಸಿದರು. ಅರಮನೆಯ ಅಂಗಳದಲ್ಲಿ ಮಹಾ ವೀರ ಮಲಗಿದ್ದಾನೆ. ಅಕಸ್ಮಾತ್ ಯುದ್ಧವೇನಾದರೂ ನಡೆದರೆ ಅವನಿಂದ ನಮಗೆ ತುಂಬಾ ಸಹಾಯ ಆಗುತ್ತದೆ ಎಂದರು. ರಾಜ ಮಂತ್ರಿಗಳೊಡನೆ ಮಾತನಾಡಿ ಆ ವೀರ ಒಪ್ಪಿದರೆ ತಮ್ಮ ಸೇವೆಯಲ್ಲಿರಬಹುದೇ ಕೇಳಿ ಎಂದು ಹೇಳಿಕಳುಹಿಸಿದ. ಆಳು ಹೋಗಿ, ಗಿಡ್ಡ ದರ್ಜಿ ಏಳುವವರೆಗೂ ಕಾದಿದ್ದು , "ತಾವು ರಾಜನ ಸೇವೆಗೆ ಸಿದ್ಧರಿದ್ದೀರೋ" ಎಂದು ಕೇಳಿದ. "ಓಹೋ, ನಾನು ಬಂದಿರುವುದೇ ಅದಕ್ಕೆ" ಎಂದು ದರ್ಜಿ ಉತ್ತರಿಸಿದ. ರಾಜ ಅವನನ್ನು ಗೌರವದಿಂದ ಬರಮಾಡಿಕೊಂಡು ಇರಲು ಒಂದು ಒಳ್ಳೆಯ ಮನೆಯನ್ನು ಬಿಟ್ಟುಕೊಟ್ಟ.

ರಾಜನ ಆಸ್ಥಾನದಲ್ಲಿದ್ದವರಿಗೆ ನಿಧಾನವಾಗಿ ಅವನ ಬಗ್ಗೆ ಹೊಟ್ಟೆಕಿಚ್ಚು ಬೆಳೆಯಿತು. "ಇವನನ್ನೇನಾದರೂ ಯುದ್ಧಕ್ಕೆ ಕರೆದುಕೊಂಡು ಹೋದರೆ, ಇವನು ಒಂದೇ ಏಟಿಗೆ ಏಳು ಜನರಂತೆ ಕೊಲ್ಲುತ್ತಾ ಹೋದರೆ ನಮ್ಮ ಮಾನ, ಕೆಲಸ ಎರಡೂ ಹೋಗುತ್ತವೆ" ಎಂದು ಯೋಚಿಸಿದರು. ಅವರೆಲ್ಲ ರಾಜನ ಬಳಿ ಹೋಗಿ "ಒಂದೇ ಏಟಿಗೆ ಏಳು ಜನರನ್ನು ಕೊಲ್ಲುವವನೊಂದಿಗೆ ನಾವು ಕೆಲಸ ಮಾಡಲಾರೆವು" ಎಂದು ಹೇಳಿದರು. ಒಬ್ಬ ಹೊಸಬನಿಗಾಗಿ ತನ್ನ ನಂಬಿಕೆಯ ವೀರರನ್ನು ಕಳೆದುಕೊಳ್ಳಲು ರಾಜನಿಗೆ ಮನಸ್ಸು ಬರಲಿಲ್ಲ. ಅವನು ತನ್ನನ್ನು ಕೊಂದು ಸಿಂಹಾಸನವನ್ನು ವಶಮಾಡಿಕೊಂಡರೆ ಏನು ಗತಿ ಎಂದು ಭಯಪಟ್ಟ. ಬಹಳ ಯೋಚನೆಮಾಡಿ ಒಂದು ಉಪಾಯ ಹೂಡಿದ.

ರಾಜ ಗಿಡ್ಡ ದರ್ಜಿಯನ್ನು ಕರೆಸಿ, "ನೀನು ಮಹಾ ವೀರ. ನಿನ್ನಿಂದ ಒಂದು ಸಹಾಯವಾಗಬೇಕು. ನಮ್ಮ

ರಾಜ್ಯದ ಹೊರಗೆ ಕಾಡಿನಲ್ಲಿ ಇಬ್ಬರು ರಾಕ್ಷಸರಿದ್ದಾರೆ. ಅವರು ಕೊಲೆ, ಅಪಹರಣ, ದರೋಡೆ ಎಲ್ಲ ಮಾಡುತ್ತ ಕಾಟ ಕೊಡುತ್ತಿದ್ದಾರೆ. ಯಾರಿಗೂ ಅವರನ್ನು ಕೊಲ್ಲಲು ಆಗಿಲ್ಲ. ನೀನು ಅವರನ್ನು ಕೊಂದರೆ ನಿನಗೆ ನನ್ನ ಮಗಳನ್ನು ಕೊಟ್ಟು ಅರ್ಧ ರಾಜ್ಯವನ್ನೂ ನೀಡುತ್ತೇನೆ. ನಿನಗೆ ಬೇಕಾದರೆ ಸಹಾಯಕ್ಕೆಂದು ನೂರು ಜನ ಸೈನಿಕರನ್ನು ಕರೆದುಕೊಂಡು ಹೋಗು" ಎಂದು ಹೇಳಿದ.

ರಾಜಕುಮಾರಿ ಮತ್ತು ಅರ್ಧ ರಾಜ್ಯ! ಯಾರಿಗುಂಟು ಯಾರಿಗಿಲ್ಲ! ಎಂದು ಮನಸ್ಸಿನಲ್ಲೇ ಗಿಡ್ಡ ದರ್ಜಿ ಸಂತೋಷಪಟ್ಟ. "ಒಂದೇ ಏಟಿಗೆ ಏಳು ಕೊಂದವರಿಗೆ ಇಬ್ಬರು ಯಾವ ಲೆಕ್ಕ. ನನಗೇನು ನೂರು ಸೈನಿಕರ ಸಹಾಯ ಬೇಡ" ಎಂದು ರಾಜನಿಗೆ ಹೇಳಿದ. ಆದರೂ ಅವರು ಅವನೊಂದಿಗೆ ಹೊರಟರು. ಕಾಡಿನ ಬಳಿ ಬಂದಾಗ ನೀವೆಲ್ಲ ಇಲ್ಲೇ ಇರಿ ಎಂದು ತಾನೊಬ್ಬನೇ ಮುಂದೆ ಹೋದ. ಅಲ್ಲಿ ಇಬ್ಬರು ರಾಕ್ಷಸರು ಮರದ ಕೆಳಗೆ ಮಲಗಿದ್ದರು. ಅವರ ಗೊರಕೆಯ ಸದ್ದಿಗೆ ರೆಂಬೆಗಳು ಅಲುಗುತ್ತಿದ್ದವು. ದರ್ಜಿ ತನ್ನ ಜೇಬಿನಲ್ಲಿ ಕಲ್ಲುಗಳನ್ನು ತುಂಬಿಕೊಂಡ. ಧೈರ್ಯ ತಂದುಕೊಂಡು ಮರವನ್ನು ಹತ್ತಿದ. ಕೆಳಗೆ ಮಲಗಿದ್ದ ಒಬ್ಬ ರಾಕ್ಷಸನ ಮೇಲೆ ಎರಡು ಕಲ್ಲುಗಳನ್ನು ಎಸೆದ. ಅವನಿಗೆ ಎಚ್ಚರವಾಗಿ ಗೆಳೆಯ ರಾಕ್ಷಸನನ್ನು ಎಬ್ಬಿಸಿ "ನನ್ನನ್ನು ಯಾಕೆ ಹೊಡೆದೆ?" ಎಂದು ಕೇಳಿದ. "ನಿನಗೆಲ್ಲೋ ಕನಸು ಬಿದ್ದಿರಬೇಕು, ನಾನು ಹೊಡೆಯಲಿಲ್ಲ" ಎಂದು ಎರಡನೇ ರಾಕ್ಷಸ ಹೇಳಿದ. ಅವರು ಮತ್ತೆ ಮಲಗಿದರು. ಈಗ ದರ್ಜಿ ಎರಡನೆಯ ರಾಕ್ಷಸನ ಮೇಲೆ ಕಲ್ಲು ಎಸೆದ. ಮತ್ತೆ ಅವರು ಎಚ್ಚರಗೊಂಡು ಮಾತಾಡಿ ಮಲಗಿಕೊಂಡರು. ಈಗ ದರ್ಜಿ ದೊಡ್ಡ ಕಲ್ಲೊಂದನ್ನು ಎತ್ತಿ ಮೊದಲ ರಾಕ್ಷಸನ ಮೇಲೆ ಜೋರಾಗಿ ಎಸೆದ. ಅವನಿಗೆ ಎಚ್ಚರವಾಗಿ ಬಹಳ ಕೋಪ ಬಂದಿತು. ಇನ್ನೊಬ್ಬ ರಾಕ್ಷಸನ ಮೇಲೆ ಬಿದ್ದು ಹೊಡೆದ. ಅವನಿಗೂ ಸಿಟ್ಟು ಬಂದಿತು. ಇಬ್ಬರ ನಡುವೆ ಹೊಡೆದಾಟ ಶುರುವಾಯಿತು. ಇಬ್ಬರೂ ಒಂದೊಂದು ಮರವನ್ನು ಕಿತ್ತು ಹೊಡೆದುಕೊಂಡರು. ಹೀಗೆ ಕಾದಾಡುತ್ತ ಸತ್ತುಬಿದ್ದರು. "ನನ್ನ ಅದೃಷ್ಟ, ಸದ್ಯ, ನಾನು ಕೂತಿದ್ದ ಮರವನ್ನು ಅವರು ಕೀಳಲಿಲ್ಲ. ನಾನು ಉಳಿದುಕೊಂಡೆ" ಎಂದುಕೊಳ್ಳುತ್ತಾ ದರ್ಜಿ ಇಳಿದುಬಂದು ಇಬ್ಬರು ರಾಕ್ಷಸರ ಎದೆಯ ಮೇಲೂ ದೊಡ್ಡ ಗಾಯಗಳನ್ನು ಮಾಡಿದ. ನಂತರ ಸೈನಿಕರ ಬಳಿಗೆ ಹೋಗಿ "ಕೆಲಸ ಮುಗಿಯಿತು. ಇಬ್ಬರೂ ಸಾಯುವ ಹಾಗೆ ಹೊಡೆದಿದ್ದೇನೆ. ಅವರು ಮರ ಕಿತ್ತುಕೊಂಡು ನನ್ನನ್ನು ಹೊಡೆಯಲು ಬಂದರು. ನಾನೇನು ಕಡಿಮೆ. ಒಂದೇ ಏಟಿಗೆ ಏಳು ಕೊಂದವನು" ಎಂದು ಹೇಳಿಕೊಂಡ. "ನಿನಗೇನು ಗಾಯವಾಗಲಿಲ್ಲವೇ?" ಎಂದರು. "ನನ್ನ ಒಂದು ಕೂದಲೂ ಕೊಂಕಲಿಲ್ಲ" ಎಂದ ದರ್ಜಿ. ಅವರು ನಂಬದೆ ಅಲ್ಲಿ ಹೋಗಿ ನೋಡಿದರೆ ರಾಕ್ಷಸರು ಸತ್ತು ಬಿದ್ದಿದ್ದರು, ಎರಡು ಮರಗಳು ಕಿತ್ತು ಬಿದ್ದಿದ್ದವು, ರಾಕ್ಷಸರ ಎದೆಯ ಮೇಲೆ ಗಾಯವಿತ್ತು.

ರಾಜನಿಗೆ ದಿಗಿಲಾಯಿತು. ಈ ವೀರನನ್ನು ದೂರ ಮಾಡಲು ಹೊಸ ಉಪಾಯ ಹುಡುಕಿದ. "ನನ್ನ ಮಗಳು ಮತ್ತು ಅರ್ಧ ರಾಜ್ಯ ಸಿಗಬೇಕಾದರೆ ನೀನು ಇನ್ನೊಂದು ಕೆಲಸ ಮಾಡಬೇಕು. ಕಾಡಿನಲ್ಲಿ ಒಂಟಿ ಕೊಂಬಿನ ಪ್ರಾಣಿ ಇದೆ. ಅದನ್ನು ಹಿಡಿದು ತಾ" ಎಂದು ದರ್ಜಿಗೆ ಹೇಳಿದ.

"ಇಬ್ಬರು ರಾಕ್ಷಸರಿಗೆ ಹೆದರಲಿಲ್ಲ, ಇನ್ನು ಈ ಪ್ರಾಣಿ ಏನು ಮಾಡೀತು. ಒಂದೇ ಏಟಿಗೆ ಏಳು. ನನ್ನ ಸಾಮರ್ಥ್ಯ ತಿಳಿಯದೇ" ಎಂದ ದರ್ಜಿ. ಹಗ್ಗ ಮತ್ತು ಕೊಡಲಿಯನ್ನು ತೆಗೆದುಕೊಂಡು ಕಾಡಿಗೆ ಹೋದ.

ಜೊತೆಯಲ್ಲಿ ಬಂದವರನ್ನು ಕಾಡಿನ ಹೊರಗೇ ನಿಲ್ಲಿಸಿದ. ಒಂದು ಕೊಂಬಿನ ಪ್ರಾಣಿ ಇವನನ್ನು ಕಂಡು ಅಟ್ಟಿಸಿಕೊಂಡು ಬಂದಿತು. ಗಿಡ್ಡ ದರ್ಜಿ ಮರವೊಂದರ ಹಿಂದೆ ಸರಿದು ನಿಂತುಕೊಂಡ. ವೇಗವಾಗಿ ಓಡಿಬಂದ ಪ್ರಾಣಿಯ ಕೊಂಬು ಮರದ ಕಾಂಡದೊಳಗೆ ಸಿಕ್ಕಿಬಿತ್ತು. ದರ್ಜಿ ಪ್ರಾಣಿಯನ್ನು ಹಗ್ಗದಿಂದ ಕಟ್ಟಿಹಾಕಿ, ಕೊಡಲಿಯಿಂದ ಅದರ ಕೊಂಬನ್ನು ಕತ್ತರಿಸಿದ. ಅನಂತರ ಅದನ್ನು ರಾಜನ ಬಳಿಗೆ ಎಳೆದುಕೊಂಡು ಬಂದ.

ಇಷ್ಟಾದರೂ ರಾಜ ಜಗ್ಗಲಿಲ್ಲ. ಮೂರನೆಯ ಬೇಡಿಕೆಯೊಂದನ್ನು ಮುಂದಿಟ್ಟ. ಕಾಡಿನಲ್ಲಿರುವ ಕ್ರೂರವಾದ ಕರಡಿಯನ್ನು ಹಿಡಿದು ತಂದರೇನೇ ರಾಜಕುಮಾರಿ ಸಿಗುವುದು ಎಂದು ಹೇಳಿದ. "ಅದೇನು ಮಹಾ, ಬರೀ ಮಕ್ಕಳಾಟ" ಎಂಮ ಗಿಡ್ಡ ದರ್ಜಿ ಉತ್ತರಿಸಿದ. ಅವನೊಡನೆ ಬಂದ ಬೇಟೆಗಾರರು ಕಾಡಿನ ಅಂಚಿನಲ್ಲೇ ನಿಂತರು. ಯಾಕೆಂದರೆ ಆ ಕರಡಿ ಅನೇಕ ಬೇಟೆಗಾರರನ್ನು ಕೊಂದಿತ್ತು. ದರ್ಜಿ ಒಬ್ಬನೇ ಮುಂದೆ ಹೋದ. ಕರಡಿ ಅವನನ್ನು ನೋಡಿ ಬಾಯಿ ದೊಡ್ಡದಾಗಿ ತೆರೆದು, ಹಲ್ಲುಗಳನ್ನು ತೋರಿಸುತ್ತಾ ಅವನನ್ನು ಅಟ್ಟಿಸಿಕೊಂಡು ಬಂದಿತು. ಗಿಡ್ಡ ದರ್ಜಿ ಹತ್ತಿರದಲ್ಲೇ ಇದ್ದ ದೇವಾಲಯದೊಳಕ್ಕೆ ಓಡಿಹೋಗಿ, ಅದರ ಪುಟ್ಟ ಕಿಟಕಿಯಿಂದ ಹಾರಿ ಹೊರಗೆ ಬಂದ. ಅವನನ್ನು ಹಿಂಬಾಲಿಸಿದ ಕರಡಿ ಒಳಗೇ ಸಿಕ್ಕಿಕೊಂಡಿತು. ಪುಟ್ಟ ಕಿಟಕಿಯಲ್ಲಿ ಅದರ ಮೈ ಹಿಡಿಯಲಿಲ್ಲ. ದರ್ಜಿ ಬಾಗಿಲನ್ನು ಭದ್ರ ಮಾಡಿ ಬೇಟೆಗಾರರನ್ನು ಕರೆದ. ಅವರು ಅದನ್ನು ಕೊಂದು ರಾಜನ ಬಳಿಗೆ ಹಿಂದಿರುಗಿದರು.

ಈಗ ರಾಜನಿಗೆ ಇಷ್ಟವಿರಲಿ, ಇಲ್ಲದಿರಲಿ ತನ್ನ ಮಗಳನ್ನು ಕೊಟ್ಟು, ಅರ್ಧ ರಾಜ್ಯವನ್ನೂ ಕೊಟ್ಟು ಶರಣಾಗತನಾದ. ತಾನು ವೀರ ಎಂದು ತಿಳಿದವನು ಕೇವಲ ದರ್ಜಿ ಎಂದು ಗೊತ್ತಾಗಿದ್ದರೆ ರಾಜ ಏನೇನು ಉಪಾಯ ಮಾಡುತ್ತಿದ್ದನೋ ಏನೋ! ಮದುವೆ ನಡೆಯಿತು. ಗಿಡ್ಡ ದರ್ಜಿ ರಾಜಕುಮಾರನಾದ. ಆದರೆ ರಾಜನಿಗಂತೂ ಸಮಾಧಾನವಿರಲಿಲ್ಲ.


ಕೆಲವು ದಿನಗಳು ಕಳೆದವು. ರಾಜಕುಮಾರಿಗೆ ತನ್ನ ಗಂಡ ರಾತ್ರಿ ಹೊತ್ತು ನಿದ್ರೆಯಲ್ಲಿ ಮಾತನಾಡುವುದು ಒಮ್ಮೆ ಕೇಳಿಸಿತು. "ಏ ಹುಡುಗ, ಸೊಂಟಪಟ್ಟಿ ಹೊಲಿ! ಪ್ಯಾಂಟಿಗೆ ಗುಂಡಿ ಹಾಕು! ಸರಿಯಾಗಿ ಕೆಲಸ ಮಾಡದಿದ್ದರೆ ನಿನ್ನ ಚಚ್ಚಿಬಿಡುತ್ತೇನೆ" ಎನ್ನುತ್ತಿದ್ದ ದರ್ಜಿ. ರಾಜಕುಮಾರಿ ತಂದೆಯ ಬಳಿಗೆ ಹೋಗಿ ತನ್ನ ಗಂಡ ವೀರನಲ್ಲ, ಕೇವಲ ದರ್ಜಿ, ಅವನಿಂದ ನನ್ನನ್ನು ಬಿಡಿಸು ಎಂದು ಕೇಳಿಕೊಂಡಳು. ಅದಕ್ಕೆ ರಾಜ "ಇವತ್ತು ರಾತ್ರಿ ನಿನ್ನ ಕೋಣೆಯ ಬಾಗಿಲು ತೆಗೆದೇ ಇರು. ಸೇವಕರನ್ನು ಕಳಿಸುತ್ತೇನೆ. ಅವನು ಮಲಗಿರುವಾಗ ಕೈಕಾಲು ಕಟ್ಟಿ, ಹಡಗಿನಲ್ಲಿ ಎಸೆದು, ಸಮುದ್ರದ ಮೇಲೆ ತೇಲಿಬಿಡೋಣ" ಎಂದು ಉಪಾಯ ಹೇಳಿಕೊಟ್ಟ. ಈ ಮಾತುಗಳನ್ನು ಕೇಳಿಸಿಕೊಂಡ ರಾಜಕುಮಾರನ ಅಂಗರಕ್ಷಕರು ದರ್ಜಿಯ ಬಳಿಗೆ ಬಂದು ಒಳಸಂಚನ್ನು ಬಯಲು ಮಾಡಿಬಿಟ್ಟರು.

ರಾತ್ರಿಯಾಯಿತು. ಗಿಡ್ಡ ದರ್ಜಿ ನಿದ್ರೆ ಬಂದವನಂತೆ ನಟಿಸಿದ. ರಾಜಕುಮಾರಿ ಹೋಗಿ ಬಾಗಿಲು ತೆಗೆದಳು. ನಿದ್ರೆಯಲ್ಲಿ ಮಾತನಾಡುವವನಂತೆ ಆ ದರ್ಜಿ "ಏ ಹುಡುಗ, ಸೊಂಟ ಪಟ್ಟಿ ಹೊಲಿ! ಪ್ಯಾಂಟಿಗೆ ಗುಂಡಿ ಹಾಕು! ಸರಿಯಾಗಿ ಕೆಲಸ ಮಾಡದಿದ್ದರೆ ನಿನ್ನ ಚಚ್ಚಿಬಿಡುತ್ತೇನೆ. ಒಂದೇ ಏಟಿಗೆ ಏಳು

ಹೊಡೆದಿದ್ದೇನೆ. ಇಬ್ಬರು ರಾಕ್ಷಸರನ್ನು ಕೊಂದಿದ್ದೇನೆ, ಒಂಟಿಕೊಂಬಿನ ಪ್ರಾಣಿಯನ್ನು ಹಿಡಿದಿದ್ದೇನೆ, ಕರಡಿ ಕೊಂದಿದ್ದೇನೆ, ಕೋಣೆಯ ಹೊರಗೆ ಇರುವವರಿಗೆ ಯಾಕೆ ಹೆದರಲಿ" ಎಂದು ಬಡಬಡಿಸಿದ. ಇದನ್ನು ಕೇಳಿ ಅಂಜಿಕೊಂಡು ರಾಜನ ಸೇವಕರು ಓಡಿಹೋದರು.

ಆನಂತರ ಯಾರೂ ಗಿಡ್ಡ ದರ್ಜಿಯ ತಂಟೆಗೆ ಬರಲೇ ಇಲ್ಲ. ಅವನು ಮುಂದೆ ಆ ರಾಜ್ಯದ ರಾಜನಾಗಿ ಸುಖವಾಗಿದ್ದನು.

೨೯. ಒಗಟು



ಒಂದಾನೊಂದು ಕಾಲದಲ್ಲಿ ಒಬ್ಬ ರಾಜನ ಮಗನಿಗೆ ಪ್ರಪಂಚವನ್ನೆಲ್ಲ ಸುತ್ತಬೇಕು ಎಂಬ ಆಸೆಯಾಯಿತು. ಆದ್ದರಿಂದ ಅವನು ತನ್ನ ಜೊತೆಗೆ ತನ್ನ ನಂಬಿಕೆಯ ಸೇವಕರನ್ನು ಕರೆದುಕೊಂಡು ಪ್ರಯಾಣ ಬೆಳೆಸಿದನು. ಬೇರೆ ಏನನ್ನೂ, ಯಾರನ್ನೂ, ಜೊತೆಯಲ್ಲಿ ಕರೆದುಕೊಳ್ಳಲಿಲ್ಲ. ಹೀಗೆ ಒಂದು ದಿನ ಅವನು ಒಂದು ದೊಡ್ಡ ಕಾಡಿನೊಳಗೆ ಬಂದನು. ಕತ್ತಲಾಗುತ್ತಾ ಬಂದಂತೆ ಅವನಿಗೆ ರಾತ್ರಿ ತಂಗುದಾಣವೆಲ್ಲೂ ಸಿಗಲಿಲ್ಲ. ರಾತ್ರಿಯನ್ನು ಎಲ್ಲಿ ಕಳೆಯಬೇಕೆಂದು ತಿಳಿಯದೆ ಗೊಂದಲಕ್ಕೊಳಗಾದನು. ಅದೇ ವೇಳೆಗೆ ಒಬ್ಬ ಯುವತಿ ಒಂದು ಗುಡಿಸಲ ಕಡೆಗೆ ಹೋಗುತ್ತಿರುವುದನ್ನು ಗಮನಿಸಿದನು. ಅವನು ಅವಳ ಹತ್ತಿರಕ್ಕೆ ಹೋಗಿ ನೋಡಿದಾಗ, ಅವಳು ಚಿಕ್ಕ ವಯಸ್ಸಿನ ಸುಂದರ ಯುವತಿ ಆಗಿದ್ದಳು. "ರಾತ್ರಿಯನ್ನು ಕಳೆಯಲು ನನಗೂ, ನನ್ನ ಸೇವಕನಿಗೂ ಆ ಗುಡಿಸಲಲ್ಲಿ ಜಾಗ ಸಿಗುವುದೊ?" ಎಂದು ರಾಜಕುಮಾರ ಆ ಹುಡುಗಿಯನ್ನು ಕೇಳಿದನು. "ನೀವು ಬಂದರೆ, ಆಗಬಹುದು" ಎಂದು ದುಃಖದ ಧ್ವನಿಯಲ್ಲಿ ಹೇಳಿದಳು. "ಆದರೆ ನೀವು ಬರಬೇಡಿರೆನ್ನುವುದು ನನ್ನ ಸಲಹೆ" ಎಂದು ಮತ್ತೆ ಹೇಳಿದಳು. "ಯಾಕೆ ಬೇಡ?" ಎಂದು ರಾಜಕುಮಾರ ಕೇಳಿದನು. ಆ ಯುವತಿ ನಿಟ್ಟುಸಿರು ಬಿಡುತ್ತ "ನನ್ನ ಮಲತಾಯಿ ಕೆಟ್ಟ ಮಾಟ ಮಂತ್ರ ಮಾಡುತ್ತಾಳೆ. ಅಪರಿಚಿತರ ಜೊತೆ ಚೆನ್ನಾಗಿ ನಡೆದುಕೊಳ್ಳುವುದಿಲ್ಲ" ಎಂದು ಹೇಳಿದಳು. ಆಗ ಅವನಿಗೆ ತಾನು ಮಾಟಗಾತಿಯ ಗುಡಿಸಲಿಗೆ ಬಂದಿರುವೆನೆಂದು ತಿಳಿಯಿತು. ತುಂಬಾ ಕತ್ತಲಾಗಿದ್ದುದರಿಂದ, ಮುಂದೆ ಹೋಗಲು ಅಸಾಧ್ಯವಾಗಿದ್ದುದರಿಂದ, ಅವನಿಗೆ ಹೆದರಿಕೆಯಿಲ್ಲದುದರಿಂದ ಒಳಗೆ ಹೋದನು.

ಒಬ್ಬ ಮುದುಕಿ ಆರಾಮ ಕುರ್ಚಿಯ ಮೇಲೆ, ಬೆಂಕಿಯ ಹತ್ತಿರ ಕುಳಿತಿದ್ದಳು. ತನ್ನ ಕೆಂಪು ಕಣ್ಣುಗಳನ್ನು

ಅಪರಿಚಿತರ ಕಡೆಗೆ ತಿರುಗಿಸುತ್ತ, "ಶುಭ ಸಂಜೆ" ಎಂದು ಗೊಣಗಿದಳು. ಬಹಳ ಸ್ನೇಹವನ್ನು ನಟಿಸುತ್ತ, "ನೀವು ಕೆಳಗೆ ಕುಳಿತು ವಿಶ್ರಾಂತಿ ಪಡೆಯಿರಿ" ಎಂದಳು. ನಂತರ ಬೆಂಕಿಯ ಉರಿಯನ್ನು ಚಾಚಿದಳು. ಅದರ ಮೇಲೆ ಒಂದು ಮಡಕೆ ಇತ್ತು. ಅದರಲ್ಲಿ ಏನೋ ಕುದಿಯುವ ಶಬ್ದ ಅವರಿಗೆ ಕೇಳಿಸಿತು. ಅವಳ ಮಗಳು, ಅವರಿಬ್ಬರಿಗೂ ಬಹಳ ಎಚ್ಚರಿಕೆಯಿಂದ ಇರಬೇಕೆಂದು ಹೇಳಿದಳು. ಏನು ಕೊಟ್ಟರೂ ತಿನ್ನಬೇಡಿ, ಕುಡಿಯಬೇಡಿ ಎಂದು ಹೇಳಿದಳು. ಏಕೆಂದರೆ ಆ ಮುದುಕಿ ಮದ್ಯದಲ್ಲಿ ಏನನ್ನೋ ಸೇರಿಸಿ ಕೊಡುತ್ತಾಳೆ. ಅದನ್ನು ಕುಡಿದವರು ಬೆಳಗಿನವರೆಗೆ ತಣ್ಣಗೆ ಮಲಗಿಬಿಡುತ್ತಾರೆ. ಎಂದು ಹೇಳಿದಳು. ಅವರು ಮುದುಕಿ ಕೊಟ್ಟಿದ್ದನ್ನು ಏನೂ ತಿನ್ನದೆ, ಕುಡಿಯದೆ ಹಾಗೆ ಮಲಗಿದರು. ಬೆಳಗ್ಗೆ ಎದ್ದು ಹೊರಡಲು ಸಿದ್ಧರಾದರು. ರಾಜಕುಮಾರ ಆಗಲೇ ಕುದುರೆಯನ್ನು ಹತ್ತಿದ್ದನು. ಆಗ ಆ ಮಾಟಗಾತಿ, "ಸ್ವಲ್ಪ ನಿಲ್ಲಿ, ನಿಮಗೆ ಶುಭ ಪ್ರಯಾಣವನ್ನು ಕೋರುವಾಗ, ಕೊಡುವ ಮದ್ಯವನ್ನು ತರುತ್ತೇನೆ" ಎಂದು ಹೇಳಿದಳು. ಅವಳು ಒಳಗೆ ಹೋದಾಗ, ರಾಜಕುಮಾರ ಆಗಲೇ ಹೊರಟುಹೋಗಿದ್ದನು. ಆದರೆ ರಾಜಕುಮಾರನ ಸೇವಕ ಮಾತ್ರ ತನ್ನ ಕುದುರೆಯ ಜೀನಿನ ಪಟ್ಟಿಯನ್ನು ಸರಿಮಾಡಿಕೊಳ್ಳುತ್ತಾ ಇನ್ನೂ ಅಲ್ಲೇ ನಿಂತಿದ್ದನು. ಆಗ ಆ ಮುದುಕಿ ಮದ್ಯವನ್ನು ತಂದಳು. "ಇದನ್ನು ನಿನ್ನ ಯಜಮಾನನಿಗೆ ತೆಗೆದುಕೊಂಡು ಹೋಗಿಕೊಡು" ಎಂದಳು. ಅದೇ ವೇಳೆಗೆ ಮದ್ಯದ ಲೋಟ ಬಿರುಕು ಬಿಟ್ಟಿತ್ತು. ಅದರ ಮದ್ಯವೆಲ್ಲಾ ಕುದುರೆ ಮೇಲೆ ಚೆಲ್ಲಿತು. ಆ ಕೆಟ್ಟ ಮದ್ಯ ಬಿದ್ದ ತಕ್ಷಣ, ಕುದುರೆ ಸತ್ತುಬಿದ್ದಿತು. ಆಗ ಆ ಸೇವಕ ತನ್ನ ಯಜಮಾನನ ಹಿಂದೆ ಓಡಿದನು. ಆದರೆ ಕುದುರೆಯ ಜೀನನ್ನು ಮರೆತುಬಿಟ್ಟಿದ್ದನು. ಅದನ್ನು ತೆಗೆದುಕೊಂಡುಹೋಗಲು ಪುನಃ ಹಿಂದಕ್ಕೆ ಬಂದನು. ಅವನು ಕುದುರೆಯ ಹತ್ತಿರಕ್ಕೆ ಬಂದಾಗ, ಅದರ ಮಾಂಸವನ್ನು ಒಂದು ಕಾಗೆ ತಿನ್ನುತ್ತಿತ್ತು. "ಯಾರಿಗೆ ಗೊತ್ತು, ಈದಿನ ನಾವು ಏನಾದರೂ ಒಳ್ಳೆಯದನ್ನೇ ಕಾಣಬಹುದು" ಎಂದು ಹೇಳಿಕೊಂಡು ಆ ಕಾಗೆಯನ್ನು ಕೊಂದು, ಅದನ್ನು ತೆಗೆದುಕೊಂಡು ಯಜಮಾನನ ಹಿಂದೆ ಓಡಿದನು.

ಅವರಿಬ್ಬರೂ ಮತ್ತೆ ಇಡೀ ದಿನ ಕಾಡಿನಲ್ಲಿ ಪ್ರಯಾಣ ಮುಂದುವರಿಸಿದರು. ಆದರೆ ಅವರಿಗೆ ಕಾಡಿನಿಂದ ಹೊರಹೋಗುವುದು ಆಗಲಿಲ್ಲ. ರಾತ್ರಿ ಆದಂತೆ ಅವರು ಒಂದು ಛತ್ರವನ್ನು ಹುಡುಕಿಕೊಂಡರು. ಅವರಿಬ್ಬರೂ ಅದರ ಒಳಗೆ ಹೋದರು. ರಾಜಕುಮಾರನ ಸೇವಕ ಆ ಕಾಗೆಯನ್ನು ಛತ್ರದ ಯಜಮಾನನಿಗೆ ಕೊಟ್ಟು ಅದರಿಂದ ಅಡಿಗೆ ಮಾಡಿಸುವಂತೆ ಹೇಳಿದನು. ಅವರು ಒಳಗೆ ಬಂದಿದ್ದ ಛತ್ರ ಒಂದು ಕಳ್ಳರ ಗುಂಪಿನದಾಗಿತ್ತು. ಹೀಗೆ ಅವರು, ಕಳ್ಳರ ನಡುವೆ ಸಿಕ್ಕಿಹಾಕಿಕೊಂಡಿದ್ದರು. ರಾತ್ರಿ ಕತ್ತಲಲ್ಲಿ ಹನ್ನೆರಡು ಜನ ಕಳ್ಳರು ಬಂದರು. ಅವರು ಈ ಅತಿಥಿಗಳನ್ನು ಕೊಂದು ಅವರಲ್ಲಿ ಇದ್ದುದನ್ನು ದೋಚಬೇಕು ಎಂದು ಯೋಚಿಸಿದ್ದರು. ದೋಚುವ ಮೊದಲು ಅವರು ಊಟಕ್ಕಾಗಿ ಮೇಜಿನ ಸುತ್ತಲೂ ಕುಳಿತರು. ಛತ್ರದ ಯಜಮಾನ ಒಬ್ಬ ಮಾಂತ್ರಿಕನಾಗಿದ್ದನು. ಅವನೂ ಕೂಡ ಅವರ ಸಂಗಡ ಕುಳಿತುಕೊಂಡನು. ಗಡಿಗೆಯಲ್ಲಿ ಮಾಡಿದ್ದ ಮಾಂಸವನ್ನು ಸಮನಾಗಿ ತಮ್ಮಲ್ಲಿ ಹಂಚಿಕೊಂಡರು. ಅದು ಕಾಗೆಯ ಮಾಂಸವಾಗಿತ್ತು. ಯಾವ ವಿಷವನ್ನು ಕುಡಿದು ಕುದುರೆ ಸತ್ತಿತ್ತೋ ಅದರ ಮಾಂಸವನ್ನು ಕಾಗೆ ತಿಂದಿತ್ತು. ಹೀಗಾಗಿ ಅದರಲ್ಲೂ ವಿಷ ಸೇರಿಕೊಂಡಿತ್ತು. ಹೀಗೆ ವಿಷದ ಕಾಗೆಯ ಮಾಂಸವನ್ನು ಅವರು ಒಂದೆರಡು ತುತ್ತು ತಿನ್ನುವಷ್ಟರಲ್ಲೇ ಎಲ್ಲರೂ ಸತ್ತುಬಿದ್ದರು. ಆಗ ಅಲ್ಲಿ ಉಳಿದವಳು ಛತ್ರದ ಯಜಮಾನನ ಮಗಳು ಮಾತ್ರ. ಅವಳು ನೋಡಲು ಪ್ರಾಮಾಣಿಕಳಂತೆ ಕಂಡಳು. ಅವಳು ಕಳ್ಳರ ಕೆಟ್ಟ ಕೆಲಸಗಳಲ್ಲಿ ಭಾಗಿಯಾಗಿರಲಿಲ್ಲ. ಅಲ್ಲದೆ ಅವಳು,

ರಾಜಕುಮಾರನಿಗೆ ಮನೆಯ ಕೋಣೆಗಳ ಎಲ್ಲ ಬಾಗಿಲುಗಳನ್ನು ತೆಗೆದು ಅಲ್ಲಿ ಇದ್ದ ರಾಶಿ ರಾಶಿ ಸಂಪತ್ತನ್ನು ತೋರಿಸಿದಳು. ರಾಜಕುಮಾರ ಅದನ್ನು ಅವಳೇ ಇಟ್ಟುಕೊಳ್ಳುವಂತೆ ಹೇಳಿದನು. ಅದರಲ್ಲಿ ಅವನು ಏನನ್ನೂ ತೆಗೆದುಕೊಳ್ಳಲಿಲ್ಲ. ತನ್ನ ಸೇವಕನ ಜೊತೆ ಪ್ರಯಾಣವನ್ನು ಮುಂದುವರಿಸಿದನು.

ಅವರು ಅನೇಕ ದೇಶಗಳನ್ನು ಸುತ್ತಿದರು. ಕೊನೆಗೆ, ಒಂದು ಪಟ್ಟಣಕ್ಕೆ ಬಂದರು. ಅಲ್ಲಿ ಅತೀ ಸುಂದರಿಯಾದ ರಾಜಕುಮಾರಿ ಇದ್ದಳು. ಅವಳಿಗೆ ತನ್ನ ಸೌಂದರ್ಯದ ಬಗ್ಗೆ ತುಂಬಾ ಗರ್ವವಿತ್ತು. ಅವಳು ತನಗೆ ಬಿಡಿಸಲಾಗದಂತಹ ಒಗಟನ್ನು ಯಾರು ಹೇಳುವರೊ ಅವರನ್ನೇ ಮದುವೆ ಮಾಡಿಕೊಳ್ಳುವುದಾಗಿ ಡಂಗುರ ಹೊಡೆಸಿದ್ದಳು. ಅವಳು ಒಗಟನ್ನು ಬಿಡಿಸಿದರೆ, ಹೇಳಿದವನ ತಲೆಯನ್ನು ಕತ್ತರಿಸಲಾಗುವುದು ಎಂದೂ ಪ್ರಕಟಿಸಿದ್ದಳು. ಆದರೆ ಅವಳು ತುಂಬಾ ಚುರುಕಾಗಿದ್ದಳು. ಹೇಳಿದ ಸಮಯಕ್ಕೆ ಮೊದಲೇ ಒಗಟನ್ನು ಬಿಡಿಸುತ್ತಿದ್ದಳು. ಹೀಗೆ ಒಗಟು ಹಾಕಿ, ರಾಜಕುಮಾರಿಯಿಂದ ಉತ್ತರವನ್ನು ಪಡೆದು ಒಂಬತ್ತು ಜನ ರಾಜಕುಮಾರರು ತಮ್ಮ ಪ್ರಾಣವನ್ನು ಕಳೆದುಕೊಂಡಿದ್ದರು.

ಕೊನೆಗೆ ದೇಶಗಳನ್ನು ಸುತ್ತುತ್ತಿದ್ದ ರಾಜಕುಮಾರ ಬಂದನು. ಅವನೂ ಕೂಡ ಅವಳ ಸೌಂದರ್ಯಕ್ಕೆ ಮರುಳಾದನು. ತನ್ನ ಪ್ರಾಣವನ್ನೇ ಪಣವಾಗಿಟ್ಟನು. ಅವಳ ಮುಂದೆ ಹೋಗಿ ತನ್ನ ಒಗಟನ್ನು ಹೇಳಿದನು. "ಒಬ್ಬ ಯಾರನ್ನೂ ಕೊಲ್ಲಲಿಲ್ಲ, ಆದರೂ ಹನ್ನೆರಡು ಜನರನ್ನು ಕೊಂದನು, ಏನದು?" ಎಂದು ಕೇಳಿದನು. ರಾಜಕುಮಾರಿಗೆ ಒಗಟು ಅರ್ಥವಾಗಲಿಲ್ಲ. ಎಷ್ಟು ಯೋಚಿಸಿದರೂ ಉತ್ತರ ಹುಡುಕಲು ಆಗಲಿಲ್ಲ. ಅವಳು ತನ್ನ ಒಗಟಿನ ಪುಸ್ತಕಗಳನ್ನು ಹುಡುಕಿದಳು. ಉತ್ತರ ಸಿಗಲಿಲ್ಲ. ನಿಜ ಹೇಳಬೇಕೆಂದರೆ ಅವಳ ಬುದ್ಧಿವಂತಿಕೆಯೂ ಅವಳಿಗೆ ಸಹಾಯ ಮಾಡಲಿಲ್ಲ. ಕೊನೆಗೆ, ತನ್ನ ಸೇವಕರನ್ನು ರಾಜಕುಮಾರನ ಮಲಗುವ ಕೋಣೆಗೆ ಕಳುಹಿಸಿದಳು. ಏಕೆಂದರೆ ನಿದ್ದೆಯ ಮಂಪರಿನಲ್ಲಿ ರಾಜಕುಮಾರ ಒಗಟಿನ ಉತ್ತರವನ್ನು ಹೇಳಬಹುದು ಎಂದು ತಿಳಿದಿದ್ದಳು. ಆದರೆ, ರಾಜಕುಮಾರನ ಜಾಗದಲ್ಲಿ ಅವನ ಸೇವಕ ಮಲಗಿಕೊಂಡಿದ್ದನು. ರಾಜಕುಮಾರಿಯ ಸೇವಕಿ, ಕೋಣೆಯೊಳಗೆ ಬಂದಾಗ ಅವಳ ಮುಸುಕನ್ನು ಎಳೆದು ಹರಿದು ಹಾಕಿದನು. ಕೋಲು ಹಿಡಿದುಕೊಂಡು ಅವಳ ಬೆನ್ನಟ್ಟಿದನು. ಎರಡನೇ ದಿನ ರಾತ್ರಿಯೂ ರಾಜಕುಮಾರಿ ತನ್ನ ಸೇವಕಿಯನ್ನು ಕಳುಹಿಸಿದಳು. ಆ ದಿನವಾದರೂ ಒಗಟಿನ ಉತ್ತರ ಸಿಗುವ ಅದೃಷ್ಟ ತನ್ನದಾಗಬಹುದೆಂದು ತಿಳಿದಳು. ಆದರೆ ಅವಳು ಅಂದುಕೊಂಡಂತೆ ಆಗಲಿಲ್ಲ. ಏಕೆಂದರೆ ರಾಜಕುಮಾರನ ಸೇವಕನೇ ಎರಡನೇ ದಿನವೂ ಮಲಗಿದ್ದನು. ಅವನು ರಾಜಕುಮಾರಿಯ ಸೇವಕಿಯ ಮುಸುಕನ್ನು ಎಳೆದು ಕೋಲು ಹಿಡಿದು ಅವಳನ್ನು ಹಿಂಬಾಲಿಸಿ ಓಡಿಸಿದನು. ಮೂರನೆಯ ರಾತ್ರಿ ರಾಜಕುಮಾರ ತಾನು ಇನ್ನು ಸುರಕ್ಷಿತನಾಗುವೆನೆಂದು ತಿಳಿದು ತನ್ನ ಹಾಸಿಗೆಯಲ್ಲಿ ಮಲಗಿಕೊಂಡನು. ಆ ದಿನ ರಾಜಕುಮಾರಿ ಸ್ವತಃ ತಾನೇ ಕಪ್ಪು ಮುಸುಕು ಹಾಕಿಕೊಂಡು ಬಂದಿದ್ದಳು. ನಂತರ ಅವಳು ರಾಜಕುಮಾರನ ಹತ್ತಿರ ಕುಳಿತುಕೊಂಡಳು. ಅವನು ನಿದ್ದೆ ಮಾಡುತ್ತ ಇರಬೇಕು ಎಂದು ತಿಳಿದುಕೊಂಡು, ಕನಸಿನಲ್ಲಿ ಮಾತನಾಡಿಸುವವಳಂತೆ ಮಾತನಾಡಿಸಿದಳು. ಪ್ರಾಣ ಕಳೆದುಕೊಂಡಿದ್ದ ರಾಜಕುಮಾರರೆಲ್ಲರೂ ಹೀಗೆ ನಿದ್ದೆ ಮಂಪರಿನಲ್ಲಿ ಉತ್ತರಿಸಿದ್ದರು. ಆದರೆ ಆ ರಾಜಕುಮಾರ ಮಾತ್ರ ನಿದ್ದೆ ಮಾಡದೆ ಎಚ್ಚರವಾಗೇ ಇದ್ದನು. ಅವಳ ಮಾತುಗಳನ್ನು ಕೇಳಿಸಿಕೊಂಡು, ಅವಳ ಜಾಣತನವನ್ನು ಅರ್ಥಮಾಡಿಕೊಂಡನು. ಅವಳು "ಒಬ್ಬ


ಯಾರನ್ನೂ ಕೊಲ್ಲುವುದಿಲ್ಲ, ಆದರೂ ಕೊಂದ. ಏನದು?" ಎಂದು ಕೇಳಿದಳು. ಅದಕ್ಕೆ ರಾಜಕುಮಾರ "ಒಬ್ಬನ ಬಳಿ ಇದ್ದ ಕಾಗೆ ಹನ್ನೆರಡು ಜನರನ್ನು ಕೊಂದಿತು. ಹೇಗೆಂದರೆ, ಹನ್ನೆರಡು ಜನ ಕಳ್ಳರು ಕಾಗೆ ಮಾಂಸವನ್ನು ಅಡಿಗೆ ಮಾಡಿಕೊಂಡು, ಅದನ್ನು ತಿಂದು ಸತ್ತುಹೋದರು." ಎಂದು ಉತ್ತರಿಸಿದನು.

ಹೀಗೆ ಅವಳಿಗೆ ಒಗಟಿನ ಉತ್ತರ ಸಿಕ್ಕಿತು. ತಕ್ಷಣವೇ ಅವಳು ಅಲ್ಲಿಂದ ತಪ್ಪಿಸಿಕೊಂಡು ಓಡಿಹೋಗಲು ಪ್ರಯತ್ನಿಸಿದಳು. ಆದರೆ ರಾಜಕುಮಾರ ಅವಳ ಮುಸುಕನ್ನು ಬಲವಾಗಿ ಹಿಡಿದು ಎಳೆದನು. ಆದರೆ ಅವಳು ಅದನ್ನು ಅಲ್ಲೇ ಬಿಟ್ಟು ಓಡಿಹೋದಳು. ಮಾರನೇ ದಿನ, ತಾನು ಒಗಟಿನ ಉತ್ತರ ಕಂಡುಹಿಡಿದಿರುವುದಾಗಿ ಪ್ರಕಟಿಸಿದಳು. ಹನ್ನೆರಡು ಜನ ನ್ಯಾಯಾಧೀಶರಿಗೆ ಹೇಳಿಕಳುಹಿಸಿದಳು. ಅವರ ಮುಂದೆ ತಾನು ಉತ್ತರ ಹೇಳುವುದಾಗಿ ಹೇಳಿದಳು. ಆಗ ರಾಜಕುಮಾರ, ತನ್ನ ಒಂದು ಬೇಡಿಕೆಯನ್ನು ಆಲಿಸಬೇಕೆಂದು ನ್ಯಾಯಾಧೀಶರಿಗೆ ಹೇಳಿದನು. "ಅವಳು ರಾತ್ರಿ ಹೊತ್ತು ಯಾರಿಗೂ ಗೊತ್ತಾಗದಂತೆ ಬಂದು ನನ್ನನ್ನು ಕೇಳಿದಳು. ಇಲ್ಲದಿದ್ದರೆ ಅವಳಿಂದ ಉತ್ತರ ಕಂಡುಹಿಡಿಯುವುದು ಎಂದೂ ಸಾಧ್ಯವಾಗುತ್ತಿರಲಿಲ್ಲ"ವೆಂದು ರಾಜಕುಮಾರಿಯ ನಾಟಕವನ್ನು ಬಯಲಿಗೆ ಎಳೆದಳು. ಆಗ ನ್ಯಾಯಾಧೀಶರು ಸಾಕ್ಷಿಯನ್ನು ತರಲು ಹೇಳಿದರು. ರಾಜಕುಮಾರನ ಸೇವಕ ಮೂರು ಮುಸುಕುಗಳನ್ನು ತಂದು ತೋರಿಸಿದನು. ರಾಜಕುಮಾರಿ ಧರಿಸುತ್ತಿದ್ದ ಅಚ್ಚ ಬೂದಿ ಬಣ್ಣದ ಮುಸುಕನ್ನು ನೋಡಿದ ನ್ಯಾಯಾಧೀಶರುಗಳು "ಈ ಮುಸುಕಿನ ಬಟ್ಟೆಯನ್ನು ಬಂಗಾರ ಮತ್ತು ಬೆಳ್ಳಿಯಿಂದ ಅಲಂಕರಿಸಿ, ಅದು ಇವರ ಮದುವೆಯ ಉಡುಪಾಗಲಿ" ಎಂದು ಹೇಳಿದರು. ರಾಜಕುಮಾರಿ ತನ್ನ ಸೋಲನ್ನು ಒಪ್ಪಿಕೊಳ್ಳಲೇಬೇಕಾಯಿತು.

೩೦. ಜಾಣೆ ಗ್ರಿಥೆಲ್

ಒಂದಾನೊಂದು ಕಾಲದಲ್ಲಿ ಒಬ್ಬ ಅಡಿಗೆಯವಳಿದ್ದಳು. ಅವಳು ತನ್ನ ಬೂಟುಗಳಿಗೆ ಕೆಂಪು ದಾರದಿಂದ ಗಂಟು ಹಾಕಿಕೊಳ್ಳುತ್ತಿದ್ದಳು. ಅವಳು ಅವುಗಳನ್ನು ಹಾಕಿಕೊಂಡು ಹೊರಗೆ ಹೋದರೆ ತನ್ನ ಪಾದಗಳನ್ನು ಎಲ್ಲ ಕಡೆಯಿಂದಲೂ ನೋಡಿಕೊಳ್ಳುತ್ತಿದ್ದಳು. ಕೊನೆಗೆ ತೃಪ್ತಿಯಿಂದ "ಆಹಾ! ನೀನು ಈಗಲೂ ಸುಂದರ ಹುಡುಗಿ ಆಗಿರುವೆ!" ಎಂದು ತನಗೆ ತಾನೇ ಹೇಳಿಕೊಳ್ಳುತ್ತಿದ್ದಳು. ಮನೆಗೆ ಬಂದು ತನ್ನ ಸಂತೋಷಕ್ಕಾಗಿ ಒಂದು ಲೋಟ ಮದ್ಯವನ್ನು ಕುಡಿಯುತ್ತಿದ್ದಳು. ಮದ್ಯದಿಂದ ಅವಳಿಗೆ ಊಟ ಮಾಡುವ ಆಸೆ ಆಗುತ್ತಿತ್ತು. ಆಗ ಅವಳು ಇದ್ದುದರಲ್ಲೇ ಅತ್ಯುತ್ತಮವಾದುದನ್ನು ಆರಿಸಿಕೊಂಡು ತಿನ್ನುತ್ತಿದ್ದಳು. ಮತ್ತು ತನ್ನನ್ನು ತಾನೇ ಕ್ಷಮಿಸಿಕೊಳ್ಳುವ ರೀತಿಯಲ್ಲಿ "ಅಡಿಗೆಯವಳಿಗೆ, ತಾನು ಮಾಡಿದ ಅಡಿಗೆಯ ರುಚಿ ಹೇಗಿದೆ ಎಂದು ಗೊತ್ತಿರಬೇಕು" ಎಂದು ಹೇಳಿಕೊಳ್ಳುತ್ತಿದ್ದಳು.

ಒಂದು ದಿನ ಏನಾಯ್ತು ಅಂದರೆ ಅವಳ ಯಜಮಾನ, "ಗ್ರಿಥೆಲ್ ಈ ದಿನ ಸಾಯಂಕಾಲಕ್ಕೆ ಒಬ್ಬ ಅತಿಥಿ ಬರುತ್ತಾರೆ. ಆದ್ದರಿಂದ ಎರಡು ಬಾತುಕೋಳಿಗಳನ್ನು ಬಳಸಿ ಅಡಿಗೆ ಮಾಡು" ಎಂದು ಹೇಳಿದನು. "ಅದಕ್ಕೇನಂತೆ, ಈಗಲೇ ಮಾಡಿಬಿಡುವೆ ಸ್ವಾಮಿ" ಎಂದು ಅವಳು ಉತ್ತರಿಸಿದಳು. ನಂತರ ಅವಳು ಎರಡು ಬಾತುಕೋಳಿಗಳನ್ನು ಕೊಂದಳು. ಅವುಗಳ ಪುಕ್ಕವನ್ನೆಲ್ಲ ಕಿತ್ತು, ಅವುಗಳೊಳಗೆ ಖಾರವನ್ನು ತುಂಬಿ ಇಟ್ಟಳು. ಸಾಯಂಕಾಲ ಆಗುತ್ತಾ ಇದ್ದ ಹಾಗೆ ಅವಳು ಅವುಗಳನ್ನು ಬೆಂಕಿಯ ಮೇಲೆ ಇಟ್ಟು ಹುರಿಯತೊಡಗಿದಳು.



ಅವುಗಳು ನಿಧಾನವಾಗಿ ಕಂದು ಬಣ್ಣಕ್ಕೆ ತಿರುಗಿದವು. ಅವಳ ಅಡಿಗೆ ಮುಗಿಯುತ್ತಾ ಬಂದರೂ ಅತಿಥಿ ಬರಲಿಲ್ಲ. ಗ್ರಿಥೆಲ್ ತನ್ನ ಯಜಮಾನರಿಗೆ, "ನಿಮ್ಮ ಅತಿಥಿ ಬೇಗ ಬಂದಿದ್ದರೆ ನಾನು ಆ ಬಾತುಕೋಳಿಗಳನ್ನು ಒಲೆಯ ಮೇಲಿಂದ ಇಳಿಸಿಬಿಡುತ್ತೇನೆ. ಆದರೆ ಅವುಗಳನ್ನು ಬೇಗನೆ ತಿನ್ನದಿದ್ದರೆ ಚೆನ್ನಾಗಿರುವುದಿಲ್ಲ. ಅವುಗಳು ರಸವನ್ನು ಬಿಡುತ್ತಿರುವಾಗ ತಿಂದರೆ ತುಂಬ ರುಚಿಯಾಗಿರುತ್ತದೆ" ಎಂದು ಹೇಳಿದಳು.

ಯಜಮಾನ ಅವಳ ಮಾತಿಗೆ ಸಮ್ಮತಿಸಿ ಅತಿಥಿಯನ್ನು ಕರೆದುಕೊಂಡು ಬರಲು ತಾನೇ ಹೋದನು. ಅವನು ಹೋದ ತಕ್ಷಣವೇ ಗ್ರಿಥೆಲ್ ಬೆಂಕಿಗೆ ಹಿಡಿದಿದ್ದ ಬಾತುಕೋಳಿಯನ್ನು ಕೆಳಗಿಳಿಸಿದಳು. ನಂತರ ತನಗೆ ತಾನೇ ಆಲೋಚಿಸಿದಳು. "ಆಹಾ! ನಾನು ಬೆಂಕಿಯ ಮುಂದೆ ಬಹಳ ಹೊತ್ತು ನಿಂತಿದ್ದೆ. ಮೈಯೆಲ್ಲ ಬಿಸಿಯಾಗಿ, ತುಂಬಾ ಬಾಯಾರಿಕೆ ಆಗಿದೆ. ಯಜಮಾನ ಯಾವಾಗ ಬರುತ್ತಾನೋ, ಯಾರಿಗೆ ಗೊತ್ತು? ಈಗ ನಾನು ಬೀಯರ್‌ನ ಪೀಪಾಯಿಯಿಂದ ಬಿಯರನ್ನು ತೆಗೆದುಕೊಳ್ಳುವೆ" ಎಂದು ಹೇಳಿಕೊಂಡಳು.

ಗ್ರಿಥೆಲ್ ಮೆಟ್ಟಿಲುಗಳನ್ನು ಓಡೋಡಿ ಇಳಿದಳು. ಒಂದು ಹಿಡಿಕೆಯ ಪಾತ್ರೆಯ ತುಂಬ ಮದ್ಯವನ್ನು ತುಂಬಿಕೊಂಡಳು. "ದೇವರು ನಿನಗೆ ಒಳ್ಳೆಯದನ್ನು ಮಾಡಲಿ. ಗ್ರಿಥೆಲ್!" ಎಂದು ಆ ಪಾತ್ರೆಯಿಂದ ಬಿಯರನ್ನು ನಿಧಾನವಾಗಿ ಹೀರಿದಳು. ಅದು ಖಾಲಿಯಾದಂತೆ ಮತ್ತೆ ಗುಡಾಣದಿಂದ ಒದಗಿಸಿಕೊಂಡು ಕುಡಿದಳು. ನಂತರ ಮೇಲೆ ಬಂದು ಆ ಬಾತುಕೋಳಿಗಳನ್ನು ಬೆಂಕಿಗೆ ಹಿಡಿದಳು. ಬೆಂಕಿಯಲ್ಲಿ ಬಾತುಕೋಳಿಗಳನ್ನು ಸಿಕ್ಕಿಸಿಕೊಂಡಿದ್ದ ಕೋಲುಗಳನ್ನು ಖುಷಿಯಿಂದ ತಿರುಗಿಸುತ್ತಿದ್ದಳು. ಅವುಗಳ ಮೇಲೆ ಬೆಣ್ಣೆ ಸವರಿದಳು. ಹುರಿದ ಬಾತುಕೋಳಿಗಳಿಂದ ಗಮ್ಮೆನ್ನುವ ಪರಿಮಳ ಎಷ್ಟು ಚೆನ್ನಾಗಿತ್ತು ಅಂದರೆ, ಅವುಗಳ ರುಚಿ ಹೇಗಿದೆಯೋ ಏಕೆ ನೋಡಬಾರದು ಎಂದು ಗ್ರಿಥೆಲ್ ಯೋಚಿಸಿದಳು. ಬಾತುಕೋಳಿಗಳ ಎಣ್ಣೆಗಾಯಿ ಪಲ್ಯದಲ್ಲಿ ತನ್ನ ಬೆರಳನ್ನು ಅದ್ದಿದಳು. "ಆಹಾ, ಬಾತುಕೋಳಿಗಳ ಮಾಂಸ ಎಷ್ಟು ರುಚಿಯಾಗಿದೆ. ಇದನ್ನು ಈಗಲೇ ತಿನ್ನದಿದ್ದರೆ ಬಾತುಕೋಳಿಗಳಿಗೆ ಅವಮಾನ ಮಾಡಿದಂತೆ, ಪಾಪ ಮಾಡಿದಂತೆ" ಎಂದು ತನಗೆ ತಾನೇ ಹೇಳಿಕೊಂಡಳು. ತನ್ನ ಯಜಮಾನ, ಅತಿಥಿಯೊಂದಿಗೆ ಬರುತ್ತಿದ್ದಾನೊ

ಏನೋ ಎಂದು ತಿಳಿಯಲು ಕಿಟಕಿಯ ಹತ್ತಿರ ಹೋಗಿ ಇಣಕಿದಳು. ಅವಳಿಗೆ ಯಾರೂ ಕಾಣಲಿಲ್ಲ. ಅವಳು ಬಾತುಕೋಳಿಯ ಮಾಂಸದ ಹತ್ತಿರಕ್ಕೆ ಹಿಂದಿರುಗಿದಳು. "ಆಹಾ! ಒಂದು ರೆಕ್ಕೆ ಸುಟ್ಟುಹೋಗಿದೆ, ಅದನ್ನು ನಾನು ತಿಂದರೆ ಚೆನ್ನಾಗಿರುತ್ತದೆ" ಎಂದು ರೆಕ್ಕೆಯ ಭಾಗವನ್ನು ಕತ್ತರಿಸಿಕೊಂಡು ತಿಂದಳು. ಯಜಮಾನನಿಗೆ ಒಂದು ರೆಕ್ಕೆಯ ಭಾಗ ಹೋಗಿದೆ ಎಂದು ತಿಳಿದರೆ ತೊಂದರೆ ಆಗುವುದು ಎಂದು ತಿಳಿದುಕೊಂಡು ಇನ್ನೊಂದು ರೆಕ್ಕೆಯನ್ನೂ ತಿಂದೂ ಮುಗಿಸಿದಳು.

ಮತ್ತೆ ತನ್ನ ಯಜಮಾನ ಅತಿಥಿಯೊಂದಿಗೆ ಬರುತ್ತಿರುವನೊ ಇಲ್ಲವೊ ಎಂದು ತಿಳಿಯಲು ಕಿಟಕಿಯ ಬಳಿ ಹೋಗಿ ನೋಡಿದಳು. ಯಾರೂ ಕಾಣಲಿಲ್ಲ. "ಅವರು ಬರುತ್ತಾರೊ, ಇಲ್ಲವೊ ಯಾರಿಗೆ ಗೊತ್ತು? ಬಹುಶಃ ಆತ ಎಲ್ಲಿ ಹೋಗಿರುವನೋ ಅಲ್ಲೇ ಉಳಿಯಬಹುದು. ಬಾ ಗ್ರಿಥೆಲ್, ಧೈರ್ಯಮಾಡು, ಹೇಗೂ ತಿನ್ನಲು ಶುರು ಮಾಡಿರುವೆ, ತಿನ್ನುವ ಕೆಲಸವನ್ನು ಪೂರ್ತಿ ಮಾಡಿಬಿಡು. ಇನ್ನೊಂದು ಲೋಟ ಮದ್ಯ ಕುಡಿ, ನಂತರ ಎಲ್ಲವನ್ನು ಊಟ ಮಾಡು. ಕೊನೆಯಲ್ಲಿ ವಿಶ್ರಾಂತಿ ಪಡೆದುಬಿಡು. ಅಲ್ಲದೆ ಒಳ್ಳೆಯ ವಸ್ತುಗಳು ಸುಮ್ಮನೆ ಯಾಕೆ ಹಾಳಾಗಬೇಕು" ಎಂದು ತನ್ನೊಳಗೆ ಲೆಕ್ಕಾಚಾರ ಹಾಕುತ್ತ ಗ್ರಿಥೆಲ್ ಮತ್ತೆ ಮದ್ಯವನ್ನು ತಂದುಕೊಂಡಳು. ನಂತರ ಒಂದು ಸುಟ್ಟ ಬಾತುಕೋಳಿಯನ್ನು ಸಂತೋಷದಿಂದ ತಿಂದಳು. ಆಗಲೂ ಅವಳ ಯಜಮಾನ ಬರಲಿಲ್ಲ. ಗ್ರಿಥೆಲ್ ಇನ್ನೊಂದು ಬಾತುಕೋಳಿಯ ಕಡೆ ಆಸೆಯಿಂದ ನೋಡಿದಳು. "ಎಲ್ಲಿ ಒಂದು ಇದೆಯೋ ಅಲ್ಲೇ ಇನ್ನೊಂದು ಇರಬೇಕು. ಎರಡೂ ಒಂದಕ್ಕೊಂದು ಸಂಬಂಧಿಗಳಾಗಿವೆ. ಒಂದಕ್ಕೆ ನ್ಯಾಯ ಅನ್ನಿಸಿದ್ದು, ಇನ್ನೊಂದಕ್ಕೂ ನ್ಯಾಯವೇ. ಆದ್ದರಿಂದ ಇನ್ನೊಂದು ಬಾತುಕೋಳಿಗಾಗಿ ನಾನು ಇನ್ನೊಂದು ಲೋಟ ಬಿಯರನ್ನು ಕುಡಿದರೆ ತಪ್ಪಾಗಲಾರದು" ಎಂದು ಹೇಳಿಕೊಂಡಳು. ಹಾಗೆ ಹೇಳಿಕೊಳ್ಳುತ್ತಲೇ ತೃಪ್ತಿ ಆಗುವಷ್ಟು ಕುಡಿದಳು. ನಂತರ ಮೊದಲನೆ ಬಾತುಕೋಳಿಯ ಮೇಲೆ ಎರಡನೆ ಬಾತುಕೋಳಿಯನ್ನು ಹೊಟ್ಟೆಯೊಳಗೆ ಇಳಿಸಿದಳು.

ಹೀಗೆ ಅವಳು ಅತ್ಯುತ್ತಮವಾದ ಊಟ ಮಾಡಿ ಮುಗಿಸುವ ವೇಳೆಗೆ, ಅವಳ ಯಜಮಾನ ಓಡುತ್ತ ಬಂದು ಅವಳನ್ನು ಕೂಗಿದನು. "ಬೇಗ, ಬೇಗ, ಗ್ರಿಥೆಲ್ ಊಟಕ್ಕೆ ಎಲ್ಲ ಸಿದ್ಧ ಮಾಡು, ಅತಿಥಿಗಳು ಇಲ್ಲಿಗೆ ಬರುತ್ತಿದ್ದಾರೆ" ಎಂದು ಹೇಳಿದನು. "ಹಾಗೆ ಆಗಲಿ ಸ್ವಾಮಿ, ಬೇಗನೆ ಎಲ್ಲವನ್ನು ಸಿದ್ಧಪಡಿಸುವೆ" ಎಂದು ಹೇಳಿದಳು.

ಯಜಮಾನ ಒಳಗಡೆ ಕುರ್ಚಿ ಮತ್ತು ಮೇಜನ್ನು ಸರಿಯಾಗಿ ಇಟ್ಟಿದೆಯೊ ಇಲ್ಲವೊ ಎಂದು ನೋಡಿಬರಲು ಹೋದನು. ಮೇಜಿನ ಮೇಲಿದ್ದ ಚಾಕುವನ್ನು ತೆಗೆದುಕೊಂಡನು. ಬಾತುಕೋಳಿಯ ಮಾಂಸವನ್ನು ಸರಿಯಾಗಿ ತುಂಡು ಮಾಡಲು ಅದು ಮೊಂಡಾಗಿದೆ, ಎಂದು ಅವನಿಗೆ ಅನ್ನಿಸಿತು. ಆದ್ದರಿಂದ ಅದನ್ನು ಮನೆಯ ಹಿತ್ತಲಿಗೆ ತೆಗೆದುಕೊಂಡುಹೋದನು. ಅದನ್ನು ಕಲ್ಲಿನ ಮೇಲೆ ತಿಕ್ಕಿ ಚೂಪು ಮಾಡತೊಡಗಿದನು. ಅದೇ ವೇಳೆಗೆ ಅತಿಥಿ ಮನೆ ಬಾಗಿಲ ಮೇಲೆ ಮೃದುವಾಗಿ ಬಡಿದನು. ಗ್ರಿಥೆಲ್ ಬಾಗಿಲು ಬಡಿದವರು ಯಾರು ಎಂದು ತಿಳಿಯಲು ಹೋದಳು. ಬಂದಿರುವವರು ಅತಿಥಿ ಎಂದು ತಿಳಿದು ತನ್ನ ಬಾಯಿಯ ಮೇಲೆ ಬೆರಳನ್ನಿಟ್ಟುಕೊಂಡು, ತಾನು ಹೇಳಿದಂತೆ ಕೇಳಲು ಹೇಳಿದಳು. ಒಳಗಡೆಯಿಂದ ಬರುತ್ತಿರುವ ಶಬ್ದವನ್ನು ಆಲಿಸುವಂತೆ ಹೇಳಿದಳು. ನಂತರ ಅತಿಥಿಗೆ "ನೀವು ಇಲ್ಲಿಂದ ಬೇಗ ಓಡಿಹೋಗಿ.

ನನ್ನ ಯಜಮಾನನಿಗೆ ನೀವು ಇರುವುದು ತಿಳಿದರೆ ನಿಮ್ಮ ಕತೆ ಮುಗಿದಂತೆಯೆ. ನಿಮ್ಮನ್ನು ನಿಜವಾಗಲೂ ರಾತ್ರಿಯ ಊಟಕ್ಕೆ ಕರೆದಿದ್ದಾರೆ ಎಂದು ತಿಳಿಯಬೇಡಿ. ಅವರ ಯೋಚನೆ ಬೇರೆಯೇ ಇದೆ. ಅವರು ನಿಮ್ಮ ಕಿವಿಗಳನ್ನು ಕತ್ತರಿಸುತ್ತಾರೆ. ಅವರು ಚಾಕುವನ್ನು ಚೂಪು ಮಾಡುತ್ತಿರುವುದು ಇಲ್ಲಿಗೆ ಕೇಳಿಸುತ್ತಿದೆಯಲ್ಲ" ಎಂದು ಹೇಳಿದಳು.

ಆ ಅತಿಥಿ, ಚಾಕುವನ್ನು ತಿಕ್ಕುವ ಶಬ್ದವನ್ನು ಕೇಳಿಸಿಕೊಂಡ ತಕ್ಷಣವೇ ಕೆಳಗಿಳಿದು ವೇಗವಾಗಿ ಹೊರಟರು. ಆಗ ಗ್ರಿಥೆಲ್ ತನ್ನ ಯಜಮಾನನ ಹತ್ತಿರಕ್ಕೆ ಕೂಗುತ್ತ ಓಡಿದಳು. "ನೀವು ಒಳ್ಳೆಯ ಅತಿಥಿಯನ್ನೇ ಕರೆದಿದ್ದೀರಿ!" ಎಂದು ಹೇಳಿದಳು. "ಏಯ್, ಏನು ನೀನು ಹೇಳುತ್ತಿರುವುದು?" ಎಂದು ಯಜಮಾನ ಕೇಳಿದನು. "ಯಾಕೆ ಎಂದರೆ ನಾನು ಊಟಕ್ಕೆ ಬಡಿಸಲು ಎಲ್ಲವನ್ನು ಸಿದ್ಧಪಡಿಸುತ್ತಿರುವಾಗ ನಿಮ್ಮ ಅತಿಥಿಗಳು, ಆ ಬಾತುಕೋಳಿಯ ಪಲ್ಯವನ್ನು ಪಾತ್ರೆಯಿಂದ ತೆಗೆದುಕೊಂಡು, ಬಾಗಿಲು ಚಿಲಕ ಹಾಕಿಕೊಂಡು ಹೊರಟುಹೋದರು" ಎಂದು ಹೇಳಿದಳು.

"ಅಯ್ಯೋ! ಅದು ಎಂತಹ ನಡವಳಿಕೆಯಪ್ಪ, ನಿಜವಾಗಲೂ!" ಎಂದು ಹೇಳುತ್ತಾ ಯಜಮಾನ ತನ್ನ ಬಾತುಕೋಳಿಗಳ ಮಾಂಸಕ್ಕಾಗಿ ದುಃಖಪಟ್ಟನು. "ಅವನು ಕೊನೆ ಪಕ್ಷ ಒಂದನ್ನಾದರೂ ಬಿಟ್ಟುಹೋಗಿದ್ದರೆ ನನಗೆ ತಿನ್ನಲು ಏನಾದರೂ ಇರುತ್ತಿತ್ತು!" ಎಂದುಕೊಂಡ ಯಜಮಾನ ತನ್ನ ಅತಿಥಿಯ ಹಿಂದೆ ಕೂಗುತ್ತಾ ಓಡಿದನು. ಆದರೆ ಆ ಅತಿಥಿ ಕೇಳಿಸಿಕೊಳ್ಳದವನಂತೆ ನಟಿಸಿದನು. ಆದ್ದರಿಂದ ಯಜಮಾನ ಕೈಯಲ್ಲಿ ಚಾಕು ಹಿಡಿದುಕೊಂಡು ಅವನನ್ನು ಹಿಂಬಾಲಿಸಿಕೊಂಡು "ಒಂದೇ ಒಂದು! ಒಂದೇ ಒಂದು!" ಎಂದು ಕೂಗಿದನು. ಅವನು ಯಾತಕ್ಕಾಗಿ ಹಾಗೆ ಕೂಗಿದನೆಂದರೆ, ಅವನ ಅತಿಥಿ ಒಂದು ಪಕ್ಷಿಯನ್ನಾದರೂ ಬಿಟ್ಟುಹೋಗಲಿ ಎನ್ನುವುದು ಅವನ ಅರ್ಥವಾಗಿತ್ತು. ಆದರೆ ಆ ಅತಿಥಿ ಬೇರೆ ಅರ್ಥ ಮಾಡಿಕೊಂಡನು. ಯಜಮಾನ ತನ್ನ ಒಂದು ಕಿವಿಯನ್ನಾದರೂ ಕೂಡು ಎಂದು ಕೇಳುತ್ತಿದ್ದಾನೆ ಎಂದು ತಿಳಿದುಕೊಂಡನು. ಅಲ್ಲದೆ ಕಾಲಿಗೆ ಬೆಂಕಿ ಬಿದ್ದವನಂತೆ ತನ್ನ ಕೈಲಾದಷ್ಟು ಜೋರಾಗಿ ಓಡಿದನು. ಯಜಮಾನನಿಂದ ತಪ್ಪಿಸಿಕೊಂಡು ಸದ್ಯ ಹೇಗಾದರೂ ಮನೆ ಸೇರಿದರೆ ಸಾಕು ಎಂದುಕೊಂಡನು ಆ ಅತಿಥಿ.

೩೧. ಅನುಭವಿ ಗುರಿಕಾರ

ಒಂದಾನೊಂದು ಕಾಲದಲ್ಲಿ ಒಬ್ಬ ಹುಡುಗ ಇದ್ದನು. ಅವನು ಬೀಗಗಳನ್ನು ಮಾಡುವುದನ್ನು, ಬೀಗಗಳನ್ನು ತೆಗೆಯುವುದನ್ನು ಕಲಿತನು. ಅದನ್ನು ಕಲಿತಾದ ಮೇಲೆ ಜೀವನದಲ್ಲಿ ತನ್ನ ಅದೃಷ್ಟವನ್ನು ಪರೀಕ್ಷೆ ಮಾಡಿಕೊಂಡು ಬರುವ ತನ್ನ ಇಚ್ಛೆಯನ್ನು ತನ್ನ ತಂದೆಗೆ ಹೇಳಿದನು. "ಒಳ್ಳೇದು, ಬಹಳ ಒಳ್ಳೇದು. ನನ್ನ ಒಪ್ಪಿಗೆ ಇದೆ" ಎಂದು ಅವನ ತಂದೆ ಹೇಳಿದನು. ಮಗನ ಪ್ರಯಾಣಕ್ಕೆ ದುಡ್ಡನ್ನು ಕೊಟ್ಟನು. ಆ ಹುಡುಗ ಕೆಲಸವನ್ನು ಹುಡುಕಿಕೊಂಡು ಹೊರಟನು. ಸ್ವಲ್ಪ ದಿನಗಳಾದ ಮೇಲೆ ಅವನು ತನ್ನ ಬೀಗಗಳ ವ್ಯಾಪಾರವನ್ನು ಮುಂದುವರಿಸಬಾರದು ಎಂಬ ತೀರ್ಮಾನಕ್ಕೆ ಬಂದನು. ಅದರಲ್ಲಿ ಅವನಿಗೆ ಬೇಸರವಾಗಿತ್ತು. ಅವನು ಬೇಟೆಯಾಡುವ ಕಲೆಯನ್ನು ಇಷ್ಟಪಟ್ಟನು.



ಅವನು ಬೇಟೆಯಾಡುವ ಕಲೆಯ ಬಗ್ಗೆ ಯೋಚಿಸುತ್ತಿರುವಾಗಲೇ ಒಬ್ಬ ಬೇಟೆಗಾರ ಸಿಕ್ಕಿದನು. ಅವನು ಹಸಿರು ಬಣ್ಣದ ಬಟ್ಟೆ ಹಾಕಿಕೊಂಡಿದ್ದನು. ಬೇಟೆಗಾರ ಆ ಹುಡುಗನನ್ನು ಎಲ್ಲಿಂದ ಬಂದದ್ದು , ಮತ್ತು ಎಲ್ಲಿಗೆ ಹೋಗುತ್ತಿರುವುದು ಎಂದು ಕೇಳಿದನು. ಆ ಹುಡುಗ, ತಾನು ಒಬ್ಬ ಬೀಗ ಮಾಡುವವನು, ಆದರೆ ಆ ಉದ್ಯೋಗದಲ್ಲಿ ತನಗೆ ಸರಿಹೋಗುತ್ತಿಲ್ಲವೆಂದು ಹೇಳಿದನು. ಅಲ್ಲದೆ ತನಗೆ ಒಬ್ಬ ಬೇಟೆಗಾರನಾಗಬೇಕೆಂದು ಆಸೆ ಇದೆ. ತನ್ನನ್ನು ಶಿಷ್ಯನನ್ನಾಗಿ ಮಾಡಿಕೊಂಡರೆ ಚೆನ್ನಾಗಿರುವುದು ಎಂದ ಬೀಗ ಮಾಡುವ ಹುಡುಗ ಬೇಟೆಗಾರನನ್ನು ಕೇಳಿದನು. “ಹಾಗೆ ಆಗಲಿ, ಬಾ ನನ್ನ ಜೊತೆ” ಎಂದು ಬೇಟೆಗಾರ ಹೇಳಿದನು.

ಹೀಗೆ ಆ ಬೀಗದ ಹುಡುಗ ಬೇಟೆಗಾರನ ಜೊತೆ ಹೊರಟನು. ಅವನ ಜೊತೆಯಲ್ಲಿಯೇ ವಾಸಮಾಡಿಕೊಂಡಿದ್ದು ಬೇಟೆಯಲ್ಲಿ ಗುರಿಯಿಡುವ ಕಲೆಯನ್ನು ಕಲಿತನು. ನಂತರ ಗುರುವನ್ನು ಬಿಡುವ ಸಮಯ ಬಂದಿತು. ಆಗ ಬೇಟೆಗಾರ ಗುರು ಆ ಹುಡುಗನಿಗೆ ಗಾಳಿಯಲ್ಲಿ ಗುಂಡು ಹಾರಿಸುವ ಬಂದೂಕವನ್ನು ಬಹುಮಾನವಾಗಿ ಕೊಟ್ಟನು. ಅದರ ವಿಶೇಷ ಏನಾಗಿತ್ತು ಅಂದರೆ, ಗುರಿತಪ್ಪದ ಬಂದೂಕಾಗಿತ್ತು. ಅದರಿಂದ ಹೊಡೆದ ಗುರಿ ತಪ್ಪುತ್ತಿರಲಿಲ್ಲ. ಆ ಬಂದೂಕವನ್ನು ಬಹುಮಾನವಾಗಿ ಪಡೆದು ಅವನು ತನ್ನ ಪ್ರಯಾಣವನ್ನು ಮುಂದುವರಿಸಿದನು. ಹಾಗೆ ಹೋಗುತ್ತ ಒಂದು ದೊಡ್ಡ ಕಾಡಿಗೆ ಬಂದನು. ದಿನವೆಲ್ಲ ನಡೆದರೂ ಕಾಡಿನ ಅಂಚು ಕಾಣಲಿಲ್ಲ. ಆದ್ದರಿಂದ ಅವನು ಒಂದು ದೊಡ್ಡ ಮರದ ಕೊಂಬೆಯ ಮೇಲೆ ವಿಶ್ರಾಂತಿಯನ್ನು ಪಡೆದನು. ಅಲ್ಲಿ ಅವನು ಕಾಡು ಪ್ರಾಣಿಗಳಿಂದ ಸುರಕ್ಷಿತವಾಗಿದ್ದನು. ಮಧ್ಯ ರಾತ್ರಿಯ ಹೊತ್ತಿಗೆ ದೂರದಲ್ಲಿ ಮಂದ ಪ್ರಕಾಶದ ಬೆಳಕು ಕಂಡಿತು. ಅವನು ಕೊಂಬೆಗಳ ನಡುವೆ ಬಗ್ಗಿ ಬಗ್ಗಿ ನೋಡಿದನು. ಆ ಬೆಳಕು ಎಲ್ಲಿಂದ ಮತ್ತು ಎಷ್ಟು ದೂರದಿಂದ ಬಂದಿದೆ ಎಂದು ಗುರುತು ಮಾಡಿಕೊಂಡನು. ಬೆಳಕಿನ ದಿಕ್ಕಿಗೆ ತನ್ನ ಟೋಪಿಯನ್ನು ಎಸೆದನು. ಕೆಳಗಿಳಿದು ಬಂದಾಗ ದಿಕ್ಕು ಸರಿಯಾಗಿ ತಿಳಿಯಲಿ ಎಂದು ಹಾಗೆ ಮಾಡಿದನು. ಮರದಿಂದ ಕೆಳಗಿಳಿದು ಟೋಪಿಯ ಕಡೆ ಓಡಿದನು. ಮತ್ತೆ ಅದನ್ನು ತಲೆಯ ಮೇಲೆ ಹಾಕಿಕೊಂಡು ನೇರವಾಗಿ ಹೊರಟನು. ಅವನು ಮುಂದೆ ಮುಂದೆ ಹೋದಂತೆ ಬೆಳಕು

ದೊಡ್ಡದಾಗಿ ಕಾಣತೊಡಗಿತು. ಅವನು ಅದರ ಹತ್ತಿರವೇ ಬಂದಾಗ ಅದು ಬೆಂಕಿ ಹಚ್ಚಿ ಮಾಡಿಕೊಂಡಿದ್ದರಿಂದ ಬಂದ ಬೆಳಕು ಎಂದು ಅವನಿಗೆ ತಿಳಿಯಿತು. ಬೆಂಕಿಯ ಸುತ್ತಲು ಮೂರು ರಾಕ್ಷಸರು ಕುಳಿತಿದ್ದರು. ಬೆಂಕಿಯ ಮೇಲೆ ಒಂದು ಕಂಬಿಗೆ ಸತ್ತ ಎತ್ತಿನ ಮಾಂಸವನ್ನು ಸಿಕ್ಕಿಸಿಕೊಂಡು ಸುಡುತ್ತಿದ್ದರು. ಅದೇ ವೇಳೆಗೆ ಮೊದಲನೆಯ ರಾಕ್ಷಸ ಮಾಂಸ ಬೆಂದಿರುವುದು ಸಾಕೊ, ಬೇಕೊ ನೋಡ್ತೀನಿ ಎಂದು ಹೇಳುತ್ತ ಒಂದು ತುಂಡು ಮಾಂಸವನ್ನು ಕಿತ್ತುಕೊಂಡನು. ಇನ್ನೇನು ಅದನ್ನು ಬಾಯೊಳಗೆ ಇಟ್ಟುಕೊಳ್ಳಬೇಕು, ಆ ಸಮಯದಲ್ಲಿ ಗುರಿ ಇಡುವುದನ್ನು ಕಲಿತುಕೊಂಡಿದ್ದ ಬೇಟೆಗಾರ, ಅದಕ್ಕೆ ಗುರಿಯಿಟ್ಟು ಕೆಳಗೆ ಬೀಳಿಸಿದನು. ಆಗ ಆ ರಾಕ್ಷಸ, "ಜೋರಾಗಿ ಬೀಸಿದ ಗಾಳಿ, ನನ್ನ ಕೈಯಿಂದ ಮಾಂಸವನ್ನು ಬೀಳಿಸಿತು" ಎಂದು ಕೂಗಿ ಇನ್ನೊಂದು ತುಂಡು ಕಿತ್ತು ತಿನ್ನಲು ಪ್ರಯತ್ನಿಸಿದಾಗ ಅದನ್ನೂ ಕೂಡ ಬೇಟೆಗಾರ ಕೆಳಗೆ ಬೀಳಿಸಿದನು. ಆಗ ಆ ರಾಕ್ಷಸ ಪಕ್ಕದ ರಾಕ್ಷಸನ ಕಿವಿಯ ಮೇಲೆ ಗುದ್ದಿ "ನೀನು ಯಾಕೆ ನನ್ನ ತುಂಡು ಕಸಿದುಕೊಳ್ಳುವೆ?" ಎಂದು ಸಿಟ್ಟಿನಿಂದ ಕೇಳಿದನು. "ಅಯ್ಯೋ! ನಾನು ತೆಗೆದುಕೊಳ್ಳಲಿಲ್ಲ. ಯಾರೋ ಗುರಿಯಿಟ್ಟು ಬೀಳಿಸಿರಬಹುದು" ಎಂದು ಪಕ್ಕದ ರಾಕ್ಷಸ ಹೇಳಿದನು. ಅವನು ಮೂರನೇ ಬಾರಿ ತಿನ್ನಬೇಕೆಂದು ತೆಗೆದುಕೊಂಡ ಮಾಂಸದ ತುಣುಕು ಮತ್ತೆ ಗುರಿಕಾರನ ಗುರಿಗೆ ಬಲಿ ಆಯಿತು. "ಇದು ನಿಜಕ್ಕೂ ಅತ್ಯುತ್ತಮವಾದ ಗುರಿ ಆಗಿದೆ" ಎಂದು ಎಲ್ಲ ರಾಕ್ಷಸರು ಕೂಗಿದರು. "ಬಾಯೊಳಗಿಡುವ ತುತ್ತಿಗೆ ಗುರಿಯಿಡುವ ಮನುಷ್ಯ ನಮಗೆ ತುಂಬ ಉಪಯೋಗಕ್ಕೆ ಬರುತ್ತಾನೆ" ಎಂದು ಹೇಳಿದರು. ನಂತರ, ಜೋರಾಗಿ ಅವನನ್ನು ಕೂಗಿ ನಿನ್ನ ಹೊಟ್ಟೆ ತುಂಬುವವರೆಗೂ ಊಟ ಮಾಡು. ನಾವು ನಿನಗೆ ಏನೂ ಅಪಾಯ ಮಾಡಲ್ಲ. ನೀನು ಬರದಿದ್ದರೆ ನಾವೇ ನಿನ್ನನ್ನು ಹಿಡಿದು ಸಾಯಿಸುತ್ತೇವೆ" ಎಂದು ಕೂಗಿದರು.

ಗುರಿಕಾರ ಬೆಂಕಿಯ ಕಡೆ ಹೆಜ್ಜೆ ಹಾಕಿದನು. ಮತ್ತು ತಾನೊಬ್ಬ ಅನುಭವಿ ಗುರಿಕಾರನೆಂದು, ತಾನು ಯಾವುದಕ್ಕೆ ಗುರಿಯಿಟ್ಟರೂ ಅದು ತಪ್ಪುವುದಿಲ್ಲವೆಂದು ಹೇಳಿದನು. ಆಗ ರಾಕ್ಷಸರು, ಅವನು ತಮ್ಮ ಜೊತೆ ಬಂದರೆ ತಾವು ಚೆನ್ನಾಗಿ ನೋಡಿಕೊಳ್ಳುವುದಾಗಿ ಹೇಳಿದರು. ಅಲ್ಲದೆ, ಕಾಡಿನ ಹೊರಗೆ ಒಂದು ನದಿ ಇದೆ. ಅದರ ಆಚೆ ದಡದಲ್ಲಿ ಒಂದು ದೊಡ್ಡ ಅರಮನೆ ಇದೆ. ಅದರಲ್ಲಿ ಒಬ್ಬ ಸುಂದರ ರಾಜಕುಮಾರಿ ಇದ್ದಾಳೆ. ಅವಳನ್ನು ತಾವು ಪಡೆಯಬೇಕೆಂಬ ಆಸೆ ಇದೆ ಎಂದು ರಾಕ್ಷಸರು ಅನುಭವಿ ಗುರಿಕಾರನಿಗೆ ಹೇಳಿದರು. ಬೇಟೆಗಾರ ರಾಜಕುಮಾರಿಯನ್ನು ತಂದು ಒಪ್ಪಿಸುವುದಾಗಿ ಹೇಳಿದನು. ಆಗ ರಾಕ್ಷಸರು ಆ ಭವನದ ಹೊರಗೆ ಒಂದು ಸಣ್ಣ ನಾಯಿಯಿದೆ. ಅದರ ಹತ್ತಿರ ಹೋದರೆ ಬೊಗಳುತ್ತದೆ. ಅದರ ಕೂಗಿಗೆ ಅರಮನೆಯಲ್ಲಿದ್ದವರೆಲ್ಲ ಎಚ್ಚರಗೊಳ್ಳುತ್ತಾರೆ. ಆ ಕಾರಣದಿಂದ ತಾವುಗಳು ಒಳಗೆ ಹೋಗಲು ಆಗಿಲ್ಲ. ಆದ್ದರಿಂದ ಅವನು ಮೊದಲು ನಾಯಿಗೆ ಗುರಿ ಇಡಬೇಕು ಎಂದು ರಾಕ್ಷಸರು ಹೇಳಿದರು. ಆ ಮಾತಿಗೆ ಬೇಟೆಗಾರ ಒಪ್ಪಿಕೊಂಡನು. ಆ ಕೆಲಸ ತನಗೆ ಒಂದು ಆಟದ ಹಾಗೆ ಎಂದು ಹೇಳಿದನು. ನಂತರ ಅವನು ಒಂದು ದೋಣಿಯನ್ನು ಬಾಡಿಗೆಗೆ ತೆಗೆದುಕೊಂಡು ನದಿಯಲ್ಲಿ ತೇಲುತ್ತಾ ಹೊರಟನು. ಅವನು ದಡವನ್ನು ತಲಪುವಷ್ಟರಲ್ಲಿ ನಾಯಿ ಓಡೋಡಿ ಬಂದಿತು. ಬೇಟೆಗಾರ ತನ್ನ ಬಂದೂಕಿನಿಂದ ಸರಿಯಾಗಿ ಗುರಿ ಇಟ್ಟು ಅದನ್ನು ಹೊಡೆದು ಸಾಯಿಸಿದನು. ಅದನ್ನು ನೋಡಿದ ಕೂಡಲೆ ರಾಕ್ಷಸರು ತುಂಬಾ ಸಂತೋಷಪಟ್ಟರು. ಇನ್ನೇನು ತಮಗೆ ರಾಜಕುಮಾರಿ ಸಿಕ್ಕೇಬಿಟ್ಟಳು ಎಂದು ಯೋಚಿಸಿದರು. ಆದರೆ ಬೇಟೆಗಾರ ತಾನು ಅವರನ್ನು ಕರೆಯುವವರೆಗೂ ಅಲ್ಲೇ ಇರಬೇಕೆಂದು ಹೇಳಿದನು. ಏಕೆಂದರೆ ರಾಜಕುಮಾರಿಯನ್ನು ಪಡೆಯುವ

ದಾರಿಗಳನ್ನು ಕಂಡುಕೊಳ್ಳಬೇಕಾಗಿತ್ತು.

ಅವನು ಅರಮನೆಯೊಳಗೆ ಹೋದನು. ಎಲ್ಲರೂ ಗಾಢವಾದ ನಿದ್ರೆಯಲ್ಲಿದ್ದರು. ಅವನು ಮೊದಲ ಕೋಣೆಯೊಳಗೆ ಹೋದನು. ಅಲ್ಲಿ ಒಂದು ಬೆಳ್ಳಿಯ ಕತ್ತಿಯನ್ನು ತೂಗು ಹಾಕಲಾಗಿತ್ತು. ಅದರ ಮೇಲೆ ಒಂದು ಬಂಗಾರದ ನಕ್ಷತ್ರ ಮತ್ತು ರಾಜನ ಹೆಸರುಗಳನ್ನು ಕೆತ್ತಲಾಗಿತ್ತು. ಅದರ ಕೆಳಗೆ ಒಂದು ಮೇಜಿತ್ತು. ಅದರ ಮೇಲೆ ಮೊಹರು ಮಾಡಿ ಅಂಟಿಸಿದ್ದ ಒಂದು ಲಕೋಟೆ ಇತ್ತು. ಅವನು ಅದನ್ನು ಒಡೆದು ಓದಿದನು. ಕತ್ತಿಯನ್ನು ತೆಗೆದುಕೊಂಡು ಯಾರ ಮೇಲೆ ಮುಟ್ಟಿಸಿದರೂ ಅವರಿಗೆ ಜೀವ ಬರುತ್ತದೆ ಎಂದು ಬರೆಯಲಾಗಿತ್ತು. ಬೇಟೆಗಾರ ಆ ಕತ್ತಿಯನ್ನು ತೆಗೆದುಕೊಂಡ. ನಂತರ ರಾಜಕುಮಾರಿ ಮಲಗಿರುವ ಕೋಣೆಗೆ ಬಂದನು. ಅವಳ ಸೌಂದರ್ಯವನ್ನು ನೋಡಿ, ಹಾಗೇ ಅವಳನ್ನೇ ನೋಡುತ್ತಾ ನಿಂತುಬಿಟ್ಟನು. ಅವನ ಉಸಿರಾಟವೂ ಕೇಳಿಸುತ್ತಿರಲಿಲ್ಲ. ಹಾಗೆ ತನಗೆ ತಾನೇ "ದುಷ್ಟಶಕ್ತಿಯನ್ನು, ಕೆಟ್ಟ ಉದ್ದೇಶವನ್ನು ಹೊಂದಿದ ಆ ರಾಕ್ಷಸರಿಗೆ, ಈ ಮುಗ್ಧ ಹುಡುಗಿಯನ್ನು ಹೇಗೆ ಒಪ್ಪಿಸಲಿ? ನಾನು ಹೇಗೆ ಒಪ್ಪಿಕೊಂಡೆ?" ಎಂದು ತನ್ನಲ್ಲೆ ಯೋಚಿಸಿದನು. ಅವನು ಹಾಗೆ ಇಣುಕಿದಾಗ, ಹಾಸಿಗೆ ಕೆಳಗಿರುವ ಚಪ್ಪಲಿಗಳು ಅವನ ಗಮನ ಸೆಳೆದವು. ಬಲಗಾಲಿನ ಚಪ್ಪಲಿಯ ಮೇಲೆ ರಾಜನ ಹೆಸರು ಮತ್ತು ಒಂದು ನಕ್ಷತ್ರವಿತ್ತು. ಎಡಗಾಲಿನ ಚಪ್ಪಲಿಯಲ್ಲಿ ಒಂದು ನಕ್ಷತ್ರ ಮತ್ತು ರಾಜನ ಮಗಳ ಹೆಸರನ್ನು ಕೆತ್ತಲಾಗಿತ್ತು. ಅವಳ ಮೇಲೆ ಒಂದು ದೊಡ್ಡ ಕರವಸ್ತ್ರವಿತ್ತು. ಅದನ್ನು ರೇಶಿಮೆ ಮತ್ತು ಬಂಗಾರದ ಎಳೆಗಳಿಂದ ನೇಯಲಾಗಿತ್ತು. ಅದರ ಬಲಭಾಗದಲ್ಲಿ ಅವಳ ತಂದೆಯ ಹೆಸರನ್ನು, ಎಡಭಾಗದಲ್ಲಿ ಅವಳ ಹೆಸರನ್ನು ಬಂಗಾರದ ದಾರದಲ್ಲಿ ನೇಯಲಾಗಿತ್ತು. ಆ ಬೇಟೆಗಾರ, ಚಾಕುವಿನಿಂದ ಬಲಭಾಗದ ಮೂಲೆಯನ್ನು ಕತ್ತರಿಸಿ ಇಟ್ಟುಕೊಂಡನು. ನಂತರ ರಾಜನ ಹೆಸರಿರುವ ಚಪ್ಪಲಿಯನ್ನು ತೆಗೆದುಕೊಂಡನು. ಎರಡನ್ನೂ ತನ್ನ ಚರ್ಮದ ಚೀಲಕ್ಕೆ ಸೇರಿಸಿದನು. ಅಲ್ಲಿಯವರೆಗೂ ರಾಜಕುಮಾರಿ ಸುಮ್ಮನೆ ಇದ್ದವಳು, ಮೆಲ್ಲಗೆ ತನ್ನ ಹೊದಿಕೆ ಸರಿಮಾಡಿಕೊಂಡಳು. ಬೇಟೆಗಾರ ಅವಳ ಹೊದಿಕೆಯ ತುಂಡನ್ನೂ, ಕರವಸ್ತ್ರದ ತುಂಡನ್ನೂ ಕತ್ತರಿಸಿಕೊಂಡು ತನ್ನ ಚೀಲಕ್ಕೆ ಹಾಕಿಕೊಂಡನು. ಆ ಎಲ್ಲ ವಸ್ತುಗಳನ್ನು ಅವನು ರಾಜಕುಮಾರಿಯನ್ನು ಮುಟ್ಟದೆ ತೆಗೆದುಕೊ-ಡನು. ನಂತರ ನಿಶ್ಶಬ್ದವಾಗಿ ಹೊರಟುಹೋದನು. ಅವನು ಹಾಗೆ ಹೊರಗೆ ಬಂದಾಗ ಮೂರು ರಾಕ್ಷಸರು ಕಾಯುತ್ತಿದ್ದರು. ಅವನು ರಾಜಕುಮಾರಿಯನ್ನು ಕರೆದುಕೊಂಡು ಬಂದಿರಬೇಕೆಂಬ ನಿರೀಕ್ಷೆಯಲ್ಲಿ ಕಾಯುತ್ತಿದ್ದರು. ರಾಜಕುಮಾರಿ ಅವನ ವಶವಾಗಿದ್ದಾಳೆಂದು ಬೇಟೆಗಾರ ಅವುಗಳಿಗೆ ಹೇಳಿದನು. ಅವನು ಬಾಗಿಲು ತೆಗೆಯದೆ, ಅವರನ್ನು ಒಳಗೆ ಬರಲು ಹೇಳಿದನು. ಅವರು ಗೋಡೆಯ ಚಿಕ್ಕ ರಂಧ್ರದ ಮೂಲಕ ಬರಬೇಕಾಯಿತು. ಮೊದಲ ರಾಕ್ಷಸ ತನ್ನ ತಲೆಯನ್ನು ಒಳಗೆ ತೂರಿಸಿದಾಗ ಬೇಟೆಗಾರ ತನ್ನ ಹತ್ತಿರವಿದ್ದ ಬೆಳ್ಳಿಯ ಕತ್ತಿಯಿಂದ ಅವನ ತಲೆಯನ್ನು ತುಂಡು ಮಾಡಿ ದೇಹವನ್ನು ಒಳಗೆ ಎಳೆದು ಹಾಕಿದನು. ಎರಡನೇ ರಾಕ್ಷಸನನ್ನು ಕರೆದು ಅವನ ತಲೆಯನ್ನೂ ಕತ್ತರಿಸಿದನು. ಮೂರನೇ ರಾಕ್ಷಸನಿಗೂ ಅದೇ ಗತಿ ಆಯಿತು. ನಂತರ ಅವನ ಆ ರಾಕ್ಷಸರ ನಾಲಿಗೆಗಳನ್ನು ಕತ್ತರಿಸಿಕೊಂಡು ತನ್ನ ಚೀಲದೊಳಗೆ ಹಾಕಿಕೊಂಡನು. ರಾಜಕುಮಾರಿಯನ್ನು ಅವಳ ಶತ್ರುಗಳಿಂದ ಬಿಡುಗಡೆ ಮಾಡಿದೆನಲ್ಲ ಎಂದು ಯೋಚಿಸಿ ಸಂತೋಷಪಟ್ಟನು. ನಂತರ ತನ್ನ ತಂದೆಯನ್ನು ನೋಡಬೇಕೆಂದು ತೀರ್ಮಾನಿಸಿದನು. ತಾನು ಮಾಡಿರುವುದನ್ನು ತನ್ನ ತಂದೆಗೆ ತೋರಿಸಿ ಮತ್ತೆ ಪ್ರಪಂಚದ ಸುತ್ತಾಟವನ್ನು ಮುಂದುವರಿಸಿದರಾಯಿತು ಎಂದುಕೊಂಡನು. ಅಲ್ಲದೆ "ದೇವರು ಕರುಣೆಸಿದರೆ ನನಗೆ ಎಲ್ಲಿ

ಹೋದರೂ ಒಳ್ಳೆಯದಾಗುತ್ತದೆ" ಎಂದು ತಾನೇ ಹೇಳಿಕೊಂಡನು.

ಗುರಿಕಾರ ಹೊರಟುಹೋದ ಮೇಲೆ ರಾಜ ಎದ್ದನು. ನಡುಮನೆಯಲ್ಲಿ ಮೂವರು ರಾಕ್ಷಸರು ಸತ್ತುಬಿದ್ದಿರುವುದನ್ನು ನೋಡಿದನು. ಅವನು ತನ್ನ ಮಗಳ ಕೋಣೆಗೆ ಹೋಗಿ, ಅವಳನ್ನು ಎಬ್ಬಿಸಿದನು. ರಾಕ್ಷಸರನ್ನು ಕೊಂದವರು ಯಾರು ಎಂದು ವಿಚಾರಿಸಿದನು. "ನನಗೇನು ಗೊತ್ತಿಲ್ಲ, ಅಪ್ಪ. ನಾನು ನಿದ್ದೆ ಮಾಡುತ್ತಿದ್ದೆನು" ಎಂದು ರಾಜಕುಮಾರಿ ಹೇಳಿದಳು. ಅವಳು ಎದ್ದು ಚಪ್ಪಲಿ ಹಾಕಿಕೊಳ್ಳಲು ನೋಡಿದಾಗ, ಅವಳ ಬಲಗಾಲಿನ ಚಪ್ಪಲಿ ಕಳೆದುಹೋಗಿರುವುದು ತಿಳಿಯಿತು. ಅವಳ ಕರವಸ್ತ್ರದ ಬಲತುದಿಯನ್ನು ತುಂಡು ಮಾಡಲಾಗಿತ್ತು. ಕೂಡಲೆ ತುರ್ತುಸಭೆಯನ್ನು ಕರೆದು ರಾಜಕುಮಾರಿಯನ್ನು ರಾಕ್ಷಸರಿಂದ ಬಿಡುಗಡೆ ಮಾಡಿದವರಾರು ಎಂದು ಕೇಳಿದನು. ಆ ರಾಜನಿಗೆ ಒಕ್ಕಣ್ಣಿನ ಕುರೂಪಿಯಾದ ದಳಪತಿ ಇದ್ದನು. ಅವನು ಆ ಕೆಲಸವನ್ನು ತಾನು ಮಾಡಿದ್ದಾಗಿ ಹೇಳಿಕೊಂಡನು. ರಾಜ ಅವನ ಮಾತನ್ನು ನಂಬಿದನು. ಆ ಕೆಲಸವನ್ನು ಮಾಡಿದವನೆ ರಾಜಕುಮಾರಿಯನ್ನು ಮದುವೆ ಆಗಬೇಕೆಂದು ಎಲ್ಲರ ಎದುರಿಗೆ ಹೇಳಿದನು. ಆ ವಿಷಯವನ್ನು ರಾಜಕುಮಾರಿಗೆ ತಿಳಿಸಿದಾಗ, "ಅವನನ್ನು ಮದುವೆ ಆಗುವ ಬದಲು ಎಲ್ಲಿಗಾದಾರೂ ಹೋಗುವುದೇ ಮೇಲು. ಕಾಲು ಕರೆದುಕೊಂಡು ಹೋದ ಕಡೆ ಹೋಗುತ್ತೇನೆ" ಎಂದು ರಾಜಕುಮಾರಿ ಹೇಳಿದಳು. ಅವಳಿಗೆ ಇಷ್ಟವಿದ್ದಂತೆ ಮಾಡಲು ರಾಜ ಹೇಳಿದನು. ಆದರೆ, ಅವಳು ದಳಪತಿಯನ್ನು ಮದುವೆ ಆಗದೆ ಇರುವುದರಿಂದ, ರಾಜ ಉಡುಗೆಯನ್ನು ತೆಗೆದು ಹಾಕಿ, ಸಾಮಾನ್ಯ ರೈತನ ಉಡುಗೆ ತೊಟ್ಟು ಪ್ರಯಾಣ ಮಾಡಬಹುದು ಎಂದು ರಾಜ ತನ್ನ ಮಗಳಿಗೆ ಹೇಳಿದನು. ಅವಳು ಒಬ್ಬ ಕುಂಬಾರನ ಹತ್ತಿರ ಹೋಗಿ ಗಡಿಗೆ ವ್ಯಾಪಾರ ಮಾಡಬೇಕೆಂದು ರಾಜ ಆಜ್ಞಾಪಿಸಿದನು.

ರಾಜಕುಮಾರಿ ತನ್ನ ಉಡುಪನ್ನು ತೆಗೆದುಹಾಕಿ ಕುಂಬಾರನ ಹತ್ತಿರ ಹೋದಳು. ಒಂದಷ್ಟು ಮಡಕೆಗಳನ್ನು ಬಾಡಿಗೆಗೆ ಪಡೆದಳು. ಅವಳು ಅವುಗಳನ್ನು ಸಾಯಂಕಾಲದ ಹೊತ್ತಿಗೆ ಮಾರಿದರೆ ಅದಕ್ಕೆ ಕೂಲಿ ಕೊಡುವುದಾಗಿ ಕುಂಬಾರ ಹೇಳಿದನು. ಅವಳು ಸಂತೆಯಲ್ಲಿ ಒಂದು ನಿರ್ದಿಷ್ಟ ಮೂಲೆಯಲ್ಲಿ ಕುಳಿತುಕೊಳ್ಳಬೇಕೆಂದು ರಾಜ ಆಜ್ಞೆ ಮಾಡಿದನು. ನಂತರ ಅನೇಕ ಬಂಡಿಗಳು ಅಲ್ಲಿ ಹಾದುಹೋಗುವಂತೆ ಆಜ್ಞೆ ಮಾಡಿದನು. ಅದರಿಂದ ಅವಳ ಮಡಕೆಗಳು ಪುಡಿ ಪುಡಿ ಆಗಬೇಕೆನ್ನುವುದು ರಾಜನ ಇಚ್ಛೆಯಾಗಿತ್ತು. ಅವಳು ಅಲ್ಲಿ ಕುಳಿತುಕೊಂಡಿರುವಾಗ ಗಾಡಿಗಳು ಬಂದು ಅವಳ ಮಡಕೆಗಳನ್ನು ಉರುಳಿಸಿ ಪುಡಿ ಪುಡಿ ಮಾಡಿದವು.

"ಅಯ್ಯೋ! ದೇವರೆ, ಕುಂಬಾರನಿಗೆ ನಾನು ದುಡ್ಡು ಹೇಗೆ ಕೊಡಲಿ?" ಎಂದು ರಾಜಕುಮಾರಿ ಅಳಹತ್ತಿದಳು. ಈ ಬೇಸರದಿಂದಲಾದರೂ ಅವಳು ಆ ದಳಪತಿಯನ್ನು ಮದುವೆ ಆಗಲು ಒಪ್ಪುವಳೆಂದು ರಾಜ ತಿಳಿದಿದ್ದನು. ಆದರೆ ಅದಕ್ಕೆ ವಿರುದ್ಧವಾಗಿ ಆಕೆ ಕುಂಬಾರನ ಬಳಿ ಹೋಗಿ ತನ್ನ ಮೇಲೆ ನಂಬಿಕೆಯಿಟ್ಟು ಇನ್ನೊಂದು ಮೂಟೆ ಮಡಕೆಗಳನ್ನು ಕೊಡಲು ಕೇಳಿದಳು. ಆದರೆ ಅವನು ಒಪ್ಪಲಿಲ್ಲ. ಬೇರೆ ದಾರಿಕಾಣದೆ ರಾಜಕುಮಾರಿ ತನ್ನ ತಂದೆಯ ಹತ್ತಿರ ಅಳುತ್ತ ಹೋಗಲೇಬೇಕಾಯಿತು. ತಾನು ದೇಶಗಳನ್ನು ಸುತ್ತಲು ಹೋಗುವೆನೆಂದು ರಾಜನ ಹತ್ತಿರ ಹೇಳಿದಳು. "ನಿನಗೆ ಕಾಡಿನ ಮಧ್ಯೆ ಒಂದು ಗುಡಿಸಲು ಕಟ್ಟಿಸುವೆ. ಅಲ್ಲಿ ನೀನು ಇಡೀ ಬದುಕನ್ನು ಸಾಗಿಸಬೇಕು. ಮತ್ತು ಯಾರು ಬಂದರೂ, ದುಡ್ಡು ತೆಗೆದುಕೊಳ್ಳದೆ ಅಡಿಗೆ ಮಾಡಿ

ಹಾಕಬೇಕು" ಎಂದು ರಾಜ ಹೇಳಿದನು.

ಕಾಡಿನ ಗುಡಿಸಲು ಸಿದ್ಧವಾದ ತಕ್ಷಣ ಅದರ ಬಾಗಿಲ ಮೇಲೆ "ಈ ದಿನ ಪುಕ್ಕಟೆ, ನಾಳೆ ದುಡ್ಡಿಗೆ" ಎಂದು ಕೆತ್ತಿಸಲಾಯಿತು. ಅಲ್ಲಿ ಅವಳು ಬಹಳ ದಿನಗಳನ್ನು ಕಳೆದಳು. ಒಬ್ಬ ಯುವತಿ ಕಾಡಿನ ಮಧ್ಯೆ ಇರುವ ಗುಡಿಸಲಲ್ಲಿ ವಾಸವಾಗಿರುವಳು, ಬಾಗಿಲ ಮೇಲೆ ಕೆತ್ತಿಸಿರುವಂತೆ ಪುಕ್ಕಟೆಯಾಗಿ ಅಡುಗೆಮಾಡಿ ಬಡಿಸುವಳು ಎನ್ನುವ ವಿಚಾರ ಎಲ್ಲಾ ಕಡೆಯೂ ಹರಡಿತು. ಎಲ್ಲರೂ ಆ ವಿಷಯವನ್ನು ಮಾತನಾಡಿಕೊಳ್ಳತೊಡಗಿದರು. ಹೀಗೆ, ಆ ವಿಷಯ ಬೇಟೆಗಾರನಿಗೂ ತಲುಪಿತು. ಅವನು ತನ್ನಷ್ಟಕ್ಕೆ "ಇದು ನನಗೆ ಒಳ್ಳೆಯ ಸುದ್ದಿ ಆಗಿದೆ. ನಾನು ಹೇಗೂ ಬಡವ, ನನ್ನ ಬಳಿ ದುಡ್ಡಿಲ್ಲ" ಎಂದು ಯೋಚಿಸಿದನು. ಆ ನಂತರ, ಅವನು ತನ್ನ ಗಾಳಿ-ಬಂದೂಕನ್ನು, ಚರ್ಮದ ಚೀಲವನ್ನು ತೆಗೆದುಕೊಂಡು ಗುಡಿಸಲ ಕಡೆಗೆ ಹೊರಟನು. ಅವನು ತನ್ನ ಚೀಲದಲ್ಲಿ ತಾನು ಮಾಡಿದ್ದ ಸಾಹಸದ ನೆನಪಿಗೆ ಇಟ್ಟುಕೊಂಡಿದ್ದ ವಸ್ತುಗಳನ್ನೆಲ್ಲಾ ಹಾಕಿಕೊಂಡನು. ಗುಡಿಸಲನ್ನು ಹುಡುಕಿಕೊಂಡು ಕಾಡಿಗೆ ಬಂದನು. ಅದರ ಮೇಲೆ ಬರೆದಿದ್ದ "ಈ ದಿನ ಪುಕ್ಕಟೆ, ನಾಳೆ ದುಡ್ಡಿಗೆ" ಎಂದು ಬರೆದಿದ್ದನ್ನು ಓದಿದನು.


ಅವನು ಮೂರು ರಾಕ್ಷಸರನ್ನು ಕೊಂದಿದ್ದ ಕತ್ತಿಯನ್ನು ನೇತುಹಾಕಿಕೊಂಡಿದ್ದನು. ಅವನು ಗುಡಿಸಲ ಒಳಗೆ ಹೋಗಿ, ತಿನ್ನಲು ಏನಾದರೂ ಬೇಕೆಂದು ಆಜ್ಞೆ ಮಾಡಿದನು. ರಾಜಕುಮಾರಿ, ಅವನು ಎಲ್ಲಿಂದ ಬಂದಿದ್ದು ಮತ್ತು ಎಲ್ಲಿಗೆ ಹೋಗುತ್ತಿರುವನೆಂದು ಕೇಳಿದಳು. "ನಾನು ಜಗತ್ತನ್ನು ಸುತ್ತುತ್ತಿದ್ದೇನೆ" ಎಂದು ಅವನು ಉತ್ತರಿಸಿದನು. ಅವನು ಕತ್ತಿಯನ್ನು ಎಲ್ಲಿ ಸಂಪಾದಿಸಿದನೆಂದು ಕೇಳಿದಳು. ಏಕೆಂದರೆ ಅದರ ಮೇಲೆ ಅವಳು ತನ್ನ ತಂದೆಯ ಹೆಸರನ್ನು ಓದಿದಳು. "ಹಾಗಾದರೆ, ನೀನು ಆ ರಾಜನ ಮಗಳೇನು?" ಎಂದು ಅವನು ಕೇಳಿದನು. ಅವಳು ಹೌದೆಂದು ತಲೆ ಅಲ್ಲಾಡಿಸಿದಳು. "ಈ ಕತ್ತಿಯಿಂದಲೆ ನಾನು ಮೂವರು ರಾಕ್ಷಸರನ್ನು ಕೊಂದೆನು" ಎಂದು ಹೇಳುತ್ತಾ, ತಾನು ಗುರುತಿಗಾಗಿ ಇಟ್ಟಿಕೊಂಡಿದ್ದ ಮೂರು ನಾಲಿಗೆಗಳು, ಅವಳ ಒಂದು ಚಪ್ಪಲಿ ಮತ್ತು ಕರವಸ್ತ್ರದ ಮೂಲೆಯ ತುದಿಭಾಗಗಳನ್ನು ತೋರಿಸಿದನು. ರಾಜಕುಮಾರಿ ಆ ವಸ್ತುಗಳನ್ನು ನೋಡಿ ತುಂಬಾ ಸಂತೋಷಪಟ್ಟಳು. ಅಲ್ಲದೆ ತಾನೇ ಅವಳನ್ನು ರಕ್ಷಿಸಿದವನು ಎಂದು ಆ ಬೇಟೆಗಾರ ಹೇಳಿದನು. ಆಗ ಅವರು ರಾಜನ ಹತ್ತಿರ ಹೋದರು. ರಾಜಕುಮಾರಿ ಅವನನ್ನು ತನ್ನ ಕೋಣೆಗೆ ಕರೆದುಕೊಂಡು ಹೋದಳು. ನಂತರ, ತನ್ನನ್ನು ರಾಕ್ಷಸರಿಂದ ಉಳಿಸಿದವನು ಆ ಗುರಿಕಾರ ಬೇಟೆಗಾರನೆಂಬ ವಿಷಯವನ್ನು ರಾಜನ ಎದುರಿಗೆ ಬಹಿರಂಗಪಡಿಸಿದಳು. ಮೊದಲು ರಾಜ ಅದನ್ನು ನಂಬಲಿಲ್ಲ. ಆದರೆ ಅವನು ಗುರುತಿಗೆ ಇಟ್ಟಿಕೊಂಡಿದ್ದ ವಸ್ತುಗಳನ್ನು ತೋರಿಸಿದಾಗ ಅವನ ಸಂಶಯ ದೂರವಾಯಿತು. ತನ್ನ ಸಂತೋಷವನ್ನು ಕೃತಜ್ಞತೆಯನ್ನು ತೋರಿಸುವುದಕ್ಕಾಗಿ ರಾಜ ತನ್ನ ಮಗಳನ್ನು ಬೇಟೆಗಾರನ ಹೆಂಡತಿಯನ್ನಾಗಿ ಮಾಡುವುದಾಗಿ ಪ್ರಮಾಣ ಮಾಡಿದನು. ಅದರಿಂದ ರಾಜಕುಮಾರಿ ತುಂಬಾ ಸಂತೋಷಪಟ್ಟಳು.

ಅಷ್ಟೆಲ್ಲ ಆದಮೇಲೆ, ರಾಜ ಒಂದು ದೊಡ್ಡ ಔತಣಕೂಟವನ್ನು ಏರ್ಪಡಿಸಿದನು. ಅದರಲ್ಲಿ ಬೇಟೆಗಾರ ವಿಶೇಷ ಅತಿಥಿಯಾಗಿ ಕಾಣಿಸಿದನು. ಅವರು ಮೇಜಿನ ಸುತ್ತ ಕುಳಿತರು. ದಳಪತಿಯು ರಾಜನ ಮಗಳ ಎಡಭಾಗದಲ್ಲಿ ಕುಳಿತುಕೊಂಡನು. ಬೇಟೆಗಾರ ಬಲಗಡೆಗೆ ಕುಳಿತುಕೊಂಡನು. ದಳಪತಿ ಅವನನ್ನು ವಿಶೇಷ ಅತಿಥಿಯಿರಬೇಕೆಂದು ತಿಳಿದುಕೊಂಡನು. ಅವರು ತಿನ್ನುವುದು ಮತ್ತು ಕುಡಿಯುವುದನ್ನು ಮುಗಿಸಿದ ಮೇಲೆ,

ರಾಜ, ದಳಪತಿಗೆ ಪ್ರಶ್ನೆ ಕೇಳುವುದಾಗಿ ಹೇಳಿದನು. ಅದಕ್ಕೆ ದಳಪತಿ ಉತ್ತರಿಸಬೇಕೆಂದು ಹೇಳಿದನು. "ಒಬ್ಬ ಮೂವರು ರಾಕ್ಷಸರನ್ನು ಕೊಂದು, ಅವರ ನಾಲಿಗೆಗಳು ಎಲ್ಲಿ ಎಂದು ಕೇಳಿದರೆ ಅವನು ಹೋಗಿ ರಾಕ್ಷಸರ ಬಾಯಲ್ಲಿ ನಾಲಿಗೆಗಳು ಇಲ್ಲದ್ದು ನೋಡಿಕೊಂಡು, ಅವರಿಗೆ ನಾಲಿಗೆಯೇ ಇರುವುದಿಲ್ಲವೆಂದು ಉತ್ತರಿಸಿದನು. ಹೀಗೆ ಸುಳ್ಳು ಹೇಳಿದವನಿಗೆ ಏನು ಮಾಡಬೇಕು" ಎಂದು ರಾಜ, ದಳಪತಿಯನ್ನು ಕೇಳಿದನು. ಅದಕ್ಕೆ "ಅವನನ್ನು ಕಡಿದು ತುಂಡು ತುಂಡು ಮಾಡಬೇಕು" ಎಂದು ಧೈರ್ಯವಾಗಿ ಉತ್ತರಿಸಿದನು.

"ನಿನ್ನ ಶಿಕ್ಷೆಯನ್ನು ನೀನೇ ಹೇಳಿಕೊಂಡಿರುವಿ" ಎಂದನು ರಾಜ. ನಂತರ ಸೇನಾಪತಿಯನ್ನು ಸೆರೆಮನೆಗೆ ತಳ್ಳಿ ನಾಲ್ಕು ತುಂಡುಗಳಾಗಿ ಕತ್ತರಿಸಲಾಯಿತು. ಬೇಟೆಗಾರ ರಾಜಕುಮಾರಿಯನ್ನು ಮದುವೆ ಆದನು. ತಮ್ಮ ಮದುವೆ ಆದಮೇಲೆ, ತನ್ನ ತಂದೆ ಮತ್ತು ತಾಯಿಯನ್ನು ತಮ್ಮ ಜೊತೆಯೇ ಬಂದು ಇರಲು ಆಹ್ವಾನಿಸಿದನು. ನಂತರ ರಾಜ ಮುದುಕನಾಗಿ ಸತ್ತಮೇಲೆ ಅನುಭವೀ ಬೇಟೆಗಾರನೇ ಸಿಂಹಾಸನವನ್ನೇರಿದನು.

೩೨. ಇಲಿ, ಹಕ್ಕಿ ಮತ್ತು ಕೊಟ್ಟೆ ಕಡಬು



ಒಂದಾನೊಂದು ಕಾಲದಲ್ಲಿ ಒಂದು ಇಲಿ, ಒಂದು ಹಕ್ಕಿ, ಒಂದು ಕೊಟ್ಟೆಕಡಬು, ಎಲ್ಲವೂ ಹೋಗಿ ಒಂದು ಮನೆ ಮಾಡಿದವು. ತಾವೆಲ್ಲರೂ ಒಟ್ಟಿಗೆ ಇದ್ದು ಬಹು ಬೇಗ ಐಶ್ವರ್ಯವಂತರಾಗ ಬೇಕೆಂದು, ಸಂಪತ್ತನ್ನು ಕೂಡಿ ಹಾಕಬೇಕೆಂದು ತಮ್ಮಲ್ಲೆ ಒಪ್ಪಂದ ಮಾಡಿಕೊಂಡವು. ಅವುಗಳು ತಮ್ಮಲ್ಲೆ ಮನೆ ಕೆಲಸವನ್ನು ಹಂಚಿಕೊಂಡವು. ಕಟ್ಟಿಗೆ ತರುವುದು ಹಕ್ಕಿಯ ಕೆಲಸವಾಗಿತ್ತು. ಇಲಿ, ನೀರನ್ನು ಸೇದುವುದು ಮತ್ತು ಒಲೆಗೆ ಬೆಂಕಿ ಹಚ್ಚುವ ಕೆಲಸವನ್ನು ಮಾಡಬೇಕಾಗಿತ್ತು. ಅಡಿಗೆಮಾಡುವುದು ಕೊಟ್ಟೆ ಕಡಬಿನ ಕೆಲಸವಾಗಿತ್ತು.

ಯಾರು ಬೇಗನೆ ಏಳಿಗೆ ಹೊಂದುವರೋ, ಅವರು ಯಾವಾಗಲೂ ಹೊಸದರ ಬೆನ್ನು ಹಿಡಿಯುತ್ತಾರೆ. ಹಕ್ಕಿ ತಾನು ಮನೆಗೆ ಹಿಂದಿರುಗುವ ದಾರಿಯಲ್ಲಿ ಇನ್ನೊಂದು ಹಕ್ಕಿಯನ್ನು ನೋಡಿತು. ತನ್ನ ಜೀವನದ ಬಗ್ಗೆ ಹೆಮ್ಮೆಯಿಂದ ಹೇಳಿಕೊಂಡಿತು. ಅದನ್ನು ಕೇಳಿಸಿಕೊಂಡು, ಆ ಪಕ್ಷಿ ಬೈದು ಬುದ್ಧಿವಾದ ಹೇಳಿತು. ನೀನು ತುಂಬಾ ಶ್ರಮಪಡುತ್ತಿರುವೆ. ಆ ಇಬ್ಬರು ಮನೆಯಲ್ಲಿ ಆರಾಮವಾಗಿ ಇರುವವರು ಎಂದು ಹೇಳಿತು. ಇಲಿ, ಬೆಂಕಿಯನ್ನು ಮಾಡಿ, ನೀರನ್ನು ತಂದು ಹಾಕಿದ ಮೇಲೆ, ಊಟಕ್ಕೆ ಸಿದ್ಧವಾಗುವವರೆಗೂ ತನ್ನ ಕೋಣೆಗೆ ಹೋಗಿ ವಿಶ್ರಾಂತಿ ಪಡೆಯುತ್ತದೆ. ಕೊಟ್ಟೆ ಕಡಬು ಒಲೆಯ ಹತ್ತಿರವಿದ್ದು ಆಹಾರವನ್ನು ಬೇಯಿಸುವುದಷ್ಟೆ ಕೆಲಸ. ಊಟದ ಸಮಯ ಹತ್ತಿರ ಬಂದಾಗ, ಊಟದ ಪದಾರ್ಥಕ್ಕೆ ಕಾಯಿರಸ ಮತ್ತು ತರಕಾರಿಗಳನ್ನು

ಸೇರಿಸುವುದು, ನಂತರ ಬೆಣ್ಣೆ ಮತ್ತು ಉಪ್ಪನ್ನು ಸವರುವುದು. ಹಕ್ಕಿ ಬಂದು ತನ್ನ ಕಟ್ಟಿಗೆ ಹೊರೆಯನ್ನು ಇಳಿಸಿದಾಕ್ಷಣ, ಅವು ಟೇಬಲ್ಲಿನ ಸುತ್ತಲು ಊಟಕ್ಕೆ ಕುಳಿತುಕೊಳುತ್ತಿದ್ದವು. ತಮ್ಮ ಊಟವಾದ ಮೇಲೆ, ಮಾರನೇ ದಿನದವರೆಗೆ ವಿಶ್ರಾಂತಿ ಪಡೆಯುತ್ತಿದ್ದವು. ಹೀಗೆ ಅವುಗಳ ಜೀವನ ಸುಖಮಯವಾಗಿತ್ತು. ಮಾರನೇದಿನ ಹಕ್ಕಿ ಕಟ್ಟಿಗೆ ತರಲು ಹೋಗಲಿಲ್ಲ. ತಾನು ಬಹಳ ದಿನದಿಂದ ಗುಲಾಮಳಾಗಿದ್ದೇನೆ ಎಂದು ಹೇಳುತ್ತಾ, ತಮ್ಮ ಕೆಲಸವನ್ನು ಬದಲಿಸಿಕೊಳ್ಳಬೇಕೆಂದು ತಿಳಿಸಿತು. ಇಲಿ ಮತ್ತು ಕೊಟ್ಟೆ ಕಡಬು, ಹಕ್ಕಿಯ ಮಾತನ್ನು ಬಹಳ ಪ್ರೀತಿಯಿಂದ ನಿರಾಕರಿಸಿದವು. ಆದರೆ ಆ ಹಕ್ಕಿ ಅದನ್ನು ಒಪ್ಪಲಿಲ್ಲ. ಒಮ್ಮೆ ಪ್ರಯತ್ನಿಸಬೇಕೆಂದು ಹೇಳಿತು. ಯಾವ ಕೆಲಸವನ್ನು ಯಾರು ಮಾಡಬೇಕು ಎಂದು ತಿಳಿಯಲು, ಒಂದು ನಾಣ್ಯವನ್ನು ಮೇಲಕ್ಕೆ ಚಿಮ್ಮಿದವು. ಅದರಂತೆ ಹಕ್ಕಿಯ ಕೆಲಸ, ಕೊಟ್ಟೆ ಕಡಬಿಗೆ ಬಂದಿತು. ಇಲಿ ಅಡಿಗೆ ಮಾಡಬೇಕಾಯಿತು. ಹಕ್ಕಿ ನೀರು ತರಬೇಕಾಯಿತು.

ಮುಂದೆ ಏನಾಯಿತು ಎಂದರೆ, ಕೊಟ್ಟೆ ಕಡಬು ಕಟ್ಟಿಗೆ ತರಲು ಕಾಡಿಗೆ ಹೋಯಿತು. ಹಕ್ಕಿ ಬೆಂಕಿ ಮಾಡಿತು. ಅದರ ಮೇಲೆ ಇಲಿ ಗಡಿಗೆ ಇಟ್ಟಿತು. ಕೊಟ್ಟೆ ಕಡಬು ಬರುವವರೆಗೂ ಒಂಟಿಯಾಗಿ ಅಲ್ಲೆ ಕಾಯುತ್ತಿತ್ತು. ಹೀಗೆ, ಬಹಳ ಹೊತ್ತು ಕಾದವು. ಕೊಟ್ಟೆ ಕಡಬಿಗೆ ಏನಾದರೂ ಆಗಿರಬಹುದೆಂದು ಸಂಶಯಪಟ್ಟವು. ಹಕ್ಕಿ, ಕೊಟ್ಟೆ ಕಡಬನ್ನು ಹುಡುಕಿಕೊಂಡು ಹಾರಿಹೋಯಿತು. ತಮ್ಮ ಮನೆಯ ಹತ್ತಿರವೆ ಒಂದು ನಾಯಿಯನ್ನು ನೋಡಿತು. ಅದು ಕೊಟ್ಟೆಕಡಬನ್ನು ಹಿಡಿದು ತಿಂದು ಹಾಕಿತ್ತು. ನೀತಿ ನಿಯಮಗಳಿಲ್ಲದ ಕಳ್ಳ ಎಂದು ಹಕ್ಕಿ ನಾಯಿಯನ್ನು ಬೈದಿತು. ಆದರೆ ಹಕ್ಕಿಯ ಬೈಗುಳದಿಂದ ನಾಯಿ ಮೇಲೆ ಯಾವ ಪರಿಣಾಮವೂ ಆಗಲಿಲ್ಲ. ಕೊಟ್ಟೆ ಕಡಬಿನ ಮೇಲೆ ಅನೇಕ ಅಪಾದನೆಯ ಕೋಟ ಕಾಗದಗಳು ಸಿಕ್ಕಿವೆ. ಅದಕ್ಕಾಗಿ ಅದರ ಜೀವವನ್ನು ತೆಗೆಯಬೇಕಾಯಿತು ಎಂದು ನಾಯಿ ಹಕ್ಕಿಗೆ ಹೇಳಿತು.

ಕೊಟ್ಟೆ ಕಡಬಿನ ಸಾವಿಗೆ ದುಃಖಿಸುತ್ತಾ ಹಕ್ಕಿ ಕಟ್ಟಿಗೆ ಹೊರೆಯನ್ನು ಹೊತ್ತುಕೊಂಡು ಮನೆಗೆ ಹಿಂದಿರುಗಿತು. ತಾನು ನೋಡಿದ್ದು ಮತ್ತು ಕೇಳಿದ್ದನ್ನು ವಿವರಿಸಿತು. ಹಕ್ಕಿ ಮತ್ತು ಇಲಿ ತುಂಬ ದುಃಖಿಸಿದವು. ಇನ್ನು ಮುಂದೆ ತಾವಿಬ್ಬರೂ ಒಬ್ಬರಿಗೊಬ್ಬರು ಅತ್ಯಂತ ಪ್ರೀತಿಯಿಂದ ಇರಬೇಕೆಂದು ಪರಸ್ಪರ ಒಪ್ಪಿಕೊಂಡವು. ಹಕ್ಕಿ ಊಟದ ಟೇಬಲ್ಲನ್ನು ಸಿದ್ಧಮಾಡಿತು. ಇಲಿ ಊಟವನ್ನು ತಯಾರಿಸಿತು. ಗಡಿಗೆಯಲ್ಲಿರುವ ತರಕಾರಿಯನ್ನು ತಿರುವಲು ಇಲಿ ಪ್ರಯತ್ನಿಸಿತು. ಕೊಟ್ಟೆ ಕಡಬು ಮಾಡಿದ ಹಾಗೆ ಉಪ್ಪು ಮತ್ತು ಬೆಣ್ಣೆಯನ್ನು ಹಚ್ಚಿ ಅಡುಗೆಗೆ ರುಚಿ ಬೆರೆಸಲು ಪ್ರಯತ್ನಿಸಿತು. ಹಾಗೆ ಮಾಡಲು ಅದು ಬಗ್ಗಿದಾಗ ಅದರ ಚರ್ಮ ಮತ್ತು ಕೂದಲು ಸುಟ್ಟುಹೋಯಿತು. ಹೀಗೆ ಇಲಿ ತನ್ನ ಪ್ರಾಣವನ್ನು ಕಳೆದುಕೊಂಡಿತು.

ಹಕ್ಕಿ ಬಂದು, ಊಟಕ್ಕೆ ಕುಳಿತು, ಊಟಕ್ಕೆ ಕುಳಿತಾಗ ಅಲ್ಲಿ ಯಾರೂ ಇರಲಿಲ್ಲ. ತಾನು ತಂದಿದ್ದ ಕಟ್ಟಿಗೆ ಹೊರೆಯನ್ನು ಕೆಳಗೆ ಎಸೆದು, ಮೇಲೆ, ಅಡುಗೆ ಭಟ್ಟ ಇಲಿಯನ್ನು ಹುಡುಕಿತು. ಯಾವ ಅಡುಗೆ ಭಟ್ಟನೂ ಸಿಗಲಿಲ್ಲ. ಹಕ್ಕಿಯ ಅಜಾಗರೂಕತೆಯಿಂದ ಒಲೆಯ ಬೆಂಕಿ ಅದು ತಂದು ಹಾಕಿದ್ದ ಕಟ್ಟಿಗೆ ಹೊರೆಯವರೆಗೂ ಹಬ್ಬಿತು. ಬೆಂಕಿ ಜ್ವಾಲೆ ಎತ್ತರಕ್ಕೆ ಹಬ್ಬಿತು. ಹಕ್ಕಿ, ಬೆಂಕಿಯನ್ನು ಆರಿಸಲು ನೀರು ತರಲು ಕೊಡವನ್ನು ತೆಗೆದುಕೊಂಡು ನದಿಗೆ ಹೋಯಿತು. ಆಗ ಕೊಡ ನೀರೊಳಗೆ ಬಿದ್ದಿತು. ಅದು ಕೊಡವನ್ನು ಮೇಲಕ್ಕೆ ಎತ್ತಲು

ಪ್ರಯತ್ನಿಸಿದಾಗ ಅದೂ ಕೂಡ ಕೊಡದ ಜೊತೆ ನೀರಿನಲ್ಲಿ ಮುಳುಗಿಹೋಯಿತು. ಹಕ್ಕಿಯನ್ನು ಹೊರಗೆ ತೆಗೆಯಲು ಆ ಸಮಯಕ್ಕೆ ಯಾರೂ ಬರಲೇ ಇಲ್ಲ. ಹೀಗೆ ಕೊಟ್ಟೆ ಕಡಬು, ಇಲಿ ಮತ್ತು ಹಕ್ಕಿಗಳು ಸತ್ತುಹೋದವು.

೨೩. ಬಲಶಾಲಿ ಹ್ಯಾನ್ಸ್



ಒಂದಾನೊಂದು ಕಾಲದಲ್ಲಿ ಗಂಡ ಹೆಂಡತಿ ಇದ್ದರು. ಅವರಿಗೆ ಒಬ್ಬನೇ ಮಗ ಇದ್ದನು. ಅವರು ದೂರದ ನಿರ್ಜನ ಕಣಿವೆಯಲ್ಲಿ ವಾಸವಾಗಿದ್ದರು. ಒಂದು ಸಾರಿ ಏನಾಯಿತು ಎಂದರೆ, ಆ ಹೆಂಗಸು ಸೌದೆ ತರಲು ಕಾಡಿಗೆ ಹೋದಳು. ತನ್ನ ಜೊತೆ ತನ್ನ ಪುಟ್ಟ ಮಗನನ್ನು ಕರೆದುಕೊಂಡು ಹೋದಳು. ಆ ಮಗನ ಹೆಸರು ಹ್ಯಾನ್ಸ್. ಅವನಿಗಿನ್ನೂ ಎರಡೇ ವರ್ಷ ವಯಸ್ಸಾಗಿತ್ತು ಅಷ್ಟೆ. ಅವರು ಕಾಡಿಗೆ ಹೋಗಿದ್ದು ವಸಂತಕಾಲದ ದಿನವಾಗಿತ್ತು. ಆ ಮಗುವಿಗೆ ವಿವಿಧ ಹೂವುಗಳನ್ನು ನೋಡಿ ತುಂಬ ಸಂತೋಷವಾಯಿತು. ಹ್ಯಾನ್ಸ್, ಅಲ್ಲಿ ಅರಳಿದ ಹೂವಿನಿಂದ ಹೂವಿಗೆ ಓಡಿ ಚಪ್ಪಾಳೆ ತಟ್ಟುತ್ತಿದ್ದನು. ಹಾಗೆ ಅವರು ಕಾಡಿನಲ್ಲಿ ಬಹುದೂರ ಹೋದರು. ಆಗ ಇದ್ದಕ್ಕಿದ್ದಂತೆ ಪೊದೆಗಳಿಂದ ಇಬ್ಬರು ಕಳ್ಳರು ಹಾರಿಕೊಂಡು ಬಂದರು. ಆ ಮಗು ಮತ್ತು ತಾಯಿಯನ್ನು ಎಳೆದುಕೊಂಡು ದಟ್ಟವಾದ ಕಪ್ಪು ಮರದ ಕಾಡಿನೊಳಗೆ ಹೋದರು. ಆ ಕಾಡನ್ನು ಭೇದಿಸಿಕೊಂಡು ಯಾರೂ ಬರುತ್ತಿರಲಿಲ್ಲ. ಪಾಪ, ಆ ಹೆಂಗಸು ತನ್ನನ್ನು ಮತ್ತು ತನ್ನ ಮಗುವನ್ನು ಮನೆಗೆ ಹೋಗಲು ಬಿಡಿ ಎಂದು ಆ ಕಳ್ಳರನ್ನು ಬೇಡಿಕೊಂಡಳು. ಆದರೆ ಅವರ ಹೃದಯಗಳು ಕಲ್ಲು ಬಂಡೆಗಳಂತೆ. ಅವಳ ಅಳು ಬೇಡಿಕೆಗಳಿಂದ ಕರಗಲೇ ಇಲ್ಲ. ಅವಳನ್ನು ಇನ್ನೂ ಮುಂದೆ ಎಳೆದುಕೊಂಡು ಹೋದರು. ಅವರು ಮುಳ್ಳಿನ ಪೊದೆಗಳಲ್ಲಿ ಎರಡು ಮೈಲಿ ನಡೆದರು. ಕೊನೆಗೆ ಒಂದು ಕಲ್ಲಿನ ಬಾಗಿಲಿರುವ ಗುಹೆಯ ಹತ್ತಿರ ಬಂದರು. ಕಳ್ಳರು ಅದನ್ನು ಬಡಿದ ತಕ್ಷಣ ಅದು ತನ್ನಷ್ಟಕ್ಕೆ ತೆಗೆದುಕೊಂಡಿತು. ಅದೊಂದು ಕಗ್ಗತ್ತಲು

ಗುಹೆಯಾಗಿತ್ತು. ಅವರು ಅದರೊಳಗೆ ಹೋದರು. ಕೊನೆಯಲ್ಲಿ ಒಲೆಯಲ್ಲಿ ಉರಿಯುತ್ತಿರುವ ಬೆಂಕಿಯ ಬೆಳಕಿಗೆ ಬಂದರು. ಗೋಡೆಗೆ ಅನೇಕ ಆಯುಧಗಳನ್ನು ನೇತುಹಾಕಿದ್ದರು. ಅವು ಬೆಳಕಿನಲ್ಲಿ ಹೊಳೆದವು. ಆ ಗುಹೆಯ ಮಧ್ಯೆ ಒಂದು ಕಪ್ಪು ಮೇಜಿತ್ತು. ಅದರ ಸುತ್ತ ನಾಲ್ಕು ಜನ ಕಳ್ಳರು ಆಟ ಆಡಲು ಕುಳಿತರು. ಅವರಲ್ಲಿ ಒಬ್ಬ ಕಳ್ಳರ ಮುಖಂಡನಾಗಿದ್ದನು. ಆತ ಆ ಹೆಂಗಸನ್ನು ನೋಡಿದ ತಕ್ಷಣ ಅವಳ ಹತ್ತಿರ ಬಂದು, ಅವಳು ಅಳುವುದು, ಸಿಟ್ಟು, ಬೇಸರಮಾಡಿಕೊಳ್ಳುವುದನ್ನು ಬಿಟ್ಟರೆ ಅವಳಿಗೆ ತಾವು ಯಾವ ಅಪಾಯವನ್ನು ಮಾಡುವುದಿಲ್ಲವೆಂದು ಹೇಳಿದನು. ಆದರೆ ತಮಗಾಗಿ ಮನೆಗೆಲಸವನ್ನೆಲ್ಲ ಮಾಡಬೇಕೆಂದು ಹೇಳಿದನು. ತಾನು ಹೇಳಿದಹಾಗೆ ಕೇಳಿದರೆ ಚೆನ್ನಾಗಿ ನೋಡಿಕೊಳ್ಳುವುದಾಗಿ ಹೇಳಿದನು. ಅಷ್ಟು ಹೇಳಿ ಅವಳಿಗೆ ಊಟ ಕೊಟ್ಟನು. ನಂತರ ಅವಳ ಮಗನ ಜೊತೆ ಮಲಗಲು ಒಂದು ಹಾಸಿಗೆಯನ್ನು ತೋರಿಸಿದನು.

ಆ ಹೆಂಗಸು ಆ ಕಳ್ಳರ ಜೊತೆ ಅನೇಕ ವರ್ಷಗಳು ಇದ್ದಳು. ಆ ಸಮಯದಲ್ಲಿ ಹ್ಯಾನ್ಸ್ ಬಲಶಾಲಿಯಾಗಿ ಬೆಳೆದನು. ಅವನ ತಾಯಿ ಒಂದು ಪುರಾತನ ಸಾಹಸದ ಪುಸ್ತಕದಿಂದ ಅವನಿಗೆ ಕಥೆಗಳನ್ನು ಹೇಳುತ್ತಿದ್ದಳು. ಓದುವುದನ್ನು ಕಲಿಸಿದಳು. ಆ ಪುಸ್ತಕ ಗುಹೆಯಲ್ಲೇ ಇತ್ತು. ಹ್ಯಾನ್ಸನಿಗೆ ಒಂಬತ್ತು ವರ್ಷಗಳಾದವು. ಅವನು ಒಂದು ಮರದ ಕೊಂಬೆಯನ್ನು ಕಡಿದು ತನ್ನ ದೊಣ್ಣೆಯನ್ನಾಗಿ ಮಾಡಿಕೊಂಡನು. ಅದನ್ನು ಹಾಸಿಗೆಯ ಹಿಂದೆ ಬಚ್ಚಿಟ್ಟನು. ನಂತರ ತನ್ನ ತಾಯಿಯ ಬಳಿಗೆ ಹೋಗಿ "ಅಮ್ಮ ದಯವಿಟ್ಟು ನನ್ನ ತಂದೆ ಯಾರೆಂದು ಹೇಳು. ಅದನ್ನು ನಾನು ತಿಳಿದುಕೊಳ್ಳಲೇಬೇಕು" ಎಂದು ಹೇಳಿದನು. ಅದಕ್ಕೆ ಅವನ ತಾಯಿ ಸುಮ್ಮನಿದ್ದಳು. ಅವನ ಪ್ರಶ್ನೆಗೆ ಉತ್ತರವನ್ನು ಹೇಳಿದರೆ ಮಗನಿಗೆ ತಂದೆಯ ಹಂಬಲ ಹೆಚ್ಚುವುದು ಎಂದು ತಿಳಿದಳು. ಅಲ್ಲದೆ ಆ ಕೆಟ್ಟ ಕಳ್ಳರು ಹ್ಯಾನ್ಸನನ್ನು ಅಲ್ಲಿಂದ ತಪ್ಪಿಸಿಕೊಂಡು ಹೋಗಲು ಬಿಡುವರೋ ಅಥವಾ ಇಲ್ಲವೋ ಎಂಬ ಸಂಶಯವಿತ್ತು. ಹ್ಯಾನ್ಸ್ ತನ್ನ ತಂದೆಯನ್ನು ನೋಡದೆ ಇದ್ದರೆ ಮುಂದೆ ಹೇಗಾದೀತು ಎಂಬ ಯೋಚನೆಯಿಂದ ಅವಳ ಹೃದಯ ಮರುಗಿತು. ಆ ರಾತ್ರಿ ಕಳ್ಳರು ತಮ್ಮ ದಿನದ ಕೆಲಸವನ್ನು ಮುಗಿಸಿಕೊಂಡು ಬಂದರು. ಆಗ ಹ್ಯಾನ್ಸ್ ದೊಣ್ಣೆ ಹಿಡಿದುಕೊಂಡು ಕಳ್ಳರ ಯಜಮಾನನ ಎದುರು ಹೋಗಿ ನಿಂತನು. "ನನ್ನ ತಂದೆ ಯಾರು ಎಂದು ನಾನು ತಿಳಿದುಕೊಳ್ಳಲೇಬೇಕು. ನೀವು ಹೇಳದೇಹೋದರೆ ನಾನು ಒಬ್ಬೊಬ್ಬರನ್ನೂ ಹೊಡೆದು ಬೀಳಿಸುವೆ" ಎಂದು ಹೇಳಿದನು. ಅವನ ಮಾತಿಗೆ ಕಳ್ಳರ ಮುಖಂಡ ನಗುತ್ತಾ ಅವನ ಕೆನ್ನೆಗೆ ಬಾರಿಸಿದನು. ಅದರಿಂದ ಅವನು ಮೇಜಿನ ಕೆಳಗೆ ಉರುಳಿಕೊಂಡು ಬಿದ್ದನು. ಆದರೂ ತಕ್ಷಣವೇ ಮೇಲೆದ್ದನು. ಬಾಯಿಮುಚ್ಚಿಕೊಂಡು ಸುಮ್ಮನಾದನು. "ನಾನು ಇನ್ನೂ ಒಂದು ವರ್ಷ ಕಾದು ಮತ್ತೆ ಪ್ರಯತ್ನಿಸಿದರೆ ಇವರನ್ನು ಚೆನ್ನಾಗಿ ಎದುರಿಸಬಹುದು" ಎಂದುಕೊಂಡನು.

ಮತ್ತೊಂದು ವರ್ಷ ಕಳೆಯಿತು. ಅವನು ತನ್ನ ಕೋಲನ್ನು ಹರಿತಗೊಳಿಸಿಕೊಂಡನು. ತನ್ನ ಆಯುಧವನ್ನು ಚೆನ್ನಾಗಿ ಮಾಡಿಕೊಂಡೆ ಎಂದು ಹೆಮ್ಮೆಪಟ್ಟುಕೊಂಡನು. ರಾತ್ರಿ ಕಳ್ಳರು ಹಿಂದಿರುಗಿದರು. ಮದ್ಯವನ್ನು ಕುಡಿಯತೊಡಗಿದರು. ಹೀಗೆ ಅನೇಕ ಶೀಷೆ ಮದ್ಯವನ್ನು ಕುಡಿದು ಮೇಜಿನ ಮೇಲೆಯೇ ತಲೆ ಇಟ್ಟುಕೊಂಡು ಮಲಗಿದರು. ಮತ್ತೆ ಹ್ಯಾನ್ಸ್ ತನ್ನ ಕೋಲಿನೊಂದಿಗೆ ಕಳ್ಳರ ಮುಖಂಡನ ಮುಂದೆ ನಿಂತು "ತನ್ನ ತಂದೆ ಯಾರು" ಎಂದು ಕೇಳಿದನು. ಅವನು ಮೊದಲಿನಂತೆಯೇ ಹ್ಯಾನ್ಸನ ಕೆನ್ನೆಗೆ ಬಾರಿಸಿದನು. ಆದರೆ ಹ್ಯಾನ್ಸ್ ಬೇಗನೆ ಸುಧಾರಿಸಿಕೊಂಡು ಎಲ್ಲರಿಗೂ ಹೊಡೆದನು. ಅವನ ತಾಯಿ ಅಲ್ಲೇ ಮೂಲೆಯಲ್ಲಿ

ನಿಂತಿದ್ದಳು. ಮಗನ ಧೈರ್ಯ ಮತ್ತು ಸಾಹಸವನ್ನು ನೋಡಿ ಬೆಚ್ಚಿದಳು. ಹ್ಯಾನ್ಸ್ ತನ್ನ ತಾಯಿಯ ಹತ್ತಿರಹೋಗಿ "ನನ್ನ ತಂದೆ ಯಾರು ಎಂದು ಈಗಲಾದರೂ ಹೇಳು" ಎಂದು ಒತ್ತಾಯಿಸಿದನು. ಆಕೆ "ನಾವೇ ಹೋಗಿ ನಿನ್ನ ತಂದೆಯನ್ನು ಹುಡುಕೋಣ ಮಗು" ಎಂದು ಉತ್ತರಿಸಿದಳು.

ಹಾಗೆ ಹೇಳಿ, ಅವಳು ಕಳ್ಳರ ಯಜಮಾನನಿಂದ ಹೊರಬಾಗಿಲಿನ ಬೀಗದ ಕೈಯನ್ನು ಕದ್ದಳು. ಹ್ಯಾನ್ಸ್ ಅಲ್ಲೇ ಇದ್ದ ಒಂದು ಗೋಣಿಚೀಲವನ್ನು ತೆಗೆದುಕೊಂಡು, ಅದರ ತುಂಬ ಬಂಗಾರ, ಬೆಳ್ಳಿ ಮತ್ತು ಇನ್ನಿತರ ಬೆಲೆಬಾಳುವ ವಸ್ತುಗಳನ್ನು ತುಂಬಿಕೊಂಡನು. ಅದನ್ನು ಬೆನ್ನಮೇಲೆ ಹಾಕಿಕೊಂಡು ತಾಯಿ ಮತ್ತು ಮಗ ಗುಹೆಯಿಂದ ಹೊರಗೆ ಬಂದರು. ಹ್ಯಾನ್ಸ್ ಮೊದಲ ಬಾರಿಗೆ ಕತ್ತಲಿನಿಂದ ಬೆಳಕಿಗೆ ಬಂದನು. ಅವನಿಗಾದ ಆಶ್ಚರ್ಯವನ್ನು ಯಾರಿಗೂ ಊಹಿಸಲು ಆಗಲಾರದು. ಹಸಿರು ಮರಗಳು, ಹೂವುಗಳು, ಹಕ್ಕಿಗಳು ಮತ್ತು ಸೂರ್ಯ, ಪ್ರಕಾಶಮಾನವಾದ ಬೆಳಕು, ಎಲ್ಲವನ್ನೂ ನೋಡುತ್ತಾ ಕಂಬದಂತೆ ನಿಂತುಬಿಟ್ಟನು. ಅವನ ತಾಯಿ ತಮ್ಮ ಮನೆಯ ದಾರಿ ಹುಡುಕುವವರೆಗೆ ಅವನು ಹಾಗೆ ಸುತ್ತಲೂ ನೋಡುತ್ತಾ ಇದ್ದನು. ಕೊನೆಗೆ ಅವರು ಎರಡು ಗಂಟೆಗಳ ಕಾಲ ನಡೆದಮೇಲೆ ಆ ಮೌನ ಕಣಿವೆಯನ್ನು ದಾಟಿದರು.

ಅವರ ಮನೆ ಬಾಗಿಲಲ್ಲಿ ಹ್ಯಾನ್ಸನ ತಂದೆ ಕುಳಿತಿದ್ದನು. ತನ್ನ ಹೆಂಡತಿ ಮತ್ತು ಮಗನನ್ನು ಗುರುತಿಸಿ ತುಂಬ ಸಂತೋಷದಿಂದ ಕಣ್ಣಲ್ಲಿ ನೀರು ತುಂಬಿಕೊಂಡವು. ಅವರು ಸತ್ತುಹೋಗಿರಬೇಕೆಂದು ಅವನು ತಿಳಿದಿದ್ದನು. ಹ್ಯಾನ್ಸ್‌ಗೆ ಬರೀ ಹನ್ನೆರಡು ವರ್ಷವಾಗಿದ್ದರೂ ಅವನು ತನ್ನ ತಂದೆಗಿಂತ ಎತ್ತರವಾಗಿದ್ದನು. ಅವರೆಲ್ಲ ಮನೆಯ ಒಳಗೆ ಹೋದರು. ಚಿಮಣಿಗೂಡಿನ ಮೂಲೆಯಲ್ಲಿ ಹ್ಯಾನ್ಸ್ ತಾನು ಹೊತ್ತುಕೊಂಡು ಬಂದಿದ್ದ ಚೀಲವನ್ನು ಇಟ್ಟನು. ಅವನು ಇಟ್ಟ ರಭಸಕ್ಕೆ ಮನೆ ಬಿರುಕು ಬಿಟ್ಟಿತು. ಚಿಮಣಿಗೂಡು ಕುಸಿಯಿತು. ನಂತರ ನೆಲ ಬಿರುಕುಬಿಟ್ಟಿತು. ಅವನು ಇಟ್ಟಿದ್ದ ಚೀಲ ನೆಲಮಾಳಿಗೆ ಸೇರಿತು. "ದೇವರೇ ನಮ್ಮನ್ನು ಕಾಪಾಡಬೇಕು" ಎಂದು ಹ್ಯಾನ್ಸನ ತಂದೆ ಕೂಗಿದನು. "ಇದೇನಿದು? ನಮ್ಮ ಮನೆಯನ್ನು ಯಾಕೆ ಕೆಡವಿದೆ?" ಎಂದು ಕೇಳಿದನು.

"ದಯವಿಟ್ಟು ಅದಕ್ಕಾಗಿ ಚಿಂತಿಸಬೇಡಪ್ಪ, ಆ ಗೋಣಿಚೀಲದಲ್ಲಿ ನಾವು ಒಂದು ಮನೆಯನ್ನು ಕಟ್ಟಿ, ಇನ್ನು ಬೇಕಾದಷ್ಟು ಉಳಿಯುತ್ತದೆ" ಎಂದು ಹ್ಯಾನ್ಸ್ ತನ್ನ ತಂದೆಗೆ ಸಮಾಧಾನ ಮಾಡಿದನು. ಕೂಡಲೇ ತಂದೆ ಮತ್ತು ಮಗ ಸೇರಿ ಒಂದು ಹೊಸಮನೆಯನ್ನು ಕಟ್ಟತೊಡಗಿದರು. ಹಸುಗಳನ್ನು ಮತ್ತು ಭೂಮಿಯನ್ನು ಕೊಳ್ಳಲು ಮಾರುಕಟ್ಟೆಗೆ ಹೋದರು. ಹ್ಯಾನ್ಸ್ ತಮ್ಮ ಭೂಮಿಯನ್ನು ಹಸನು ಮಾಡಿದನು. ಅವನು ನೇಗಿಲ ಹಿಂದೆ ಹೋಗಿ ನೆಲದಲ್ಲಿ ಅದನ್ನು ಎಳೆದುಕೊಂಡು ಹೊರಟರೆ ಎತ್ತುಗಳಿಗೆ ಎಳೆಯುವ ಭಾರವೇ ಇರುತ್ತಿರಲಿಲ್ಲ. ವಸಂತಕಾಲ ಬಂದಾಗ "ಅಪ್ಪ, ನನಗಾಗಿ ಸ್ವಲ್ಪ ಹಣವನ್ನು ಕೊಡಿ. ಅದರಿಂದ ನಾನು ಒಂದು ಅತ್ಯಂತ ಭಾರವಾದ ಊರುಗೋಲನ್ನು ಮಾಡುತ್ತೇನೆ. ಅದನ್ನು ತೆಗೆದುಕೊಂಡು ನಾನು ಅಪರಿಚಿತ ದೇಶಗಳನ್ನು ಸುತ್ತಿಕೊಂಡು ಬರುತ್ತೇನೆ" ಎಂದು ಹ್ಯಾನ್ಸ್ ಹೇಳಿದನು. ಆ ಕೋಲು ತಯಾರಾದ ತಕ್ಷಣ, ಹ್ಯಾನ್ಸ್ ತನ್ನ ಪ್ರಯಾಣ ಪ್ರಾರಂಭಿಸಿದನು. ಒಂದು ದಟ್ಟವಾದ ಕಾಡು ಬರುವವರೆಗೂ ಅವನು ನಡೆದುಕೊಂಡು ಹೋದನು. ಅಲ್ಲಿ ಅವನಿಗೆ ಬಿರುಕುಬಿಡುತ್ತಿರುವ ಮತ್ತು ಒಡೆದುಹೋಗುತ್ತಿರುವ ಶಬ್ದಗಳು ಕೇಳಿಸಿದವು. ಅವನು ಸುತ್ತಲೂ ನೋಡಿದಾಗ, ಒಂದು ಫರ್ ಮರಕ್ಕೆ ಮೇಲಿನಿಂದ, ಕೆಳಗಿನವರೆಗೂ

ಬಳಿತೊಡಿಸಿದ ಹಗ್ಗದ ಹಾಗೆ ಕಾಣಿಸುತ್ತಿತ್ತು. ಅವನು ತಲೆ ಎತ್ತಿ ನೋಡಿದಾಗ, ಒಬ್ಬ ಬಲವಾದ ಮನುಷ್ಯ ಮರವನ್ನು ಹಿಡಿದುಕೊಂಡಿರುವುದನ್ನು ನೋಡಿದನು. ಅದನ್ನು ಬಳ್ಳಿಯ ಹಾಗೆ ತಿರುಗಿಸುತ್ತಿರುವುದು ಕಾಣಿಸಿತು. "ಅಯ್ಯಾ ಅಲ್ಲೇನು ಮಾಡುತ್ತಿರುವೆ?" ಎಂದು ಹ್ಯಾನ್ಸ್ ಆ ಮನುಷ್ಯನನ್ನು ಕೇಳಿದನು. "ನನಗೆ ಹಗ್ಗ ಬೇಕಾಗಿತ್ತು, ಅದಕ್ಕಾಗಿ ಫರ್ ಮರದ ಕೊಂಬೆಗಳನ್ನು ಒಂದರೊಳಗೊಂದು ಸೇರಿಸಿ ಹಗ್ಗ ಹೆಣೆಯುತ್ತಿದ್ದೇನೆ" ಎಂದು ಆತ ಉತ್ತರಿಸಿದನು. "ಅವನಿಗೆ ತುಂಬಾ ಶಕ್ತಿ ಇದೆ. ಅವನಿಂದ ನನಗೆ ಏನಾದರೂ ಉಪಯೋಗವಾದೀತು" ಎಂದು ಯೋಚಿಸಿ, ಆ ಮನುಷ್ಯನನ್ನು ಕೂಗಿ ಕರೆದನು. "ಅವುಗಳು ಅಲ್ಲೇ ಇರಲಿ. ನನ್ನ ಜೊತೆ ಬಾ" ಎಂದನು. ಅವನು ಮರದಿಂದ ಕೆಳಗಿಳಿದು ಬಂದನು. ಹ್ಯಾನ್ಸನ ಜೊತೆ ನಡೆಯತೊಡಗಿದನು. ಹ್ಯಾನ್ಸ್ ಎತ್ತರ ಅಂದುಕೊಂಡರೆ ಅವನು ಹ್ಯಾನ್ಸ್‌ಗಿಂತ ಎತ್ತರವಾಗಿದ್ದನು. "ನಿನ್ನನ್ನು ಹಗ್ಗ ಹೊಸೆಯುವವನು ಎಂದು ಕರೆಯಬಹುದು" ಎಂದು ಹ್ಯಾನ್ಸ್ ಅವನಿಗೆ ಹೇಳಿದನು. ಅವರು ಮುಂದೆ ಹೋದರು. ಅವರಿಗೆ ದೂರದಲ್ಲಿ, ಸುತ್ತಿಗೆಯಿಂದ ಹೊಡೆಯುವ ಶಬ್ದ ಕೇಳಿಸಿತು. ಆ ಶಬ್ದಕ್ಕೆ ನೆಲ ನಡುಗುತ್ತಿತ್ತು. ಒಬ್ಬ ದೈತ್ಯಾಕಾರದ ಮನುಷ್ಯ ತನ್ನ ಕೈಯಿಂದ ಒಂದು ಬಂಡೆಯನ್ನು ಕುಟ್ಟಿ ಪುಡಿ ಮಾಡುತ್ತಿದ್ದನು. ಹ್ಯಾನ್ಸ್ "ನೀನೇನು ಮಾಡುತ್ತಿರುವೆ?" ಎಂದು ಅವನನ್ನು ಕೇಳಿದನು. "ನಾನು ಮಲಗಿದ್ದಾಗ, ಹುಲಿ, ಕರಡಿ, ತೋಳಗಳು ಬಂದು ಕಾಟ ಕೊಡುತ್ತವೆ. ಅದಕ್ಕಾಗಿ ನೆಮ್ಮದಿಯಿಂದ ಮಲಗಲು ಒಂದು ಮನೆ ಕಟ್ಟಿಕೊಳ್ಳುತ್ತಿದ್ದೇನೆ. ಮನೆ ಕಟ್ಟಲು ಕಲ್ಲುಗಳನ್ನು ಸೀಳುತ್ತಿದ್ದೇನೆ" ಎಂದು ಆ ಮನುಷ್ಯ ಹೇಳಿದನು. "ಬಹಳ ಒಳ್ಳೆಯದು, ನೀನೂ ಕೂಡ ನನ್ನ ಕೆಲಸಕ್ಕೆ ಉಪಯೋಗವಾಗುವೆ. ಮನೆ ಕಟ್ಟುವುದನ್ನು ಬಿಟ್ಟು ನನ್ನ ಜೊತೆ ಬಾ. ನಿನ್ನನ್ನು ಕಲ್ಲು ಸೀಳಪ್ಪ ಎಂದು ಕರೆಯುತ್ತೇನೆ" ಎಂದು ಹ್ಯಾನ್ಸ್ ಆ ಮನುಷ್ಯನಿಗೆ ಹೇಳಿದನು. ಆ ಮನುಷ್ಯ ಹಾನ್ಸನ ಮಾತನ್ನು ಒಪ್ಪಿದನು. ನಂತರ ಆ ಮೂವರೂ ಕಾಡಿನಲ್ಲಿ ನಡೆದುಕೊಂಡು ಹೊರಟರು. ಅವರ ಹೆಜ್ಜೆಯ ಸಪ್ಪಳಕ್ಕೆ ಕಾಡುಪ್ರಾಣಿಗಳು ಹೆದರಿಕೊಂಡು ದೂರ ಓಡಿಹೋಗುತ್ತಿದ್ದವು. ಸಾಯಂಕಾಲಕ್ಕೆ ಅವರು ಒಂದು ಹಾಳುಬಿದ್ದ ಅರಮನೆಯ ಹತ್ತಿರ ಬಂದರು. ಅವರು ಅದರ ಒಳಗೆ ಹೋಗಿ ನಡುಮನೆಯಲ್ಲಿ ಮಲಗಿದರು. ಮಾರನೇ ದಿನ ಬೆಳಗ್ಗೆ ಅರಮನೆಯ ಸುತ್ತ ಇದ್ದ ತೋಟದೊಳಗೆ ಹೋದನು. ಅದರ ತುಂಬಾ ಮುಳ್ಳಿನ ಪೊದೆಗಳು, ಜೊಂಡು ದಟ್ಟವಾಗಿ ಹಬ್ಬಿಕೊಂಡಿತ್ತು. ಅವನು ಸ್ವಲ್ಪ ಮುಂದಕ್ಕೆ ಹೋದಾಗ ಒಂದು ಕಾಡುಹಂದಿ ಅವನ ಕಡೆ ನುಗ್ಗಿತು. ಆದರೆ, ಅವನು ತನ್ನ ದೊಣ್ಣೆಯಿಂದ ಒಂದೇ ಏಟಿಗೆ ಹೊಡೆದುಬೀಳಿಸಿದನು. ಅವನು, ಆ ಸತ್ತ ಹಂದಿಯನ್ನು ಹೆಗಲಮೇಲೆ ಹಾಕಿಕೊಂಡು ಅರಮನೆಗೆ ಹಿಂದಿರುಗಿದನು. ಅದನ್ನು ಸುಡಲು ಒಂದು ಕಬ್ಬಿಣದ ಸಲಾಕೆಗೆ ಸಿಕ್ಕಿಸಿ ಬೆಂಕಿಗೆ ಹಿಡಿದನು. ನಂತರ ಎಲ್ಲರೂ ಸಂತೋಷದಿಂದ ತಿಂದರು. ಎಲ್ಲರೂ ಸರತಿ ಪ್ರಕಾರ ದಿನವೂ ಬೇಟೆಯಾಡಿಕೊಂಡು ಬರಬೇಕೆಂದು ತಮ್ಮಲ್ಲೇ ತೀರ್ಮಾನಿಸಿದರು. ಅಂದರೆ ಇಬ್ಬರು ಬೇಟೆಯಾಡಲು ಹೋಗುವುದು. ಒಬ್ಬನು ಮನೆಯಲ್ಲೆ ಇದ್ದು ಪ್ರತಿಯೊಬ್ಬರಿಗೂ ಒಂಬತ್ತು ಪೌಂಡಿನಷ್ಟು ಮಾಂಸ ಸಿಗುವ ಹಾಗೆ ಅಡುಗೆ ಮಾಡಬೇಕೆಂದು ಮಾತನಾಡಿಕೊಂಡರು. ಮೊದಲನೇ ದಿನ ಹಗ್ಗ ಹೊಸೆಯುವವನು ಮನೆಯಲ್ಲಿ ಉಳಿದನು. ಹ್ಯಾನ್ಸ್ ಮತ್ತು ಕಲ್ಲು ಸೀಳುವವನು ಇಬ್ಬರೂ ಬೇಟೆಗೆ ಹೋದರು. ಹಗ್ಗ ಹೊಸೆಯುವವನು ಅಡುಗೆ ಮಾಡುತ್ತಿರುವಾಗ ಒಬ್ಬ ಹಣ್ಣು ಹಣ್ಣು ಮುದುಕ ಬಂದು ಊಟ ಕೇಳಿದನು.

"ಏಯ್, ಕಳ್ಳ ಮುದುಕ, ಹೊರಟುಹೋಗು ಇಲ್ಲಿಂದ, ನಿನಗೆ ಊಟ ಕೊಡುವುದಿಲ್ಲ" ಎಂದು

ಹೇಳಿದನು. ಅವನು ಹಾಗೆ ಹೇಳಿದ್ದೇ ತಡ, ಆ ಮುದುಕ ಅವನ ಮೇಲೆ ಆಕ್ರಮಣ ಮಾಡಿ, ಮುಷ್ಟಿಯಿಂದ ಹೇಗೆ ಬಡಿದ ಅಂದರೆ, ಅವನಿಗೆ ತನ್ನನ್ನು ರಕ್ಷಿಸಿಕೊಳ್ಳಲು ಆಗಲಿಲ್ಲ. ಉಸಿರು ಮೇಲೆ ಕೆಳಗೆ ಆಯಿತು. ಆ ಮುದುಕ ಚೆನ್ನಾಗಿ ಸೇಡು ತೀರಿಸಿಕೊಂಡನು. ಬೇಟೆಗೆ ಹೋದವರು ಹಿಂದಿರುಗಿದರು. ಹಗ್ಗಹೊಸೆಯುವವನು, ಮುದುಕನ ಬಗ್ಗೆ ಅವನು ಹೊಡೆದದ್ದರ ಬಗ್ಗೆ ಯಾವ ವಿಷಯವನ್ನೂ ತನ್ನ ಸ್ನೇಹಿತರಿಗೆ ಹೇಳಲಿಲ್ಲ. ಅವರ ಸರತಿ ಬಂದಾಗ ಅವರಿಗೂ ಮುದುಕನ ಏಟಿನ ಅನುಭವ ಆಗಲಿ ಎಂದು ಸುಮ್ಮನಿದ್ದುಬಿಟ್ಟನು. ಅಲ್ಲದೆ ಅವರು ಹೊಡೆತ ತಿನ್ನುವ ವಿಷಯವನ್ನು ನೆನೆಸಿಕೊಂಡು ಒಳಗೊಳಗೇ ಆನಂದಪಟ್ಟನು.

ಎರಡನೇ ದಿನ, ಕಲ್ಲು ಸೀಳುವವನು ಮನೆಯಲ್ಲಿ ಉಳಿದನು. ಅವನಿಗೂ ಕೂಡ ಮರ ಹೊಸೆಯುವವನಿಗೆ ಆದ ಅನುಭವವೇ ಆಯಿತು. ಅವನು, ಮುದುಕನಿಗೆ ಊಟವನ್ನು ಕೊಡದೆ ಇದ್ದುದಕ್ಕೆ, ಒಂದು ಚೂರೂ ಕರುಣೆ ಇಟ್ಟುಕೊಳ್ಳದೆ ಮುದುಕ ಅವನನ್ನು ಚಚ್ಚಿದನು. ಬೇಟೆಗೆ ಹೋದವರು ಹಿಂದುರುಗಿ ಬಂದಾಗ ಹೊಡೆತ ತಿಂದವರಿಬ್ಬರೂ ಬಾಯಿ ಬಿಡಲಿಲ್ಲ. ಹ್ಯಾನ್ಸಿಗೂ ಕೂಡ ಅದೇ ಅನುಭವ ಆಗಲಿ ಎಂದು ಯೋಚಿಸಿ ಸುಮ್ಮನಾದರು.

ಮೂರನೆಯ ದಿನ, ಹ್ಯಾನ್ಸನ ಸರದಿ ಬಂದಿತು. ಅವನು ಅಡುಗೆ ಕೆಲಸ ಮುಗಿಸಿ, ಪಾತ್ರೆ ತೊಳೆಯುತ್ತಿದ್ದಾಗ, ಅದೇ ಮುದುಕ ಬಂದನು. ಊಟ ಕೊಡಲು ಕೇಳಿದನು. "ಅಯ್ಯೋ ಪಾಪದವನು, ನನ್ನ ಪಾಲಿನದರಲ್ಲಿ ಸ್ವಲ್ಪ ಕೊಟ್ಟರೆ ಬೇರೆಯವರಿಗೆ ಕಡಿಮೆ ಏನು ಆಗುವುದಿಲ್ಲವೆಂದು ಅಂದುಕೊಂಡನು. ನಂತರ ಸ್ವಲ್ಪ ಮಾಂಸದಡಿಗೆಯನ್ನು ಕೊಟ್ಟನು. ಆ ಕುಳ್ಳ ಮುದುಕ ಒಂದೇ ತುತ್ತಿಗೆ ತಿಂದುಬಿಟ್ಟನು. ಇನ್ನು ಸ್ವಲ್ಪ ಕೊಡಲು ಕೇಳಿದನು. ಪಾಪ, ಒಳ್ಳೆಯ ಸ್ವಭಾವದ ಹ್ಯಾನ್ಸ್ ಇನ್ನೂ ಸ್ವಲ್ಪ ಕೊಟ್ಟನು. ಅಷ್ಟರಲ್ಲೆ ತೃಪ್ತಿಪಟ್ಟುಕೊಳ್ಳಬೇಕೆಂದು ಹೇಳಿದನು. ಆದರೆ ಆ ಮುದುಕ ಮೂರನೆ ಸಾರಿಯೂ ಮತ್ತಷ್ಟು ಕೊಡಲು ಕೇಳಿದನು. "ನೀನು ಮತ್ತೆ ಕೇಳೋಕೆ ನಾಚಿಕೆಯಾಗುವುದಿಲ್ಲವೆ?" ಎಂದು ಹೇಳಿ ಏನನ್ನೂ ಕೊಡಲಿಲ್ಲ. ಆಗ ಆ ದುಷ್ಟ ಮುದುಕ ಹ್ಯಾನ್ಸ್ ಮೇಲೆ ಜಿಗಿದನು. ಅವನ ಸ್ನೇಹಿತರಿಗೆ ಹೊಡೆದಂತೆ ಹೊಡೆಯಲು ಹೋದನು. ಆದರೆ ಅವನ ದುರದೃಷ್ಟಕ್ಕೆ ಹ್ಯಾನ್ಸ್ ಜೋರಾಗಿ ಅವನಿಗೆ ಹೊಡೆದನು. ಆಗ ಆ ಮುದುಕ, ಬಾಗಿಲ ಮೆಟ್ಟಿಲುಗಳಲ್ಲಿ ಉರುಳಿಕೊಂಡು ಬಿದ್ದನು. ಹ್ಯಾನ್ಸ್ ಅವನನ್ನು ಅಟ್ಟಿಸಿಕೊಂಡು ಹೋದನು. ಮುದುಕ ಓಡಿ ಕಾಡಿನೊಳಗೆ ಒಂದು ಕಲ್ಲು ಬಂಡೆಯ ಬಿಲದೊಳಗೆ ಕಣ್ಮರೆ ಆದನು. ನಂತರ, ಹ್ಯಾನ್ಸ್ ಮನೆಗೆ ಹಿಂದಿರುಗಿದನು. ಹ್ಯಾನ್ಸ್ ಖುಷಿಯಲ್ಲಿದ್ದುದ್ದನ್ನು ನೋಡಿ ಅವನ ಸ್ನೇಹಿತರು ಆಶ್ಚರ್ಯಪಟ್ಟರು. ಅವನು ನಡೆದ್ದುದ್ದನ್ನೆಲ್ಲಾ ಹೇಳಿದನು. ಆಗ ಅವರೂ ಕೂಡ ತಮಗೆ ಆ ಮುದುಕ ಹೊಡೆದುದುನ್ನು ಹೇಳಿಕೊಂಡರು. ಅದನ್ನು ಕೇಳಿಸಿಕೊಂಡು ಹ್ಯಾನ್ಸ್ ನಕ್ಕುಬಿಟ್ಟನು. "ನಿಮಗೆ ಸರಿಯಾಗಿ ಆಗಿದೆ. ನಿಮ್ಮ ಊಟದ ಬಗ್ಗೆ ಅಷ್ಟು ಜಿಪುಣತನ ತೋರುವುದು ಸರಿಯಲ್ಲ. ಆದರೂ ನಿಮ್ಮಂಥಹ ಶಕ್ತಿಶಾಲಿಗಳು ಆ ಕುಳ್ಳ ಮುದುಕನಿಂದ ಏಟು ತಿಂದಿದ್ದು ತುಂಬಾ ನಾಚಿಗೆಗೇಡು" ಎಂದು ಹೇಳಿದನು.

ಅವರು ಊಟ ಮಾಡಿದ ಮೇಲೆ ಒಂದು ಬುಟ್ಟಿ ಮತ್ತು ಹಗ್ಗವನ್ನು ತೆಗೆದುಕೊಂಡು ಮುದುಕ ಹೊಕ್ಕಿದ್ದ ಬಿಲದ ಕಡೆ ಹೋದರು. ಹ್ಯಾನ್ಸನು ಕೈಯಲ್ಲಿ ಕೋಲು ಹಿಡಿದುಕೊಂಡು ಬುಟ್ಟಿಯಲ್ಲಿ ಕುಳಿತನು. ಅವನ ಸ್ನೇಹಿತರು ಅವನನ್ನು ಬಿಲದೊಳಗೆ ಇಳಿಬಿಟ್ಟರು. ಅವನು ತಳಭಾಗಕ್ಕೆ ಬಂದಾಗ ಒಂದು ಬಾಗಿಲನ್ನು

ನೋಡಿದನು. ಅದರ ಬಾಗಿಲನ್ನು ತೆರೆದರೆ, ಅಲ್ಲಿ ಮಾತುಗಳಲ್ಲಿ ವರ್ಣಿಸಲಾರದಷ್ಟು ಸುಂದರ ಹುಡುಗಿಯನ್ನು ನೋಡಿದನು. ಅವಳ ಹತ್ತಿರ ಆ ಕುಳ್ಳ ಮುದುಕ ಕುಳಿತುಕೊಂಡಿದ್ದನು. ಹ್ಯಾನ್ಸನನ್ನು ನೋಡಿ ಮುಖ ಗಂಟಿಕ್ಕಿದನು. ಆದರೆ, ಆ ಹುಡುಗಿಯನ್ನು ಸರಪಳಿಯಿಂದ ಬಂಧಿಸಲಾಗಿತ್ತು. ಅವಳು ಹ್ಯಾನ್ಸನ ಕಡೆ ದುಃಖದಿಂದ ನೋಡಿದಳು. ಅವನಿಗೆ ಅವಳ ಬಗ್ಗೆ ಮರುಕ ಹುಟ್ಟಿತು. "ನಿನ್ನನ್ನು ಈ ದುಷ್ಟಕುಳ್ಳನ ಹಿಡಿತದಿಂದ ಪಾರು ಮಾಡಬೇಕು" ಎಂದು ಹೇಳಿಕೊಳ್ಳುತ್ತಾ ತನ್ನ ದೊಣ್ಣೆಯಿಂದ ಆ ಕುಳ್ಳನಿಗೆ ಹೊಡೆದನು. ಅವನ ಒಂದೇ ಹೊಡೆತಕ್ಕೆ ಆ ಕುಳ್ಳ ಮುದುಕ ಸತ್ತು ಬಿದ್ದನು. ಕೂಡಲೆ ಆ ಹುಡುಗಿಯ ಸರಪಳಿಗಳು ಕಳಚಿಕೊಂಡವು. ಅವಳ ಸೌಂದರ್ಯಕ್ಕೆ ಹ್ಯಾನ್ಸ್ ಮರುಳಾದನು. ಅವಳು ತನ್ನ ಕಥೆಯನ್ನು ಹೇಳಿದಳು. ತಾನೊಬ್ಬ ರಾಜಕುಮಾರಿ ಎಂದು ಹೇಳಿದಳು. ಒಬ್ಬ ರಾಜಕುಮಾರ ತನ್ನನ್ನು ಮದುವೆಯಾಗಲು ಕೇಳಿದನು. ಅದನ್ನು ನಿರಾಕರಿಸಿದ್ದಕ್ಕೆ ಆ ರಾಜಕುಮಾರ ಸಿಟ್ಟಿನಿಂದ ತನ್ನನ್ನು ಆ ಗುಹೆಯಲ್ಲಿ ಬಂಧಿಸಿದ್ದನೆಂದು ಹೇಳಿದಳು. ತನ್ನನ್ನು ಕಾಯಲು ನೇಮಿಸಿದ್ದ ಕಾವಲುಗಾರನೆಂದು ಹೇಳಿದಳು. ಅವನು ಅವಳಿಗೆ ಅನೇಕ ತೊಂದರೆಗಳನ್ನು ಕೊಟ್ಟು ತುಂಬ ಬೇಸರಪಡಿಸುತ್ತಿದ್ದನೆಂದು ಹೇಳಿದಳು. ಹ್ಯಾನ್ಸ್ ಆ ರಾಜಕುಮಾರಿಯನ್ನು ಬುಟ್ಟಿಯಲ್ಲಿ ಕೂರಿಸಿದನು. ಅವಳನ್ನು ಮೇಲಕ್ಕೆ ಎಳೆಯಲು ಹೇಳಿದನು. ನಂತರ ಎರಡನೇ ಬಾರಿ ಬುಟ್ಟಿ ಕೆಳಗೆ ಬಂದಾಗ ಹ್ಯಾನ್ಸ್ ಕುಳಿತುಕೊಳ್ಳಲಿಲ್ಲ. ಕುಳ್ಳನ ಬಗ್ಗೆ ಏನೂ ಹೇಳದೆ ಅವರು ಅವನಲ್ಲಿ ಅಪನಂಬಿಕೆ ಹುಟ್ಟಿಸಿದ್ದರು. ಆದ್ದರಿಂದ ಅವರು ಏನಾದರು ಕೆಟ್ಟ ಉಪಾಯ ಮಾಡಿದ್ದರೆ ತನಗೆ ಅಪಾಯವಾಗಬಹುದು ಎಂದು ಊಹಿಸಿದನು. ಅಲ್ಲದೆ ಆ ಖಾಲಿ ಬುಟ್ಟಿಯಲ್ಲಿ ತನ್ನ ದೊಣ್ಣೆಯನ್ನು ಇಟ್ಟು ಕಳಿಸಿದನು. ಅವನು ಅಂದುಕೊಂಡಂತೆ, ಬುಟ್ಟಿ ಅರ್ಧ ಮೇಲಕ್ಕೆ ಹೋದಾಗ ಅವರು ಹಗ್ಗವನ್ನು ಕೆಳಗೆ ಬಿಟ್ಟುಬಿಟ್ಟರು. ಅವನು ಬುಟ್ಟಿಯಲ್ಲಿ ಕುಳಿತುಕೊಂಡಿದ್ದರೆ, ಸತ್ತು ಹೋಗುತ್ತಿದ್ದನು.

ಹ್ಯಾನ್ಸನಿಗೆ ಆ ಗುಹೆಯಿಂದ ಹೇಗೆ ತಪ್ಪಿಸಿಕೊಳ್ಳಬೇಕೆಂದು ತಿಳಿಯಲಿಲ್ಲ. ರಾಜಕುಮಾರಿ ಕುಳಿತಿದ್ದ ಜಾಗಕ್ಕೆ ಬಂದನು. ಆ ಕುಳ್ಳನ ಬೆರಳಲ್ಲಿ ಒಂದು ಉಂಗುರ ಪಳ ಪಳನೆ ಹೊಳೆಯುತ್ತಿತ್ತು. ಅದನ್ನು ಅವನು ಕುಳ್ಳನ ಬೆರಳಿನಿಂದ ಎಳೆದುಕೊಂಡು ತನ್ನ ಬೆರಳಿಗೆ ಹಾಕಿಕೊಂಡನು. ಅದನ್ನು ಒತ್ತಿದನು. ಆಗ ಅವನ ತಲೆಯ ಮೇಲೆ ಪರಪರ ಎನ್ನುವ ಶಬ್ದವಾಯಿತು. ಮೇಲೆ ನೋಡಿದಾಗ ಎರಡು ದೆವ್ವಗಳು ಗಾಳಿಯಲ್ಲಿ ತೇಲಿಕೊಂಡು ಬಂದವು. ಉಂಗುರ ತೊಟ್ಟವನೆ ತಮ್ಮ ಯಜಮಾನ ವೆಂದು ಹೇಳಿದವು. ಅಲ್ಲದೆ ಅವನ ಅಪ್ಪಣೆ ಏನು ಎಂದು ಕೇಳಿದವು. ಮೊದ ಮೊದಲು ಹ್ಯಾನ್ಸನಿಗೆ ಆಶ್ಚರ್ಯವಾಯಿತು. ಆದರೂ ತಾನು ಭೂಮಿಯ ಮೇಲೆ ಹೋಗಬೇಕು ಎಂದು ಹೇಳಿದನು. ಒಂದೇ ಕ್ಷಣದಲ್ಲಿ ಅವನನ್ನು ಎತ್ತಿಕೊಂಡು ಮೇಲಕ್ಕೆ ತಂದವು. ತಾನು ಹಾರುತ್ತಿರುವಂತೆ ಅವನಿಗೆ ಅನ್ನಿಸಿತು. ಅವನು ನೆಲದ ಮೇಲಕ್ಕೆ ಬಂದಾಕ್ಷಣ ಅವನ ಹತ್ತಿರ ಯಾರೂ ಕಾಣಲಿಲ್ಲ. ಅವನು ಆ ಹಳೆ ಅರಮನೆಗೆ ಹೋಗಿ ನೋಡಿದಾಗ ಅಲ್ಲಿ ಯಾರೂ ಕಾಣಿಸಲಿಲ್ಲ. ಹಗ್ಗ ಹೊಸೆಯುವವನು ಮತ್ತು ಕಲ್ಲು ಸೀಳಪ್ಪನು ತಪ್ಪಿಸಿಕೊಂಡು ಹೋಗಿದ್ದರು. ತಮ್ಮ ಜೊತೆ ಆ ಸುಂದರ ರಾಜಕುಮಾರಿಯನ್ನು ಕರೆದುಕೊಂಡು ಹೋಗಿದ್ದರು.

ಹ್ಯಾನ್ಸ್ ಮತ್ತೆ ತನ್ನ ಉಂಗುರವನ್ನು ಒತ್ತಿದನು. ದೆವ್ವಗಳು ಕೂಡಲೆ ಬಂದವು. ಅವನ ಕೆಟ್ಟ ಸ್ನೇಹಿತರು ಸಮುದ್ರದ ಮೇಲೆ ತಪ್ಪಿಸಿಕೊಂಡು ಹೋಗಿದ್ದಾರೆ ಎಂದು ಹೇಳಿದವು. ಹ್ಯಾನ್ಸ್ ಅವಸರದಿಂದ ಸಮುದ್ರದ

ದಡಕ್ಕೆ ಹೋದನು. ದೂರದಲ್ಲಿ ಒಂದು ಹಡಗಿನಲ್ಲಿ ಅವನ ವಿಶ್ವಾಸದ್ರೋಹಿ ಸ್ನೇಹಿತರು ಹೋಗುತ್ತಿರುವುದು ಕಂಡಿತು. ಸಿಟ್ಟಿನಿಂದ ಕೈಯಲ್ಲಿ ಕೋಲನ್ನು ಹಿಡಿದುಕೊಂಡೇ ಸಮುದ್ರಕ್ಕೆ ಹಾರಿದನು. ಅವರ ಕಡೆ ಈಜತೊಡಗಿದನು. ಅವನ ಭಾರವಾದ ದೊಣ್ಣೆ ಅವನ ಈಜಿಗೆ ತೊಂದರೆ ಆಯಿತು. ಅವನು ಈಜುವ ಬದಲು ಮುಳುಗತೊಡಗಿದನು. ಕೊನೆಗೆ, ಅವನಿಗೆ ತನ್ನ ಕೈಯಲ್ಲಿದ್ದ ಉಂಗುರದ ನೆನಪು ಬಂದಿತು. ಅದನ್ನು ಒತ್ತಿದಾಗ, ದೆವ್ವಗಳು ಕೂಡಲೆ ಪ್ರತ್ಯಕ್ಷವಾದವು. ಮಿಂಚಿನ ವೇಗದಲ್ಲಿ ಅವನನ್ನು ಹಡಗಿನಲ್ಲಿ ಇಳಿಸಿದವು. ಅವನು ಅಲ್ಲಿ ಇಳಿದ ತಕ್ಷಣ, ತನ್ನ ಕೋಲನ್ನು ಆ ದ್ರೋಹಿಗಳ ಕಡೆ ತಿರುಗಿಸಿದನು. ಚೆನ್ನಾಗಿ ಬಡಿದನು. ಅವರ ಕೆಟ್ಟತನಕ್ಕೆ ತಕ್ಕ ಶಿಕ್ಷೆ ಆಯಿತು. ಅವರನ್ನು ಸಮುದ್ರದೊಳಗೆ ಎಸೆದನು. ನಂತರ ರಾಜಕುಮಾರಿಯ ರಾಜ್ಯಕ್ಕೆ ಹೋದನು. ಅಲ್ಲಿ ಅವಳನ್ನು ಇಬ್ಬರು ರಾಕ್ಷಸರಿಂದ ಮತ್ತೆ ರಕ್ಷಿಸಿದನು. ಕೊನೆಗೆ ಹ್ಯಾನ್ಸ್ ರಾಜಕುಮಾರಿಯನ್ನು ಮದುವೆ ಆದನು. ಅವರ ಮದುವೆ ಅತ್ಯಂತ ಸಂಭ್ರಮ ಮತ್ತು ವೈಭವದಿಂದ ನಡೆಯಿತು.

೩೪. ಪುಟ್ಟ ಕೆಂಪು ಟೊಪ್ಪಿ ಹುಡುಗಿ

ಒಂದಾನೊಂದು ಕಾಲದಲ್ಲಿ ಒಬ್ಬ ಮುದ್ದಾದ ಪುಟ್ಟ ಹುಡುಗಿ ಇದ್ದಳು. ಅವಳನ್ನು ಕಂಡವರೆಲ್ಲ ಇಷ್ಟಪಡುವ ಹಾಗಿದ್ದಳು. ಅವಳ ಅಜ್ಜಿಗಂತೂ ಮೊಮ್ಮಗಳನ್ನು ಎಷ್ಟು ಮುದ್ದು ಮಾಡಿದರೂ ತೃಪ್ತಿಯಾಗುತ್ತಿರಲಿಲ್ಲ. ಅವಳಿಗೆ ಸದಾ ಮೊಮ್ಮಗಳದ್ದೇ ಚಿಂತೆ. ಒಮ್ಮೆ ಅಜ್ಜಿಗೆ ತನ್ನ ಮೊಮ್ಮಗಳಿಗೆ ಏನಾದರೂ ಉಡುಗೊರೆ ಕೊಡಬೇಕು ಅನ್ನಿಸಿತು. ಅಜ್ಜಿ ಯೋಚಿಸಿ ಮೃದುವಾದ ವೆಲ್ವೆಟ್ ಬಟ್ಟೆಯಲ್ಲಿ ಟೋಪಿಯೊಂದನ್ನು ಮಾಡಿ ಅದನ್ನು ಮೊಮ್ಮಗಳಿಗೆ ಕೊಟ್ಟಳು.

ಅಜ್ಜಿ ಕೊಟ್ಟ ಪುಟ್ಟ ಕೆಂಪು ಟೋಪಿ ಹುಡುಗಿಗೆ ತುಂಬಾ ಇಷ್ಟವಾಯಿತು. ಅವಳು ದಿನವೂ ಅದನ್ನು ಹಾಕಿಕೊಂಡೇ ಓಡಾಡುತ್ತಿದ್ದಳು. ಎಲ್ಲರೂ ಅವಳನ್ನು 'ಪುಟ್ಟ ಕೆಂಪು ಟೋಪಿ' ಎಂದೇ ಕರೆಯತೊಡಗಿದರು. ಒಂದು ದಿನ ಅವರ ಅಮ್ಮ "ಏಯ್ ಕೆಂಪು ಟೋಪಿ! ಇಲ್ಲಿ ಮಾಂಸ ಇದೆ, ಒಂದು ಬಾಟಲು ದ್ರಾಕ್ಷಿ ರಸ ಇದೆ. ಅವನ್ನು ತೆಗೆದುಕೊಂಡು ಹೋಗಿ ಅಜ್ಜಿಯ ಮನೆಗೆ ಕೊಟ್ಟು ಬಾ. ಪಾಪ ಅಜ್ಜಿಗೆ ಹುಷಾರಿಲ್ಲ. ಇದನ್ನು ಕೊಟ್ಟರೆ ಅವಳಿಗೆ ಸಂತೋಷವಾಗುತ್ತದೆ. ಅವಳು ಮಲಗಿರುತ್ತಾಳೆ, ಏಳುವ ಮೊದಲೇ ಅಲ್ಲಿಗೆ ಹೋಗಬೇಕು. ಹುಷಾರಾಗಿ ಹೋಗು. ಓಡಬೇಡ. ಬಿದ್ದರೆ ದ್ರಾಕ್ಷಿ ರಸದ ಬಾಟಲು ಒಡೆದುಹೋಗುತ್ತದೆ. ಅಜ್ಜಿಗೆ ಏನೂ ಇಲ್ಲದ ಹಾಗಾಗುತ್ತದೆ. ಆಮೇಲೆ, ಅಜ್ಜಿ ಮನೆಗೆ ಹೋದಾಗ ನಮಸ್ಕಾರ ಅಜ್ಜಿ ಎಂದು ಹೇಳುವುದನ್ನು ಮರೆಯಬೇಡ. ಅಜ್ಜಿ ಮನೆಯಲ್ಲಿ ಸುಮ್ಮ ಸುಮ್ಮನೆ ಅಲ್ಲಿ ಇಲ್ಲಿ ಇಣುಕಿನೋಡಬೇಡ" ಎಂದಳು. "ಸರಿ ಅಮ್ಮಾ. ನೀನು ಹೇಳಿದ ಹಾಗೇ ಮಾಡುತ್ತೇನೆ" ಎಂದಳು ಕೆಂಪು ಟೊಪ್ಪಿ ಹುಡುಗಿ.

ಅಜ್ಜಿ ಮನೆ ದೂರದ ಕಾಡಿನಲ್ಲಿತ್ತು. ಅಲ್ಲಿಗೆ ತಲಪುವುದಕ್ಕೆ ಊರಿನಿಂದ ಅರ್ಧ ಗಂಟೆಯ ಕಾಲ ನಡೆಯಬೇಕಾಗಿತ್ತು. ಕೆಂಪು ಟೊಪ್ಪಿ ಹುಡುಗಿ ಕಾಡಿನೊಳಗೆ ಕಾಲಿಟ್ಟಾಗ ಒಂದು ತೋಳ ಅವಳ ಎದುರಿಗೆ ಬಂದಿತು. ಹುಡುಗಿಗೆ ತೋಳದ ದುಷ್ಟತನ ಗೊತ್ತಿರಲಿಲ್ಲ. ಅದಕ್ಕೇ ಅವಳಿಗೆ ಭಯವಾಗಲಿಲ್ಲ. "ಏನು ಪುಟ್ಟ



ಕೆಂಪು ಟೊಪ್ಪಿ ಹುಡುಗಿ, ಚೆನ್ನಾಗಿದ್ದೀಯಾ" ಎಂದು ತೋಳ ಅವಳನ್ನು ಮಾತನಾಡಿಸಿತು.

"ನಮಸ್ಕಾರ ತೋಳರಾಯ. ಚೆನ್ನಾಗಿದ್ದೇನೆ" ಎಂದು ಹುಡುಗಿ ಉತ್ತರಿಸಿದಳು.

"ಇಷ್ಟು ಬೆಳಬೆಳಗ್ಗೇನೆ ಎಲ್ಲಿಗೆ ಹೊರಟೆ ಪುಟ್ಟ ಕೆಂಪು ಟೊಪ್ಪಿ ಹುಡುಗಿ?"

"ಅಜ್ಜಿ ಮನೆಗೆ". ಎಂದು ಹುಡುಗಿ ಹೇಳಿದಳು.

"ಏನಿದು ನಿನ್ನ ಕೈಯಲ್ಲಿರುವುದು?"

"ಮಾಂಸ ಮತ್ತು ದ್ರಾಕ್ಷಿರಸ. ನಮ್ಮ ಅಜ್ಜಿಗೆ ಹುಷಾರಿಲ್ಲ. ನಿನ್ನೆ ಮನೆಯಲ್ಲಿ ಮಾಂಸದ ಅಡುಗೆ ಮಾಡಿದ್ದೆವು. ಅದನ್ನು ಅಜ್ಜಿಗೆ ಕೊಡಲು ಹೋಗುತ್ತಿದ್ದೇನೆ" ಎಂದು ಹುಡುಗಿ ಹೇಳಿದಳು.

"ನಿಮ್ಮ ಅಜ್ಜಿಯ ಮನೆ ಎಲ್ಲಿದೆ?" ತೋಳ ಕೇಳಿತು.

"ಹೀಗೆ ಕಾಡಿನಲ್ಲಿ ಇನ್ನೂ ಕಾಲು ಗಂಟೆ ನಡೆಯಬೇಕು. ಅಲ್ಲಿ ಒಂದು ಕಡೆ ಮೂರು ದೊಡ್ಡ ಓಕ್ ಮರಗಳಿವೆ. ಅದರ ಹತ್ತಿರ ಪೊದೆ ಬೆಳೆದುಕೊಂಡಿದೆ. ಅಲ್ಲೇ ಗುಡಿಸಿಲಲ್ಲಿ ಅಜ್ಜಿ ಇರುತ್ತಾಳೆ. ಮನೆ ಗುರುತು ಹಿಡಿಯುವುದು ಸುಲಭ" ಎಂದಳು ಹುಡುಗಿ.

ತೋಳ ಮನಸ್ಸಿನಲ್ಲೇ "ಈ ಹುಡುಗಿ ಇನ್ನೂ ಎಳೆಯ ವಯಸ್ಸಿನವಳು. ಅಜ್ಜಿಗಿಂತ ಇವಳನ್ನು ತಿಂದರೇ ಋಚಿಯಾಗಿರುತ್ತದೆ. ನಾನು ಸ್ವಲ್ಪ ಜಾಣತನ ತೋರಿದರೆ ಅಜ್ಜಿ, ಹುಡುಗಿ ಇಬ್ಬರನ್ನೂ ತಿನ್ನಬಹುದು" ಎಂದು ಯೋಚಿಸಿತು.

ತೋಳ ಅಲ್ಲಿಂದ ಹೊರಟುಹೋಯಿತು. ಸ್ವಲ್ಪಹೊತ್ತು ಬಿಟ್ಟು ಮತ್ತೆ ಬಂದಿತು. "ಪುಟ್ಟ ಕೆಂಪು ಟೊಪ್ಪಿ ಹುಡುಗಿ, ನೋಡು! ನಿನ್ನ ಸುತ್ತ ಎಷ್ಟು ಸುಂದರವಾದ ಹೂಗಳು ಅರಳಿವೆ. ಹಕ್ಕಿಗಳು ಎಷ್ಟು ಚೆನ್ನಾಗಿ ಹಾಡುತ್ತಿವೆ. ನೀನು ಯಾಕೆ ಹೂಗಳನ್ನು ನೋಡುತ್ತಿಲ್ಲ? ಯಾಕೆ ಹಕ್ಕಿ ಹಾಡು ಕೇಳುತ್ತಿಲ್ಲ? ಸ್ಕೂಲಿಗೆ ಹೋಗುವ ಮಗುವಿನ ಹಾಗೆ ಗಂಭೀರವಾಗಿ ನಡೆಯುತ್ತಿದ್ದೀಯಲ್ಲ! ನೋಡು ಕಾಡು ಎಷ್ಟು ಚೆನ್ನಾಗಿದೆ" ಎಂದು ಹೇಳಿತು.

ಪುಟ್ಟ ಕೆಂಪು ಟೊಪ್ಪಿ ಹುಡುಗಿ ಕಣ್ಣು ತೆರೆದಳು. ಮರಗಳ ನಡುವೆ ಸೂರ್ಯ ಕಿರಣಗಳು ನರ್ತಿಸುವಂತೆ ಕಾಣುತ್ತಿದ್ದವು. ದಾರಿ ಬದಿಯಲ್ಲಿ ಮುದ್ದಾದ ಹೂಗಳು ಅರಳಿದ್ದವು. "ನಾನು ಅಜ್ಜಿಗೆಂದು ಒಳ್ಳೆಯ ಹೂಗಳನ್ನು ತೆಗೆದುಕೊಂಡು ಹೋದರೆ ಅವಳಿಗೆ ಸಂತೋಷವಾಗುತ್ತದೆ. ಈಗಿನ್ನೂ ಬೆಳಗಾಗುತ್ತಿದೆ. ಸಮಯ ಬೇಕಾದಷ್ಟಿದೆ" ಎಂದು ಅವಳ ಮನಸ್ಸಿಗೆ ಅನ್ನಿಸಿತು. ಹೂಗಳನ್ನು ಬಿಡಿಸಿಕೊಳ್ಳಲು ತೊಡಗಿದಳು. ಇನ್ನೂ ಒಳ್ಳೆಯ ಹೂ ಸಿಗುತ್ತದೆ ಅಂದುಕೊಳ್ಳುತ್ತಾ ಕಾಡಿನ ಒಳಗೆ, ಮತ್ತೂ ಒಳಗೆ ಹೆಜ್ಜೆ ಹಾಕಿದಳು. ತೋಳ ಸೀದಾ ಅಜ್ಜಿಯ ಮನೆಗೆ ಓಡಿಹೋಯಿತು. ಬಾಗಿಲು ತಟ್ಟಿತು.

"ಯಾರದು?" ಎಂದು ಅಜ್ಜಿ ಒಳಗಿನಿಂದ ಕೇಳಿದಳು.

"ನಾನು ಪುಟ್ಟ ಕೆಂಪು ಟೊಪ್ಪಿ ಹುಡುಗಿ. ನಿನಗೆಂದು ಮಾಂಸ, ದ್ರಾಕ್ಷಿ ರಸ ತಂದಿದ್ದೇನೆ" ಎಂದು ತೋಳ ಉತ್ತರಿಸಿತು.

"ನನ್ನ ಕೈಯಲ್ಲಿ ಎದ್ದು ಬರುವುದಕ್ಕೆ ಆಗುವುದಿಲ್ಲ. ನೀನೇ ಅಗುಳಿ ತೆಗೆದುಕೊಂಡು ಒಳಕ್ಕೆ ಬಾ" ಎಂದಳು ಅಜ್ಜಿ. ತೋಳ ಅಗುಳಿ ತೆಗೆಯಿತು. ಬಾಗಿಲನ್ನು ದೂಡಿತು. ಅಜ್ಜಿಯ ಮಂಚದ ಮೇಲೆ ಹಾರಿ ಅವಳನ್ನು ತಿಂದು ಹಾಕಿತು. ಆಮೇಲೆ ಅಜ್ಜಿಯ ಉಡುಪು ತೊಟ್ಟುಕೊಂಡು, ಅವಳ ಉಣ್ಣೆ ಟೋಪಿ ಹಾಕಿಕೊಂಡು, ಕಂಬಳಿ ಹೊದ್ದು ಮಂಚದ ಮೇಲೆ ಮಲಗಿತು. ಅತ್ತ ಪುಟ್ಟ ಕೆಂಪು ಟೊಪ್ಪಿ ಹುಡುಗಿ ಹೂಗಳನ್ನು ಆಯುತ್ತಲೇ ಇದ್ದಳು. ತುಂಬ ಹೂಗಳನ್ನು ಆರಿಸಿಕೊಂಡಮೇಲೆ ಅವಳಿಗೆ ಅಜ್ಜಿ ಮನೆಯ ನೆನಪು ಬಂದಿತು. ಕೂಡಲೇ ಜೋರಾಗಿ ಓಡಿ ಬಂದಳು. ಅಜ್ಜಿ ಮನೆಯ ಒಳಗೆ ಬಂದಾಗ ಬಾಗಿಲು ತೆರೆದೇ ಇದ್ದುದನ್ನು ನೋಡಿದಳು. ಅವಳಿಗೆ ಆಶ್ಚರ್ಯವಾಯಿತು. ಮನೆಯ ಒಳಗೆ ಕಾಲಿಟ್ಟಾಗ ಯಾಕೋ ತುಂಬ ದುಃಖವೆನ್ನಿಸಿತು. "ನಾನು ಇವತ್ತು ಬರಲೇಬಾರದಿತ್ತು ಅನ್ನಿಸುತ್ತದೆಯಲ್ಲಾ" ಅಂದುಕೊಂಡಳು ಮನಸ್ಸಿನಲ್ಲೇ. "ನಮಸ್ಕಾರ ಅಜ್ಜೀ" ಅಂದಳು. ಉತ್ತರ ಬರಲಿಲ್ಲ. ಮಂಚದ ಬಳಿಗೆ ಹೋಗಿ ಕಿಟಕಿ ಬಾಗಿಲು ತೆರೆದಳು. ಅಜ್ಜಿ ಕಣ್ಣು ಮರೆಯಾಗುವಂತೆ ಟೋಪಿ ಹಾಕಿಕೊಂಡು, ಕತ್ತು ಮುಚ್ಚುವಂತೆ ಕಂಬಳಿ ಹೊದ್ದು ಮಂಚದ ಮೇಲೆ ಮಲಗಿದ್ದಳು. ಯಾಕೋ ಅವಳ ಮುಖ ಕ್ರೂರವಾಗಿದೆ ಅನ್ನಿಸಿತು ಹುಡುಗಿಗೆ.

"ಅಜ್ಜೀ, ಇದೇನು ನಿನ್ನ ಕಿವಿ ಇಷ್ಟು ದೊಡ್ಡವಾಗಿವೆ!"

"ಚೆನ್ನಾಗಿ ಕೇಳಿಸಲಿ ಅಂತ" ಅನ್ನುವ ಉತ್ತರ ಬಂದಿತು.

"ಇದೇನು ನಿನ್ನ ಕಣ್ಣು ಇಷ್ಟು ದೊಡ್ಡದಾಗಿವೆ?"

"ಚೆನ್ನಾಗಿ ಕಾಣಿಸಲಿ ಅಂತ" ಅನ್ನುವ ಉತ್ತರ ಬಂದಿತು.

"ಕೈ ಇಷ್ಟು ದೊಡ್ಡವಿವೆಯಲ್ಲಾ ಅಜ್ಜೀ?"

"ಚೆನ್ನಾಗಿ ಹಿಡಿದುಕೊಳ್ಳಲು ಆಗಲಿ ಅಂತ."

"ಆದರೆ ಅಜ್ಜೀ, ಇದೇನು ನಿನ್ನ ಹಲ್ಲು ಇಷ್ಟು ದೊಡ್ಡವಿವೆ?"


"ನಿನ್ನನ್ನು ತಿನ್ನಲು ಆಗಲಿ" ಅನ್ನುತ್ತಾ ತೋಳ ಮಂಚದಿಂದ ನೆಗೆದು ಪುಟ್ಟ ಕೆಂಪು ಟೊಪ್ಪಿ ಹುಡುಗಿಯನ್ನು ಕಬಳಿಸಿಬಿಟ್ಟಿತು.

ಅಜ್ಜಿಯನ್ನೂ ಹುಡುಗಿಯನ್ನೂ ತಿಂದುತೋಳದ ಹೊಟ್ಟೆ ಭಾರವಾಯಿತು. ಅಲ್ಲೇ ಮಲಗಿ ನಿದ್ದೆಹೋಯಿತು, ಜೋರಾಗಿ ಗೊರಕೆ ಹೊಡೆಯತೊಡಗಿತು. ಆಗ ಅದೇ ದಾರಿಯಲ್ಲಿ ಹೋಗುತ್ತಿದ್ದ ಬೇಟೆಗಾರನೊಬ್ಬ ಗೊರಕೆಯ ಸದ್ದು ಕೇಳಿಸಿಕೊಂಡ. "ಅಜ್ಜಿ ಯಾಕೆ ಇವತ್ತು ಇಷ್ಟು ಜೋರಾಗಿ ಗೊರಕೆ ಹೊಡೆಯುತ್ತಿದ್ದಾಳೆ? ಅವಳಿಗೆ ಏನಾಗಿದೆಯೋ ನೋಡೋಣ" ಅನ್ನಿಸಿತು ಅವನಿಗೆ.

ಸರಿ, ಅವನು ಅಜ್ಜಿಯ ಮನೆಯೊಳಕ್ಕೆ ಕಾಲಿಟ್ಟ. ಮಂಚದ ಬಳಿ ಬಂದ. ನೋಡಿದರೆ ತೋಳ! "ಓಹೋ, ಈ ದುಷ್ಟನೋ! ನಿನ್ನನ್ನು ಬಹಳ ಕಾಲದಿಂದ ಹುಡುಕುತ್ತಿದ್ದೆ" ಅನ್ನುತ್ತ ತೋಳವನ್ನು ಗುಂಡಿಟ್ಟು ಕೊಂದ.

ಕೆಲವು ಜನ ಈ ಕತೆ ಸರಿಯಲ್ಲ. ಕತೆ ನಡೆದದ್ದೇ ಬೇರೆ ಥರ ಅನ್ನುತ್ತಾರೆ. ಪುಟ್ಟ ಕೆಂಪು ಟೊಪ್ಪಿ ಹುಡುಗಿ ಅಜ್ಜಿಯ ಮನೆಗೆ ಹೋಗುತ್ತಿದ್ದಾಗ ಅವಳಿಗೆ ತೋಳ ಸಿಕ್ಕಿತು. ತೋಳ ಅವಳನ್ನು ದಾರಿ ತಪ್ಪಿಸಲು ಯತ್ನಿಸಿತು. ಆದರೆ ಹುಡುಗಿ ಸೀದಾ ಅಜ್ಜಿಯ ಮನೆಗೆ ಹೋಗಿ ತೋಳ ಸಿಕ್ಕಿದ್ದು, ಮಾತನಾಡಿಸಿದ್ದು, ತನಗೆ ಭಯವಾದದ್ದು ಹೇಳಿದಳು. ಆಗ ಅಜ್ಜಿ "ತೋಳ ಇಲ್ಲಿಗೂ ಬಂದೀತು. ಬಾಗಿಲು ಭದ್ರವಾಗಿ ಹಾಕಿಕೊಳ್ಳೋಣ" ಎಂದಳು. ತೋಳ ಹುಡುಗಿಯನ್ನು ಹಿಂಬಾಲಿಸಿಕೊಂಡು ಬಂದಿತು. ಅಜ್ಜಿ ಮನೆಯ ಬಾಗಿಲು ತಟ್ಟಿ "ನಾನು, ಪುಟ್ಟ ಕೆಂಪು ಟೊಪ್ಪಿ ಹುಡುಗಿ, ಬಾಗಿಲು ತೆಗೆಯಿರಿ" ಎಂದಿತು. ಆದರೆ ಯಾರೂ ಮಾತನಾಡಲಿಲ್ಲ. ತೋಳ ಮನೆಯ ಸುತ್ತ ಸುಳಿದಾಡಿತು. ಕೊನೆಗೆ ಮನೆಯ ಚಾವಣಿಯ ಮೇಲೆ ಹತ್ತಿ ಕುಳಿತಿತು. ಸಂಜೆಗೆ ಪುಟ್ಟ ಕೆಂಪು ಟೊಪ್ಪಿ ಹುಡುಗಿ ಮನೆಗೆ ಹೋಗಲು ಹೊರಗೆ ಬಂದಾಗ ಅವಳನ್ನೂ ಅಜ್ಜಿಯನ್ನೂ ತಿನ್ನಬಹುದು ಎಂದು ಹೊಂಚು ಹಾಕುತ್ತಿತ್ತು. ಅಜ್ಜಿಗೆ ಇದು ತಿಳಿಯಿತು. ದೊಡ್ಡ ಬಾನಿಯಲ್ಲಿ ನೀರನ್ನು ಚೆನ್ನಾಗಿ ಕುದಿಸಿ "ಮಗೂ, ಗಂಜಿ ಕುದಿಸಿದ್ದೇನೆ, ಯಾಕೋ ಸರಿಯಾಗಲಿಲ್ಲ, ಇದನ್ನು ಹೊರಗೆ ಇರುವ ದೊಡ್ಡ ತೊಟ್ಟಿಗೆ ಹಾಕು" ಎಂದಳು. ಪುಟ್ಟ ಕೆಂಪು ಟೊಪ್ಪಿ ಹುಡುಗಿ ಕುದಿಯುವ ನೀರನ್ನು ತೊಟ್ಟಿಗೆ ಹಾಕಿದಳು. ಸಂಜೆ ಕತ್ತಲಲ್ಲಿ ತೋಳ ಆಯತಪ್ಪಿ ಚಾವಣಿಯಿಂದ ಜಾರಿ ತೊಟ್ಟಿಯಲ್ಲಿ ಬಿದ್ದು ಪ್ರಾಣ ಬಿಟ್ಟಿತು. ಪುಟ್ಟ ಕೆಂಪು ಟೊಪ್ಪಿ ಹುಡುಗಿ ಮನೆಗೆ ಓಡಿಹೋದಳು. ಕೆಟ್ಟ ತೋಳ ಸತ್ತಿತ್ತೆಂದು ಯಾರೂ ಅಳಲಿಲ್ಲ! ಹೀಗೂ ಒಂದು ಕತೆ ಇದೆ. ನಿಮಗೆ ಯಾವುದು ಇಷ್ಟ ನೀವೇ ಹೇಳಿ.

೩೫. ಹುಲ್ಲು, ಕಲ್ಲಿದ್ದಲು ಮತ್ತು ಹುರುಳಿಕಾಯಿ



ಒಂದು ಊರಲ್ಲಿ ಒಬ್ಬ ಬಡ ಹೆಂಗಸಿದ್ದಳು. ಅವಳು ಒಂದು ಬೋಗುಣಿ ತುಂಬ ಹುರುಳಿಕಾಯಿಯನ್ನು ಒಟ್ಟು ಮಾಡಿದ್ದಳು. ಅದರಿಂದ ಅಡುಗೆ ಮಾಡಬೇಕೆಂದು ಒಲೆಗೆ ಬೆಂಕಿಹಾಕಿದಳು. ಅದು ಚೆನ್ನಾಗಿ ಉರಿಯಲಿ ಎಂದು ಒಂದು ಹಿಡಿ ಹುಲ್ಲನ್ನು ಒಲೆಗೆ ಹಾಕಿದಳು. ಅವಳು ಹುರುಳಿಕಾಯಿಯನ್ನು ಬಾಣಲಿಯೊಳಗೆ ಹಾಕುತ್ತಿರುವಾಗ, ಅವಳಿಗೆ ಗೊತ್ತಿಲ್ಲದಂತೆ ಒಂದು ಹುರುಳಿಕಾಯಿ ತಪ್ಪಿಸಿಕೊಂಡು ನೆಲದಮೇಲೆ ಇದ್ದ ಒಂದು ಹುಲ್ಲುಕಡ್ಡಿಯ ಹತ್ತಿರ ಬಿದ್ದಿತು. ಅದೇ ವೇಳೆಗೆ ಬೆಂಕಿಯಿಂದ ನಿಗಿ ನಿಗಿ ಎನ್ನುವ ಮಸಿಕೆಂಡ ಒಂದು ಹಾರಿ ಬಂದಿತು. ಅದು ಕೂಡ ಹುರುಳಿಕಾಯಿ ಮತ್ತು ಹುಲ್ಲು ಇದ್ದ ಜಾಗದ ಹತ್ತಿರವೇ ಬಿದ್ದಿತು. ಆಗ ಹುಲ್ಲು "ನನ್ನ ಪ್ರೀತಿಯ ಸ್ನೇಹಿತ ನೀನು. ಎಲ್ಲಿಂದ ಬಂದೆ?" ಎಂದು ಇದ್ದಿಲನ್ನು ಕೇಳಿತು. "ಅದೃಷ್ಟ ಚೆನ್ನಾಗಿತ್ತು. ನಾನು ಬೆಂಕಿಯಿಂದ ಹಾರಿಕೊಂಡು ಬಂದೆ. ಇಲ್ಲದಿದ್ದರೆ, ನನ್ನ ಸಾವು ಖಚಿತವಾಗುತ್ತಿತ್ತು. ಸುಟ್ಟು ಬೂದಿಯಾಗಿ ಬಿಡುತ್ತಿದ್ದೆ" ಎಂದು ಇದ್ದಿಲು ಹೇಳಿತು. ಹುರುಳಿಕಾಯಿ "ನಾನು ಕೂಡ ಸಿಪ್ಪೆಯ ಸಮೇತ ತಪ್ಪಿಸಿಕೊಂಡು ಬಂದೆ. ಇಲ್ಲದಿದ್ದರೆ ಆ ಮುದುಕಿ ಇತರ ಹುರುಳಿಕಾಯಿಗಳೊಂದಿಗೆ ನನ್ನನ್ನು ಗಡಿಗೆಯೊಳಗೆ ಹಾಕಿ ಬೇಯಿಸಿಬಿಡುತ್ತಿದ್ದಳು. ನಾನೂ ಕೂಡ ನನ್ನ ಸ್ನೇಹಿತರಂತೆ ತುಂಡು ತುಂಡಾಗಿಬಿಡುತ್ತಿದ್ದೆ" ಎಂದು ಹೇಳಿತು. ಆಗ "ನನಗೂ ಈ ದಿನ ಒಳ್ಳೆಯ ಅದೃಷ್ಟವೇ ಕಾದಿತ್ತು! ಇಲ್ಲದಿದ್ದರೆ ಆ ಮುದುಕಿ ನನ್ನ ಸಹೋದರರನ್ನೆಲ್ಲ ಒಲೆಯಲ್ಲಿ ಹಾಕಿ ಉಸಿರುಕಟ್ಟಿಸುತ್ತಾಳೆ. ಅವಳು ಒಂದು ಬಾರಿಗೆ ಅರವತ್ತು ಹುಲ್ಲುಕಡ್ಡಿಗಳನ್ನು ಇಡುತ್ತಾಳೆ. ಸಂತೋಷದಿಂದ ಅವರ ಜೀವತೆಗೆಯುತ್ತಾಳೆ. ನಾನು ಅವಳ ಬೆರಳುಗಳ ಸಂದಿಯಲ್ಲಿ ನುಸುಳಿಕೊಂಡು ಜಾರಿ ಬಂದೆನು" ಎಂದು ಹುಲ್ಲು ತನ್ನ ಸ್ಥಿತಿಯನ್ನು ವಿವರಿಸಿತು.


ಆಗ ಇದ್ದಿಲು "ನಾವೀಗ ಏನು ಮಾಡೋಣ?" ಎಂದು ಕೇಳಿತು. ಅದಕ್ಕೆ ಹುರುಳಿಕಾಯಿ "ನಾವು ಅದೃಷ್ಟವಶಾತ್, ಸಾವಿನಿಂದ ಪಾರಾಗಿದ್ದೇವೆ. ನಾವೆಲ್ಲರೂ ಒಟ್ಟಿಗೆ ಇದ್ದು ಒಳ್ಳೆಯ ಸ್ನೇಹಿತರಾಗಿರೋಣ. ಇಲ್ಲದಿದ್ದರೆ ನಮ್ಮ ಮೇಲೆ ದುರದೃಷ್ಟ ಆಕ್ರಮಣ ಮಾಡಬಹುದು. ನಾವೆಲ್ಲರೂ ಇನ್ನು ಮುಂದೆ ಕಾಡನ್ನು, ನಾಡನ್ನು ನೋಡಲು ಪ್ರಯಾಣಮಾಡುತ್ತಾ ಅಲೆದಾಡೋಣ" ಎಂದು ಹೇಳಿತು.

ಆ ವಿಚಾರದಿಂದ ಉಳಿದವರಿಬ್ಬರೂ ಸಂತೋಷಪಟ್ಟರು. ಅವರು ತಮ್ಮ ಪ್ರಯಾಣವನ್ನು ಪ್ರಾರಂಭಿಸಿದರು. ಸ್ವಲ್ಪ ಸಮಯದಲ್ಲೆ ಅವರು ಒಂದು ಸಣ್ಣ ನದಿಯ ಬಳಿಗೆ ಬಂದರು. ಅದರ ಮೇಲೆ ದಾರಿಯಾಗಲಿ, ಅಣೆಕಟ್ಟಾಗಲಿ ಇರಲಿಲ್ಲ. ಅವರಿಗೆ ನದಿಯನ್ನು ದಾಟುವ ಸಮಸ್ಯೆ ಎದುರಾಯಿತು. ಆಗ ಹುಲ್ಲುಕಡ್ಡಿ, "ನಾನು ಎರಡೂ ದಡಗಳನ್ನು ಸೇರುವ ಹಾಗೆ ಮಲಗುವೆ. ನೀವು ನನ್ನ ಮೇಲೆ ಹತ್ತಿಕೊಂಡು ದಾಟಬಹುದು. ಅಣೆಕಟ್ಟನ್ನು ದಾಟುವ ಹಾಗೆ ದಾಟಿಕೊಂಡು ಹೋಗಿ" ಎಂದು ಒಂದು ಒಳ್ಳೆಯ ಸಲಹೆಯನ್ನು ಕೊಟ್ಟಿತು. ಹಾಗೆ ಹೇಳಿ, ಹುಲ್ಲುಕಡ್ಡಿ ಎರಡೂ ದಡದ ಮಧ್ಯೆ ತಾನೇ ಚಾಚಿಕೊಂಡಿತು. ಇದ್ದಿಲು ಬೆಂಕಿ ಹತ್ತಿಸಿಕೊಳ್ಳುವ ಸ್ವಭಾವದ್ದು ಮೆಲ್ಲಗೆ ಉರುಳುತ್ತಾ ಹುಲ್ಲಿನ ಅಣೆಕಟ್ಟನ್ನು ನಿಧಾನವಾಗಿ, ಹಗುರವಾಗಿ ದಾಟಲು ಪ್ರಯತ್ನಿಸಿತು. ಅದು ಮಧ್ಯಕ್ಕೆ ಬಂದಾಗ, ಕೆಳಗಡೆ ಹರಿಯುವ ನೀರಿನ ಸದ್ದು ಕೇಳಿಸಿಕೊಂಡಾಗ ತುಂಬಾ ಹೆದರಿಕೊಂಡು ಮುಂದಕ್ಕೆ ಹೋಗಲು ಧೈರ್ಯಸಾಲದೇ, ನಿಂತಲ್ಲೆ ನಿಂತುಬಿಟ್ಟಿತು. ಹುಲ್ಲಿನ ಕಡ್ಡಿ ಸೂರ್ಯ ಝಳಕ್ಕೆ ಮೆಲ್ಲನೆ ಸುಡಲು ಪ್ರಾರಂಭಿಸಿತು. ಅಲ್ಲದೆ ಮಧ್ಯಕ್ಕೆ ಸರಿಯಾಗಿ ಮುರಿದು ನೀರಿನೊಳಗೆ ಬಿದ್ದಿತು. ಇದ್ದಿಲು ಕೂಡ ಜಾರುತ್ತಾ ಜಾರುತ್ತಾ ನೀರಿನೊಳಗೆ ಜೊಯ್ ಎಂದು ಬಿದ್ದಿತು. ಹುರುಳಿಕಾಯಿ ಮಾತ್ರ ಬಹಳ ಬುದ್ಧಿವಂತಿಕೆಯಿಂದ ದಡದಲ್ಲೆ ನಿಂತಿತ್ತು. ಅದಕ್ಕೆ ಆ ಅಪಘಾತವನ್ನು ನೋಡಿ ನಗದೆ ಇರಲು ಆಗಲಿಲ್ಲ. ತಮಾಷೆ ತುಂಬಾ ಚೆನ್ನಾಗಿತ್ತು. ಆಗ ಅದರ ಹೊಟ್ಟೆ ಒಡೆಯಿತು. ಆಗ ಅದರ ಪಾಡು ಕೂಡ ತನ್ನ ಸ್ನೇಹಿತರದಂತೆಯೇ ಆಗುತ್ತಿತ್ತು. ಆದರೆ ಒಬ್ಬ ದರ್ಜಿಯವನು ಅದೇ ವೇಳೆಗೆ ಅಲ್ಲಿಗೆ ಬಂದು ಹುರುಳಿಕಾಯಿಯ ಹೊಟ್ಟೆ ಒಡೆದುದ್ದನ್ನು ನೋಡಿದನು. ಅವನು ಅದರ ಮೇಲೆ ಕರುಣೆತೋರಿ, ಹುರುಳಿಕಾಯಿ ಬೀಜವನ್ನು ಸಿಪ್ಪೆಯೊಳಗಿಟ್ಟು ಅದರ ಬಾಯಿಯನ್ನು ಸೂಜಿ ಮತ್ತು ದಾರದಿಂದ ಹೊಲಿದನು. ಹುರುಳಿಕಾಯಿ ಅವನಿಗೆ ಹೃತ್ಪೂರ್ವಕ ವಂದನೆಗಳನ್ನು ಹೇಳಿತು. ಆದರೆ ದರ್ಜಿಯವನು ಕಪ್ಪುದಾರವನ್ನು ಹೊಲಿಯಲಿಕ್ಕೆ ಬಳಸಿದ್ದರಿಂದ ಪ್ರತಿಯೊಂದು ಹುರುಳಿಕಾಯಿಯ ಮೇಲೆ ಕಪ್ಪು ಗೆರೆಯ ಕಲೆ ಇಂದಿಗೂ ಇದೆ.

೩೬. ಸಾಹಸಿ ದರ್ಜಿಯವನು

ಒಂದಾನೊಂದು ಕಾಲದಲ್ಲಿ ಅತ್ಯಂತ ಜಂಬದ ರಾಜಕುಮಾರಿ ಒಬ್ಬಳು ಇದ್ದಳು. ಅವಳನ್ನು ಮದುವೆ ಮಾಡಿಕೊಳ್ಳಲು ಬರುವವರಿಗೆಲ್ಲಾ ಒಂದು ಒಗಟನ್ನು ಹಾಕುತ್ತಿದ್ದಳು. ಅದಕ್ಕೆ ಉತ್ತರ ಹೇಳದವರನ್ನು ತುಚ್ಛೀಕರಿಸಿ, ಅವಮಾನ ಮಾಡಿ ಕಳಿಸುತ್ತಿದ್ದಳು. ಎಲ್ಲೆಲ್ಲಿಯೂ ಜನ ಅವಳ ಬಗೆಗೆ ಮಾತನಾಡಿಕೊಳ್ಳುತ್ತಿದ್ದರು. ಯಾರು ಅವಳ ಒಗಟಿಗೆ ಉತ್ತರ ಕೊಡುವರೋ ಅವರು ಅವಳನ್ನು ಮದುವೆ ಆಗಬೇಕಾಗಿತ್ತು.

ಅದೇ ಕಾಲದಲ್ಲಿ, ಮೂರು ಜನ ದರ್ಜಿಯವರು ರಾಜಕುಮಾರಿ ವಾಸವಾಗಿದ್ದ ಊರಿಗೆ ಬಂದರು. ರಾಜಕುಮಾರಿಯ ವಿಷಯವನ್ನು ಕೇಳಿದ ಹಿರಿಯರಿಬ್ಬರು ನಿಸ್ಸಂಶಯವಾಗಿ ತಾವು ಗೆದ್ದೇ ಗೆಲ್ಲುವೆವು ಎಂಬ ನಂಬಿಕೆಯನ್ನು ಇಟ್ಟುಕೊಂಡರು. ಯಾಕೆಂದರೆ ಅವರು ತಮ್ಮ ಹೊಲಿಗೆ ಕೆಲಸದಲ್ಲಿ ನಿಪುಣತೆಯನ್ನು ಸಾಧಿಸಿದ್ದರು. ಮೂರನೆಯವನು, ಸೋಮಾರಿ, ಏನೂ ಅರಿಯದ ಮುಗ್ಧನಾಗಿದ್ದನು. ಅವನೂ ಕೂಡ



ಒಗಟಿಗೆ ಉತ್ತರವನ್ನು ಊಹಿಸುವಲ್ಲಿ ತನಗಿರುವ ಶಕ್ತಿಯ ಬಗ್ಗೆ ಅಪಾರವಾದ ನಂಬಿಕೆ ಹೊಂದಿದ್ದನು. ಮೊದಲನೆಯವರಿಬ್ಬರೂ ಚಿಕ್ಕವನನ್ನು ಮನೆಯಲ್ಲೇ ಇರುವಂತೆ ಒತ್ತಾಯಿಸಿದರು. ಆದರೆ ಅವನು ಅವರ ಮಾತು ಕೇಳಿಸಿಕೊಳ್ಳಲಿಲ್ಲ. ಅವನಾಗಲೇ ಆ ಕೆಲಸವನ್ನು ಮಾಡಲು ತೀರ್ಮಾನಿಸಿಬಿಟ್ಟಿದ್ದನು. ಇಡೀ ಪ್ರಪಂಚ ತನಗೆ ಸೇರಿದ್ದು ಎನ್ನುವ ಹಾಗೆ ಅವನು ಹೊರಟೇಬಿಟ್ಟನು.

ಆ ಮೂವರು ದರ್ಜಿಯವರು ರಾಜಕುಮಾರಿಯ ಮುಂದೆ ಬಂದು ನಿಂತರು. ತಾವು ಅವಳ ಒಗಟನ್ನು ಬಿಡಿಸಲು ಬಂದಿರುವುದಾಗಿ ಹೇಳಿದರು. ಸೂಜಿಯಲ್ಲಿ ದಾರವನ್ನು ಪೋಣಿಸುವ ಕೆಲಸದಲ್ಲಿ ಪ್ರತಿಯೊಬ್ಬರೂ ನಿಪುಣರಾಗಿದ್ದೇವೆ ಎಂದು ಹೇಳಿದರು. "ಹಾಗಾದರೆ! ನನ್ನ ಒಗಟು ಇದು: ನನ್ನ ತಲೆಯಲ್ಲಿ ಎರಡು ಬಣ್ಣದ ಕೂದಲುಗಳಿವೆ, ಅವು ಯಾವ ಬಣ್ಣ?" ಎಂದು ರಾಜಕುಮಾರಿ ಕೇಳಿದಳು.

ಅದಕ್ಕೆ ಮೊದಲನೆಯವನು, "ಅಷ್ಟೇನಾ! ಚಿಟ್ಟೆಯ ಹಾಗೆ ಕಪ್ಪು ಮತ್ತು ಬಿಳಿಯ ಬಣ್ಣದ್ದಾಗಿರುತ್ತದೆ. ಅದಕ್ಕೆ ಕರಿಮೆಣಸು ಮತ್ತು ಉಪ್ಪು ಎನ್ನುವರು" ಎಂದು ಹೇಳಿದನು. "ತಪ್ಪು, ಈಗ ಎರಡನೆಯವನು ಪ್ರಯತ್ನಿಸಲಿ!" ಎಂದು ರಾಜಕುಮಾರಿ ಹೇಳಿದಳು. "ಅದು ಕಪ್ಪು ಮತ್ತು ಬಿಳುಪಲ್ಲ , ಕಂದು ಮತ್ತು ಕೆಂಪು ಬಣ್ಣದ್ದಾಗಿದೆ ನನ್ನ ಅಪ್ಪನ ಹಬ್ಬದ ದಿನದ ಕೋಟಿನಂತೆ" ಎಂದು ಎರಡನೆಯವನು ಹೇಳಿದನು. "ಅದೂ ತಪ್ಪು! ಈಗ ಮೂರನೆಯವನು ಪ್ರಯತ್ನಿಸಲಿ. ಅವನು ಸರಿಯಾಗಿ ಊಹಿಸಬಹುದು ಎಂದು ನನಗೆ ಅನಿಸುತ್ತದೆ" ಎಂದು ರಾಜಕುಮಾರಿ ಮೂರನೆ ದರ್ಜಿಯವನ ಕಡೆ ತಿರುಗಿದಳು. ಕೊನೆಯವನು ಮತ್ತು ಮೂರನೆ ದರ್ಜಿ ಅತ್ಯಂತ ಧೈರ್ಯದಿಂದ ಮುಂದಕ್ಕೆ ಹೆಜ್ಜೆ ಇಟ್ಟನು. "ರಾಜಕುಮಾರಿ ಬಂಗಾರ ಮತ್ತು ಬೆಳ್ಳಿಯ ಕೂದಲನ್ನು ಹೊಂದಿದ್ದಾಳೆ. ಅವೇ ಕೂದಲಿನ ಎರಡು ಬಣ್ಣಗಳು" ಎಂದು ಹೇಳಿದನು.

ಅದನ್ನು ಕೇಳಿಸಿಕೊಂಡ ರಾಜಕುಮಾರಿ ಸಪ್ಪೆಮುಖ ಮಾಡಿದಳು. ಅವಳಿಗೆ ಹೆದರಿಕೆಯಿಂದ ನೆಲದ ಮೇಲೆ ಬೀಳುವ ಹಾಗೆ ಆಯಿತು. ಯಾಕೆಂದರೆ ದರ್ಜಿಯವನು ಅವಳ ಒಗಟನ್ನು ಬಿಡಿಸಿದ್ದನು. ಅವಳ ಒಗಟನ್ನು ಪ್ರಪಂಚದಲ್ಲಿ ಬಿಡಿಸುವವರು ಯಾರೂ ಇಲ್ಲವೆಂದು ರಾಜಕುಮಾರಿ ನಂಬಿದ್ದಳು. ಸ್ವಲ್ಪ

ಹೊತ್ತಿನಲ್ಲೆ ಚೇತರಿಸಿಕೊಂಡಳು. ನಂತರ ದರ್ಜಿಯವನಿಗೆ "ನೀನು ಮಾಡಿದ್ದು ಅಷ್ಟೇ ಅಲ್ಲ, ಇನ್ನೂ ಇದೆ. ಕೆಳಗೆ ಲಾಯದಲ್ಲಿ ಒಂದು ಕರಡಿ ಇದೆ. ಅದರ ಜೊತೆ ನೀನು ಒಂದು ರಾತ್ರಿಯನ್ನು ಕಳೆಯಬೇಕು. ಮಾರನೇ ದಿನ ನೀನು ಜೀವಂತವಾಗಿರುವುದನ್ನು ನಾನು ನೋಡಿದರೆ, ನಾನು ನಿನ್ನನ್ನು ಮದುವೆ ಆಗುತ್ತೇನೆ" ಎಂದು ರಾಜಕುಮಾರಿ ಹೇಳಿದಳು.

ಆ ದರ್ಜಿಯವನು ಕೂಡಲೆ ಒಪ್ಪಿದನು. "ಧೈರ್ಯದಿಂದ ಪ್ರಯತ್ನಿಸಿದರೆ ಅರ್ಧ ಗೆದ್ದಂತೆ!" ರಾಜಕುಮಾರಿ ಮಾತ್ರ ಸಮಾಧಾನದಿಂದ ಇದ್ದಳು. ಯಾಕೆಂದರೆ ಕರಡಿ ಕೈಗೆ ಸಿಕ್ಕಿದವರು ಯಾರೂ ಅದೂವರೆಗೂ ಉಳಿದಿರಲಿಲ್ಲ.

ರಾತ್ರಿ ಆಗುತ್ತಿದ್ದಂತೆ ದರ್ಜಿಯವನನ್ನು ಕರಡಿ ಇರುವ ಜಾಗಕ್ಕೆ ಕರೆದುಕೊಂಡು ಹೋದರು. ಅವನು ಅದರ ಕೊಟ್ಟಿಗೆಯೊಳಗೆ ಹೋದಾಗ ಅದು ಅವನ ಕಡೆ ಹಾರಿ ಬಂದಿತು. "ನಿಧಾನ, ನಿಧಾನ... ನಾನು ನಿನಗೆ ನಡತೆಯನ್ನು ಕಲಿಸಲೇಬೇಕು!" ಎಂದು ಹೇಳುತ್ತಾ, ದರ್ಜಿಯವನು ತನ್ನ ಕಿಸೆಗಳಿಂದ ಸೇಂಗಾಕಾಯಿಗಳನ್ನು ತೆಗೆದನು. ತನ್ನ ಹಲ್ಲುಗಳಿಂದ ಅವನ್ನು ಸುಲಿಯತೊಡಗಿದನು. ಅದನ್ನು ನೋಡಿದ ಕರಡಿಗೆ, ತಾನು ಸೇಂಗಾಕಾಯಿಯನ್ನು ತಿನ್ನಬೇಕು ಎಂಬ ಆಸೆ ಹುಟ್ಟಿತು. ಆಗ ದರ್ಜಿಯವನು ತನ್ನ ಕಿಸೆಯಲ್ಲಿ ಕೈ ಹಾಕಿ, ಕೈತುಂಬ ತೆಗೆದುಕೊಂಡು ಕೊಟ್ಟನು. ಅವು ಬರೀ ಕಲ್ಲುಗಳಾಗಿದ್ದವು. ಕರಡಿ, ಅವುಗಳನ್ನೇ ಸೇಂಗಾಕಾಯಿ ಎಂದು ಬಾಯಿಯೊಳಗೆ ಹಾಕಿಕೊಂಡಿತು. ಅವುಗಳನ್ನು ಅಗಿಯಲು ಆಗಲಿಲ್ಲ. ಅದು ಶಕ್ತಿಮೀರಿ ಪ್ರಯತ್ನಿಸಿದರೂ ಆಗಲಿಲ್ಲ. "ಅಯ್ಯೋ ನಾನೆಂತಹ ದಡ್ಡ! ನಾನು ಸೇಂಗಾಕಾಯಿಗಳನ್ನು ಸುಲಿದುಕೊಂಡು ತಿನ್ನಬೇಕಾಗಿತ್ತು. ಅದು ನನಗೆ ಆಗಲಿಲ್ಲವಲ್ಲ" ಎಂದು ಹೇಳಿಕೊಂಡು, ನನಗೂ ಸುಲಿದುಕೊಡುವೆಯಾ?" ಎಂದು ದರ್ಜಿಯವನನ್ನು ಕೇಳಿತು. "ಎಂತಹ ಪ್ರಾಣಿಯಪ್ಪ ನೀನು? ಅಷ್ಟೊಂದು ದೊಡ್ಡ ಬಾಯಿ ಇದೆ, ಒಂದು ಸಣ್ಣಕಾಯಿಯನ್ನು ಸುಲಿಯಲು ಆಗಲಿಲ್ಲವಲ್ಲ" ಎಂದು ಹೇಳುತ್ತಾ ದರ್ಜಿಯವನು ಮೋಸದಿಂದ ಕಲ್ಲಿನ ಬದಲು ಸೇಂಗಾ ಕೊಟ್ಟನು. ಅದು ಸುಲಭವಾಗಿ ಸುಲಿಯಿತು.

"ನಾನು ಮತ್ತೊಮ್ಮೆ ಪ್ರಯತ್ನಿಸುತ್ತೇನೆ! ಅದು ತುಂಬಾ ಸುಲಭ ಎಂದು ಅನಿಸುತ್ತಿದೆ" ಎಂದು ಕರಡಿ ಮತ್ತೆ ಸೇಂಗಾ ಬದಲು ಕಲ್ಲನ್ನು ಕಡಿಯತೊಡಗಿತು. ತನ್ನ ಶಕ್ತಿಯನ್ನೆಲ್ಲಾ ಬಿಟ್ಟು ಕಡಿದರೂ, ಅದರ ಉದ್ದೇಶ ಈಡೇರಲಿಲ್ಲ. ಕರಡಿಗೆ ಸುಸ್ತಾಯಿತು. ಆಗ ದರ್ಜಿಯವನು, ತನ್ನ ಕೋಟಿನ ಒಳಜೇಬಿನಿಂದ ಒಂದು ಪಿಟೀಲು ತೆಗೆದನು. ಅದರಲ್ಲಿ ಒಂದು ರಾಗವನ್ನು ನುಡಿಸಿದನು. ಕರಡಿಗೆ ಆ ರಾಗ ಕೇಳಿಸುತ್ತಲೇ, ಅಷ್ಟು ಸುಸ್ತಾಗಿದ್ದರೂ ಕೂಡ ಕುಣಿಯತೊಡಗಿತು. ಸ್ವಲ್ಪ ಸಮಯದಲ್ಲಿ, ಕರಡಿ ಕುಣಿಯುವುದನ್ನು ನಿಲ್ಲಿಸಿ, "ಪಿಟೀಲು ನುಡಿಸುವ ಕಲೆ ಕಲಿಯಲು ಸುಲಭವೋ?" ಎಂದು ದರ್ಜಿಯವನನ್ನು ಕೇಳಿತು. "ಓಹೊ! ಅದು ಮಕ್ಕಳ ಆಟದ ಹಾಗೆ! ನೀನು ತಂತಿಗಳ ಮೇಲೆ ಎಡ ಕೈಬೆರಳುಗಳನ್ನು ಇಡಬೇಕು. ಬಲ ಕೈಬೆರಳುಗಳಲ್ಲಿ ನುಡಿಸುವ ಬಿಲ್ಲನ್ನು ಹಿಡಿಯಬೇಕು ಅಷ್ಟೆ" ಎಂದು ದರ್ಜಿಯವನು ಹೇಳಿದನು. "ಆಗ ಅದರಷ್ಟಕ್ಕೇ ಹಾಡು ಶುರು ಆಗುತ್ತೆ, ಸಂತೋಷ ಸಂತೋಷ, ಬಹು ಸಂತೋಷ ಆಹಾ - ಓಹೊ!" ಎಂದು ಮತ್ತೆ ಹೇಳಿದನು.


"ಓಹೊ! ಪಿಟೀಲು ನುಡಿಸುವುದು ಅಂದರೆ ಅಷ್ಟೇನಾ? ನಾನು ಅದನ್ನು ಕಲಿಯಬೇಕು. ಆಗ ನಾನು, ನನಗೆ ಬೇಕೆನಿಸಿದಾಗಲೆಲ್ಲಾ ಕುಣಿಯುತ್ತಿರಬಹುದು. ಏನು ಯೋಚಿಸುವೆ? ನನಗೆ ನುಡಿಸುವುದನ್ನು ಹೇಳಿಕೊಡುವೆಯಾ?" ಎಂದು ಕರಡಿ ದರ್ಜಿಯವನನ್ನು ಕೇಳಿತು.

"ನೀನು ಸಾಕಷ್ಟು ಜಾಣನಾಗಿದ್ದರೆ, ಹೇಳಿಕೊಡುತ್ತೇನೆ." ಅದಕ್ಕಿಂತ ಮೊದಲು ನಾನು ನಿನ್ನ ಕಾಲಿನ ಉಗುರುಗಳನ್ನು ನೋಡುತ್ತೇನೆ. ಅವು ಹೆದರಿಸುವಷ್ಟು ಉದ್ದವಾಗಿವೆ. ಸ್ವಲ್ಪ ಅವುಗಳನ್ನು ಕತ್ತರಿಸಬೇಕು" ಎಂದು ದರ್ಜಿಯವನು ಹೇಳಿದನು. ಅಲ್ಲೇ ಒಂದು ಮೂಲೆಯಲ್ಲಿ, ಬಡಗಿಯ ಒಂದು ಉಪಕರಣ ಇತ್ತು. ಅದರ ಮೇಲೆ ಕರಡಿ ತನ್ನ ಪಾದಗಳನ್ನು ಇಟ್ಟಿತು. ಆಗ ದರ್ಜಿಯವನು ಮೊಳೆಗಳಿಂದ ತಿರುಗಿಸಿ ಬಿಗಿ ಮಾಡಿದನು. "ಸ್ವಲ್ಪ ತಾಳು, ನಾನು ಕತ್ತರಿ ತರುವವರೆಗೂ ಇಲ್ಲೇ ಇರು" ಎಂದು ಕರಡಿಗೆ ಹೇಳಿದನು. ಕರಡಿ ಜೋರಾಗಿ ಹೂಂಕಸುರಿತ್ತಾ ಕಿರುಚತೊಡಗಿತು. ಅದನ್ನು ಅಲ್ಲೇ ಬಿಟ್ಟು, ತಾನು ಅಲ್ಲೇ ಮೂಲೆಯಲ್ಲಿದ್ದ ಹುಲ್ಲಿನ ಮೂಟೆಯ ಮೇಲೆ ಮಲಗಿದನು.

ಅದೇ ವೇಳೆಗೆ ರಾಜಕುಮಾರಿ, ದರ್ಜಿಯವನಿಂದ ತಾನು ತಪ್ಪಿಸಿಕೊಂಡೆನೆಂದು ತುಂಬ ಖುಷಿಪಡುತ್ತಿದ್ದಳು. ಕರಡಿಯ ಕಿರುಚಾಟವನ್ನು ಕೇಳಿಸಿಕೊಂಡಾಗ ದರ್ಜಿಯವನು ನಿಜವಾಗಲೂ ಅದಕ್ಕೆ ಬಲಿಯಾಗಿದ್ದಾನೆ ಎಂದು ತಿಳಿದಳು. ಬೆಳಗಾದ ಕೂಡಲೆ ಕರಡಿ ಇದ್ದ ಜಾಗಕ್ಕೆ ಹೋದಳು. ಅಲ್ಲಿ ಅವಳು ದರ್ಜಿಯವನು ನೀರೊಳಗಿನ ಮೀನಿನಂತೆ ಲವಲವಿಕೆಯಿಂದಿರುವುದನ್ನು ನೋಡಿದಳು. ಅವಳು ತಪ್ಪಿಸಿಕೊಳ್ಳುವ ಯೋಚನೆ ಮಾಡಿದಳು. ಆದರೆ ಆಗಲಿಲ್ಲ. ಯಾಕೆಂದರೆ, ಅವಳು ಎಲ್ಲರ ಎದುರಿಗೆ ಮದುವೆಯ ಪ್ರಮಾಣ ಮಾಡಿದ್ದಳು. ರಾಜ, ಅವಳ ತಂದೆ, ಒಂದು ರಥವನ್ನು ತರಲು ಆಜ್ಞೆ ಮಾಡಿದನು. ಅದರಲ್ಲಿ ರಾಜಕುಮಾರಿ ಮತ್ತು ದರ್ಜಿಯವನು ಕುಳಿತುಕೊಂಡು ಚರ್ಚ್‌ಗೆ ಹೋದರು. ಅಲ್ಲಿ ಮದುವೆ ಆದರು. ಅವರು ಆ ಕಡೆ ಹೋಗುತ್ತಿದ್ದಂತೆ ಅದನ್ನೆಲ್ಲ ನೋಡುತ್ತಿದ್ದ ದರ್ಜಿಯವನ ಹಿರಿಯ ಅಣ್ಣಂದಿರು, ತಮ್ಮನ ಅದೃಷ್ಟವನ್ನು ನೋಡಿ ಹೊಟ್ಟೆಕಿಚ್ಚುಪಟ್ಟರು. ನಂತರ ಅವರು ಲಾಯಕ್ಕೆ ಹೋಗಿ ಕರಡಿಯನ್ನು ಬಿಡಿಸಿದರು. ಅದು ವಧು-ವರರು ಕುಳಿತಿದ್ದ ರಥದ ಹಿಂದೆ ಓಡಿತು. ರಾಜಕುಮಾರಿ ಅದರ ಕೂಗಾಟವನ್ನು ಕೇಳಿಸಿಕೊಂಡು ತುಂಬ ಭಯಪಟ್ಟಳು. "ಅಯ್ಯೋ! ಕರಡಿ ನಮ್ಮ ಹಿಂದೆಯೇ ಬರುತ್ತಿದೆ. ಅದು ನಿನ್ನನ್ನು ಹಿಡಿದುಕೊಂಡು ಹೋಗುತ್ತದೆ" ಎಂದು ರಾಜಕುಮಾರಿ ಅಳುತ್ತಾ ಹೇಳಿದಳು. ದರ್ಜಿಯವನು ರಥದಲ್ಲೆ ತಲೆಕೆಳಗಾಗಿ ನಿಂತುಕೊಂಡನು. ಕರಡಿಗೆ ಕೂಗಿ ಹೇಳಿದನು, "ಈ ಉಪಕರಣವನ್ನು ನೋಡುತ್ತಿರುವೆಯಾ? ನೀನು ಹೊರಟು ಹೋಗದಿದ್ದರೆ, ಅದರ ರುಚಿ ನೋಡುವಿಯಂತೆ ತಾಳು!" ಎಂದು ಹೇಳಿದನು. ಕರಡಿ ಅವನ ಕತ್ತರಿಯಾಕಾರದಲ್ಲಿದ್ದ ಕಾಲುಗಳನ್ನು ನೋಡಿ ಹೆದರಿಕೊಂಡು ಹಿಂದಕ್ಕೆ ಓಡಿಹೋಯಿತು.

ನಂತರ ದರ್ಜಿಯವನು, ರಾಜಕುಮಾರಿಯ ಜೊತೆ ಚರ್ಚಿಗೆ ಹೋದನು. ಅಲ್ಲಿ ಅವಳನ್ನು ಮದುವೆ ಆದನು. ನಂತರ, ಅವರು ತೃಪ್ತಿಯಿಂದ ಬದುಕಿ ಬಾಳಿದರು.

೩೭. ಬ್ರೆಮೆನ್‌ನ ಸಂಗೀತಗಾರರು



ಒಂದೂರಿನಲ್ಲಿ ಒಬ್ಬ ಮನುಷ್ಯ ಇದ್ದನು. ಅವನ ಹತ್ತಿರ ಒಂದು ಕತ್ತೆ ಇತ್ತು. ಅವನಿಗೆ ಬಹಳ ನಿಷ್ಠೆಯಿಂದ ಅನೇಕ ವರ್ಷ ಸೇವೆ ಮಾಡಿತ್ತು. ಕ್ರಮೇಣ ಅದಕ್ಕೂ ವಯಸ್ಸಾಯಿತು. ಶಕ್ತಿ ಇಲ್ಲದ ಹಾಗೆ ಆಯಿತು. ಕೆಲಸ ಮಾಡುವುದು ಅದರಿಂದ ಆಗದ ಹಾಗೆ ಆಯಿತು. ಆದ್ದರಿಂದ ಕತ್ತೆಯ ಯಜಮಾನ ಅದನ್ನು ಎಷ್ಟಕ್ಕೆ ಮಾರಿದರೆ ಲಾಭ ಬಂದೀತು ಎಂದು ಯೋಚಿಸತೊಡಗಿದನು. ಕತ್ತೆಗೆ ತನ್ನ ಯಜಮಾನನ ಉಪಾಯ ತಿಳಿಯಿತು. ಅಲ್ಲಿದ್ದರೆ ತನಗೇನೂ ಒಳ್ಳೆಯದಾಗುವುದಿಲ್ಲವೆಂದು ತಿಳಿದು, ತನ್ನ ಅದೃಷ್ಟವನ್ನು ಹೀಯಾಳಿಸಿ ಕೊಂಡು ಬ್ರೆಮನ್ ಊರಿನ ದಾರಿ ಹಿಡಿಯಿತು. "ಅಲ್ಲಿ ನಾನು, ಆ ಊರಿನ ಮುಖ್ಯ ಸಂಗೀತಗಾರ ನಾಗಬಹುದು" ಎಂದು ತನ್ನಲ್ಲೆ ಯೋಚನೆ ಮಾಡಿತು. ಹೀಗೆ, ಕತ್ತೆ ಸ್ವಲ್ಪ ದೂರ ಹೋದ ಮೇಲೆ, ದಾರಿಯಲ್ಲೆ ಮಲಗಿಕೊಂಡಿದ್ದ ಒಂದು ಬೇಟೆ ನಾಯಿಯನ್ನು ನೋಡಿತು. ಅದು ತುಂಬ ಆಯಾಸದಿಂದ ಆಕಳಿಸುತ್ತಿತ್ತು. "ಏನು, ನಾಯಣ್ಣ ಯಾಕಷ್ಟು ದೊಡ್ಡದಾಗಿ ಆಕಳಿಸುತ್ತಾ ಇದ್ದೀಯಾ?" ಎಂದು ಕತ್ತೆ ಕೇಳಿತು.

"ಅಯ್ಯೊ! ಅದನ್ನೇನು ಕೇಳ್ತಿಯಪ್ಪ. ದಿನ, ದಿನಕ್ಕೂ ನಾನು ಮುದಿ ಆಗಿ, ದುರ್ಬಲನಾಗುತ್ತಿದ್ದೇನೆ. ಬೇಟೆಗೆ ಹೋಗಲು ಆಗುತ್ತಿಲ್ಲ. ಅದಕ್ಕಾಗಿ ನನ್ನ ಯಜಮಾನ, ನನ್ನನ್ನು ಸಾಯುವ ಹಾಗೆ ಹೊಡೆದ. ನಾನು ತಪ್ಪಿಸಿಕೊಂಡು ಓಡಿಬಂದೆ. ಈಗ ಮುಂದೇನು ಮಾಡಬೇಕು ಎಂದು ತಿಳಿಯುತ್ತಿಲ್ಲ. ಹೊಟ್ಟೆಗಾಗಿ ಪರದಾಡಬೇಕಾಗಿದೆ" ಎಂದು ನಾಯಿ ಉತ್ತರಿಸಿತು.

"ನನ್ನ ಸ್ಥಿತಿಯೂ ನಿನ್ನಂತೆಯೆ ಆಗಿದೆ. ನಾನು ಬ್ರೆಮೆನ್ ಊರಿಗೆ ಹೋಗುತ್ತಿದ್ದೇನೆ. ಅಲ್ಲಿ ಮುಖ್ಯ ಸಂಗೀತಗಾರನಾಗಬೇಕು ಎಂದು ಯೋಚಿಸುತ್ತಿದ್ದೇನೆ. ನೀನು ನನ್ನ ಜೊತೆ ಬಂದು, ಸಂಗೀತಗಾರನಾಗು. ನಾನು ಗಿಟಾರ್ ನುಡಿಸಿದರೆ, ನೀನು ಲೋಹದ ತಬಲ ನುಡಿಸು" ಎಂದು ಕತ್ತೆ ಹೇಳಿತು. ನಾಯಿ ಅದರ ಮಾತಿಗೆ ಒಪ್ಪಿಕೊಂಡಿತು. ಹೀಗೆ ಇಬ್ಬರೂ ಹೊರಟರು. ದಾರಿಯ ಮಧ್ಯೆ ಅವರು ಒಂದು ಬೆಕ್ಕನ್ನು ನೋಡಿದರು. ಅದು ಮೂರು ದಿನ ಮಳೆಯಲ್ಲಿ ನೆನೆದವರ ಹಾಗೆ ಮುಖ ಇಳಿ ಬಿಟ್ಟುಕೊಂಡಿತ್ತು. "ಓ,

ನೀನು ಗಡ್ಡ ಹೆರೆಯುವವನೆ, ನಿನ್ನ ಸಿಟ್ಟಿಗೆ ಕಾರಣ ಏನು?" ಎಂದು ಕತ್ತೆ ಕೇಳಿತು. "ನನ್ನ ಕುತ್ತಿಗೆ ಚಿವುಟಿದ್ದಾರೆ, ನೋವಿರುವವರು ಯಾರು ಸಂತೋಷವಾಗಿರುತ್ತಾರೆ? ಯಾಕೆಂದರೆ, ನಾನು ಮುದಕನಾಗಿ ನನ್ನ ಹಲ್ಲುಗಳು ಬಿದ್ದಿವೆ. ಇಲಿಗಳನ್ನು ಹಿಡಿಯಲು ಆಗದೆ, ಬರಿ ಬೆಂಕಿಯ ಹತ್ತಿರ ಕುಳಿತುಕೊಳ್ಳುತ್ತೇನೆ, ಆದ್ದರಿಂದ ನನ್ನ ಯಜಮಾನ ನನ್ನನ್ನು ನೀರಿನಲ್ಲಿ ಮುಳುಗಿಸಬೇಕು ಎಂದು ಹೇಳಿದನು. ಅದಕ್ಕಾಗಿ ಓಡಿ ಬಂದೆ. ನಾನು ಈಗ ಏನು ಮಾಡಬೇಕು ಎಂದು ಯಾರಾದರೂ ಒಳ್ಳೆಯ ಸಲಹೆ ಕೊಟ್ಟರೆ ತುಂಬ ಚೆನ್ನಾಗಿರುತ್ತದೆ" ಎಂದು ಬೆಕ್ಕು ಉತ್ತರಿಸಿತು. "ಹಾಗಾದರೆ ನಮ್ಮ ಜೊತೆ ಬ್ರೆಮೆನ್‌ಗೆ ಬಾ, ನಿನಗೆ ರಾತ್ರಿ ಹೊತ್ತು ಹೇಳುವ ಸಂಗೀತ ಬರುತ್ತೆ ಅಂತ ಆದರೆ ನೀನು ಕೂಡ ನಮ್ಮ ಜೊತೆ ಸೇರು" ಎಂದು ಕತ್ತೆ ಹೇಳಿತು. ಬೆಕ್ಕು ತನ್ನ ಒಪ್ಪಿಗೆಯನ್ನು ನೀಡಿ ಅವರ ಜೊತೆ ಹೊರಟಿತು. ಆ ಮೂವರು ಒಂದು ಹೊಲದ ಮೈದಾನ ಪ್ರದೇಶಕ್ಕೆ ಬಂದರು. ಅಲ್ಲಿ ಒಂದು ಕಣಜವಿತ್ತು. ಅದರ ಬಾಗಿಲ ಮೇಲೆ ಒಂದು ಹುಂಜ ಜೋರಾಗಿ ಕೂಗುತ್ತಿತ್ತು."ನೀನು ನಿನ್ನ ಮೂಳೆ ಮುರಿದುಹೋಗುವ ಹಾಗೆ ಯಾಕೆ ಕೂಗುತ್ತಿರುವೆ?" ಎಂದು ಕತ್ತೆ ಕೇಳಿತು.

"ಹವಾಮಾನದ ಭವಿಷ್ಯವನ್ನು ನಾನು ಹೀಗೆ ಹೇಳೋದು. ಆದರೆ ಏನು ಮಾಡಲಿ, ಈ ಭಾನುವಾರ ದೊಡ್ಡ ಅತಿಥಿಗಳು ಮನೆಗೆ ಬರುತ್ತಾರೆ. ಮನೆಯ ಒಡತಿಗೆ ಕರುಣೆ ಇಲ್ಲ. ನನ್ನನ್ನು ಕೊಂದು ಅತಿಥಿಗಳಿಗೆ ಸಾರು ಮಾಡು ಎಂದು ಅಡಿಗೆಯವಳಿಗೆ ಹೇಳಿದಳು. ಈ ದಿನ ಸಾಯಂಕಾಲ ನನ್ನ ತಲೆ ಕತ್ತರಿಸುತ್ತಾರೆ. ಆದ್ದರಿಂದ ಮತ್ತೆ ಕೂಗಲು ಆಗುವುದಿಲ್ಲವೆಂದು ಈಗಲೆ ಕೂಗುತ್ತಿದ್ದೇನೆ" ಎಂದು ಹುಂಜ ಉತ್ತರಿಸಿತು. "ಅಯ್ಯೊ! ನೀನು, ಕೆಂಪು ಕಿರೀಟದವನೆ, ನಮ್ಮ ಜೊತೆ ಬಂದು ಬಿಡು. ನಾವು ಬ್ರೆಮೆನ್‌ಗೆ ಹೋಗುತ್ತಿದ್ದೇವೆ. ಸಾಯುವುದಕ್ಕಿಂತ ಅಲ್ಲಿ ಬದುಕಲಿಕ್ಕೆ ಏನಾದರೂ ಹುಡುಕೋಣ. ನಿನಗೆ ಇಂಪಾದ ಧ್ವನಿ ಇದೆ. ನಾವೆಲ್ಲರೂ ಒಟ್ಟಿಗೆ ಸೇರಿ ಸಂಗೀತಗೋಷ್ಠಿ ನಡೆಸಿದರೆ ತುಂಬ ಚೆನ್ನಾಗಿರುತ್ತದೆ" ಎಂದು ಕತ್ತೆ ಹುಂಜವನ್ನು ಕರೆಯಿತು.

ಕತ್ತೆಯ ಉಪಾಯವನ್ನು ಹುಂಜ ಒಪ್ಪಿಕೊಂಡಿತು. ಹೀಗೆ ಆ ನಾಲ್ವರು ಒಟ್ಟಿಗೆ ಪ್ರಯಾಣ ಮಾಡಿದರು. ಅವರು ಒಂದೇ ದಿನದಲ್ಲಿ ಬ್ರೆಮೆನ್ ಊರನ್ನು ತಲುಪಲು ಸಾಧ್ಯವಿರಲಿಲ್ಲ. ಸಾಯಂಕಾಲದ ಹೊತ್ತಿಗೆ ಅವರು ಒಂದು ಕಾಡಿಗೆ ಬಂದರು. ಅಲ್ಲೆ ಅವರು ರಾತ್ರಿಯನ್ನು ಕಳೆಯಬೇಕಾಗಿತ್ತು. ಕತ್ತೆ ಮತ್ತು ನಾಯಿ ಒಂದು ಮರದ ಕೆಳಗೆ ಮಲಗಿಕೊಂಡವು. ಬೆಕ್ಕು ಮತ್ತು ಹುಂಜ ಮರದ ಕೊಂಬೆಗಳನ್ನು ಏರಿದವು. ಹುಂಜ ಕೊಂಬೆಯ ತುದಿಗೆ ಹಾರಿತು. ಅಲ್ಲಿ ತಾನು ಸುರಕ್ಷಿತ ಎಂದು ಯೋಚಿಸಿತು. ತಾನು ಮಲಗುವ ಮೊದಲು ನಾಲ್ಕು ದಿಕ್ಕುಗಳ ಕಡೆ ನೋಡಿತು. ದೂರದಲ್ಲಿ ಮಿನುಗುವ ದೀಪ ಕಾಣಿಸಿತು. ತನ್ನ ಸ್ನೇಹಿತರನ್ನು ಕೂಗಿ ಕರೆದು, ಹತ್ತಿರದಲ್ಲಿ ಎಲ್ಲೋ ಒಂದು ಮನೆ ಇದೆ ಎಂದು ಹೇಳಿತು. ತನಗೆ ಅಲ್ಲಿ ಬೆಳಕು ಕಂಡಿತು ಎಂದಿತು. ಆಗ ಕತ್ತೆ "ಹಾಗಾದರೆ ನಾವು ಎದ್ದು ಇನ್ನು ಮುಂದಕ್ಕೆ ಹೋಗೋಣ. ಇಲ್ಲಿ ಮಲಗಲು ಹುಲ್ಲು ಚೆನ್ನಾಗಿಲ್ಲ" ಎಂದು ಹೇಳಿತು. ಆಗ ನಾಯಿ "ಹೌದು, ಈಗ ಒಂದೆರಡು ಮಾಂಸದ ತುಣುಕುಗಳು ಸಿಕ್ಕರೆ ನಿಜಕ್ಕೂ ಚೆನ್ನಾಗಿರುತ್ತದೆ" ಎಂದು ಕತ್ತೆಯ ಮಾತಿಗೆ ತನ್ನ ಮಾತು ಸೇರಿಸಿತು. ಅವರೆಲ್ಲ ಬೆಳಕು ಬಂದ ಜಾಗದ ಕಡೆ ಹೊರಟರು. ಅವರು ಮುಂದುವರೆದಂತೆ ಬೆಳಕು ಪ್ರಕಾಶಮಾನವಾಗಿ ಕಾಣತೊಡಗಿತು. ಕೊನೆಗೆ ಅವರು ಹೆಚ್ಚು ಬೆಳಕಿದ್ದ ಕಳ್ಳರ ಕುಟೀರಕ್ಕೆ ಬಂದರು. ಕತ್ತೆ ಎಲ್ಲರಿಗಿಂತ ಎತ್ತರವಾಗಿದ್ದುದರಿಂದ ಕಿಟಕಿಯ ಹತ್ತಿರ

ಹೋಗಿ ಒಳಗೆ ಇಣುಕಿತು. "ಬೂದಿಬಣ್ಣದ ಕುದುರೆಯಂತಿರುವ ಕತ್ತೆಣ್ಣ ನೀನು ಏನು ನೋಡುತ್ತಿರುವೆ?" ಎಂದು ಬೆಕ್ಕು ಕೇಳಿತು. ಅದಕ್ಕೆ ಕತ್ತೆ "ರಸಭರಿತ ಮಾಂಸದ ಅಡುಗೆ ಮತ್ತು ಮದ್ಯವನ್ನಿಟ್ಟಿರುವ ಮೇಜು ಕಾಣುತ್ತಿದೆ. ಅದರ ಸುತ್ತಲು ಕಳ್ಳರು ಕುಳಿತುಕೊಂಡು ತಿನ್ನುತ್ತಾ ಸಂತೋಷಪಡುತ್ತಿದ್ದಾರೆ" ಎಂದು ಉತ್ತರಿಸಿತು.

"ಅವು, ನಮಗೆ ಬೇಕಾದ ವಸ್ತುಗಳೇ ಆಗಿವೆ" ಎಂದು ಹುಂಜ ಹೇಳಿತು. "ಹೌದು, ಹೌದು, ನಾವು ಅಲ್ಲಿದ್ದರೆ ಚೆನ್ನಾಗಿತ್ತು" ಎಂದು ಕತ್ತೆ ಉತ್ತರಿಸಿತು. ಆ ಕಳ್ಳರನ್ನು ಅಲ್ಲಿಂದ ಹೇಗೆ ಹೊರಗಟ್ಟಬೇಕು ಎಂದು ಉಪಾಯ ಮಾಡತೊಡಗಿದವು. ಕೊನೆಗೆ ಒಂದು ದಾರಿ ಹೊಳೆಯಿತು. ಕತ್ತೆ ತನ್ನ ಮುಂಗಾಲುಗಳನ್ನು ಕಿಟಕಿಯ ಅಂಚುಕಟ್ಟೆಗೆ ಇಟ್ಟುಕೊಂಡು ನಿಂತಿತು. ಬೇಟೆನಾಯಿ ಅದರ ಬೆನ್ನ ಮೇಲೆ ಹಾರಿ ಕುಳಿತು ಕೊಂಡಿತು. ಬೆಕ್ಕು ನಾಯಿಯ ಮೇಲೆ ಹತ್ತಿ ಕುಳಿತುಕೊಂಡಿತು. ಕೊನೆಗೆ ಹುಂಜ ಬೆಕ್ಕಿನ ತಲೆಯನ್ನು ಹಿಡಿದುಕೊಂಡು ಕುಳಿತಿತು. ಹೀಗೆ ಒಬ್ಬರ ಮೇಲೆ ಒಬ್ಬರು ಸರಿಯಾಗಿ ಕುಳಿತ ತಕ್ಷಣ ಒಟ್ಟಿಗೆ ತಮ್ಮ ಸಂಗೀತ ಶುರು ಮಾಡಿದವು. ಕತ್ತೆ ಕಿರುಚಿತು, ನಾಯಿ ಬೊಗಳಿತು, ಬೆಕ್ಕು ಮ್ಯಾಂ ಎಂದಿತು, ಹುಂಜ ಕ್ಕೊ, ಕ್ಕೊ, ಕ್ಕೊ ಎಂದು ಕೂಗಿತು. ಅವುಗಳ ಕೂಗು ಭಯಂಕರವಾಗಿತ್ತು. ಕಿಟಕಿಯ ಚೌಕಟ್ಟು ನಡುಗಿದಂತೆ ಆಯಿತು ಆ ವಿಚಿತ್ರ ಕೂಗುಗಳಿಂದ ಕಳ್ಳರು ಹೆದರಿ ನಡುಗಿದರು. ಕೆಟ್ಟ ದೆವ್ವಗಳು ಬಂದಿರಬೇಕೆಂದು ಯೋಚಿಸಿ ಗಡಗಡ ನಡುಗುತ್ತಾ ಕಾಡಿನೊಳಗೆ ಓಡಿದರು. ಆಗ ಆ ನಾಲ್ಕು ಸ್ನೇಹಿತರು ಒಳಗೆ ಹೋಗಿ, ಮೇಜಿನ ಮೇಲಿದ್ದುದನ್ನು ಗಬಗಬನೆ ತಿಂದವು. ಆರು ವಾರಗಳಿಂದ ಉಪವಾಸ ಮಾಡಿದವರಂತೆ ಬೇಗನೆ ತಿಂದು ಮುಗಿಸಿದವು.

ಅವರು ತಿಂದು ಮುಗಿಸಿದ ಮೇಲೆ, ತಮಗೆ ಸರಿಯಾದ ಮಲಗುವ ಜಾಗಗಳನ್ನು ಹುಡುಕಿಕೊಂಡು ದೀಪ ಆರಿಸಿದವು. ಕತ್ತೆ ಹುಲ್ಲಿನ ಮೇಲೆ ಮಲಗಿತು. ನಾಯಿ ಬಾಗಿಲ ಹತ್ತಿರ, ಬೆಕ್ಕು ಬೆಚ್ಚನೆಯ ಬೂದಿಯ ಮೇಲೆ, ಹುಂಜ ಒಂದು ಸಲಾಕೆಯ ಮೇಲೆ ಹಾರಿ ಕುಳಿತುಕೊಂಡು ನಿದ್ದೆ ಮಾಡಿದವು. ಅವುಗಳು ತುಂಬ ದೂರ ನಡೆದುಕೊಂಡು ಬಂದಿದ್ದರಿಂದ ಆಯಾಸವಾಗಿತ್ತು. ಮಲಗಿದ ತಕ್ಷಣವೆ ನಿದ್ದೆ ಮಾಡಿದವು.

ಮಧ್ಯರಾತ್ರಿಯ ಹೊತ್ತಿಗೆ ತಮ್ಮ ಮನೆಯಲ್ಲಿ ಬೆಳಕು ಇಲ್ಲದ್ದನ್ನು ಕಳ್ಳರು ಗಮನಿಸಿದರು. ಎಲ್ಲ ನಿಶ್ಶಬ್ದವಾಗಿತ್ತು. ಆಗ ಕಳ್ಳರ ನಾಯಕ, "ನಾವು ಅಷ್ಟೊಂದು ಹೆದರಿಕೊಂಡು ಓಡಿ ಬರಬೇಕಾಗಿರಲಿಲ್ಲ" ಎಂದು ಹೇಳುತ್ತ ಒಬ್ಬ ಕಳ್ಳನನ್ನು ಕರೆದು, ಒಳಗೆ ಹೋಗಿ ಎಲವೂ ಸರಿಯಾಗಿದೆಯೊ ನೋಡಿಕೊಂಡು ಬಾ" ಎಂದು ಕಳಿಸಿದನು. ಆ ಕಳ್ಳ ಒಳಗೆ ಹೋಗಿ, ದೀಪ ಹಚ್ಚಲು ಒಲೆಯ ಹತ್ತಿರ ಹೋದನು, ಅಲ್ಲಿ ಬೆಕ್ಕಿನ ಕಣ್ಣುಗಳು ಆ ಗಾಢ ರಾತ್ರಿಯಲ್ಲಿ ಪಳಪಳನೆ ಹೊಳೆಯುತ್ತಿದ್ದವು. ಅವುಗಳನ್ನೆ, ಉರಿಯುತ್ತಿರುವ ಬೆಂಕಿಯ ಕೆಂಡಗಳಿರಬೇಕು ಎಂದು ತಿಳಿದನು. ಅವುಗಳಿಗೆ ಕಡ್ಡಿ ಹಿಡಿದು ಬೆಂಕಿ ಹತ್ತಿಕೊಳ್ಳುತ್ತೆ ಅಂದುಕೊಂಡನು. ಬೆಕ್ಕಿಗೆ ಅವನ ನಡತೆ ತಮಾಷೆಯಂತೆ ಕಂಡಿತು. ಅದು ಅವನ ಮುಖದ ಮೇಲೆ ಹಾರಿ, ಪರ ಪರ ಎಂದು ಗೆಬರಿತು. ಅವನು ಹೆದರಿಕೊಂಡು ಹಿಂದಿನ ಬಾಗಿಲ ಕಡೆ ಹೋದನು. ಅಲ್ಲೆ ಮಲಗಿದ್ದ ನಾಯಿ ಅವನ ಕಾಲು ಕಚ್ಚಿತು. ಅವನು ಕುಂಟಿಕೊಂಡು ಕತ್ತೆ ಮಲಗಿದ್ದಲ್ಲಿಗೆ ಬಂದನು. ಅದು ತನ್ನ

ಹಿಂಗಾಲುಗಳಿಂದ ಚೆನ್ನಾಗಿ ಒದೆಯಿತು. ಅವನ ಕಿರುಚಾಟದಿಂದ ಎಚ್ಚರಗೊಂಡ ಹುಂಜ ಕುಳಿತಲ್ಲೆ ಕ್ಕೊ, ಕ್ಕೊ, ಕ್ಕೊ ಎಂದು ಕೂಗಿಕೊಂಡಿತು.

ಕಳ್ಳ, ಭಯದಿಂದ ಒಂದೇ ನೆಗೆತದಲ್ಲಿ ತನ್ನ ನಾಯಕನ ಹತ್ತಿರಕ್ಕೆ ಹೋದನು. 'ಅಯ್ಯೋ ಸ್ವಾಮಿ, ಭಯಂಕರ ಮಾಟಗಾತಿ ಅಲ್ಲಿಗೆ ಬಂದಿದ್ದಾಳೆ. ತನ್ನ ಉದ್ದ ಉಗುರುಗಳಿಂದ ನನ್ನ ಮುಖ ಪರಚಿದಳು. ಬಾಗಿಲ ಹಿಂದೆ ಒಬ್ಬ ಮನುಷ್ಯ ಚಾಕು ಹಿಡಿದುಕೊಂಡು ನಿಂತಿದ್ದಾನೆ. ನನ್ನ ಕಾಲನ್ನು ಚಾಕುವಿನಿಂದ ಕೆತ್ತಿದ್ದನು. ಅಂಗಳದಲ್ಲಿ ಕಪ್ಪನೆ ರಾಕ್ಷಸನಿದ್ದಾನೆ, ತನ್ನ ಗದೆಯಿಂದ ನನ್ನನ್ನು ಚಚ್ಚಿದನು. ಮಾಡಿನ ಮೇಲೆ ಒಬ್ಬ ನ್ಯಾಯಾಧೀಶನಿದ್ದಾನೆ. "ಆ ಕಳ್ಳನನ್ನು ಮೇಲೆ ಕಳಿಸು" ಎಂದು ಕೂಗಿದನು. ಆದ್ದರಿಂದ ನಾನು ಎಷ್ಟು ವೇಗವಾಗಿ ಓಡಲು ಸಾಧ್ಯವೊ ಅಷ್ಟು ವೇಗವಾಗಿ ಓಡಿಕೊಂಡು ಬಂದೆ" ಎಂದು ಕಳ್ಳ ತನ್ನ ನಾಯಕನಿಗೆ ಹೇಳಿದನು.

ಅಷ್ಟರ ಮೇಲೆ ಕಳ್ಳರು ತಮ್ಮ ಮನೆಯ ಹತ್ತಿರಕ್ಕೆ ಹೋಗುವ ಧೈರ್ಯ ಮಾಡಲಿಲ್ಲ. ಅದರಿಂದ ಆ ನಾಲ್ಕು ಬ್ರೆಮೆನ್ ಸಂಗೀತಗಾರರಿಗೆ ತುಂಬ ಒಳ್ಳೆಯದಾಯಿತು. ಅವುಗಳು ಆ ಜಾಗ ಬಿಟ್ಟು ಹೋಗದೆ ಅಲ್ಲೇ ಉಳಿದವು. ಈಗಲೂ ಅವುಗಳು ಅಲ್ಲೆ ಇರಬೇಕು, ಬೇಕಾದರೆ ಹೋಗಿ ನೋಡೋಣ.

೩೮. ಸಮಾಧಿ-ದಿಬ್ಬ

ಒಂದಾನೊಂದು ಕಾಲದಲ್ಲಿ ಒಬ್ಬ ಶ್ರೀಮಂತ ರೈತನಿದ್ದನು. ಅವನು ಒಂದು ದಿನ ತನ್ನ ಹೊಲ ತೋಟಗಳನ್ನು ನೋಡುತ್ತಾ ನಿಂತುಕೊಂಡನು. ತೆನೆಗಳು ಕಾಳು ತುಂಬಿ ಬಗ್ಗಿಕೊಂಡು ನಿಂತಿದ್ದವು. ಮರಗಳಲ್ಲಿ ಹಣ್ಣುಗಳು ಜೋತಾಡುತ್ತಿದ್ದವು. ಹಿಂದಿನ ವರ್ಷದ ಫಸಲು ಇನ್ನೂ ಕಣಜದಲ್ಲಿ ಹಾಗೇ ಇತ್ತು. ಅದರಲ್ಲಿ ಮತ್ತೆ ಕಾಳು ಹಾಕಲು ಜಾಗವಿರಲಿಲ್ಲ. ರೈತ ಮುಂದೆ ಹೋಗಿ ತನ್ನ ಕುದುರೆ ಲಾಯದೊಳಗೆ ಇಣುಕಿದನು. ಅಲ್ಲಿ ದಷ್ಟಪುಷ್ಟವಾದ ಎತ್ತು, ಹಸು ಮತ್ತು ಚುರುಕಾಗಿರುವ ಕುದುರೆಗಳನ್ನು ನೋಡಿದನು. ಕೊನೆಗೆ, ಅವನು ತನ್ನ ಅಡಿಗೆ ಮನೆ ಮತ್ತು ನಡುಮನೆಗೆ ಹೋಗಿ ನೋಡಿದನು. ಅಲ್ಲಿ ಕಬ್ಬಿಣದ ತಿಜೋರಿಗಳಲ್ಲಿ ಬಂಗಾರ ತುಂಬಿತ್ತು. ಅವನು ತನ್ನ ಶ್ರೀಮಂತಿಕೆಯ ಬಗ್ಗೆ ಯೋಚನೆಯಲ್ಲಿ ಮುಳುಗಿದ್ದಾಗ, ಅವನ ಹತ್ತಿರದಲ್ಲಿ ಬಾಗಿಲು ಬಡಿದ ಶಬ್ದವಾಯಿತು. ಅದು ಬಾಗಿಲ ಶಬ್ದವಲ್ಲ, ಅವನ ಹೃದಯದ ಬಾಗಿಲನ್ನು ಬಡಿದ ಶಬ್ದವಾಗಿತ್ತು. ಅವನು ಹಾಗೇ ಆಲಿಸಿದನು. ಆಗ ಒಂದು ಧ್ವನಿ ಅವನಿಗೆ, "ನಿನ್ನ ಶ್ರೀಮಂತಿಕೆಯಿಂದ ಒಳ್ಳೆಯದನ್ನು ಮಾಡಿರುವೆಯಾ? ಬಡವರ ಕಷ್ಟದ ಕಡೆ ಗಮನಕೊಟ್ಟಿರುವೆಯಾ? ಹಸಿದವರೊಂದಿಗೆ ನಿನ್ನ ಊಟ ಹಂಚಿಕೊಂಡೆಯಾ? ನಿನ್ನಲ್ಲಿರುವುದರಿಂದ ನೀನು ತೃಪ್ತನಾಗಿರುವೆಯಾ? ಅಥವಾ ಇನ್ನೂ ಬೇಕು ಅಂತ ಆಸೆ ಪಡುತ್ತಿರುವೆಯಾ?" ಎಂದು ಕೇಳಿತು. ಆಗ ಅವನ ಹೃದಯ ತಡಮಾಡದೆ, "ನಾನು ಕಠಿಣನು, ನಿರ್ದಯೆಯಿಂದ, ಎಲ್ಲರನ್ನೂ ಕಾಣುತ್ತಿದ್ದೆನು. ನಾನು ಯಾರಿಗೂ ಒಳ್ಳೆಯದನ್ನು ಮಾಡಿಲ್ಲ, ಬಡ ಭಿಕ್ಷುಕ, ಮನೆ ಬಾಗಿಲಿಗೆ ಬಂದಾಗ ಮುಖ ತಿರುಗಿಸುತ್ತಿದ್ದೆನು, ಒಬ್ಬ ದೇವರನ್ನೂ ಕೂಡ ನಾನು ಪೂಜಿಸಿಲ್ಲ. ನನ್ನ ಸಂಪತ್ತನ್ನು ಹೆಚ್ಚಿಸಬೇಕೆಂದು ಯಾವಾಗಲೂ ಯೋಚನೆ



ಮಾಡುತ್ತಿದ್ದೆನು. ಸ್ವರ್ಗದವರೆಗೂ ನನ್ನ ಸಂಪತ್ತು ಹರಡಬೇಕೆಂದು ಯೋಚಿಸುತ್ತಿದ್ದೆನು, ಅಷ್ಟಾದರೂ ನನಗೆ ತೃಪ್ತಿ ಇರಲಿಲ್ಲ" ಎಂದು ಉತ್ತರಿಸಿತು. ಆ ಉತ್ತರಗಳು ಅವನ ಮನಸ್ಸಿನಲ್ಲಿ ಹಾದು ಹೋದ ತಕ್ಷಣ, ಅವನಿಗೆ ಭಯಂಕರ ಹೆದರಿಕೆ ಆಯಿತು. ಅವನ ಮೊಣಕಾಲುಗಳಲ್ಲಿ ನಡುಕ ಹುಟ್ಟಿ ಅಲ್ಲೆ ಕುಳಿತನು. ಆಗ ಅವನಿಗೆ ಎರಡನೇ ಬಡಿತ ಕೇಳಿಸಿತು. ಆದರೆ ಆ ಬಡಿತ ಅವನ ಹೃದಯದ್ದಾಗಿರದೆ ಬಾಗಿಲು ಬಡಿದ ಶಬ್ದವಾಗಿತ್ತು. ಅವನ ನೆರೆಮನೆಯವನು ಬಂದಿದ್ದನು. ಅವನಿಗೆ ಅನೇಕ ಮಕ್ಕಳಿದ್ದರು. ಆ ಎಲ್ಲ ಮಕ್ಕಳ ಹಸಿದ ಬಾಯಿಗೆ ಊಟ ಹಾಕಲು ಅವನಿಂದ ಆಗುತ್ತಿರಲಿಲ್ಲ. ಹೀಗಾಗಿ ಅವನು ಆ ಶ್ರೀಮಂತನ ಬಗ್ಗೆ ಯೋಚನೆ ಮಾಡಿಕೊಂಡು ಬಂದಿದ್ದನು. "ನನ್ನ ನೆರೆಯವನು ಶ್ರೀಮಂತ. ಆದರೆ ಅವನು ತುಂಬ ಜಿಪುಣ, ಅವನು ನನಗೆ ಸಹಾಯ ಮಾಡುತ್ತಾನೆ ಎಂಬ ನಂಬಿಕೆ ಇಲ್ಲ. ಆದರೆ ನನ್ನ ಮಕ್ಕಳು ಹಸಿವಿನಿಂದ ಕಂಗಾಲಾಗಿವೆ. ಅವರಿಗಾಗಿ ಒಂದು ಪ್ರಯತ್ನ ಮಾಡುತ್ತೇನೆ" ಎಂದು ಆ ಬಡವ ತನ್ನಲ್ಲೆ ಯೋಚಿಸಿದನು. ಶ್ರೀಮಂತ, ಬಾಗಿಲು ತೆಗೆದನು. ಆಗ ಬಡವ, "ನಿಮಗೆ, ಬಡವರಿಗೆ ಕೊಟ್ಟು ಅಭ್ಯಾಸವಿಲ್ಲವೆಂದು ನನಗೆ ಚೆನ್ನಾಗಿ ಗೊತ್ತು. ಆದರೆ ನೀರೊಳಗೆ ಮುಳುಗಿರುವಂತೆ ನನ್ನ ಪರಿಸ್ಥಿತಿ ಆಗಿದೆ. ನನ್ನ ಮಕ್ಕಳು ಹಸಿದುಕೊಂಡಿವೆ. ದಯವಿಟ್ಟು ನಾಲ್ಕುಸೇರು ಹಿಟ್ಟುಕೊಡಿ" ಎಂದು ಕೇಳಿದನು.

ಆ ಶ್ರೀಮಂತ, ಬಡವನ ಕಡೆ ಸ್ವಲ್ಪ ಹೊತ್ತು ನೋಡಿದನು. ಮೊಟ್ಟಮೊದಲ ಬಾರಿಗೆ ಅವನಲ್ಲಿ ಕರುಣೆಯ ಬೆಳಕು ಮೂಡಿತು. ಅವನ ಸ್ವಾರ್ಥ ಮೆಲ್ಲಗೆ ಕರಗಿತು. "ನಾನು ನಿನಗೆ ನಾಲ್ಕು ಸೇರು ಕೊಡುವುದಿಲ್ಲ. ಅದರ ಬದಲು ಎಂಟು ಸೇರು ಹಿಟ್ಟನ್ನು ಒಂದು ಷರತ್ತಿನ ಮೇಲೆ ಕೊಡುತ್ತೇನೆ" ಎಂದು ಹೇಳಿದನು. "ಏನದು?" ಎಂದು ಬಡವ ಕೇಳಿದನು. "ನಾನು ಸತ್ತ ಮೇಲೆ, ನನ್ನ ಸಮಾಧಿಯನ್ನು ಮೂರು ದಿನ ಕಾಯಬೇಕು" ಎಂದು ಶ್ರೀಮಂತ ಹೇಳಿದನು. ಆ ಷರತ್ತು ಬಡವನಲ್ಲಿ ಒಳಗೊಳಗೆ ತುಂಬ ಅಸಮಾಧಾನವನ್ನು ತಂದಿತು. ಆದರೂ ತನ್ನ ಮಕ್ಕಳಿಗಾಗಿ ಅವನು ಒಪ್ಪಿಕೊಂಡನು. ಶ್ರೀಮಂತ ಹೇಳಿದ್ದಕ್ಕೆಲ್ಲ

ಒಪ್ಪಿಕೊಂಡು ಅವನು ಧಾನ್ಯವನ್ನು ಮನೆಗೆ ಒಯ್ದನು.

ಆದಾದ ಮೂರು ದಿನಕ್ಕೆ ಅವನು ಇದ್ದಕ್ಕಿದ್ದಂತೆ ಸತ್ತುಬಿದ್ದನು. ಅವನ ಕಾಯಿಲೆಯ ಕಾರಣ ಯಾರಿಗೂ ತಿಳಿಯಲಿಲ್ಲ. ಯಾರಿಗೂ ಅವನ ಸಾವಿನ ಬಗ್ಗೆ ಸಂಶಯಗಳು ಬರಲಿಲ್ಲ. ಅವನ ಶವವನ್ನು ಹೂತ ಮೇಲೆ ಬಡವ ತನ್ನ ಒಪ್ಪಂದವನ್ನು ನೆನಪು ಮಾಡಿಕೊಂಡನು. ಆ ಒಪ್ಪಂದವನ್ನು ಹೇಗಾದರೂ ಪೂರೈಸಬೇಕೆಂದು ಯೋಚಿಸಿದನು. ಯಾಕೆಂದರೆ, "ಆ ಮನುಷ್ಯ ನನ್ನ ಜೊತೆ ತುಂಬ ಅನುಕಂಪದಿಂದ ವರ್ತಿಸಿದನು. ಅವನು ಕೊಟ್ಟ ಕಾಳಿನಿಂದ ನನ್ನ ಮಕ್ಕಳ ಹಸಿವನ್ನು ಇಂಗಿಸಿದೆ. ಆದ್ದರಿಂದ ಅವನ ಆಸೆ ಪೂರೈಸಲೇಬೇಕು" ಎಂದು ತನ್ನಲ್ಲೆ ಅಂದುಕೊಂಡನು.

ರಾತ್ರಿ ಆಯಿತು. ರೈತ ಸ್ಮಶಾನಕ್ಕೆ ಹೋಗಿ ಒಂದು ಸಮಾಧಿ ದಿಬ್ಬದ ಮೇಲೆ ಕುಳಿತುಕೊಂಡನು. ಎಲ್ಲ ಕಡೆ ನಿಶ್ಶಬ್ದವಾಗಿತ್ತು. ದೂರ ಬೆಟ್ಟಗಳಲ್ಲಿ ಚಂದ್ರ ಆಗಾಗ ಇಣುಕಿ ಬೆಳಕು ಕೊಡುತ್ತಿದ್ದನು. ಆಗಾಗ ಗೂಬೆ ಕೆಟ್ಟದಾಗಿ ಕೂಗಿಕೊಂಡು ಹಾರುತ್ತಿತ್ತು. ಬೆಳಕು ಹರಿದು ಸೂರ್ಯ ಹುಟ್ಟಿದ ತಕ್ಷಣ ರೈತ ಚಿಂತೆಯಿಂದ ಹಿಂದಿರುಗಿದನು. ಅದೇ ರೀತಿ ಎರಡನೇ ರಾತ್ರಿಯೂ ಕಳೆಯಿತು. ಮೂರನೇ ರಾತ್ರಿ ಅವನಲ್ಲಿ ಏನೋ ವಿಚಿತ್ರವಾದ ಹೆದರಿಕೆ ಶುರು ಆಯಿತು. ಅವನ ಎದುರಿಗೆ ಏನೋ ನಿಂತುಕೊಂಡ ಹಾಗೆ ಕಾಣಿಸಿತು. ಅವನು ಅದನ್ನು ಗಮನಿಸಿ ನೋಡಿದನು. ಸ್ಮಶಾನದ ಗೋಡೆಯ ಮೇಲೆ ಒಬ್ಬ ಮನುಷ್ಯ ನಿಂತುಕೊಂಡಿರುವುದು ಕಾಣಿಸಿತು. ಆ ಮನುಷ್ಯನನ್ನು ಹಿಂದೆಂದೂ ನೋಡಿರಲಿಲ್ಲ. ಅವನು ಚಿಕ್ಕ ವಯಸ್ಸಿನವನಾಗಿರಲಿಲ್ಲ. ಮುಖದ ತುಂಬ ನಿರಿಗೆಗಳಿದ್ದವು. ಆದರೆ ಅವನ ಕಣ್ಣುಗಳು ಮಾತ್ರ ಪಳ ಪಳ ಹೊಳೆಯುತ್ತಿದ್ದವು. ಅವನು ದೊಡ್ಡ ಮತ್ತು ಉದ್ದವಾದ ನಿಲುವಂಗಿ ಹಾಕಿಕೊಂಡಿದ್ದನು. ಅವನ ಹಿಮ್ಮಡಿ ದಪ್ಪವಿದ್ದ ಬೂಟುಗಳು ಮಾತ್ರ ಕಾಣುತ್ತಿದ್ದವು. "ಇಲ್ಲಿ ಏನು ಹುಡುಕುತ್ತಿರುವೆ? ಒಬ್ಬನಿಗೇ ಸ್ಮಶಾನದಲ್ಲಿರಲು ಹೆದರಿಕೆ ಆಗುವುದಿಲ್ಲವಾ?" ಎಂದು ರೈತ ಕೇಳಿದನು.

"ನಾನು ಯಾವುದಕ್ಕೆ ಹೆದರುವುದಿಲ್ಲ ಮತ್ತು ಯಾವುದಕ್ಕೂ ಆಸೆ ಪಡುವುದಿಲ್ಲ. ನಾನು ಹುಡುಗನ ಹಾಗೆ, ನಡುಕ ಎಂದರೆ ಏನು ಎಂದು ತಿಳಿಯಲು ಪ್ರಯಾಣ ಮಾಡುತ್ತಿರುವೆನು. ಈ ಸಾಹಸ ಪ್ರಯಾಣ ಮಾಡಿ ಸಾಕಾಗಿ ಹೋಗಿದೆ. ಸುಸ್ತಾಗಿದೆ. ರಾಜಕುಮಾರಿಯನ್ನು ಮದುವೆ ಆಗಿ ಶ್ರೀಮಂತನಾಗಿದ್ದರೂ ತುಂಬ ಬಡವ ನಾನು. ನಾನು ಕೆಲಸದಿಂದ ತೆಗೆದು ಹಾಕಿರುವ ಸೈನಿಕ. ನನಗೆ ರಾತ್ರಿ ಉಳಿದುಕೊಳ್ಳಲು ಬೇರೆ ಯಾವ ಜಾಗವೂ ಇರದೇ ಇದ್ದುದರಿಂದ ಇಲ್ಲಿಗೆ ಬಂದಿದ್ದೇನೆ" ಎಂದು ಆ ಮನುಷ್ಯ ಉತ್ತರಿಸಿದನು.

"ನಿನಗೆ ಹೆದರಿಕೆ ಇಲ್ಲದಿದ್ದರೆ ನನ್ನ ಜೊತೆ ಇರು. ಈ ಹುಲ್ಲು ಬೆಳೆದ ಸಮಾಧಿಯನ್ನು ಕಾಯಲು ನನಗೆ ಸಹಾಯ ಮಾಡು" ಎಂದು ರೈತ ಕೇಳಿದನು. "ಕಾವಲು ಕಾಯುವುದು ಸೈನಿಕರ ಕೆಲಸದ ಒಂದು ಕರ್ತವ್ಯವಾಗಿದೆ. ಆದ್ದರಿಂದ ಇಲ್ಲಿ ಏನು ಸಿಕ್ಕರೂ, ಕೆಟ್ಟದ್ದೊ ಅಥವಾ ಒಳ್ಳೆಯದೊ ಇಬ್ಬರು ಸಮಾನವಾಗಿ ಹಂಚಿಕೊಳ್ಳೋಣ" ಎಂದು ಆ ಅಪರಿಚಿತ ಹೇಳಿದನು.

ಅವನ ಮಾತಿಗೆ ರೈತ ಒಪ್ಪಿಕೊಂಡನು. ಅವರಿಬ್ಬರೂ ಆ ಶ್ರೀಮಂತನ ಸಮಾಧಿಯ ಹತ್ತಿರ ಕುಳಿತುಕೊಂಡರು. ಮಧ್ಯರಾತ್ರಿಯವರೆಗೆ ಎಲ್ಲವೂ ಇದ್ದ ಹಾಗೆ ಇತ್ತು. ನಂತರ ಇದ್ದಕ್ಕಿದ್ದ ಹಾಗೆ ಏನೊ

ತುಂಡು ಮಾಡುವ ಶಬ್ದ ಕೇಳಿಸಿತು. ಆಗ ಒಂದು ದುಷ್ಟ ದೆವ್ವ ಅವರ ಮುಂದೆ ಪ್ರತ್ಯಕ್ಷವಾಯಿತು. "ಏಯ್, ಭಂಡುಕೋರರೆ ತೊಲಗಿ ಇಲ್ಲಿಂದ. ಈ ಸಮಾಧಿಯೊಳಗೆ ಮಲಗಿರುವ ಮನುಷ್ಯ ನನಗೆ ಸೇರಿದವನು. ಅವನನ್ನು ಹಿಡಿಯಲು ಬಂದಿರುವೆ. ನಿಮ್ಮ ಪಾಡಿಗೆ ನೀವು ಹೋಗದಿದ್ದರೆ ನಿಮ್ಮ ಕತ್ತುಗಳನ್ನು ಮುರಿಯುವೆ" ಎಂದು ಹೇಳಿತು ಆ ದೆವ್ವ. ಆಗ ಸೈನಿಕ "ನಾನು ನಿನಗೆ ಹೆದರಲು ನೀನೇನು ನನ್ನ ದಳಪತಿಯಲ್ಲ. ನಾನು ನಿನಗೆ ವಿಧೇಯನಾಗಿರಬೇಕಾಗಿಲ್ಲ. ಅಲ್ಲದೆ ಹೆದರುವುದನ್ನು ನಾನು ಕಲಿತೇ ಇಲ್ಲ. ನಿನ್ನ ಪಾಡಿಗೆ ಹೊರಟು ಹೋಗು, ನಾವು ಇಲ್ಲಿಯೇ ಇರುತ್ತೇವೆ" ಎಂದು ಉತ್ತರಿಸಿದನು.

ಸೈನಿಕನ ಮಾತುಗಳನ್ನು ಕೇಳಿ ಅವರಿಬ್ಬರನ್ನು ದುಡ್ಡು ಕೊಟ್ಟು ಸರಿಮಾಡಿಕೊಂಡರೆ ಚೆನ್ನಾಗಿರುತ್ತದೆ ಎಂದು ದೆವ್ವ ತನ್ನಲ್ಲೆ ಉಪಾಯ ಮಾಡಿತು. ತನ್ನ ಧ್ವನಿಯನ್ನು ಮೃದು ಮಾಡಿಕೊಂಡು, ಅವರಿಗೆ ತಾನು ಒಂದು ಚೀಲದ ತುಂಬ ಬಂಗಾರದ ನಾಣ್ಯಗಳನ್ನು ಕೊಟ್ಟರೆ ಅವರು ಹೋಗುತ್ತಾರೊ ಅಥವಾ ಇಲ್ಲವೊ ಎಂದು ವಿಚಾರಿಸಿತು.

"ನಾವು ಹೋಗುವುದು ಬಿಡುವುದು ನಮಗೆ ಸೇರಿದ್ದು. ಆದರೆ ನೀನು ಕೊಡುವ ಒಂದು ಚೀಲ ಬಂಗಾರದಿಂದ ನಮಗೇನು ತೃಪ್ತಿಯಿಲ್ಲ. ಆದರೂ ನನ್ನ ಜಾಕ್‌ಬೂಟಿನ ತುಂಬ ಬಂಗಾರದ ನಾಣ್ಯಗಳನ್ನು ಕೊಟ್ಟರೆ ನಿನಗೆ ಈ ಜಾಗ ಬಿಟ್ಟು ಹೋಗುತ್ತೇವೆ" ಎಂದು ಸೈನಿಕ ಹೇಳಿದನು.

"ನನ್ನ ಹತ್ತಿರ ಈಗ ಅಷ್ಟು ದುಡ್ಡಿಲ್ಲ. ಆದರೂ ತರುತ್ತೇನೆ. ಪಕ್ಕದ ಊರಿನಲ್ಲಿ ಒಬ್ಬ ಬ್ಯಾಂಕಿನವನು ವಾಸವಾಗಿದ್ದಾನೆ. ಅವನು ನನ್ನ ಒಳ್ಳೆಯ ಸ್ನೇಹಿತ ನಾನು ಕೇಳಿದಷ್ಟನ್ನು ಕೂಡಲೆ ಕೊಡುತ್ತಾನೆ" ಎಂದು ದೆವ್ವ ಹೇಳಿತು. ಅಷ್ಟು ಹೇಳಿ ಅದು ಅದೃಶ್ಯವಾಯಿತು. ಅದು ಮರೆಯಾಗುತ್ತಲೆ ಸೈನಿಕ ತನ್ನ ಎಡಗಾಲಿನ ಬೂಟು ತೆಗೆದನು. "ಈಗ ತಮಾಷೆ ನೋಡು, ದೆವ್ವಕ್ಕೆ ಹೇಗೆ ಮೋಸ ಮಾಡುವೆ, ನಿನ್ನ ಚಾಕು ಕೊಡು ಸಹೋದರ" ಎಂದು ರೈತನಿಗೆ ಹೇಳಿದನು. ಚಾಕುವಿನಿಂದ ಮೊದಲು ಹಿಮ್ಮಡಿಯ ಜಾಗವನ್ನು ಕತ್ತರಿಸಿದನು. ನಂತರ ಅದನ್ನು ಒಂದು ತಗ್ಗಿನಲ್ಲಿ ನೇರವಾಗಿ ನಿಲ್ಲಿಸಿದನು. ತಳವಿಲ್ಲದ ಬೂಟಿಗೆ ಹಣಹೊಂದಿಸುವ ಕೆಲಸ ದೆವ್ವದ್ದಾಯಿತು. ಅದನ್ನು ನೋಡಿದ ರೈತ ಅಚ್ಚರಿಯಿಂದ, "ಬಹಳ ಚೆನ್ನಾಗಿ ಮಾಡಿದೆ. ಆ ಚಿಮಣಿ ಕೊಳವೆ ಗುಡಿಸುವವನು ಯಾವಾಗ ಬೇಕಾದರೂ ಬರಲಿ" ಎಂದು ಹೇಳಿದನು. ಹೀಗೆ ಅವರಿಬ್ಬರೂ ದೆವ್ವದ ದಾರಿಯನ್ನು ಕಾಯುತ್ತಾ ಕುಳಿತುಕೊಂಡರು. ಸ್ವಲ್ಪ ಹೊತ್ತಿನಲ್ಲಿ ದೆವ್ವ ಬಂಗಾರದ ನಾಣ್ಯಗಳನ್ನು ತುಂಬಿದ ಚೀಲದೊಂದಿಗೆ ಬಂದಿತು.

ಬೂಟನ್ನು ಎತ್ತರಕ್ಕೆ ಎಳೆದು, "ಸುರಿ ಇಲ್ಲಿ" ಎಂದು ಆ ದೆವ್ವಕ್ಕೆ ಸೈನಿಕ ಹೇಳಿದನು. ದೆವ್ವ ದುಡ್ಡನ್ನು ಅದರೊಳಗೆ ಸುರಿಯಿತು. ಅದು ತುಂಬಲೇ ಇಲ್ಲ. "ನೀನು ತಂದಿದ್ದು ಸಾಕಾಗಲಿಲ್ಲ, ಪೆದ್ದ ದೆವ್ವ! ಹೋಗಿ ಇನ್ನಷ್ಟು ತಾ" ಎಂದು ಸೈನಿಕ ಕಿರುಚಿದನು. ದೆವ್ವ ಮುಖ ಉದ್ದ ಮಾಡಿಕೊಂಡು, ತಲೆ ಅಲ್ಲಾಡಿಸುತ್ತಾ ಹೋಯಿತು. ಮತ್ತೆ ಒಂದು ಗಂಟೆಯ ನಂತರ ಬಂದಿತು. ಎರಡನೆಯ ಸಾರಿ ಅದು ದೊಡ್ಡ ಚೀಲದ ತುಂಬ ನಾಣ್ಯವನ್ನು ತಂದಿತ್ತು. ಮತ್ತೆ ಬೂಟಿನೊಳಗೆ ಸುರಿಯಿತು. ಆಗಲೂ ಅದು ತುಂಬಲಿಲ್ಲ. ಸುರಿಯುವಾಗ ಮಾತ್ರ ನಾಣ್ಯಗಳ ಝಣ ಝಣ ಶಬ್ದ ಕೇಳಿಸಿತು. ಬೂಟಿನ ಮೇಲ್ಭಾಗ ಇನ್ನೂ ಖಾಲಿನೇ ಇತ್ತು. "ಅದು

ತುಂಬಲು ಇನ್ನು ಸಾಕಷ್ಟು ನಾಣ್ಯಗಳು ಬೇಕು ಅನಿಸುತ್ತೆ" ಎಂದು ಸೈನಿಕ ಹೇಳಿದನು. ಆಗ ದೆವ್ವಕ್ಕೆ ತುಂಬ ಸಿಟ್ಟು ಬಂದಿತು. ಕೆಟ್ಟ ಮುಖ ಮಾಡಿಕೊಂಡು, "ನೀವು ನಾಚಿಕೆಗೆಟ್ಟ ಹಂದಿಗಳು" ಎಂದು ಕಿರುಚಿತು.

"ನಿನ್ನ ಹಾಗೆ ನನ್ನ ಕಾಲಿಗೆ ಗೊರಸು ಇದೆ ಅಂದುಕೊಂಡೆಯಾ? ನೀನು ಇಷ್ಟು, ಜಿಪುಣನಾದರೆ ಹೇಗೆ? ಬಾ, ಬೇಗ ಹೋಗು. ಇನ್ನೂ ಹೆಚ್ಚು ಬಂಗಾರ ತಾ. ಇಲ್ಲದಿದ್ದರೆ ನಮ್ಮ ವ್ಯಾಪಾರ ಮುಗಿಯುವುದಿಲ್ಲವಲ್ಲ" ಎಂದು ಸೈನಿಕ ಛೇಡಿಸಿದನು.


ಆ ಕೆಟ್ಟ ದೆವ್ವ ಮೂರನೇ ಸಾರಿ ಕಾಲೆಳೆದುಕೊಂಡು ಹೋಯಿತು. ಬಹಳ ಹೊತ್ತಾದ ಮೇಲೆ ಒಂದು ಗೋಣಿಚೀಲದ ತುಂಬ ನಾಣ್ಯಗಳನ್ನು ತುಂಬಿಕೊಂಡು, ಅದನ್ನು ಬೆನ್ನ ಮೇಲೆ ಹೊತ್ತುಕೊಂಡು ಬಂದಿತು. ಅದರ ಭಾರಕ್ಕೆ, ದೆವ್ವದ ಬೆನ್ನು ತುಂಬಾ ಬಾಗಿತ್ತು. ಅದನ್ನೂ ಬೂಟಿನೊಳಗೆ ಸುರಿಯಿತು. ಆಗಲೂ ಅದು ಖಾಲಿಯಾಗಿ ಕಾಣುತ್ತಿತ್ತು. ಆಗ ದೆವ್ವಕ್ಕೆ ಕೆಟ್ಟ ಸಿಟ್ಟು ಬಂದಿತು. ನೆಲದಿಂದ ಬೂಟನ್ನು ಕಿತ್ತು ಹಾಕಲು ಹಾರಿತು. ಆದರೆ ಅಷ್ಟರಲ್ಲಿ ಸೂರ್ಯನ ಬೆಳಕು ಮೂಡಿತು. ಎಲ್ಲ ಕಡೆ ಬೆಳಕು ಹರಡಿತು. ಬೆಳಕಿನಲ್ಲಿ ದೆವ್ವಕ್ಕೆ ಶಕ್ತಿ ಇರುವುದಿಲ್ಲವಲ್ಲ. ಹೀಗಾಗಿ ಅದು ಕೆಟ್ಟದಾಗಿ ಕಿರುಚುತ್ತಾ ಅನಿವಾರ್ಯವಾಗಿ ಅದೃಶ್ಯವಾಯ್ತು. ಆ ಕಡೆ, ಶ್ರೀಮಂತನ ಶವಕ್ಕೆ ದೆವ್ವದ ಕಾಟದಿಂದ ಬಿಡುಗಡೆ ಸಿಕ್ಕಿತು.

ದೆವ್ವ ಹೋದ ಮೇಲೆ, ಸೈನಿಕ ತನ್ನ ಭಾಗದ ಹಣವನ್ನು ತೆಗೆದುಕೊಳ್ಳಬಹುದಿತ್ತು. ಆದರೆ ಹಾಗೆ ಮಾಡಲಿಲ್ಲ. "ನನ್ನ ಪಾಲಿನದನ್ನು ಬಡವರಿಗೆ ಕೊಡು. ನಾನು ನಿನ್ನ ಜೊತೆ ನಿನ್ನ ಗುಡಿಸಲಿಗೆ ಬರುವೆ, ಅಲ್ಲಿ ನಮ್ಮ ಮುಂದಿನ ಜೀವನವನ್ನು ನೆಮ್ಮದಿ ಮತ್ತು ಸಂತೋಷದಿಂದ ಕಳೆಯೋಣ. ದೇವರ ಕೃಪೆ ಇರುವವರೆಗೂ ನಾವು ಶಾಂತವಾಗಿ ಜೀವಿಸೋಣ" ಎಂದು ಹೇಳಿದನು.

೩೯. ಬೆಸ್ತ ಮತ್ತು ಅವನ ಹೆಂಡತಿ

ಒಂದಾನೊಂದು ಕಾಲದಲ್ಲಿ ಒಬ್ಬ ಬೆಸ್ತ ಮತ್ತು ಅವನ ಹೆಂಡತಿ ಸಮುದ್ರದ ಹತ್ತಿರ ಮನೆ ಕಟ್ಟಿಕೊಂಡು ಅದರಲ್ಲಿ ವಾಸವಾಗಿದ್ದರು. ಪ್ರತಿ ದಿನ ಮೀನು ಹಿಡಿಯುವುದು ಅವನ ಕೆಲಸವಾಗಿತ್ತು. ಅದಕ್ಕಾಗಿ, ಅವನು ಒಂದು ಮೀನಿನ ಗಾಳವನ್ನು ತೆಗೆದುಕೊಂಡು ಹೋಗಿ ಅದನ್ನು ನೀರಿನಲ್ಲಿ ಇಳಿಬಿಟ್ಟುಕೊಂಡು ನೀರನ್ನೇ ನೋಡುತ್ತಾ ದಡದಲ್ಲಿ ಕುಳಿತುಕೊಳ್ಳುತ್ತಿದ್ದನು. ಹೀಗೆ ಅನೇಕ ದಿನಗಳು ಮಾಡಿದನು. ಒಂದು ದಿನ ಅವನ ಗಾಳ ನೀರಿನ ತಳಕ್ಕೆ ಹೋಯಿತು. ಅದನ್ನು ಅವನು ಮೇಲಕ್ಕೆ ಎಳೆದಾಗ ಅದರ ತುದಿಯಲ್ಲಿ ಒಂದು ದೊಡ್ಡ ಮೀನು ಜೋತಾಡುತ್ತಿತ್ತು. ಆ ಮೀನು "ನಿನ್ನನ್ನು ಬೇಡಿಕೊಳ್ಳುವೆ, ದಯವಿಟ್ಟು ನನ್ನನ್ನು ಬಿಟ್ಟುಬಿಡು. ನಾನು ನಿಜವಾದ ಮೀನಲ್ಲ. ಮಂತ್ರಶಕ್ತಿಗೆ ಬಲಿಯಾದ ರಾಜಕುಮಾರ. ನನ್ನನ್ನು ನೀರಿನೊಳಗೆ ಈಜಲು ಬಿಟ್ಟುಬಿಡು" ಎಂದು ಕೇಳಿಕೊಂಡಿತು.

"ಓಹೊ! ಮಾತನಾಡುವ ಮೀನನ್ನು ಈಜಲು ಬಿಡುವುದೇ ವಾಸಿ" ಎಂದು ಹೇಳುತ್ತಾ ಮೀನನ್ನು ನೀರೊಳಗೆ ಬಿಟ್ಟುಬಿಟ್ಟನು. ಅದು ಒಳಗೆ ಹೋಗುತ್ತಾ, ತನ್ನ ಹಿಂದೆ ರಕ್ತದ ಗೆರೆಯನ್ನು ಉದ್ದವಾಗಿ



39

ಮಾಡುತ್ತಾ ಹೋಯಿತು. ನಂತರ ಅವನು ಮನೆಗೆ ಹಿಂದಿರುಗಿದನು.

"ಈ ದಿನ ಏನೂ ಹಿಡಿಯಲಿಲ್ಲವೆ"? ಎಂದು ಗಂಡನನ್ನು ಕೇಳಿದಳು. "ಅಯ್ಯೋ! ಈ ದಿನ ಒಂದು ದೊಡ್ಡ ಮೀನು ಹಿಡಿದಿದ್ದೆ. ಅದು ರಾಜಕುಮಾರನಂತೆ. ಯಾರದೊ ಮಾಟದಿಂದ ಮೀನಾಗಿದೆಯಂತೆ. ಆದ್ದರಿಂದ ನಾನು, ಅದನ್ನು ಪುನಃ ನೀರಿನೊಳಗೆ ಬಿಟ್ಟುಬಿಟ್ಟೆನು" ಎಂದು ಬೆಸ್ತ ತನ್ನ ಹೆಂಡತಿಗೆ ಹೇಳಿದನು.

"ಅದನ್ನು ಬಿಡುವ ಮೊದಲು ನಿನಗೆ ಏನಾದರೂ ಬೇಕೆಂದು ಕೇಳಲಿಲ್ಲವೆ?" ಎಂದು ಹೆಂಡತಿ, ಗಂಡನನ್ನು ಕೇಳಿದಳು. ಏನೂ ಕೇಳಲಿಲ್ಲವೆಂದು ಉತ್ತರಿಸಿದನು. "ಅಯ್ಯೋ! ಎಂತಹ ದುರದೃಷ್ಟ. ನಾವು ಯಾವಾಗಲೂ ಈ ಮುರುಕಲು ಗುಡಿಸಲಲ್ಲೆ ಇರಬೇಕೇನು? ಕೊನೆ ಪಕ್ಷ ಒಂದು ಒಳ್ಳೆಯ ಮನೆ ಬೇಕು" ಎಂದು ಕೇಳಬಹುದಿತ್ತು ಎಂದು ಹೆಂಡತಿ ಹೇಳಿದಳು. ಹೋಗು, ಆ ಮೀನನ್ನು ಕರೆದು, ನಮಗೆ ಒಂದು ಒಳ್ಳೆಯ ಮನೆ ಬೇಕು ಎಂದು ಕೇಳು. ನಿನ್ನ ಆಸೆ ಈಡೇರುತ್ತದೆ" ಎಂದು ಹೇಳಿದಳು.

"ಓಹೊ! ಈಗ ನಾನೇನು ಮಾಡಲಿ?" ಎಂದು ಬೆಸ್ತ ಕೇಳಿದನು. ಅದಕ್ಕೆ ಅವನ ಹೆಂಡತಿ, ಮತ್ತೆ ಹೋಗಿ ಆ ಮೀನು ಹಿಡಿ. ಅದನ್ನು ನೀರೊಳಗೆ ಬಿಡುವ ಮುಂಚೆ ನೀನು ಏನು ಕೇಳಿದರೂ ಅದು ಸಿಗುತ್ತೆ. ಬೇಗ ಹೋಗು" ಎಂದು ಹೇಳಿದಳು. ಬೆಸ್ತನಿಗೆ ಅವಳ ಮಾತು ಇಷ್ಟವಾಗಲಿಲ್ಲ ಏಕೆಂದರೆ ಅವಳ ಆಸೆಗಳು ಜಾಸ್ತಿ

ಆಗಬಹುದು ಎನಿಸಿತು. ಆದರೂ ಅವನು ಸಮುದ್ರದ ಹತ್ತಿರ ಹೋದನು. ಆ ನೀರು ಹಸಿರು ಮತ್ತು ಹಳದಿಯಾಗಿತ್ತು. ಅಲ್ಲಿ ಬೇರೆ ಯಾರೂ ಇರಲಿಲ್ಲ. ಅವನು ದಡದಲ್ಲಿ ನಿಂತು -

"ಮೀನೆ, ಮೀನೆ, ಸಮುದ್ರದೊಳಗಿನಿಂದ
ನನ್ನ ಹತ್ತಿರ, ಇಲ್ಲಿಗೆ ಬೇಗ ಬಾ,
ನನ್ನ ಹೆಂಡತಿ, ಯುವತಿ ಇಸಬೆಲಳಿಗಾಗಿ ಬಾ,
ಆದರೂ ಅವಳ ಆಸೆಯನ್ನು ಹೇಳಲು ನನಗೆ
ಹೆದರಿಕೆ" ಎಂದು ಕೂಗಿದನು.

ಆ ಮೀನು ಈಜಿಕೊಂಡು ಮೇಲೆ ಬಂದಿತು. "ನನ್ನಿಂದ, ನಿನಗೆ ಏನಾಗಬೇಕು?" ಎಂದು ಕೇಳಿತು. "ನಾನು ನಿನ್ನನ್ನು ಪುನಃ ಹಿಡಿಯಬೇಕಂತೆ. ನಿನ್ನನ್ನು ಬಿಟ್ಟುಬಿಡುವ ಮೊದಲು ನನ್ನ ಹೆಂಡತಿಯ ಆಸೆಯನ್ನು ಹೇಳಬೇಕಂತೆ. ಅವಳಿಗೆ ಮುರುಕಲು ಗುಡಿಸಲು ಬೇಡವಂತೆ, ಒಳ್ಳೆಯ ಮನೆ ಬೇಕಂತೆ" ಎಂದು ಹೆಂಡತಿ ಹೇಳಿಕೊಟ್ಟ ಹಾಗೆ ಬೆಸ್ತ ಹೇಳಿದನು.

"ಮನೆಗೆ ಹೋಗು, ಈಗಾಗಲೇ ಅವಳು ಹೊಸ ಮನೆ ಪಡೆದಿದ್ದಾಳೆ" ಎಂದು ಮೀನು ಹೇಳಿತು. ಹೀಗೆ ಬೆಸ್ತ ತನ್ನ ಮನೆಯ ಕಡೆ ಹೊರಟನು. ಕೊಳಕಾದ ಮುರುಕಲು ಮನೆ ಇದ್ದ ಕಡೆ ಶುಭ್ರವಾದ ದೊಡ್ಡ ಮನೆ ಇತ್ತು. ಮನೆಯ ಹೊರಗೆ ಬೆಂಚಿನ ಮೇಲೆ ಅವನ ಹೆಂಡತಿ ಕುಳಿತಿದ್ದಳು. ಅವಳು, ಅವನನ್ನು ಕೈ ಹಿಡಿದುಕೊಂಡು ಒಳಗೆ ಹೋದಳು. "ಒಳಗೆ ಬಂದು ನೋಡು, ಇದು ತುಂಬ ಚೆನ್ನಾಗಿದೆ ಅಲ್ಲವೆ?" ಎಂದು ಕೇಳಿದಳು. ಒಳಗಡೆ ಸುಂದರವಾದ ನಡುಮನೆ ಇತ್ತು. ಬೆಂಕಿ ಕಾಯಿಸಿಕೊಳ್ಳುವ ಜಾಗ, ಮಲಗುವ ಕೋಣೆ, ಅಡಿಗೆ ಮನೆ, ದಾಸ್ತಾನು ಕೋಣೆ, ಅದರಲ್ಲಿ ಅತ್ಯುತ್ತಮವಾದ ಪಿಂಗಾಣಿ ಸಾಮಾನುಗಳು, ಬೇಳೆಕಾಳುಗಳನ್ನು ಹಾಕುವ ಡಬ್ಬಗಳು, ತಾಮ್ರದ ಪಾತ್ರೆಗಳು, ಮನೆಗೆ ಬೇಕಾದ ಪರಿಕರಗಳೆಲ್ಲವೂ ಇದ್ದವು. ಅವುಗಳು ಶುಭ್ರವಾಗಿ ಹೊಸದರಂತೆ ಕಾಣುತ್ತಿದ್ದವು. ಹಿಂದೆ ಒಂದು ದೊಡ್ಡ ಅಂಗಳವಿತ್ತು. ಅದರಲ್ಲಿ ಕೋಳಿಗಳು, ಕೋಳಿ ಮರಿಗಳು ಇದ್ದವು. ಸುಂದರ ತೋಟವಿತ್ತು. ಹಣ್ಣಿನ ಮರಗಳಿದ್ದವು ಮತ್ತು ತರಕಾರಿಗಳಿದ್ದವು, "ನೋಡಿಲ್ಲಿ, ತುಂಬ ಚೆನ್ನಾಗಿದೆ ಅಲ್ವೆ?" ಎಂದು ಕೇಳಿದಳು.

"ಹೌದು, ಇದು ಎಲ್ಲಿವರೆಗೆ ಇರುವುದೊ, ಅಲ್ಲಿಯವರೆಗೆ ತೃಪ್ತಳಾಗಿರು" ಎಂದು ಅವಳ ಗಂಡ ಹೇಳಿದನು. "ಅದನ್ನು ಆಮೇಲೆ ಯೋಚಿಸಿದರಾಯಿತು" ಎಂದು ಅವಳು ಉತ್ತರಿಸಿದಳು. ನಂತರ ಅವರು ಮಲಗಲು ಹೋದರು. ಹೀಗೆ ಎರಡು ವಾರಗಳು ಕಳೆದವು. ನಂತರ ಒಂದು ದಿನ ಬೆಸ್ತನ ಹೆಂಡತಿ, "ಪ್ರೀತಿಯ ಯಜಮಾನ, ಈ ಮನೆ ನನಗೆ ಚಿಕ್ಕದು ಅನಿಸುತ್ತೆ. ತುಂಬ ಇಕ್ಕಟ್ಟಾಗಿದೆ. ಅಂಗಳ, ತೋಟ ತುಂಬ ಚಿಕ್ಕವು ಅನಿಸುತ್ತೆ. ಆ ಮೀನು ನಮಗೆ ಇದಕ್ಕಿಂತ ದೊಡ್ಡ ಮನೆ ಕೊಡಬಲ್ಲದು. ಇನ್ನೂ ದೊಡ್ಡದಾಗಿರುವ ಕಲ್ಲಿನ ಅರಮನೆಯಲ್ಲಿ ವಾಸವಾಗಿರಬೇಕು ಎಂದು ನನ್ನ ಆಸೆ. ಆದ್ದರಿಂದ ನಮಗೆ ಅರಮನೆ ಬೇಕು" ಎಂದು ಆ ಮೀನನ್ನು ಕೇಳು ಎಂದು ಹೇಳಿದಳು. ಅದಕ್ಕೆ ಅವಳ ಗಂಡ, "ಅಯ್ಯೋ! ಈ ಮನೆ ಸಾಕಷ್ಟು ಚೆನ್ನಾಗಿದೆ. ಅರಮನೆಯನ್ನು ಯಾಕೆ ಬಯಸುವೆ?" ಎಂದು ಕೇಳಿದನು. ಅವಳು ಅವನ ಮಾತನ್ನು ಕೇಳಿಸಿಕೊಳ್ಳಲೇ ಇಲ್ಲ. "ನೀನು ಹೋಗು, ಮೀನನ್ನು ಕೇಳು. ಅದು ಕೊಟ್ಟೇ ಕೊಡುತ್ತೆ" ಎಂದು

ಅವನ ಹೆಂಡತಿ ಪೀಡಿಸಿದಳು. ಅದಕ್ಕೆ ಬೆಸ್ತ "ಬೇಡ, ಮೀನು ಈಗಾಗಲೇ ನಮಗೆ ದೊಡ್ಡ ಮನೆ ಕೊಟ್ಟಿದೆ. ಈಗ, ನಾನು ಮತ್ತೆ ಇನ್ನೂ ದೊಡ್ಡ ಮನೆ ಕೇಳಿದರೆ ಅದಕ್ಕೆ ಸಿಟ್ಟು ಬರಬಹುದು" ಎಂದು ತನ್ನ ಹೆಂಡತಿಗೆ ಬುದ್ಧಿ ಹೇಳಿದನು. "ಅಯ್ಯೋ, ಅದೆಲ್ಲ ತಲೆಗೆ ಹಚ್ಚಿಕೊಳ್ಳಬೇಡ ಬೇಕಾದ್ದನ್ನು ಸುಲಭವಾಗಿ ಕೊಡುವ ಮೀನು ಸಿಕ್ಕಿರುವಾಗ ನೀನು ಯಾಕೆ ಮತ್ತೆ ಪ್ರಯತ್ನಿಸಬಾರದು?" ಎಂದು ಅವನ ಹೆಂಡತಿ ಒತ್ತಾಯ ಮಾಡಿದಳು. ಬೆಸ್ತನಿಗೆ ಹೋಗಲು ಇಷ್ಟವಿರಲಿಲ್ಲ. ಒಳಗೊಳಗೆ ಬೇಸರವಾಯ್ತು. ಆದರೂ ಹೆಂಡತಿ ಮಾತನ್ನು ಕೇಳಲೇಬೇಕಾಯಿತು.

ಬೆಸ್ತ ಸಮುದ್ರದ ಹತ್ತಿರ ಬಂದಾಗ, ನೀರು ದಟ್ಟ ನೀಲಿ ಬಣ್ಣದಿಂದ ಕೂಡಿದ್ದು, ಮೋಡದ ನೆರಳು ಬಿದ್ದಿತ್ತು. ಕಪ್ಪುಗೆ ರಾಡಿ ಹಾಗೆ ಕಾಣುತ್ತಿತ್ತು. ಆದರೂ ಶಾಂತವಾಗಿ ಹರಿಯುತ್ತಿತ್ತು. ಅವನು ಹೋಗಿ ಮೀನನ್ನು ಕೂಗಿ ಕರೆದನು.

"ಮೀನೆ, ಮೀನೆ, ಸಮುದ್ರ ಮೀನೆ
ನನ್ನ ಹೆಂಡತಿ, ಇಸಬೆಲಳ ಬಯಕೆ ಹಲವು,
ಹೇಳಲಾರೆ ನಾನು,
ಆದರೂ ಬಾ ಮೀನೆ,
ಬೇಗ ಬೇಗ ಬಾ" ಎಂದು ಕೂಗಿದನು.

ಮೀನು ಮೇಲೆ ಬಂದು, ಅವನಿಗೆ ಏನು ಬೇಕು ಎಂದು ಕೇಳಿತು. ಅವನು ಒಳಗೊಳಗೆ ಹೆದರಿಕೊಂಡು, ತೊದಲುತ್ತಾ, "ಅವಳು ಕಲ್ಲಿನಿಂದ ಕಟ್ಟಿದ ದೊಡ್ಡ ಅರಮನೆಯಲ್ಲಿ ವಾಸಮಾಡಬೇಕಂತೆ" ಎಂದು ಹೇಳಿದನು. ಆಗ ಮೀನು, "ನೀನು ಈಗ ಹಿಂದಿರುಗಿ ಮನೆಗೆ ಹೋಗಿ ನೋಡು" ಎಂದು ಉತ್ತರಿಸಿತು.

ಬೆಸ್ತ ಮನೆಗೆ ಹಿಂದಿರುಗಿ ಹೋಗಿ ನೋಡಿದನು. ಮೊದಲಿದ್ದ ಮನೆಯ ಜಾಗದಲ್ಲಿ, ಕಲ್ಲಿನಿಂದ ಕಟ್ಟಿದ ದೊಡ್ಡ ಅರಮನೆ ಇತ್ತು. ಅವನ ಹೆಂಡತಿ, ಮೆಟ್ಟಿಲುಗಳ ಮೇಲೆ ನಿಂತುಕೊಂಡು ಕಾಯುತ್ತಿದ್ದಳು, ಗಂಡನನ್ನು ಒಳಗೆ ಕರೆದುಕೊಂಡು ಹೋದಳು. "ಒಳಗಿರುವುದನ್ನೆಲ್ಲ ನೋಡೋಣ" ಎಂದು ಹೇಳುತ್ತಾ ಒಂದೊಂದು ಕೋಣೆಯನ್ನು ನೋಡುತ್ತಾ ಹೋದರು. ಅರಮನೆಯ ನಡುವೆ ಒಂದು ದೊಡ್ಡ ನಡುಮನೆಯಿತ್ತು. ಅದರಲ್ಲಿ ಗ್ರಾನೈಟ್ ಕಲ್ಲಿನ ಮೇಜುಗಳು, ಜೊತೆಗೆ ಬೇಕಾದಷ್ಟು ಸೇವಕರಿದ್ದರು. ಬಾಗಿಲು ತೆಗೆದು ಆ ಗಂಡ, ಹೆಂಡತಿಯನ್ನು ಸ್ವಾಗತಿಸಿದರು. ತಮ್ಮಷ್ಟಕ್ಕೆ ತಾವೇ ಬಾಗಿಲು ಹಾಕಿಕೊಳ್ಳುವ ಕೊಠಡಿಗಳಿದ್ದವು. ಆ ಕೋಣೆಗಳ ಗೋಡೆಗಳಿಗೆ ಕಸೂತಿ ಕೆಲಸ ಮಾಡಿದ ವಸ್ತ್ರಗಳನ್ನು ನೇತುಹಾಕಿದ್ದರು. ದೊಡ್ಡ ಕನ್ನಡಿಗಳಿದ್ದವು. ಬಂಗಾರದ ಕುರ್ಚಿಗಳು, ಸಣ್ಣ ಸಣ್ಣ ಮೇಜುಗಳಿದ್ದವು. ಎಲ್ಲ ಕೋಣೆಗಳನ್ನು ಅತಿ ವೈಭವದಿಂದ ಸಿಂಗರಿಸಲಾಗಿತ್ತು. ಮನೆ ಹೊರಗೆ ತುಂಬ ದೊಡ್ಡದಾದ ಅಂಗಳವಿತ್ತು. ಕುದುರೆಗಳು ಮತ್ತು ಹಸುಗಳನ್ನು ಕಟ್ಟಿಹಾಕಿರುವ ಕೊಟ್ಟಿಗೆಗಳಿದ್ದವು. ಅತ್ಯುತ್ತಮ ರಥಗಳಿದ್ದವು. ಅತಿ ಸುಂದರ ತೋಟವಿತ್ತು. ಅಲ್ಲಿ ಆಕರ್ಷಕ ಬಣ್ಣಗಳ ಹೂವುಗಳಿದ್ದವು. ರಸಭರಿತ ಹಣ್ಣುಗಳನ್ನು ತುಂಬಿಕೊಂಡಿರುವ ಮರಗಳಿದ್ದವು. ಒಂದು ಮೈಲು ಉದ್ದ ಮತ್ತು ಅಗಲವಿರುವ ಹುಲ್ಲಿನ ಮೈದಾನವಿತ್ತು. ಜಿಂಕೆಗಳು, ಕುರಿಗಳು ಮತ್ತು ಎತ್ತುಗಳು ಬೇಕಾದಷ್ಟು

ಇದ್ದವು. "ಇದು ತುಂಬ ಸುಂದರವಾಗಿದೆ ಅಲ್ವಾ?" ಎಂದು ಬೆಸ್ತನ ಹೆಂಡತಿ ಕೇಳಿದಳು. "ಓಹೊ! ತುಂಬ ಚೆನ್ನಾಗಿದೆ, ಇದರ ಮೇಲೆ ನಿನಗೆ ಪ್ರೀತಿ ಇರುವವರೆಗೂ ಚೆನ್ನಾಗಿರುತ್ತದೆ. ಇಷ್ಟರಿಂದಲೆ ತೃಪ್ತಳಾಗು. ಇನ್ನು ಹೆಚ್ಚಿಗೆ ಬಯಸಬೇಡ" ಎಂದು ಅವಳ ಗಂಡ ಹೇಳಿದನು. "ಆ ವಿಷಯ ಆಮೇಲೆ ಯೋಚನೆ ಮಾಡಿದರಾಯಿತು" ಎಂದು ಅವಳು ಹೇಳಿದಳು. ನಂತರ ಅವರು ಮಲಗಲು ಹೋದರು.

ಮಾರನೆಯ ದಿನ ಬೆಸ್ತನ ಹೆಂಡತಿ ತುಂಬ ತಡವಾಗಿ ಎದ್ದಳು. ಬೆಳಕು ಚೆನ್ನಾಗಿ ಹರಡಿತ್ತು. ಅವಳು ಹೊರಗೆ ಇಣುಕಿದಳು. ತನ್ನ ಮುಂದೆ ವಿಶಾಲವಾಗಿ ಹರಡಿದ್ದ ಸುಂದರ ಪ್ರದೇಶವನ್ನು ನೋಡಿದಳು. ಅವಳ ಗಂಡ ಇನ್ನೂ ಎದ್ದಿರಲಿಲ್ಲ. ಅವಳು ಸೊಂಟದ ಮೇಲೆ ಕೈ ಇಟ್ಟುಕೊಂಡು ಗಂಡನನ್ನು ಕೂಗಿ ಎಬ್ಬಿಸಿದಳು. "ಏಳಿ, ಮೇಲೆದ್ದು, ಕಿಟಕಿಯ ಹೊರಗೆ ನೋಡಿ, ನಾನು ಈ ಎಲ್ಲಾ ಭೂಮಿಗೆ ರಾಣಿ ಆಗಬಾರದೆ?" ಎಂದಳು. "ಅಯ್ಯೊ! ನಾನು ಯಾಕೆ ರಾಜನಾಗಲಿ?" ಎಂದನು. "ಬೇಡ, ನೀನು ರಾಜನಾಗಬೇಡ. ನಾನು ರಾಣಿ ಆಗುವೆ, ನನ್ನ ಈ ಆಸೆಯನ್ನು ಆ ಮೀನಿನ ಹತ್ತಿರ ಹೋಗಿ ಹೇಳು" ಎಂದಳು. "ಅಯ್ಯೊ! ಹಾಗೆಲ್ಲ ನೀನು ಆಸೆ ಪಡಬಾರದು, ನಾನು ಹಾಗೆ ಹೋಗಿ ಹೇಳಲಾರೆ" ಎಂದು ಅವಳ ಗಂಡ ಹೇಳಿದನು. "ಇಲ್ಲ, ಇಲ್ಲ, ನೀನು ಹೋಗಲೇಬೇಕು. ನಾನು ರಾಣಿ ಆಗಲೇಬೇಕು, ಕೂಡಲೆ ಹೋಗಿ ಹೇಳು" ಎಂದು ಹಠ ಹಿಡಿದಳು. ಅವನು ತುಂಬ ಬೇಜಾರಿನಿಂದ ಸಮುದ್ರದ ಕಡೆ ಹೊರಟನು. ಅದರ ನೀರು ಕಪ್ಪಾಗಿ, ಕೊಳಕು ವಾಸನೆ ದೂರದಿಂದಲೇ ಬರುತ್ತಿತ್ತು. ಆದರೂ ಕೂಡ, ಅವನು ಅಲ್ಲೆ ನಿಂತುಕೊಂಡು ಮೀನನ್ನು ಕರೆದನು-

"ಸಮುದ್ರ ಮೀನೆ,
ನೀರೊಳಗಿನಿಂದ ಮೇಲೆ
ಈ ಕಡೆ, ನನ್ನ ಹತ್ತಿರ ಬಾ,
ನನ್ನ ಹೆಂಡತಿ ಇಸಬೆಲ್ಲಳಿಗಾಗಿ,
ಅವಳ ಆಸೆಗಾಗಿ,
ನಾ ಮುಂದೆ ಹೇಳಲಾರೆ ಬಾ
ಅವಳು ಹೇಳಿದ್ದನ್ನು ಹೇಳಲು
ಧೈರ್ಯವಿಲ್ಲ ನನಗೆ
ಆದರೂ ನೀನು ಬೇಗ ಬಾ ಮೀನೆ".

"ಅವಳಿಗೆ ಇನ್ನೇನು ಬೇಕಂತೆ?" ಎಂದು ಮೀನು ಕೇಳಿತು. "ಅವಳು ರಾಣಿ ಆಗಬೇಕಂತೆ" ಎಂದು ಹೇಳಿದನು. "ಅವಳ ಇಷ್ಟದಂತೆಯೆ ಆಗಿದ್ದಾಳೆ. ಮನೆಗೆ ಹೋಗಿ ನೋಡು" ಎಂದು ಮೀನು ಹೇಳಿತು. ಅವನು ಮನೆಗೆ ಹಿಂದಿರುಗಿದನು. ಅರಮನೆ ಇನ್ನೂ ದೊಡ್ಡದಾಗಿತ್ತು. ಅದಕ್ಕೆ ದೊಡ್ಡ ಗೋಪುರವಿತ್ತು. ಎತ್ತರವಾದ ಹೆಬ್ಬಾಗಿಲು ಇತ್ತು. ಅದರ ಮುಂದೆ ರಾಜನ ವೈಭವವನ್ನು ಸಾರಿ ಹೇಳುವ ಹೊಗಳುಭಟ್ಟ ನಿಂತುಕೊಂಡಿದ್ದನು. ಅನೇಕ ಸೈನಿಕರು ನಿಂತಿದ್ದರು. ಅವರ ಕೈಗಳಲ್ಲಿ ಕಹಳೆ ಮತ್ತು ಮದ್ದಳೆಗಳಿದ್ದವು. ಅವನು ಅರಮನೆಯೊಳಗೆ ಹೋದನು. ಒಳಗಿನದೆಲ್ಲವೂ ಶುದ್ಧ ಬಂಗಾರ ಮತ್ತು ಅಮೃತ ಶಿಲೆಯಿಂದ ಮಾಡಲ್ಪಟ್ಟಿತ್ತು. ಬಂಗಾರದ ಎಳೆಗಳಿಂದ ಕಸೂತಿ ಮಾಡಿದ ಪರದೆಗಳನ್ನು ನೇತುಹಾಕಲಾಗಿತ್ತು. ಅವನು

ಇನ್ನೂ ಮುಂದೆ ನಡುಮನೆ ದಾಟಿ ಹೋದನು. ಅಲ್ಲಿ ದೊಡ್ಡ ಆಸ್ಥಾನದ ಹಜಾರವಿತ್ತು. ಅಲ್ಲಿ ಅವನ ಹೆಂಡತಿ, ಬಂಗಾರ ಮತ್ತು ವಜ್ರದಿಂದ ಮಾಡಿದ ಸಿಂಹಾಸನದ ಮೇಲೆ ಕುಳಿತಿದ್ದಳು. ತಲೆಯ ಮೇಲೆ ಬಂಗಾರದ ಕಿರೀಟ ಧರಿಸಿದ್ದಳು. ಕೈಯಲ್ಲಿ ಬೆಲೆ ಬಾಳುವ ಹರಳುಗಳಿಂದ ಮಾಡಿದ ರಾಜದಂಡವನ್ನು ಹಿಡಿದಿದ್ದಳು. ಅವಳ ಎರಡೂ ಕಡೆ, ಆರು ಜನ ಉನ್ನತ ಅಧಿಕಾರಿಗಳು ಸಾಲಾಗಿ ನಿಂತಿದ್ದರು. ಅವರೆಲ್ಲಾ ಸುಂದರ ಪೋಷಾಕು ಧರಿಸಿದ್ದರು. ಪ್ರತಿಯೊಬ್ಬರ ತಲೆ, ಒಬ್ಬರಿಗಿಂತ ಇನ್ನೊಬ್ಬರದು ಎತ್ತರವಾಗಿತ್ತು. ಆಗ, ಅವನು ಮೇಲೆ ಹೋಗಿ "ಆಹಾ, ನೀನೀಗ ರಾಣಿ ಆಗಿರುವೆಯಾ?" ಎಂದು ಕೇಳಿದನು. "ಹೌದು, ನಾನೀಗ ರಾಣಿ" ಅಂದಳು. ಅವನು ಅಲ್ಲೆ, ಬಹಳ ಹೊತ್ತು ನಿಂತುಕೊಂಡಿದ್ದನು. ಕೊನೆಗೆ ಅವನು, "ರಾಣಿ ಆಗಿ ನಿನಗೆ ಹೇಗೆ ಅನಿಸುತ್ತದೆ?" ಎಂದು ಕೇಳಿದನು. "ಅಲ್ಲದೆ, ನಾವು ಕೇಳುವುದು ಇನ್ನೇನು ಉಳಿದಿಲ್ಲ ಅಲ್ಲವೆ?" ಎಂದನು. ಆಗ ಅವನ ಹೆಂಡತಿ, "ಇಲ್ಲ, ನನಗಿನ್ನೂ ತೃಪ್ತಿ ಇಲ್ಲ. ಕಾಲ ಮತ್ತು ಸಮುದ್ರದ ಅಲೆ ಯಾರಿಗೂ ಕಾಯುವುದಿಲ್ಲ. ನಾನು ಇದನ್ನೂ ಕೂಡ ಬಹು ದೀರ್ಘಕಾಲ ಅನುಭವಿಸಲಾರೆ. ನಾನು ರಾಣಿ, ನನ್ನ ಆಜ್ಞೆಯನ್ನು ಪಾಲಿಸು. ನಾನೀಗ ಪೋಪ್ ಆಗಬೇಕೆಂದು ಮೀನಿಗೆ ಹೇಳು" ಎಂದು ಗಂಡನಿಗೆ ಅಪ್ಪಣೆ ಮಾಡಿದಳು. "ಅಯ್ಯೊ! ನೀನು ಪೋಪ್ ಆಗಲಾರೆ, ಅದನ್ನು ಯಾಕೆ ಬಯಸುವೆ? ಪೋಪ್ ಇಡೀ ಕ್ರಿಸ್ತ ಸಮಾಜದ ಮುಖ್ಯಸ್ಥ. ಮೀನು, ನಿನ್ನನ್ನು ಪೋಪ್ ಆಗಿ ಮಾಡಲಾರದು" ಎಂದು ಕಳಕಳಿಯಿಂದ ಹೇಳಿದನು.

ಅವಳು ಗಂಡನ ಮಾತನ್ನು ಎಂದೂ ಕೇಳಿದವಳೇ ಅಲ್ಲ. ಹಠಮಾರಿ ಹೆಣ್ಣು ಆಗಲೂ ತನ್ನ ಆಸೆ ಪೂರೈಸಲೇಬೇಕೆಂದು ಹಠ ಮಾಡಿದಳು. ಅವಳ ಗಂಡ ಅನಿವಾರ್ಯವಾಗಿ ಹೋದನು. ಅವನು ಸಮುದ್ರಕ್ಕೆ ಬಂದಾಗ, ಅದರ ನೀರು ಪರ್ವತದಷ್ಟು ಎತ್ತರಕ್ಕೆ ಹಾರುತ್ತಿತ್ತು. ಆಕಾಶ ಹೆದರಿಕೊಂಡಂತೆ ಕಪ್ಪು ಬಣ್ಣ ಬಳಿದುಕೊಂಡಿತ್ತು. ಅವನು ದಡದಲ್ಲಿ ನಿಂತು -

"ಮೀನೆ, ಮೀನೆ
ಸಮುದ್ರದ ಮೀನೆ
ಮೇಲೆ, ನನ್ನ ಹತ್ತಿರ ಬಾ,
ನನ್ನ ಹೆಂಡತಿ, ಇಸಬೆಲ್ಲಾಳ
ಬಯಕೆಯನ್ನು ಧೈರ್ಯವಾಗಿ
ಹೇಳಲಾರೆ ನಾನು,
ಆದರೂ, ಬೇಗ ಬಾ" ಎಂದು ಕೂಗಿದನು.

ಮೀನು ಮೇಲೆ ಬಂದು "ಈಗ ಇನ್ನೇನು ಬೇಕು?" ಎಂದು ಕೇಳಿತು. "ಅವಳು ಪೋಪ್ ಆಗಲು ಆಸೆ ಪಟ್ಟಿದ್ದಾಳೆ" ಎಂದು ಅವನು ಹೇಳಿದನು. "ಮನೆಗೆ ಹೋಗು, ಅವಳು ಹಾಗೆ ಆಗಿರುತ್ತಾಳೆ" ಎಂದು ಮೀನು ಉತ್ತರಿಸಿತು.

ಬೆಸ್ತ ಮನೆಗೆ ಹಿಂದಿರುಗಿದನು. ಮನೆಯ ಜಾಗದಲ್ಲಿ ಒಂದು ದೊಡ್ಡ ಚರ್ಚ್ ಇತ್ತು. ಅದರೊಳಗೆ, ಅವನ ಹೆಂಡತಿ ಇನ್ನೂ ಎತ್ತರವಾದ ಸಿಂಹಾಸನದ ಮೇಲೆ ಕುಳಿತ್ತಿದ್ದಳು. ಅವಳ ಎರಡೂ ಬದಿಗಳಲ್ಲಿ ಸಾಲು


ಮುಂಬತ್ತಿಗಳು ಉರಿಯುತ್ತಿದ್ದವು. ಕೆಲವು ಗೋಪುರದಷ್ಟು ದೊಡ್ಡವಿದ್ದವು. ಅವುಗಳ ಕೆಳಗೆ ಸಣ್ಣ ದೀಪಗಳಿದ್ದವು. ಅವಳ ಕಾಲಿನ ಬಳಿ ಇದ್ದ ಸ್ಟೂಲಿನ ಹತ್ತಿರ, ರಾಜರು, ರಾಣಿಯರು ಮೊಣಕಾಲೂರಿಕೊಂಡು ಕುಳಿತ್ತಿದ್ದರು. ಆಗ ಅವನು ತನ್ನ ಹೆಂಡತಿಗೆ "ನಿನ್ನ ಇಚ್ಛೆಯಂತೆ ಪೋಪ್ ಆಗಿರುವೆ. ಇನ್ನು ನೀನು ಏನೂ ಆಗಲಾರೆ. ಈಗಲಾದರೂ ತೃಪ್ತಿಯಿಂದ ಇರು" ಎಂದು ಬುದ್ಧಿ ಹೇಳಿದನು. ಅದಕ್ಕೆ ಅವಳು "ಅದನ್ನು ಅಮೇಲೆ ಯೋಚನೆ ಮಾಡುತ್ತೇನೆ" ಎಂದಳು. ನಂತರ ಅವರು ಮಲಗಲು ಹೋದರು. ಬೆಸ್ತನ ಹೆಂಡತಿ ಇಸಬೆಲ್ಲಳಿಗೆ ನಿದ್ರೆ ಬರಲಿಲ್ಲ. ಯಾಕೆಂದರೆ ಅವಳು ತಾನು ಮುಂದೆ ಇನ್ನೇನಾಗಬಹುದು ಎಂದು ಯೋಚಿಸುತ್ತಿದ್ದಳು. ಬೆಳಗ್ಗೆ ಬೇಗನೆ ಎದ್ದಳು. ಕಿಟಕಿಯಿಂದ ಹೊರಗೆ ನೋಡಿದಳು. ಸೂರ್ಯ ಮೇಲೇರುವುದನ್ನು ನೋಡುತ್ತಾ ತನ್ನಲ್ಲೆ ಯೋಚಿಸಿದಳು, "ನಾನು ಯಾಕೆ ಹಾಗೆ ಆಗಬಾರದು?" ಎಂದು ಅಂದುಕೊಂಡು ಗಂಡನನ್ನು ಅಲುಗಾಡಿಸಿ ಎಬ್ಬಿಸಿದಳು. "ನಾನು ಸೂರ್ಯನ ಹಾಗೆ ಆಗಬೇಕು ಎಂದು ಮೀನಿನ ಹತ್ತಿರ ಹೋಗಿ ಹೇಳು" ಎಂದು ಹೇಳಿದಳು. ಅವಳ ಗಂಡ ತುಂಬ ಹೆದರಿಕೊಂಡನು. ಹಾಸಿಗೆಯಿಂದ ಮುಗ್ಗರಿಸಿಕೊಂಡು ಬಿದ್ದನು. ಅವನ ಮಾತನ್ನು ಅವಳು ಕೇಳುವ ಸ್ಥಿತಿಯಲ್ಲಿ ಇರಲೇ ಇಲ್ಲ. ಹೀಗೆ, ತನಗೆ ಇಷ್ಟವಿಲ್ಲದಿದ್ದರೂ, ಅವಳ ಒತ್ತಾಯ; ಹಠಮಾರಿತನಕ್ಕೆ ಹೋಗಬೇಕಾಯಿತು.

ಅವನು ಸಮುದ್ರದ ಕಡೆ ಹೆಜ್ಜೆ ಹಾಕಿದನು. ಅದರ ದಡಕ್ಕೆ ಬಂದಾಗ ಭಯಂಕರ ಬಿರುಗಾಳಿ ಬೀಸುತ್ತಿತ್ತು. ಹಡಗುಗಳು, ದೋಣಿಗಳು, ಮೇಲೆ ಕೆಳಗೆ ಮುಳುಗಿ ಏಳುತ್ತಿದ್ದವು. ಅವನು ಮೀನನ್ನು ಕೂಗಿ ಕರೆದನು. ಆಗ, ಅವನ ಮಾತುಗಳು ಅವನಿಗೇ ಕೇಳಿಸಲಿಲ್ಲ -

"ಮೀನೆ, ಸಮುದ್ರದ ಮೀನೆ
ಬೇಗ ಬಾ ನನ್ನಡೆಗೆ,
ನನ್ನ ಹೆಂಡತಿ, ಶ್ರೀಮತಿ ಇಸಬೆಲ್ಲ
ಬಯಸುವುದನ್ನು ಧೈರ್ಯವಾಗಿ
ಹೇಳಲಾರೆ ನಾನು,
ಅವಳ ಆಸೆಗಳು ಹಲವಾರು
ಧೈರ್ಯವಿಲ್ಲ ಹೇಳಲು ನನಗೆ" ಎಂದು ಹೇಳಿದನು.

"ಇನ್ನೇನು ಬೇಕು ಅವಳಿಗೆ?" ಎಂದು ಮೀನು ಕೇಳಿತು. "ಅಯ್ಯೋ, ಏನು ಹೇಳಲಿ ನಾನು, ಅವಳು ವಿಶ್ವದ ಆಡಳಿತಗಾರಳಾಗಬೇಕಂತೆ. ಅವಳು ಸೂರ್ಯ ಆಗಲು ಬಯಸಿರುವಳು" ಎಂದು ಬೆಸ್ತ ಹೇಳಿದನು. "ಅವಳು ಮತ್ತೆ ತನ್ನ ಹಿಂದಿನ ಗುಡಿಸಲಿನಲ್ಲೆ ಇರುತ್ತಾಳೆ" ಎಂದು ಮೀನು ಉತ್ತರಿಸಿತು. ಅವನು ಮನೆಗೆ ಹಿಂದಿರುಗಿದಾಗ, ಅವಳು ತನ್ನ ಮೊದಲಿನ ಮುರುಕು ಗುಡಿಸಲಲ್ಲಿ ಇದ್ದಳು. ಕೊನೆಗೆ ಅವರಿಬ್ಬರೂ ತಮ್ಮ ಉಳಿದ ಜೀವನವನ್ನೆಲ್ಲ ಅಲ್ಲೆ ಕಳೆದರು. "ಅತಿ ಆಸೆ ಗತಿ ಕೆಡಿಸಿತು".

೪೦. ದುಷ್ಟ ದೆವ್ವ ಮತ್ತು ಅವನ ಅಜ್ಜಿ



ಒಂದಾನೊಂದು ಕಾಲದಲ್ಲಿ ಒಂದು ದೇಶ ದೊಡ್ಡ ಯುದ್ಧಮಾಡಿತು. ಆ ದೇಶದ ರಾಜನ ಸಾವಿರಾರು ಸೈನಿಕರು ಯುದ್ಧಮಾಡಿದರು. ಆದರೆ ರಾಜ ಅವರಿಗೆ ಸಾಕಷ್ಟು ಸಂಬಳ ಕೊಡುತ್ತಿರಲಿಲ್ಲ. ಅವನು ಕೊಡುತ್ತಿದ್ದ ಸಂಬಳ ಊಟಕ್ಕೆ ಸಾಲುತ್ತಿರಲಿಲ್ಲ. ಹೀಗಾಗಿ ಮೂವರು ಸೈನಿಕರು ಸೈನ್ಯದಿಂದ ಓಡಿಹೋಗಲು ತೀರ್ಮಾನಿಸಿದರು. ಅವರಲ್ಲಿ ಒಬ್ಬ ಸೈನಿಕ ತಾವು ಓಡಿಹೋಗುವಾಗ ಸಿಕ್ಕಿಬಿದ್ದರೆ ಗತಿ ಏನು ಎಂದು ಕೇಳಿದನು. ಎಲ್ಲರನ್ನು ಗಲ್ಲಿಗೆ ಏರಿಸುವರಲ್ಲ, ಏನು ಮಾಡುವುದು ಎಂದನು. ಆಗ ಅವರಲ್ಲಿ ಒಬ್ಬ ಸೈನಿಕ "ಅಲ್ಲಿ ಕಾಣುತ್ತಿದೆಯಲ್ಲ, ಹೊಲ, ಅಲ್ಲಿ ಅಡಗಿಕೊಳ್ಳೋಣ. ನಮ್ಮನ್ನು ಯಾರೂ ನೋಡುವುದಿಲ್ಲ. ಅಲ್ಲಿಗೆ ಬರಲು ಯಾರಿಗೂ ಧೈರ್ಯವಿಲ್ಲ. ಅಲ್ಲದೆ ಸೈನ್ಯ ನಾಳೆ ಮುಂದಕ್ಕೆ ಹೋಗುತ್ತದೆ" ಎಂದು ಹೇಳಿದನು. ಹೀಗೆ ಅವರೆಲ್ಲರೂ ಹೊಲದ ತೆನೆಗಳ ಬುಡಕ್ಕೆ ತೆವಳಿಕೊಂಡು ಹೋದರು. ಆದರೆ ಸೈನ್ಯ ತನ್ನ ಮುಂದಿನ ಪ್ರಯಾಣ ಮಾಡದೆ ಇದ್ದಲ್ಲೆ ಉಳಿಯಿತು. ಹೀಗಾಗಿ ಆ ಮೂವರು ಸೈನಿಕರು ಎರಡು ಹಗಲು ಮತ್ತು ಎರಡು ರಾತ್ರಿಗಳನ್ನು ಆ ಹೊಲದಲ್ಲಿ ಕಳೆಯಬೇಕೆಂದು ತೀರ್ಮಾನಿಸಿದರು. ಆದ್ದರಿಂದ ಅವರಿಗೆ ಹಸಿವು ಕಾಡಕೊಡತೊಡಗಿತು. ತಾವು ಹಸಿವಿನಿಂದ ಸತ್ತೇಹೋಗಬಹುದು ಎಂದು ಅವರಿಗೆ ಅನಿಸಿತು. ಸೈನ್ಯಕ್ಕೆ ಹಿಂದಿರುಗಿದರೂ ಕೂಡ ಅವರಿಗೆ ಸಾವು ಖಚಿತವಾಗಿತ್ತು. "ಸೈನ್ಯದಿಂದ ತಪ್ಪಿಸಿಕೊಂಡು ಹೇಗಾದರೂ ಬದುಕೋಣ ಅಂದುಕೊಂಡರೆ ಈಗ ಹಸಿವಿನಿಂದ ಸಾಯುವಂತಾಯಿತಲ್ಲ" ಎಂದು ಅಂದುಕೊಂಡರು. ಅವರು ಹಾಗೆ ಮಾತನಾಡುತ್ತಿರುವಾಗಲೆ ಒಂದು ದೊಡ್ಡ ಭಯಂಕರ ಡ್ರಾಗನ್ ಹಾರಿಕೊಂಡು ಬಂದಿತು. "ನೀವು ನನಗೆ ಏಳು ವರ್ಷ ಸೇವೆ ಮಾಡಿದರೆ, ನಾನು ನಿಮ್ಮನ್ನು ಯಾರಿಗೂ ಕಾಣದಂತೆ ಈ ಜಾಗದಿಂದ ಕರೆದುಕೊಂಡು ಹೋಗುತ್ತೇನೆ" ಎಂದು ಹೇಳಿತು.

"ನಮಗೆ ಬೇರೆ ದಾರಿಯೇ ಇಲ್ಲ. ನಿನ್ನ ಷರತ್ತಿಗೆ ನಾವು ಒಪ್ಪಿಕೊಳ್ಳಲೇಬೇಕಾಗಿದೆ" ಎಂದು ಸೈನಿಕರು ಉತ್ತರಿಸಿದರು. ಆ ಡ್ರಾಗನ್, ಅವರನ್ನು ತನ್ನ ಪಂಜಗಳಲ್ಲಿ ಹಿಡಿದುಕೊಂಡು, ಯಾರಿಗೂ ತಿಳಿಯದಂತೆ

ಬೇರೆ ಕಡೆ ಇಳಿಸಿತು. ಆ ಡ್ರಾಗನ್ ಒಂದು ದುಷ್ಟ ದೆವ್ವವಾಗಿತ್ತು. ಅವರಿಗೆಲ್ಲ ಒಂದೊಂದು ಚಾಟಿಯನ್ನು ಕೊಟ್ಟು "ನೀವು ಈ ಬಾವಿಗೆ ಚಾಟಿಯಿಂದ ಹೊಡೆಯಿರಿ. ಅದರ ಬಿರುಕಿನಿಂದ ನಿಮಗೆ ಬೇಕಾದಷ್ಟು ಹಣ ಉದುರುತ್ತದೆ. ಅದನ್ನು ತೆಗೆದುಕೊಂಡು ನೀವು ಶ್ರೀಮಂತರಾಗಬಹುದು. ನಿಮ್ಮದೆ ಆದ ಕುದುರೆ ಮತ್ತು ರಥವನ್ನು ಇಟ್ಟುಕೊಳ್ಳಬಹುದು. ಆದರೆ ಏಳು ವರ್ಷದ ಕೊನೆಗೆ ನೀವು ನನ್ನವರಾಗುತ್ತೀರಿ" ಎಂದು ಹೇಳಿತು. ಅಷ್ಟು ಹೇಳಿ ಅವರಿಗೆ ಒಂದು ಪುಸ್ತಕವನ್ನು ಕೊಟ್ಟಿತು. ಅದರಲ್ಲಿ ಅವರ ಹೆಸರು ಬರೆಯಲು ಹೇಳಿತು. ತನ್ನ ಸೆರೆಯಿಂದ ಬಿಡಿಸಿಕೊಳ್ಳಲು ಒಂದು ಅವಕಾಶವನ್ನು ಕೊಡುವುದಾಗಿ ಹೇಳಿತು. ಏನೆಂದರೆ, ಅದರ ಒಗಟನ್ನು ಅವರು ಬಿಡಿಸಬೇಕಾಗಿತ್ತು. ನಂತರ ಡ್ರಾಗನ್ ಹಾರಿಕೊಂಡು ಹೋಯಿತು. ಆ ಮೂವರು ತಮಗೆ ಕೊಟ್ಟಿದ್ದ ಚಾಟಿಯಿಂದ ಬಾವಿಗೆ ಹೊಡೆದರು. ತಮಗೆ ಬೇಕಾದಷ್ಟು ಹಣ ತೆಗೆದುಕೊಂಡರು. ಆ ಹಣದಿಂದ ಉತ್ತಮ ಬಟ್ಟೆಗಳನ್ನು ಖರೀದಿಸಿದರು. ಅವುಗಳನ್ನು ಧರಿಸಿ ಸಭ್ಯ ನಾಗರಿಕರಂತೆ ಪ್ರಯಾಣ ಶುರು ಮಾಡಿದರು. ಅವರು, ಎಲ್ಲಿಗೆ ಹೋದರೂ ಅತ್ಯಂತ ವೈಭವದ ಜೀವನ ನಡೆಸಿದರು. ತಮಗೆ ತೃಪ್ತಿ ಸಿಗುವಷ್ಟು ಕುಡಿದರು, ತಿಂದರು. ಅವರಿಗೆ ಯಾವ ರೀತಿಯ ತೊಂದರೆಯೂ ಆಗಲಿಲ್ಲ. ಕಾಲ ಕಳೆದದ್ದೆ ಅವರಿಗೆ ತಿಳಿಯಲಿಲ್ಲ. ಏಳನೇ ವರ್ಷವೂ ಕೂಡ ಮುಗಿಯುತ್ತಾ ಬಂದಿತು. ಅವರಲ್ಲಿ ಇಬ್ಬರು ಸೈನಿಕರು ಡ್ರಾಗನ್‌ನ ಸೇವಕರಾಗಬೇಕಲ್ಲ ಎಂಬ ಚಿಂತೆಯನ್ನು ಹಚ್ಚಿಕೊಂಡು ಕೊರಗತೊಡಗಿದರು. ಆದರೆ ಮೂರನೆಯವನು ಮಾತ್ರ ಆ ವಿಷಯವನ್ನು ಹಗುರವಾಗಿ ತೆಗೆದುಕೊಂಡು "ಹೆದರಬೇಡಿ, ನನ್ನ ಅಣ್ಣಂದಿರಾ! ನನ್ನ ತಲೆಯಲ್ಲಿ ಒಂದು ಉಪಾಯವಿದೆ. ಅದರಿಂದ ಡ್ರಾಗನ್ನನ ಒಗಟನ್ನು ಬಿಡಿಸುತ್ತೇನೆ" ಎಂದು ಸಮಾಧಾನ ಮಾಡಿದಮ. ನಂತರ ಅವರು ಹೊಲದೊಳಗೆ ಹೋಗಿ ಕುಳಿತುಕೊಂಡರು. ಅವರಲ್ಲಿ ಇಬ್ಬರು ದುಃಖದಿಂದ ಮುಖ ಇಳಿಬಿಟ್ಟುಕೊಂಡಿದ್ದರು. ಅದೇ ವೇಳೆಗೆ ಒಬ್ಬ ಮುದುಕಿ ಅಲ್ಲಿಗೆ ಬಂದಳು. ಅವರು ಯಾಕೆ ದುಃಖಿತರಾಗಿದ್ದಾರೆಂದು ಕೇಳಿದಳು. "ಅಯ್ಯೋ! ಏನು ಹೇಳೋಣ? ನೀನು ಕೂಡ ಸಹಾಯ ಮಾಡಲಾರೆ" ಎಂದರು. "ಯಾರಿಗೆ ಗೊತ್ತು? ಮೊದಲು ನಿಮ್ಮ ದುಃಖದ ಕಾರಣವನ್ನು ಹೇಳಿ" ಎಂದು ಕೇಳಿದಳು. ಆಗ, ಅವರು ತಮ್ಮ ವ್ಯಥೆಯ ಕತೆಯನ್ನು ಹೇಳಿದರು. ಏಳು ವರ್ಷಗಳ ಕೆಳಗೆ, ಹಣಕ್ಕಾಗಿ ಒಂದು ದುಷ್ಟ ದೆವ್ವಕ್ಕೆ ಒತ್ತೆಯಾಳುಗಳಾಗಿರುವುದಾಗಿ ಹೇಳಿದರು. ಅದು ಹೇಳುವ ಒಗಟನ್ನು ಬಿಡಿಸದಿದ್ದರೆ ತಾವು ಅದಕ್ಕೆ ಶರಣಾಗತರಾಗಬೇಕಾಗಿದೆ ಎಂದು ತಿಳಿಸಿದರು. ಆಗ, ಆ ಮುದುಕಿ, "ನಿಮಗೆ ಸಹಾಯ ಬೇಕಿದ್ದರೆ, ನಿಮ್ಮಲ್ಲಿ ಒಬ್ಬರು ಕಾಡಿನೊಳಗೆ ಹೋಗಬೇಕು. ಅಲ್ಲಿ ತಲೆಕೆಳಗಾದ ಬಂಡೆಯಿಂದ ಮಾಡಿದ ಗುಡಿಸಲು ಹುಡುಕಬೇಕು, ಅದರೊಳಗೆ ಹೋದರೆ ಸಹಾಯ ಸಿಗುತ್ತದೆ" ಎಂದು ಹೇಳಿದಳು.

ಸೈನಿಕರಲ್ಲಿ ಇಬ್ಬರು ನಿರುತ್ಸಾಹಿಗಳಾಗಿದ್ದರು. ಅವರಿಗೆ ಆ ಮುದುಕಿಯ ಮಾತಿನಿಂದ ಸಹಾಯ ಸಿಗಬಹುದು ಎನ್ನುವ ನಂಬಿಕೆ ಬರಲಿಲ್ಲ. ಆದರೆ ಉಲ್ಲಾಸದಿಂದ ಇದ್ದ ಸೈನಿಕ ಕೂಡಲೆ ಎದ್ದು ಕಾಡಿನೊಳಗೆ ಹೋದನು. ಅಲ್ಲಿ ಅವನಿಗೆ ಕಲ್ಲಿನ ಗುಹೆ ಸಿಕ್ಕಿತು. ಅದರೊಳಗೆ ತುಂಬ ವಯಸ್ಸಾದ ಮುದುಕಿ ಕುಳಿತ್ತಿದ್ದಳು. ಅವಳು ಆ ಕೆಟ್ಟ ದೆವ್ವದ ಅಜ್ಜಿ ಆಗಿದ್ದಳು. ಅವನು ಒಳಗೆ ಹೋದಾಗ, ಅವನ ಎಲ್ಲ ವಿಚಾರವನ್ನು ಕೇಳಿ ತಿಳಿದುಕೊಂಡಳು. ಅವನು ನಡೆದುದ್ದೆಲ್ಲವನ್ನೂ ಹೇಳಿದನು. ಅವನ ಸರಳ ನಡತೆಯಿಂದ ಮುದುಕಿಗೆ ತುಂಬ ಸಂತೋಷವಾಯಿತು. ಅವನ ಮೇಲೆ ಕರುಣೆ ಬಂದಿತು. ಅವನಿಗೆ ಸಹಾಯ ಮಾಡುವುದಾಗಿ ಹೇಳಿದಳು.

ನಂತರ ಅವಳು ಒಂದು ದೊಡ್ಡ ಕಲ್ಲನ್ನು ಮೇಲಕ್ಕೆಳೆದಳು. ಅದರ ಕೆಳಗೆ ಒಂದು ಕೋಣೆ ಇತ್ತು. ಅಲ್ಲಿ ಸೈನಿಕನಿಗೆ ಬಚ್ಚಿಟ್ಟುಕೊಳ್ಳಲು ಹೇಳಿದಳು. ಅಲ್ಲಿ ಶಾಂತವಾಗಿ ಕುಳಿಕುಕೊಂಡು ತಾನು ಡ್ರಾಗನ್ ಜೊತೆ ಮಾತನಾಡುವುದನ್ನು ಕೇಳಿಸಿಕೊ ಎಂದಳು. "ನಾನು ಒಗಟಿನ ಬಗ್ಗೆ ಕೇಳುವೆ. ಅವನು ಕೊಡುವ ಉತ್ತರವನ್ನು ನೆನಪಿಟ್ಟುಕೊ" ಎಂದು ಮತ್ತೆ ಹೇಳಿದಳು. ಮಧ್ಯೆ ರಾತ್ರಿ ಹನ್ನೆರಡು ಗಂಟೆಗೆ ಡ್ರಾಗನ್ ಹಾರಿಕೊಂಡು ಒಳಗೆ ಬಂದಿತು. ಊಟ ಹಾಕು ಎಂದಿತು. ಅಜ್ಜಿ ಮೇಜಿನ ಮೇಲೆ ಊಟ ಮತ್ತು ಮದ್ಯವನ್ನು ಇಟ್ಟಳು. ಇಬ್ಬರೂ ಒಟ್ಟಿಗೆ ಊಟಮಾಡಿದರು, ಕುಡಿದರು. ಡ್ರಾಗನ್ ತೃಪ್ತಿಯಿಂದ ಸಂತೋಷಪಡುತ್ತಿದ್ದಾಗ, ಅದರ ಸಾಹಸಗಳು ಏನು ಎಂದು ಕೇಳಿದಳು. ಎಷ್ಟು ಆತ್ಮಗಳು ಸಿಕ್ಕವು ಎಂದು ವಿಚಾರಿಸಿದಳು. ಅದಕ್ಕೆ ಅದು "ಈ ದಿನ ಒಳ್ಳೆಯ ಸಂಪಾದನೆ ಆಗಲಿಲ್ಲ. ಆದರೆ ಮೂರು ಜನ ಸೈನಿಕರನ್ನು ಸುರಕ್ಷಿತವಾಗಿ ಕಾಪಾಡಿಕೊಂಡಿದ್ದೇನೆ" ಎಂದು ಹೇಳಿತು. "ಆಹಾ, ಮೂರು ಸೈನಿಕರು! ಅವರನ್ನು ಸರಿಯಾಗಿ ಹಿಡಿದಿಟ್ಟುಕೊ, ಇಲ್ಲದಿದ್ದರೆ ತಪ್ಪಿಸಿಕೊಂಡಾರು" ಎಂದಳು ಮುದುಕಿ. "ಅವರು ನನ್ನವರು, ಅವರು ನನ್ನವರು" ಎಂದು ಖುಷಿಯಿಂದ ಡ್ರಾಗನ್ ಕೂಗಿತು. "ಯಾಕೆಂದರೆ, ನಾನು ಅವರಿಗೆ ಒಂದು ಒಗಟು ಹೇಳುವೆ, ಅವರಿಂದ ಅದನ್ನು ಬಿಡಿಸಿ ಹೇಳಲು ಸಾಧ್ಯವಿಲ್ಲ" ಎಂದು ಹೇಳಿತು.

" ಆ ಒಗಟು ಯಾವುದು?" ಎಂದು ಅಜ್ಜಿ ಕೇಳಿದಳು.

"ನಾನು ನಿನಗೆ ಹೇಳುತ್ತೇನೆ" ಎಂದು ಮೊಮ್ಮಗ ಹೇಳಿತು.

"ಉತ್ತರ ದಿಕ್ಕಿನಲ್ಲಿರುವ ದೊಡ್ಡ ಸಮುದ್ರದಲ್ಲಿ ಒಂದು ಸತ್ತ ಬೆಕ್ಕಿದೆ. ಅದು ಅವರಿಗೆ ಹುರಿದ ಮಾಂಸವಾಗುತ್ತದೆ. ತಿಮಿಂಗಿಲದ ಪಕ್ಕೆಲಬು ಅವರಿಗೆ ಬೆಳ್ಳಿ ಚಮಚವಾಗುತ್ತದೆ. ಮುದಿ ಕುದುರೆಯ ಕಾಲುಗೊರಸು ಅವರ ಮದ್ಯದ ಲೋಟವಾಗುತ್ತದೆ" ಎಂದು ಹೇಳಿ ಮಲಗಲು ಹೋಯಿತು. ನಂತರ ಅಜ್ಜಿ, ಕಲ್ಲು ಎತ್ತಿದಳು ಸೈನಿಕನನ್ನು ಹೊರಗೆ ಕರೆದಳು. "ಹೇಳಿದ್ದನ್ನೆಲ್ಲ ಕೇಳಿಸಿಕೊಂಡೆಯಾ?" ಎಂದು ವಿಚಾರಿಸಿದಳು. "ಇನ್ನು, ನನಗೆ ನಾನೇ ಹೇಗೆ ಸಹಾಯ ಮಾಡಿಕೊಳ್ಳಬೇಕೆಂದು ತಿಳಿಯಿತು" ಎಂದು ಉತ್ತರಿಸಿದನು.

ನಂತರ, ಅವನು ಯಾರಿಗೂ ಕಾಣದಂತೆ ಕಿಟಕಿಯಿಂದ ಜಾರಿಕೊಂಡು ಇಳಿದುಹೋದನು. ಹತ್ತಿರದ ರಸ್ತೆಯನ್ನು ಹಿಡಿದುಕೊಂಡು ಹೋಗಿ ತನ್ನ ಸಂಗಡಿಗರನ್ನು ಸೇರಿಸಿಕೊಂಡನು. ಗುಹೆಯಲ್ಲಿದ್ದ ಮುದುಕಿ, ಡ್ರಾಗನ್ ಒಗಟು ಬಿಡಿಸಿದ ಮಾತುಗಳನ್ನು ಕೇಳಲು ಹೇಗೆ ಸಹಾಯ ಮಾಡಿದನು ಎನ್ನವುದನ್ನು ಅವರಿಗೆ ವಿವರಿಸಿದನು. ಅಲ್ಲದೆ ಉತ್ತರ ಸಿಕ್ಕಿದ್ದರಿಂದ ತಮ್ಮ ಬಿಡುಗಡೆ ಖಚಿತವೆಂದು ಹೇಳಿದನು. ಆಗ ನಿರುತ್ಸಾಹಿಗಳಾಗಿದ್ದ ಸೈನಿಕರ ಮನಸ್ಸು ಹಗುರ ಮಾಡಿಕೊಂಡರು. ಡ್ರಾಗನ್ ಕೊಟ್ಟ ಚಾಟಿಯಿಂದ ಬಾವಿಗೆ ಹೊಡೆದು ತಮ್ಮ ಸುತ್ತಲೂ ಹಣದ ರಾಶಿ ಮಾಡಿಕೊಂಡರು.

ಮುಂದೆ ಕೆಲವೇ ದಿನಗಳಲ್ಲಿ ಏಳು ವರ್ಷ ಪೂರ್ತಿ ಮುಗಿಯಿತು. ಕೆಟ್ಟ ದೆವ್ವ ತನ್ನ ಪುಸ್ತಕ ಹಿಡಿದುಕೊಂಡು ಬಂದಿತು. ಅವರು ಮಾಡಿಕೊಂಡಿದ್ದ ಒಪ್ಪಂದವನ್ನು ತೋರಿಸಿತು. "ಈಗ ನಾನು ನಿಮ್ಮನ್ನು ನನ್ನ ರಾಜ್ಯಕ್ಕೆ ಕರೆದುಕೊಂಡು ಹೋಗುವೆ. ಅಲ್ಲಿ ನಿಮಗೆ ಊಟವಿದೆ. ನಿಮಗೆ ಯಾವ ಮಾಂಸ ಬೇಕು

ಎಂದು ಹೇಳಿ, ನೀವು ಎಲ್ಲಿಗೆ ಬೇಕಾದರೂ ಹೋಗಲು ಸ್ವತಂತ್ರವಿದೆ. ನಾನು ಕೊಟ್ಟ ಚಾಟಿಯನ್ನು ನೀವೆ ಇಟ್ಟುಕೊಳ್ಳಬಹುದು" ಎಂದು ಹೇಳಿತು.

"ದೊಡ್ಡ ಉತ್ತರ ಸಮುದ್ರದಲ್ಲಿ ಸತ್ತ ಬೆಕ್ಕಿದೆ, ಅದು ಹುರಿದ ಮಾಂಸವಾಗುತ್ತದೆ" ಎಂದು ಮೊದಲ ಸೈನಿಕ ಹೇಳಿದನು. ಅವನ ಸರಿಯಾದ ಉತ್ತರದಿಂದ ಆ ದುಷ್ಟ ದೆವ್ವಕ್ಕೆ ಸಿಟ್ಟು ಬಂದಿತು. "ಯಾವುದರಿಂದ ಚಮಚ ಮಾಡಲಾಗುತ್ತದೆ?" ಎಂದು ಎರಡನೆಯವನನ್ನು ಕೇಳಿತು. "ತಿಮಿಂಗಿಲದ ಪಕ್ಕೆಲಬು ಬೆಳ್ಳಿಯ ಚಮಚ ಆಗಿರುತ್ತದೆ" ಎಂದು ಎರಡನೆ ಸೈನಿಕ ಉತ್ತರಿಸಿದನು. ಆಗ, ಅದು ತನ್ನ ಮುಖವನ್ನು ಇನ್ನೂ ಉದ್ದ ಮಾಡಿಕೊಂಡಿತು. ಚಡಪಡ ಮಾಡುತ್ತಾ ಜೋರಾಗಿ ಗೊಣಗತೊಡಗಿತು. ನಂತರ ಮೂರನೆಯವನಿಗೆ "ನಿನ್ನ ಮದ್ಯದ ಲೋಟ ಯಾವುದು ಎಂದು ನಿನಗೆ ಗೊತ್ತೊ?" ಎಂದು ಕೇಳಿತು. "ಒಂದು ಮುದಿ ಕುದುರೆ ಕಾಲಿನ ಗೊರಸು" ಎಂದು ಅವನು ಉತ್ತರಿಸಿದನು.

ಆ ಉತ್ತರದಿಂದ ಆ ದುಷ್ಟ ದೆವ್ವ ದೊಡ್ಡ ಧ್ವನಿಯಲ್ಲಿ ಚೀರುತ್ತಾ ಹಾರಿಕೊಂಡು ಹೋಯಿತು. ಅವರು ಕೊಟ್ಟ ಸರಿಯಾದ ಉತ್ತರದಿಂದ ಅದಕ್ಕೆ ಅವಮಾನವಾಯಿತು. ಅವರ ಮೇಲಿದ್ದ ಅಧಿಕಾರ, ಯಜಮಾನಿಕೆ ಇಲ್ಲದಂತಾಯಿತು. ನಂತರ ಆ ಮೂವರು ಸೈನಿಕರು ದೆವ್ವ ಕೊಟ್ಟ ಚಾಟಿಯಿಂದ ತಮಗೆ ಬೇಕಾದಷ್ಟು ಹಣವನ್ನು ಮಾಡಿಕೊಂಡರು. ಆ ಹಣದಿಂದ ಅವರೆಲ್ಲರೂ ಸುಖ ಮತ್ತು ಸಮಾಧಾನದಿಂದ ತಮ್ಮ ಕೊನೆಗಾಲದವರೆಗೂ ಬದುಕಿದರು.

೪೧. ಗಾಜಿನ ಶವಪೆಟ್ಟಿಗೆ

ಒಂದು ಬಾರಿ, ಒಬ್ಬ ಜಾಣ ಮತ್ತು ಚುರುಕಾಗಿ ನಡೆಯುವ ದರ್ಜಿ ಹುಡುಗ ಅಲೆದಾಡುತ್ತಾ ದಾರಿ ತಪ್ಪಿ ಒಂದು ದೊಡ್ಡ ಕಾಡಿಗೆ ಬಂದನು. ಕತ್ತಲಾಗುತ್ತಾ ಬಂದಿತು. ಅಂತಹ ಭಯಂಕರ ನಿರ್ಜನ ಪ್ರದೇಶದಲ್ಲಿ ಅವನು ತನಗಾಗಿ ಮಲಗುವ ಜಾಗವನ್ನು ಹುಡುಕಿಕೊಳ್ಳಬೇಕಾಗಿತ್ತು. ಅಲ್ಲಿದ್ದ ಮೃದು ಹುಲ್ಲನ್ನೇ ತನ್ನ ಹಾಸಿಗೆಯಾಗಿ ಅವನು ಮಾಡಿಕೊಳ್ಳಬಹುದಿತ್ತು. ಆದರೆ ಕಾಡು ಪ್ರಾಣಿಗಳ ಯೋಚನೆ ಅವನಲ್ಲಿ ಭಯ ಹುಟ್ಟಿಸಿತು. ಆ ಹೆದರಿಕೆಯಿಂದ ಅವನು ರಾತ್ರಿಯನ್ನು ಒಂದು ಮರದ ಮೇಲೆ ಕಳೆಯಲು ತೀರ್ಮಾನಿಸಿದನು. ಅವನು ಒಂದು ದೊಡ್ಡ ಓಕ್ ಮರವನ್ನು ಅದರ ಮೇಲೆ ಹತ್ತಿದನು. ಅವನು ತನ್ನ ಅದೃಷ್ಟಕ್ಕೆ ದೇವರಿಗೆ ವಂದಿಸಿದನು. ಕಾಡಿನ ಬಿರುಸು ಗಾಳಿಯಿಂದ ಮರ ಅವನನ್ನು ರಕ್ಷಿಸಿತ್ತು. ಅವನು ಕತ್ತಲಿನಲ್ಲಿ ಕೆಲವು ಗಂಟೆಗಳನ್ನು ಚಳಿಯಲ್ಲಿ ಗಡಗಡನೆ ನಡುಗುತ್ತಾ ಕಳೆದನು. ಸ್ವಲ್ಪ ದೂರದಲ್ಲಿ ಮಿಣಗುವ ದೀಪ ಅವನಿಗೆ ಕಾಣಿಸಿತು. ಅಲ್ಲಿ ವಾಸವಾಗಿರುವ ಯಾರೋ ಒಬ್ಬ ಮನುಷ್ಯ ಆ ದೀಪವನ್ನು ಉರಿಸಿರಬೇಕೆಂದು ಅವನು ತಿಳಿದುಕೊಂಡನು. ಮರದ ಕೊಂಬೆಗಳಿಗಿಂತ ದೀಪವಿರುವ ಜಾಗ ಮಲಗಲು ಅತ್ಯುತ್ತಮವಾಗಿರುತ್ತದೆ ಎಂದು ಅವನು ಯೋಚಿಸಿದನು. ಅವನು ಬಹಳ ಎಚ್ಚರಿಕೆಯಿಂದ ಮರವನ್ನು ಇಳಿದು, ಬೆಳಕು ಬಂದ ಕಡೆಗೆ ನಡೆದನು. ಅಲ್ಲಿ ಅವನಿಗೆ ಒಂದು ಗುಡಿಸಲು ಸಿಕ್ಕಿತು. ಅದನ್ನು ಮರದ ಕೊಂಬೆಗಳಿಂದ ಮತ್ತು ಹುಲ್ಲಿನ ಜೊಂಡುಗಳಿಂದ ಕಟ್ಟಿದ್ದರು. ಅದರ ಬಾಗಿಲಿನ ಮೇಲೆ ಜೋರಾಗಿ



ಬಡಿದನು. ಅದು ತನ್ನಷ್ಟಕ್ಕೆ ತೆರೆದುಕೊಂಡಿತು. ಅದರೊಳಗೆ ವಯಸ್ಸಾದ, ತಲೆಯೆಲ್ಲಾ ಬಿಳಿಕೂದಲು ತುಂಬಿದ್ದ ಒಬ್ಬ ಮನುಷ್ಯನನ್ನು ನೋಡಿದನು. ಆ ಮುದುಕ ಬೇರೆ ಬೇರೆ ಬಣ್ಣದ ಹರಕು ಚಿಂದಿ ಬಟ್ಟೆಗಳಿಂದ ಮಾಡಿದ ನಿಲುವಂಗಿಯನ್ನು ತೊಟ್ಟಿದ್ದನು. ಆ ಮುದುಕ ತುಂಬ ಒರಟು ಧ್ವನಿಯಲ್ಲಿ "ಯಾರು ನೀನು? ನಿನಗೇನು ಬೇಕು?" ಎಂದು ಕೇಳಿದನು.

"ನಾನೊಬ್ಬ ಬಡ ದರ್ಜಿಯವನು. ದಟ್ಟ ಕಾಡಿನಲ್ಲಿ ಕಾರ್ಗತ್ತಲು ಹೆದರಿಕೆ ಹುಟ್ಟಿಸುತ್ತಿದೆ. ಆದ್ದರಿಂದ ಬೆಳಗಾಗುವವರೆಗೆ ನಿಮ್ಮ ಗುಡಿಸಲಿನಲ್ಲಿ ನಾನಿರಲು ದಯವಿಟ್ಟು ಅವಕಾಶ ಕೊಡಿ" ಎಂದು ದರ್ಜಿ ಕೇಳಿದನು. "ನಿನ್ನ ಪಾಡಿಗೆ ನೀನು ಹೋಗು. ನಿನ್ನಂತಹ ಅಲೆಮಾರಿಗಳಿಂದ ನನಗೇನೂ ಆಗಬೇಕಾಗಿಲ್ಲ. ಬೇರೆ ಎಲ್ಲಿಯಾದರೂ ಹೋಗು" ಎಂದು ಆ ಮುದುಕ ಸಿಟ್ಟಿನಿಂದ ಹೇಳುತ್ತ ದರ್ಜಿಯವನನ್ನು ಮನೆಯಿಂದ ಹೊರಗೆ ತಳ್ಳಲು ಪ್ರಯತ್ನಿಸಿದನು. ಆಗ ದರ್ಜಿ ಆ ಮುದುಕನ ಕೋಟನ್ನು ಹಿಡಿದುಕೊಂಡು ಅತಿಯಾಗಿ ಬೇಡಿಕೊಂಡನು. ಅಷ್ಟು ಒರಟಾಗಿದ್ದ ಮುದುಕನೂ ಕೂಡ ಅವನ ಬೇಡಿಕೆಗೆ ಕರುಣೆ ತೋರಿಸಿದನು. ದರ್ಜಿಯವನನ್ನು ಗುಡಿಸಲೊಳಗೆ ಕರೆದುಕೊಂಡು ಹೋಗಿ ತಿನ್ನಲು ಕೊಟ್ಟು, ಮಲಗಲು ಮೂಲೆಯಲ್ಲಿರುವ ಹಾಸಿಗೆ ತೋರಿಸಿದನು.

ಆಯಾಸಗೊಂಡಿದ್ದ ಆ ದರ್ಜಿಯವನಿಗೆ ಯಾವ ಜೋಗುಳಪದವೂ ಬೇಕಾಗಿರಲಿಲ್ಲ. ಆರಾಮಾಗಿ ಬೆಳಗಿನವರೆಗೂ ನಿದ್ದೆ ಮಾಡುತ್ತೇನೆ ಎಂದು ಹೇಳಿಕೊಂಡನು. ಅವನಿಗೆ ಜೋರಾಗಿ ಕಿರುಚುವ ಶಬ್ದ ಕೇಳದಿದ್ದರೆ ಅವನು ಇನ್ನೂ ಮಲಗಿಕೊಂಡೇ ಇರುತ್ತಿದ್ದನು. ಭಯಂಕರವಾಗಿ ಕಿರುಚುವ, ಅಳುವ ಕೂಗು ಗುಡಿಸಲಿಗೆ ನುಗ್ಗಿತು. ಅವನು ಇಲ್ಲದ ಧೈರ್ಯತಂದುಕೊಂಡು, ಅವಸರವಾಗಿ ಬಟ್ಟೆಹಾಕಿಕೊಂಡು ಹೊರಗೆ ಹೋದನು. ಅಲ್ಲಿ ಒಂದು ದೊಡ್ಡ ಕಪ್ಪು ಮೃಗ ಮತ್ತು ಒಂದು ಸುಂದರ ಮೇಕೆ ಜೋರಾಗಿ ಗುದ್ದಾಡುತ್ತಿದ್ದವು. ಅವುಗಳ ಕೂಗು ಗಾಳಿಯಲ್ಲಿ ತುಂಬಿಕೊಂಡು ಪ್ರತಿಧ್ವನಿಸುತ್ತಿತ್ತು. ಸ್ವಲ್ಪ ಹೊತ್ತು ಯಾವುದು ಜಯ

ಪಡೆಯುತ್ತದೆ ಎಂದು ಗೊತ್ತಾಗಲೇ ಇಲ್ಲ. ಕೊನೆಗೆ ಮೇಕೆ ತನ್ನ ಕೊಂಬುಗಳಿಂದ ತನ್ನ ಶತ್ರುವಿನ ಹೊಟ್ಟೆಯನ್ನು ಸೀಳಿತು. ಆಗ ಆ ಪ್ರಾಣಿ ಜೋರಾಗಿ ಕೂಗುತ್ತಾ ಕೆಳಗೆ ಬಿದ್ದಿತು. ಮೇಕೆಗೂ ಹೊಡೆತಗಳು ಬಿದ್ದಿದ್ದವು.

ದರ್ಜಿಯವನು ಆ ಹೊಡೆತವನ್ನು ಆಶ್ಚರ್ಯದಿಂದ ನೋಡುತ್ತಾ ನಿಂತುಕೊಂಡಿದ್ದನು. ಅವನು ಹತ್ತಿರದಲ್ಲೆ ಇರುವುದನ್ನು ಗಮನಿಸಿದ ಮೇಕೆ ಅವನ ಕಡೆ ನುಗ್ಗಿತು. ಅದು ಏನು ಮಾಡುತ್ತದೆ ಎಂದು ಅವನು ಊಹಿಸುವ ಮೊದಲೇ ಅವನನ್ನು ತನ್ನ ಕೊಂಬುಗಳಲ್ಲಿ ಸಿಕ್ಕಿಸಿಕೊಂಡು ಓಡಿತು. ತಗ್ಗು, ದಿಣ್ಣೆಗಳಲ್ಲಿ, ಕಾಡು, ಮೇಡುಗಳಲ್ಲಿ, ಕಣಿವೆ, ಪರ್ವತಗಳ ನಡುವೆ, ಹುಲ್ಲುಗಾವಲಿನ ಮೇಲೆ ಅವನ ಸಮೇತ ಓಡಿತು. ಅವನು ಅದರ ಕೊಂಬುಗಳನ್ನು ಗಟ್ಟಿಯಾಗಿ ಹಿಡಿದುಕೊಂಡು ಅದರ ಬೆನ್ನು ಹತ್ತಲು ಪ್ರಯತ್ನಿಸಿದನು. ಆಗಲಿಲ್ಲ. ಅದೃಷ್ಟವಿದ್ದ ಹಾಗೆ ಆಗಲಿ ಎಂದು ಸುಮ್ಮನಿದ್ದುಬಿಟ್ಟನು. ಅದು ಎಲ್ಲಿಗೆ ಕರೆದುಕೊಂಡು ಹೋಗುತ್ತೊ ಹೋಗಲಿ ಅಂದುಕೊಂಡನು. ಹಾಗೆ ಅಂದುಕೊಂಡ ಸ್ವಲ್ಪ ಸಮಯಕ್ಕೆ ಅವರು ಒಂದು ಬಂಡೆಯ ಅಂಚಿಗೆ ಬಂದರು. ದರ್ಜಿಯವನು ಮೆಲ್ಲಗೆ ಕೆಳಗಿಳಿದನು. ಅವನು ಗರಬಡಿದವರಂತೆ ಬಹಳ ಹೊತ್ತು ಸುಮ್ಮನೆ ನಿಂತುಬಿಟ್ಟನು. ಅವನಿಗೆ ಪ್ರಜ್ಞೆ ಬರುವವರೆಗೆ ಆ ಮೇಕೆ ಅವನ ಬಳಿಯೇ ಇತ್ತು. ನಂತರ ಕಲ್ಲುಬಂಡೆಯಲ್ಲಿ ಬಾಗಿಲ ಹಾಗೆ ಕಾಣುವ ಜಾಗದಲ್ಲಿ ತನ್ನ ಕೊಂಬುಗಳಿಂದ ಬಲವಾಗಿ ನೂಕಿತು. ಅದು ಬಿರುಕುಬಿಟ್ಟ ಹಾಗೆ ಬಾಯಿ ತೆರೆದುಕೊಂಡಿತು. ಬೆಂಕಿಯ ಜ್ವಾಲೆಗಳು ಮೇಲೆದ್ದವು. ಒಂದು ದೊಡ್ಡ ಹೊಗೆ ಎದ್ದಿತು. ಆ ಹೊಗೆಯಲ್ಲಿ ಮೇಕೆ ಎಲ್ಲಿದೆ ಎಂದು ದರ್ಜಿಯವನ ಕಣ್ಣಿಗೆ ಕಾಣಲಿಲ್ಲ. ಆಗ ಅವನಿಗೆ ಏನು ಮಾಡಬೇಕು, ಹೇಗೆ ಆ ಕಾಡಿನಿಂದ ಹೋಗಬೇಕು ಎಂದು ತಿಳಿಯದೆ ತಬ್ಬಿಬ್ಬಾಗಿ ನಿಂತಿದ್ದನು. ಅವನು ಹಾಗೇ ನಿಂತಿದ್ದಾಗ, ಆ ಬಂಡೆಯ ಕಡೆಯಿಂದ ಒಂದು ಧ್ವನಿ ಕೇಳಿಸಿತು. "ಇಲ್ಲಿ, ಬಾ ಒಳಗೆ. ಯಾವ ಅಪಾಯವೂ ಆಗುವುದಿಲ್ಲ. ಹೆದರಬೇಡ" ಎಂದು ಹೇಳಿತು. ಮೊದಲು ಒಳಗೆ ಹೋಗಲು ಅನುಮಾನಿಸಿದನು. ಆದರೆ ಅವನು ಸ್ವಲ್ಪ ಹೊತ್ತಿನಲ್ಲೆ ಯಾವುದೋ ಅಗೋಚರ ಶಕ್ತಿಗೆ ಒಳಗಾದವನಂತೆ ಧ್ವನಿಯನ್ನು ಹಿಂಬಾಲಿಸಿದನು. ಕಬ್ಬಿಣದ ಬಾಗಿಲನ್ನು ದಾಟಿಕೊಂಡು ಒಂದು ದೊಡ್ಡ ಹಜಾರದೊಳಗೆ ಹೋದನು. ಅದರ ಮೇಲ್ಛಾವಣಿ, ಗೋಡೆಗಳು, ನೆಲ ಎಲ್ಲವನ್ನೂ ಪ್ರಕಾಶಮಾನವಾಗಿ ಹೊಳೆಯುವ ಚೌಕ ಕಲ್ಲುಗಳಿಂದ ಮಾಡಿದ್ದರು. ಆ ಪ್ರತಿಯೊಂದು ಕಲ್ಲಿನ ಮೇಲೆ ಅವನಿಗೆ ಅಪರಿಚಿತವಾದ ಚಿತ್ರಗಳನ್ನು ಕೆತ್ತಲಾಗಿತ್ತು. ಅವನು ಎಲ್ಲವನ್ನು ಆಶ್ಚರ್ಯದಿಂದ ನೋಡುತ್ತಾ, ಮುಂದೆ ದಾರಿಯನ್ನು ಹುಡುಕುತ್ತಿದ್ದನು. ಆಗ ಮೊದಲಿನ ಧ್ವನಿ ಮತ್ತೆ ಹೇಳಿತು, "ಈ ಹಜಾರದ ಮಧ್ಯದ ಕಲ್ಲಿನ ಮೇಲೆ ಹೆಜ್ಜೆ ಇಡು. ನಿನ್ನ ಅದೃಷ್ಟವನ್ನು ಕಾದು ನೋಡು" ಎಂದಿತು.

ದರ್ಜಿಗೆ ಇನ್ನೂ ಸ್ವಲ್ಪ ಧೈರ್ಯ ಬಂದಿತು. ಅವನು ಕಾಲಿಟ್ಟ ತಕ್ಷಣವೆ ಕಲ್ಲು ಕೆಳಗೆ ಜಾರಿ ದಾರಿ ಮಾಡಿಕೊಟ್ಟಿತು. ಅವನು ನಿಧಾನವಾಗಿ ಕೆಳಗೆ ಜಾರಿದನು. ನಿಂತಾಗ ಅದೂ ಕೂಡ ಒಂದು ದೊಡ್ಡ ಕೋಣೆ ಆಗಿತ್ತು. ಆದರೆ ಅಲ್ಲಿ ಆಶ್ಚರ್ಯವನ್ನು ಹೆಚ್ಚಿಸುವ ಅನೇಕ ವಸ್ತುಗಳು ಇದ್ದವು. ಗೋಡೆಗಳನ್ನು ಗಾಜಿನ ವಸ್ತುಗಳಿಂದ ಅಲಂಕರಿಸಿದ್ದರು. ಬೀರುಗಳಲ್ಲಿ ಪಾರದರ್ಶಕ ಗಾಜಿನ ಪಾತ್ರೆಗಳನ್ನಿಟ್ಟಿದ್ದರು. ಕೆಲವನ್ನು ಬಣ್ಣ ಬಣ್ಣದ ದ್ರವಗಳಿಂದ ತುಂಬಿಟ್ಟಿದ್ದರು. ಇನ್ನು ಕೆಲವು ಗಾಜಿನ ಪಾತ್ರೆಗಳಲ್ಲಿ ನೀಲಿ ಹೊಗೆ ತುಂಬಿತ್ತು. ಆ

ಹಜಾರದ ನೆಲದ ಮೇಲೆ ಒಂದಕ್ಕೊಂದು ಎದುರಾಗಿ ಎರಡು ಗಾಜಿನ ಪೆಟ್ಟಿಗೆಗಳಿದ್ದವು. ಅವು ಅವನ ಕುತೂಹಲವನ್ನು ಹೆಚ್ಚಿಸಿದವು. ಅವನು ಗಾಜಿನ ಪೆಟ್ಟಿಗೆಗಳ ಹತ್ತಿರ ಹೋದನು. ಒಂದರಲ್ಲಿ ಒಂದು ಸುಂದರ ಭವನದ ಮಾದರಿ ಇತ್ತು. ಅದರಲ್ಲಿ ತೋಟದ ಮನೆಗಳು, ಕುದುರೆ ಲಾಯಗಳು, ಕೆಲವು ಪುಟ್ಟ ಮನೆಗಳು ಮತ್ತು ಬೇಕಾದ ಎಲ್ಲ ವಸ್ತುಗಳನ್ನು ಒಳಗೊಂಡಿತ್ತು. ಪ್ರತಿಯೊಂದೂ ಚಿಕ್ಕ ಚಿಕ್ಕದಾಗಿತ್ತು. ತುಂಬ ಸೂಕ್ಷ್ಮವಾಗಿ ಮಾಡಲಾಗಿತ್ತು. ಅದನ್ನು ಯಾರೋ ನಿಪುಣ ಕಲೆಗಾರ ಬಹಳ ಕುಶಲತೆಯಿಂದ ಮಾಡಿರಬೇಕು ಎಂದು ಭಾಸವಾಗುತ್ತಿತ್ತು. ಅವನು ಈ ವಸ್ತುವಿನಿಂದ ಕಣ್ಣುಗಳನ್ನು ಬೇರೆ ಕಡೆ ಹೊರಳಿಸಲು ಆಗಲಿಲ್ಲ. ಅಷ್ಟು ಆಶ್ಚರ್ಯಕರವಾಗಿತ್ತು. ಅಷ್ಟರಲ್ಲಿ ಆ ಧ್ವನಿ ಅವನನ್ನು ಎಚ್ಚರಿಸಿತು. ಇನ್ನೊಂದು ಗಾಜಿನ ಪೆಟ್ಟಿಗೆಯಲ್ಲಿರುವುದನ್ನು ನೋಡಲು ಹೇಳಿತು. ಅವನ ಆಶ್ಚರ್ಯ ಮುಗಿಲು ಮುಟ್ಟಿತು. ಏಕೆಂದರೆ ಅದರಲ್ಲಿ ಒಬ್ಬ ಸುಂದರ ಹುಡುಗಿ ಗಾಢವಾದ ನಿದ್ರೆ ಮಾಡುತ್ತಲಿದ್ದಳು. ತಲೆಯಿಂದ ಕಾಲಿನವರೆಗೂ ಹಳದಿ ಕೂದಲು ಮುಚ್ಚಿಕೊಂಡಿತ್ತು. ಅವಳ ಕಣ್ಣುಗಳು ಬಲವಾಗಿ ಮುಚ್ಚಿಕೊಂಡಿದ್ದವು. ಆದರೆ, ಅವಳ ಕೆನ್ನೆ ಕೆಂಪಾಗಿತ್ತು. ರಿಬ್ಬನ್ನು ಅವಳು ಉಸಿರಾಡಿದಾಗಲೆಲ್ಲ ಅಲ್ಲಾಡುತ್ತಿತ್ತು. ಹೀಗಾಗಿ, ಅವಳು ನಿಸ್ಸಂಶಯವಾಗಿ ಬದುಕಿದ್ದಳು. ದರ್ಜಿಯವನ ಹೃದಯ ಅವಳನ್ನು ನೋಡಿದಾಗ ಜೋರಾಗಿ ಹೊಡೆದುಕೊಳ್ಳುತ್ತಿತ್ತು. ಅವಳು ಇದ್ದಕ್ಕಿದ್ದಂತೆ ಕಣ್ಣು ಬಿಟ್ಟು ಸಂತೋಷದಿಂದ ಕೂಗಿಕೊಂಡು ಮತ್ತೆ ಕಣ್ಣು ಮುಚ್ಚಿಕೊಂಡಳು. ಅವಳು ಅವನನ್ನು ನೋಡಿ "ನನಗೆ ಬಿಡುಗಡೆ ಆಗುವ ಸಮಯ ಬಂದಿದೆ, ಬೇಗ, ಈ ಸೆರೆಯಿಂದ ನನ್ನನ್ನು ಬಿಡಿಸು. ನನ್ನ ಗಾಜಿನ ಪೆಟ್ಟಿಗೆಯ ಚಿಲಕವನ್ನು ತೆಗೆದುಬಿಡು. ಆಗ ನಾನು ಬಂಧನ ಮುಕ್ತಳಾಗುವೆ" ಎಂದು ಕೂಗಿಕೊಂಡಳು.

ದರ್ಜಿಯವನು ಸ್ವಲ್ಪವೂ ಹೆದರದೆ ಅವಳು ಹೇಳಿದ ಹಾಗೆ ಮಾಡಿದನು. ಗಾಜಿನ ಮುಚ್ಚಳವನ್ನು ಅವನು ತೆಗೆದ ತಕ್ಷಣವೇ ಅವಳು ಹೊರಗೆ ಬಂದಳು. ಆ ಹಜಾರದ ಒಂದು ಮೂಲೆಗೆ ಹೋದಳು. ಅಲ್ಲಿ ಒಂದು ಉದ್ದ ನಿಲುವಂಗಿಯನ್ನು ಹಾಕಿಕೊಂಡಳು. ನಂತರ ಅವಳು ಒಂದು ಕಲ್ಲಿನ ಮೇಲೆ ಕುಳಿತು ದರ್ಜಿಯವನನ್ನು ಹತ್ತಿರಕ್ಕೆ ಕರೆದು ಸ್ನೇಹದಿಂದ ಮುತ್ತು ಕೊಟ್ಟಳು. "ನನ್ನ ಬಹುದಿನಗಳ ಆಸೆಯ ರಕ್ಷಕನೆ, ದೇವರೇ ಕರುಣೆಯಿಂದ ನಿನ್ನನ್ನು ಇಲ್ಲಿಗೆ ಕಳುಹಿಸಿರುವನು. ನನ್ನ ದುಃಖಗಳನ್ನು ಕೊನೆಗಾಣಿಸಿದ್ದಾನೆ. ಈ ದಿನವೇ ನಿನ್ನ ಒಳ್ಳೆಯ ಅದೃಷ್ಟದ ಪ್ರಾರಂಭವಾಗಿದೆ. ದೇವರೆ ಆರಿಸಿ ಕಳಿಸಿರುವ ನೀನು ನನ್ನ ಗಂಡ. ನನ್ನ ಪ್ರೀತಿಯಿಂದ ಇಲ್ಲಿ ನೀನು ಯಾವ ತೊಂದರೆಯೂ ಇಲ್ಲದೆ ಪ್ರಶಾಂತ ಜೀವನವನ್ನು ನಡೆಸಬಹುದು. ನನ್ನ ಈ ಎಲ್ಲ ಶ್ರೀಮಂತಿಕೆಯನ್ನು ಅನುಭವಿಸಬಹುದು. ಈಗ ಕುಳಿತುಕೊಂಡು ನನ್ನ ದುರದೃಷ್ಟದ ಕತೆಯನ್ನು ಕೇಳು" ಎಂದು ಆ ಸುಂದರ ಹುಡುಗಿ ಹೇಳಿದಳು.

"ನಾನೊಬ್ಬ ಶ್ರೀಮಂತ ರಾಜನ ಮಗಳು. ನಾನಿನ್ನೂ ಮಗುವಾಗಿದ್ದಾಗಲೆ ನನ್ನ ತಂದೆ ತಾಯಿಗಳು ಸತ್ತುಹೋದರು. ನನ್ನ ಅಣ್ಣನಿಗೆ ನನ್ನನ್ನು ಚೆನ್ನಾಗಿ ನೋಡಿಕೊಳ್ಳಲು ಹೇಳಿದರು. ಅದೇ ಅವರ ಕೊನೆಯ ಆಸೆ ಆಗಿತ್ತು. ನನ್ನ ಅಣ್ಣನ ಮೂಲಕ ನಾನು ವಿದ್ಯಾಭ್ಯಾಸವನ್ನು ಪಡೆಯಬೇಕಾಗಿತ್ತು. ನಾವಿಬ್ಬರೂ ಪರಸ್ಪರ ತುಂಬಾ ಪ್ರೀತಿಸುತ್ತಿದ್ದೆವು. ನಮ್ಮಿಬ್ಬರ ಯೋಚನೆ ಮತ್ತು ನಡೆವಳಿಕೆ ಒಂದೇ ರೀತಿಯದಾಗಿರುತ್ತಿತ್ತು. ಹೀಗಾಗಿ ನಾವು ಮದುವೆ ಆಗದೆ ಒಂಟಿಯಾಗಿದ್ದುಕೊಂಡೇ ನಮ್ಮ ಜೀವನವನ್ನು ಕಳೆಯೋಣವೆಂದು ತೀರ್ಮಾನಿಸಿದೆವು. ನಮ್ಮ ಮನೆ ಎಂದೂ ಖಾಲಿಯಾಗಿರುತ್ತಿರಲಿಲ್ಲ. ಸ್ನೇಹಿತರು ಮತ್ತು ನೆರೆಹೊರೆಯವರು

ನಿರಂತರವಾಗಿ ನಮ್ಮ ಮನೆಗೆ ಬರುತ್ತಿದ್ದರು. ನಾವು ಕೂಡ ಅವರನ್ನು ಉದಾರವಾಗಿ ಕಾಣುತ್ತಿದ್ದೆವು. ಹೀಗಿರುವಾಗ, ಒಂದು ದಿನ ಸಾಯಂಕಾಲ ಒಬ್ಬ ಅಪರಿಚಿತ ಕುದುರೆಸವಾರಿ ಮಾಡಿಕೊಂಡು ನಮ್ಮ ಮನೆಯ ಅಂಗಳಕ್ಕೆ ಬಂದನು. ತಾನು ಅದೇ ದಿನ ಪಕ್ಕದ ಊರಿಗೆ ಹೋಗಲು ಆಗುವುದಿಲ್ಲವೆಂಬ ನೆಪವನ್ನು ಹೇಳಿದನು. ಆ ದಿನ ತನಗೆ ಉಳಿಯಲು ಜಾಗ ಕೊಡಿ ಎಂದು ಬೇಡಿದನು. ನಾವು ಅವನ ಬೇಡಿಕೆಯನ್ನು ಒಪ್ಪಿಕೊಂಡೆವು. ಅವನು ಆ ಸಂಜೆ ಇಡೀ ತನ್ನ ವಿವಿಧ ಸಾಹಸಗಳ ಬಗ್ಗೆ ಅನೇಕ ರೀತಿಯ ಸಂಭಾಷಣೆಗಳಿಂದ ನಮಗೆ ಮನೋರಂಜನೆಯನ್ನು ಒದಗಿಸಿದನು. ನನ್ನ ಅಣ್ಣ ಅವನಿಗೆ ಮರುಳಾದನು. ಅವನನ್ನು ಇನ್ನೊಂದೆರಡು ದಿನ ತಂಗಲು ಹೇಳಿದನು. ಅದಕ್ಕೆ ಆ ಅಪರಿಚಿತ ಸ್ವಲ್ಪ ಸಂಕೋಚಮಾಡಿಕೊಂಡು ನಂತರ ಒಪ್ಪಿದನು. ಆ ದಿನ ರಾತ್ರಿ ತುಂಬಾ ಹೊತ್ತು ಮಾತನಾಡಿದೆವು. ಆ ಅಪರಿಚಿತನಿಗೆ ಮಲಗಲು ಕೋಣೆಯನ್ನು ತೋರಿಸಿದ ನಂತರ ನಾನು ಅವಸರದಿಂದ ಮಲಗಲು ನನ್ನ ಕೋಣೆಗೆ ಹೋದೆನು. ನನಗೆ ತುಂಬಾ ಸುಸ್ತಾಗಿತ್ತು. ನನ್ನ ಮೆತ್ತನೆ ಹಾಸಿಗೆ ಮೇಲೆ ಮಲಗಿದ ತಕ್ಷಣವೆ ನಿದ್ದೆ ಬಂದು ಬಿಟ್ಟಿತು. ಇಂಪಾದ ಸಂಗೀತ ನಿದ್ದೆಯಿಂದ ನನ್ನನ್ನು ಎಚ್ಚರಗೊಳಿಸಿತು. ಸಂಗೀತವನ್ನು ಯಾವಾಗಿನಿಂದ ಶುರುಮಾಡಿದ್ದರೊ ಗೊತ್ತಾಗಲಿಲ್ಲ. ನನ್ನ ಪಕ್ಕದ ಕೋಣೆಯಲ್ಲಿ ಮಲಗಿರುವ ಕೆಲಸದಾಕೆಯನ್ನು ಕರೆಯಲು ತೀರ್ಮಾನಿಸಿದೆನು. ನನಗೇ ಆಶ್ಚರ್ಯವಾಗುವ ಹಾಗೆ ನನ್ನ ಬಾಯಿಯಿಂದ ಮಾತೇ ಹೊರಡಲಿಲ್ಲ. ನನ್ನ ಎದೆಯ ಮೇಲೆ ಏನೋ ಬಂಡೆಯನ್ನು ಹೇರಿದ ಹಾಗೆ ಆಗಿತ್ತು. ಯಾವುದೋ ಅಗೋಚರ ಶಕ್ತಿ ನನ್ನ ಮಾತಿನ ಶಕ್ತಿಯನ್ನು ಕಸಿದುಕೊಂಡ ಹಾಗೆ ಆಗಿತ್ತು. ಅದೇ ವೇಳೆಗೆ ಆ ಅಪರಿಚಿತ ಕೈಯಲ್ಲಿ ಒಂದು ದೀಪವನ್ನು ಹಿಡಿದುಕೊಂಡು ನನ್ನ ಕೋಣೆಗೆ ಬಂದನು. ನನ್ನ ಕೋಣೆಗೆ ಎರಡು ಬಾಗಿಲುಗಳು ಇದ್ದವು. ಅವುಗಳನ್ನು ಬಲವಾಗಿ ಹಾಕಿತ್ತು ಎಂದು ನನ್ನ ನಂಬಿಕೆಯಾಗಿತ್ತು. ಆದರೂ ಅವನು ಹೇಗೆ ಬಂದನೊ ಗೊತ್ತಿಲ್ಲ. ಅವನು ನನ್ನ ಹತ್ತಿರ ಬಂದನು. ಅವನು ತನ್ನ ಮಂತ್ರ ಶಕ್ತಿಯ ಸಹಾಯದಿಂದ ಸಂಗೀತ ನುಡಿಸಿ ನಾನು ಏಳುವ ಹಾಗೆ ಮಾಡಿದೆನೆಂದು ಹೇಳಿದನು. ಅವನು ನನ್ನ ಪ್ರೀತಿಸುವುದಾಗಿ ಹೇಳಿ ಕೈ ನೀಡಿದನು. ಅವನ ಮಾಂತ್ರಿಕ ಶಕ್ತಿಗೆ ಹೆದರಿ ನಾನು ಏನೂ ಹೇಳಲಿಲ್ಲ. ಅವನು ಬಹಳ ಹೊತ್ತು ನನ್ನ ಮುಂದೆ ನಿಂತುಕೊಂಡಿದ್ದನು. ನನ್ನಿಂದ ಒಪ್ಪಿಗೆ ಸಿಗಬಹುದೆಂದು ಕಾದಿದ್ದನು. ನಾನು ಸುಮ್ಮನೆ ಇದ್ದುದರಿಂದ ನನ್ನ ಮೇಲೆ ಸೇಡು ತೀರಿಸಿಕೊಳ್ಳುವುದಾಗಿ ಸಿಟ್ಟಿನಿಂದ ಹೇಳಿದನು. ನನ್ನ ಗರ್ವವನ್ನು ಮುರಿಯಲು ಸರಿಯಾದ ದಾರಿ ಹುಡುಕುವುದಾಗಿ ಹೇಳಿದನು. ಹಾಗೆ ಹೇಳುತ್ತಾ ಅವನು ನನ್ನ ಕೋಣೆಯಿಂದ ಹೊರಟುಹೋದನು. ನಾನು ಇಡೀ ರಾತ್ರಿಯನ್ನು ಬಹಳ ಕಳವಳದಿಂದ ಕಳೆದೆನು. ಬೆಳಗಿನವರೆಗೆ ನಿದ್ದೆ ಮಾಡಲೇ ಇಲ್ಲ. ಬೆಳಗಾದಾಗ ನಾನು ಬೇಗನೆ ಎದ್ದೆನು. ನಡೆದುದನ್ನು ಹೇಳಲು ನನ್ನ ಅಣ್ಣನ ಹತ್ತಿರಕ್ಕೆ ಓಡಿದೆನು. ಆದರೆ ಅವನು ತನ್ನ ಕೋಣೆಯಲ್ಲಿ ಇರಲಿಲ್ಲ. ಅವನು ಆ ಅಪರಿಚಿತನ ಜೊತೆ ಬೇಟೆ ಆಡಲು ಹೋಗಿರುವನೆಂದು ಸೇವಕರು ಹೇಳಿದರು.

"ಈ ಅಪರಿಚಿತನ ದುಷ್ಟತನ ನನಗೆ ಇಷ್ಟವಾಗಲಿಲ್ಲ. ನಾನು ಉಡುಪು ಬದಲಾಯಿಸಿಕೊಂಡೆನು. ರಥವನ್ನು ಸಿದ್ಧಪಡಿಸಲು ಹೇಳಿದೆನು. ನನ್ನ ಪ್ರೀತಿಯ ಕುದುರೆಗೆ ಜೀನು ಹಾಕಲು ಹೇಳಿದೆನು. ನಂತರ ಒಬ್ಬಳೇ ಒಬ್ಬ ಸೇವಕನೊಂದಿಗೆ ನಾಗಾಲೋಟದಿಂದ ಕಾಡಿಗೆ ಹೊರಟೆನು. ದಾರಿಯಲ್ಲಿ ನನ್ನ ಸೇವಕನ


ಕುದುರೆ ಬಿದ್ದುಬಿಟ್ಟಿತು. ಅವನು ತನ್ನ ಮೊಣಕಾಲನ್ನು ಮುರಿದುಕೊಂಡನು. ಹೀಗಾಗಿ ಅವನು ನನ್ನ ಜೊತೆ ಬರಲು ಆಗಲಿಲ್ಲ. ನಾನು ಅವನಿಗಾಗಿ ಕಾಯದೆ ನನ್ನ ಪ್ರಯಾಣವನ್ನು ಮುಂದುವರಿಸಿದೆನು. ಕೆಲವೇ ನಿಮಿಷಗಳಲ್ಲಿ ನಾನು ಆ ಅಪರಿಚಿತನನ್ನು ನೋಡಿದೆನು. ಅವನು ಒಂದು ಮೇಕೆಯ ಕೊರಳಿಗೆ ಹಗ್ಗವನ್ನು ಕಟ್ಟಿ ಅದನ್ನು ಎಳೆದುಕೊಂಡು ನನ್ನ ಕಡೆಗೆ ಬಂದನು. ನನ್ನ ಅಣ್ಣನನ್ನು ಎಲ್ಲಿ ಬಿಟ್ಟು ಬಂದ, ಆ ಮೇಕೆ ಹೇಗೆ ಅವನಿಗೆ ಸಿಕ್ಕಿತು ಎಂದು ಕೇಳಿದೆನು. ಯಾಕೆಂದರೆ ಅದರ ದೊಡ್ಡ ಕಣ್ಣುಗಳಿಂದ ಕಣ್ಣೀರು ಸುರಿಯುತ್ತಿತ್ತು. ನಾನು ಕೇಳಿದ ಪ್ರಶ್ನೆಗಳಿಗೆ ಉತ್ತರಿಸುವ ಬದಲು ಅವನು ನಗತೊಡಗಿದನು. ಆಗ ನನಗೆ ಇನ್ನೂ ಸಿಟ್ಟು ಹೆಚ್ಚಾಯಿತು. ಬಂದೂಕನ್ನು ತೆಗೆದುಕೊಂಡು ಆ ರಾಕ್ಷಸನಿಗೆ ಗುರಿಯಿಟ್ಟು ಹೊಡೆದೆನು. ಆದರೆ ಅದು ಹಿಂದಿರುಗಿ ಬಂದು ನನ್ನ ಕುದುರೆಗೆ ಬಡಿಯಿತು. ಕುದುರೆಯ ತಲೆಯನ್ನು ಒಡೆಯಿತು. ನಾನು ನೆಲದ ಮೇಲೆ ಬಿದ್ದೆನು. ಆ ಅಪರಿಚಿತ ಏನೊ ಮಂತ್ರಗಳನ್ನು ಮಣ, ಮಣ ಎಂದು ಗೊಣಗಿದನು. ಅದು ನನ್ನ ಪ್ರಜ್ಞೆಯನ್ನು ಕಳೆಯಿತು.

ನನಗೆ ಪ್ರಜ್ಞೆ ಬರುವ ಹೊತ್ತಿಗೆ ನಾನು ಗಾಜಿನ ಶವಪೆಟ್ಟಿಗೆಯೊಳಗೆ ಬಂದಿಯಾಗಿದ್ದೆನು. ಈ ನೆಲಮಾಳಿಗೆಯೊಳಗೆ ಇಷ್ಟುದಿನ ಇದ್ದೆನು. ಆ ಮಾಂತ್ರಿಕ ಮತ್ತೊಮ್ಮೆ ಬಂದಿದ್ದನು. ನನ್ನ ಅಣ್ಣನನ್ನು ಮೇಕೆಯನ್ನಾಗಿ ಮಾಡಿರುವೆನೆಂದು ಹೇಳಿದನು. ನನ್ನ ಅರಮನೆಯನ್ನು ಅದು ಇದ್ದ ಹಾಗೆಯೇ ಚಿಕ್ಕದಾಗಿ ಮಾಡಿ ಇನ್ನೊಂದು ಗಾಜಿನ ಪೆಟ್ಟಿಗೆಯೊಳಗೆ ಇಟ್ಟಿದ್ದೇನೆಂದು ಹೇಳಿದನು. ನನ್ನ ಜನರೆಲ್ಲರನ್ನು ಹೊಗೆ ಮಾಡಿ ಶೀಶೆಗಳಲ್ಲಿ ತುಂಬಿಟ್ಟಿರುವುದಾಗಿ ಹೇಳಿದನು. ನಾನು ಅವನ ಇಚ್ಛೆಯಂತೆ ನಡೆದುಕೊಂಡರೆ ಎಲ್ಲವನ್ನು ಮೊದಲಿನ ಹಾಗೆ ಮಾಡುವುದಾಗಿ ಹೇಳಿದನು. ತನಗೆ ಯಾವುದೂ ಕಷ್ಟವಲ್ಲವೆಂದು ಹೇಳಿದನು. ನಾನು ಅವನಿಗೆ ಮೊದಲು ಹೇಳಿದ್ದ ಹಾಗೆ ಹೇಳಿದೆನು. ಆಗ ಗಾಜಿನ ಮನೆಯ ಸೆರೆಯನ್ನು ಮತ್ತೆ ಅನುಭವಿಸಬೇಕಾಯಿತು. ಅಲ್ಲಿ ನೀನು ಇರುವವರೆಗೂ ನಾನು ಗಾಢವಾದ ನಿದ್ದೆಯಲ್ಲಿ ಮುಳುಗಿದ್ದೆನು. ಒಬ್ಬ ಯುವಕ ಬಂದು ನನ್ನನ್ನು ಬಿಡಿಸುವುದಾಗಿ ಹೇಳುವ ಕನಸು ನನಗೆ ಆಗಾಗ ಬೀಳುತ್ತಿತ್ತು. ನಾನು ಈ ದಿನ ಕಣ್ಣು ಬಿಟ್ಟಾಗ ನಿನ್ನನ್ನೇ ನೋಡಿದೆನು. ನನ್ನ ಕನಸು ನನಸಾಗುವುದೆಂದು ತಿಳಿದೆನು. ನೀನು ಈಗ ನನಗೆ ಸಹಾಯ ಮಾಡು ಎಂದು ರಾಜಕುಮಾರಿ ಹೇಳಿದಳು. ಮೊದಲು ಗಾಜಿನ ಪೆಟ್ಟಿಗೆಯೊಳಗಿರುವ ನನ್ನ ಅರಮನೆಯನ್ನು ಹೊರಗೆ ತೆಗೆದು ಆ ಅಗಲವಾದ ಬಂಡೆಯ ಮೇಲೆ ಇಡೋಣ" ಎಂದಳು.

ಆ ಚಿಕ್ಕ ಅರಮನೆಯನ್ನು ಬಂಡೆಯ ಮೇಲೆ ಇಟ್ಟ ತಕ್ಷಣವೇ ಅದು ಬೆಳೆಯತೊಡಗಿತು. ಬೆಳೆಯುತ್ತಿರುವ ಅರಮನೆಯೊಳಗೆ ರಾಜಕುಮಾರಿ ಮತ್ತು ದರ್ಜಿಯವನೂ ಕೂಡ ಇದ್ದರು. ಕೊನೆಗೆ ಅವರು ಕೆಳಗಿನ ನೆಲಮಾಳಿಗೆಯಿಂದ ಮೇಲಿನ ಕೋಣೆಗೆ ಬಂದರು. ಅಲ್ಲಿಂದ ಅವರು ಹೊರಗಿನ ಗಾಳಿಗೆ ಓಡಿದರು. ಅರಮನೆ ತನ್ನ ಮೊದಲಿನ ಆಕಾರಕ್ಕೆ ಬಂದಿತು. ತೋಟದ ಪುಟ್ಟ ಮನೆಗಳು, ಕುದುರೆ ಲಾಯ ಎಲ್ಲವೂ ಮೊದಲಿದ್ದಂತೆ ಆದವು. ನಂತರ ಅವರು ಕಲ್ಲಿನ ಗುಹೆಯ ಕಡೆ ತಿರುಗಿದರು. ಆ ಕಲ್ಲನ್ನು ತಿರುಗಿಸಿ ಹೊಗೆ ತುಂಬಿದ ಬಾಟಲಿಗಳನ್ನು ಹೊರಗೆ ತಂದರು. ಅವರು ಅವುಗಳ ಮುಚ್ಚಳವನ್ನು ತೆಗೆದಾಕ್ಷಣ ನೀಲಿ ಹೊಗೆ ಹೊರಗೆ ಬಂದು ಮನುಷ್ಯರ ಆಕಾರವನ್ನು ಪಡೆದು ನಿಂತರು. ರಾಜಕುಮಾರಿ ತನ್ನ ಸೇವಕ, ಸೇವಕಿಯರನ್ನು ಗುರುತಿಸಿದಳು. ಅದೇ ವೇಳೆಗೆ ಕಾಡಿನಿಂದ ಮೇಕೆಯ ರೂಪದಲ್ಲಿದ್ದ ಅವಳ ಅಣ್ಣ ಹೊರಗೆ ಬಂದಾಗ ಅವರ

ಸಂತೋಷಕ್ಕೆ ಕೊನೆಯೇ ಇಲ್ಲದಾಯಿತು. ರಾಜಕುಮಾರಿ ಅದೇ ದಿನವೇ ದರ್ಜಿಯವನನ್ನು ಮದುವೆ ಆಗಿ ತನ್ನ ಸಂತೋಷವನ್ನು ಇನ್ನೂ ಹೆಚ್ಚಿಸಿಕೊಂಡಳು. ದರ್ಜಿ ರಾಜಕುಮಾರನಾಗಿ ಸುಖವಾಗಿದ್ದನು.

೪೨. ಸೈನಿಕ ಮತ್ತು ಸಂತ



ಒಂದಾನೊಂದು ಕಾಲದಲ್ಲಿ ದೊಡ್ಡ ಯುದ್ಧವೊಂದು ನಡೆಯಿತು. ಯುದ್ಧ ಮುಗಿದ ಮೇಲೆ ಸೈನಿಕರನ್ನೆಲ್ಲ ಕೆಲಸದಿಂದ ತೆಗೆದುಹಾಕಿದರು. ಅಂಥವರಲ್ಲಿ ಲಸ್ಟಿಗ್ ಎಂಬಾತ ಒಬ್ಬ. ಅವನಿಗೆ ಒಂದು ಬ್ರೆಡ್ ಮತ್ತು ನಾಲ್ಕು ಚಿನ್ನದ ನಾಣ್ಯಗಳನ್ನು ಕೊಟ್ಟು ಮನೆಗೆ ಕಳಿಸಿದರು. ಅವನು ಹೋಗುತ್ತಿದ್ದ ದಾರಿಯಲ್ಲಿ ಒಬ್ಬ ಸಂತ ಭಿಕ್ಷುಕನ ವೇಷ ಧರಿಸಿಕೊಂಡು ಕುಳಿತಿದ್ದ. ಏನಾದರೂ ದಾನ ಕೊಡುವಂತೆ ಆ ಸಂತ ಲಸ್ಟಿಗ್‌ನನ್ನು ಕೇಳಿದ. "ಅಯ್ಯಾ ಭಿಕ್ಷುಕನೇ, ಈಗಷ್ಟೇ ನನ್ನನ್ನು ಸೈನ್ಯದಿಂದ ತೆಗೆದುಹಾಕಿದ್ದಾರೆ. ನನ್ನ ಹತ್ತಿರ ಇರುವುದು ಇದೊಂದು ಬ್ರೆಡ್ಡು ಮತ್ತು ನಾಲ್ಕು ನಾಣ್ಯ ಅಷ್ಟೇ. ಇವು ಮುಗಿದರೆ ನಾನೂ ನಿನ್ನ ಹಾಗೆ ಭಿಕ್ಷೆ ಬೇಡಬೇಕಾಗುತ್ತದೆ. ಆದರೂ ಪರವಾಗಿಲ್ಲ. ನನ್ನ ಹತ್ತಿರ ಇರುವುದನ್ನು ನಿನ್ನೊಡನೆ ಹಂಚಿಕೊಳ್ಳುತ್ತೇನೆ" ಎಂದ ಲಸ್ಟಿಗ್. ಬ್ರೆಡ್ಡನ್ನು ನಾಲ್ಕು ತುಂಡು ಮಾಡಿ ಒಂದು ತುಂಡು ಭಿಕ್ಷುಕನ ವೇಷದಲ್ಲಿದ್ದ ಸಂತನಿಗೆ ನೀಡಿದ. ಜೊತೆಗೆ ಒಂದು ನಾಣ್ಯವನ್ನೂ ಕೊಟ್ಟ. ಸಂತ ಲಸ್ಟಿಗ್‌ಗೆ ವಂದನೆಗಳನ್ನು ಅರ್ಪಿಸಿ ಹೊರಟುಹೋದ. ಸ್ವಲ್ಪ ಮುಂದೆ ಅದೇ ದಾರಿಯಲ್ಲಿ ಇನ್ನೊಬ್ಬ ಭಿಕ್ಷುಕನ ಹಾಗೆ ವೇಷ ಧರಿಸಿ ಕುಳಿತುಕೊಂಡ. ಲಸ್ಟಿಗ್ ಅಲ್ಲಿಗೆ ಬಂದಾಗ ಮೊದಲಿನಂತೆಯೇ ಏನಾದರೂ ದಾನ ಕೊಡುವಂತೆ ಕೇಳಿದ. ಲಸ್ಟಿಗ್ ಮೊದಲ ಭಿಕ್ಷುಕನಿಗೆ ಹೇಳಿದಂತೆಯೇ ಹೇಳಿ ಇನ್ನೊಂದು ತುಣುಕು ಬ್ರೆಡ್ ಮತ್ತು ಇನ್ನೊಂದು ನಾಣ್ಯವನ್ನು ಕೊಟ್ಟ. ವಂದನೆಗಳನ್ನು ಹೇಳಿ ಸಂತ ಮತ್ತೆ ಇನ್ನಷ್ಟು ಮುಂದೆ ಹೋಗಿ ಮೂರನೆಯ ಭಿಕ್ಷುಕನ ವೇಷ ಧರಿಸಿ ಕುಳಿತುಕೊಂಡ. ಲಸ್ಟಿಗ್ ಅಲ್ಲಿಗೆ ಬಂದಾಗ ಏನಾದರೂ ದಾನ ಕೊಡುವಂತೆ ಕೇಳಿದ. ಲಸ್ಟಿಗ್ ಈ ಭಿಕ್ಷಕನಿಗೂ ತನ್ನ ಬಳಿ ಇದ್ದ ಮೂರನೆಯ ತುಣುಕು ಬ್ರೆಡ್ ಮತ್ತು ಮೂರನೆಯ ನಾಣ್ಯವನ್ನು ಕೊಟ್ಟ. ಅಲ್ಲಿಗೆ ಸಂತ ಲಸ್ಟಿಗ್‌ನ ಬೆನ್ನು ಹತ್ತುವುದನ್ನು

ಬಿಟ್ಟು ಹೊರಟುಹೋದ. ಲಸ್ಟಿಗ್ ದಾರಿಯಲ್ಲಿ ಸಿಕ್ಕಿದ ಒಂದು ಛತ್ರಕ್ಕೆ ಹೋಗಿ ತನ್ನ ಬಳಿ ಇದ್ದ ಒಂದು ತುಣುಕು ಬ್ರೆಡ್ ತಿಂದು, ಉಳಿದಿದ್ದ ಒಂದು ಚಿನ್ನದ ನಾಣ್ಯ ಕೊಟ್ಟು ಮದ್ಯವನ್ನು ಕುಡಿದ. ಲಸ್ಟಿಗ್ ಊಟ ಮುಗಿಸಿ ಮುಂದೆ ಹೊರಟಾಗ ಸಂತ ಸೈನಿಕನ ವೇಷ ಧರಿಸಿ ಮತ್ತೆ ಕಾಣಿಸಿಕೊಂಡ. "ಗೆಳೆಯಾ ನನಗೆ ತಿನ್ನಲು ಒಂದು ತುಣುಕು ಬ್ರೆಡ್ ಕೊಡು. ಕುಡಿಯಲು ಹಣ ಬೇಕು, ಒಂದು ನಾಣ್ಯ ಇದ್ದರೆ ಕೊಡು" ಎಂದು ಕೇಳಿದ. ಆಗ ಲಸ್ಟಿಗ್ "ನನ್ನ ಹತ್ತಿರ ಇದ್ದ ಬ್ರೆಡ್ಡನ್ನು ನಾಲ್ಕು ಭಾಗ ಮಾಡಿ ಮೂರು ಜನ ಭಿಕ್ಷುಕರಿಗೆ ಹಂಚಿಬಿಟ್ಟೆ. ನನ್ನ ಪಾಲಿನದನ್ನು ತಿಂದೆ. ನಾಲ್ಕು ನಾಣ್ಯಗಳಲ್ಲಿ ಮೂರು ದಾನ ಮಾಡಿ ನನ್ನ ಪಾಲಿನ ನಾಣ್ಯ ಖರ್ಚುಮಾಡಿ ಕುಡಿದುಬಿಟ್ಟೆ. ನಾನೂ ನಿನ್ನ ಹಾಗೇ ಕೆಲಸ ಕಳೆದುಕೊಂಡ ಸೈನಿಕ. ನಿನ್ನ ಹತ್ತಿರ ಏನೂ ಇಲ್ಲ, ನನ್ನ ಹತ್ತಿರವೂ ಏನೂ ಇಲ್ಲ. ಬಾ, ಇಬ್ಬರೂ ಒಟ್ಟಿಗೆ ಭಿಕ್ಷೆ ಬೇಡೋಣ" ಎಂದ ಲಸ್ಟಿಗ್.

"ಬೇಡ. ನಾನೇನೂ ಭಿಕ್ಷೆ ಬೇಡಬೇಕಾಗಿಲ್ಲ. ನನಗೆ ಖಾಯಿಲೆ ವಾಸಿಮಾಡುವ ವಿದ್ಯೆ ಗೊತ್ತು. ಅದರಿಂದ ಹೊಟ್ಟೆ ಪಾಡು ನೋಡಿಕೊಳ್ಳುತ್ತೇನೆ" ಎಂದು ಸಂತ ನುಡಿದ.

"ಸರಿ ಹಾಗಾದರೆ. ನನಗೆ ಅಂಥ ವಿದ್ಯೆಯೇನೂ ತಿಳಿದಿಲ್ಲ. ನನ್ನ ಪಾಡಿಗೆ ನಾನು ಹೋಗುತ್ತೇನೆ. ನಿನ್ನ ಪಾಡಿಗೆ ನೀನು ಹೋಗು" ಎಂದ ಲಸ್ಟಿಗ್.

"ನೀನೂ ಬೇಕಾದರೆ ನನ್ನ ಜೊತೆಗೆ ಬಾ. ನನಗೆ ಸಿಕ್ಕಿದ್ದರಲ್ಲಿ ಅರ್ಧ ನಿನಗೆ" ಎಂದ ಸಂತ ಸೈನಿಕ. ಸರಿ ಎಂದು ಒಪ್ಪಿ ಅವನೊಡನೆ ನಡೆದ.

ಅವರು ನಡೆಯುತ್ತಾ ಒಂದು ತೋಟದ ಮನೆಯ ಸಮೀಪಕ್ಕೆ ಬಂದರು. ಅಲ್ಲಿ ಜೋರಾಗಿ ಅಳುವ ಸದ್ದು ಕೇಳಿಸುತ್ತಿತ್ತು. ಸಂತ ಮತ್ತು ಸೈನಿಕ ಮನೆಯ ಒಳಕ್ಕೆ ಹೋಗಿ ನೋಡಿದರು. ಮನೆಯ ಯಜಮಾನ ಹಾಸಿಗೆ ಹಿಡಿದಿದ್ದ. ಅವನು ಇನ್ನೇನು ಈಗಲೋ ಆಗಲೋ ಸಾಯುವಂತಿದ್ದ. ಅವನ ಹೆಂಡತಿ ಹಾಸಿಗೆಯ ಪಕ್ಕದಲ್ಲಿ ಕುಳಿತು ಜೋರಾಗಿ ಅಳುತ್ತಿದ್ದಳು. "ಅಳಬೇಡ ನಾನು ನಿನ್ನ ಗಂಡನ ಖಾಯಿಲೆ ವಾಸಿಮಾಡುತ್ತೇನೆ" ಎಂದು ಸಂತ ನುಡಿದ. ಅಂಗಿಯ ಜೇಬಿನಿಂದ ಯಾವುದೋ ಮುಲಾಮು ತೆಗೆದು ಮನೆಯ ಯಜಮಾನನ ಮೈಗೆ ಸವರಿದ. ಸಾಯುವಂತಿದ್ದ ಮನುಷ್ಯ ತಟ್ಟನೆ ಎದ್ದು ಕುಳಿತ. ಗಂಡ ಹೆಂಡತಿಯರಿಗೆ ತುಂಬಾ ಸಂತೋಷವಾಯಿತು. ತಮ್ಮ ಸಂತೋಷವನ್ನು ಹಂಚಿಕೊಳ್ಳುವ ಸಲುವಾಗಿ ಸಂತನಿಗೆ ಏನಾದರೂ ಕಾಣಿಕೆ ಕೊಡಬೇಕೆಂದು ಅವರು ಬಯಸಿದರು. ಸಂತ ತನಗೆ ಏನೂ ಬೇಡವೆಂದ. ಅವರು ಬಲವಂತ ಮಾಡಿದರೂ ಆ ಸಂತ ತನಗಾಗಿ ಏನನ್ನೂ ತೆಗೆದುಕೊಳ್ಳಲು ಒಪ್ಪಲಿಲ್ಲ. ಸೈನಿಕ ಸಂತನ ಪಕ್ಕೆ ತಿವಿದು "ಏನಾದರೂ ತೆಗೆದುಕೋ, ನಮಗೆ ಬೇಕಾಗಬಹುದು" ಎಂದು ಪಿಸುಗುಟ್ಟಿದ. ಹೆಂಡತಿ ಒಂದು ಮೇಕೆ ಮರಿಯನ್ನು ತಂದಳು. ಸಂತ ಬೇಡವೆಂದ. ಸೈನಿಕ "ಮೇಕೆಯನ್ನಾದರೂ ತೆಗೆದುಕೋ, ನಮಗೆ ಬೇಕಾದೀತು" ಎಂದ. "ಸರಿ, ಈ ಮೇಕೆ ಮರಿಯನ್ನು ತೆಗೆದುಕೊಳ್ಳುವೆ. ಆದರೆ ನೀನೇ ಅದನ್ನು ಹೊರಬೇಕು. ಯಾಕೆಂದರೆ ಅದನ್ನು ಇಷ್ಟಪಡುವವನು ನೀನೇ ತಾನೇ" ಎಂದು ಸಂತ ಸೈನಿಕನಿಗೆ ಹೇಳಿದ. ಸೈನಿಕ ಮೇಕೆಯ ಕಾಲುಗಳನ್ನು ಹಗ್ಗದಿಂದ ಕಟ್ಟಿ ಬೆನ್ನ ಮೇಲೆ ಹೊತ್ತುಕೊಂಡ. ಅವರು ಮುಂದೆ ಸಾಗಿದರು. ದಾರಿಯಲ್ಲಿ ಒಂದು ಕಾಡು ಸಿಕ್ಕಿತು. ಸೈನಿಕನಿಗೆ ಬೆನ್ನಮೇಲೆ ಹೊತ್ತಿದ್ದ ಮೇಕೆಯ ಮರಿ ತುಂಬ ಭಾರವೆನ್ನಿಸತೊಡಗಿತು. ಹೊಟ್ಟೆ

ಹಸಿಯತೊಡಗಿತು. "ಈ ಜಾಗ ಚೆನ್ನಾಗಿದೆ. ಇಲ್ಲಿ ಮೇಕೆಯನ್ನು ಬೇಯಿಸಿಕೊಂಡು ತಿನ್ನೋಣ" ಎಂದು ಸೈನಿಕ ಸಂತನಿಗೆ ಹೇಳಿದ.

"ಸರಿ. ಆದರೆ ಅಡುಗೆ ಆಗುವವರೆಗೆ ನಾನು ಇಲ್ಲಿ ಇರಲಾರೆ. ಸುಮ್ಮನೆ ಸುತ್ತಾಡಿಕೊಂಡು ಬರುತ್ತೇನೆ. ಈ ಪಾತ್ರೆ ತೆಗೆದುಕೋ. ಅಡುಗೆ ಮಾಡು. ಆದರೆ ನಾನು ಬರುವವರೆಗೆ ತಿನ್ನಬಾರದು" ಎಂದು ಸಂತ ಹೇಳಿದ. "ನೀನು ಬೇಕಾದರೆ ಹೋಗು. ನನಗೆ ಅಡುಗೆ ಮಾಡುವುದು ಗೊತ್ತು. ನೀನು ಬರುವುದರೊಳಗೆ ಮಾಂಸ ಬೇಯಿಸಿ ಇಟ್ಟಿರುತ್ತೇನೆ" ಎಂದ ಸೈನಿಕ. ಮೇಕೆಯನ್ನು ಕೊಂದು, ಮಾಂಸವನ್ನು ಮಡಕೆಯಲ್ಲಿ ಹಾಕಿ ಬೇಯಿಸಲು ಇಟ್ಟ. ಸಂತ ಸುತ್ತಾಡಲು ಹೊರಟ.

ಅಡುಗೆ ಸಿದ್ಧವಾಯಿತು. ಸಂತ ಬರಲಿಲ್ಲ. ಸೈನಿಕ ಬೆಂದ ಮಾಂಸವನ್ನು ತೆಗೆದು ತುಂಡು ಮಾಡಿ ಹೃದಯದ ಭಾಗವನ್ನು ಹುಡುಕಿದ. ಮೇಕೆಯ ಮಾಂಸದಲ್ಲಿ ಇದೇ ಅತ್ಯುತ್ತಮ ಭಾಗ ಎಂದುಕೊಳ್ಳುತ್ತ ಅದನ್ನು ತಿಂದು ಮುಗಿಸಿದ. ಅಷ್ಟುಹೊತ್ತಿಗೆ ಸಂತ ಹಿಂದಿರುಗಿ "ಏನು, ಎಲ್ಲಾ ನೀನೇ ತಿನ್ನಬೇಕೆಂದಿದ್ದೀಯಾ? ನನಗೆ ಮೇಕೆಯ ಹೃದಯದ ಮಾಂಸ ಕೊಡು" ಎಂದು ಕೇಳಿದ. ಸೈನಿಕ ಚಾಕು, ಚಮಚ ಹಿಡಿದು ಮೇಕೆಯ ಹೃದಯ ಹುಡುಕುವವನಂತೆ ನಟಿಸಿದ. "ಮೇಕೆಯ ಹೃದಯ ಇಲ್ಲಿಲ್ಲವಲ್ಲಾ!" ಎಂದ. "ಹಾಗಾದರೆ ಅದು ಎಲ್ಲಿದೆ?" ಎಂದು ಸಂತ ಕೇಳಿದ. "ಗೊತ್ತಿಲ್ಲ" ಅಂದ ಸೈನಿಕ ಕೊಂಚ ಹೊತ್ತು ಯೋಚನೆ ಮಾಡಿ "ಅಯ್ಯೋ ನಾವೆಂಥ ದಡ್ಡರು! ಸುಮ್ಮನೆ ಹುಡುಕುತ್ತಿದ್ದೇವಲ್ಲ! ಮೇಕೆಗೆ ಹೃದಯ ಇರುವುದೇ ಇಲ್ಲ" ಎಂದ.

"ಎಲ್ಲ ಪ್ರಾಣಿಗಳಿಗೂ ಹೃದಯವಿರುತ್ತದೆ, ಮೇಕೆಗೆ ಇರುವುದಿಲ್ಲ ಎಂದರೆ ಹೇಗೆ ಸಾಧ್ಯ?" ಎಂದು ಸಂತ ಕೇಳಿದ.

"ಕೊಂಚ ಯೋಚನೆ ಮಾಡಿನೋಡು, ಮೇಕೆಗೆ ಹೃದಯವಿರುವುದಿಲ್ಲ ಎಂದು ನಿನಗೇ ಜ್ಞಾಪಕ ಬರುತ್ತದೆ" ಎಂದು ಸೈನಿಕ.

"ಸರಿ. ಹೃದಯವಿಲ್ಲದ ಮಾಂಸ ನನಗೆ ಬೇಡ. ಎಲ್ಲವನ್ನೂ ನೀನೇ ತಿನ್ನು" ಎಂದ ಸಂತ.

ಸೈನಿಕ ತನಗೆ ಬೇಕಾದಷ್ಟು ತಿಂದು ಉಳಿದದ್ದನ್ನು ತನ್ನ ಚೀಲದಲ್ಲಿ ಹಾಕಿಕೊಂಡ. ಇಬ್ಬರೂ ಮುಂದೆ ನಡೆದರು.

ದಾರಿಯಲ್ಲಿ ಅವರಿಗೆ ಒಂದು ಹಳ್ಳ ಎದುರಾಯಿತು. "ನೀನೇ ಮೊದಲು ಹೋಗು" ಎಂದು ಸೈನಿಕ ಸಂತನಿಗೆ ಹೇಳಿದ. ಅವನು ಹೋದಮೇಲೆ ನೀರು ಎಷ್ಟು ಆಳವಿದೆ ಎಂದು ತಿಳಿದುಕೊಂಡು ತಾನು ಆಮೇಲೆ ಹೋಗಬೇಕೆಂಬುದು ಅವನ ಉಪಾಯ. ಸಂತನೇ ಮೊದಲು ಹಳ್ಳ ದಾಟಿದ. ನೀರು ಅವನ ಮೊಳಕಾಲು ಮುಟ್ಟುತ್ತಿತ್ತು. ಸೈನಿಕ ನೀರಿಗೆ ಇಳಿದ. ನೀರು ಅವನ ಎದೆಯವರೆಗೆ ಬಂದಿತು. "ಸಹಾಯ ಮಾಡು" ಎಂದು ಅವನು ಸಂತನನ್ನು ಕೋರಿದ. "ಮೇಕೆಯ ಹೃದಯ ನೀನು ತಿಂದಿರುವೆ ಎಂದು ಒಪ್ಪಿಕೊಳ್ಳುವೆಯಾ?" ಎಂದು ಸಂತ ಕೇಳಿದ. "ಇಲ್ಲ, ನಾನು ತಿಂದಿಲ್ಲ" ಎಂದ ಸೈನಿಕ. ನೀರು ಅವನ ಕುತ್ತಿಗೆಯವರೆಗೆ ಬಂದಿತು. "ಸಹಾಯ ಮಾಡು" ಎಂದು ಸೈನಿಕ ಕೂಗಿಕೊಂಡ. "ಮೇಕೆಯ ಹೃದಯ

ನೀನು ತಿಂದಿರುವೆ ಎಂದು ಒಪ್ಪಿಕೊಳ್ಳುವೆಯಾ?" ಎಂದು ಸಂತ ಇನ್ನೊಮ್ಮೆ ಕೇಳಿದ. ಸೈನಿಕ ಮತ್ತೆ "ಇಲ್ಲ, ನಾನು ತಿಂದಿಲ್ಲ" ಎಂದೇ ಹೇಳಿದ. ನೀರು ಅವನ ಬಾಯಿಯವರೆಗೆ ಏರಿತು. ಸಂತ ತನ್ನ ಕೈನೀಡಿ ಸೈನಿಕನನ್ನು ಮೇಲಕ್ಕೆಳೆದುಕೊಂಡ. ಅವರಿಬ್ಬರೂ ಮುಂದೆ ಸಾಗಿದರು. ಅವರು ಒಂದು ದೊಡ್ಡ ಪಟ್ಟಣದ ಸಮೀಪಕ್ಕೆ ಬಂದರು. ಆ ಊರಿನ ರಾಜನ ಮಗಳು ಖಾಯಿಲೆಯಿಂದ ಸಾಯುವಂತಾಗಿದ್ದಾಳೆ ಎಂದು ಅವರಿಗೆ ತಿಳಿಯಿತು. "ಅಯ್ಯಾ ಗೆಳೆಯಾ, ನಮ್ಮ ಅದೃಷ್ಟ ಖುಲಾಯಿಸಿದೆ. ನೀನು ಅವಳ ಖಾಯಿಲೆ ವಾಸಿಮಾಡಿದರೆ ನಮಗೆ ಬೇಕಾದದ್ದು ದೊರೆಯುತ್ತದೆ" ಎಂದು ಸೈನಿಕ ಸಂತನಿಗೆ ಹೇಳಿದ. ಆದರೆ ಸಂತ ಅವಸರಪಡಲಿಲ್ಲ. "ಬೇಗ ಬೇಗ ಹೆಜ್ಜೆ ಹಾಕು. ಇಲ್ಲದಿದ್ದರೆ ತಡವಾಗಿಬಿಡುತ್ತದೆ. ರಾಜಕುಮಾರಿ ಸತ್ತುಹೋದಾಳು" ಎಂದು ಸೈನಿಕ ಅವಸರಪಡಿಸಿದ. ಅರಮನೆಯ ಬಳಿ ಹೋಗುವಷ್ಟರಲ್ಲಿ ರಾಜಕುಮಾರಿ ಸತ್ತಳು ಎಂಬ ಸುದ್ದಿ ಅವರ ಕಿವಿಗೆ ಬಿತ್ತು. "ಎಲ್ಲಾ ನಿನ್ನ ನಿಧಾನದಿಂದಲೇ ಆಗಿದ್ದು. ನಮ್ಮ ಅದೃಷ್ಟ ಕೈತಪ್ಪಿಹೋಯಿತು" ಎಂದು ಸೈನಿಕ ದುಃಖಿಸಿದ. "ಸುಮ್ಮನಿರು, ಖಾಯಿಲೆಯವರನ್ನು ವಾಸಿಮಾಡುವಂತೆಯೇ ಸತ್ತವರನ್ನು ಬದುಕಿಸುವುದೂ ನನಗೆ ಗೊತ್ತು" ಎಂದ ಸಂತ.

"ಹಾಗಾದರೆ ಇನ್ನೂ ಒಳ್ಳೆಯದೇ ಆಯಿತು. ನೀನು ಅವಳನ್ನು ಬದುಕಿಸಿ ಅರ್ಧ ರಾಜ್ಯವನ್ನೇ ಕೇಳಬೇಕು" ಎಂದು ಸೈನಿಕ ಹೇಳಿದ. ಇಬ್ಬರೂ ಅರಮನೆಗೆ ಹೋದರು. ಅಲ್ಲಿ ಎಲ್ಲರೂ ಬಹಳ ದುಃಖದಲ್ಲಿದ್ದರು. "ನಾನು ನಿನ್ನ ಮಗಳನ್ನು ಬದುಕಿಸುತ್ತೇನೆ" ಎಂದು ಸಂತ ರಾಜನಿಗೆ ಹೇಳಿದ. ರಾಜ ಅವನನ್ನು ತನ್ನ ಮಗಳ ಶವದ ಬಳಿಗೆ ಕರೆದೊಯ್ದ. ಸಂತ ತನಗೆ ಕೊಂಚ ನೀರು ಬೇಕೆಂದು ಕೇಳಿದ. ಎಲ್ಲರನ್ನೂ ಕೋಣೆಯಿಂದ ಆಚೆಗೆ ಕಳಿಸಿದ. ಸೈನಿಕ ಮಾತ್ರ ಅಲ್ಲೇ ಉಳಿದುಕೊಂಡ. ಸಂತ ರಾಜಕುಮಾರಿಯ ಅವಯವಗಳನ್ನು ಒಂದೊಂದಾಗಿ ಕತ್ತರಿಸಿ ನೀರಿನಲ್ಲಿ ಹಾಕಿ ಚೆನ್ನಾಗಿ ಕುದಿಸಿದ. ಕೊನೆಗೆ ಬರಿಯ ಮೂಳೆಗಳಷ್ಟೇ ಉಳಿದವು. ಆ ಮೂಳೆಗಳನ್ನು ಸರಿಯಾದ ಕ್ರಮದಲ್ಲಿ ಜೋಡಿಸಿ "ಜೀವವೇ ಮೇಲೇಳು" ಎಂದ ಸಂತ.

ಅವನು ಮೂರುಬಾರಿ ಕೂಗಿದ ಮೇಲೆ ರಾಜಕುಮಾರಿ ನಿದ್ದೆ ತಿಳಿದು ಎದ್ದವಳಂತೆ ಎದ್ದು ಕುಳಿತಳು. ರಾಜನಿಗೆ ಹಿಡಿಸಲಾರದಷ್ಟು ಸಂತೋಷವಾಯಿತು. "ನಿನಗೆ ಏನು ಬೇಕೋ ಕೇಳು, ಕೊಡುತ್ತೇನೆ. ಅರ್ಧ ರಾಜ್ಯ ಬೇಕಾದರೂ ಕೊಟ್ಟೇನು" ಎಂದ ರಾಜ.

"ನನಗೆ ಏನೂ ಬೇಡ, ನನಗೆ ಯಾವ ಆಸೆಯೂ ಇಲ್ಲ" ಎಂದು ಸಂತ ನುಡಿದ. ಸಂತನನ್ನು ಪಕ್ಕಕ್ಕೆ ಕರೆದು "ನಿನಗೆ ಏನೂ ಬೇಡದಿದ್ದರೆ ನನಗೆ ಬೇಕು, ನನಗೆ ಆಸೆ ಇದೆ" ಎಂದು ಸೈನಿಕ ಹೇಳಿದ. ರಾಜ ಅವನನ್ನು ಕಂಡು ತನ್ನ ಭಂಡಾರಿಯನ್ನು ಕರೆದು ಒಂದು ಚೀಲದ ತುಂಬ ಚಿನ್ನದ ನಾಣ್ಯಗಳನ್ನು ತರಿಸಿಕೊಟ್ಟ.

ಸೈನಿಕ ಮತ್ತು ಸಂತ ತಮ್ಮ ಪ್ರಯಾಣ ಮುಂದುವರೆಸಿದರು. ಅವರು ಒಂದು ಕಾಡಿಗೆ ಬಂದರು. "ಈಗ ನಾವು ಚಿನ್ನ ಹಂಚಿಕೊಳ್ಳೋಣ" ಎಂದ ಸೈನಿಕ. ಸಂತ ಹಾಗೆ ಆಗಲೆಂದು ಹೇಳಿ ಬಂಗಾರದ ನಾಣ್ಯಗಳನ್ನು ಮೂರು ಸಮ ಭಾಗ ಮಾಡಿದ. "ಇರುವುದು ನಾವಿಬ್ಬರು. ಚಿನ್ನವನ್ನು ಮೂರು ಭಾಗ ಏಕೆ ಮಾಡಿದೆ?" ಎಂದು ಸೈನಿಕ ಕೇಳಿದ. "ಒಂದು ನನಗೆ, ಒಂದು ನಿನಗೆ, ಇನ್ನೊಂದು ಮೇಕೆಯ ಹೃದಯವನ್ನು ತಿಂದವನಿಗೆ" ಎಂದು ಸಂತ ಉತ್ತರಿಸಿದ.

"ಮೇಕೆಯ ಹೃದಯವನ್ನು ತಿಂದವನು ನಾನೇ. ನನ್ನ ಮಾತು ನಂಬು. ಆ ಹಣ ನನಗೆ ಕೊಡು" ಎಂದು ಸೈನಿಕ ಹೇಳಿದ.

"ಅದು ಹೇಗೆ ಸಾಧ್ಯ? ಮೇಕೆಗೆ ಹೃದಯ ಇರುವುದಿಲ್ಲವಲ್ಲ? ಎಂದ ಸಂತ. "ಅಯ್ಯೋ, ಅದೇಕೆ ಹಾಗೆನ್ನುವೆ! ಹೃದಯವಿಲ್ಲದ ಪ್ರಾಣಿ ಯಾವುದೂ ಇಲ್ಲ. ಮೇಕೆಗೆ ಹೃದಯ ಇರುತ್ತದೆ. ಯೋಚನೆ ಮಾಡಿನೋಡು. ನಿನಗೇ ಜ್ಞಾಪಕ ಬರುತ್ತದೆ" ಎಂದ ಸೈನಿಕ. "ಸರಿ, ಈ ಹಣ ನೀನೇ ಇಟ್ಟುಕೋ. ನಿನ್ನಂಥವನೊಂದಿಗೆ ನಾನು ಬರಲಾರೆ. ನನ್ನ ದಾರಿ ನಾನು ಹಿಡಿದು ಹೋಗುತ್ತೇನೆ" ಎಂದು ಸಂತ ಬೇರೆ ದಿಕ್ಕಿಗೆ ಹೊರಟುಹೋದ. "ಅವನು ಹೋದದ್ದು ಒಳಿತೇ ಆಯಿತು. ಅವನೊಬ್ಬ ವಿಚಿತ್ರ ಮನುಷ್ಯ" ಅಂದುಕೊಂಡ ಸೈನಿಕ.

ಈಗ ಸೈನಿಕ ಲಸ್ಟಿಗ್‌ನ ಬಳಿ ಸಾಕಷ್ಟು ಹಣವಿತ್ತು. ಊರೂರು ಸುತ್ತಿದ. ಹಬ್ಬ ಮಾಡಿದ. ಔತಣಗಳನ್ನು ಕೊಟ್ಟ. ಗುರುತಾದವರಿಗೆ ಉಡುಗೊರೆಗಳನ್ನು ನೀಡಿದ. ಹೀಗೆ ಕೆಲವು ತಿಂಗಳು ಕಳೆಯುವುದರಲ್ಲಿ ಮತ್ತೆ ಬಡವನಾದ. ಸುತ್ತಾಡುತ್ತಾ ಒಂದು ಊರಿನ ಬಳಿಗೆ ಬಂದ. ಅಲ್ಲಿನ ರಾಜನ ಮಗಳು ಆಗಷ್ಟೆ ಸತ್ತಿರುವ ಸಂಗತಿ ಅವನಿಗೆ ತಿಳಿಯಿತು. ಅವಳನ್ನು ಬದುಕಿಸಿ ಬಹುಮಾನ ಪಡೆಯಬೇಕೆಂಬ ಯೋಚನೆ ಅವನಲ್ಲಿ ಮೂಡಿತು. ಸೀದಾ ರಾಜನ ಬಳಿಗೆ ಹೋಗಿ ರಾಜಕುಮಾರಿಯನ್ನು ಮತ್ತೆ ಬದುಕಿಸುವುದಾಗಿ ಹೇಳಿದ. ಸೈನಿಕನೊಬ್ಬ ಸತ್ತ ರಾಜಕುಮಾರಿಯೊಬ್ಬಳನ್ನು ಮತ್ತೆ ಬದುಕಿಸಿದ ಸಮಾಚಾರ ಆ ರಾಜನ ಕಿವಿಗೂ ಬಿದ್ದಿತ್ತು. ಇವನೇ ಆ ಸೈನಿಕ ಇರಬಹುದೆಂದು ಭಾವಿಸಿದ. ಏನು ಮಾಡಬೇಕೆಂದು ಮಂತ್ರಿಗಳನ್ನು ಕರೆದು ವಿಚಾರಿಸಿದ. ಒಂದು ಪ್ರಯತ್ನ ಮಾಡಿನೋಡಬಹುದೆಂದು ಮಂತ್ರಿಗಳು ನುಡಿದರು. ಸೈನಿಕನನ್ನು ರಾಜಕುಮಾರಿಯ ಶವದ ಬಳಿಗೆ ಕರೆದೊಯ್ದರು. ಸೈನಿಕ ತನಗೆ ಕೊಂಚ ನೀರು ಬೇಕೆಂದು ಕೇಳಿದ. ಎಲ್ಲರನ್ನೂ ಕೋಣೆಯ ಆಚೆಗೆ ಕಳಿಸಿದ. ರಾಜಕುಮಾರಿಯ ಅವಯವಗಳನ್ನು ಒಂದೊಂದಾಗಿ ಕತ್ತರಿಸಿ ನೀರಿನಲ್ಲಿ ಹಾಕಿ ಚೆನ್ನಾಗಿ ಕುದಿಸಿದ. ಕೊನೆಗೆ ಬರಿಯ ಮೂಳೆಗಳಷ್ಟೇ ಉಳಿದವು. ಆ ಮೂಳೆಗಳನ್ನು ಜೋಡಿಸಿ "ಜೀವವೇ ಮೇಲೇಳು" ಎಂದ. ಆದರೆ ಅವನು ಮೂಳೆಗಳನ್ನು ತಪ್ಪು ತಪ್ಪಾಗಿ ಜೋಡಿಸಿದ್ದ. ಯಾವ ಮೂಳೆಯೂ ಅಲುಗಲಿಲ್ಲ. "ದರಿದ್ರ ಮೂಳೆಗಳೇ, ನೀವು ಬದುಕದಿದ್ದರೆ ನಿಮ್ಮ ಗತಿ ನೆಟ್ಟಗಾಗುವುದಿಲ್ಲ" ಎಂದು ಅರಚಿದ. ಅಷ್ಟು ಹೊತ್ತಿಗೆ ಸಂತ ಮತ್ತೆ ಸೈನಿಕನ ವೇಷದಲ್ಲಿ ಅಲ್ಲಿ ಕಾಣಿಸಿಕೊಂಡ. "ಅಯ್ಯೋ ಪಾಪಿ, ಏನು ಮಾಡಲು ಹೊರಟಿರುವೆ? ಮೂಳೆಗಳನ್ನು ತಪ್ಪಾಗಿ ಜೋಡಿಸಿ ಮೇಲೆ ಏಳು ಎಂದರೆ ಹೇಗೆ ಆದೀತು?" ಎಂದ.

"ಏನೋ, ನನಗೆ ತಿಳಿದಷ್ಟು ನಾನು ಮಾಡಿದೆ" ಎಂದ ಸೈನಿಕ. "ಇದೊಂದು ಬಾರಿ ನಿನಗೆ ಸಹಾಯ ಮಾಡುವೆ. ಇನ್ನೊಮ್ಮೆ ಇಂಥ ಕೆಲಸ ಮಾಡಬೇಡ. ತೊಂದರೆಗೆ ಸಿಕ್ಕಿಕೊಳ್ಳುವೆ. ರಾಜಕುಮಾರಿ ಬದುಕಿದ ಮೇಲೆ ರಾಜನಿಂದ ನೀನು ಏನನ್ನೂ ಪಡೆಯಬಾರದು" ಎಂದು ಹೇಳಿ ಸಂತ ಮೂಳೆಗಳನ್ನು ಸರಿಯಾಗಿ ಜೋಡಿಸಿ ಮೇಲೇಳು ಜೀವವೇ ಎಂದು ಮೂರು ಬಾರಿ ಕೂಗಿದ. ರಾಜಕುಮಾರಿ ಜೀವಂತವಾಗಿ ಎದ್ದು ಕುಳಿತಳು. ಕೂಡಲೆ ಸಂತ ಅದೃಶ್ಯನಾದ. ಸೈನಿಕನಿಗೆ ಸಂತೋಷವಾಯಿತು. ಆದರೆ ಯಾವ ಬಹುಮಾನವನ್ನೂ ಕೇಳಬಾರದಲ್ಲ ಎಂದು ಚಿಂತೆಯೂ ಆಯಿತು. "ಎಂಥ ವಿಚಿತ್ರ ಮನುಷ್ಯ. ಒಂದು

ಕೈಯಲ್ಲಿ ವರಕೊಡುತ್ತಾನೆ, ಇನ್ನೊಂದು ಕೈಯಲ್ಲಿ ಕಿತ್ತುಕೊಳ್ಳುತ್ತಾನೆ. ಇವನನ್ನು ಅರ್ಥಮಾಡಿಕೊಳ್ಳುವುದಕ್ಕೇ ಆಗುವುದಿಲ್ಲ" ಎಂದು ತನ್ನೊಳಗೇ ಯೋಚಿಸಿದ. ರಾಜ ಅವನಿಗೆ ಏನು ಬಹುಮಾನ ಬೇಕೆಂದು ಕೇಳಿದಾಗ ತನಗೆ ಏನೂ ಬೇಡವೆಂದ. ಆದರೆ ರಾಜನು ತನ್ನ ಚೀಲದ ತುಂಬ ಬಂಗಾರದ ನಾಣ್ಯಗಳನ್ನು ತುಂಬಿಕೊಡುವಂತೆ ಉಪಾಯವಾಗಿ ಏನೇನೋ ತಂತ್ರ ಹೂಡಿ ಯಶಸ್ವಿಯೂ ಆಗಿಬಿಟ್ಟ. ಅರಮನೆಯಿಂದ ಹೊರಕ್ಕೆ ಬಂದಾಗ ಅಲ್ಲಿ ಸಂತ ನಿಂತಿದ್ದ. "ಎಂಥ ಮನುಷ್ಯನಯ್ಯಾ ನೀನು! ಏನೂ ತೆಗೆದುಕೊಳ್ಳಬಾರದೆಂದು ನಾನು ನಿನಗೆ ಹೇಳಿರಲಿಲ್ಲವೇ? ಆದರೂ ಚೀಲದ ತುಂಬಾ ಚಿನ್ನ ತಂದಿದ್ದೀಯಲ್ಲಾ" ಎಂದು ಬಯ್ದ. "ನಾನೇನೂ ಕೇಳಲಿಲ್ಲ. ರಾಜ ತಾನಾಗೇ ಇದನ್ನು ಕೊಟ್ಟ. ನಾನೇನು ಮಾಡಲಿ" ಎಂದ ಸೈನಿಕ. "ಸರಿ, ಇನ್ನು ಮುಂದೆ ಇಂಥ ಕೆಲಸ ಮಾಡಿದರೆ ನಿನಗೆ ಶಿಕ್ಷೆಯಾಗುತ್ತದೆ ನೆನಪಿಟ್ಟುಕೋ" ಎಂದು ಸಂತ ಎಚ್ಚರಿಸಿದ. "ಗೆಳೆಯಾ, ಚೀಲದ ತುಂಬಾ ಚಿನ್ನ ಇದೆ. ನಾನೇಕೆ ಮೂಳೆ ಕುದಿಸುವ ಕೆಲಸಕ್ಕೆ ಹೋಗಲಿ" ಎಂದ ಸೈನಿಕ.

"ಈ ಬಂಗಾರ ನಿನಗೆ ಬಹಳ ಕಾಲ ಉಪಯೋಗಕ್ಕೆ ಬರುತ್ತದೆ. ಆದರೆ ಅದು ಮುಗಿದ ಮೇಲೆ ನೀನು ಮತ್ತೆ ಸಲ್ಲದ ಕೆಲಸಮಾಡಿ ತೊಂದರೆಗೆ ಸಿಕ್ಕಿಕೊಳ್ಳಬೇಡ. ಅದಕ್ಕೆಂದು ನಿನಗೆ ಒಂದು ವರ ಕೊಡುತ್ತೇನೆ. ನೀನು ಬಯಸಿದ್ದೆಲ್ಲ ಈ ಚೀಲದೊಳಗೆ ಇರುತ್ತದೆ. ಹೋಗಿ ಬಾ. ಇನ್ನು ನಾನು ನಿನಗೆ ಕಾಣಿಸಿಕೊಳ್ಳುವುದಿಲ್ಲ" ಎಂದು ನುಡಿದು ಸಂತ ಮಾಯವಾದ.

ಸೈನಿಕ ಮುಂದಕ್ಕೆ ಪ್ರಯಾಣ ಬೆಳೆಸಿದ. ನಿಶ್ಚಿಂತೆಯಿಂದ ಹಣ ಖರ್ಚುಮಾಡುತ್ತ ನಡೆದ. ಕೊನೆಗೊಮ್ಮೆ ಅವನ ಬಳಿ ನಾಲ್ಕು ನಾಣ್ಯಗಳು ಮಾತ್ರ ಉಳಿದವು. ಆ ವೇಳೆಗೆ ಅವನು ಒಂದು ಛತ್ರದ ಬಳಿ ಬಂದಿದ್ದ. ಮೂರು ನಾಣ್ಯಕೊಟ್ಟು ಬ್ರೆಡ್ ತಿಂದ. ಇನ್ನೊಂದು ನಾಣ್ಯ ಕೊಟ್ಟು ಮದ್ಯ ಕುಡಿದ. ಆಗ ಹುರಿದ ಬಾತುಕೋಳಿಯ ಪರಿಮಳ ಅವನ ಮೂಗಿಗೆ ತಾಕಿತು. ಅವನು ಎದ್ದು ಹೋಗಿ ಅಡುಗೆ ಮನೆಯಲ್ಲಿ ಇಣುಕಿದಾಗ ಯಜಮಾನ ಎರಡು ಬಾತುಕೋಳಿಗಳನ್ನು ಹುರಿಯುತ್ತಿದ್ದದ್ದು ಕಾಣಿಸಿತು. ಸೈನಿಕನಿಗೆ ಈಗ ತನ್ನ ಚೀಲದ ಮಾಂತ್ರಿಕ ಶಕ್ತಿಯನ್ನು ಪರೀಕ್ಷಿಸಬೇಕೆನ್ನಿಸಿತು. ಅವನು ಯಜಮಾನನಿಗೆ ವಂದಿಸಿ ಹೊರಕ್ಕೆ ನಡೆದ. ಒಂದು ಬಯಲಿಗೆ ಹೋಗಿ ಬಾತುಕೋಳಿಯನ್ನು ಬಯಸಿ ಚೀಲದೊಳಗೆ ಇಣುಕಿ ನೋಡಿದ. ಆಶ್ಚರ್ಯ! ಎರಡು ಹುರಿದ ಬಾತುಗಳು ಅದರೊಳಗಿದ್ದವು. ನಾನು ಈಗ ನಿಜವಾಗಿ ಸಿದ್ಧಪುರುಷ ಎಂದುಕೊಳ್ಳುತ್ತ ಬಾತುಕೋಳಿಯನ್ನು ತಿನ್ನತೊಡಗಿದ. ಆಗ ಅಲ್ಲಿ ಕೆಲಸಮಾಡುತ್ತಿದ್ದ ಇಬ್ಬರು ಆಳುಗಳು ಹುರಿದ ಬಾತುಗಳನ್ನು ಆಸೆಗಣ್ಣಿನಿಂದ ನೋಡುತ್ತಿದ್ದರು.

ಸೈನಿಕ ಅವರನ್ನು ಕರೆದು ಒಂದು ಬಾತುಕೋಳಿಯನ್ನು ಅವರಿಗೆ ಕೊಟ್ಟ. ಅವರು ಸಂತೋಷದಿಂದ ಅವನನ್ನು ವಂದಿಸಿ, ಬಾತುಕೋಳಿಯನ್ನು ಹಿಡಿದುಕೊಂಡು ಛತ್ರಕ್ಕೆ ಹೋದರು. ಅಲ್ಲಿ ಕುಳಿತು ಮದ್ಯವನ್ನು ಕೊಂಡು ಬಾತನ್ನು ನಂಜಿಕೊಳ್ಳುತ್ತಾ ಕುಡಿಯತೊಡಗಿದನು. ಛತ್ರದ ಯಜಮಾನಿಗೆ ಅದು ತಮ್ಮದೇ ಬಾತು ಇರಬಹುದೆಂಬ ಅನುಮಾನ ಹುಟ್ಟಿತು. ತನ್ನ ಗಂಡನಿಗೆ ಹೇಳಿದಳು. ಗಂಡ ಅಡುಗೆ ಮನೆಗೆ ಹೋಗಿ ನೋಡಿದಾಗ ಅಲ್ಲಿ ಬಾತುಕೋಳಿಗಳು ಮಾಯವಾಗಿದ್ದವು. "ನೀವು ಬಾತುಕೋಳಿ ಕದ್ದಿದ್ದೀರಿ. ಅದರ ಕಾಸು ಕೊಡಿ, ಇಲ್ಲದಿದ್ದರೆ ಹೊಡೆಯುತ್ತೇನೆ" ಎಂದು ಕೆಲಸಗಾರರನ್ನು ಅಂಜಿಸಿದ. ಅವರು "ನಾವು ಕಳ್ಳರಲ್ಲ. ಅಲ್ಲಿ

ಹೊರಗೆ ಒಬ್ಬ ಸೈನಿಕ ಇದ್ದಾನೆ. ಅವನು ಕೊಟ್ಟ" ಎಂದರು. "ಸುಳ್ಳು. ಅವನು ಇಲ್ಲಿಗೂ ಬಂದಿದ್ದ. ಸಭ್ಯಸ್ಥನ ಹಾಗೆ ಹಣ ಕೊಟ್ಟು ಹೋದ. ಅವನನ್ನು ದೂರಬೇಡಿ, ನೀವೇ ಕಳ್ಳರು" ಎಂದು ಯಜಮಾನ ಅವರನ್ನು ಹೊಡೆದು ಅಟ್ಟಿದ.

ಸೈನಿಕ ಮುಂದೆ ನಡೆದು ಒಂದು ಊರನ್ನು ತಲುಪಿದ. ಆಗ ರಾತ್ರಿಯಾಗಿತ್ತು. ಅಲ್ಲಿ ಒಂದು ಹಾಳು ಛತ್ರ, ಒಂದು ಅರಮನೆಯಂಥ ಛತ್ರ ಇದ್ದವು. ದೊಡ್ಡ ಕಟ್ಟಡ ನಿರ್ಜನವಾಗಿತ್ತು, ಹಾಳು ಛತ್ರದಲ್ಲಿ ಜಾಗವೇ ಇಲ್ಲದಂತೆ ಜನ ತುಂಬಿದ್ದರು. ಯಾಕೆ ಹೀಗೆ ಎಂದು ಸೈನಿಕ ವಿಚಾರಿಸಿದ. ದೊಡ್ಡ ಛತ್ರಕ್ಕೆ ಹೋದವರು ಯಾರೂ ಜೀವಂತವಾಗಿ ಹಿಂದಿರುಗಿಲ್ಲ ಎಂದು ತಿಳಿಯಿತು. ನಾನು ಅಲ್ಲಿಯೇ ಹೋಗಿ ರಾತ್ರಿಯನ್ನು ಕಳೆಯುವೆ ಎಂದು ಸೈನಿಕ ತೀರ್ಮಾನಿಸಿದ. ಹಾಳು ಛತ್ರದ ಯಜಮಾನ ಹಾಗೆ ಮಾಡಿದರೆ ಪ್ರಾಣ ಕಳೆದುಕೊಳ್ಳುವೆ ಎಂದು ಎಚ್ಚರಿಸಿದ. ಆದರೆ ಸೈನಿಕ ರಾತ್ರಿಯ ಊಟ ಮತ್ತು ನೀರು ತೆಗೆದುಕೊಂಡು ದೊಡ್ಡ ಅರಮನೆಯಂಥ ಛತ್ರಕ್ಕೆ ಹೋದ.

ಸೈನಿಕ ಅಲ್ಲಿ ಹೋಗಿ ಊಟ ಮಾಡಿದ. ನೀರು ಕುಡಿದ. ಮಲಗಲು ಅಲ್ಲಿ ಹಾಸಿಗೆ ಇರಲಿಲ್ಲ. ನೆಲದ ಮೇಲೆಯೇ ಮಲಗಿ ನಿದ್ದೆ ಹೋದ. ನಡುರಾತ್ರಿಯ ವೇಳೆಗೆ ಕೂಗಾಟದ ಸದ್ದು ಕೇಳಿ ಅವನಿಗೆ ಎಚ್ಚರವಾಯಿತು. ಒಂಬತ್ತು ಕುರೂಪಿ ದೆವ್ವಗಳು ಬಂದಿದ್ದವು. ಅವು ಕೈ ಕೈ ಹಿಡಿದುಕೊಂಡು ಅವನ ಸುತ್ತ ಕುಣಿದವು. "ನೀವು ಬೇಕಾದಷ್ಟು ಕುಣಿಯಿರಿ, ಆದರೆ ನನ್ನ ಹತ್ತಿರ ಬರಬೇಡಿ" ಎಂದ ಸೈನಿಕ. ದೆವ್ವಗಳು ಅವನ ಹತ್ತಿರ ಹೋಗಿ ಒದೆದವು. ಸೈನಿಕ ಕುರ್ಚಿಯನ್ನು ಹಿಡಿದು ಅವುಗಳ ಮೇಲೆ ಯುದ್ಧಕ್ಕೆ ನಿಂತ. ಆದರೆ ಒಂಬತ್ತು ದೆವ್ವಗಳ ಎದುರಿಗೆ ಒಬ್ಬನೇ ಹೋರಾಡಲು ಆಗಲಿಲ್ಲ. ಒಂದು ದೆವ್ವಕ್ಕೆ ಹೊಡೆಯುತ್ತಿದ್ದಾಗ ಇನ್ನೊಂದು ಬಂದು ಅವನ ಕೂದಲು ಎಳೆಯುತ್ತಿತ್ತು. ಇದು ಅತಿ ಆಯಿತು ಎಂದುಕೊಂಡು "ಒಂಬತ್ತು ದೆವ್ವಗಳು ನನ್ನ ಚೀಲದಲ್ಲಿ ಸೇರಿಕೊಳ್ಳಲಿ" ಎಂದ. ತಕ್ಷಣವೇ ಅವು ಚೀಲದೊಳಗೆ ಇದ್ದವು! ಬೆಳಗಾಗುವವರೆಗೆ ತಣ್ಣಗೆ ನಿದ್ದೆ ಮಾಡಿದ. ಬೆಳಗಿನ ಹೊತ್ತಿಗೆ ಛತ್ರದ ಯಜಮಾನ ಬಂದು ಅವನಿನ್ನೂ ಬದುಕಿರುವುದನ್ನು ಕಂಡು ಆಶ್ಚರ್ಯಪಟ್ಟ. ದೆವ್ವಗಳು ಏನೂ ಮಾಡಲಿಲ್ಲವೇ ಎಂದು ಕೇಳಿದ.

"ದೆವ್ವಗಳೆಲ್ಲ ನನ್ನ ಚೀಲದೊಳಗಿವೆ. ಇನ್ನು ಮುಂದೆ ಅವು ನಿಮಗೆ ಕಾಟ ಕೊಡುವುದಿಲ್ಲ" ಎಂದ ಸೈನಿಕ. ಯಜಮಾನ ಸೈನಿಕನಿಗೆ ಧಾರಾಳವಾಗಿ ಬಹುಮಾನ ನೀಡಿದ. ತನ್ನ ಬಳಿಯೇ ಕೆಲಸಕ್ಕಿದ್ದರೆ ಬೇಕಾದಷ್ಟು ಸಂಬಳ ಕೊಡುವುದಾಗಿ ಹೇಳಿದ. ಆದರೆ ಸೈನಿಕ ತನಗೆ ಅಲೆದಾಟವೇ ಇಷ್ಟ ಎಂದು ಹೇಳಿ ಅಲ್ಲಿಂದ ಹೊರಟ. ಕಮ್ಮಾರನ ಕುಲುಮೆಯ ಬಳಿಗೆ ಹೋಗಿ ದೆವ್ವಗಳಿದ್ದ ಚೀಲವನ್ನು ಅವರಿಗೆ ಕೊಟ್ಟು ಬಲವಾಗಿ ಹೊಡೆಯುವಂತೆ ಹೇಳಿದ. ಅಲ್ಲಿದ್ದ ಕಮ್ಮಾರರು ತಮ್ಮ ಶಕ್ತಿಯೆಲ್ಲಾ ಬಿಟ್ಟು ಚೀಲವನ್ನು ಹೊಡೆದರು. ಕೊನೆಗೆ ಚೀಲ ಬಿಚ್ಚಿ ನೋಡಿದಾಗ ಎಂಟು ದೆವ್ವಗಳು ಸತ್ತಿದ್ದವು. ಒಂದು ದೆವ್ವಕ್ಕೆ ಕುಟುಕು ಜೀವ ಇತ್ತು. ಅದು ಕೂಡಲೆ ತಪ್ಪಿಸಿಕೊಂಡು ಪರಾರಿಯಾಯಿತು. ಆನಂತರ ಸೈನಿಕ ಲಸ್ಟಿಗ್ ಪ್ರಪಂಚವನ್ನೆಲ್ಲಾ ಸುತ್ತಿದ. ಅವನ ಸಾಹಸದ ಕತೆಗಳು ಎಲ್ಲೆಡೆ ಹಬ್ಬಿದವು. ಕೊನೆಗೊಮ್ಮೆ ಅವನು ಮುದುಕನಾದ. ಧರ್ಮಗುರುವೊಬ್ಬನ ಬಳಿಗೆ ಹೋಗಿ, "ನನಗೆ ಅಲೆದಾಟ ಸಾಕಾಗಿದೆ. ನನಗೆ ಸ್ವರ್ಗದ ದಾರಿ ತೋರಿಸಿ" ಎಂದು ಕೇಳಿದ. "ಇಲ್ಲಿ ಎರಡು ದಾರಿಗಳಿವೆ. ಒಂದು ವಿಶಾಲವಾಗಿ ಸುಂದರವಾಗಿದೆ. ಅದು ನಿನ್ನನ್ನು ದೆವ್ವಗಳ ರಾಜ್ಯಕ್ಕೆ ಕರೆದೊಯ್ಯುತ್ತದೆ.

ಇನ್ನೊಂದು ಇಕ್ಕಟ್ಟಾದ ಕಲ್ಲು ಮುಳ್ಳುಗಳ ದಾರಿ. ಅದು ದೇವತೆಗಳ ರಾಜ್ಯಕ್ಕೆ ಹೋಗುತ್ತದೆ" ಎಂದು ಧರ್ಮಗುರು ಹೇಳಿದ. ಒಳ್ಳೆಯ ದಾರಿ ಬಿಟ್ಟು ಕಲ್ಲು ಮುಳ್ಳುಗಳ ದಾರಿ ಆಯ್ದುಕೊಳ್ಳಲು ನಾನೇನು ಮೂರ್ಖನೇ ಎಂದು ಸೈನಿಕ ವಿಶಾಲ ರಸ್ತೆಯಲ್ಲಿ ಹೋದ. ಅದು ಅವನನ್ನು ದೆವ್ವಗಳ ಕೋಟೆಯ ಬಳಿಗೆ ಕರೆದೊಯ್ದಿತು. ಸೈನಿಕ ಬಾಗಿಲು ಬಡಿದ. ಆಗ ಕಾವಲುಗಾರ ದೆವ್ವ ಇಣುಕಿ ನೋಡಿತು. ಲಸ್ಟಿಗ್‌ನನ್ನು ಕಂಡು ಅದು ಹೆದರಿತು. ಯಾಕಂದರೆ ಚೀಲದೊಳಗಿನಿಂದ ತಪ್ಪಿಸಿಕೊಂಡು ಬಂದಿದ್ದ ಒಂಬತ್ತನೆಯ ದೆವ್ವವೇ ಅದು! ಯಜಮಾನನ ಬಳಿಗೆ ಹೋಗಿ "ಇಲ್ಲೊಬ್ಬ ಮನುಷ್ಯ ಚೀಲ ಹಿಡಿದುಬಂದಿದ್ದಾನೆ. ಅವನನ್ನು ಒಳಕ್ಕೆ ಬಿಟ್ಟುಕೊಳ್ಳಬೇಡಿ. ನಮ್ಮ ಕೋಟೆಯನ್ನೇ ಚೀಲದೊಳಕ್ಕೆ ಹಾಕಿಕೊಂಡುಬಿಡುತ್ತಾನೆ" ಎಂದು ಎಚ್ಚರಿಸಿತು. ದೆವ್ವಗಳ ಅರಮನೆಯ ಬಾಗಿಲು ತೆರೆಯಲೇ ಇಲ್ಲ.

ಲಸ್ಟಿಗ್ ದೇವತೆಗಳ ರಾಜ್ಯಕ್ಕೆ ಹೊರಟ. ದೇವತೆಗಳ ಅರಮನೆಯ ಬಾಗಿಲಿಗೆ ಬಂದ. ಅಲ್ಲಿ ಹಿಂದೆ ಅವನಿಗೆ ಸಹಾಯ ಮಾಡುತ್ತಿದ್ದ ಸಂತ ಕಾವಲು ಕಾಯುತ್ತಿದ್ದ. "ನಿನಗೆ ಒಳಗೆ ಬರಲು ಆಸೆ ಇರಬಹುದು, ಆದರೆ ನೀನು ಒಳಕ್ಕೆ ಬರಲಾರೆ" ಎಂದು ಸಂತ ನುಡಿದ.

"ಸರಿ ಹಾಗಾದರೆ. ನೀನು ನನಗೆ ಕೊಟ್ಟ ಚೀಲದಿಂದ ಇನ್ನೇನೂ ಉಪಯೋಗವಿಲ್ಲ. ಅದನ್ನಾದರೂ ಹಿಂದಕ್ಕೆ ತೆಗೆದುಕೋ" ಎಂದ ಸೈನಿಕ.

"ಸರಿ ಅದನ್ನು ಕೊಡು" ಎಂದು ಸಂತ ಮಾಯ ಚೀಲವನ್ನು ಪಡೆದುಕೊಂಡು, ಒಳಕ್ಕೆ ಹೋಗಿ ಗೂಟಕ್ಕೆ ನೇತು ಹಾಕಿದ. ಆಗ ಸೈನಿಕ "ನಾನೀಗ ಚೀಲದೊಳಗೆ ಇರಲು ಬಯಸುತ್ತೇನೆ" ಎಂದು ಆಸೆಪಟ್ಟ. ಕೂಡಲೆ ಅವನು ದೇವತೆಗಳ ಅರಮನೆಯೊಳಗೆ ನೇತು ಹಾಕಿದ್ದ ಚೀಲದೊಳಗಿದ್ದ! ಜಾಣತನದಿಂದ ಸಂತನನ್ನು ಮೀರಿಸಿಬಿಟ್ಟ. ಬೇರೆ ದಾರಿ ಇಲ್ಲದೆ ಸೈನಿಕನನ್ನು ದೇವತೆಗಳ ರಾಜ್ಯದಲ್ಲಿ ಇಟ್ಟುಕೊಳ್ಳಬೇಕಾಯಿತು.

೪೩. ಮೂವರು ಕಪ್ಪು ರಾಜಕುಮಾರಿಯರು

ಓಸ್ವೆಂಡೀನ್ ಎಂಬ ಒಂದು ಊರಿತ್ತು. ಅದನ್ನು ಒಬ್ಬ ಶತ್ರು ಮುತ್ತಿಗೆ ಹಾಕಿದನು. ತನಗೆ ಆರುನೂರು ಡಾಲರ್ ಹಣವನ್ನು ಕೊಡುವವರೆಗೆ ಮುತ್ತಿಗೆಯನ್ನು ಹಿಂದಕ್ಕೆ ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದನು. ಆಗ, ಆ ಊರಿನ ಮುಖ್ಯಸ್ಥರು, ಯಾರು ಆರುನೂರು ಡಾಲರ್ ಹಣವನ್ನು ಕೊಡುವರೊ ಅವನೇ ಕೋಟೆಯ ಯಜಮಾನನಾಗುತ್ತಾನೆ ಎಂದು ಡಂಗುರ ಸಾರಿದರು. ಅದೇ ಊರಿನಲ್ಲಿ ಒಬ್ಬ ಬಡ ಮೀನುಗಾರನಿದ್ದನು. ಅವನು ಮತ್ತು ಅವನ ಮಗ ಸಮುದ್ರದಲ್ಲಿ ಮೀನು ಹಿಡಿಯಲು ಹೋಗಿದ್ದರು. ಅಲ್ಲಿಗೆ ಆ ಊರನ್ನು ಮುತ್ತಿಗೆ ಹಾಕಿದ್ದ ಶತ್ರು ಬಂದನು. ಅವನು ಮೀನುಗಾರನ ಮಗನನ್ನು ಕೈದಿಯನ್ನಾಗಿ ಮಾಡಿಕೊಂಡು, ಅದಕ್ಕೆ ಬದಲು ಆರು ನೂರು ಡಾಲರನ್ನು ಕೊಟ್ಟನು. ಆಗ ಮೀನುಗಾರ ಆ ಹಣವನ್ನು ಊರಿನ ಮುಖ್ಯಸ್ಥರಿಗೆ ಕೊಟ್ಟನು. ಶತ್ರು ಆ ಊರನ್ನು ಬಿಟ್ಟುಹೋದನು. ಮೀನುಗಾರ ಆ ಊರಿನ ಮುಖಂಡನಾದನು. ನಂತರ ಅವನನ್ನು ಎಲ್ಲರು ಆ ಊರಿನ ರಾಜನೆಂದು ಕರೆಯಬೇಕೆಂದು ಆಜ್ಞೆ ಮಾಡಲಾಯಿತು. ಹಾಗೆ ಕರೆಯದವರನ್ನು ಗಲ್ಲಿಗ ಏರಿಸಲಾಗುತ್ತದೆ ಎಂದು ಡಂಗುರ ಹೊಡೆಸಿದನು.



ಮೀನುಗಾರನ ಮಗ ಶತ್ರುವಿನಿಂದ ಹೇಗೊ ಪಾರಾಗಿ ಬಂದನು. ಎತ್ತರವಾದ ಪರ್ವತವಿದ್ದ ಒಂದು ದೊಡ್ಡ ಕಾಡಿಗೆ ಬಂದನು. ಅವನು ಪರ್ವತದ ಹತ್ತಿರಕ್ಕೆ ಹೋದಾಗ ಅದರ ಬಾಗಿಲು ತೆಗೆದುಕೊಂಡಿತು. ಅವನು ಮಾಟದ ಅರಮನೆಯೊಳಗೆ ಹೋದನು. ಅಲ್ಲಿನ ಕುರ್ಚಿಗಳು, ಮೇಜುಗಳು, ಬೆಂಚುಗಳು ಕಪ್ಪು ಬಟ್ಟೆಯನ್ನು ಹೊದೆದಿದ್ದವು. ಅಲ್ಲಿಗೆ ಮೂವರು ರಾಜಕುಮಾರಿಯರು ಬಂದರು. ಅವರೆಲ್ಲ ಪೂರ್ತಿ ಕಪ್ಪು ಉಡುಗೆಯನ್ನು ಧರಿಸಿದ್ದರು. ಎಲ್ಲೊ ಅಲ್ಪ ಸ್ವಲ್ಪ ಅವರ ಮುಖದ ಮೇಲೆ ಬಿಳುಪಿತ್ತು. ಅವರು ಅವನಿಗೆ ಹೆದರಬೇಡವೆಂದು ಹೇಳಿದರು. ತಾವು ಯಾವ ಅಪಾಯವನ್ನು ಮಾಡುವುದಿಲ್ಲವೆಂದು ಹೇಳಿದರು. ಅಲ್ಲದೆ ಅವನು ಆ ಮಾಟಮಂತ್ರದ ಅರಮನೆಯಿಂದ ತಮ್ಮನ್ನು ಬಿಡುಗಡೆ ಮಾಡಲು ಸಮರ್ಥನಾಗಿರುವನು ಎಂದು ಹೇಳಿದರು. ಆಗ ಅವನು, ಅಲ್ಲಿರುವುದನ್ನೆಲ್ಲ ಸರಿ ಮಾಡಲು ಸಾಧ್ಯವಾದರೆ ತುಂಬ ಸಂತೋಷವಾಗುತ್ತದೆ ಎಂದು ಹೇಳಿದನು. ಅದಕ್ಕೆ ಅವರು, ಅವನು ಇಡೀ ಒಂದು ವರ್ಷ ಒಂದೂ ಮಾತನ್ನು ಆಡಬಾರದೆಂದು, ಅವರ ಕಡೆ ಒಂದು ಬಾರಿಯೂ ನೋಡಬಾರದೆಂದು ಹೇಳಿದರು. ಅವನಿಗೆ ಬೇಕಾದುದನ್ನು ಕೇಳಿ ಪಡೆಯಬೇಕೆಂದೂ ಅವಶ್ಯಕತೆ ಬಿದ್ದರೆ ತಾವೇ ಉತ್ತರಿಸುವುದಾಗಿಯೂ ಹೇಳಿದರು. ಅವನು ಅಲ್ಲಿ ಸ್ವಲ್ಪಕಾಲವನ್ನು ಕಳೆದನು. ಒಂದು ದಿನ, ತಾನು ತಂದೆಯನ್ನು ನೋಡಲು ಹೋಗಬೇಕೆಂದು ಆ ಕಪ್ಪು ರಾಜಕುಮಾರಿಯರಿಗೆ ಹೇಳಿದನು. ಅವರು "ಹಾಗೆ ಆಗಲಿ" ಎಂದರು. ಅವನು ಒಂದು ಚೀಲದ ತುಂಬ ಬಂಗಾರವನ್ನು ತೆಗೆದುಕೊಂಡು ಹೋಗಬೇಕೆಂದು, ಅವರು ಕೊಡುವ ಬಟ್ಟೆಯನ್ನು ಧರಿಸಬೇಕೆಂದು, ಎಂಟು ದಿನಗಳಲ್ಲಿ ಹಿಂದಿರುಗಬೇಕೆಂದು ಹೇಳಿದರು.


ನಂತರ, ಅವನನ್ನು ಮೇಲಕ್ಕೆತ್ತಿಕೊಂಡು ನೇರವಾಗಿ ಓಸ್ವೆಂಡೀನ್ ಊರಿಗೆ ಬಿಡಲಾಯಿತು. ಅಲ್ಲಿ ಅವನು, ತನ್ನ ತಂದೆ ಹಿಂದೆ ವಾಸಮಾಡಿಕೊಂಡಿದ್ದ ಗುಡಿಸಲಿಗೆ ಹೋದನು. ಅವನ ತಂದೆ ಅಲ್ಲಿ ಇರಲಿಲ್ಲ. ತನ್ನ ತಂದೆ ಎಲ್ಲಿಗೆ ಹೋದನೆಂದು ಅಲ್ಲಿದ್ದ ಮೀನುಗಾರರನ್ನು ಕೇಳಿದನು. ಅದಕ್ಕೆ ಅವರು, ಅವನು ಹಾಗೆ ಹೇಳಬಾರದೆಂದು, ಹೇಳಿದರೆ ಗಲ್ಲು ಶಿಕ್ಷೆ ಆಗುವುದೆಂದು ಹೇಳಿದರು. ನಂತರ ಅವನು ತನ್ನ ತಂದೆಯ ಬಳಿಗೆ

ಬಂದನು. "ಮೀನುಗಾರನೆ, ಇದೆಲ್ಲ ನಿನಗೆ ಹೇಗೆ ಬಂದಿತು?" ಎಂದು ಕೇಳಿದನು. ಅದಕ್ಕೆ ಅವನು "ನೀನು ಹಾಗೆ ಹೇಳಬಾರದು, ಈ ಊರಿನ ದೊಡ್ಡ ಮನುಷ್ಯರಿಗೆ ಗೊತ್ತಾದರೆ ನಿನ್ನನ್ನು ಗಲ್ಲಿಗೇರಿಸುವರು" ಎಂದು ಹೇಳಿದನು. ಆದರೆ ಅವನು ಅಲ್ಲಿಗೆ ಹಾಗೆ ಹೋಗುವುದನ್ನು ನಿಲ್ಲಿಸಲೇ ಇಲ್ಲ. ಆಗ, ಅವನನ್ನು ಗಲ್ಲಿಗೆ ಕರೆದುಕೊಂಡು ಹೋದರು. ಆಗ ಅವನು "ಓಹೊ! ದೊಡ್ಡ ಮನುಷ್ಯರೆ, ನಾನು ನಿಮ್ಮ ಮೊದಲಿನ ಗುಡಿಸಲಿಗೆ ಹೋಗಿ ಬರಲು ಅನುಮತಿ ಕೊಡಿ" ಎಂದು ಅಧಿಕಾರಿಗಳನ್ನು ಕೇಳಿಕೊಂಡನು. ಅವರು ಅವನಿಗೆ ಅನುಮತಿ ನೀಡಿದರು. ಅವನು ತಾನಿದ್ದ ಗುಡಿಸಲಿಗೆ ಹೋಗಿ ಮೀನುಗಾರನ ಸಡಿಲವಾದ ಉಡುಪನ್ನು ತೊಟ್ಟುಕೊಂಡು ಬಂದನು."ಈಗ ನೋಡಿ, ನಾನು ಅದೇ ಬಡ ಮೀನುಗಾರನ ಮಗ ಹೌದೋ, ಅಲ್ಲವೊ? ಇದೇ ಉಡುಪಿನಲ್ಲಿ ನಾನು ನನ್ನ ತಂದೆ, ತಾಯಿಗೆ ದಿನದ ರೊಟ್ಟಿ ಸಂಪಾದಿಸುತ್ತಿದ್ದೆ" ಎಂದು ಹೇಳುತ್ತಾ ಆ ಅಧಿಕಾರಿಗಳಿಗೆ ಕೇಳಿದನು. ಆಗ, ಅವರು ಅವನ ಗುರುತು ಹಿಡಿದರು. ಕ್ಷಮಾಪಣೆಯನ್ನು ಕೇಳಿದರು. ಅವನನ್ನು ಅವನ ತಂದೆ ತಾಯಿಗಳ ಬಳಿಗೆ ಕರೆದುಕೊಂಡು ಹೋದರು. ಅಲ್ಲಿ ಅವನು, ನಡೆದುದೆಲ್ಲವನ್ನು ಅವರಿಗೆ ವಿವರಿಸಿ ಹೇಳಿದನು. ದೊಡ್ಡ ಕಾಡಿನ ಎತ್ತರ ಪರ್ವತಕ್ಕೆ ಹೋಗಿದ್ದು, ಅದು ಬಾಗಿಲು ತೆಗೆದಿದ್ದು, ಮಾಯದ ಅರಮನೆಯೊಳಗೆ ಹೋಗಿದ್ದು, ಅಲ್ಲಿನದೆಲ್ಲವೂ ಕಪ್ಪು ಹೊದಿಕೆ ಹೊಂದಿದ್ದು, ಕಪ್ಪು ಉಡುಗೆಯ ಮೂವರು ಕಪ್ಪು ರಾಜಕುಮಾರಿಯರು ಬಂದಿದ್ದು, ಅವರ ಮುಖದಲ್ಲಿ ಅಲ್ಲಲ್ಲಿ ಬಿಳಿ ಚುಕ್ಕೆಗಳಿದ್ದದ್ದು ಅವನಿಗೆ ಅವರು ಹೆದರಬೇಡವೆಂದು ಹೇಳಿದ್ದು, ಅವನು, ಅವರನ್ನು ಬಿಡಿಸಬಲ್ಲವನೆಂದು ಅವರು ಹೇಳಿದ್ದು, ಎಲ್ಲವನ್ನೂ ಕಣ್ಣಿಗೆ ಕಟ್ಟುವಂತೆ ವಿವರಿಸಿದನು.

ಆಗ, ಅವನ ತಾಯಿ, "ಅದು ಸತ್ಯವಾಗಿರಲಾರದು, ನೀನು ಮತ್ತೆ ಹೋಗುವಾಗ, ನಿನ್ನ ಜೊತೆ ಪವಿತ್ರವಾದ ಕಮಂಡಲವನ್ನು ತೆಗೆದುಕೊಂಡು ಹೋಗು. ಅವರ ಮುಖದ ಮೇಲೆ ಸ್ವಲ್ಪ ಕುದಿಯುವ ನೀರನ್ನು ಸುರಿ" ಎಂದು ಹೇಳಿದಳು.

ಅವನು ಮತ್ತೆ ಆ ಅರಮನೆಗೆ ಹಿಂದಿರುಗಿದನು. ಹೆದರಿಕೆಯಿಂದ ನಡುಗಿದನು. ಆ ಕಪ್ಪು ರಾಜಕುಮಾರಿಯರು ಮಲಗಿರುವಾಗ ಅವರ ಮುಖದ ಮೇಲೆ ಸ್ವಲ್ಪ ನೀರನ್ನು ಚೆಲ್ಲಿದನು. ಆಗ ಅವರೆಲ್ಲರೂ ಅರ್ಧ ಬೆಳ್ಳಗಾದರು. ಅವರು ದಿಗ್ಗನೆ ಎದ್ದು ಕುಳಿತರು. "ಪಾಪಿ ನಾಯಿ, ನಿನ್ನ ಮೇಲೆ ಸೇಡು ತೀರಿಸಿಕೊಳ್ಳಲು ನಮ್ಮ ರಕ್ತ ಕುದಿಯುತ್ತಿದೆ. ಈಗ ಈ ಪ್ರಪಂಚದಲ್ಲಿ ನಮ್ಮನ್ನು ಬಿಡುಗಡೆ ಮಾಡುವವರು ಯಾರೂ ಇಲ್ಲ, ಯಾರೂ ಹುಟ್ಟುವುದು ಇಲ್ಲ. ನಮಗೆ ಮೂವರು ಸಹೋದರರು ಇದ್ದಾರೆ. ಅವರನ್ನು ಏಳು ಸರಪಳಿಯಿಂದ ಬಂಧಿಸಲಾಗಿದೆ. ಅವರು ನಿನ್ನನ್ನು ಹರಿದು ಚಿಂದಿ ಚಿಂದಿ ಮಾಡುವರು" ಎಂದು ಹೇಳಿದರು. ನಂತರ, ಇಡೀ ಅರಮನೆ ಬಿರುಕು ಬಿಟ್ಟ ಹಾಗೆ ಆಯಿತು. ಆಗ ಅವನು ಒಂದು ಕಿಟಕಿಯಿಂದ ಹಾರಿ ತನ್ನ ಕಾಲನ್ನು ಮುರಿದುಕೊಂಡನು. ಅರಮನೆ ಪೂರ ಕಳಚಿ ಬಿದ್ದು ನೆಲಸಮವಾಯಿತು. ಪರ್ವತದ ಬಾಗಿಲು ಮುಚ್ಚಿತು. ಅದು ಎಲ್ಲಿತ್ತು ಎಂದು ಆಮೇಲೆ ಯಾರಿಗೂ ಗೊತ್ತಾಗಲಿಲ್ಲ.

೪೪. ಶೀಶೆಯೊಳಗಿನ ದೆವ್ವ



ಒಂದಾನೊಂದು ಕಾಲದಲ್ಲಿ ಒಬ್ಬ ಬಡ ಮರಕಡಿಯುವವನಿದ್ದನು. ಅವನು ಬೆಳಗ್ಗೆಯಿಂದ ಸಾಯಂಕಾಲದವರೆಗೆ ಕಷ್ಟಪಟ್ಟು ಕೆಲಸ ಮಾಡುತ್ತಿದ್ದನು. ಕೆಲವು ಸಾರಿ ರಾತ್ರಿ ಆಗಿಬಿಡುತ್ತಿತ್ತು. ಹೀಗೆ ಬಹಳ ದಿನಗಳ ವರೆಗೆ ದುಡಿದು ಸ್ವಲ್ಪ ಹಣವನ್ನು ಉಳಿಸಿದನು. ಒಂದು ದಿನ ತನ್ನ ಮಗನಿಗೆ "ನೀನು ನನಗೆ ಒಬ್ಬನೇ ಒಬ್ಬ ಮಗ. ನಾನು ಬೆವರು ಸುರಿಸಿ ಉಳಿಸಿದ ಹಣವಿದು. ಇದನ್ನು ನಿನ್ನ ವಿದ್ಯಾಭ್ಯಾಸಕ್ಕಾಗಿ ಖರ್ಚುಮಾಡಬೇಕು. ನೀನು ಬದುಕಿಗೆ ಬೇಕಾದುದನ್ನು ಕಲಿಯುವೆಯಾ? ಅದರಿಂದ ನಾನು ಮುದುಕನಾದಾಗ ನೀನು ನನ್ನನ್ನು ಕಾಪಾಡಬಹುದು. ಯಾಕೆಂದರೆ, ಆಗ ನನ್ನ ಕೈಕಾಲುಗಳಲ್ಲಿ ಕೆಲಸ ಮಾಡಲು ಶಕ್ತಿ ಇಲ್ಲದಂತಾಗುತ್ತದೆ. ಮನೆಯಲ್ಲೇ ಇರಬೇಕಾಗುತ್ತದೆ" ಎಂದು ಹೇಳಿದನು.

ಆ ನಂತರ, ಮರಕಡಿಯುವವನ ಮಗ ಒಂದು ಪ್ರಸಿದ್ಧ ಸ್ಕೂಲು ಸೇರಿದನು. ಅಲ್ಲಿ ತುಂಬ ಶ್ರದ್ಧೆಯಿಂದ ಓದುತ್ತಿದ್ದನು. ತನ್ನ ಪರಿಶ್ರಮದಿಂದ ಎಲ್ಲರ ಗಮನ ಸೆಳೆದನು. ಅಲ್ಲಿ ಅವನು ಬಹಳ ಕಾಲ ಓದಿದನು. ಅಷ್ಟಾದರೂ ಅವನು ಕಲಿಯಬೇಕಾದದ್ದು ಇನ್ನು ಇತ್ತು. ಅವನ ಅಪ್ಪ ಉಳಿಸಿದ್ದ ಹಣ ಮುಗಿಯಿತು. ಅವನು ಮನೆಗೆ ಹಿಂತಿರುಗಲೇಬೇಕಾಯಿತು.

ಆ ಹುಡುಗನ ಅಪ್ಪ ವ್ಯಥೆಯಿಂದ "ನಾನಿನ್ನು ನಿನಗೆ ಕೊಡಲಾರೆ. ನಾನು ಇದೂವರೆಗೆ ಊಟಕ್ಕೆ ಬೇಕಾಗಿರುವಷ್ಟು ಮಾತ್ರ ಸಂಪಾದಿಸಿದೆ" ಎಂದು ಹೇಳಿದನು. ಅದಕ್ಕೆ ಅವನ ಮಗ "ಅಯ್ಯೋ, ಆ ವಿಷಯವನ್ನು ಹೆಚ್ಚು ಮನಸ್ಸಿಗೆ ಹಚ್ಚಿಕೊಳ್ಳಬೇಡಿ. ದೇವರ ಇಷ್ಟವಿದ್ದಂತೆ ಆಗಲಿ. ಆಗುವುದೆಲ್ಲ ಒಳ್ಳೆಯದಕ್ಕೆ. ನಾನೇ ಸಮಯಕ್ಕೆ ಸರಿಯಾಗಿ ಹೊಂದಿಕೊಳ್ಳುತ್ತೇನೆ" ಎಂದು ತಂದೆಗೆ ಹೇಳಿದನು.

ಆ ಮೇಲೆ, ಅಪ್ಪ ಕಾಡಿಗೆ ಹೋಗಿ ಮರ ಕಡಿದು ಏನಾದರೂ ಸಂಪಾದಿಸುವೆನೆಂದು ಹೊರಟನು.ಆಗ ಅವನ ಮಗ "ನಾನು ನಿನ್ನ ಜೊತೆ ಬಂದು ಸಹಾಯ ಮಾಡುತ್ತೇನೆ" ಎಂದು ಹೇಳಿದನು. ಅದಕ್ಕೆ "ಅಯ್ಯೊ! ಅದೆಲ್ಲ ನಿನ್ನಿಂದ ಆಗದ ಕೆಲಸ ಬಿಡಪ್ಪ. ನಿನಗೆ ಅಂತಹ ಕಷ್ಟದ ಕೆಲಸ ಮಾಡಿ ಅಭ್ಯಾಸವಿಲ್ಲ. ಸುಮ್ಮನೆ ಇರು.

ಅಲ್ಲದೆ ನನ್ನ ಹತ್ತಿರ ಒಂದೇ ಕೊಡಲಿ ಇದೆ. ಇನ್ನೊಂದು ಕೊಳ್ಳಲು ನನ್ನ ಹತ್ತಿರ ಹಣವಿಲ್ಲ" ಎಂದು ಮಗನಿಗೆ ಹೇಳಿದನು. "ಹಾಗಾದರೆ, ನಮ್ಮ ಪಕ್ಕದ ಮನೆಯವರ ಹತ್ತಿರ ಒಂದು ಕೊಡಲಿಯನ್ನು ಕೈಗಡವಾಗಿ ಇಸಿದುಕೊಂಡು ಬಾ. ನಾನು ಹೊಸದನ್ನು ಕೊಳ್ಳುವಷ್ಟು ಸಂಪಾದಿಸಿದ ಮೇಲೆ ಹಿಂತಿರುಗಿಸೋಣ" ಎಂದು ಮಗ ತಂದೆಯನ್ನು ಒತ್ತಾಯಪಡಿಸಿದನು.

ಹೀಗೆ ಅಪ್ಪ ಪಕ್ಕದ ಮನೆಯವರಿಂದ ಒಂದು ಕೊಡಲಿಯನ್ನು ತಂದನು. ಮಾರನೆಯ ದಿನ ಬೆಳಕು ಹರಿಯುವ ಮುಂಚೆ ಎದ್ದು ಅವರಿಬ್ಬರು ಒಟ್ಟಿಗೆ ಕಾಡಿಗೆ ಹೋದರು. ಮಗ ತಂದೆಯ ಕೆಲಸದಲ್ಲಿ ಸಹಾಯ ಮಾಡಿದನು. ಅವನು ಬಹಳ ಚುರುಕಾಗಿ, ಕೆಲಸವನ್ನು ಸಂತೋಷದಿಂದ ಮಾಡಿದನು. ಮಧ್ಯಾಹ್ನ ಸೂರ್ಯ ನಡುನೆತ್ತಿಗೆ ಬಂದಾಗ ಅಪ್ಪ, " ಊಟ ಮಾಡಿ ಸ್ವಲ್ಪ ವಿಶ್ರಾಂತಿ ಪಡೆದ ಮೇಲೆ ಕೆಲಸ ಮಾಡೋಣ" ಎಂದು ಹೇಳಿದನು. ಮಗ ತಂದೆಯ ಜೊತೆಯಲ್ಲಿ ಊಟವನ್ನು ಹಂಚಿಕೊಂಡನು. ನಂತರ "ಅಪ್ಪ, ನೀನಿಲ್ಲಿ ಮಲಗಿರು. ನನಗೆ ಆಯಾಸವಾಗಿಲ್ಲ. ಹೀಗೆ ಕಾಡಿನಲ್ಲಿ ಸುತ್ತಾಡುತ್ತಾ ಹೋಗಿ ಹಕ್ಕಿಗಳ ಗೂಡುಗಳನ್ನು ನೋಡಿಬರುತ್ತೇನೆ" ಎಂದು ಮಗ ಹೇಳಿದನು.

"ಅಯ್ಯೊ ನೀನೊಬ್ಬ ದಡ್ಡ. ಸುಮ್ಮನೆ ಯಾಕೆ ಅಲೆದು ಸುಸ್ತು ಮಾಡಿಕೊಳ್ಳುತ್ತೀಯಾ? ಆಮೇಲೆ ನಿನ್ನ ಕೈಯನ್ನು ಎತ್ತಲು ಆಗುವುದಿಲ್ಲ. ಸ್ವಲ್ಪ ಹೊತ್ತು ನನ್ನ ಜೊತೆ ಸುಮ್ಮನೆ ಕುಳಿತುಕೊ" ಎಂದು ಅಪ್ಪ ಹೇಳಿದನು.

ಆ ಹುಡುಗ ಅಪ್ಪನ ಮಾತನ್ನು ಗಂಭೀರವಾಗಿ ತೆಗೆದುಕೊಳ್ಳಲಿಲ್ಲ. ಕಾಡಿನೊಳಕ್ಕೆ ಹೋದನು. ರೊಟ್ಟಿಯನ್ನು ತಿನ್ನುತ್ತಾ ಪೊದೆಗಳ ನಡುವೆ ಎಲ್ಲಿಯಾದರೂ ಹಕ್ಕಿಗೂಡು ಸಿಕ್ಕುವುದೇನೋ ಎಂದು ಇಣುಕುತ್ತಿದ್ದನು. ಹೀಗೆ ಅವನು ಹಿಂದಕ್ಕೆ ಮುಂದಕ್ಕೆ ಸುಮಾರು ದೂರ ನಡೆದನು. ಕೊನೆಗೆ ಒಂದು ತುಂಬಾ ದೊಡ್ಡದಾದ ಓಕ್ ಮರದ ಹತ್ತಿರ ಬಂದನು. ಅದು ನೂರಾರು ವರುಷಗಳಷ್ಟು ಹಳೆಯದಾಗಿತ್ತು. ಐದು ಜನರ ಕೈಗಳಿಂದ ಆ ಮರವನ್ನು ಹಿಡಿದುಕೊಂಡರೂ ಸುತ್ತಳತೆ ನೋಡಲು ಅಸಾಧ್ಯವಾಗಿತ್ತು. ಆಶ್ಚರ್ಯದಿಂದ ಹಾಗೆಯೇ ನೋಡುತ್ತಾ ನಿಂತುಬಿಟ್ಟನು. ಆ ಮರದೊಳಗೆ ಅನೇಕ ಪಕ್ಷಿಗಳ ಗೂಡು ಇರಲೇಬೇಕೆಂದು ಯೋಚಿಸಿದನು. ಹಾಗೆ ಯೋಚನೆ ಮಾಡುತ್ತಿರುವಾಗಲೇ ಅವನಿಗೆ ಇದ್ದಕ್ಕಿದ್ದಹಾಗೆ ಒಂದು ಧ್ವನಿ ಕೇಳಿಸಿತು. ಆಗ ಅವನು ಅದನ್ನೆ ಆಲಿಸಿದನು. ಮತ್ತೊಮ್ಮೆ ಮೇಲುಧ್ವನಿಯಿಂದ "ನಾನು ಹೊರಗೆ ಬರುವೆ! ನಾನು ಹೊರಗೆ ಬರುವೆ!" ಅತ್ತ ಹಾಗೆ ಕೇಳಿಸಿತು. ಅವನು ಸುತ್ತಲೂ ನೋಡಿದನು. ಏನೂ ಕಾಣಿಸಲಿಲ್ಲ. ಎಲ್ಲೋ ನೆಲದ ಮೇಲಿನಿಂದ ಧ್ವನಿ ಬಂದಹಾಗೆ ಕೇಳಿಸಿತು. ಆದ್ದರಿಂದ "ನೀನು ಎಲ್ಲಿರುವೆ?" ಎಂದು ಅವನು ಕೂಗಿದನು. ಆ ಧ್ವನಿ "ಇಲ್ಲಿ ಓಕ್ ಮರದ ಬೇರುಗಳಲ್ಲಿ ಸಿಕ್ಕಿಹಾಕಿಕೊಂಡಿದ್ದೇನೆ. ನನ್ನನ್ನು ಹೊರಗೆ ಬಿಡು" ಎಂದು ಉತ್ತರಿಸಿತು. ಆಗ ಆ ಹುಡುಗ ಮರದ ಬುಡವನ್ನು ಹುಡುಕತೊಡಗಿದನು. ಕೊನೆಗೆ ಒಂದು ಚಿಕ್ಕ ಪೊಳ್ಳಾದ ಜಾಗದಲ್ಲಿ ಒಂದು ಗಾಜಿನ ಬಾಟಲಿಯನ್ನು ನೋಡಿದನು. ಅವನು ಅದನ್ನು ತೆಗೆದುಕೊಂಡು ಬೆಳಕಿನಲ್ಲಿ ನೋಡಿದನು. ಅದರೊಳಗೆ ಕಪ್ಪೆಯಾಕಾರದ ಒಂದು ವಸ್ತು ಮೇಲೆ ಕೆಳಗೆ ಆಡುತ್ತಲಿತ್ತು. "ನನ್ನನ್ನು ಹೊರಗೆ ಬಿಡು, ನನ್ನನ್ನು ಹೊರಗೆ ಬಿಡು" ಎಂದು ಆ ವಸ್ತು ಕೂಗಿತು. ಆ ಹುಡುಗ ಏನೂ ಕೆಟ್ಟದ್ದು ಆಗಲಾರದು ಎಂದುಕೊಂಡು ಬಾಟಲಿಯ ಮುಚ್ಚಳವನ್ನು ತೆಗೆದನು. ಅದರೊಳಗಿದ್ದ ದೆವ್ವ ತಕ್ಷಣವೇ ಹೊರಗೆ ಹಾರಿತು. ನಂತರ ಬಹಳ ವೇಗವಾಗಿ ಬೆಳೆಯಲಾರಂಭಿಸಿತು. ಅದು ಎಷ್ಟು ಎತ್ತರವಾಗಿ

ಬೆಳೆಯಿತು ಎಂದರೆ ಕೆಲವು ನಿಮಿಷಗಳಲ್ಲಿ ಓಕ್ ಮರದ ಅರ್ಧದಷ್ಟೇ ಬೆಳೆಯಿತು. ಹುಡುಗನ ಮುಂದೆ ತನ್ನ ದೈತ್ಯಾಕಾರದಲ್ಲಿ ನಿಂತಿತು. "ನಿನಗೆ ಗೊತ್ತಾ? ನನ್ನನ್ನು ಆ ಬಾಟಲಿಯಿಂದ ಬಿಡುಗಡೆ ಮಾಡಿದ್ದಕ್ಕೆ ನಿನಗೆ ಏನು ಬಹುಮಾನ ಸಿಗುತ್ತೆ ಎಂದು ಗೊತ್ತಾ?" ಎಂದು ಗುಡುಗಿನ ಶಬ್ದದಷ್ಟು ಜೋರಾಗಿ ಅವನನ್ನು ಕೇಳಿತು.

"ಇಲ್ಲ, ನನಗೆ ಹೇಗೆ ಗೊತ್ತಾಗುತ್ತದೆ?" ಎಂದು ಸ್ವಲ್ಪವೂ ಹೆದರದೆ ಆ ಹುಡುಗ ಉತ್ತರಿಸಿದನು. "ಹಾಗಾದರೆ ಹೇಳುತ್ತೇನೆ ಕೇಳು. ನಾನು ಮೊದಲು ನಿನ್ನ ಕುತ್ತಿಗೆ ಮುರಿಯುವೆ" ಎಂದು ಆ ದೆವ್ವ ಹೇಳಿತು. "ನೀನು ಅದನ್ನು ಮೊದಲೇ ಹೇಳಬೇಕಾಗಿತ್ತು. ಹಾಗಾದರೆ ನೀನು ಮೊದಲು ಎಲ್ಲಿ ಅಂಟಿಕೊಂಡಿದ್ದೆಯೊ ಅಲ್ಲೇ ಇರಬೇಕಾಗುತ್ತೆ. ನೀನು ಇಲ್ಲೇ ಇದ್ದರೂ ನನ್ನ ತಲೆ ನನ್ನ ಭುಜದ ಮೇಲಿದೆ. ಯಾಕೆಂದರೆ ನಿನ್ನ ವಿಷಯದ ಬಗ್ಗೆ ಅನೇಕ ಜನರ ಅಭಿಪ್ರಾಯವನ್ನು ಕೇಳಬೇಕು" ಎಂದು ಆ ಯುವ ವಿದ್ವಾಂಸ ಉತ್ತರಿಸಿದನು.

"ನಿನ್ನ ಜನರನ್ನು ನನ್ನ ದಾರಿಗೆ ಅಡ್ಡ ತರಬೇಡ. ಆದರೆ ನಿನ್ನ ಅರ್ಹತೆಗೆ ತಕ್ಕ ಬಹುಮಾನವನ್ನು ಪಡೆಯಲೇಬೇಕು. ನನ್ನನ್ನು ಕರುಣೆಗಾಗಿ ಆ ಶೀಶೆಯಲ್ಲಿ ಬಂಧಿಸಿದ್ದರು ಎಂದು ತಿಳಿದೆಯಾ? ಇಲ್ಲ, ಅದು ನನಗೆ ಕೊಟ್ಟ ಶಿಕ್ಷೆಯಾಗಿತ್ತು. ನಾನು ಪಾದರಸದಷ್ಟೇ ಬಲಶಾಲಿ. ನನ್ನನ್ನು ಹೊರಗೆ ಬಿಟ್ಟವರ ತಲೆಯನ್ನು ಮುರಿಯಬೇಕು" ಎಂದು ಆ ದೆವ್ವ ಹೇಳಿತು.

"ನಿಧಾನ, ಹೇಳಿದಷ್ಟು ಬೇಗ ಮಾಡಲು ಆಗುವುದಿಲ್ಲ. ನೀನು ಇಷ್ಟು ದೈತ್ಯಾಕಾರವಾಗಿದ್ದೀಯಲ್ಲ, ಆ ಸಣ್ಣ ಬಾಟಲಿಯಲ್ಲಿ ಹೇಗಿದ್ದೆ ಎಂದು ನನಗೆ ಅನುಮಾನ. ನೀನು ಮತ್ತೆ ಹಾಗೆ ಹೋದರೆ ನಿನ್ನನ್ನು ಒಂದು ದೆವ್ವವೆಂದು ನಂಬುತ್ತೇನೆ. ಆ ನಂತರ ನಿನಗಿಷ್ಟ ಬಂದ ಹಾಗೆ ನನ್ನ ಜೊತೆ ನಡೆದುಕೊಳ್ಳಬಹುದು" ಎಂದು ಆ ವಿದ್ವಾಂಸ ಹೇಳಿದನು.

ಬಹಳ ಹೆಮ್ಮೆಯಿಂದ ಆ ದೆವ್ವ "ಅದೇನು ಬಹಳ ಸುಲಭ" ಎಂದು ಉತ್ತರಿಸಿತು. ಮೆಲ್ಲಗೆ ಸಣ್ಣಗಾಗುತ್ತಾ ತಾನು ಮೊದಲು ಎಷ್ಟು ತೆಳ್ಳಗೆ, ಸಣ್ಣಗೆ ಇತ್ತೊ ಆ ಆಕಾರ ಪಡೆಯಿತು. ನಂತರ ಬಾಟಲಿಯೊಳಗೆ ನುಸುಳಿಕೊಂಡಿತು. ಅದು ಪೂರ್ತಿ ಒಳಗೆ ಹೋದತಕ್ಷಣ ವಿದ್ವಾಂಸ ಅದರ ಮುಚ್ಚಳ ಮುಚ್ಚಿಬಿಟ್ಟನು. ನಂತರ ಅದು ಎಲ್ಲಿ ಬಿದ್ದಿತ್ತೊ ಅಲ್ಲಿ ಬಿಸಾಕಿದ. ಹೀಗೆ ದೆವ್ವಕ್ಕೆ ಮೊದಲಿನ ಗತಿಯೇ ಆಯಿತು. ಆ ಮೇಲೆ ಆ ಯುವಕ ತನ್ನ ತಂದೆಯ ಹತ್ತಿರಕ್ಕೆ ಹೋಗಲು ಹೊರಟನು. ಆಗ ಆ ದೆವ್ವ ಬಹಳ ದುಃಖದಿಂದ ಕೂಗಿಕೊಂಡಿತು. "ಅಯ್ಯೋ ನನ್ನನ್ನು ಹೊರಗೆ ಬಿಡು, ನನ್ನನ್ನು ಹೊರಗೆ ಬಿಡು!" ಎಂದಿತು.

"ಇಲ್ಲ, ಮತ್ತೆ ಎರಡನೇ ಸಾರಿ ಅದೇ ತಪ್ಪನ್ನು ಮಾಡುವುದಿಲ್ಲ. ಯಾರು ನನ್ನ ಜೀವವನ್ನೇ ತೆಗೆಯಬೇಕೆಂದು ಇರುವರೊ ಅಂತಹವರನ್ನು ನಾನು ಹೊರಗೆ ಬಿಡಲಾರೆ. ನೀನು ಅಲ್ಲೆ ಸುರಕ್ಷಿತವಾಗಿರು" ಎಂದು ಆ ಹುಡುಗ ಉತ್ತರಿಸಿದನು.

"ನೀನು ನನ್ನನ್ನು ಹೊರಗೆ ಬಿಟ್ಟರೆ, ನಿನ್ನ ಜೀವಮಾನ ಪೂರ್ತಿ ಸಾಕಾಗುವಷ್ಟು ಸಹಾಯ ಮಾಡುತ್ತೇನೆ" ಎಂದು ದೆವ್ವ ಬೇಡಿಕೊಂಡಿತು.

“ಇಲ್ಲ, ಇಲ್ಲ, ಮೊದಲು ಮಾಡಿದ ಹಾಗೆ ನೀನು ನನಗೆ ಮೋಸ ಮಾಡುವೆ” ಎಂದು ಆ ವಿದ್ವಾಂಸ ಹೇಳಿದನು.

“ನೀನು ನಿನ್ನ ಒಳ್ಳೆಯ ಅದೃಷ್ಟವನ್ನು ಹೊಡೆದೋಡಿಸಿದ ಹಾಗೆ ಆಗುತ್ತೆ. ನಾನು ನಿನಗೆ ಯಾವ ಅಪಾಯವನ್ನು ಮಾಡುವುದಿಲ್ಲ. ಶ್ರೀಮಂತನನ್ನಾಗಿ ಮಾಡುವೆ” ಎಂದು ದೆವ್ವ ಹೇಳಿತು. ಆಗ ಆ ವಿದ್ವಾಂಸ “ಒಂದು ಸಾರಿ ಪ್ರಯತ್ನ ಪಡುವೆ. ಬಹುಶಃ ತನ್ನ ಮಾತನ್ನು ಉಳಿಸಿಕೊಳ್ಳಬಹುದು. ನನಗೆ ಯಾವ ಅಪಾಯವನ್ನು ಮಾಡದಿರಬಹುದು” ಎಂದ ತನ್ನಲ್ಲೇ ಯೋಚಿಸುತ್ತಾ ಮತ್ತೆ ಆ ಬಾಟಲಿಯ ಮುಚ್ಚಳವನ್ನು ತೆಗೆದನು. ದೆವ್ವ ಮೊದಲಿನಂತೆ ಬಾಟಲಿಯಿಂದ ಚಿಮ್ಮಿಕೊಂಡು ಹಾರಿತು. ಮೊದಲಿನಂತೆ ಉದ್ದ, ಅಗಲ ಬೆಳೆಯಿತು. ದೈತ್ಯಾಕಾರ ಪಡೆಯಿತು.

“ಈಗ ನಿನಗೆ ಬಹುಮಾನ ಸಿಗುತ್ತದೆ” ಎಂದು ಹೇಳುತ್ತಾ ಅಂಚು ಪಟ್ಟಿಯಷ್ಟು ಅಗಲದ ಒಂದು ಬಟ್ಟೆ ತುಂಡು ಕೊಟ್ಟಿತು. “ಇದರ ಒಂದು ತುದಿಯಿಂದ ಯಾವುದೇ ಗಾಯವನ್ನು ವಾಸಿಮಾಡಬಹುದು. ಇನ್ನೊಂದು ತುದಿಯಿಂದ ಕಬ್ಬಿಣ ಅಥವಾ ಉಕ್ಕನ್ನು ಮುಟ್ಟಿದರೆ ಅದು ಬೆಳ್ಳಿ ಆಗುತ್ತದೆ” ಎಂದ ಹೇಳಿತು. “ಹಾಗಾದರೆ ನಾನಿದನ್ನು ಮೊದಲು ಪರೀಕ್ಷಿಸಿ ನೋಡಬೇಕು” ಎಂದು ಹೇಳುತ್ತ ಆ ಹುಡುಗ ತನ್ನ ಕೊಡಲಿಯಿಂದ ಮರದ ಮೇಲೆ ಗಾಯಮಾಡಿದನು. ನಂತರ ಆ ತುಂಡು ಬಟ್ಟೆಯ ತುದಿಯಿಂದ ಮುಟ್ಟಿಸಿದ ತಕ್ಷಣ ಗಾಯ ಮಾಯವಾಯಿತು. ಅಲ್ಲಿ ಗಾಯದ ಗುರುತು ಕೂಡ ಇರಲಿಲ್ಲ. “ಈಗ ಇದು ಸರಿಯಾಗಿದೆ, ನೀನಿನ್ನು ದೂರ ಹೋಗಬಹುದು” ಎಂದು ಆ ಯುವ ವಿದ್ವಾಂಸ ಹೇಳಿದನು. ದೆವ್ವ ತನ್ನನ್ನು ಬಿಡುಗಡೆ ಮಾಡಿದ್ದಕ್ಕಾಗಿ ಅವನಿಗೆ ನಮಸ್ಕಾರಗಳನ್ನು ಹೇಳಿತು. ಆ ಹುಡುಗನೂ ಕೂಡ ದೆವ್ವ ಕೊಟ್ಟ ಉಡುಗೊರೆಗೆ ವಂದನೆಗಳನ್ನು ಹೇಳಿದನು. ಆ ನಂತರ ತನ್ನ ತಂದೆಯ ಬಳಿಗೆ ಹೋದನು.

“ಎಲ್ಲಿ ತಿರುಗಾಡಲು ಹೋಗಿದ್ದೆ? ನನ್ನ ಕೆಲಸ ಮರೆತುಬಿಟ್ಟೆ ಏನು? ನಿನಗೆ ಈ ತರಹದ ಕೆಲಸ ಮಾಡಲು ಆಗುವುದಿಲ್ಲ ಎಂದು ಸರಿಯಾಗಿ ಹೇಳಿದ್ದೆ” ಎಂದು ತಂದೆ ಮಗನನ್ನು ಕೇಳಿದನು.

“ಸಮಾಧಾನ ಮಾಡಿಕೊಳ್ಳಪ್ಪ. ನಾನು ಸಮಯವನ್ನು ಹಾಳುಮಾಡಲಿಲ್ಲ. ಸರಿಯಾಗಿ ಉಪಯೋಗಿಸಿ ಕೊಂಡೆ” ಎಂದು ಮಗ ಹೇಳಿದನು. “ಹೌದು, ನಿಜವಾಗಲೂ ಸರಿಯಾಗಿ ಉಪಯೋಗಿಸಿಕೊಂಡಿರುವೆ, ಕೊಡಲಿ ಇಲ್ಲದೆ” ಎಂದು ತಂದೆ ಸಿಟ್ಟಿನಿಂದ ವ್ಯಂಗವಾಗಿ ಹೇಳಿದನು.

“ಈಗ ನೋಡಪ್ಪ, ಆ ಮರಕ್ಕೆ ಕೊಡಲಿಯಿಂದ ಒಂದು ಏಟು ಹಾಕುತ್ತೇನೆ” ಎಂದು ಹೇಳುತ್ತಾ ಕೊಡಲಿಯನ್ನು ದೆವ್ವ ಕೊಟ್ಟಿದ್ದ ಅಂಚುಪಟ್ಟಿಯಿಂದ ತಿಕ್ಕಿದನು. ಕೊಡಲಿಯಿಂದ ಮರಕ್ಕೆ ಹೊಡೆದಾಗ, ಅದು ಸೊಟ್ಟಗಾಯಿತು. ಏಕೆಂದರೆ ಅದು ಬೆಳ್ಳಿಯಾಗಿ ಬದಲಾಗಿತ್ತು. “ಅಪ್ಪ, ಈಗ ನೋಡು ನೀನು ತುದಿಯೆ ಇಲ್ಲದ ಕೊಡಲಿಯನ್ನು ಕೊಟ್ಟಿದ್ದೀಯ” ಎಂದು ತಂದೆಗೆ ಹೇಳಿದನು.

“ಅಯ್ಯೋ! ಏನು ಮಾಡಿಬಿಟ್ಟೆ? ಅದನ್ನು ನಿನ್ನ ಕೆಲಸಕ್ಕಾಗಿ ಪಕ್ಕದ ಮನೆಯವರಿಂದ ಕೇಳಿಕೊಂಡು ತಂದಿದ್ದೆ. ಈಗ ಅವರಿಗೆ ಹೇಗೆ ಕೊಡಲಿ? ಏನು ಹೇಳಲಿ?” ಎಂದು ಹೆದರಿಕೆಯಿಂದ ತಂದೆ ಕೇಳಿದನು. “ಸಿಟ್ಟುಮಾಡಿಕೊಳ್ಳಬೇಡಪ್ಪ. ನಾನು ಬೇಗನೆ ಕೊಡಲಿಯ ದುಡ್ಡು ಕೊಡುವೆ” ಎಂದು ಮಗ ಹೇಳಿದನು.

ತಂದೆ ಆಶ್ಚರ್ಯದಿಂದ, "ನೀನು ಪೆದ್ದ , ಹೇಗೆ ಕೊಡುವೆ? ನಾನು ನಿನಗೆ ಕೊಟ್ಟಿದ್ದು ಬಿಟ್ಟರೆ, ನಿನ್ನಲ್ಲೇನಿದೆ ಕೊಡಲಿಕ್ಕೆ? ಹೀಗೆ ಕೆಲವು ಸಾರಿ ವಿದ್ಯಾರ್ಥಿಗಳ ತಲೆ ವಿಚಿತ್ರವಾಗಿ ಓಡುತ್ತೆ. ಆದರೆ ಮರ ಕಡಿಯುವ ಬಗ್ಗೆ ನಿನಗೆ ಏನೇನು ಗೊತ್ತಿಲ್ಲ ನಾನೆ?" ಎಂದು ಕೇಳಿದನು. ಸ್ವಲ್ಪ ಹೊತ್ತಿನ ನಂತರ ಆ ಯುವ ವಿದ್ವಾಂಸ "ಅಪ್ಪ, ನಾನು ಇನ್ನು ಮೇಲೆ ಕೆಲಸವನ್ನು ಮಾಡುವುದಿಲ್ಲ. ಈಗ ನಾವು ಈ ದಿನ ಹಬ್ಬ ಮಾಡೋಣ" ಎಂದು ಹೇಳಿದನು.

"ಏಯ್, ಏನು ಹೇಳಿದಿ? ನಾನು ನಿನ್ನ ಹಾಗೆ ಪ್ಯಾಂಟಿನ ಜೇಬಲ್ಲಿ ಕೈಹಾಕಿಕೊಂಡು ಸುಮ್ಮನೆ ಇರಬೇಕು ಎಂದು ತಿಳಿದಿದ್ದಿ ಏನು? ನಾನು ನನ್ನ ಕೆಲಸ ಪೂರೈಸಲೇಬೇಕು. ನೀನು ಬೇಕಾದರೆ ಮನೆಗೆ ಹೋಗು" ಎಂದು ತಂದೆ ಹೇಳಿದನು. ಆಗ ಮಗ, "ತನಗೆ ಏನೂ ಗೊತ್ತಿಲ್ಲ. ತಾನು ಅದೇ ಮೊದಲ ಬಾರಿ ಕಾಡಿಗೆ ಬಂದಿದ್ದು " ಎಂದು ಹೇಳಿದನು. ಅವನ ಮಾತಿನಿಂದ ಅಪ್ಪನ ಸಿಟ್ಟು ಕರಗಿತು. ಮಗ, ಅಪ್ಪನನ್ನು ಮನೆಗೆ ಒತ್ತಾಯದಿಂದ ಕರೆದುಕೊಂಡುಹೋದನು. ಅವರು ಮನೆಗೆ ಹೋದಮೇಲೆ ಆ ಮುರಿದ ಕೊಡಲಿಯನ್ನು ಮಾರಿಕೊಂಡು ಬರಲು ತಂದೆ ಮಗನಿಗೆ ಹೇಳಿದನು. ಅಲ್ಲದೆ ಉಳಿದ ಸಾಲವನ್ನು ದುಡಿದು ತೀರಿಸುವುದಾಗಿ ಹೇಳಿದನು. ಮಗ ಕೊಡಲಿಯನ್ನು ತೆಗೆದುಕೊಂಡು ಪೇಟೆಗೆ ಹೋದನು. ಅಲ್ಲಿ ಅಕ್ಕಸಾಲಿಯವನ ಹತ್ತಿರ ಬೆಲೆ ಕಟ್ಟಿಸಿದನು. "ಇದು ನಾಲ್ಕುಸಾವಿರ ರೂಪಾಯಿಗಳ ಬೆಳೆಯುಳ್ಳದ್ದು. ಆದರೆ ಈಗ ನನ್ನ ಮನೆಯಲ್ಲಿ ಅಷ್ಟು ಹಣವಿಲ್ಲ" ಎಂದು ಅಕ್ಕಸಾಲಿ ಹೇಳಿದನು.

"ಈಗ ನಿನ್ನ ಹತ್ತಿರ ಎಷ್ಟಿದೆಯೊ ಅಷ್ಟುಕೊಡು. ಉಳಿದಿದ್ದನ್ನು ನೀನು ಕೊಡಬಲ್ಲೆ ಎಂದು ನಂಬುತ್ತೇನೆ" ಎಂದು ಆ ಯುವ ವಿದ್ವಾಂಸ ಹೇಳಿದನು. ಆಗ ಅಕ್ಕಸಾಲಿ ಮೂರುಸಾವಿರ ರೂಪಾಯಿಗಳನ್ನು ಕೊಟ್ಟು, ಉಳಿದದ್ದು ಕೊಡಬೇಕಾದ ಸಾಲ ಎಂದು ಹೇಳಿದನು. ದುಡ್ಡನ್ನು ತೆಗೆದುಕೊಂಡು ಮನೆಗೆ ಹೋದನು. "ಹೋಗಿ, ಪಕ್ಕದ ಮನೆಯವನ ಕೊಡಲಿಗೆ ಎಷ್ಟು ದುಡ್ಡು ಆಗುತ್ತದೆ ಎಂದು ಕೇಳಿಕೊಂಡು ಬಾ. ನನ್ನ ಹತ್ತಿರ ಹಣವಿದೆ" ಎಂದು ತಂದೆಗೆ ಹೇಳಿದನು. ನನಗೆ ಅದರ ಬೆಲೆ ಗೊತ್ತು. "ಒಂದುನೂರ ಆರು ರೂಪಾಯಿಗಳಾಗುತ್ತವೆ" ಎಂದು ಹುಡುಗನ ಅಪ್ಪ ಹೇಳಿದನು.

ಹಾಗಾದರೆ ಅವನಿಗೆ "ಇನ್ನೂರಾ ಹನ್ನೆರಡು ರೂಪಾಯಿಗಳನ್ನು ಕೊಡು. ಅದರ ಬೆಲೆಗಿಂತ ದುಪ್ಪಟ್ಟು ಆಯಿತು. ಇಲ್ಲಿ ನೋಡು ನನ್ನ ಹತ್ತಿರ ಬೇಕಾದಷ್ಟು ದುಡ್ಡಿದೆ" ಎಂದು ಹೇಳುತ್ತಾ ತನ್ನ ತಂದೆಗೆ ಒಂದು ಸಾವಿರ ರೂಪಾಯಿಗಳನ್ನು ಕೊಟ್ಟು "ಇದಕ್ಕಿಂತಲೂ ಹೆಚ್ಚು ಈಗ ನಿನಗೆ ಬೇಕಾಗಿಲ್ಲ. ಇದರಿಂದ ಸುಖವಾಗಿ ಬದುಕು" ಎಂದು ಹೇಳಿದನು.

"ಅಯ್ಯೋ! ದೇವರೆ, ಇಷ್ಟೊಂದು ಹಣವನ್ನು ಎಲ್ಲಿ ಸಂಪಾದಿಸಿದೆ?" ಎಂದು ತಂದೆ ಕೇಳಿದನು.

ಆಗ, ಮಗ, ನಡೆದುದೆಲ್ಲವನ್ನೂ ಹೇಳಿದನು. ತನ್ನ ಅದೃಷ್ಟವನ್ನು ನಂಬಿ ಅಷ್ಟು ಹಣವನ್ನು ಸಂಪಾದಿಸಿದ್ದನ್ನು ವಿವರಿಸಿದನು. ಉಳಿದ ಹಣದಿಂದ ಅವನು ವಿಶ್ವವಿದ್ಯಾಲಯಕ್ಕೆ ಹಿಂದಿರುಗಿ ಹೋದನು. ಅಲ್ಲಿ ಅವನು ಕಲಿಯಬೇಕಾದುದನ್ನೆಲ್ಲ ಕಲಿತನು. ನಂತರ ಆ ದೆವ್ವ ಕೊಟ್ಟಿದ್ದ ಅಂಚುಪಟ್ಟಿಯಿಂದ ಎಲ್ಲ ರೀತಿಯ ಗಾಯಗಳನ್ನು ವಾಸಿಮಾಡಲು ಅವನಿಗೆ ಸಾಧ್ಯವಾಯಿತು. ಹೀಗೆ ಅವನು ಇಡೀ ಪ್ರಪಂಚದಲ್ಲಿ ಅತ್ಯಂತ ಪ್ರಸಿದ್ಧ ಶಸ್ತ್ರವೈದ್ಯನಾದನು.

೪೫. ಜಾಣೆ ಆಲೀಸ್



ಒಂದಾನೊಂದು ಕಾಲದಲ್ಲಿ ಒಬ್ಬ ಮನುಷ್ಯ ಇದ್ದನಂತೆ. ಅವನ್ನಿಗೆ ಒಬ್ಬ ಮಗಳಿದ್ದಳಂತೆ. ಅವಳನ್ನು ಎಲ್ಲರು "ಜಾಣೆ ಆಲೀಸ್" ಎಂದು ಕರೆಯುತ್ತಿದ್ದರಂತೆ. ಅವಳು ಬೆಳೆದು ದೊಡ್ಡವಳಾದಾಗ, ಅವಳ ತಂದೆ, "ಅವಳ ಮದುವೆ ಬಗ್ಗೆ ನಾವು ಯೋಚನೆ ಮಾಡಬೇಕು" ಎಂದು ಹೇಳಿದನಂತೆ. ಆಗ ಅವಳ ತಾಯಿ "ಹೌದು, ಅವಳಿಗೆ ಸರಿಯಾದ ವರ ಸಿಕ್ಕರೆ ಮದುವೆ ಮಾಡಬೇಕು" ಎಂದು ಉತ್ತರಿಸಿದಳಂತೆ.

ಹೀಗೆ ಸುಮಾರು ದಿನಗಳಾದ ಮೇಲೆ ಹ್ಯಾನ್ಸ್ ಎನ್ನುವ ಹುಡುಗ ಬಹಳ ದೂರದಿಂದ ಅವಳನ್ನು ಮದುವೆ ಆಗಬೇಕೆಂದು ಬಂದನಂತೆ. ಆದರೆ ಅವನು ಒಂದು ಷರತ್ತನ್ನು ಹಾಕಿದನಂತೆ. ಅದು ಏನು ಅಂದರೆ ತಾನು ಮದುವೆ ಆಗುವ ಆಲೀಸ್ ಬರಿ ಜಾಣೆ ಆಗಿದ್ದರೆ ಸಾಲದು ಅವಳು ದೂರದೃಷ್ಟಿ ಮತ್ತು ಮುಂದಾಲೋಚನೆಯವಳಾಗಿರಬೇಕೆಂದು ಹೇಳಿದನಂತೆ. ಅದಕ್ಕೆ ಅವಳ ತಂದೆ "ಓಹೋ, ಅದಕ್ಕೇನು, ಅವಳ ತುಂಬ ಮೆದುಳಿದೆ. ಗಾಳಿ ರಸ್ತೆ ಗುಡಿಸುವುದನ್ನು ನೋಡಬಲ್ಲಳು, ಕೀಟಗಳು ಕೆಮ್ಮುವುದನ್ನು ಕೇಳಿಸಿಕೊಳ್ಳಬಲ್ಲಳು" ಎಂದು ಹೇಳಿದನಂತೆ.

"ಬಹಳ ಒಳ್ಳೆಯದಾಯ್ತು. ಆದರೆ ಅವಳು ಮುಂದಾಲೋಚನೆಯವಳು ಆಗಿರದಿದ್ದರೆ ನಾನು ಅವಳನ್ನು ಮದುವೆ ಆಗಲಾರೆ" ಎಂದು ಹ್ಯಾನ್ಸ್ ಹೇಳಿದನಂತೆ. ಅಷ್ಟೆಲ್ಲ ಮಾತುಕತೆ ಆದ ಮೇಲೆ ಅವರೆಲ್ಲ ಊಟಕ್ಕೆ ಕುಳಿತರಂತೆ. ಆಗ ಆಲೀಸ್‌ಳ ತಾಯಿ "ಆಲೀಸ್, ಕೆಳಗಿನ ಕೋಣೆಗೆ ಹೋಗಿ ಸ್ವಲ್ಪ ಮದ್ಯವನ್ನು ತೆಗೆದುಕೊಂಡು ಬಾ" ಎಂದು ಹೇಳಿದಳಂತೆ.

ಆಲೀಸ್ ಬೀರುವಿನಲ್ಲಿದ್ದ ಒಂದು ಹಿಡಿಕೆ ಪಾತ್ರೆ ತೆಗೆದುಕೊಂಡು ಕೆಳಗಿನ ಕೋಣೆಗೆ ಹೋದಳಂತೆ. ಅಲ್ಲಿ ಪೀಪಾಯಿಯ ನಲ್ಲಿಯ ಕೆಳಗೆ ಆ ಪಾತ್ರೆ ಇಟ್ಟು ಸ್ವಲ್ಪ ಹೊತ್ತು ತನ್ನ ಪಾಡಿಗೆ ತಾನು ಸುಮ್ಮನಿದ್ದಳಂತೆ. ನಂತರ

ಸ್ವಲ್ಪ ಯೋಚಿಸಿ, ಒಂದು ಸ್ಟೂಲು ಎಳೆದು ಅದನ್ನು ಪೀಪಾಯಿ ನಲ್ಲಿಯ ಕೆಳಗಿಟ್ಟಳಂತೆ. ಅದರ ಮೇಲೆ ತಾನು ತೆಗೆದುಕೊಂಡು ಹೋಗಿದ್ದ ಜಗ್ ಅನ್ನು ಇಟ್ಟಳಂತೆ. ಯಾಕೆಂದರೆ ಅದನ್ನು ತುಂಬ ಹೊತ್ತು ಬಗ್ಗಿ ಹಿಡಿದುಕೊಂಡರೆ, ಬೆನ್ನು ಸೊಟ್ಟಗಾದರೆ ಗತಿ ಏನು ಎಂದು ಯೋಚಿಸಿದಳಂತೆ. ಆಮೇಲೆ ಮತ್ತೆ ಜಗ್ ಅನ್ನು ಕೆಳಗಿಟ್ಟು ತಾನು ಸ್ಟೂಲಿನ ಮೇಲೆ ಕುಳಿತು, ಮದ್ಯ ಸುರಿಯಲಿ ಎಂದು ಜಗ್ ಇಟ್ಟು ಕುಳಿತುಕೊಂಡಳಂತೆ. ಹಾಗೆ ಸುಮ್ಮನಿದ್ದರೆ ಸೋಮಾರಿತನವಾದೀತೆಂದು ಅತ್ತ ಇತ್ತ ನೋಡತೊಡಗಿದಳಂತೆ. ಅಲ್ಲಿ ಅವಳು ಮೇಲೆ, ಕೆಳಗೆ ನೋಡುತ್ತ ಮನೆಯ ಮಾಡನ್ನು ಗಮನಿಸಿದಳಂತೆ. ಇಟ್ಟಿಗೆಗಳನ್ನು ಇಡುವವರು ಒಂದು ಮಚ್ಚನ್ನು ಅಲ್ಲೇ ಬಿಟ್ಟುಬಿಟ್ಟಿದ್ದರಂತೆ. ಅದು ಸರಿಯಾಗಿ ಅವಳ ತಲೆ ಮೇಲೆ ಇತ್ತಂತೆ. ಅದನ್ನು ನೋಡಿ ಆಲೀಸ್ ಅಳತೊಡಗಿದಳಂತೆ. ಅವಳು ಅದರ ಬಗ್ಗೆ ಏನು ಯೋಚನೆ ಮಾಡಿದಳಂತೆ ಅಂದರೆ, "ಅಯ್ಯೋ! ನಾನು ಹ್ಯಾನ್ಸನನ್ನು ಮದುವೆ ಆದರೆ, ನಮಗೆ ಒಂದು ಮಗು ಆದರೆ, ಅದು ಬೆಳೆದು ದೊಡ್ಡದಾದರೆ, ಅವನನ್ನು ನಾವು ಮದ್ಯ ತೆಗೆದುಕೊಂಡು ಬರಲು ಈ ಕೆಳಗಿನ ಕೋಣೆಗೆ ಕಳಿಸಿದರೆ, ಆ ಮಚ್ಚು ಅವನ ತಲೆಯ ಮೇಲೆ ಬಿದ್ದು ಅವನು ಸತ್ತುಹೋದರೆ ಏನು ಗತಿ?" ಎಂದು ಮುಂದಾಲೋಚನೆ ಮಾಡಿದಳಂತೆ. ಅವಳು ಮುಂದೆ ಎಂದೋ ಆಗಬಹುದಾದ ದುರದೃಷ್ಟವನ್ನು ಕುರಿತು ಚಿಂತೆಮಾಡಿಕೊಂಡು ಜೋರಾಗಿ ಅಳತೊಡಗಿದಳಂತೆ.

ಅದೇ ವೇಳೆಗೆ ಮೇಲೆ ನಡುಮನೆಯಲ್ಲಿ ಮದ್ಯಕ್ಕಾಗಿ ಎಲ್ಲರೂ ಕಾಯುತ್ತಿದ್ದರಂತೆ. ಆದರೆ ಜಾಣೆ ಆಲೀಸ್‌ಳು ಯಾವಾಗ ಬರಲಿಲ್ಲವೊ, ಆಗ ಅವಳ ತಾಯಿ ಕೆಲಸದ ಹುಡುಗಿಯನ್ನು ಕಳಿಸಿದಳಂತೆ. ಆಲೀಸ್‌ಳು ಬರದೆ ಇರಲು ಕಾರಣ ತಿಳಿದುಕೊಂಡು ಬರಲು ಹೇಳಿದಳಂತೆ. ಆ ಹುಡುಗಿ ಕೆಳಗಿನ ಕೋಣೆಗೆ ಹೋದಳಂತೆ. ಅಲ್ಲಿ ಆಲೀಸ್ ಮದ್ಯದ ದೊಡ್ಡ ಜಾಡಿಯ ಮುಂದೆ ಕುಳಿತು ಬಿಕ್ಕಳಿಸುತ್ತಾ ಅಳುತ್ತಿದ್ದುದನ್ನು ನೋಡಿದಳಂತೆ. ಆಗ ಕೆಲಸದ ಹುಡುಗಿ ಅವಳು ಯಾಕೆ ಅಳುತ್ತಿದ್ದಾಳೆ ಎಂದು ಕೇಳಿದಳಂತೆ. ಅದಕ್ಕೆ ಅವಳು "ನಾನು ಕಾರಣವಿಲ್ಲದೆ ಅಳುತ್ತಿಲ್ಲ. ನಾನು ಹ್ಯಾನ್ಸನನ್ನು ಮದುವೆ ಆಗಿ, ನನಗೊಂದು ಮಗುವಾಗಿ, ಅವನು ದೊಡ್ಡವನಾಗಿ, ನಾವು ಅವನನ್ನು ಇಲ್ಲಿಗೆ ಮದ್ಯ ತರಲು ಕಳಿಸಿದರೆ, ಆ ಮಚ್ಚು ಅವನ ತಲೆಯ ಮೇಲೆ ಬಿದ್ದು, ಅವನು ಸತ್ತುಹೋದರೆ" ಎಂದು ಅಳುತ್ತಿದ್ದೇನೆ ಎಂದು ಹೇಳಿದಳಂತೆ. "ಆಹಾ, ನಮ್ಮ ಆಲೀಸ್ ಎಷ್ಟು ಜಾಣೆ ಇದ್ದಾಳೆ!" ಎಂದು ಹೇಳುತ್ತಾ, ಅವಳೂ ಕೂಡ ಅಳಲು ಶುರು ಮಾಡಿದಳಂತೆ. ಮುಂದೆ ಬರಲಿರುವ ದುರದೃಷ್ಟಕ್ಕೆ ಮೊದಲೆ ಅಳಲು ಪ್ರಾರಂಭಿಸಿದರಂತೆ.

ಸ್ವಲ್ಪ ಹೊತ್ತಾಯಿತು. ಕೆಲಸದ ಹುಡುಗಿಯೂ ಬರದೆ ಇರುವುದನ್ನು ನೋಡಿ, ಮೇಲೆ ಕುಳಿತಿದ್ದವರೆಲ್ಲ ಬಾಯಾರಿಕೆಯಿಂದ ತಳಮಳಿಸಿದರಂತೆ. ಆಗ ಆಲೀಸ್‌ಳ ತಂದೆ, ತನ್ನ ಮಗನನ್ನು ಕೆಳಗೆ ಹೋದವರಿಗೆ ಏನಾಗಿದೆ ಎಂದು ತಿಳಿದುಕೊಂಡು ಬರಲು ಕಳಿಸಿದನಂತೆ. ಆ ಹುಡುಗ ಕೆಳಗೆಹೋಗಿ ನೋಡಿದಾಗ, ಜಾಣೆ ಆಲೀಸ್ ಮತ್ತು ಕೆಲಸದ ಹುಡುಗಿ ಇಬ್ಬರೂ ಅಳುತ್ತಿದ್ದರಂತೆ. ಅವರು ಯಾಕೆ ಅಳುತ್ತಿದ್ದಾರೆ ಎಂದು ಕೇಳಿದನಂತೆ. ಜಾಣೆ ಆಲೀಸ್ ಅವನಿಗೂ ಕೂಡ ಆ ಮಚ್ಚು ತನ್ನ ಮಗನ ಮೇಲೆ ಬೀಳಬಹುದಾದ ಕತೆಯನ್ನು ಹೇಳಿದಳಂತೆ. ಅವಳ ಕತೆಯನ್ನು ಕೇಳಿಸಿಕೊಂಡು ಆ ಹುಡುಗ, "ಆಹಾ, ನಮ್ಮ ಆಲೀಸ್‌ಎಷ್ಟೊಂದು ಜಾಣೆ!" ಎಂದು ಆಶ್ಚರ್ಯಪಟ್ಟನಂತೆ. ನಂತರ ಅವನೂ ಕೂಡ ಅವರ ಜೊತೆ ದೊಡ್ಡ ಧ್ವನಿಯಲ್ಲಿ ಅಳತೊಡಗಿದನಂತೆ. ಮೇಲುಗಡೆಯವರು ಇನ್ನೂ ಕಾಯುತ್ತಾ ಕುಳಿತಿದ್ದರಂತೆ. ಆಗ ಆಲೀಸ್‌ಳ

ತಂದೆ, ಆ ಹುಡುಗನೂ ಹಿಂದಿರುಗಿ ಬರದಿದ್ದುದನ್ನು ಕಂಡು "ನೀನಾದರೂ ಹೋಗಿ, ಆಲೀಸ್ ಯಾಕೆ ಬರಲಿಲ್ಲವೆಂದು ತಿಳಿದುಕೊಂಡು ಬಾ" ಎಂದು ತನ್ನ ಹೆಂಡತಿಗೆ ಹೇಳಿದನಂತೆ. ಹೀಗೆ ಅವಳೂ ಕೆಳಗೆ ಹೋದಳು. ಅಲ್ಲಿ ಇದ್ದ ಮೂವರೂ ಅಳುತ್ತಿರುವುದನ್ನು ನೋಡಿದಳು. ಅದಕ್ಕೆ ಕಾರಣವನ್ನು ಕೇಳಿದಳು. ಆಗಲೂ, ಆಲೀಸ್ ತನ್ನ ಮಗನ ತಲೆಯ ಮೇಲೆ ಬೀಳಬಹುದಾದ ಮಚ್ಚಿನ ಕತೆಯನ್ನು ಹೇಳಿದಳಂತೆ. ಅವಳೂ ಕೂಡ ಉಳಿದವರಂತೆ ಆಶ್ಚರ್ಯದಿಂದ, "ಹೌದಲ್ಲ, ನಮ್ಮ ಆಲೀಸ್ ನಿಜಕ್ಕೂ ಎಷ್ಟು ಜಾಣೆ" ಎಂದು ಹೇಳುತ್ತಾ ಅಳುವವರ ಗುಂಪಿಗೆ ಸೇರಿದಳಂತೆ. ಅದೇ ಹೊತ್ತಿಗೆ ಹೆಂಡತಿಗಾಗಿ ಕಾಯುತ್ತಿದ್ದನಲ್ಲ ಆಲೀಸ್‌ಳ ತಂದೆ, ಕಾದು ಕಾದು ಸಾಕಾಗಿ ಬಾಯಾರಿಕೆ ತಡೆಯದೆ, "ನಾನೇ ಹೋಗಿ ಖುದ್ದು ನೋಡುತ್ತೇನೆ. ಆಲೀಸ್‌ಳನ್ನು ತಡೆಹಿಡಿದಿರುವುದು ಏನಾಗಿರಬಹುದು ಎಂದು ತಿಳಿದು ಬರುತ್ತೇನೆ" ಎಂದು ಹೇಳಿಕೊಳ್ಳುತ್ತಾ ಕೆಳಗಿನ ಕೋಣೆಗೆ ಹೋದನಂತೆ. ಅಲ್ಲಿ ಆ ನಾಲ್ಕು ಜನ ಕುಳಿತುಕೊಂಡು ಒಟ್ಟಿಗೆ ಅಳುತ್ತಿದ್ದರಂತೆ. ಅದಕ್ಕೆ ಕಾರಣ ತಿಳಿದಾಗ, ಅವನೂ ಕೂಡ ಚಕಿತನಾಗಿ "ನಾವು ಎಂತಹ ಜಾಣೆ ಮಗಳನ್ನು ಪಡೆದಿದ್ದೇವೆ" ಎಂದು ಹೇಳುತ್ತಾ ಅಳುವವರ ಜೊತೆ ಸೇರಿಕೊಂಡು ಅಳಲು ಶುರುಮಾಡಿದನಂತೆ. ಅಷ್ಟೆಲ್ಲ ಆಗುವವರೆಗೆ ಮೇಲುಗಡೆ ವರ ಕಾಯುತ್ತಾ ಕುಳಿತುಕೊಂಡಿದ್ದನಲ್ಲ, ಯಾರೂ ಬರದಿರುವುದನ್ನು ನೋಡಿ ತನಗಾಗಿ ಅವರು ಕಾಯುತ್ತಿರಬೇಕು ಎಂದುಕೊಂಡನಂತೆ. ಅವನು ಕೂಡ ವಿಷಯವೇನೆಂದು ತಿಳಿಯಲು ಕೆಳಗೆ ಹೋದನಂತೆ. ಅಲ್ಲಿ ಆ ಐದು ಜನ ಮುಸಿ ಮುಸಿ ಅಳುತ್ತಿದ್ದರಂತೆ. ಅವನನ್ನು ನೋಡಿ ಒಬ್ಬರಿಗಿಂತ ಒಬ್ಬರು ಅಳುವ ಧ್ವನಿಯನ್ನು ಜೋರುಮಾಡಿದರಂತೆ. "ಏನು ಆಪತ್ತು ಆಗಿದೆ?" ಎಂದು ಕೇಳಿದನಂತೆ. "ಅಯ್ಯೋ! ಹ್ಯಾನ್ಸ್, ನಾವು ಮದುವೆ ಆದರೆ, ನಮಗೊಬ್ಬ ಮಗು ಆದರೆ, ಅವನು ಸ್ವಲ್ಪ ದೊಡ್ಡವನಾದರೆ, ಅವನು ಇಲ್ಲಿಂದ ಮದ್ಯ ತರಲು ಬಂದರೆ, ಅಲ್ಲಿ ಮಾಡಿನಲ್ಲಿ ಸಿಗಿಸಿರುವ ಮಚ್ಚು ಅವನ ತಲೆಯ ಮೇಲೆ ಬಿದ್ದರೆ, ಅವನು ಸತ್ತುಹೋದರೆ? ನಾವೆಲ್ಲ ಅಳಲು ಅದಕ್ಕಿಂತ ದೊಡ್ಡ ಕಾರಣ ಇನ್ನೇನು ಬೇಕು?" ಎಂದು ಜಾಣೆ ಆಲೀಸ್ ಉತ್ತರಿಸಿದಳಂತೆ.

"ಇದು ಸರಿಯಾದದ್ದೇ. ಮನೆ ನಡೆಸಲು ಇದಕ್ಕಿಂತ ಹೆಚ್ಚು ಜಾಣತನ ಬೇಡ. ಯಾಕೆಂದರೆ ನೀನು ಅಷ್ಟೊಂದು ಜಾಣೆ ಆಗಿದ್ದೀಯಾ. ಆಲೀಸ್ ನಾನು ನಿನ್ನನ್ನೆ ಮದುವೆ ಆಗುತ್ತೇನೆ" ಎಂದು ಹೇಳುತ್ತಾ ಹ್ಯಾನ್ಸ್ ಅವಳ ಕೈಹಿಡಿದುಕೊಂಡು ಸೀದಾ ತನ್ನ ಮನೆಗೆ ಹೋಗಿ ಮದುವೆ ಆಗಿಬಿಟ್ಟನಂತೆ.

ಅವರು ಮದುವೆ ಆಗಿ ಸ್ವಲ್ಪ ದಿನಗಳು ಕಳೆದ ಮೇಲೆ, "ಪ್ರಿಯೆ, ನಾನು ಹಣ ಸಂಪಾದಿಸಿಕೊಂಡು ಬರಲು ಹೊರಗೆ ಹೋಗುತ್ತೇನೆ. ಆ ಸಮಯದಲ್ಲಿ ನೀನು ಹೊಲಕ್ಕೆ ಹೋಗಿ ರೊಟ್ಟಿಮಾಡಲು ಕಾಳುಗಳನ್ನು ತುಂಬಿಕೊಂಡು ಬಾ" ಎಂದು ಹ್ಯಾನ್ಸ್ ಹೆಂಡತಿಗೆ ಹೇಳಿದನಂತೆ,

"ಹಾಗೆ ಆಗಲಿ, ನೀನು ಹೇಳಿದಂತೆ ಮಾಡುತ್ತೇನೆ" ಎಂದು ಹ್ಯಾನ್ಸ್‌ನಿಗೆ ಆಲೀಸ್ ಹೇಳಿದಳಂತೆ. ಗಂಡ ಆ ಕಡೆ ಹೋದ ಮೇಲೆ, ಅವಳು ಕಿಚಡಿ ಮಾಡಿಕೊಂಡು ಹೊಲಕ್ಕೆ ಹೋದಳಂತೆ. ಅಲ್ಲಿ "ನಾನೀಗ ಏನು ಮಾಡಲಿ? ಮೊದಲು ತೆನೆ ಬಡಿಯಲೊ ಅಥವಾ ಕಿಚಡಿ ತಿನ್ನಲೊ? ಮೊದಲು ತಿನ್ನುತ್ತೇನೆ" ಎಂದು ತನ್ನಲ್ಲೆ ಲೆಕ್ಕಾಚಾರ ಹಾಕಿದಳಂತೆ. ನಂತರ ತಾನು ಒಯ್ದಿದ್ದನ್ನು ತಿಂದು ಮುಗಿಸಿದ ಮೇಲೆ ಮೊದಲು ಕೊಯ್ಯಲೊ ಅಥವಾ ಮೊದಲು ನಿದ್ದೆ ಮಾಡಲೊ? ಒಳ್ಳೆಯದು ಮೊದಲು ಒಂದು ಸಣ್ಣ ನಿದ್ದೆ ಮಾಡುವೆ" ಎಂದು

ತನ್ನಲ್ಲೆ ಯೋಚನೆ ಮಾಡಿದಳಂತೆ. ನಂತರ ತೆನೆಗಳ ನಡುವೆ ಮಲಗಿದಳಂತೆ. ಅದೇ ವೇಳೆಗೆ ಹ್ಯಾನ್ಸ್ ಮನೆಗೆ ಹಿಂದಿರುಗಿದನಂತೆ. ಆಲೀಸ್ ಇನ್ನೂ ಬರದೇ ಇದ್ದುದನ್ನು ನೋಡಿ "ಎಂತಹ ಜಾಣೆ ಹೆಂಡತಿ ಸಿಕ್ಕಿದ್ದಾಳೆ ನನಗೆ. ಊಟಕ್ಕೂ ಬರದೆ ಕೆಲಸ ಮಾಡುತ್ತಿರುವಳಲ್ಲ" ಎಂದು ಅಂದುಕೊಂಡನಂತೆ. ಸಾಯಂಕಾಲವಾದರೂ ಅವಳು ಹಿಂದಿರುಗಲಿಲ್ಲವಂತೆ. ಆಗ, ಅವಳು ಎಷ್ಟು ಧಾನ್ಯವನ್ನು ಸಂಗ್ರಹಿಸಿರಬೇಕು, ಎಷ್ಟು ತೆನೆಗಳನ್ನು ಕೊಯ್ದಿರಬೇಕು ಎಂದು ನೋಡಿಕೊಂಡು ಬರಲು ಹ್ಯಾನ್ಸ್ ಹೊಲಕ್ಕೆ ಹೋದನಂತೆ. ಆದರೆ ಅಲ್ಲಿ ಅವಳು ಯಾವ ಕೆಲಸವನ್ನು ಮಾಡಿರದೆ ತೆನೆಗಳ ನಡುವೆ ನಿದ್ದೆ ಮಾಡುತ್ತಿದ್ದುದನ್ನು ನೋಡಿದನಂತೆ. ಅವನು ಮನೆಗೆ ಓಡಿಹೋಗಿ ಗಂಟೆ ಕಟ್ಟಿದ್ದ ಒಂದು ಬಲೆಯನ್ನು ಅವಳು ಮಲಗಿರುವಾಗಲೆ ತಲೆಗೆ ಹಾಕಿದನಂತೆ. ಆಮೇಲೆ ಅವನು ಮನೆಗೆ ಹೋಗಿ ಬಾಗಿಲು ಹಾಕಿಕೊಂಡನಂತೆ. ಸ್ಟೂಲಿನ ಮೇಲೆ ಕುಳಿತುಕೊಂಡು ಕಷ್ಟಪಟ್ಟು ಕೆಲಸ ಮಾಡತೊಡಗಿದನಂತೆ.

ಕೊನೆಗೆ ಸಾಕಷ್ಟು ಕತ್ತಲಾದ ಮೇಲೆ ಆಲೀಸ್ ನಿದ್ದೆ ಮಾಡಿ ಎದ್ದಾಗ, ಅವಳ ತಲೆಯ ಕೂದಲಲ್ಲಿ ಬಲೆ ಸಿಕ್ಕಿಹಾಕಿಕೊಂಡಿತ್ತಂತೆ. ಅವಳು ಹೆಜ್ಜೆ ಇಟ್ಟಾಗಲೆಲ್ಲ ಗಂಟೆಗಳು ಡಣ ಡಣ ಎಂದು ಶಬ್ದ ಮಾಡುತ್ತಿದ್ದವಂತೆ. ಅದರಿಂದ ಅವಳಿಗೆ ಹೆದರಿಕೆ ಆಗಿ ತಾನು ನಿಜವಾಗಿ ಜಾಣೆ ಆಲೀಸ್‌ಳೇ ಎಂಬ ಅನುಮಾನ ಬಂದಿತಂತೆ. ತನಗೆ ತಾನೆ "ನಾನು ಹೌದು ಅಥವ ಅಲ್ಲವೋ?" ಎಂದು ಕೇಳಿಕೊಂಡಳಂತೆ. ಅದಕ್ಕೆ ಅವಳೇ ಉತ್ತರಿಸಲು ಆಗಲಿಲ್ಲವಂತೆ. ಆದರೂ ತುಂಬಾ ಹೊತ್ತು ಅದೇ ಯೋಚನೆಯಲ್ಲಿ ಮುಳುಗಿದಳಂತೆ. ಕೊನೆಗೆ ಮನೆಗೆ ಹೋಗಿ ಕೇಳಿದರೆ ತಾನಾರು ಎಂದು ತಿಳಿಯುತ್ತದೆ ಎಂದುಕೊಂಡಳಂತೆ. ಅವಳು ಮನೆ ಬಾಗಿಲಿಗೆ ಬಂದಾಗ ಅದು ಮುಚ್ಚಿತ್ತಂತೆ. ಆದ್ದರಿಂದ ಅವಳು ಕಿಟಕಿಯನ್ನು ಬಡಿದು "ಹ್ಯಾನ್ಸ್, ಆಲೀಸ್ ಒಳಗೆ ಇದ್ದಾಳೊ ಇಲ್ಲವೊ" ಎಂದು ಕೇಳಿದಳಂತೆ, ಅದಕ್ಕೆ ಹ್ಯಾನ್ಸ್ "ಹೌದು, ಅವಳು ಇಲ್ಲೆ ಇದ್ದಾಳೆ" ಎಂದು ಉತ್ತರಿಸಿದನಂತೆ. ಆಗ ಅವಳು ತುಂಬ ಹೆದರಿಕೊಂಡಳಂತೆ. "ಅಯ್ಯೋ ದೇವರೆ ನಾನು ಆಲೀಸ್ ಅಲ್ಲವಲ್ಲ ಹಾಗಾದರೆ" ಎಂದು ಬೆಕ್ಕಸ ಬೆರಗಾದಳಂತೆ. ಹಾಗೆ ಅವಳು ಇನ್ನೊಂದು ಮನೆಗೆ ಹೋದಳಂತೆ. ಅವಳ ಗಂಟೆಗಳ ಶಬ್ದ ಕೇಳಿಸಿಕೊಂಡವರಾರು ಬಾಗಿಲು ತೆರೆಯಲಿಲ್ಲವಂತೆ. ಯಾರೂ ಅವಳನ್ನು ಒಳಗೆ ಕರೆದುಕೊಳ್ಳಲಿಲ್ಲವಂತೆ. ಹೀಗೆ ಅವಳು ಆ ಹಳ್ಳಿಯನ್ನೆ ಬಿಟ್ಟುಹೋದಳಂತೆ. ಇದೂವರೆಗೂ ಯಾರೂ ಅವಳನ್ನು ಕಂಡಿಲ್ಲವಂತೆ.

ಮಕ್ಕಳ ಸಾಹಿತ್ಯದಲ್ಲಿ ರಂಜನೆಯೂ ಅಗತ್ಯ; ಬೋಧನೆಯೂ ಅವಶ್ಯ. ಮಕ್ಕಳು ಓದಬೇಕು ಎಂದು ಭಾವಿಸಿ ಸಾಹಿತ್ಯವನ್ನು ಸೃಷ್ಟಿಮಾಡುವುದರ ಬದಲು ಮಕ್ಕಳು ಏನನ್ನು ಓದಬಯಸುತ್ತಾರೆ ಎಂಬುದನ್ನು ಅರಿತು ಅವರಿಗಾಗಿ ಸಾಹಿತ್ಯದ ಕೃಷಿ ಆಗಬೇಕು.

ವಿಜ್ಞಾನ, ತಂತ್ರಜ್ಞಾನ, ಇತಿಹಾಸ, ಭೂಗೋಳ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಸಾಹಿತ್ಯ, ಕಲೆ, ಸಮೂಹ ಮಾಧ್ಯಮ, ಸಮಕಾಲೀನ ವಿಚಾರಗಳು ಇವೆಲ್ಲವುಗಳ ಬಗ್ಗೆ ಪ್ರಾಥಮಿಕ ಶಾಲಾಮಟ್ಟದ ಮಕ್ಕಳಿಗೆ ಆರಂಭಿಕ ಅರಿವನ್ನಾದರೂ ಮೂಡಿಸಿ ಜ್ಞಾನದ ಬಹು ಶಾಖೆಗಳಲ್ಲಿ ಅವರಿಗೆ ಆಸಕ್ತಿ ಕುತೂಹಲಗಳನ್ನು ಅರಳಿಸಬೇಕಾದುದು ಮಕ್ಕಳ ಪುಸ್ತಕಗಳ ಆದ್ಯ ಕರ್ತವ್ಯವಾಗಿರಬೇಕು.

ಬಹು ಮಾಧ್ಯಮಗಳ ಸೆಳೆತಗಳಿಂದ ಆಕರ್ಷಿತವಾಗಿರುವ ಮಕ್ಕಳಿಗೆ ಓದು ಮಾಧ್ಯಮದಲ್ಲಿ ಅಭಿರುಚಿ ಮೂಡಿಸಿ ಪುಸ್ತಕಗಳಲ್ಲಿ ಆಸಕ್ತಿಯನ್ನುಂಟು ಮಾಡಿಸಲು ಅನುವು ಮಾಡಿಕೊಡುವ ಉದ್ದೇಶದಿಂದ ಕನ್ನಡ ಪುಸ್ತಕ ಪ್ರಾಧಿಕಾರವು ಒಂದು ನೂರು ಮಕ್ಕಳ ಪುಸ್ತಕಗಳನ್ನು ಹೊರತರುವ ಆಶಯ ಹೊಂದಿದೆ. ಈ ನಿಟ್ಟಿನಲ್ಲಿ ಪುಸ್ತಕ ಪ್ರಾಧಿಕಾರವು ಎಳೆಯರಿಗೆ ಸುಲಭ ಗ್ರಾಹ್ಯವಾಗಬಹುದಾದ ಸರಳ ಭಾಷೆಯಲ್ಲಿ ಅಂದವಾದ ಚಿತ್ರಗಳ ಸಮೇತ ಪುಸ್ತಕಗಳನ್ನು ಹೊರತರಲು ಆಸಕ್ತಿ ಹೊಂದಿದೆ.

ಹಿರಿಯರನ್ನೂ ಮಕ್ಕಳ ಮನಸ್ಸನ್ನೂ ಸೂರೆಗೊಳ್ಳುವ ಶಕ್ತಿ ಕಥೆಗಳಿಗಿದೆ. ಗ್ರಿಂ ಸಹೋದರರು ಸಂಗ್ರಹಿಸಿದ ಈ ಜನಪದ 'ಕಿನ್ನರ ಕಥೆಗಳು' ಅಂದು ಇಂಗ್ಲೆಂಡ್‌ನಲ್ಲಿದ್ದ ಜನಪದ ಕಥೆಗಳನ್ನು ಮಕ್ಕಳಿಗೆ ಬೋಧಿಸಬಾರದೆಂಬ ನಂಬಿಕೆಯನ್ನು ಹುಸಿಗೊಳಿಸಿ ಮಕ್ಕಳ ಹಾಗೂ ವಿದ್ವಾಂಸರ ಮನ್ನಣೆಗೆ ಪಾತ್ರವಾದವು. ಇಂಥ ಜನಪ್ರಿಯ ಕಥೆಗಳನ್ನು ಪ್ರಾಧಿಕಾರದಿಂದ ನಾಲ್ಕು ಸಂಪುಟಗಳಲ್ಲಿ ಹೊರತರುತ್ತಿದ್ದೇವೆ.